ಪ್ರಬುದ್ಧ ಕರ್ಣಾಟಕ

ಸಂಪುಟ ೫೪ ಸಂಚಿಕೆ ೩

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೭೨

ಲೇಖಕರಿಗೆ ಸೂಚನೆಗಳು

೧. 'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟನೆಗಾಗಿ ಎಲ್ಲ ಬಗೆಯ ಲೇಖನಗಳಿಗೂ ಸ್ವಾಗತವಿದೆ. ಲೇಖನಗಳು ಸ್ವತಂತ್ರವಾಗಿರಬಹುದು, ಇಲ್ಲವೆ ಅನುವಾದಗಳಾಗಿರಬಹುದು. ಅನುವಾದವಾಗಿದ್ದರೆ ಮೂಲಲೇಖಕರ ಹಾಗೂ ಲೇಖನದ ಹೆಸರನ್ನು ತಪ್ಪದೆ ಸೂಚಿಸಿದ್ದು, ಲೇಖನದ ಜೊತೆಯಲ್ಲಿಯೇ ಮೂಲಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನು ಕಳುಹಿಸಬೇಕು.

೨. ಲೇಖನಗಳನ್ನು ಕಾಗದದ ಒಂದೇ ಮಗ್ಗುಲಿನಲ್ಲಿ ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೇ ಟೈಪ್ ಮಾಡಿರಬೇಕು. ಲೇಖನದೊಂದಿಗೆ ಲೇಖಕರ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು. ಲೇಖಕರಿಗೆ ಕರಡನ್ನು ತಿದ್ದುವ ಅವಕಾಶವಿಲ್ಲದಿರುವುದರಿಂದ ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿರಬಾರದು; ಅಸಂಪೂರ್ಣವಾಗಿರಬಾರದು. ಲೇಖನಗಳು ಸಚಿತ್ರವಾಗಿದ್ದರೆ, ಲೇಖನದಲ್ಲಿ ಚಿತ್ರಗಳು ಇರಬೇಕಾದ ಜಾಗವನ್ನು ನಿರ್ದೇಶಿಸಿರಬೇಕು.

೩. ಲೇಖನಗಳಲ್ಲಿ, ಇಂಗ್ಲಿಷನ್ನುಳಿದ ಅನ್ಯಭಾಷೆಗಳ ಉದ್ಧರಿತ ಭಾಗಗಳು ಕನ್ನಡ ಲಿಪಿಯಲ್ಲೇ ಇರಬೇಕು. ಅಡಿ ಟಿಪ್ಪಣಿಗಳಲ್ಲಿ, ಲೇಖಕರ ಹೆಸರು, ಪುಸ್ತಕ ಅಥವಾ ಲೇಖನಗಳ ಹೆಸರು, ಪ್ರಕಾಶಕರ ಹೆಸರು, ಸ್ಥಳ, ಪ್ರಕಟನೆಯ ವರ್ಷ ಹಾಗೂ ಸಂಬಂಧಿಸಿದ ಪುಟಸಂಖ್ಯೆ ಇವುಗಳನ್ನು ಖಚಿತವಾಗಿ ನಮೂದಿಸಿರಬೇಕು. ಮಾದರಿಗಾಗಿ ಇಲ್ಲಿ ಎರಡು ಉದಾಹರಣೆಗಳನ್ನು ಕೊಟ್ಟಿದೆ:

ನರಸಿಂಹಾಚಾರ್, ಡಿ. ಎಲ್., ಕನ್ನಡ ಗ್ರಂಥಸಂಪಾದನೆ (ಶಾರದಾಮಂದಿರ, ಮೈಸೂರು), ೧೯೬೪, ಪು. ೧೬.

Sreekantaiya, T. N., 'A century and a half of Literary Activity in Kannada,' **Kannada Studies**, Vol. 1, No. 2 (Mysore 1965), p. 62.

೪. ಕನ್ನಡ, ಇಂಗ್ಲಿಷ್, ಸಂಸ್ಕೃತ, ತೆಲುಗು ಮತ್ತು ಹಿಂದಿ ಭಾಷೆಗಳ ಪುಸ್ತಕಗಳನ್ನು ವಿಮರ್ಶೆಗಾಗಿ ಸ್ವೀಕರಿಸಲಾಗುತ್ತದೆ. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು **ಎರಡು** ಪ್ರತಿಗಳನ್ನು ಕಳುಹಿಸಬೇಕು.

೫. ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಒದಗಿಸಲಾಗುತ್ತದೆ. ತಗಲಬಹುದಾದ ವೆಚ್ಚವನ್ನು ವಹಿಸಿದರೆ ಹೆಚ್ಚಿಗೆ ಪ್ರತಿಗಳನ್ನೂ ಒದಗಿಸಲಾಗುತ್ತೆ. ಲೇಖನ ಸ್ವೀಕೃತವೇ ಇಲ್ಲವೇ ಎಂಬುದನ್ನು ತಿಳಿಯಬಯಸುವವರು, ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

೬. ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು, **ಸಂಪಾದಕರು, ಪ್ರಬುದ್ಧ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೬೨,** ಇವರಿಗೆ ಕಳುಹಿಸಬೇಕು.



ಪ್ರಬುದ್ಧ ಕರ್ಣಾಟಕ

ಸಂಪುಟ ೫೪ ಸಂಚಿಕೆ ೩

೨೧೩

ಪರೀಧಾವಿ ಸಂವತ್ಸರ

ಆಶ್ವಯುಜ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೨

PRABUDDHA KARNATAKA, Kannada Quarterly of the *University of Mysore*. Volume 54, Number 3, October 1972. Edited by Dr. T. V. Venkatachala Sastry and Sudhakara.

ಪ್ರಧಾನ ಸಂಪಾದಕರು
ಡಾ. ಹಾ. ಮಾ. ನಾಯಕ

ಸಂಪಾದಕರು
ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರೀ
ಸುಧಾಕರ

ಪ್ರಕಾಶಕರು
ಡಾ. ಪ್ರಭುಶಂಕರ
ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಮುದ್ರಕರು
ಎಚ್. ನರಸಣ್ಣ
ಡೈರೆಕ್ಟರ್, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ

ವಿಷಯಸೂಚಿಕೆ

ಮುಖಚಿತ್ರ: ಡಾ. ಗುಬ್ಬಿ ವೀರಣ್ಣ (ಸಿಂಧುವಳ್ಳಿ ಅನಂತಮೂರ್ತಿಯವರ ಕೃಪೆಯಿಂದ)

ಈ ಸಂಚಿಕೆಯ ಲೇಖಕರು

ಶ್ರೀಯುತರಾದ

ಕುವೆಂಪು	ರಾಷ್ಟ್ರಕವಿ ಡಾ. ಕೆ. ವಿ. ಪುಟ್ಟಪ್ಪನವರು, ಮೈಸೂರು.
ಡಾ. ಬಿ.ಜಿ.ಎಲ್. ಸ್ವಾಮಿ	ಪ್ರಾಧ್ಯಾಪಕರು, ಸಸ್ಯಶಾಸ್ತ್ರ ವಿಭಾಗ, ಪ್ರೆಸಿಡೆನ್ಸಿ ಕಾಲೇಜು ಮದರಾಸು.
ಎಡ್ವರ್ಡ್ ನೊರೋನ್ಹಾ, ಎಸ್.ಜೆ.	ಡಿ. ನೋಬಿಲಿ ಕಾಲೇಜ್, ಪುಣೆ-14.
ಆರ್. ದೇವಾಜಿ	ಉದಯೋನ್ಮುಖ ಕವಿ
ಗೊರೂರು ರಾಮಸ್ವಾಮಿ ಅಯ್ಯಂಗಾರ್	ಗಣ್ಯಸಾಹಿತಿಗಳು, ಗೊರೂರು, ಹಾಸನ ಜಿಲ್ಲೆ.
ಬಿ. ಎ.ಸನದಿ	ಎಕ್ಸ್‌ಟೆನ್ಷನ್ ಆಫೀಸರ್, ಎ. ಐ. ಆರ್, ಬೊಂಬಾಯಿ.
ಡಾ. ವಿ. ಶಿವಾನಂದ	ಅಧ್ಯಾಪಕರು, ಜಗದ್ಗುರು ತೋಂಟದಾರ್ಯ ಕಾಲೇಜು, ಗದಗು.
ಡಾ. ಆರ್. ಎ. ಹೆಗಡೆ	ಅಧ್ಯಾಪಕರು, ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು, ಸಿರ್ಸಿ (ಉ.ಕ)
ಬಿ. ಪಿ. ಚಂದ್ರಾಬಾಯಿ	ಉದಯೋನ್ಮುಖ ಲೇಖಕಿ, ಮೈಸೂರು.
ಜಯತೀರ್ಥ ರಾಜಪುರೋಹಿತ	ಪರೀಕ್ಷಾಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ
ಕೆ. ಕುಶಾಲಪ್ಪ ಗೌಡ	ಭಾಷಾಶಾಸ್ತ್ರದ ಉಪಪ್ರಾಧ್ಯಾಪಕರು, ಅಣ್ಣಾಮಲೈ ವಿಶ್ವ ವಿದ್ಯಾನಿಲಯ, ಅಣ್ಣಾಮಲೈ ನಗರ, ದಕ್ಷಿಣ ಆರ್ಕಾಟ್.
ಎಚ್. ಚಂದ್ರಶೇಖರ್	217,ಎ/61, ನಾಲ್ಕನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು -10
ಎಂ. ಎನ್. ಜೈಪ್ರಕಾಶ್	ಉದಯೋನ್ಮುಖ ಕವಿ
ಡಾ. ಜಿ. ವರದರಾಜರಾವ್	ಉಪಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು
ಡಾ. ಡಿ. ಎಲ್. ನರಸಿಂಹಾಚಾರ್	ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಕನ್ನಡ ಪ್ರಾಧ್ಯಾಪಕರು, ಈಗ ದಿವಂಗತರು.
ಡಾ. ಎಲ್. ಬಸವರಾಜು	ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.
ದೊಡ್ಡರಂಗೇಗೌಡ	ಕನ್ನಡ ಅಧ್ಯಾಪಕರು, ಎಸ್.ಎಲ್.ಎನ್. ಕಾಲೇಜು, ಬೆಂಗಳೂರು
ಗುಂಡ್ಮಿ ಚಂದ್ರಶೇಖರ ಐತಾಳ	ಕನ್ನಡ ಅಧ್ಯಾಪಕರು, ಮಂಗಳ ಗಂಗೋತ್ರಿ, ಕೊಣಾಜೆ, (ದ.ಕ.)
ಬಸವರಾಜ ಕುಂಚೂರು	ಕೆ. ಆರ್. ಇ. ಕಾಲೇಜಿನ ಕಟ್ಟಡ ವಿಭಾಗದ ಕಛೇರಿ, ಶ್ರೀನಿವಾಸ ನಗರ, (ದ.ಕ.).

ಎಂ. ಹನುಮಂತರಾವ್	ಉಪಶಾಸನ ತಜ್ಞರು, 'ಎಪಿಗ್ರಾಫಿಯ ಕರ್ನಾಟಿಕ'ದ ಪರಿಷ್ಕರಣ ಹಾಗೂ ಪುನರ್ಮುದ್ರಣ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.
ನಂ. ತಪಸ್ವೀಕುಮಾರ್	ಕನ್ನಡ ಅಧ್ಯಾಪಕರು, ಅಂಚೆ ಮತ್ತು ತೆರಪಿನ ಶಿಕ್ಷಣ ಶಾಖೆ. ಮೈಸೂರು ವಿಶ್ವವಿದ್ಯಾನಿಲಯ.
ಆರ್. ಜಿ.ಕುಲಕರ್ಣಿ	ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗದ ಪ್ರಾಧ್ಯಾಪಕರು, ಹಿಂದಿ ಸ್ನಾತಕೋತ್ತರ ವಿಭಾಗ, ಮಾನಸಗಂಗೋತ್ರಿ ಮೈಸೂರು.
ಸರಸ್ವತಿ ಬೋರಲಿಂಗಯ್ಯ	ಕನ್ನಡ ಅಧ್ಯಾಪಕರು, ಜಗದ್ಗುರು ಶಿವರಾತ್ರೀಶ್ವರ ಕಾಲೇಜು, ನಂಜನಗೂಡು.
ಡಾ. ಆರ್. ಎಸ್. ಶಿವಗಣೇಶಮೂರ್ತಿ	ಅಲಂಕಾರಶಾಸ್ತ್ರ ಕೋಶ ವಿಭಾಗ, ಓರಿಯೆಂಟಲ್ ಲೈಬ್ರರಿ ಮೈಸೂರು.
ಸಂಗಮನಾಥ ಜಿ. ಹಂಡಿ	ಪ್ರಾಧ್ಯಾಪಕರು, ನ್ಯೂ ಆರ್ಟ್ಸ್ ಕಾಲೇಜ್, ಬರೀದ ಬಾವಡಿ ಬೀದಿ, ಬಿಜಾಪುರ.
ಕೆ. ಅನಂತರಾಮು	ಕನ್ನಡ ಅಧ್ಯಾಪಕರು, ಸಂಜೆ ಕಾಲೇಜು; ಮೈಸೂರು ವಿಶ್ವವಿದ್ಯಾನಿಲಯ
ಎಂ. ರಾಮಕೃಷ್ಣ	ಕನ್ನಡ ಅಧ್ಯಾಪಕರು, ಅಂಚೆ ಮತ್ತು ತೆರಪಿನ ಶಿಕ್ಷಣ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ
ಶಂಸ ಐತಾಳ	ಉಪಭಾಷಾಂತರಕಾರರು, ಭಾಷಾಂತರ ಮತ್ತು ಪಠ್ಯಪುಸ್ತಕ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಕುವೆಂಪು

ಕುರುಡ

ಕತ್ತಲೆಯು: ನಡುವಗಲ ಬೇಸಗೆಯ ನೇಸರಿರೆ
ಬಯಲಲ್ಲಿ ಬೆಮರುತಿಹೆ! ಕಗ್ಗತ್ತಲೆನಗೆ!
ಕೋಗಿಲೆಯು ಕೂಗೆನಗೆ! ಬನಬೆಟ್ಟ ನುಡಿಯೆನಗೆ!
ಸೌಂದರ್ಯವೆಂಬುದದು ಬರಿಯ ಸದ್ದೆನಗೆ!
ನನ್ನ ಭಿಕ್ಷಾಪಾತ್ರೆಗವನೆಸೆವ ಕಾಸುಗಳ
ಸದ್ದೆನಗೆ ಮಾನವನ ಮಂಗಳಾಕಾರ!
ಬೆಳಕಿಲ್ಲ, ಕಪ್ಪಿಲ್ಲ; ಹಗಲಿರುಳು ನನಗಿಲ್ಲ;
ನನ್ನಿನನು ಮೂಡಿಮುಳುಗವನೆನ್ನ ಕೂಡೆ!

ನರಜನ್ಮವತ್ಯಧಿಕವೆಂದೇಕೆ ಸಾರುತಿಹರು?
ಮಿಗಗಳಾನಂದವೆನಗಿಲ್ಲವೈ, ದೇವದೇವ!
ಕಣ್ಣಿರದ ಮಾನವನ ಜನ್ಮವೆನಗೇಕೆ, ದೇವ?
ಕಣ್ಣಿರುವ ಮಿಗತನದ ಬಾಳೆನಗೆ ಲೇಸು ಲೇಸು!

೫–೮–೧೯೨೮

ಕುವೆಂಪು

ಸಂನ್ಯಾಸ

ಕೂರಸಿಯ ಮೇಲೆ ನೀ ನಡೆಯಬಲ್ಲೆಯ ಹೇಳು?
      ಬೆಂಕಿಯಲಿ ಬೀಳ್ವ ಬಲವಿರುವುದೇನು?
ನಿನ್ನ ಕಣ್ಣನು ನೀನೆ ಕೀಳಬಲ್ಲೊಡೆ ಹೇಳು!
      ನಿನ್ನೆದೆಯ ನೀನಿರಿಯ ಬಲ್ಲೆಯೇನು?

ಆ ಧೈರ್ಯ ನಿನಗಿರಲು ಸಂನ್ಯಾಸಿಯಾಗು, ನಡೆ;
      ನಿನ್ನ ಕೈವಶವಾಗದಿರದು ಮುಕ್ತಿ!
ಕಾವಿಯೆಂಬುದು ಬರಿಯ ಬಟ್ಟೆಯಲ್ಲದು ಬೆಂಕಿ!
      ಸಂನ್ಯಾಸ ಸಾಧನೆಯು ಲೀಲೆಯಲ್ಲ!

ದಡದಲ್ಲಿ ನಿಂತು ನೀನುರಿಯುವುದಕಿಂತ
ಕಡಲಲ್ಲಿ ಮುಳುಗಿ ತೇಲಾಡುವುದೆ ಮೇಲು
ಬರಿದೆ ಪಶ್ಚಾತ್ತಾಪ ಪಡದಿರಾಮೇಲೆ
ಬೇಯುವುದಕಿಂತ ನೀ ಸಾಯುವುದೆ ಲೇಸು!

೬–೮–೧೯೨೮

ಬಿ. ಜಿ. ಎಲ್. ಸ್ವಾಮಿ

ಹರಿಹರನ 'ಪುಷ್ಪರಗಳೆ': ಸಸ್ಯಶಾಸ್ತ್ರೀಯ ಮತ್ತು ಸಾಂಸ್ಕೃತಿಕ ಟಿಪ್ಪಣಿ

ಕನ್ನಡ ಕಾವ್ಯಗಳಲ್ಲಿ ನೂರಾರು ಗಿಡಮರಗಳ ಹೆಸರುಗಳು ಕಾಣಿಸಿಕೊಳ್ಳುತ್ತವೆ. ಇವುಗಳಲ್ಲಿ ಬಹುಪಾಲು ಕನ್ನಡನಾಡಿನಲ್ಲಿಯೇ ಬೆಳೆಯುತ್ತಿದ್ದವೆಂದೂ, ಕವಿಗಳಿಗೆ ಪರಿಚಿತವಾಗಿದ್ದವೆಂದೂ ಊಹಿಸಬಹುದಾದರೂ ಆಯಾ ಗಿಡಮರಹೂಗಳ ನೇರವಾದ ಪರಿಚಯ ಅವರಲ್ಲಿ ಎಷ್ಟುಮಂದಿಗೆ ಎಷ್ಟುಮಟ್ಟಿಗೆ ಇದ್ದಿರ ಬಹುದೆಂಬ ಪ್ರಶ್ನೆಯನ್ನೆತ್ತುವುದು ಅಧಿಕಪ್ರಸಂಗಿತನವಾಗದಷ್ಟೆ. ಬಹುಪಾಲು ಕವಿಗಳಿಗೆ ಸಸ್ಯಗಳೂ ಸಸ್ಯೋತ್ಪನ್ನವಾದ ಎಲೆಹೂಕಾಯಿಗಳೂ ಶಬ್ದಾಲಂಕಾರಕ್ಕೋ ವಾಗಾಡಂಬರಕ್ಕೋ ಒದಗುವ ಬರಿಯ ಮಾತುಗಳಾದವೇ ಹೊರತು ಆ ವಸ್ತುಗಳ ಅಂದಚೆಂದಗಳಿಗಾಗಲಿ, ರಚನಾವಿಶೇಷಗಳಿಗಾಗಲಿ, 'ಪ್ರತಿಮೆ' ಗಳಿಗಾಗಲಿ ಅನುವಾಗುವ ಆಕರಗಳಾಗಲಿಲ್ಲ. ಕನ್ನಡ ಕವಿಗಳಿಗಿಂತ ಹಳಬರಾದ ಅನೇಕ ಸಂಸ್ಕೃತ ಕವಿಗಳೂ ಈ ಮನೋವೃತ್ತಿಗೆ ಹೊರಗಲ್ಲ. 11ನೆಯ ಶತಮಾನದ ಒಂದಿಬ್ಬರು ಕನ್ನಡ ಜೈನ ಕವಿಗಳನ್ನು ಬಿಟ್ಟರೆ ತಮ್ಮದೇ ಆದ ಕಣ್ಣುಗಳಿಂದ ಸಸ್ಯಗಳನ್ನು ಕಂಡ ಕವಿಗಳು ಕನ್ನಡದಲ್ಲಂತೂ ಇಲ್ಲವೆಂದೇ ಹೇಳಬೇಕು. ಬಹುಸಂಖ್ಯಾತರು ತಲೆತಲಾಂತರದಿಂದ ಬಳುವಳಿಯಾಗಿ ಪಡೆದುಕೊಂಡು ಬಂದಿದ್ದ ಕವಿಸಮಯಗಳಿಗೆ ಶರಣುಹೊಡೆದವರೇ ಆಗಿದ್ದಾರೆ.

ನಮ್ಮ ಪೂರ್ವಿಕರಿಗೆ ಗಿಡಮರಗಳ ವಿಷಯದಲ್ಲಿ ತಾತ್ಸಾರ ಭಾವವಿತ್ತೆಂದು ನಾನು ಹೇಳುತ್ತಿಲ್ಲ. ತೋಟಗಳನ್ನೂ ಉದ್ಯಾನಗಳನ್ನೂ ತೋಪುಗಳನ್ನೂ ನೆಡಿಸಿ ಕಾಪಾಡಿದ ಅನೇಕ ನಿದರ್ಶನಗಳು ಸಾಹಿತ್ಯ ದಲ್ಲಿಯೂ ಶಾಸನದಲ್ಲಿಯೂ ಕಾಣಬರುತ್ತವೆ. ಆದರೆ ಇಂಥ ಗೆಯ್ಮೆಗಳು ಬಹುಪಾಲು ನಡೆದಿರುವುದು ದೇವರ ಸೇವೆ, ಜನರ ಸೇವೆ ಎಂಬ ಅರ್ಥಗಳಲ್ಲಿ. ಸ್ವಂತಭೋಗಕ್ಕಾಗಿ ಹೂದೋಟಗಳನ್ನು ನಿರ್ಮಿಸಿ ಕೊಂಡ ಸಂದರ್ಭಗಳು ಹೆಚ್ಚಾಗಿ ದೊರಕವು. ಕೆಲವು ರಾಜಮಹಾರಾಜರು ಇಂಥ ಉದ್ಯಾನಗಳನ್ನು ಏರ್ಪಡಿಸಿಕೊಂಡಿದ್ದರು ಎಂಬುದು ಅಪರೂಪವಾಗಿ ಕಾಣಿಸಿಕೊಳ್ಳುತ್ತದೆ. ಇದು ನಿಜವೇ ಆಗಿರ ಬಹುದಾದರೂ ಅವರು ತಮ್ಮ ನೈಜವಾದ ಪುಷ್ಪಪ್ರೇಮದಿಂದ ಇವನ್ನು ಆಗಮಾಡಿಸಿಕೊಂಡರೆಂದು ನನಗನ್ನಿಸದು. ಎಷ್ಟಾದರೂ ರಾಜ, ಎಲ್ಲ ಸದ್ಗುಣಗಳ ನಿಧಿ, ಎಲ್ಲ ಬಗೆಯ ಕಸಬುಗಳಿಗೂ ಕಲೆಗಳಿಗೂ ಪೋಷಕ, ಇಷ್ಟೇ ಅಲ್ಲದೆ ರಾಜಮರ್ಯಾದೆಯೆಂಬುದೊಂದಿದೆಯಲ್ಲವೆ!–ಹೀಗೆ ಸ್ಥಾನಗೌರವದ ಗುರು ತಾಗಿ, ಪ್ರತಿಷ್ಠೆಯ ಸಂಕೇತವಾಗಿ ಪುಷ್ಪವಾಟಿಕೆಗಳನ್ನು ನಿರ್ಮಿಸಿಕೊಂಡಿದ್ದಿರಬೇಕು ಎಂದು ಊಹಿಸು ವುದೇ ಸಾಧುವಾದದ್ದೆಂದು ತೋರುತ್ತದೆ.

ಇನ್ನು ತೋಪುಗಳು, ನಂದನ ವನಗಳು– ಇವುಗಳ ನಿರ್ಮಾಣವೆಲ್ಲ ದೇವರ ಪೂಜಾನೈವೇದ್ಯ ಗಳಿಗೆ. ಹೂಗಳು ಪರಿಮಳಗೊಂಡವಾಗಿರಬೇಕೆಂದೂ ಹಣ್ಣುಗಳು ಮಧುರವಾಗಿರಬೇಕೆಂದೂ ಒಪ್ಪಿ ಕೊಂಡಿದ್ದರೇ ಹೊರತು ಹೂವಿನ ಸೊಬಗನ್ನು ಗಮನಿಸಿದಂತಿಲ್ಲ. ಸ್ವಂತ ಅಲಂಕಾರಕ್ಕಾಗಿಯೂ ಹೂ ಗಳನ್ನು ಬಳಸಿದರು; ಅದೂ ಇದೇ ದೃಷ್ಟಿಯಿಂದಲೇ.

ಮಧ್ಯಕಾಲದ ಶೈವ ಮತ್ತು ವೈಷ್ಣವ ಕನ್ನಡ, ತಮಿಳು ಸಾಹಿತ್ಯದಲ್ಲಿಯೂ ಗಿಡಮರ ಹೂಗಳ

ಹೆಸರುಗಳು ಸಿಗುತ್ತವೆ. ಶಿವಾರ್ಚನೆಗೂ ವಿಷ್ಣುವಿನ ಪೂಜೆಗೂ ಅರ್ಹವೆಂದು ನಂಬಲಾಗಿದ್ದ ಹೂಗಳನ್ನು 'ನಾಯನ್ಮಾರು'ಗಳೂ ವೀರಶೈವ ಮತಾವಲಂಬಿಗಳೂ 'ಆಳ್ವಾರು'ಗಳೂ ಆಗಾಗ್ಗೆ ಕುರಿತಿದ್ದಾರೆ. ಇಲ್ಲಿಯೂ ಅಷ್ಟೆ–ಬರಿಯ ಹೆಸರುಗಳು; ಕೆಲವು ಸಲ ಆಯಾ ದೇವರಿಗೆ ಯಾವುದೋ ಒಂದು ಬಗೆಯ ಹೂವೋ ಎಲೆಯೋ ಪ್ರಿಯವಾದ ರೀತಿ, ಅದಕ್ಕೊಂದು ಉಪಕಥೆ ಇಷ್ಟರಲ್ಲಿ ಮುಗಿಯುತ್ತದೆ.

ಹೀಗಾಗಿ ಕಾವ್ಯೋಕ್ತವಾಗಿರುವ ಅನೇಕ ಬಗೆಯ ಗಿಡಮರಗಳ ಅನನ್ಯತೆಯನ್ನು ಗುರುತಿಸುವುದು ಪ್ರಸ್ತುತದಲ್ಲಿ ಕಷ್ಟವಾಗಿದೆ. ಕಷ್ಟವಾದರೂ ಸಾಮಾನ್ಯವಾಗಿ ಅಸಾಧ್ಯವಾದದ್ದಲ್ಲ. ಕಾವ್ಯಗಳನ್ನು ಸಸ್ಯ ಶಾಸ್ತ್ರೀಯ ದೃಷ್ಟಿಯಿಂದ ಅರ್ಥಮಾಡಿಕೊಂಡರೆ ಅನೇಕ ಗಿಡಮರಗಳ ಅನನ್ಯತೆಯನ್ನು ಸ್ವಲ್ಪಮಟ್ಟಿ ಗಾದರೂ ಖಚಿತವಾಗಿ ನಿರ್ದೇಶಿಸಬಹುದು. ಇಂಥ ಪ್ರಯತ್ನ ಇನ್ನೂ ನಡೆಯಬೇಕಾಗಿದೆ.

'ಪುಷ್ಪ ರಗಳೆ'ಯಲ್ಲಿ ಹರಿಹರನು ಸುಮಾರು 30 ಗಿಡಮರಗಳನ್ನು ಹೆಸರಿಸಿದ್ದಾನೆ. ಇವುಗಳಲ್ಲಿ ಬಹುಪಾಲು ತಂತಮ್ಮ ದೇಹದ ಒಂದಲ್ಲ ಒಂದು ಭಾಗದಲ್ಲಿ ಯಾವುದೋ ಒಂದು ಬಗೆಯ ವಾಸನೆ ಯನ್ನು ಹೊತ್ತಿರುವಂಥವು, ಮರುಗ, ದೊಡ್ಡಪತ್ರೆ, ದವನ, ಭದ್ರಮುಖಿಗಳಲ್ಲಿ ಪರಿಮಳವಿರುವುದು ಆಯಾ ಎಲೆಗಳಲ್ಲಿ; ಇತರ ಗಿಡಮರಗಳಲ್ಲಿರುವುದು ಅದರದರ ಹೂಗಳಲ್ಲಿ. ಬಹುಪಾಲು ಹಿತವಾದ ವಾಸನೆಯುಳ್ಳವು; ಎಕ್ಕ, ಉಮ್ಮತ್ತಿಗಳದು ಗಬ್ಬು. ಯಾವ ವಿಧವಾದ ವಾಸನೆಯನ್ನೂ ಸೂಸದವು ಉತ್ತರಣೆ, ತುಂಬೆ ಹೂಗಳು; ಬೆಲ್ಲಪತ್ರೆ..

"ಕಕ್ಕೆ ಎಕ್ಕೆ ತುಂಬೆ ಕಂಚವಾಳಿ ಮುಂತಾದ ಸಾಧಾರಣವಾದ, ಸುಂದರವಾದುವೆಂದೆನಿಸಿಕೊಳ್ಳ ಲಾಗದ... ಹೂಗಳು" ಎಂದಿದ್ದಾರೆ ಶ್ರೀ 'ಸುಜನಾ' (ಪ್ರ. ಕ. 46, ಪುಟ 175). ಇದು ವೈಯಕ್ತಿಕವಾದ ಅಭಿಪ್ರಾಯ. ಹೂ ಹೊದ್ದ ಕಕ್ಕೆಯ ನೋಟಕ್ಕೆ ಹರ್ಷಪಡದವರು ಅಪರೂಪ. ಗೊಂಚಲು ಗೊಂಚಲಾಗಿ ಎಕ್ಕೆ ಹೂ ತಳೆದಾಗ ಅದರ ಸೊಬಗು ನಯನಮನೋಹರವಾದದ್ದು. ಕಂಚವಾಳದ ಹೂ ಬಿರಿದಾಗ, ಕಾಯಿ ಬಿಟ್ಟಾಗ, ಎಲೆ ತುಂಬಿದಾಗ, ಹೂವಿನ ದಳಗಳು ಮರದ ಹೆಜ್ಜೆಯ ಸುತ್ತ ಉದುರಿ ರಂಗುಗಂಬಳಿ ಯನ್ನು ಹಾಸಿದಾಗ ಹೊಮ್ಮುವ ಸೌಂದರ್ಯಕ್ಕೆ ಅನೇಕರು ಬೆರಗಾಗಿದ್ದಾರೆ. ತುಂಬೆ ಗಿಡವಾಗಲಿ, ಅದು ಹೂ ತಳೆದ ನೋಟವಾಗಲಿ ಆಕರ್ಷಕವಾಗಿರದೆಂದು ನಾನೂ ಒಪ್ಪಿಕೊಳ್ಳುತ್ತೇನೆ. ಹೂವಿನ ಗಾತ್ರ ಸಣ್ಣದು. ಶುಭ್ರ ಬಿಳಿಯ ಬಣ್ಣ. ಬಿಡಿ ಹೂವಿನ ರಚನೆಗೆ ಸಸ್ಯಶಾಸ್ತ್ರಜ್ಞನು ಮಣೆಯುತ್ತಾನೆಯೇ ಹೊರತು ಜನಸಾಮಾನ್ಯನಾಗಲಿ ರಸಜ್ಞನಾಗಲಿ ಅಲ್ಲ. ಹೇಗೋ ಶಿವನಿಗೆ ನಂಟು ಬಿದ್ದಿದೆ.

ಹರಿಹರನು ಹೇಳುವ ಅನೇಕ ಪತ್ರ ಪುಷ್ಪಗಳು ಶಿವನಿಗೆ ಅರ್ಪಿತವಾದವು. ಕೆಲವಂತೂ ಶಿವನ ಪ್ರತ್ಯೇಕ ಅಂಗಾಂಗಗಳಿಗೆ ಮೀಸಲಾದವು. ಪಡ್ಡಳಿಯು ಕತ್ತುರಿ (ತಿಲಕ)ಯಾಯಿತು. ಇರುವಂತಿಗೆಯು ಮುಡಿಯಲ್ಲಿ ಶೋಭಿಸಿತು; ಸೇವಂತಿಗೆಯು ಅಕ್ಕಪಕ್ಕಗಳಿಗೆ ಅನುವಾಯಿತು; ಮಲ್ಲಿಗೆಯು ಚಂದನ ವಾಯಿತು; ಮೊಲ್ಲೆ ಮೊಗ್ಗು ನಾಗಕುಂಡಲವಾಯಿತು; ತಾವರೆಯು(ಕಮಲ) ಚರಣವನ್ನು ಸೇರಿತು; ಕುಮುದವು ಪಕ್ಕಗಳನ್ನು ಅಲಂಕರಿಸಿತು; ಮರುಗವು ಗಜಚರ್ಮವಾಯಿತು. ಮಾವು ಈ ಬಗೆಗೆ ಸೇರಲಿಲ್ಲ. ಹೂ ಎಲೆಗಳನ್ನು ಸಂಗ್ರಹಿಸಿಯಾದ ಬಳಿಕ ಮಾಮರನ ಕಪ್ಪುನೆರಳಿನಲ್ಲಿ ಬಂದು ಕುಳಿತುಕೊಂಡ, ಹರಿಹರ ಅಷ್ಟೆ. ಬಾಳೆಲೆಯನ್ನು ಹರಡಿದ. ಹೂಗಳನ್ನು ಅದರ ಮೇಲೆ ಮೃದುವಾಗಿ ಸುರಿದ. ತಾವರೆಯ ಕಾಂಡ ವನ್ನು ಸೀಳಿ ನಾರಿನಿಂದ ಮಾಲೆಯನ್ನು ಹೆಣೆದ. ಗುಡಿಗೆ ಬಂದು ಶಿವನಿಗೆ ಅರ್ಪಿಸಿದ. ಶಿವ ಮೆಚ್ಚಿದ. ಹರಿಹರ ಧನ್ಯನಾದ.

ಇರುವಂತಿ (*Jasminum Sambac* Ait. Var. *Virupaksi*)

ಪರ್ಯಾಯ ಪದಗಳು:

ಕನ್ನಡ: ಇರುವು, ಇರುವತಿಗೆ, ಇರುವಂತಿ, ಇರುವಂತಿಗೆ.

ರತಿಗೆ ಮುಡಿಯುವುದಕ್ಕೂ ಮದನನ ತುರುಬಿಗೆ ಏರಿಸುವುದಕ್ಕೂ ಅರ್ಹತೆ ಪಡೆದದ್ದು ಇರು ವಂತಿಗೆ (ಪಂಪ). ಗಿಳಿಯ ಕಣ್ಣಿಗೆ ಬೀಳದೆ, ಪೂರುತನ ಚಲನೆಗೆ ಸಿಕ್ಕದೆ, ಸೂರ್ಯನ ಬೆಳಕು ಮುಟ್ಟದೆ

"ಬೆಳೆಬೆಳೆದು ನಳನಳಿಸಿ ಮಘಮಘಿಸುತಲರ್ದ ಇರುವಂತಿ" ಎನ್ನುತ್ತಾನೆ ಹರಿಹರ. ಎಂದರೆ ಮಲ್ಲಿಗೆಯಂತೆ ಇದೂ ಎಲೆಯ ಮರೆಯಲ್ಲಿ ಅರಳುವ ಹೂ.

ಶಾಸ್ತ್ರದೃಷ್ಟಿಯಿಂದ ಈ ಗಿಡ ಜಾಸ್ಮಿನಮ್ಮಿನ ಸ್ಪೀಷೀಸುಗಳಲ್ಲೊಂದು. 'ಎರಡು ಸುತ್ತಿನ ಮಲ್ಲಿಗೆ'ಯೇ ಇರುವಂತಿಗೆ ಎಂದು ನನ್ನ ಅಭಿಪ್ರಾಯ. ತಮಿಳಿನಲ್ಲಿಯೂ ಈ ಹೂವಿಗೆ ಇರುವಾಚ್ಚಿ ಎನ್ನುತ್ತಾರೆ; ಈ ಪದದ ಮೊದಲನೆಯ ಭಾಗ 'ಎರಡು' ಎಂಬುದನ್ನೇ ಸೂಚಿಸುತ್ತದೆ. ಹೂವಿನ ದಳಗಳು ಎರಡು ಒತ್ತಾದ ಸುತ್ತುಗಳಲ್ಲಿ ಹರಡಿರುತ್ತವೆ, ನರಗಂಪು ಸೂಸುತ್ತವೆ.

ಇತರ ಮಲ್ಲಿಗೆ ಜಾತಿಗಳ ಹರವೇ ಇರುವಂತಿಗೆಯದೂ– ಸ್ವಾಭಾವಿಕವಾದ ನೆಲೆ ಬೆಟ್ಟಗುಡ್ಡಗಳ ಕಾಡು; ಕೃತಕ ನೆಲೆ ಊರು, ಮನೆ, ತೋಟ. (ಮಲ್ಲಿಗೆಗೆ ಟಿಪ್ಪಣಿ ನೋಡಿ)

ಉತ್ತರಣಿ (Achyranthes aspera L.)

ಪರ್ಯಾಯ ಪದಗಳು:

ಕನ್ನಡ: ಉತ್ತರಾಣಿ, ಉತ್ತರಣೆ, ಉತ್ತರೇಣಿ, ಉತ್ರಾಣಿ.
ಸಂಸ್ಕೃತ: ಅಪಾಮಾರ್ಗ.

ಅಥರ್ವವೇದೋಕ್ತವಾದದ್ದು ಈ ಗಿಡ. ಎಲ್ಲವನ್ನೂ ಜಯಿಸುವುದೆಂಬ ಖ್ಯಾತಿ ಪಡೆದಿದೆ; ಎಲ್ಲ ಜಾಡ್ಯಗಳನ್ನೂ ಗುಣಪಡಿಸುವ ಓಷಧಿ. ಸ್ವಾಭಾವಿಕ ಮತ್ತು ಕೃತಕ ಶತ್ರುಗಳನ್ನು ಕೊಲ್ಲುತ್ತದೆ. ದೈವಿಕ ಪಕ್ಷಿಯಾದ ಸುಪರ್ಣದ ಕಣ್ಣಿಗೆ ಈ ಗಿಡ ಮೊದಲು ಗೋಚರವಾಗಿ ನೃಷದನ ಮಗನಾದ ಕಣ್ವನಿಂದ ಆಶೀರ್ವಾದ ಪಡೆಯಿತಂತೆ. ಕ್ಷೇತ್ರಿಯವೆಂಬ ಬೇನೆಯನ್ನು ವಾಸಿಮಾಡುತ್ತದೆಯಂತೆ.

ಉದ್ಬುದ್ಧವಾದ (ಕೆಲವು ಸಲ ಎರಡು ಮೂರು ಅಡಿಗಳಷ್ಟೂ ಇರಬಹುದು) ತೆನೆಗಳು ಹೂಗಳನ್ನು ತಳೆಯುತ್ತವೆ. ಈ ಹೂವನ್ನು ನೋಡಿ ಸಸ್ಯಶಾಸ್ತ್ರ ಪರಿಚಯವಿಲ್ಲದವರು "ಇದೂ ಒಂದು ಹೂವೇ?" ಎಂದು ಅಪಹಾಸ್ಯ ಮಾಡಿ ನಗಲೂ ಬಹುದು. ಹೂವಿನ ಗಾತ್ರ ಸಣ್ಣ, ಸೀಕಲು. ದಳಗಳಿಗೆ ಆಕರ್ಷಕವಾದ ಬಣ್ಣವಾಗಲಿ ರೂಪವಾಗಲಿ ಇಲ್ಲ; ಶೂಲಾಕೃತಿಯ ಪೊರುಕುಗಳಂತಿರುತ್ತವೆ. ಬಲಿತಾಗ ಮುಳ್ಳಿನಂತೆ ಕುಕ್ಕುತ್ತವೆ.

ಹೂವು ಕಾಯಾದಾಗ ಹಿಂದು ಮುಂದಾಗಿ ತಿರುಗುತ್ತದೆ; ಬಲಿತ ಎಲೆಗಳೂ ಸ್ವಲ್ಪ ಹೀಗೆಯೇ. ಇದರಿಂದಾಗಿ ಗಿಡಕ್ಕೆ ಅಪಾಮಾರ್ಗವೆಂಬ ಹೆಸರು ಸಂದಿರಬಹುದು.

ಭಾರತಾದ್ಯಂತವೂ 'ಕಳೆ'ಯಾಗಿ ಹರಡಿಕೊಂಡಿರುವ ಕುರುಚಲು ಗಿಡ ಇದು. ತುಂಬು ಎಲೆಯಿದ್ದಾಗಲೂ ಕಡ್ಡಿಕಡ್ಡಿಯಾಗಿ ಬಿಟ್ಟುಕೊಂಡಿರುತ್ತದೆ. ಬಲಿತ ದಳಗಳಂತೆ ಕಾಯೂ ಮುಳ್ಳು. ಹಾದು ಹೋದಾಗ ಬಟ್ಟೆಬರೆಗಳಿಗೆ ಸಿಕ್ಕುಕೊಳ್ಳುತ್ತದೆ. ಗಿಡಕ್ಕಾಗಲಿ, ಹೂಕಾಯಿಗಳಿಗಾಗಲಿ ಅಂದಚೆಂದಗಳಿಲ್ಲ. 'ವೇದವಾಸನೆ'ಯಿಂದಲೋ ಏನೋ ಹರಿಹರನ ಕಾಲದಲ್ಲಿ ಶಿವಪೂಜೆಗೆ ಅರ್ಹವಾಗಿತ್ತು.

ಉನ್ಮತ್ತ (*Datura alba* Wall.)

ಪರ್ಯಾಯ ಪದಗಳು:

ಕನ್ನಡ:ಉಮ್ಮತ್ತಿ, ಉಂಬತ್ತ, ದತ್ತೂರಿ, ಮದುಗುಣಿಕೆ
ಸಂಸ್ಕೃತ: ಧುತ್ತೂರ, ಕನಕ, ಉನ್ಮತ್ತ

ಇದರ ಹೂ ಹೇಗೋ ಶಿವನ ಶಿರಸ್ಸನ್ನು ಹತ್ತಿ ಕುಳಿತುಬಿಟ್ಟಿದೆ. ಸುಭಾಷಿತಕಾರನಿಗೂ ಇದೇ ಸಂಶಯ–ಹೋಗಿ ಹೋಗಿ ಚಂದ್ರನ ಸಮಸಮಕ್ಕೆ ಶಿವನ ಜಟೆಯಲ್ಲಿ ಶೋಭಿಸುತ್ತಿದೆಯಲ್ಲ! ಚಂದ್ರನಂತೆ ಉನ್ಮತ್ತದ ಹೂ ನೆಯ್ದಿಲನ್ನೇನೂ ಅರಳಿಸುವುದಿಲ್ಲ, ಕತ್ತಲೆಯನ್ನು ಹೋಗಲಾಡಿಸುವುದಿಲ್ಲ. ಸಲ್ಲಿಸ ಭಗ್ನ ಹೃದಯದ ನೋವನ್ನು ಹೆಚ್ಚಿಸುವುದಿಲ್ಲವಲ್ಲ! (ಶಾರ್ಙ್ಗಧರ ಪದ್ಧತಿ, 1058; ಸುಭಾಷಿತ ರತ್ನಾಕರ, 1–2)

ತುತ್ತೂರಿ ರೂಪದ ಆರೇಳಂಗುಲ ಉದ್ದದ ಬಿಳಿ ಹೂಗಳು–ಅಚ್ಚಬಿಳಿ ಎನ್ನುವುದಕ್ಕಿಂತವಲೂ

ಮಾಸಲು ಬಿಳಿ ಎನ್ನಬಹುದು–ರೆಂಬೆಗಳಿಂದ ತೊಂಗುತ್ತವೆ. ಕಸಕುಪ್ಪೆ ಸಂಗ್ರಹವಾಗಿರುವ ಪ್ರದೇಶಗಳಲ್ಲೂ, ಮೈದಾನ ಭೂಮಿಯಲ್ಲೂ ಈ ಗಿಡದ ವಾಸ. ನಾಲ್ಕೈದಡಿ ಎತ್ತರ ಬೆಳೆಯುವ ಪೊದರು ಗಿಡ. ದೊಡ್ಡ ಎಲೆಗಳು. ಹೂ ಬಿಟ್ಟಾಗ ದೂರದಿಂದ ನೋಡಲು ಕಣ್ಣಿಗೆ ಇಂಪು, ಹತ್ತಿರ ಬಂದಾಗ ಮೂಗಿಗೆ ಗಬ್ಬು ಕಂಪು. ಕಾಯಿ ಎರಡು ಮೂರಂಗುಲ ವ್ಯಾಸದ ಚೆಂಡು; ಮೈಮೇಲೆಲ್ಲ ಹಲಸಿನಕಾಯಿಗಿಂತಲೂ ಮೊನಚಾದ ಮುಳ್ಳು ಹೊದ್ದಿಕೆ. ಕಾಯೊಳಗೆ ನೂರಾರು ಕಪ್ಪು ಬೀಜಗಳು.

ಉನ್ಮತ್ತದ ಕತೆ ಪಾತಕಿಯ ಕತೆ. ಮೈತುಂಬ ವಿಷ; ಕಾಯಿ, ಬೀಜಗಳಲ್ಲಿ ಅಧಿಕ ಪ್ರಮಾಣದ ಸಂಗ್ರಹ. ತಿಂದವನು ಸತ್ತೇ ಹೋಗಿಬಿಡುತ್ತಾನೆ ಎಂದು ಹೇಳುವುದು ಕೆಲವು ಸಲ ಉತ್ಪ್ರೇಕ್ಷೆಯ ಮಾತಾಗಬಹುದು; ಆದರೆ ತಿಂದ ಪ್ರಮಾಣ ಹೆಚ್ಚಾದಾಗ ಈ ಮಾತು ನಿಜವಾಗುತ್ತದೆ. ಈ ಗಿಡದಲ್ಲೂ ಹತ್ತಾರು ಬಗೆಯ ಆಲ್ಕಲಾಯ್ಡ್ ಎಂಬ ರಸಾಯನಿಕ ಸತ್ವಗಳಿವೆ. ಒಂದಕ್ಕಿರುವ ಗುಣ ಇನ್ನೊಂದಕ್ಕಿಲ್ಲ. ಎರಡು ಮೂರು ಆಲ್ಕಲಾಯ್ಡುಗಳ ಸಂಯೋಜನೆಯಿಂದ ಒಂದು ಗುಣ ಹೊರಪಡುವುದೂ ಉಂಟು; ನಾಡುವೈದ್ಯದಲ್ಲಿಯೂ ಆಯುರ್ವೇದದಲ್ಲಿಯೂ ಗರ್ಭಪಾತಕ್ಕೆ ಉನ್ಮತ್ತ ಬೀಜದಿಂದ ತಯಾರಿಸಿದ ಮದ್ದನ್ನು ಕೊಡುತ್ತಾರೆ. ಒಣಎಲೆಯ ಅಥವಾ ಕುಟ್ಟಿದ ಬೀಜದ ಧೂಮಪಾನವನ್ನು ಮಾಡಿ ಮೈ ಮರೆಯುವ ಸುಖವನ್ನು ಅನುಭವಿಸುವವರೂ ಉಂಟು; ಈ ಸಾಹಸಕ್ಕೆ ತಯಾರಾಗಿಲ್ಲದವರು ಎಲೆ–ಅಡಿಕೆಯೊಡನೆ ಅಗೆಯುವುದೂ ಉಂಟು, ಮಿತ ಪ್ರಮಾಣದಲ್ಲಿ ಸೇವಿಸಿದಾಗ ಅಫೀಮು ಗಾಂಜಾಗಳ ಸೇವನೆಗಿರುವ ಗುಣಗಳು ಉನ್ಮತ್ತಕ್ಕೂ ಸ್ವಲ್ಪ ಇರುವುದಾದ್ದರಿಂದ. ಉನ್ಮತ್ತದ ಸೇವನೆ ಗೀಳು ಹಿಡಿಸುವಂಥದು–'ಇಷ್ಟು ದೊರಕಿದರೆ ಮತ್ತಷ್ಟು ಬೇಕೆಂಬಾಸೆ'; ತಿರುಗಿ ತಿರುಗಿಯೂ ಬೇಕೆನ್ನಿಸುತ್ತದೆಯಂತೆ.

ಎಕ್ಕೆ (*Calotropis gigantea* R. Br.)

ಪರ್ಯಾಯ ಪದಗಳು:

ಕನ್ನಡ: ಎಕ್ಕ, ಎರುಕ

ಸಂಸ್ಕೃತ: ಅರ್ಕ, ಆದಿತ್ಯ, ಶ್ವೇತಾರ್ಕ (ಬಿಳಿಎಕ್ಕ)

ಚಂಡೇಶ ಪಿಳ್ಳೆಯು (ಹರಿಹರ: ಚಂಡೇಶ ಪಿಳ್ಳೆಯ ರಗಳೆ) ಶಿವಲಿಂಗಕ್ಕೆ ಅರ್ಪಿಸಿದ ಹೂಗಳಲ್ಲಿ ಇದೊಂದು. ಹೂವಿಗೆ ವಾಸನೆಯೇನೋ ಇದೆ. ಆದರೆ ನನ್ನಂಥವರ ಮೂಗಿಗೆ ಹಿತವಾದದ್ದೇನೂ ಅಲ್ಲ. ಕೀಟಗಳೂ ನೊಣಗಳೂ ಎಕ್ಕದ ಹೂವಿಗೆ ಆಕರ್ಷಿತವಾಗುವುದು ಈ 'ಪರಿಮಳ'ದಿಂದಲೇ.

ಬಯಲು ಸೀಮೆಯ ಹರಳು ಭೂಮಿಯ ಪೊದರು ಗಿಡ ಇದು; ಕೆಲವೆಡೆಗಳಲ್ಲಿ ಹದಿನೈದಡಿ ಎತ್ತರ ಬೆಳೆಯುತ್ತದೆ. ಕಳ್ಳಿಯಂತೆ ಹಾಲು ಸುರಿಸುತ್ತದೆ. 'ಹಾಲು' ವಿಷಸಂಯೋಜಿತವಾದದ್ದು. ಚರ್ಮದೊಳಕ್ಕೆ ಮುಳ್ಳು ಹೊಕ್ಕು ಮುರಿದಾಗ, ಆ ತುಂಡನ್ನು ಹೊರಕ್ಕೆ ಸೆಳೆಯುವುದಕ್ಕಾಗಿ ಈ ಹಾಲಿನ ಒಂದೆರಡು ತೊಟ್ಟುಗಳನ್ನು ಆ ದೇಹಭಾಗದ ಮೇಲೆ ಸವರುವುದು ನಾಡುವೈದ್ಯ (Folk medicine) ದ ಪ್ರಯೋಗವಾಗಿರುವುದಾದರೂ ಆಯುರ್ವೇದದ ಮಂಜೂರಾತಿಯಿಲ್ಲ. ನಾಡುವೈದ್ಯದ ಈ ಬಳಕೆ ಸ್ವಲ್ಪ ಅಪಾಯಕಾರಿಯಾದದ್ದೇ. ಎಕ್ಕದ ಹಾಲು ರಕ್ತವನ್ನು ಸೇರಿದ್ದೇ ಆದರೆ 'ಪರಂಗಿ' ವೈದ್ಯವನ್ನು ಮೊರೆಹೊಗಬೇಕಾಗುತ್ತದೆ!

ಎಕ್ಕದಲ್ಲಿ ಎರಡು ಪ್ರಭೇದಗಳಿವೆ: (1) ಶ್ವೇತಾರ್ಕ (ಬಿಳಿಎಕ್ಕ). ಇದರ ಹೂ ಮಾತ್ರ ಬಿಳಿಯ ಬಣ್ಣ, ಎರಡನೆಯ ಪ್ರಭೇದಕ್ಕಿಂತ ಇದು ಶ್ರೇಷ್ಠ ಎಂಬ ನಂಬಿಕೆಯಿದೆ. ಅದೇಕೋ? ಶ್ವೇತಾರ್ಕಗಣಪತಿ ಇದರ ಬೇರಿನಿಂದ 'ಉದ್ಭವ'ವಾಗುತ್ತಾನೆಂದಿರಬಹುದೆ? ಹರಳುಗಲ್ಲಿನ ಭೂಮಿಯ ಕೊರಕಲುಗಳಲ್ಲಿ ಕೆಲವು ಸಲ ಬೇರುಗಳು ಒಂದರೊಡನೊಂದು ಸಿಕ್ಕುಹಾಕಿಕೊಂಡು ಬೆಳೆದಿರುತ್ತವೆ. ಇಂಥ ಬುಡವನ್ನು ಅಗೆದಾಗ ಬೇರುಗಂಟಿನ ಹೊರನೋಟವು ಚಿತ್ರ ವಿಚಿತ್ರಾಕೃತಿಗಳನ್ನು ತಾಳಿರುತ್ತದೆ. ಇಂಥದೊಂದು, ಡೊಳ್ಳುಹೊಟ್ಟೆಯ ಗಿಡ್ಡುದೇಹದ ಸೊಟ್ಟಕೈಕಾಲು ಗ್ರಂಥಿಗಳ ತೊಂಗು ಸೊಂಡಿಲ ಗುರುತುಗಳಿಗೆ ಅನುವಾಗಿರುವುದಾದರೆ, ಅದೇ ಗಣಪತಿಯ ವಿಗ್ರಹವಾಗಿ ಆರಾಧನೆಗೊಳಪಡುತ್ತದೆ. (2) ಇದರ ಹೂ 'ಕೆಂಪು' ಬಣ್ಣವನ್ನು ಅಲ್ಲಲ್ಲಿ ಸವರಿಕೊಂಡಿರುತ್ತದೆ. 'ಕೆಂಪು' ಎಂದರೆ ರಕ್ತದ ಕೆಂಪು ಅಲ್ಲ. ಸರಿಯಾಗಿ ಹೇಳು

ವುದಾದರೆ ತಿಳಿಯಾದ ಊದಾ (light violet) ಎನ್ನಬಹುದು. ಈ ಒಂದು ಗುಣವನ್ನು ಬಿಟ್ಟರೆ ಬಿಳಿಯ ಎಕ್ಕಕ್ಕಿಂತ ಬೇರಾವ ಗುಣದಲ್ಲಿಯೂ ವ್ಯತ್ಯಾಸವಿಲ್ಲ. ಈ ಪ್ರಭೇದ ಬೆಳೆಯುವುದೂ ಬಿಳಿಎಕ್ಕದ ಅಕ್ಕಪಕ್ಕಗಳಲ್ಲಿಯೇ; ಇದರ ಬೇರುಗಂಟೂ ಕೆಲವು ಸಲ ಗಣಪನನ್ನು ಹೋಲುವುದಾದರೂ 'ಕೆಂಪು ಎಕ್ಕ' ಗೌಣವೇ. ಸಸ್ಯ ಶಾಸ್ತ್ರವು ಈ ಪ್ರಭೇದಗಳನ್ನು ಒಪ್ಪುವುದಿಲ್ಲ.

ಎಕ್ಕಕ್ಕೂ ಅರ್ಕಕ್ಕೂ ಭಾಷಾ ಸಾಮ್ಯವಿದೆ– ತತ್ಸಮ ತದ್ಭವಗಳ ನಂಟು. ಅರ್ಕಕ್ಕೂ ಸೂರ್ಯನಿಗೂ ಬಿಗುವಾದ ಗಂಟು. ಅರ್ಕವೇ ಸೂರ್ಯನೆಂಬ ಭಾವನೆ ವೇದಕಾಲದ್ದು. ಜನನೇಂದ್ರಿಯದ ಬಲವೃದ್ಧಿಗೆ ಎಕ್ಕದ ಕಡ್ಡಿಯಿಂದ ತಯಾರಾದ ರಕ್ಷೆಯ ಬಳಕೆ ಅಥರ್ವವೇದದಲ್ಲಿ ಉಕ್ತವಾಗಿದೆ. ಜಾನಪದ ಜೀವನದಲ್ಲಿ ಮದುವೆ ಗರ್ಭಾಧಾನ ಸಂದರ್ಭಗಳಲ್ಲಿ ಇದೇ ಸಂಪ್ರದಾಯವನ್ನು ಬಿಂಬಿಸುವ 'ಸಾಂಗ್ಯ'ಗಳು ಇಂದಿಗೂ ಪ್ರಚಾರದಲ್ಲಿವೆ.

ಕಕ್ಕೆ (*Cassia Fistula* L.)

ಪರ್ಯಾಯ ಪದಗಳು–

ಕನ್ನಡ:ಕೊಂದೆ, ಅರಗು, ಕಾಕಿ
ಸಂಸ್ಕೃತ: ಸುವರ್ಣಕ, ಕಾಂಚನ, ಅಂತ್ರದ್ರು

ದಕ್ಷಿಣ ಭಾರತದ ಮೈದಾನ ಕಾಡುಗಳಲ್ಲಿ 30–40 ಅಡಿ ಎತ್ತರ ಬೆಳೆಯುವ ಮರ. "ಅಡಿಯಿಂದ ತುದಿವರೆಗು ಎಲೆಯೆ ಕಾಣಿಸದಂತೆ ಕಿಕ್ಕಿರಿದು" (ವಿ.ಸೀ.) ಹೂತಳೆವ ಕಕ್ಕೆ. (ಎಲೆಗಳು ಉದುರಿದ ಮೇಲೆಯೇ ಮರ ಹೂ ತಳೆಯುತ್ತದೆಯಾದ್ದರಿಂದ ಎಲೆ 'ಕಾಣಿಸದೆ' ಇರುತ್ತದೆ, ಅಷ್ಟೆ!) ಅಪರಂಜಿ ಚಿನ್ನದ ಬಣ್ಣ ಹೂವಿನದು. ಹಳೆಯ ತಮಿಳು ಕವಿಗಳಿಗೆ ಪರಿಚಿತವಾಗಿದ್ದ ದೃಶ್ಯ ಇದು. ಉದುರಿದ ಹೂಗಳು ಹಳ್ಳವೊಂದರಲ್ಲಿ ಬಿದ್ದಾಗ ಚಿನ್ನದ ನಾಣ್ಯಗಳು ತುಂಬಿದ ಪೆಟ್ಟಿಗೆಯ ಬಾಗಿಲು ತೆರೆದಿಟ್ಟಂತೆ ಕಂಡಿತು (ಕುರುಂತೊಕೈ, 233). ಹೂಗಳು ಪುಷ್ಪಗುಚ್ಛದ ಕಾಂಡದ ಮೇಲೆ ಪೋಣಿಸಿದಂತೆ ಅಣಿಯಾಗಿ ರೆಂಬೆಕೊಂಬೆಗಳಿಂದ ಬಿಳಿಲುಗಳಂತೆ ತೊಂಗುತ್ತವೆ; ಈ ನೋಟವನ್ನು 'ಚಿನ್ನದ ಆಭರಣಗಳಿಂದ ಅಲಂಕೃತಗೊಂಡ ಮರ' ಎಂದರು (ಅಕನಾನೂಱು, 364), ಅಥವಾ 'ಕೊನ್ರೈಮರ ಮಾಲೆಗಳನ್ನು ತಳೆಯಿತು'- ಬಿಡಿ ಹೂಗಳನ್ನಲ್ಲ ಎಂದು ಧ್ವನಿ– ಎಂದಿದ್ದಾರೆ (ಐಂಕುರುನೂಱು, 497)

ಕಕ್ಕೆ ಕಾಯಿ ಒಂದೆರಡಡಿ ಉದ್ದದ ಕರಿಯ ಕೋಲಿನಂತೆ ತೊಂಗಿರುತ್ತದೆ. 'ತೆಂಕಣಗಾಳಿ ಸೋಂಕಿದೊಡಂ......' ನಮ್ಮ ಪಂಪನಿಗೆ ಏನೇನೋ ಆಯಿತಲ್ಲವೆ? ಹಾಗೆಯೇ ತಮಿಳು ಕವಿಯೊಬ್ಬನಿಗೆ ಇದೇ ತೆಂಕಣ ಗಾಳಿಯ ಬಿರುಬಿನಲ್ಲಿ ಜೋಲಾಡುತ್ತಿದ್ದ ಕಕ್ಕೆ ಕಾಯಿಗಳು ಪಕ್ಕದಲ್ಲಿದ್ದ ಹಿರಿಯ ಬಂಡೆಯ ಮೇಲೆ ಮದ್ದಳೆ ನುಡಿಸಿದ ಭಾಸವಾಯಿತು. (ನಱ್ಱಿಣೈ, 46). ಕಕ್ಕೆಕಾಯಿ ಬಲಿತು ಹಣ್ಣಾದಾಗ ಅದರ ತಿರುಳು ನಾಲಗೆಗೇನೋ ಸ್ವಲ್ಪ ಸಿಹಿಯಾಗಿ ಒಂದು ಬಗೆಯ ರುಚಿಯಾಗಿ ಇರುತ್ತದೆ; ಆದರೆ ವಿರೇಚಕ ಗುಣ. ಕಕ್ಕೆ ಹಣ್ಣು ತಿಂದ ನರಿಯ ಕತೆ ಬಹುಮಂದಿಗೆ ಗೊತ್ತಿರುವ ಸಂಗತಿಯೇ.

ಕಕ್ಕೆಯ ಚೌಬೀನೆ ಅಷ್ಟೇನೂ ಉಪಯೋಗಕ್ಕೆ ಬಾರದು. ಸೌದೆಯಾಗಿಯೇ ಇದರ ಹೆಚ್ಚು ಉಪಯೋಗ. ತೂಕದ ಚೌಬೀನೆಯಾದದ್ದರಿಂದ ಒರಟು ಕಂಬಗಳಿಗೂ ಒನಕೆಗಳಿಗೂ ಒದಗಿಬರುತ್ತದೆ.

'ಅರುವತ್ತುಮೂರು ಪುರಾತನ'ರಲ್ಲೊಬ್ಬನಾದ ಚಂಡೇಶ ಪಿಳ್ಳೆಯು "ಕಕ್ಕೆ ಎಕ್ಕೆಗಳ ಪೂವಂ ತಂದು" ಶಿವಲಿಂಗಕ್ಕೆ ತಣಿವಿಲ್ಲದೆ ಪೂಜೆಮಾಡಿದನೆಂದು ಹರಿಹರನ ರಗಳೆಯಿಂದಲೇ ತಿಳಿಯುತ್ತದೆ. ಕತೆಯ ಕೊನೆಗೆ ಶಿವನು ಪ್ರತ್ಯಕ್ಷನಾಗಿ "ಆಸುಂಡ ಶೇಷಪ್ರಸಾದವದು ನಿನಗೆಂದು ಚಂಡೇಶ ಪಿಳ್ಳೆಯುರ್ಗೊಲ್ದು ಬೀಳುಡೆಯಿತ್ತು ಕೊಂಡಾಡಿ ಮುಂಡಾಡಿ ಬಾಯ ತಂಬುಲವಿತ್ತು...ನೆಗೆದನಾಕಾಶಕ್ಕೆ". ಶೇಕ್ಕಿಳಾರನ (ಪೆರಿಯ ಪುರಾಣಂ) ಕತೆಯ ಮುಕ್ತಾಯ ಹೀಗಿಲ್ಲ. ಶಿವನು ಚಂಡೇಶನಿಗೆ 'ಸುರಕೊನ್ರೈ'(=ಕಕ್ಕೆ) ಹೂವಿನ ಹಾರವನ್ನು ಮುಡಿಸಿ ಆಶೀರ್ವಾದ ಮಾಡಿದನಂತೆ. ಇದೇ ಸಂದರ್ಭವನ್ನು ತಮಿಳು ನಾಡಿನ ಶಿಲ್ಪಿಗಳು ಉಪಯೋಗಿಸಿಕೊಂಡಿದ್ದಾರೆ. ಹೀಗೆ ಶಿವನಿಗೆ ಕಕ್ಕೆ ಹೂ ಪ್ರಿಯವಾದದ್ದು ಮಾತ್ರವಲ್ಲ, ತನ್ನ ಭಕ್ತನಿಗೆ ಅನುಗ್ರಹ ಮಾಡಿದ ಪ್ರಸಾದವೂ ಆಗಿದೆ. ಪುರನಾನೂಱಿನ ಪದ್ಯವೊಂದು ಈ ಹೂವನ್ನು ಶಿವನ ಚಿಹ್ನೆಯೆಂದೇ ಕರೆದಿದೆ.

ಕಮಲ (*Nelumbium Speciosum* Willd)

ಪರ್ಯಾಯ ಪದಗಳು:

ಕನ್ನಡ: ತಾವರೆ

ನಾಮಲಿಂಗಾನುಶಾಸನದಲ್ಲಿ ಈ ಹೂವಿಗೆ ಸುಮಾರು 40 ಸಂಸ್ಕೃತ ಪರ್ಯಾಯ ಪದಗಳನ್ನು ಹೇಳಿದೆಯಾದರೂ, ಕಮಲಕ್ಕೂ ನೆಯ್ದಿಲೆಗೂ ಯಾವಯಾವ ಪದಗಳು ಅನ್ವಯಿಸುತ್ತವೆಯೆಂದು ಖಚಿತವಾಗಿ ಹೇಳುವುದು ಕಷ್ಟ. ಈ ಪಟ್ಟಿಯ ಜತೆಗೆ ಕನ್ನಡದ ಪರ್ಯಾಯ ಪದಗಳನ್ನೂ ಸೇರಿಸಿ ಕೊಂಡರೆ ಕಷ್ಟದೊಂದಿಗೆ ಅದಲು ಬದಲಿನ ಅವಾಂತರವೂ ತಲೆಹಾಕುತ್ತದೆ. ಈ ಸ್ಥಿತಿ ಏರ್ಪಟ್ಟಿರುವುದು ಇಂದಲ್ಲ, ನಿನ್ನೆಯಲ್ಲ; ತಲೆತಲಾಂತರದಿಂದ ಕವಿಗಳ ತಲೆಯೊಳಗೂ ಕಾವ್ಯವನ್ನು ಓದಿದವರ ತಲೆಯೊಳಗೂ ಭ್ರಮಣೆಯೊಡ್ಡಿರುವ ಸಮಸ್ಯೆ ಇದು.

ಬಲಿತ ಎಲೆಗಳ ಕಾಂಡದ ಸ್ವಲ್ಪ ಭಾಗ ನೀರಿನಮಟ್ಟದಿಂದ ಮೇಲೆದ್ದಿರುತ್ತದೆ. ದಿಂಬಿನಂತಿರುವ ಪುಷ್ಪಪಾತ್ರದ ಮೇಲೆ ಸಣ್ಣ ಸಣ್ಣ ಕುಳಿಗಳಲ್ಲಿ ಒಂದೇ ಒಂದು ಬೀಜವನ್ನೊಳಗೊಂಡ ಅಂಡಾಶಯಗಳು ಬಿಡಿ ಬಿಡಿಯಾಗಿ ಸ್ಥಾಪಿತವಾಗಿರುತ್ತವೆ. ದಳಗಳ ಬಣ್ಣ ಕೆಂಪು, ಉದಾ, ಬಿಳುಪು. ಹೀಗಾಗಿ ಕೆಂದಾವರೆ, ಬೆಳ್ದಾವರೆ, ಇತ್ಯಾದಿ ವಿಶೇಷಣಗಳು.

ಈ ಹೂವೇ ಸಹಸ್ರದಲಪದ್ಮ, ಪಂಕೇರುಹ, ರಾಜೀವ ಇತ್ಯಾದಿ ಪರ್ಯಾಯ ಪದಗಳನ್ನು ಕೊಂಡದ್ದು ಎಂದು ನನಗನ್ನಿಸುತ್ತದೆ. 'ತಾವರೆ ಅಕ್ಕಿ' ಎನ್ನುವುದು ಇದರ ಬೀಜವನ್ನೇ. "ರವಿ ಬರೆ ವನಜವರಳಿತು" (ಗದುಗಿನ ಭಾರತ) ಎನ್ನಿಸಿಕೊಂಡದ್ದೂ ಇದೇ ಹೂ. ಕೆಂದಾವರೆಯನ್ನು ಭುಗಿಲೆಂದು ಉರಿಯುವ ಜ್ವಾಲೆಗೆ ಒಪ್ಪವಿಟ್ಟರು, ತಮಿಳು ಕವಿಗಳು (ಅಕನಾನೂಱು, 106); ಅದರ ಎಸಳು ಮೊಲದ ಕಿವಿಯಂತಿದೆ ಎಂದರು (ಪೆರುಂಪಾಣಾಱುಪ್ಪಟ್ಟೈ, 114). ಹೂವಿನ ಕಾಂಡದ ಮೇಲೆ ಮುಳ್ಳೆದ್ದಿರು ವುದನ್ನೂ ಅವರು ಗಮನಿಸಿದ್ದರು (ಮತುರೈಕ್ಕಾಂಜಿ, 249). ಎಮ್ಮೆಯೊಂದು ಕೆಸರಿನಲ್ಲಿಳಿದು ತಾವರೆ ಹೂವನ್ನು ತಿಂದು ತೃಪ್ತವಾಗಿ ಹಲಸಿನಮರದ ನೆಳಲಲ್ಲಿ ವಿಶ್ರಮಿಸಿಕೊಂಡ ಗ್ರಾಮಕದೃಶ್ಯವನ್ನು ಕಂಡಿ ದ್ದವರು ಅವರು (ಅಕನಾನೂಱು, 91). ಎಳಗೂಸಿನ ಕೈ ಕಮಲದ ಒಳ ಪದರಗಳ ಎಸಳಿನಂತಿದೆ ಎಂದರು (ಅಕನಾನೂಱು, 16).

ಕ್ರಿಸ್ತಶಕದ ಆದಿಭಾಗದಿಂದಲೇ ತಾವರೆಗೆ ವಿಶೇಷ ಪ್ರಾಶಸ್ತ್ಯ ದೊರಕಿದೆ. ಶಿಲ್ಪಿಗಳು ಇದರ ನಮೂನೆಯನ್ನು ಕಲ್ಲಿನಲ್ಲಿ ಕೊರೆದರು; ಚಿನಿವಾರರು ಬುದ್ಧನ ಪೂಜೆಗಾಗಿ ಚಿನ್ನದಲ್ಲಿ ಎರಕ ಹೊಯ್ದರು. ಮಧ್ಯಯುಗೀನ ದೇವಾಧಿದೇವತೆಗಳಿಗೆಲ್ಲ ತಾವರೆ ಹೂ ಪೀಠವಾಯಿತು. ಬ್ರಹ್ಮ ಹುಟ್ಟಿದ್ದೇ ವಿಷ್ಣುವಿನ ನಾಭಿಕಮಲದಲ್ಲಲ್ಲವೆ? ಲಕ್ಷ್ಮಿ–ಸರಸ್ವತಿಯರಂತೂ ಪದ್ಮಪೀಠವನ್ನು ಬಿಟ್ಟು ಇಳಿದದ್ದೇ ಇಲ್ಲ. ಮಾನವರಾಗಿ ಹುಟ್ಟಿ ಬೆಳೆದು ದೈವತ್ವವನ್ನು ಸಂಪಾದಿಸಿಕೊಂಡವರ ಪ್ರತಿಮೆಗಳಿಗೆ ಕೂಡ ಪದ್ಮ ಪೀಠವೇ ಬೇಕಾಯಿತು. ತಾವರೆಯ ನಕಾಸೆ ನಮ್ಮ ಉಡುಗೆ ತೊಡುಗೆ ಆಭರಣ ಅಲಂಕಾರಗಳಿಗೂ ಆಕರವಾಯಿತು; ಇಂದಿಗೂ ಆಗಿದೆ.

ದೇವನ ಪಾದಯುಗ್ಮಗಳು ಪದ್ಮ ಪಲ್ಲವವಾಯಿತು; ಭಕ್ತನು ಆ ಹೂವಿನ ಪರಾಗವನ್ನು ಭುಜಿ ಸುವ ದುಂಬಿಯಾದ. ಹೂವಿನ ಎಳಸು ಚೆಲುವಾದ ಕಣ್ಣಿಗೆ ಹೋಲಿಕೆಯಾಯಿತು. ಸುಂದರವಾದ ಬೆರಳು ಗಳಿಗೆ ಸಂಕೇತವಾಯಿತು. ಯೋಗಿಗೆ ದೇಹದ ನಾನಾ ಕುಂಡಲಿಗಳು ಪದ್ಮಗಳಂತೆ ಕಂಡವು. ಜನಸಾಮಾನ್ಯದ ದೃಷ್ಟಿಯಲ್ಲಿ ಪೂಜಾಯಜ್ಞಕ್ಕೆ ಶ್ರೇಷ್ಠವಾದೊಂದು ಹೂವಾಯಿತು.

ಮಧ್ಯಕಾಲದ ದಕ್ಷಿಣಭಾರತದಲ್ಲಿ ತಾವರೆ ಹೂವಿನ ಬಳಕೆ ದೇವಾಲಯಗಳಲ್ಲಿ ಅಧಿಕವಾಗಿತ್ತು. ಇದರ ಬೆಳೆಗಾಗಿಯೇ ಪ್ರತ್ಯೇಕವಾದ ದತ್ತಿಗಳನ್ನು ಬಿಟ್ಟಿದ್ದ ಸಂಗತಿ ಅನೇಕ ಶಾಸನಗಳಿಂದ ತಿಳಿದು ಬರು ತ್ತದೆ. ಮಾಣಂಬಾಡಿಯ ನಾಗನಾಥಸ್ವಾಮಿ ದೇವಾಲಯಕ್ಕೆ ಪ್ರತಿದಿನವೂ 2000ಹೂಗಳನ್ನು ಸರಬ ರಾಜು ಮಾಡಬೇಕಾಗಿತ್ತು (95–1931/2)

ಕೇತಕಿ (*Pandanus tectorius* Soland)

ಪರ್ಯಾಯಪದಗಳು:

ಕನ್ನಡ: ಕೇದಿಗೆ, ತಾಳೆ

ಹಕ್ಕಿಯ ಗರಿಯ ಗಾಳಿ ಸೋಕಿದರೆ ಕೂಡ ಅನೇಕ ಹೂಗಳ ಎಸಳು ಕುಂದುತ್ತದೆ, ಒಮ್ಮೆ ಹೀರಿದರೆ ಕಂಪು ಸುರಿದು ಹೋಗುತ್ತದೆ; ಆದರೆ ಕೇತಕಿ ಹೀಗಲ್ಲ, ತಿರುಗಿ ತಿರುಗಿ ಹೀರಿದರೂ ಸೌರಭ ಮುಗಿದು ಹೋಗದು–ಹೀಗೆಂದುಕೊಂಡು ಮದಾಳಿಗಳು ಹೂವಿಗೆ ಸುತ್ತಿಸುತ್ತಿ ಮುತ್ತಿ ಬರುತ್ತಿದ್ದವಂತೆ (ಪಂಪ). ಹೀಗೆ ದುಂಬಿಗೂ ಕೇತಕಿಗೂ ಒಂದು ಬಲವಾದ ಸಂಬಂಧ ಏರ್ಪಟ್ಟಿದೆ–ಕಾವ್ಯದಲ್ಲಿ. ವಾಸ್ತವಿಕತೆಯಲ್ಲಿ ಕೇತಕಿಯ ಕಂಪಿಗೆ ಮರುಳಾಗುವುದು ದುಂಬಿ ಮಾತ್ರವಲ್ಲ, ಅನೇಕ ಬಗೆಯ ಕೀಟಗಳೂ ಪರಾಗ ಭಕ್ಷಣೆಗಾಗಿ ಬರುತ್ತವೆ.

ಕೇತಕಿ–ದುಂಬಿಯ ನಂಟನ್ನು ಕುರಿತ ಸುಭಾಷಿತಗಳು ಒಂದೆರಡಿವೆ. ಈ ನಂಟು ನಿತ್ಯಪ್ರೇಮದ ಕುರುಹು; ಆದರೆ ಆ 'ಶನಿ' ಮುಳ್ಳುಗಳು ಭಂಗತರಲೆಳಸುತ್ತವೆ. ನಿತ್ಯಪ್ರೇಮಕ್ಕೆ ಮುಳ್ಳು ಎಲ್ಲಿಯಾದರೂ ತಡೆಯಾಗುವುದುಂಟೆ? (ಶಾರ್ಙ್ಗಧರ ಪದ್ಧತಿ, 1011–3). ಹರಿಹರನು ಹೇಳುವಂತೆ "ಹೊರಗೆ ಮುಳ್ಳೊಳಗೆ ಕಂಪು" ಇದ್ದೇ ಇದೆ, "ಗುಪ್ತಭಕ್ತ"ನಂತೆ.

ಕಡಲ ತೀರದಲ್ಲಿ, ನದಿಯ ಬದಿಯಲ್ಲಿ, ನೀರುಕಾಲುವೆಯ ತಡಿಯಲ್ಲಿ, ಸ್ವಾಭಾವಿಕವಾಗಿ ಬೆಳೆಯುವ ಪೊದರು ಗಿಡ ಇದು. ಎಲೆಗರಿಯ ತಲೆಗೆದರಿ ಗಾಳಿಯಲ್ಲಿ ತೂರಾಡುತ್ತದೆ. ತಮಿಳು ಕವಿಗಳು ಹೇಳುವಂತೆ ಹೊರನೋಟಕ್ಕೆ ಕಾಂಡ ಕಚ್ಚುಕಚ್ಚು–ಸೀಗಡಿ ಪ್ರಾಣಿಯ ಬೆನ್ನಿನಂತೆ (ನಱ್ಱಿಣೈ, 299). ರಾಕ್ಷಸನ ಕೆದರಿದ ತಲೆಗೂದಲಿನಂತೆ ಪತ್ರಸಂಚಯ (ಅಕನಾನೂಱು, 130). ಎಲೆಯಂಚಿನ ಮುಳ್ಳು ಸಾಲು ಷಾರ್ಕ್ ಮೀನಿನ ಹಲ್ಲಿನಂತೆ; ಮೊಗ್ಗು ಆನೆಯ ದಂತದಂತೆ (ನಱ್ಱಿಣೈ, 299). ವರಾಹ–ವಿಷ್ಣುವಿನ ಕೋರೆ ಹಲ್ಲನ್ನು ಮೊಗ್ಗಿಗೆ ಹೋಲಿಸುವುದೂ ಕಾವ್ಯ ಧರ್ಮವೇ ಆಗಿದೆ. "ಕೇದಿಗೆಯ ಬನಗಳಲ್ಲಿ ಸಂಚರಿಸದಿರು ಚೆಲುವೆ, ಸರ್ಪಮಂದಿರವಂತೆ ಕಂಪಿನೊಡಲು" ಎಂದು ಎಚ್ಚರಿಕೆ ಕೊಟ್ಟ ಶ್ರೀ ನರಸಿಂಹಸ್ವಾಮಿಯವರ ಮಾತೂ ಕವಿಸಮಯವೇ.

ಹಳೆಯ ಸಂಸ್ಕೃತ ಪಂಡಿತರು "ಕೇತಕೀದ್ವಯ" ಎಂದಿದ್ದಾರೆ,–ಗಂಡು ಹೂ ಬಿಡುವ ಕೇತಕಿ ಬೇರೆ, ಹೆಣ್ಣು ಹೂ ಬಿಡುವ ಕೇತಕಿ ಬೇರೆ ಎಂಬುದನ್ನು ತಿಳಿಸುವುದಕ್ಕಾಗಿ. ಸಸ್ಯಗಳಲ್ಲಿ ಲಿಂಗಭೇದವಿದೆಯೆಂಬುದು –ಪಾಶ್ಚಾತ್ಯರಿಗೆ ತಿಳಿಯುವುದಕ್ಕೆ ಮೊದಲೇ–ನಮ್ಮ ಪೂರ್ವಿಕರಿಗೆ ತಿಳಿದಿತ್ತು. ವಾಸನೆ ಹೊಮ್ಮುವುದು ಗಂಡು ಹೂವಿನಿಂದ ಮಾತ್ರ ಎಂಬದೂ ಅವರಿಗೆ ತಿಳಿದದ್ದೇ (ಜಾತಕಗಳು, ಬುದ್ಧವಂಶ).

ಕೇತಕಿಯ 'ಹೂ' ಎಂದು ನಾವು ಸಾಮಾನ್ಯವಾಗಿ ಕರೆಯುವ ವಸ್ತು ನಿಜಕ್ಕೂ ಹೂ ಅಲ್ಲ. ಅದು ಬಹು ಸಣ್ಣ ಸಣ್ಣ ಅಸಂಖ್ಯಾತ ಗಂಡುಹೂಗಳನ್ನೊಳಗೊಂಡ ಗುಚ್ಛ. ಕೇದಿಗೆಯ 'ದಳ' ಅಥವಾ ಎಸಳು' ಎಂದು ನಾವು ಕರೆಯುವ ವಸ್ತು ಹೂವಿನ ಭಾಗವೇ ಅಲ್ಲ; ಗಂಡು ಹೂ ಗೊಂಚಲುಗಳನ್ನು ಆವರಿಸಿಕೊಂಡಿರುವ ಮುಚ್ಚೆಲೆ (bract) ಅದು. ಹೆಣ್ಣುಹೂಗಳೂ ಒತ್ತಾದ ಗುಚ್ಛದಲ್ಲಿ ಇರುತ್ತವೆ; ಒಂದು ಹೂವಿನಿಂದ ಇನ್ನೊಂದನ್ನು ಬೇರ್ಪಡಿಸುವುದು ಕಷ್ಟ. ಹಣ್ಣಾದಾಗ ಅನನಾಸ್ ಹಣ್ಣಿನಂತಿರುತ್ತದೆ.

ಕೇದಿಗೆಗೆ 'ತಾಳೆ' ಎಂಬ ಪರ್ಯಾಯ ಪದ ಹೇಗೆ ಹುಟ್ಟಿಕೊಂಡಿತೋ? ತಾಳ, ತಾಲ, ತಾಡ ಮೊದಲಾದ ಪದಗಳು ತೆಂಗಿನ ಜಾತಿಗೆ ಸೇರಿದ ಮರವೊಂದಕ್ಕೆ ಬಹುಕಾಲದಿಂದ ಭಾರತೀಯ ಭಾಷೆಗಳಲ್ಲಿ ಪ್ರಯೋಗವಾಗಿದೆ. ಈ ಮರದ ಎಲೆಗಳೇ (ಓಲೆ) ದಕ್ಷಿಣ ಭಾರತದಲ್ಲಿ ಪ್ರಾಚೀನ ಕಾಲದ ಬರಹ ಸಾಮಗ್ರಿಯಾಗಿತ್ತು. 'ತಾಳೆಯೋಲೆ' 'ತಾಳೆಯ ಕೊಡೆ' ಮುಂತಾದ ಪದಗಳು ಅನ್ವಯವಾಗುವುದು ಈ ಸಸ್ಯ ವಿಶೇಷದಿಂದ ಉತ್ಪನ್ನವಾದ ವಸ್ತುಗಳಿಗೆ. ಕೇದಿಗೆಯು ಬರಹದ ಸಾಮಗ್ರಿಯನ್ನು ಒದಗಿಸದು; ಕೊಡೆಗೂ ಉಪಯೋಗವಾಗದು. ಸುಲಭವಾಗಿ ಒಡೆದು ಸೀಳುವಂಥ ಸ್ವಭಾವಗೊಂಡದ್ದು.

ಕಂಚವಾಳ (*Bauhinia Purpurea* L.)

ಪರ್ಯಾಯ ಪದಗಳು:

ಕನ್ನಡ: ಕಂಚುವಾಳ, ಕಾಂಚವಾಳ, ಕಾಂಚಾಳ, ಬಸವನ ಪಾದ

ನಾವು ಸಾಮಾನ್ಯವಾಗಿ ಕಂಚುವಾಳ ಎಂದು ನಿರ್ದೇಶಿಸುವ ದ್ರುಮವಿಶೇಷದಲ್ಲಿ ಐದಾರು ಸ್ಪೀಷೀಸ್‌ಗಳು ಕಲೆತಿವೆ. ಸಸ್ಯಶಾಸ್ತ್ರ ರೀತಿಯಿಂದ ಇವನ್ನು ಬೇರ್ಪಡಿಸಲು ಸಾಧ್ಯ..

ಈ ಸಣ್ಣಮರ ದಕ್ಷಿಣ ಭಾರತದ ಎಲೆಯುದುರುವ ಕಾಡುಗಳಲ್ಲಿ ಬೆಳೆಯುತ್ತದೆ. ಎಲೆ ತುಂಬಿದ ಮರವೂ ಸೊಗಸು, ಹೂ ತಳೆದ ಮರವೂ ಸೊಗಸು. ಬಿಡಿಹೂವೂ ಸೊಗಸು. ಊರುಗಳಲ್ಲೂ ಮನೆಗಳಲ್ಲೂ ಬೆಳೆಸುತ್ತಾರೆ. ಎಲೆಯ ರೂಪರೇಖೆಯು ದನದ ಗೊರಸಿನಾಕೃತಿಯಲ್ಲಿರುವುದರಿಂದ ಮರಕ್ಕೆ ಬಸವನ ಪಾದವೆಂಬ ಅಡ್ಡಹೆಸರು ದತ್ತವಾಗಿದೆ.

ಹೂದಳಗಳು ಸಾಮಾನ್ಯವಾಗಿ ಬಿಳಿಬಣ್ಣದವು; ಕೆಲವು ಜಾತಿಗಳಲ್ಲಿ ಊದಾ ಬಣ್ಣದವಾಗಿರಬಹುದು, ಬಿಳಿದಳದ ಮೇಲೆ ಊದಾಬಣ್ಣದ ಗೆರೆ ಚುಕ್ಕೆ ಚಿತ್ತಾರಗಳಿರಬಹುದು. ಹೂವಿನ ಅಡ್ಡಳತೆ 2–2½ಅಂಗುಲ; ಸಡಿಲವಾದ ಗೊಂಚಲುಗಳಲ್ಲಿ ಕೊನರುತ್ತವೆ. ತುದಿರೆಂಬೆಗಳಿಂದ ಉದ್ಭವಿಸುವ ಗೊಂಚಲುಗಳು ಹಸುರೆಲೆ ಛಾವಣಿಗೆ ಅಲಂಕಾರ ಮಾಡಿದಂತಿರುತ್ತದೆ. ಕಾಯಿಗಳು ಎಲೆ ಸಂದುಗಳಿಂದ ತೊಂಗುತ್ತವೆ. ಈ ನೋಟವೂ ಚೆಂದವೇ.

ಕಂಚವಾಳ ಹೂವಿನ ಸೊಬಗನ್ನು ಅನುಭವಿಸಿದವನು ಜಾನಪದ ಕವಿ. ಕೋಲಾರ ಜಿಲ್ಲೆಯಲ್ಲಿ ಪ್ರಚಾರದಲ್ಲಿರುವ ಹಾಡಿನ ನುಡಿಯೊಂದು ಹೀಗಿದೆ;:

"ಕೆಂಚಾದರೇನಂತೆ
ಕಂಚಾಳ ಮುಡಿದವಳೆ
ಲಂಚ ಬೇಡಂತಾಳೆ, ಮದುವ್ಯಾಗು"

ಹುಡುಗಿಯ ಬಣ್ಣ ಕೆಂಪು ಎಂಬ ಕಾರಣದಿಂದ ಹುಡುಗ ಮದುವೆಗೆ ಒಪ್ಪಲಿಲ್ಲ. ಅವನ ತಾಯಿ ಹೀಗೆ ಸಮಾಧಾನ ಹೇಳಿದಳು.

ಕರ್ಪೂರ (*Cinnamomum Camphora* Nees)

ವಿರೂಪಾಕ್ಷನಿಗೆ ಕಾಣಿಸಿದ ದೀಪಾರಾಧನೆಯ ಸಂದರ್ಭದಲ್ಲಿ ಹರಿಹರನು ಈ ವಸ್ತುವನ್ನು ಪ್ರಸ್ತಾಪಿಸಿದ್ದಾನೆ.

ಕರ್ಪೂರವನ್ನು ಸ್ರವಿಸುವ ಮರ ನಮ್ಮ ದೇಶದಲ್ಲಿ ಬೆಳೆಯದು, ಹಿಂದೆಂದೂ ಬೆಳೆದದ್ದೂ ಅಲ್ಲ. ಈ ಶತಮಾನದ ಆದಿಯಲ್ಲಿ ಕರ್ಪೂರದ ತೌರೂರಾದ ಚೈನಾ ಜಪಾನ್‌ಗಳಿಂದ ಆಮದು ಮಾಡಿಕೊಂಡು ಕೆಲವು ಮರಗಳನ್ನು ಪ್ರಯೋಗಾರ್ಥವಾಗಿ ತಿರುವಾಂಕೂರು ನೀಲಗಿರಿ ಕಾಡುಗಳಲ್ಲಿ ಕೃಷಿಗೆ ಒಳಪಡಿಸಲಾಗಿದೆ.

ಕ್ರಿ. ಶ. 10ನೆ ಶತಮಾನದ ಹೊತ್ತಿಗೇ ಈ ವಸ್ತು ದಕ್ಷಿಣ ಭಾರತಕ್ಕೆ ಪರಿಚಯವಾಗಿತ್ತು–ಪೆಸಿಫಿಕ್ ದ್ವೀಪಗಳು–ಚೈನಾ– ಭಾರತದ ಪೂರ್ವತೀರ, ಇವುಗಳ ಹರವಿನಲ್ಲಿ ನಡೆಯುತ್ತಿದ್ದ ವಾಣಿಜ್ಯದ ಮೂಲಕ. ಮರದಿಂದ ಕರ್ಪೂರವನ್ನು ಬೇರ್ಪಡಿಸಿ ಹದನು ಮಾಡುವ ವಿಧಾನವೂ ಚೈನಾದೇಶದಲ್ಲಿ ಉತ್ಪನ್ನವಾದದ್ದೇ.

ಚರಕ ಶುಶ್ರುತರ ಗ್ರಂಥಗಳಲ್ಲಿ ಈ ವಸ್ತುವಿನ ಔಷಧೀಯ ಗುಣಗಳನ್ನು ನಿರೂಪಿಸಲಾಗಿದೆ. ಕರ್ಪೂರವು ಬೆಂಕಿಯ ಸೋಂಕಿಗೆ ಉರಿಯುತ್ತದೆಂಬುದನ್ನು ನಮ್ಮ ಪೂರ್ವಿಕರು ಅರಿತಿದ್ದರು. ದೇವಾಲಯಗಳಲ್ಲಿ ಕರ್ಪೂರಾರತಿಯನ್ನು ಬೆಳಗಿಸಿದರು. ಕರ್ಪೂರ ಉರಿದು ವಾಯುವಿನಲ್ಲಿ ಲೀನವಾಗುವುದನ್ನು ಕಂಡು ತಾತ್ತ್ವಿಕಾರ್ಥಗಳನ್ನೂ ವ್ಯಾಖ್ಯಾನಗಳನ್ನೂ ಮುಂದಿಟ್ಟರು. ಅಂತೂ ಹೊರದೇಶದಿಂದ ಬಂದು ನೆಲಸಿದ ಕರ್ಪೂರ ಕಾಲಕ್ರಮೇಣ ನಮ್ಮದೇ ಆಗಿ ನಮ್ಮ ಸಂಸ್ಕೃತಿಯಲ್ಲಿ ಲೀನವಾಗಿ ಹೋಯಿತು!

ಚೂತ (*Mangifera indica* L.)

ಪರ್ಯಾಯ ಪದಗಳು:
ಕನ್ನಡ: ಮಾವು, ಮಾವಿನ ಮರ
ಸಂಸ್ಕೃತ: ಆಮ್ರ, ಚೂತ

ಹೂವುಗಳನ್ನು ಆರಿಸಿಕೊಂಡಾದ ಬಳಿಕ ಅವನ್ನು ಪೋಣಿಸಿ ಮಾಲೆಯನ್ನಾಗಿಸುವುದಕ್ಕಾಗಿ ಹರಿಹರನು ಬಂದು ಕುಳಿತುಕೊಂಡದ್ದು "ಬಾಲಚೂತದ ಕೆಳಗೆ". ಈ ಸಂದರ್ಭದಲ್ಲಿ 'ಬಾಲಚೂತ' ಎಂದರೆ ಎಳೆಯ (ಸಣ್ಣ) ಮಾವು ಎಂದು ಅರ್ಥಯಿಸುವುದು ಸಾಧುವಲ್ಲ ಎಂದು ನನ್ನ ಭಾವನೆ, ಹತ್ತಾರು ಬಗೆಯ ಹೂಗಳ ಸ್ವರೂಪವನ್ನೂ ಇಂಗಿತವನ್ನೂ ಅರಿತಿದ್ದ ಹರಿಹರ 'ಬಾಲ' ಎಂಬ ಪದವನ್ನು ಇಲ್ಲಿ 'ಆಗತಾನೆ ಎಲೆ ತಳಿರನ್ನು ಕೊನರಿಸಿದ' ಎಂಬ ಧ್ವನಿಯಲ್ಲಿ ಪ್ರಯೋಗಮಾಡಿರಬೇಕೆನ್ನಿಸುತ್ತದೆ. ಮಾಂದಳಿರಿಗೆ ಮನಸೋತ ಕವಿಗಳಿಗೇನೂ ಕೊರತೆಯಿಲ್ಲ. ತಳಿರಿನ ಬಣ್ಣ ತಾಮ್ರ. ಸುತ್ತುಮುತ್ತಲಿನ ಹಚ್ಚೆಲೆ ಸಮುದಾಯದ ನಡುವೆ ಈ ನೋಟ ಕಣ್ಮನಗಳನ್ನು ಸೆಳೆದುಕೊಳ್ಳುವಂಥದ್ದು. ಅದಕ್ಕೇ ಅಲ್ಲವೆ ಪಂಪನು "ತಳಿರೊಳ್ ನೀನೆ ಬೆಡಂಗನ್ನೈ" ಎಂದು ಕೊಂಡಾಡಿದ್ದು! ತಳಿರಿನೊಂದಿಗೆ ಕೋಗಿಲೆಯೂ ಹೂವಿನೊಂದಿಗೆ ದುಂಬಿಯೂ ಆಗಮಿಸುತ್ತವೆ. ಅಷ್ಟೇ ಅಲ್ಲ. ಮಾವಿನ ಮರವು

"ಎಳಗಿಳಿವಿಂಡಿನೋದುವ ಮಠಂ ಭ್ರಮರಂಗಳ ಗೀತಶಾಲೆ ಕೆಂ
ದಳಿರ್ಗಳ ಜನ್ಮಭೂಮಿ ವನಲಕ್ಷ್ಮಿಯ ಪೆರ್ಮೆಗನೋತಗಲ್ದ ಕೋ
ಮಳೆಯರ ಜೂಜು ಭೂತಳದ ಕಲ್ಪಕುಜಂ ಸಕಲಾವನೀರುಹಂ
ಗಳ ತಲೆನಾಯಕಂ (ಸೂಕ್ತಿಸುಧಾರ್ಣವಂ)

–ಹೀಗೊಂದು ಸಂಸ್ಥೆಯಾಗಿತ್ತು.

ಕಣ್ಣಿನ ನೋಟಕ್ಕೆ ಮಾತ್ರವಲ್ಲದೆ ಕವಿಯ ನಾಲಗೆಯನ್ನೂ ಲೊಟಗೆ ಹೊಡೆಸಿತು ಮಾವು– "ಪುದಿದೆಳೆಗಾಯ್ ವಸಂತದ ಮೊದಲ್ ನೆರೆದೊಪ್ಪುವ ದೋರೆಗಾಯ್ ವಸಂತದ ನಡು ಪಣ್ ವಸಂತದ ಸೆಜಿಗಿಂಗೆ......"

16ನೆ ಶತಮಾನದ ಮುಂಚೆ ಕವಿಗಳೂ ಪಾಮರರೂ ಉಂಡು ಬಾಯಿ ಚಪ್ಪರಿಸಿದ್ದು ನಾರುಕಾಯಿ, ಹುಳಿಕಾಯಿ, ಕಾಡುಜಾತಿ ಎಂದು ನನ್ನ ಊಹೆ. ಒಂದು ವೇಳೆ ಊರಿನಲ್ಲಿ ಬೆಳೆಸಿದ್ದಾದರೂ ಕಾಯಿನಲ್ಲಿಯೂ ಹಣ್ಣಿನಲ್ಲಿಯೂ ನಾರು ಹುಳಿಗಳು ಅಧಿಕ ಪ್ರಮಾಣದಲ್ಲಿಯೇ ಸೇರಿಕೊಂಡಿದ್ದಿರಬೇಕು. ಇಂದು ನಾವು ರುಚಿಯಿಂದ ತಿನ್ನುವ ಮಾವಿನ ಜಾತಿಗಳೆಲ್ಲ ಕಸಿಗೆ ಒಳಪಟ್ಟಿರುವಂಥವು. ಕಸಿವಿಧಾನ 15–16ನೇ ಶತಮಾನಗಳಲ್ಲಿ ನಮ್ಮ ದೇಶಕ್ಕೆ ಕಾಲಿಟ್ಟಿತು. ಪಶ್ಚಿಮದಿಂದ ಪೋರ್ಚುಗೀಸರೂ ವಾಯುವ್ಯದಿಂದ ಮೊಗಲರೂ ತಂದ ಕೊಡುಗೆ. ಇವರ ಕೈಯಿಂದ ಕಾಡುಮಾವು ಕಸಿವಿಧಾನಕ್ಕೆ ಪಳಗಿತು. ಇನಿಮಾವಿನ ಹೊಸ ಹೊಸ ರಚುಮುಗಳನ್ನು ಒದಗಿಸಿತು. ಇಂದಿನ ಶ್ರೇಷ್ಠರಚುಮುಗಳೆಲ್ಲ ಇವರ 'ವಾಸನೆ'ಯನ್ನು ತಳೆದ ಹೆಸರುಗಳಿಂದಲೇ ಪರಿಚಿತವಾಗಿವೆ– ಷಾ ಪಸಂದ್, ದಾಡೀಂ ಪಸಂದ್, ಬಾದ್‌ಷ, ದಿಲ್‌ಗೋವ, ಮಲ್‌ಗೋವ, ಆಲ್ಫಾನ್‌ಸೊ, ರುಮಾನಿ ಇತ್ಯಾದಿ.

ಈಗಿನ ಹುಣಸೆ ಮರ 1000 ವರ್ಷಕ್ಕೆ ಮುಂಚೆ ನಮ್ಮ ನಾಡಿನಲ್ಲಿತ್ತೆ? ಎಂಬ ಸಂದೇಹವಿದೆ. ಆ ಹಿಂದಿನ ಕಾಲದಲ್ಲಿ ಮಾವಿನಕಾಯೇ ಹುಳಿರುಚಿಯನ್ನೀಯುವ ಪದಾರ್ಥಗಳಲ್ಲೊಂದಾಗಿತ್ತು. ಆಮ್ರವೆಂಬ ಪ್ರಾಚೀನ ಸಂಸ್ಕೃತಪದವೂ ಇದಕ್ಕೆ ಸಾಕ್ಷಿಯೆಂಬಂತಿದೆ. ಉಪಯೋಗ ದೃಷ್ಟಿಯಿಂದ ಆಗಿನ ಜನ ಕಾಡುಮಾವಿನ ಕಾಯನ್ನು ತಂದು ಊರಿನಲ್ಲಿ ಬೆಳೆಸಿಕೊಂಡರು. ಕವಿ ಕಂಡ ಮಾವು, ಉಂಡ ಮಾವು ಇಂಥದ್ದು. ಆತನು ಕಾಡಿನಲ್ಲೇ, ಅದರ ಸ್ವಾಭಾವಿಕ ನೆಲೆಯಲ್ಲಿಯೇ, ಬೆಳೆಯುತ್ತಿದ್ದ ಮಾವನ್ನು ನೋಡಿದ್ದಿದ್ದರೆ ಇನ್ನೆಷ್ಟು ಕೊಂಡಾಡುತ್ತಿದ್ದನೋ, ಎಂಥೆಂಥ ಹೊಸ ಹೊಸ ಕವಿಸಮಯಗಳನ್ನು ನೇಯುತ್ತಿದ್ದನೋ! ಚೂತನ ರಾಜತ್ವವನ್ನು ನೋಡಬೇಕಾದರೆ ಅವನ ರಾಜ್ಯಕ್ಕೇ ಹೋಗಬೇಕು– ಬೆಟ್ಟ ಪ್ರದೇಶದ ಮಳೆಗಾಡುಗಳಿಗೆ. ಅಲ್ಲಿ ಅವನ ಎತ್ತರ 100–150ಅಡಿ, ಎದೆಸಮದ ಸುತ್ತಳತೆ 25–30 ಅಡಿ! ರೆಂಬೆಕೊಂಬೆಗಳಿಲ್ಲದ ನೀಟಾದ ಕಾಂಡ; ಕಾಂಡದ ಮೇಲ್ತುದಿಯಲ್ಲಿ ಎಲೆಕೊಡುಗೆ. ಏನು ಗಾಂಭೀರ್ಯ, ಅದೇನು ಸ್ಥಿರತೆ! ಕಾಯಿ ಹಣ್ಣಾಗಿ ನೆಲದ ಮೇಲೆ ಬಿದ್ದಾಗ ಫರ್ಲಾಂಗುದೂರ ಅದರ ಹುಳಿ–ಮಾದಕ ವಾಸನೆಯನ್ನು ಹರಡುತ್ತಾನೆ.ಆವಾಸನೆಗೆ ಆಕರ್ಷಿತರಾಗುವವರು ಕ್ರಿಮಿಯಿಂದ ಹಿಡಿದು ಮದಕರಿಯವರೆಗೆ! ಈ ಅಗಾಧಗಾತ್ರದ ಚೌಬೀನೆಯಿಂದ ದೋಣಿಗಳನ್ನು ಕೆತ್ತುತ್ತಾರೆ, ಹಲಗೆ ಕುಯ್ಯುತ್ತಾರೆ.

ನಮ್ಮ ಕಲಾಸಂಸ್ಕೃತಿಯಲ್ಲಿ ಮಾವಿಗೊಂದು ಪ್ರತ್ಯೇಕ ಸ್ಥಾನವಿದೆ. ಎಳೆಮಾಗಾಯಿನ 'ಗಿಣಿ' ರೂಪಕ್ಕೆ ತಮಿಳು ಕವಿಗಳು ಮನಸೋತಿದ್ದರು (ಅಕನಾನೂಱು, 97). ಹಳೆಯ ಕಾಲದ ಶಿಲ್ಪಿಗಳು ಈ ಆಕರವನ್ನು ಬಳಸಿಕೊಂಡು ಬೆಳೆಸಿಕೊಂಡು ವಿಧವಿಧವಾದ ಚಿತ್ತಾರಗಳನ್ನು ಕಲ್ಲಿನಲ್ಲಿ ಬಿಡಿಸಿದರು; ಕುಶಲ ಕಲೆಗಾರರು ಬಗೆ ಬಗೆಯ 'ಬುಟ್ಟ' ಪೀತಾಂಬರಗಳನ್ನು ನೇಯ್ದರು. ಬಟ್ಟೆಗಳ ಮೇಲೆ ಈ ನಕಾಸೆ ಬಿದ್ದದ್ದು ಮೊಗಲಾಯಿ ಕಾಲದಲ್ಲಿ. ಮೊಗಲಾಯಿ 'ಬುಟ್ಟ'ಗಳು ಇಂದಿಗೂ ಬನಾರಸ್ ರೇಶ್ಮೆಯ ಸೀರೆ ಪೀತಾಂಬರಗಳ 'ಟ್ರೇಡ್ ಮಾರ್ಕ್' ಆಗಿದೆಯಲ್ಲವೆ? ಈಚೀಚೆಗೆ ಕಂಚಿ ಪಟ್ಟು ಸೀರೆಗಳಿಗೂ ಮಾಗಾಯಿ ಅಂಚೂ ಸೆರಗೂ ಕೀರ್ತಿ ತಂದಿವೆ–ಭಾರತದಲ್ಲಿ ಮಾತ್ರವಲ್ಲ, ಹೊರದೇಶಗಳಲ್ಲಿಯೂ! ಒಡವೆಗಳೂ ಅಷೆ–ಮಾಗಾಯಿ ಓಲೆ, ಮಾಗಾಯಿ ಸರ! ಚಿನ್ನದ್ದೂ ಉಂಟು, ಬೆಳ್ಳಿಯದೂ ಉಂಟು, ನವರತ್ನ ಖಚಿತವಾದದ್ದೂ ಉಂಟು!

ಉಶ್! ಮನೆಯ ಹೆಂಗುಸರಾರಾದರೂ ಕಿವಿಗೊಟ್ಟಾರು, ಜೋಕೆ!

ಜಾತಿ (*Jasminum grandiflorum* L.)

ಪರ್ಯಾಯ ಪದ:

ಕನ್ನಡ: ಜಾದಿ, ಜಾದಿಗೆ, ಜಾಜಿ

"ಉಣ್ಮುವ ಪೊಸಗಂಪಂ ಪಡೆದು ಪೊೞ್ತುಲೊಲ್ ಜನ" (ಪಂಪ)ವನ್ನು ಸೋಲಿಸುತ್ತದೆಯಂತೆ, ಜಾಜಿ. ಎಂದರೆ, ಇದು ರಾತ್ರಿ ಕಳೆದು ಬೆಳಕು ಹರಿಯುವ ಹೊತ್ತಿಗೆ ಅರಳುವ ಹೂ ಎಂದಾಯಿತು. ಇದರಿಂದ ಹೊಮ್ಮುವುದು "ಅನಂಗಾಮೃತ ಸೌಖ್ಯಸಾರ" (ಪಂಪ). ಹೀಗಾಗಿ ಹರಿಹರನ ಮಾತಿನಲ್ಲಿ "ಜಾತಿ ನೀನೇ ಸಕಲ ಪುಷ್ಪ ಜಾತಿಗೆ ಜಾತಿ" ಎಂದೆನ್ನಿಸಿಕೊಂಡಿದೆ.

ಮಲ್ಲಿಗೆ ಜಾತಿಗಳಲ್ಲಿ ಅನೇಕ ಒಳಪಂಗಡಗಳಿವೆ. ಶಾಸ್ತ್ರದೃಷ್ಟಿಯಿಂದಾದ ವಿಂಗಡಗಳು ಬೇರೆ ಬೇರೆ ಸ್ಪೀಷೀಸಿಗೋ, ಬೇರೆ ಬೇರೆ ವೆರೈಟಿಗೋ ಸೇರಿದವು; ಖಚಿತವಾದ ಚೌಕಟ್ಟಿನೊಳಗೆ ಸೇರುವಂಥವು. ಸಾಮಾನ್ಯ ದೃಷ್ಟಿಯಿಂದಾದ ವಿಂಗಡಗಳಿಗೆ ಇಂಥ ಪರಿಮಿತಿಯಿಲ್ಲ; ಒಂದರೊಡನೊಂದು ಕಲೆತು ಅದಲು ಬದಲು ಭ್ರಮೆಯನ್ನು ಹಚ್ಚುವಂಥವು. ಒಂದು ಕಡೆ ಮೊಲ್ಲೆಯಾದದ್ದು ಇನ್ನೊಂದು ಕಡೆ ಮಲ್ಲಿ; ಮಲ್ಲಿಯಾದದ್ದು ಇರುವಂತಿಗೆ; ಇರುವಂತಿಗೆಯಾದದ್ದು ಜಾತಿಮಲ್ಲಿ, ಹೀಗೆ ಒಂದೇ ರಖಮು ಕರ್ನಾಟಕದ ಬೇರೆ ಬೇರೆ ಪ್ರದೇಶಗಳ ಆಡುಮಾತಿನಲ್ಲಿ ಸಿಕ್ಕಿಕೊಂಡು ಗೊಂದಲಕ್ಕೆ ಎಡೆಗೊಟ್ಟಿದೆ.

ಜಾಜಿ ಒಂದು ಬಳ್ಳಿ. ದಕ್ಷಿಣ ಭಾರತದ ಬೆಟ್ಟಗುಡ್ಡ ಪ್ರದೇಶಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ. ತೋಟಗಳಲ್ಲಿಯೂ ಮನೆಗಳಲ್ಲಿಯೂ ಸಾಮಾನ್ಯವಾಗಿ ಕೃಷಿಗೆ ಒಗ್ಗಿದೆ. ಹೂ ಬಣ್ಣದ ನಿಗದಿಯ ಮೇಲೆ ಎರಡು ವಿಧಗಳು– ಬಿಳಿಜಾಜಿ, ಹಳದಿಜಾಜಿ. ಸೂಕ್ಷ್ಮವಾದರೂ ನವುರಾದ, ವೆಗಟಾಗದ, ಮೋಹಕವಾದ ನರುಗಂಪನ್ನು ಸೂಸುತ್ತದೆ.

ತುಂಬೆ (*Leucas aspera* Spr.)

ಪರ್ಯಾಯ ಪದಗಳು–

ಕನ್ನಡ: ತುಂಬಿ
ಸಂಸ್ಕೃತ: ರುದ್ರಪುಷ್ಪ

ಭಾರತದ ಬಂಜರು ಭೂಮಿಯಲ್ಲಿ ಇದರ ಸ್ವಾಭಾವಿಕ ಬೆಳೆ. ಈ ನೆಲೆ ಶಿವನು ಶ್ಮಶಾನವಾಸಿ ಎನ್ನುವುದರ ಧ್ವನಿಯನ್ನು ಪ್ರತಿಬಿಂಬಿಸುತ್ತದೆ, ನನಗೆ. ದಕ್ಷಿಣ ಭಾರತದ ಭಾಷೆಗಳಲ್ಲೆಲ್ಲ ಈ ಗಿಡದ ಹೆಸರು ತುಂಬೆ ಅಥವಾ ಅದರ ರೂಪಾಂತರಗಳು. ಸಂಸ್ಕೃತದ ರುದ್ರಪುಷ್ಪ ಎನ್ನುವುದು ರುದ್ರನಿಗೆ ಪ್ರಿಯವಾದ ಹೂ ಎಂಬದಷ್ಟೆ. ಈಚೀಚಿನ ನಾಮಕರಣದಂತೆ ಕಾಣುತ್ತದೆ.

ತುಂಬೆ ಒಂದೆರಡಡಿ ಎತ್ತರ ಬೆಳೆಯುವ ಕುರುಚಲು ಗಿಡ. ಎಲೆಗೆ ನಾಡುವೈದ್ಯದಲ್ಲಿ ಬಗೆ ಬಗೆಯ

ಗುಣಗಳನ್ನು ಹೇಳುತ್ತಾರೆ. ಮೈಗೆ ಒಳ್ಳೆಯದು ಎಂದುಕೊಂಡು ಕೆಲವೆಡೆಗಳಲ್ಲಿ ಸೊಪ್ಪನ್ನು ತರಕಾರಿ ಯಂತೆ (ಇತರ ಸೊಪ್ಪುಗಳೊಂದಿಗೆ ಕಲಸಿ) ಬೇಯಿಸಿ ತಿನ್ನುವುದೂ ಉಂಟು.

ಹೂ ಸಣ್ಣದು, ಶುಭ್ರಬಿಳಿ ಬಣ್ಣ. ಗಿಡದಲ್ಲಿ ಅರಳಿದಾಗ ಗಿಡಕ್ಕಾಗಲಿ ತನಗಾಗಲಿ ಅಂದಚೆಂದ ಗಳೇನೂ ಉಂಟಾಗವು. ಕವಿಯ ಕಣ್ಣನ್ನೂ ಸೆಳೆದಿಲ್ಲ. ಇನ್ನೇನು ಮೊಗ್ಗು ಅರಳಿ ಹೂವಾಗುತ್ತದೆ ಎನ್ನುವ ಹೊತ್ತಿನಲ್ಲಿ ಅದನ್ನು ಎದುರುಬದಿರಾಗಿ ನೋಡಿದರೆ ಅಧರದ್ವಯವನ್ನು ಹೋಲುತ್ತದೆ. ಸುಂದರವಾದ ತುಟಿಗಳು ಹೀಗಿರಬೇಕು ಎನ್ನುತ್ತವೆ ಶಿಲ್ಪಶಾಸ್ತ್ರ ಸೂತ್ರಗಳು.

'ಪುಟ್ಪವಿದಿ' (ಪುಷ್ಪ ವಿಧಿ) ಎಂಬ ತಮಿಳು ಗ್ರಂಥದಲ್ಲಿ ಶಿವನ ತಲೆ ಮೇಲಿಡಲು ಯೋಗ್ಯವಾದ ಹೂ ತುಂಬೆ ಎಂದು ತಿಳಿಸಲಾಗಿದೆ. ಈ ಗ್ರಂಥ ಹುಟ್ಟಿದ್ದು ಸುಮಾರು 200 ವರ್ಷಗಳ ಹಿಂದೆ. 10ನೇ ಶತಮಾನದಲ್ಲಿ ಬಾಳಿದ ಶೈವ ಭಕ್ತರ 'ತೇವಾರ'ಗಳಿಂದ ಆಕಾಲದಲ್ಲಿಯೇ ತುಂಬೆ ಹೂ ಈಶ್ವರನಿಗೆ ಪ್ರಿಯ ವಾಗಿತ್ತೆಂದು ತಿಳಿದು ಬರುತ್ತದೆ. ವರ್ಷದ ಸಂಕ್ರಾಂತಿ ದಿನಗಳಲ್ಲಿ ಒಂದು ನಿರ್ದಿಷ್ಟ ಪ್ರಮಾಣದ ತುಂಬೆಹೂ ಶಿವಪೂಜೆಗಾಗಿ ಸಲ್ಲಬೇಕಾಗಿದ್ದ ಸಂಗತಿ ಶಾಸನೋಕ್ತವಾಗಿದೆ (226, 1921). ಅರ್ಧ ಹಿಡಿ ಹೂಗಳನ್ನು ತಂದು ಒದಗಿಸಿದವನಿಗೆ ಒಂದು 'ಕಾಶು' ಸಂಭಾವನೆ ದೊರಕುತ್ತಿತ್ತು (336, 1927) ಕ್ಷೀರನಾಥೇಶ್ವರನ ದೈನಂದಿನ ಪೂಜೆಗೆ ಒಂದು ನಾಟಿ ತುಂಬೆಹೂ ಬೇಕಾಗಿತ್ತು. (508, 1926)

ದವನ (*Artemesia Vulgaris* L.)

ಪರ್ಯಾಯ ಪದಗಳು:

ಕನ್ನಡ: ಮಾಚಿಪತ್ರೆ, ಮಾಚಪತ್ರೆ, ಮಂಚಿಪತ್ರೆ

"ದವನವೇ ಶಿವನ ಪರಿಮಳದ ಹಬ್ಬಂ ಬಾರ, ಭುವನದೊಳ್ಳಿನಗೆ ಸರಿಯಿಲ್ಲ ಸೌರಭ ಸಾರ" ಎನ್ನುತ್ತಾನೆ ಹರಿಹರ. ಅವನಿಗೆ ಪರಿಚಿತವಾಗಿದ್ದ ದವನ ಇಂದು ಅದೇ ಹೆಸರಿನಿಂದ ನಮಗೆ ತಿಳಿದಿರುವ ದವನವಲ್ಲ. ಇಂದಿನ ದವನ (Artemesia palleus); ನಮ್ಮ ದೇಶಕ್ಕೆ ಕಾಲಿಟ್ಟು ಇನ್ನೂ ನೂರು ವರ್ಷ ಕೂಡ ಕಳೆದಿಲ್ಲ. ಸುಮಾರು ಒಂದಡಿ ಎತ್ತರ ಬೆಳೆಯುವ ಗಿಡ; ಗಿಡದ ಒಡಲೆಲ್ಲ ಸುಗಂಧ ಮಯ; ಬೂದಿಮಿಶ್ರವಾದ ನೀಲಿ ಎಲೆಗಳು, ಛಿದ್ರಛಿದ್ರವಾದವು.

ಹರಿಹರನೂ ಇತರ ಹಳೆಯ ಕವಿಗಳೂ ಕಂಡಿದ್ದ ದವನ (Artemesia vulgaris) ನಮ್ಮ ದೇಶದ ಸ್ವಾಭಾವಿಕ ಗಿಡಗಳಲ್ಲೊಂದು. ಇಂದು ಮೇಲೆ ಕಾಣಿಸಿರುವ ಪರ್ಯಾಯ ಪದಗಳಿಂದ ಬಳಕೆಗೊಂಡದ್ದು, ಪಶ್ಚಿಮ ಘಟ್ಟಗಳ ತಪ್ಪಲು ಪ್ರದೇಶಗಳಲ್ಲಿ ಆರೇಳಡಿ ಎತ್ತರ ಬೆಳೆಯುತ್ತದೆ. ಎಲೆ ಗಳು ಹಸುರು ಬಣ್ಣದವು, ಛಿದ್ರವಾದುವಲ್ಲ. ಪರಿಮಳವಿರುವುದು ಎಲೆಯಲ್ಲಿ. ಹೂ ವೈಯಕ್ತಿಕವಾಗಲಿ ತೆನೆಯಲ್ಲಾಗಲಿ ಶೋಭಿಸದು; ಗಾತ್ರವೂ ಇಲ್ಲ, ಹಸುರು ಬಿಟ್ಟು ಬೇರೆ ಬಣ್ಣವೂ ಇಲ್ಲ.

ಮಾಚಿಪತ್ರದ ಬಳಕೆ ದಕ್ಷಿಣ ಭಾರತದ ಶಿವದೇವಾಲಯಗಳಲ್ಲಿ ಹಳೆಯ ಕಾಲದಿಂದಲೂ ಬಂದದ್ದು. ಈ ಗಿಡವನ್ನು ಹೆಸರಿಸುವ ಕೆಲವು ಶಾಸನಗಳಿವೆ. ಅತ್ಯಂತ ಹಳೆಯದು 11ನೆಯ ಶತಮಾನಕ್ಕೆ ಸೇರಿದ್ದು (BKI, I (1) 108, A.D. 1069).

ನಮ್ಮ ಕಾಲದ ಹೂವಾಡಿಗರ ವೃತ್ತಿಗೆ ಮಾಚಿಪತ್ರೆ ಬಹು ಅನುವಾಗಿ ಒದಗಿದೆ. ಹಾರಗಳಲ್ಲಿ ಹೂವಿನ ಪ್ರಮಾಣವನ್ನು ತಗ್ಗಿಸಿ ಸೊಪ್ಪಿನ ಪ್ರಮಾಣವನ್ನು ಹೆಚ್ಚಿಸುವ ಸಾಧನವಾಗಿದೆ.

ದೊಡ್ಡಪತ್ರ (*Anisochilus Carnosus* Wall.)

ಪರ್ಯಾಯ ಪದಗಳು:

ಕನ್ನಡ: ಕರುವೇಲು ಬಳ್ಳಿ, ಕರ್ಪೂರಬಳ್ಳಿ
ಸಂಸ್ಕೃತ: ಇಂದುಪರ್ಣಿ

ದಕ್ಷಿಣ ಭಾರತದ ಮೈದಾನ ಪ್ರದೇಶದಲ್ಲಿ ಇವರ ಹರವು. ಕಲ್ಲುಭೂಮಿಯನ್ನು ಆಶ್ರಯಿಸುವ ಜಾತು. ಕಾಂಡದ ರೂಪ ಚತುಷ್ಕೋಣ (ಅಡ್ಡವಾಗಿ ಕತ್ತರಿಸಿದಾಗ). ನೀಳವಾದ ಹೂ ತೆನೆ. ವಾಸನೆ ಇಂಗಿರುವುದು ಎಲೆಗಳಲ್ಲಿ. ಒಂದು ವಿಧವಾದ ಕರ್ಪೂರವಾಸನೆಯಿರುವುದರಿಂದ ಕರ್ಪೂರಬಳ್ಳಿ ಎಂಬ ಹೆಸರು. ಆದರೆ ಇದು ಬಳ್ಳಿಯಾಗಿ ಹಬ್ಬುವಂಥ ಗಿಡವಲ್ಲ. ಪೊದರುಗಿಡ. ಮೂರುನಾಲ್ಕಡಿ ಎತ್ತರ. ಹರಡುವುದೂ ಉಂಟು.

ನಮ್ಮ ಕವಿಗಳಿಗೆ ಯಾವುಯಾವುದೋ ಗಿಡಗಳನ್ನೆಲ್ಲ ಬಳ್ಳಿ ಲತೆ ಎಂದು ವಿಶೇಷಿಸುವುದರಲ್ಲಿ ಏನೋ ಆಸಕ್ತಿ. ಸೋಮವನ್ನೂ ಲತೆ ಎಂದು ಬಿಟ್ಟರು. ಲವಂಗವನ್ನೂ ಲತೆ ಎಂದು ಬಿಟ್ಟರು! ಮೊದಲನೆಯದು ಪೊದರು, ಎರಡನೆಯದು ಎತ್ತರವಾಗಿ ಬೆಳೆಯುವ ಮರ. ಎಳೆಯ ರೆಂಬೆಕೊಂಬೆಗಳು ತೆಳುವಾಗಿದ್ದು ಗಾಳಿಯಲ್ಲಿ ಬಳುಕಾಡುವುದರಿಂದಲೋ, ಲತೆ ಅಥವಾ ಬಳ್ಳಿ (ವಳ್ಳಿ) ಎಂಬ ಪದಗಳು ಮರಗಿಡ ಎನ್ನುವುದಕ್ಕಿಂತಲೂ ಕಾವ್ಯನಯವನ್ನು ಹೊಂದಿದ್ದು ಎಂಬ ನಂಬಿಕೆಯಿಂದಲೋ, ಅನೇಕ ಗಿಡಮರಗಳನ್ನು ಲತಾ ಎಂದೇ ನಿರ್ದೇಶಿಸಿ ಬಿಟ್ಟಿದ್ದಾರೆ! ಅಂಥ ಗಿಡಗಳ ಅನನ್ಯತೆಯನ್ನು ಕಂಡು ಹಿಡಿಯುವ ಸನ್ನಾಹದಲ್ಲಿರುವ ಸಸ್ಯಶಾಸ್ತ್ರಜ್ಞನು ಅಡ್ಡದಾರಿ ಹಿಡಿಯುವುದಕ್ಕೆ ಒತ್ತಾಸೆ ಕೊಟ್ಟಿದ್ದಾರೆ!

ನೆಯ್ದಿಲೆ (*Nymphaea Stellata* Willd.)

(ತಾವರೆಗೆ ಕೊಟ್ಟಿರುವ ಟಿಪ್ಪಣಿಯನ್ನೂ ನೋಡಿ). ನೆಯ್ದಿಲೆಯ ಎಲೆಗಳು ನೀರಿನ ಮಟ್ಟದಲ್ಲಿ ಮಲಗಿರುತ್ತವೆ. ಹೂವಿನ ರಚನೆಯೂ ತಾವರೆಯಿಂದ ಭಿನ್ನವಾದದ್ದು. ಇರುವ ಒಂದು ಅಂಡಕೋಶವು ಪುಷ್ಪಪಾತ್ರದಲ್ಲಿ ಮುಳುಗಿರುತ್ತದೆ; ಬೀಜಗಳು ಅಧಿಕಸಂಖ್ಯೆಯಲ್ಲಿರುತ್ತವೆ. ಸಸ್ಯಶಾಸ್ತ್ರರೀತಿಗನುಸಾರವಾಗಿ ಎರಡು ಸ್ಪೀಷೀಸುಗಳು ದಕ್ಷಿಣ ಭಾರತದಲ್ಲಿ ಬೆಳೆಯುತ್ತವೆ. 'ನಿಂಫಿಯ ಸ್ಟೆಲ್ಲೇಟ' ಎಂಬುದೇ ನಿಜವಾದ ನೀಲೋತ್ಪಲ; 'ನಿಂಫಿಯ ಪ್ಯೂಬಿಸೆನ್ಸ್' ಎಂಬ ಜಾತಿಯ ಹೂಗಳು ಬಿಳಿ, ನೀಲಿ ಅಥವಾ ಊದಾ ಬಣ್ಣವನ್ನು ಕೊಂಡಿರುತ್ತವೆ–ಹೀಗಾಗಿ ಕನ್ನೈದಿಲು, ಚೆನ್ನೈದಿಲು ಇತ್ಯಾದಿ.

ಪರ್ಯಾಯ ಪದಗಳು–

ಕುವಲಯ, ಕುಮುದ, ಉತ್ಪಲ, ಇತ್ಯಾದಿ.

"ರವಿ ಬರೆ... ಕುಮುದ ಮುಚ್ಚಿತು" (ಗದುಗಿನ ಭಾರತ) ಎಂದು ನಿರ್ದೇಶಿತವಾಗಿರುವ ಹೂ ಇದೇ. "ಉನ್ನತಮಾಗಿರೆ ಸೊಕ್ಕಿ।ದುರ್ನ್ನತ ಕುಚೆಯರ ವಿಲೋಚನಾರುಣರುಚಿಯಂ। ತನ್ನೆಸಳ್ಗಳಿನನು ಕರಿಸುವ। ಚೆನ್ನೈದಿಲ ಕಂಪನೆಯ್ದುಲಾಪ್ಪುವೆ ಪೂಗಳ್" ಎಂದು ಪಂಪನಿಂದ ಶಹಬಾಸ್ ಪಡೆದ ಹೂ ಇದೇ.

ಈ ಹೂವನ್ನು ಶಿವನಿಗೆ ಅರ್ಪಿಸಲು ಹರಿಹರ ಲಂಚ ಕೇಳಿದನಂತೆ–"ಒಯ್ವೊಡೇನು ಲಂಚವೀವೆ?"

ಪಡ್ಡಳಿ, ಚೆಂಗಣಿಗಿಲೆ (*? Nerium indicum* Wall.)

ಪರ್ಯಾಯ ಪಗಳು

ಕನ್ನಡ: ಕೆಂಪುಗಣಗಿಲೆ, ಕೆಂಪು ಕಣಗಿಲು, ಕಣಲಿಗೆ
ಸಂಸ್ಕೃತ: ಕರವೀರ

ಕೆಲವು ನಿಘಂಟುಗಳಲ್ಲಿ ಈ ಎರಡು ಪದಗಳನ್ನೂ ನೀರಿಯಮ್ ಇಂಡಿಕಮ್ ಎಂಬ ಗಿಡದೊಂದಿಗೆ ಹೊಂದಿಸಿದ್ದಾರೆ. ಈ ಸಂದರ್ಭದಲ್ಲಿ ಎರಡು ಮುಖ್ಯ ಪ್ರಶ್ನೆಗಳೇಳುತ್ತವೆ (1) ಎರಡು ಹೆಸರುಗಳೂ ಒಂದೇ ಗಿಡವನ್ನು ನಿರ್ದೇಶಿಸುತ್ತವೆಯೆ? (2) ಇವನ್ನು 'ನೀರಿಯಮ್ ಇಂಡಿಕ'ದೊಡನೆ ಅನನ್ಯಪಡಿಸುವುದು ಸಾಧುವೆ?

ಮೊದಲನೆಯ ಪ್ರಶ್ನೆಗೆ ಊಹೆಯ ಮರು ಪ್ರಶ್ನೆಯನ್ನು ಕೇಳಬೇಕಾಗಿದೆ. ನೀರಿಯಮ್‌ನಲ್ಲಿ ಎರಡು ಬಗೆ ಇವೆ: ಬಿಳಿಹೂ, ಕೆಂಪು ಹೂ. ಪಡ್ಡಳಿ (ಚೆಂ)ಗಣಗಿಲೆಗಳು ಕ್ರಮವಾಗಿ ಇವನ್ನು ಸೂಚಿಸುತ್ತವೆಯೆ?

ಎರಡನೆ ಪ್ರಶ್ನೆಯನ್ನು ಕುರಿತು: ನೀರಿಯಮ್ ಇಂಡಿಕಮ್ ಎಂಬ ಹೆಸರೊಂದರ ಮಾತ್ರದಿಂದಲೇ ಈ ಗಿಡ ನಮ್ಮ ದೇಶದ್ದು ಎಂದು ಬಗೆಯಲಾಗದು. ಭಾರತದ ಸ್ವಾಭಾವಿಕ ವನ್ಯಪ್ರದೇಶಗಳಲ್ಲೆಲ್ಲಿಯೂ ಈ ಗಿಡ ಕಾಣದು. ಪರ್ಷಿಯ, ಅಫ್ಘಾನಿಸ್ತಾನ ಮೊದಲಾದ ಮೆಡಿಟರೇನಿಯನ್ ಪ್ರದೇಶಗಳು ಈ ಗಿಡದ ತೌರು. ಮೊಗಲರ ಆಳ್ವಿಕೆಯಲ್ಲಿ ಭಾರತಕ್ಕೆ ವಲಸೆ ಬಂದಿರಬೇಕೆಂದು ತೋರುತ್ತದೆ.

ಹೀಗಾಗಿ 16ನೆ ಶತಮಾನಕ್ಕೂ ಹಿಂದೆಯೇ ಸಾಹಿತ್ಯೋಕ್ತವಾದ ಈ ಗಿಡಗಳು ಯಾವವು? ಸದ್ಯಕ್ಕೆ ಸಮಂಜಸವಾದ ಉತ್ತರ ಸಿಗುವಂತಿಲ್ಲ.

ಬಾಳೆಲೆ (*Musa* Paradisiaca L.; M. Sapientum L.; M. Superba L.)

"ಒಂದು ಸಲ ಹೂತಳೆದಾದ ಮೇಲೆ ಸಾಯುತ್ತದೆ ಬಾಳೆ–ಇದು ವಿಧಿಯ ಅಣಕ; ರುಚಿಹೀನ ವಾದ ಹಣ್ಣುಬಿಡುವ ತಾಟಿಯ ಮರ ನಾಚಿಕೆಯಿಂದ ಸಾಯಬಾರದೆ?" ಎಂದು ಸುಭಾಷಿತಕಾರರು ಬಾಳೆಯ ಸಿಹಿಯನ್ನೂ ತಾಳೆಯ ಕಹಿಯನ್ನೂ ವ್ಯಕ್ತಪಡಿಸಿದ್ದಾರೆ (ಶಾರ್ಙ್ಗಧರ ಪದ್ಧತಿ 1025; ಸುಭಾಷಿತ ರತ್ನಾಕರ 1).

ಬಾಳೆ ಬಹುಕಾಲದಿಂದಲೂ ನಮಗೆ ಪರಿಚಿತವಾಗಿರುವ ಗಿಡ. ಬೌದ್ಧಯುಗದ ಶಿಲಾಶಿಲ್ಪಗಳಲ್ಲಿ ಇದು ಕೊನರಿದೆ. ಬಾಳೆಗಿಡದ ಒಂದೊಂದು ಭಾಗವೂ ಮಾನವನ ಉಪಯೋಗಕ್ಕೆ ಒಗ್ಗಿರುವುದಾದರೂ ಇದನ್ನು 'ಕಲ್ಪದ್ರುಮ'ದ ಪಟ್ಟಕ್ಕೆ ಏರಿಸಿಲ್ಲ. ಒಂದು ಪ್ರದೇಶದ ಸಸ್ಯಸಂಪತ್ತನ್ನು ವರ್ಣಿಸುವಾಗ ನಮ್ಮ ಕವಿಗಳು ಬಾಳೆಯನ್ನು ಹೆಸರಿಸದಿರುವುದು ಅಪರೂಪ. ಮಂಗಳಾಮಂಗಳಾಚರಣೆಗಳೆರಡಕ್ಕೂ ಬಾಳೆ ಬೇಕು. ದೇವರ ನೈವೇದ್ಯಕ್ಕೆ ಬೇಕು. ನಮ್ಮ ನಾಲಗೆಗೆ ಬೇಕು. ನಮ್ಮ ಸಂಸ್ಕೃತಿಯಲ್ಲಿ ಹಾಸು ಹೊಕ್ಕಾಗಿ ಹೋಗಿದೆ ಬಾಳೆ.

ಚೆಲುವೆಯ ಅಂಗಗಳಿಗೆ ಬಾಳೆಯನ್ನು ಹೋಲಿಸುವುದೂ, ಶತ್ರುವಿನ ಬಲಹೀನತೆಗೆ ಬಾಳೆಯ ಕಾಂಡವನ್ನು ಒಪ್ಪವಿಡುವುದೂ ಕವಿಸಹಜವಾದದ್ದು.

ಅಕ್ಕಮಹಾದೇವಿಯ "ತನು ಕದಳಿ ಮನ ಕದಳಿ..." ಎಂದು ಆರಂಭವಾಗುವ ವಚನದಲ್ಲಿ 'ಕದಳಿ' ಪದದ ಅಂತರ್ಯಾರ್ಥವೇನೋ? ಟಿಪ್ಪಣಿಗಳಲ್ಲಿ ಬಾಳೆ ಎಂದೇ ಅರ್ಥಯಿಸಿರುವುದಾದರೂ, ಈ ಅನ್ವಯತೆಯು ಶಾಸ್ತ್ರರೀತ್ಯಾ ಸಾಧುವಾಗಿದೆಯಾದರೂ, ಪದಕ್ಕೆ ಇನ್ನಾವುದೋ ಸಂಜ್ಞೆಯಿರ ಬೇಕೆನ್ನಿಸುತ್ತದೆ. ಇನ್ನೂ ಒಂದು ವಿಶೇಷವನ್ನು ಇಲ್ಲಿ ಗಮನಿಸಬೇಕು. ದಕ್ಷಿಣಭಾರತದಲ್ಲಿ ನಾಥ ಸಂಪ್ರದಾಯದ ಕ್ಷೇತ್ರಗಳಿಗೆ ಕದಳೀ ಕ್ಷೇತ್ರವೆನ್ನುತ್ತಾರೆ; ಕದಿರಿ ಎಂದು ಆಡುಮಾತಿನಲ್ಲಿ ಅಪಭ್ರಂಶವಾಗಲೂ ಬಹುದು. 11–12ನೆಯ ಶತಮಾನಗಳಲ್ಲಿ ನಾಥ ಸಂಪ್ರದಾಯ ದಕ್ಷಿಣ ಭಾರತದ ಕೆಲವು ಭಾಗಗಳಲ್ಲಿ ಊರ್ಜಿತವಾಗಿತ್ತು. ಯೋಗಾಭ್ಯಾಸ ಪರಿಭಾಷೆಯಲ್ಲಿ ಕದಳಿಗೇನಾದರೂ ವಿಶೇಷಾರ್ಥವಿರಬಹುದೆ?

ಬೆಲ್ಲಪತ್ರೆ (*Aegle Marmelos* Corr.)

ಪರ್ಯಾಯ ಪದಗಳು:

ಕನ್ನಡ: ಬಿಲ್ಪತ್ರೆ, ಬಿಲ್ವ, ಬಿಲ್ಲ, ವಿಲ್ಲ.
ಸಂಸ್ಕೃತ: ಬಿಲ್ವ, ವಿಲ್ವ

ಚರಕ ಶುಶ್ರುತರ ಕಾಲದಿಂದಲೂ ವೈದ್ಯ ಪ್ರಯೋಗದ ಮೂಲಕ ಚಿರಪರಿಚಿತವಾಗಿರುವ ಮರ. ದಕ್ಷಿಣ ಭಾರತಾದ್ಯಂತ (ಉತ್ತರ ಭಾರತದಲ್ಲಿಯೂ)–3000 ಅಡಿಗಿಂತಲೂ ಎತ್ತರವಿಲ್ಲದ ಪ್ರದೇಶಗಳಲ್ಲಿ–ಸ್ವಾಭಾವಿಕವಾಗಿ ಬೆಳೆಯುತ್ತದೆ. ಬಿಲ್ವದ ಎಲೆ ಮುಬ್ಬಾಗವಾಗಿದ್ದು–ಮೂರು ಉಪಪತ್ರಗಳಿಂದ ಕೂಡಿ–ಒಂದಾದದ್ದು; ಮಧ್ಯದ ಉಪಪತ್ರ ಮಿಕ್ಕ ಎರಡಕ್ಕಿಂತ ಸ್ವಲ್ಪ ಎತ್ತರದಲ್ಲಿದೆ. ಮುಕ್ಕಣ್ಣನ ನಡುಗಣ್ಣಿಗೂ ಉಳಿದೆರಡಕ್ಕೂ ಇರುವ ಸಂಬಂಧ.

ಬಿಲ್ವಪತ್ರೆಗೂ ಶಿವನಿಗೂ ಬಹುಕಾಲದ ನಂಟು. ಇದು ದಕ್ಷಿಣ ಭಾರತದಲ್ಲಿ ಆರಂಭವಾಗಿರ

ಬಹುದೆನ್ನುವುದಕ್ಕೆ ಸ್ವಲ್ಪ ಆಧಾರವಿದೆ. ಕ್ರಿ.ಶ. 11ನೆ ಶತಮಾನದಲ್ಲಿ ಈ ಬಾಂಧವ್ಯ ಏರ್ಪಟ್ಟಿದ್ದಿರಬೇಕು. ದಕ್ಷಿಣ ಭಾರತದಲ್ಲಿ ಶೈವಸಮಯ ಶಾಖೆಗಳು ಉಚ್ಛ್ರಾಯಕ್ಕೆ ಬರುತ್ತಿದ್ದ ಕಾಲ ಇದು. ಶಿವಾಲಯಗಳು ಅಧಿಕ ಸಂಖ್ಯೆಯಲ್ಲಿ ಸ್ಥಾಪನಗೊಳ್ಳುವುದಕ್ಕೆ ಆರಂಭವಾಗಿದ್ದ ಕಾಲ ಇದು. ಶೈವಾಗಮಗಳು ವಸ್ತು ವೈವಿಧ್ಯತೆಯಲ್ಲಿ ವಿಸ್ತೀರ್ಣಗೊಂಡ ಕಾಲ ಇದು. ಶಿವಪುರಾಣಗಳಿಗೆ ಹಿನ್ನೆಲೆಯನ್ನೊದಗಿಸಿದ ಕಾಲ ಇದು. ಈ ಸಂದರ್ಭದಲ್ಲಿ ಮುಬ್ಭಾಗದ ಬಿಲ್ವದೆಲೆ ತ್ರಿನೇತ್ರನ ಬಿಂಬವಾಗಿರಬೇಕು.

11ನೆಯ ಶತಮಾನದ ಚಾಲುಕ್ಯ ಶಾಸನವೊಂದು ಪದ್ಮಶಿವನೆಂಬ ಪೂಜಾರಿಯು ಕಟ್ಟಿಸಿದ್ದ ನಾಗೇಶ್ವರ ದೇವಾಲಯಕ್ಕೆ ಸಾವಂತ ರಾಮಯ್ಯನೆಂಬಾತನು ಬಿಲ್ವಪತ್ರೆಯನ್ನು ಸರಬರಾಜು ಮಾಡಿದ ನೆಂದೂ, ಅದೇ ಪೂಜಾರಿಯು ಈತನಿಗೆ ನೆಲವನ್ನು ದತ್ತಿಬಿಟ್ಟನೆಂದೂ ತಿಳಿಸುತ್ತದೆ.

ಭದ್ರಮುಖಿ

“ಭದ್ರಮುಖಿ ಮೊದಲಾದ ನವಪತ್ರ ಜಾಲ” ಎಂದಿದ್ದಾನೆ, ಹರಿಹರ. ಆಗಮಿಕ ಭಾಷೆಯಲ್ಲಿ ‘ನವಪತ್ರ’, ‘ಪಂಚಪರ್ಣ’, ‘ಅಷ್ಟಪುಷ್ಪ’ ಮೊದಲಾದ ಮಾತುಗಳು ಆಯಾ ಸಂಖ್ಯೆಗನುಸಾರವಾಗಿ ಜಾತಿ ಸಂಚಯಗಳನ್ನು ನಿರ್ದೇಶಿಸುತ್ತವೆ. ಭದ್ರಮುಖಿಯೂ ‘ನವಪತ್ರ’ಗಳಲ್ಲಿ ಒಂದಾಗಿತ್ತು ಎಂದಿಟ್ಟು ಕೊಳ್ಳಬಹುದು. ಈ ಗಿಡದ ಅನನ್ಯತೆ ತಿಳಿಯದು.

ಮರುಗ (*Origanum marjorana* L.)

ಪರ್ಯಾಯ ಪದಗಳು:

ಕನ್ನಡ: ಮರು, ಮರುವು

ಹರಿಹರನ ಪ್ರಕಾರ ಇದು “ಪರಿಮಳದ ಸಸಿ”. ಇಲ್ಲಿ ಸಸಿ ಎಂದರೆ ಬೀಜದಿಂದ ಆಗತಾನೆ ಉತ್ಪನ್ನ ವಾದ ಮೊಳಕೆ ಅಲ್ಲ. ಈ ಗಿಡದ ಗಾತ್ರವೇ ಸಣ್ಣ; ಹೆಚ್ಚು ಹೆಚ್ಚೆಂದರೆ ಆರೆಂಟಂಗುಲ ಎತ್ತರ. “ಬಂಧುರ ಗಂಧ” ಅಧಿಕ ಪ್ರಮಾಣದಲ್ಲಿ ಅಡಗಿರುವುದು ಎಲೆಯಲ್ಲಾದರೂ ಗಿಡದ ಇತರ ಭಾಗಗಳಲ್ಲಿಯೂ (ಬೇರನ್ನುಳಿದು) ಹರಡಿದೆ. ಈ ಪರಿಮಳವು “ಮದನರಾಗ”ವನ್ನು ಹೆಚ್ಚು ಮಾಡುತ್ತದೆ ಎನ್ನುತ್ತಾನೆ, ಪಂಪ. ಅಲ್ಲವೆನ್ನುವಂತಿಲ್ಲ.

11ನೆಯ ಶತಮಾನದಲ್ಲಿ ಈ ಗಿಡ ಶಾಸನೋಕ್ತವಾಗಿದೆ–ಆಗಲೇ ಪರಿಮಳ ದ್ರವ್ಯಗಳಲ್ಲೊಂ ದಾಗಿತ್ತು.

ಮೆಡಿಟರೇನಿಯನ್ ಸಮುದ್ರದ ತೀರ ಪ್ರದೇಶಗಳು (ದಕ್ಷಿಣ ಯೂರೋಪು ಮತ್ತು ಉತ್ತರ ಆಫ್ರಿಕದ ಕರಾವಳಿ) ಮರುಗದ ತೌರು. ಕಡಲ ವಾಣಿಜ್ಯದ ಮೂಲಕ ದಕ್ಷಿಣ ಭಾರತಕ್ಕೆ ಆಗಮಿಸಿದ್ದಿರ ಬೇಕು. ಉತ್ತರ ಭಾರತದಲ್ಲಿ ಈ ಗಿಡ ಅಷ್ಟೊಂದು ಬೇರು ಬಿಟ್ಟಿಲ್ಲ; ಪಂಜಾಬು ಪ್ರದೇಶದಲ್ಲಿನಯೂ ಬಂಗಾಳದಲ್ಲಿಯೂ ಅಲ್ಪಸ್ವಲ್ಪ ಪರಿಚಿತವಾಗಿದೆ. ತೌರುಮನೆಯಲ್ಲಿ (ಏಷ್ಯಾ,ಮೈನರ್, ಅರೇಬಿಯ, ಇಟಲಿ, ಇತ್ಯಾದಿ) ಈ ಗಿಡಕ್ಕೆ ಮರುದ್, ಮರುದಕುಷ್, ಮರುದ್ ಕೌಸ್ ಎಂದೆಲ್ಲ ಮಾರ್ಪಾಟು ಹೊಂದುವ ಒಂದೇ ಬುಡಕಟ್ಟಿಗೆ ಸೇರಿದ ಹೆಸರುಗಳಿವೆ. ಈ ಪ್ರದೇಶಗಳ ಮಗ್ಗುಲಲ್ಲೇ ಇರುವ ಸಿಂಧು ಪಂಜಾಬುಗಳಲ್ಲೂ ಮರವೋ, ಮರುದ್‌ವೋ ಎಂದು ರೂಪಾಂತರವಾಗಿದೆ. ಬಂಗಾಳದ ಮರ್ರು, ಕನ್ನಡದ ಮರುಗ, ತೆಲುಗು ಮಲೆಯಾಳಗಳ ಮರುವಂ, ಮರುಗಂ, ತಮಿಳಿನ ಮರುವು,–ಇವೆಲ್ಲವೂ ಅದೇ ಬುಡಕಟ್ಟಿನವು. ಎಂದರೆ ಹೋದೆಡೆಯಲ್ಲೆಲ್ಲ ಅದೇ ಹೆಸರಿನ ರೂಪಭೇದಗಳನ್ನು ಪಡೆದುಕೊಂಡಿದೆ, ಆದಿವಾಸಸ್ಥಾನದ ವಾಸನೆಯನ್ನು ಉಳಿಸಿಕೊಂಡಿದೆ.

ಮಲ್ಲಿಗೆ (*Jasminum sambac* Ait.)

ಮೊಲ್ಲೆಯ ಪರಿಮಳಕ್ಕಿಂತಲೂ ತೀಕ್ಷ್ಣವಾದದ್ದು ಮಲ್ಲಿಗೆಯದು.

ದಕ್ಷಿಣ ಭಾರತದಲ್ಲೆಲ್ಲ ಸಾಮಾನ್ಯವಾಗಿ ಬೆಳೆಯುತ್ತದೆ. ಬಹುಕಾಲದಿಂದಲೂ ಸಾಗುವಳಿ ಚೆನ್ನಾಗಿ ಒಗ್ಗಿದೆ ಮಾತ್ರವಲ್ಲ, ಅನೇಕ ಉಪಪಂಗಡಗಳಿಗೆ ಜನ್ಮಕೊಟ್ಟಿದೆ: ದುಂಡುಮಲ್ಲಿಗೆ, ಸೂಜಿಮಲ್ಲಿಗೆ, ನಿತ್ಯಮಲ್ಲಿಗೆ, 'ರಾಮಬಾಣ', 'ಕಾಕಡಾ'–ಇತ್ಯಾದಿ. ಕೃಷಿ ಪ್ರದೇಶವನ್ನು ಕುರಿತ ಹೆಸರುಗಳೂ ಉಂಟು. ಅಂಬೂರು ಮಲ್ಲಿ(ಗೆ), ಚಿತ್ತೂರು ಮಲ್ಲಿ(ಗೆ), ಮೈಸೂರು ಮಲ್ಲಿಗೆ, ಇತ್ಯಾದಿ, ಈ ಹೆಸರುಗಳು ಬಹುಪಾಲು ಸ್ವಾಭಿಮಾನದ ಸೂಚಕಗಳೇ ಹೊರತು ವಿಶಿಷ್ಟತೆಯ ಕುರುಹೇನೂ ಅಲ್ಲ.

ಕೆಲವು ಜಾತಿಗಳಲ್ಲಿ ಹೂ ಎಲೆಮರೆಯಲ್ಲಿರುತ್ತದೆ. ಸುಭಾಷಿತಕಾರರಿಗೆ ಪ್ರತಿಭೆಯ ಕಾವು ಏರಿತು; ಇಂಥ ಮಲ್ಲಿಗೆಯನ್ನು ಸುಳಿಗಾಳಿ ಮುತ್ತು ಕೊಡದು, ದುಂಬಿ ಬಂಡನ್ನು ಹೀರದು ಎಂದರು (ಶಾರ್ಙ್ಗಧರ ಪದ್ಧತಿ, 1010).

ಶಿವನಿಗೆ ಮಲ್ಲಿಕಾರ್ಜುನನೆಂಬ ಹೆಸರನ್ನು ಮುಡಿಸಿದ್ದು ರೂಢಿಸಿದ್ದು ಕರ್ನಾಟಕ ದೇಶದಲ್ಲಿ ಎಂದು ಕಾಣುತ್ತದೆ. ಇದರ ಹೊರಗಡೆ ಈ ಪದದ ಪ್ರಚಾರವಿದ್ದಂತೆ ಕಾಣದು. ಇದೇ ಪದದ ರೂಪಗಳೇ ಮಲ್ಲೇಶ, ಮಲ್ಲಪ್ಪ, ಮಲ್ಲವ್ವ, ಮಲ್ಲಾರಾಧ್ಯ ಇತ್ಯಾದಿ ಎಂದು ನನ್ನ ಎಣಿಕೆ. ಈ ಹೆಸರುಗಳಿಗೆ ಮಲ್ಲಿಗೆ ಹೂ ಆಕರವಾಗಿರಬಹುದೆ?

ಮಲ್ಲಿಗೆ ಹೂವಿನಿಂದ ಎಷ್ಟು ಯಥೇಷ್ಟವಾಗಿ ಅಲಂಕರಿಸಿದರೂ ಕಾಮನಿಗೆ ತೃಪ್ತಿಯಾಗದು ಎಂದಿದ್ದಾನೆ ಪಂಪ. ನಮ್ಮ ಇಂದಿನ ಅಧಿಕಾರಿ ಸಾಹೇಬರು ಕೆಲವರಿಗೆ ಮೈಸೂರು ಮಲ್ಲಿಗೆ ಮಾಲೆ–ದೊಡ್ಡಮಾಲೆ, ಖಾಸಾಮಾಲೆ–ಕೊರಳಿಗೆ ಬೀಳದಿದ್ದರೆ ಅವರಿಗಾದರೂ ತೃಪ್ತಿಬರುತ್ತದೆಯೇನು?

ಮಾಧವೀಲತೆ, ಅದಿರ್ಗಂತಿ (Hiptage madablota)

ಪರ್ಯಾಯ ಪದಗಳು

ಕನ್ನಡ: ಅದಿಮುರ್ಚುತ್ತೆ, ಕುರುಕತ್ತಿ
ಸಂಸ್ಕೃತ: ಅತಿಮುಕ್ತಾ, ಮಾಧವೀ, ಮಾಲತೀ

ಇದನ್ನು 'ವಸಂತದೂತಿ' ಎಂದು ಆದಿಪುರಾಣ, ಚಂದ್ರಪ್ರಭ ಚರಿತೆ ಮೊದಲಾದ ಜೈನಗ್ರಂಥಗಳು ಹೆಸರಿಸುತ್ತವೆ,–ಚೈತ್ರದ ಆಗಮನಕ್ಕೆ ಇದು ಮುನ್ಸೂಚಿ ಎಂಬ ಅರ್ಥದಲ್ಲಿ. ಕಾಡಿನಲ್ಲಿ ಇತರ ಗಿಡಮರಗಳು ಚಿಗುರೊಡೆಯುವುದಕ್ಕೆ ಮುಂಚೆಯೇ ಮಾಲತಿಯು ಹೊಸ ಎಲೆ ಹೂಗಳನ್ನು ತಳೆಯುತ್ತಾಳೆ. ನಮ್ಮ ಪಶ್ಚಿಮ ಘಟ್ಟದ ಕಾಡುಗಳಲ್ಲಿ ಯಥೇಷ್ಟವಾಗಿ ಬೆಳೆಯುತ್ತದೆ. 'ಲತಾ' ಎನ್ನಿಸಿಕೊಂಡರೂ ಒಳ್ಳೆಯ ಧಡೂತಿಯಾದ ಕಾಂಡಕೊಂಬೆಗಳನ್ನು ತಳೆದ 'ಮರಬಳ್ಳಿ' ಇದು.

ಬಹುಕಾಲದಿಂದಲೂ ಕವಿಗಳ ಬಾಯಲ್ಲಿ ಬಗೆ ಬಗೆಯಾಗಿ ಹೊಗಳಿಸಿಕೊಂಡ ಗಿಡ ಮಾಧವಿ. ಸ್ವಾಭಾವಿಕವಾದ ನೆಲೆಯಲ್ಲಿ ಈ ಲತೆ ಹಿರಿಯ ಮರಗಳ ಮೇಲೆ ಹಬ್ಬಿ ಎಲೆ ಛಾವಣಿಯನ್ನು ಆಕ್ರಮಿಸಿಕೊಂಡು ಅಲ್ಲಿಂದಲೇ ಅಕ್ಕಪಕ್ಕದ ಮರಗಳಿಗೆ 'ದಾಂಗುಡಿ'ಯಿಟ್ಟು ಹಾರಿ ಹಬ್ಬುತ್ತದೆ. ಹೂ ತಳೆದಾಗ ವಾಸನೆ ಬರುವ ದಿಕ್ಕಿನಿಂದಲೇ ಇದರ ಗುರುತು ಹಿಡಿಯಬಹುದು–ಅಷ್ಟು ವೈಯಕ್ತಿಕವಾದ ನರುಗಂಪು; ಮೂಗನ್ನು ಕೆರಳಿಸುವಂಥದಲ್ಲವಾದರೂ ಒಂದು ಬಗೆಯ ಮಾದಕ ಮಿಳಿತವಾದ ವಾಸನೆ.

ಹೂವಿನ ಪರಿಮಳಕ್ಕೆ ಮಾರುಹೋದ ಕವಿಗಳು ಅದರ ರಚನೆಗೂ ರೂಪಕ್ಕೂ ಏಕೆ ಒಲಿಯದೆ ಹೋದರೋ? ಹರಿಹರನೂ "ನಿನ್ನ ಸುಖದ ಸದ್ಗಂಧ ಮೀಸಲನೀಯ್" ಎಂದಿದ್ದಾನೆ. ಬಿರಿದ ಹೂ ಮುದುರಿಂದ ಚಿಟ್ಟೆಯಂತಿರುತ್ತದೆ. ಎಸಳುಗಳ ರೂಪ ರೆಕ್ಕೆಯಂತೆಯೇ. ಬಿಳಿ ಎಸಳಿನ ಕೆಳಭಾಗದಲ್ಲಿ ಹಳದಿಯ ಬಣ್ಣ. ಕಂಪಿನಷ್ಟೇ ವೈಯಕ್ತಿಕವಾದ ಮೋಹಕರೂಪ. ಕಾಯಿಗೆ ಕಾಯಿಗೆ ರೆಕ್ಕೆಗಳುಂಟು. ಗಾಳಿಯಲ್ಲಿ ತೂರಾಡಿ ನೆಲಕ್ಕೆ ಬಿದ್ದು ಮೊಳೆಯುತ್ತದೆ.

ಮುಂಗುಡಿ

"ಮುಂಗುಡಿಯ ಕಂಪು" ಎನ್ನುತ್ತಾನೆ ಹರಿಹರ. ಇದರ ಅನನ್ಯತೆ ದೊರಕಿಲ್ಲ.

ಮೊಲ್ಲೆ (*Jasminum auriculatum* Vahl.)

ಪರ್ಯಾಯ ಪದಗಳು

ಕನ್ನಡ: ಕಾಡರುಮಲ್ಲಿಗೆ, ವಾಸಂತಿ ಮೊಲ್ಲೆ, ಮಧ್ಯಾಹ್ನ ಮಲ್ಲಿಗೆ.

ಜಾಜಿಯಂತೆಯೇ ಇದೂ ಬಳ್ಳಿ; ಅದರ ಹರವೇ ಇದರದೂ. 'ತುರುಗಿ ಮಲರ್ದು' ಎನ್ನುತ್ತಾನೆ ಪಂಪ. ನಿಜ. ಸಮೃದ್ಧಿಯಾಗಿ ಹೂಬಿಡುತ್ತದೆ. ಗಿಡದ ಮೇಲೆ ಮೊಗ್ಗು ಬಿರಿಯುವುದು ಸೂರ್ಯನು ನೆತ್ತಿಯ ಮೇಲಕ್ಕೆ ಬರುವ ಸಮಯದಲ್ಲಿ. ಇದು ಕವಿಸಮಯ ಅಲ್ಲ. ಹೀಗಾಗಿ ಮಧ್ಯಾಹ್ನದ ಮಲ್ಲಿಗೆ ಎಂಬ ವಿಶೇಷಣವನ್ನು ಸಂಪಾದಿಸಿಕೊಂಡಿದೆ.

ಬಿರಿದ ಮೊಲ್ಲೆಗಿಂತ ಮೊಗ್ಗುಮೊಲ್ಲೆಗೆ ಆಸೆ ಪಡುತ್ತಾರೆ, ಮುಡಿಯುತ್ತಾರೆ, ನಮ್ಮ ಹೆಂಗಸರು. ಎಂದರೆ ವಾಸನೆಗಿಂತ ರೂಪದಲ್ಲಿ ಚೆಲುವು ಕಂಡವರು ಇವರು. ಮೊಗ್ಗು ಪೋಣಿಸಿದ ದಂಡೆಗೊಂದು ಚೆಲುವಿದೆಯೆಂದು ನಾನೂ ಒಪ್ಪಿಕೊಳ್ಳುತ್ತೇನೆ.

ರುದ್ರಜಟೆ (*Hibiscus rosa-sincusis* L.)

ಇದು ಕೆಂಪು ದಾಸವಾಳವೆಂದು ಕೆಲವರ ಅಭಿಪ್ರಾಯ. ಸರಿಯಾದ ಅನನ್ಯತೆ ದೊರಕಿಲ್ಲ.

ಸಂಪಿಗೆ (*Michelia champaca* L.)

ಪರ್ಯಾಯ ಪದಗಳು

ಕನ್ನಡ: ಸಂಪಗೆ
ಸಂಸ್ಕೃತ: ಚಂಪಕಾ

ಹಿಮಾಲಯದ ಕೆಲವು ಪ್ರದೇಶಗಳೂ ದಕ್ಷಿಣ ಭಾರತದ ಪಶ್ಚಿಮ ಘಟ್ಟಗಳೂ ಇವರ ತೌರು. ಸ್ವಾಭಾವಿಕ ಬೆಳವಣಿಗೆಯಲ್ಲಿ 100 ಅಡಿ ಎತ್ತರ ಬೆಳೆಯುತ್ತದೆ. ಒಳ್ಳೆಯ ಚೌಬೀನೆಯನ್ನೊದಗಿಸುತ್ತದೆಯಾದರೂ ಬಾಹುಳ್ಯ ಹೀನತೆಯಿಂದ ಉಪಯೋಗಕ್ಕೆ ಬಂದಿಲ್ಲ. ಹೂಗಳಿಗಾಗಿ ತೋಟಗಳಿಗೂ ಮನೆಗಳಿಗೂ ತಂದು ಬೆಳೆಸಿಕೊಳ್ಳಲಾಗಿದೆ. ಸಂಪಗೆಯ ತೋಪನ್ನು ನಿರ್ಮಿಸಬೇಕೆಂದೇ ಭೂಮಿಯನ್ನು ಮೀಸಲಾಗಿಟ್ಟ ಪ್ರಸಂಗಗಳನ್ನು ಚೋಳರ ಕೆಲವು ಶಾಸನಗಳು ತಿಳಿಸುತ್ತವೆ (249—1907; 18—1922)

ಬಹುಕಾಲದಿಂದಲೂ ಪರಿಚಿತವಾಗಿರುವ ಹೂ ಸಂಪಗೆ. ಪತಂಜಲಿಯ ಮಹಾಭಾಷ್ಯದಲ್ಲೂ ಜಾತಕಗಳಲ್ಲೂ, ಮಹಾ ಭಾರತದಲ್ಲೂ ಹೆಸರುವೆತ್ತಿದೆ, ಇದರ ನರುಗುಂಪಿನ ಕೀರ್ತಿ. ಹೂಗಳ, "ಪಡೆದೊಡೆ ಕಂಪಂ ಬಣ್ಣಂಬಡೆಯವು ಬಣ್ಣಮನೆ ಪಡೆದುವಪ್ಪೊಡೆ ಕಂಪಂ ಪಡೆಯವು" ಎಂದು ಗೋಣಗಿಕೊಂಡು ಪಂಪನು ಎರಡನ್ನೂ ಪಡೆದ ಈ ಚಂಪಕಕ್ಕೆ ಇತರ ಹೂಗಳು ಸಮವೆ ಎಂದು ಕೇಳಿ ಸಮಾಧಾನ ಪಡೆದುಕೊಂಡಿದ್ದಾನೆ. ಅವನ ಹೇಳಿಕೆಯ ಪ್ರಕಾರ ಈ ಹೂವಿನ ಕಂಪನ್ನು 'ಗಟ್ಟಿನೆ' ನುಂಗಿದ ದುಂಬಿಗಳಿಗೇ ಅಜೀರ್ಣವಾಯಿತು ಎಂದ ಮೇಲೆ, ಆ ಕಂಪು ಬಹು ತೀಕ್ಷ್ಣವಾದದ್ದು ಎಂದು ತಿಳಿಯುತ್ತದೆಯಲ್ಲವೆ? ನಮ್ಮ ಮೂಗಿಗೂ ಅಷ್ಟೆ. ದೂರದ ವಾಸನೆಯೇನೋ ಹಿತವಾಗಿರುತ್ತದೆ; ಮೂಗಿನ ಮಗ್ಗುಲಿಗೆ ಹೂವನ್ನು ತಂದರೆ ಅದೇ ವಾಸನೆ ವೆಗಟಾಗುತ್ತದೆ.

ಹೂವಿನ ಪರಿಮಳವನ್ನು ಎಣ್ಣೆಯಲ್ಲಿ ಭಟ್ಟಿಯಿಳಿಸುವ ಹವ್ಯಾಸವೂ ಹಳೆಯದೇ. ಗಂಧಯುಕ್ತಿ ಪ್ರಕರಣಗಳಲ್ಲಿ ಇದು ಪ್ರಸ್ತಾಪವಿದೆ; 12ನೆಯ ಶತಮಾನದ ಮಾನಸೋಲ್ಲಾಸದಿಂದ ಚಂಪಕತೈಲವು ಅಭ್ಯಂಗನ ವಸ್ತುವಾಗಿತ್ತೆಂದು ತಿಳಿಯುತ್ತದೆ.

10–11ನೆಯ ಶತಮಾನಗಳಲ್ಲಿ ಸಂಪಗೆ ಹೂ ಪೂಜೆಗೆ ಉಪಯೋಗವಾಗಿತ್ತೆಂದು ಶೈವ 'ತೇವಾರ'ಗಳೂ ತಿಳಿಸುತ್ತವೆ. ಆದುದರಿಂದ "ಏನವ್ವ, ಸಂಪಗೆಯೆ, ಶಿವನ ಮುಡಿಗಿಂದು ನೀನೀವ ಪೊಸಕುಸುಮಮಂ ನೀಡು" ಎಂದು ಹರಿಹರನು ಯಾಚಿಸಿದ್ದು ಸಂಪ್ರದಾಯ ಸಮ್ಮತವಾಗಿಯೇ ಇದೆ.

ಸಂಪಗೆಯ ಪೊಗ್ಗನ್ನು ಸಂದರವಾದ ಮೂಗಿಗೆ ಹೋಲಿಸುವುದು ಅದೇ ಕಾಲದ ಹೊತ್ತಿಗೆ ಕವಿಸಮಯವಾಗಿತ್ತು.

ಸೇನಂತಿಗೆ (*? Chrysanthemum indicum* L.)

ಸೇವಂತಿಗೆಯು ಕೈಸಾಂತಿಮಮ್ ಇಂಡಿಕಮ್ ಗಿಡವೆಂಬ ಅಭಿಪ್ರಾಯ ಅನೇಕರಲ್ಲಿ ನೆಲೆಯಾಗಿದೆ. 'ಇಂಡಿಕಮ್' ಎಂಬ ಹೆಸರು ಭಾರತವನ್ನೇ ಕುರಿತದ್ದು, ಭಾರತದಲ್ಲಿ ಸ್ವಾಭಾವಿಕವಾಗಿ ಬೆಳೆಯುವ ಗಿಡ ಇದು ಎಂದು ಯಾರಾದರೂ ವಾದ ಮಾಡಬಹುದು. ಆದರೆ ಈ ನಾಮದ್ವಯ ಸೃಷ್ಟಿಯಾದದ್ದು 18 ನೆಯ ಶತಮಾನದಲ್ಲಿ ಎಂಬುದನ್ನು ಮರೆಯಬಾರದು. ಕೆರೋಲ್ ಲಿನೆಯಸ್ ಆಕಾಲದಲ್ಲಿ ಜೀವಿಸಿದ್ದ ಸಸ್ಯ ಶಾಸ್ತ್ರಜ್ಞ. ಈ ಹೆಸರನ್ನು ಘೋಣಿಸಿದವನು ಅವನು. ಅವನಿಗೆ ಅನೇಕ ದೇಶಗಳಿಂದ ಸಸ್ಯಗಳು ರವಾನಿತವಾಗುತ್ತಿದ್ದವು. ಭಾರತದಿಂದಲೂ ರವಾನಿತವಾದವು. ತನಗೆ ಭಾರತದಿಂದ ಬಂದದ್ದೆಂಬುದನ್ನು ಸೂಚಿಸುವ ಸಲುವಾಗಿ ಈ ಹೆಸರನ್ನು ಬಳಸಿದನೇ ಹೊರತು, ಈ ಗಿಡ ಭಾರತದಲ್ಲಿ ಸ್ವಾಭಾವಿಕವಾಗಿ ಬೆಳೆಯುವಂಥದ್ದು, ಭಾರತದ ತೌರಿನಲ್ಲಿ ಹುಟ್ಟಿದ್ದು ಎಂಬುದನ್ನು ಸೂಚಿಸುವುದಕ್ಕಲ್ಲ.

ನಮಗೆ ಪರಿಚಿತವಾಗಿರುವ ಸೇವಂತಿ ತೋಟಗಳಲ್ಲಿ ಮಾತ್ರ ಬೆಳೆಯುತ್ತದೆ. ಹಳದಿ, ಬಿಳಿ ಜಾತಿ ಗಳಿವೆ. ಎಷ್ಟು ಕಾಲದಿಂದ ಈ ಗಿಡ ನಮಗೆ ತಿಳಿದಿದೆ ಎಂಬ ಪ್ರಶ್ನೆಗೆ ಉತ್ತರ ಸಿಗದು. ಆದರೆ ಇದು ಹೊರದೇಶದಿಂದ ಆಮದಾದ ಸಸ್ಯ ವಿಶೇಷವೆಂಬುದು ಮಾತ್ರ ಖಚಿತವಾದದ್ದು. ಹರಿಹರನ ಕಾಲದ ವೇಳೆಗೆ ಈ ಗಿಡ ಆಮದಾಗಿತ್ತು ಎಂದು ಹೇಳುವುದಕ್ಕೆ ಆಧಾರಗಳಿಲ್ಲ.

'ಸೇವಂತಿ' (ಇತರ ರೂಪಗಳು: ಸೇವಂತಿಗೆ, ಶಾಮಂತಿ, ಶಾಮಂತಿಗೆ) ಎಂಬ ಗಿಡವೊಂದು ನಮ್ಮಲ್ಲಿ ದ್ದಿರಬೇಕು. ಕವಿಗಳು ಹಾಡಿರುವುದು ಈ ಸೇವಂತಿಯನ್ನು. ಅದು ಹೇಗಿತ್ತು, ಅದರ ಅನನ್ಯತೆ ಯಾವುದು ಎಂಬುದನ್ನು ತಿಳಿಯುವುದು ಸದ್ಯಕ್ಕೆ ಸಾಧ್ಯವಿಲ್ಲ. ಗುರುತು ಹಿಡಿಯುವುದಕ್ಕೆ ಅನುವಾಗುವ ಕುರುಹು ಗಳನ್ನು–ಅದರ ಹೂವಿನಲ್ಲಿ ನರುಗಂಪು ಇತ್ತು ಎಂಬೊಂದು ಸಂಗತಿಯನ್ನುಳಿದು–ತಿಳಿಸಿಲ್ಲ.

ಇಲ್ಲಿ ಒಂದು ಊಹೆಯನ್ನು–ಬರಿಯ ಊಹೆಯನ್ನು–ತಿಳಿಸಬಹುದೆ? ಇರುವಂತಿ(ದಿ)ಗೆ, ಸೇವಂತಿ(ದಿ)ಗೆ, ಎಂಬ ಪದಗಳ ಅಂತ್ಯಭಾಗ(ಅಂದಿ)ವು ಅನ್ದುಗೆ=ಅಂದುಗೆ= ಅಂದಿಗೆ ಪದಗಳೊಡನೆ ಸಾಮ್ಯ ಪಡೆಯಬಹುದೆ? ಅಂದುಗೆ ಎಂದರೆ ಹೆಜ್ಜೆಗೆ ಒಪ್ಪುವ ಆಭರಣ, ಹೆಜ್ಜೆಯನ್ನು ಆವರಿಸಿರುವ ಆಭರಣ. ಒಂದು ಕೇಂದ್ರವನ್ನು ಆವರಿಸಿಕೊಂಡಂತೆ ರಚನೆಯನ್ನು ಹೊಂದಿದ ಹೂ ಎಂದು ಬಗೆಯ ಬಹುದೆ? ಈ ವಿನ್ಯಾಸದಲ್ಲಿ ಹವಣಾಗಿದ್ದು ಪರಿಮಳವನ್ನೂ ಹೊಮ್ಮುವ ಹೂಗಳು ನಮ್ಮ ಕಾಡಿನಲ್ಲಿ ಅನೇಕವಿವೆ. ಹಳೆಯ ಕಾಲದ ಕವಿಗಳ ಸೇವಂತಿ ಹೆಚ್ಚುಕಡಿಮೆ ಇಂದಿನದನ್ನೇ ಹೋಲುವ ಬೇರೆ ಹೂ ವೊಂದಾಗಿರಬಹುದಲ್ಲವೆ?

ಸೇವಂತಿಗೆ ಹೂವಿಗೆ ಆಡುಮಾತಿನಲ್ಲಿ ಶಾವಂತಿ, ಶ್ಯಾವಂತಿ, ಶಾಮಂತಿ, ಶ್ಯಾಮಂತಿ ಎಂಬ ಪದಗಳು ಉಳಿದಿವೆ. ಶ್ಯಾಮಂತಿಗೆ ಎಂದರೆ ಕಪ್ಪುಛಾಯೆಯಿರುವ ಕಾಲ್ಗೆಜ್ಜೆಯ ನಕಾಸೆಯಲ್ಲಿರುವ ಹೂ ಆಗ ಬಹುದೆ? ಇಲ್ಲಿ ಗೊಜ್ಜಗೆ ಎಂಬ ಸಸ್ಯವಿಶೇಷವನ್ನು ನೆನೆಯಬೇಕು. ಪಂಪನು ಈ ಹೂವನ್ನು ಮಸಿಗೆ ಸಮನಾದದ್ದೆಂದು ಹೇಳಿದ್ದಾನೆ. ಎಂದರೆ ಕಪ್ಪುಛಾಯೆಯುಳ್ಳದ್ದು ಎಂದಾಗುತ್ತದೆ. ಕಪ್ಪು ಎಂದರೆ ಇದ್ದಿಲಿನ ಬಣ್ಣವಲ್ಲ, ನೀಲಿ ಕೆಂಪು ಬಣ್ಣಗಳು ಅತಿತೀಕ್ಷ್ಣವಾದಾಗ ಕಪ್ಪುಛಾಯೆಗೊಳ್ಳುತ್ತವೆ. ಗೊಜ್ಜಗೆ ಯನ್ನು ಸೇವಂತಿಗೆ ಎಂದು ಬಗೆಯುವವರೂ ಉಂಟು. ಗೊಜ್ಜುಗೆಗೂ ಗೆಜ್ಜೆಗೂ ಸಂಬಂಧವೇನಾದರೂ ಇರಬಹುದೆ?

(ಗಿಡಮರಹೂಗಳ ಹೆಸರುಗಳಲ್ಲಿ 'ಇಗೆ' ಪ್ರತ್ಯಯವನ್ನು ಕುರಿತು ಸಂಶೋಧನೆ ನಡೆಯಬೇಕಾಗಿದೆ:

ಸೇವಂತಿ	—	ಸೇವಂತಿಗೆ
ಇರುವಂತಿ	—	ಇರುವಂತಿಗೆ
?ಗೊಜ್ಜು	—	ಗೊಜ್ಜುಗೆ

ಈ ಜಾತಿಯ ಜೋಡಿ ಹೆಸರುಗಳು ಇನ್ನೂ ಇವೆ.)

ಹೀಗಾಗಿ ಸ್ಯಾಮಂತಿಯೂ ಗೊಜ್ಜುಗೆಯೂ ಕಾಲಂದುಗೆ–ಕಾಲ್ಗೆಜ್ಜೆಗಳ ನಕಾಸೆಯಲ್ಲಿ ಹವಣಾಗಿ ಅತಿತೀಕ್ಷ್ಣವಾದ ನೀಲಿ ಅಥವಾ ಕೆಂಪು ಬಣ್ಣದ ಹೂಗಳು ಎನ್ನಬಹುದೆ? ಆ ಹೂಗಳು ಕಾಲ ಮಾರ್ಪಾಟಿನಲ್ಲಿ ಹಿಂದೆ ಸರಿದು ಹೋಗಿ, ಹೆಸರೊಂದು ಮಾತ್ರ ಉಳಿದುಕೊಂಡು ಬಂದಿರುವಂತಿದೆ. ಜನಸಾಮಾನ್ಯದ ಬಾಯಲ್ಲಿ ಹೊರಗಿನಿಂದ ಬಂದು ನೆಲಸಿದ ಕ್ರೈಸೇಂತಿಮುವಮ್ ಇಂಡಿಕಮ್ಮಿಗೆ ಈ ಹೆಸರು ಅಂಟಿರಬಹುದಲ್ಲವೆ?

ಸುರಹೊನ್ನೆ

ಹರಿಹರನ ವಾಕ್ಯ ಹೀಗಿದೆ:

"ಏನೆನ್ನ ಹೊನ್ನೆ ಸುರಹೊನ್ನೆ ಪರಿಮಳದರಸಿ
ನೀಮುನ್ನ ಪುಲಿಗೆರೆಯ ಸೋಮಯ್ಯನಂ ಬರಿಸಿ
ಕೊಂಡ ಸದ್ಭಕ್ತಿ ಪರಿಯುಂಟೆ ಬಾ..."

ಹೊನ್ನೆ ಮತ್ತು ಸುರಹೊನ್ನೆಗಳು –ಬಿಡಿಬಿಡಿಯಾಗಿ ಗಣಿಸಿದರೆ–ಎರಡೂ ಬೇರೆ ಬೇರೆ ಜಾತಿಗಳು: ಹೊನ್ನೆ = ಬೆಂಗೆ = ವೇಂಗೆ–Petrocarpus marsupium ; ಸುರಹೊನ್ನೆ – ನಾಗ = ಪುನ್ನಾಗ calophyllum inophyllum

ಹರಿಹರನು ಹೂಗಳನ್ನು ಆತ್ಮೀಯವಾದ ಪ್ರಿಯವಚನಗಳಿಂದ ಸಂಬೋಧಿಸುತ್ತಿದ್ದನೆಂಬುದನ್ನು 'ಸುಜನಾ' ತೋರಿಸಿದ್ದಾರೆ. "ನನ್ನ ಚಿನ್ನವೆ (ಹೊನ್ನೆ)! ದೈವೀಕವಾದ ಹೊನ್ನೆ (ಸುರಹೊನ್ನೆ)ಯೆ!" ಎಂಬ ಧ್ವನಿಯಲ್ಲಿ "ಏನೆನ್ನ ಹೊನ್ನೆ, ಸುರಹೊನ್ನೆ" ಎಂಬ ಪದಸರಣಿಯನ್ನು ಜೋಡಿಸಿರುವಂತಿದೆ.

"ಎಸಳುಗಳನ್ನು ಚೆನ್ನಾಗಿ ಮುತ್ತಿನಲ್ಲಿ ಕಡೆದಿಟ್ಟು, ಅದರ ನಡುವೆ ಚಿನ್ನದ ಪುಡಿಯನ್ನು ಕೇಸರದ ಆಕೃತಿಯಲ್ಲಿ ಹರಡಿ. ಸೊಗಸಾದ ಕೆಂಪು ಮಾಣಿಕ್ಯದ ನುಣುಪಾದ ಹರಳನ್ನು ಅಲ್ಲಿಗೆ ಬೀಜಕೋಶದಂತೆ ಜೋಡಿಸಿ–"ಎಂದೆಲ್ಲ ಕಣ್ಣಿಗೆ ಕಟ್ಟಿದಂತೆ ಹೂವಿನ ವರ್ಣಚಿತ್ರವನ್ನು ಬಿಡಿಸಿ "ಪೂಗಳೊಳೇಂ ಸುರಹೊನ್ನೆ ಚೆನ್ನವೋ" ಎಂದು ಉದ್ಗಾರ ತೆಗೆಯಲಿಲ್ಲವೆ. ಪಂಪ?–ಅದೇ ಈ ಸುರಹೊನ್ನೆ!

ತಮಿಳಿನ 'ಸಂಗ' ಕವಿಗಳಿಗೆ ಸುರಹೊನ್ನೆಮರ (ಪುನ್ನೈ) ಅನೇಕ ಉಪಮಾನ ಉಪಮೇಯಗಳನ್ನೂ ಕವಿಸಮಯಗಳನ್ನೂ ಒದಗಿಸಿತು. ಕಬ್ಬಿಣದಂಥ ಕೊಂಬೆಗಳು, ಪಚ್ಚೆಯಂಥ ಎಲೆಗಳು, ಬೆಳ್ಳಿಯಂಥ ಹೂಗಳು, ಚಿನ್ನದ ಪರಾಗ (ನಟ್ರಿಣೈ, 249). ನೆಯ್ದಲು ಹೂವಿನ ಮೇಲೆ ಸುರಹೊನ್ನೆಯ ಹಳದಿ ಪರಾಗ ಚೆಲ್ಲಿದಾಗ ನೀಲಮಣಿಯಿಂದ ಕಡೆದ ಸಂಪುಟದಲ್ಲಿಟ್ಟ ಚಿನ್ನದ ನೆನಪು ಮೂಡಿಸಿತು (ಐಂಗುರುನೂಱು, 189). ಸುರಹೊನ್ನೆಯ ಮೊಗ್ಗುಗಳನ್ನು ಕಂಡ ಕವಿಗೆ ಮುತ್ತುಗಳ ನೆನಪಾಯಿತಂತೆ: ಮುತ್ತುಗಳನ್ನು ಉದುರಿಸುವ ಸುರಹೊನ್ನೆ ಎಂದಿದ್ದಾನೆ (ಶಿರುಪಾಣಾಱುಱಪ್ಪಟೈ).

ಮಳೆಗಾಡುಗಳಲ್ಲಿ ಸುರಹೊನ್ನೆ ಹೆಮ್ಮರವಾಗಿ ಬೆಳೆಯುತ್ತದೆ–150 ಅಡಿ ಉನ್ನತವಾಗಿ ಏರುವ ಮರಗಳೂ ಉಂಟು. ಸಮುದ್ರ ತೀರದಲ್ಲಿರುವಂಥವು ನೆಲದಿಂದ 10 ಅಡಿ ಎತ್ತರದಲ್ಲೇ ಕವಲೊಡೆದು ಮರದ ಹರವು ವಿಸ್ತಾರಗೊಂಡು ಎತ್ತರ ಕಡಿಮೆಯಾಗುತ್ತದೆ. ತಮಿಳು ಕವಿಗಳು ಕಂಡದ್ದು ಇಂಥಮರ. ಮರಳು ತೀರದ ಮೇಲೆ ನಿಂತಿರುವ ಮರದ ನೆಳಲು ತಂಪಾದದ್ದು. ನೆಳಲಿನ ಕಪ್ಪು ಮರಳ ಮೇಲೆ ಚೆಲ್ಲಿದ ಸೂರ್ಯ ಬೆಳಕಿನೊಡನೆ ವಿರುದ್ಧಭಾವದಲ್ಲಿತ್ತು (ನಟ್ರಿಣೈ, 354). ಇದೇ ಭೂದೃಶ್ಯ ಇನ್ನೊಬ್ಬ ಕವಿಗೆ ಕಪ್ಪು ರೆಂಬೆಗಳ ಸುರಹೊನ್ನೆಯ ಘನೀಭೂತವಾದ ನೆಳಲಿನೊಂದಿಗೆ ಬಿಳಿಮರಳಿನ ಮೇಲೆ ಬಿದ್ದ ಬೆಳಕು ಘನೀಭೂತವಾದ ಬೆಳದಿಂಗಳಂತೆ ಕಂಡಿತು (ಕುರುಂತೊಕೈ, 123)

ಶಿವನ ಪ್ರೀತಿಗೆ ಒಳಗಾದದ್ದು ಸುರಹೊನ್ನೆಹೂ ಎಂಬ ಸಂಗತಿ 10ನೆ ಶತಮಾನದಲ್ಲಿ ಜೀವಿಸಿದ್ದ ತಮಿಳು ಶೈವಭಕ್ತರ 'ತೇವಾರ'ಗಳಿಂದ ತಿಳಿದುಬರುತ್ತದೆ.



ಜಾತಿ




ತುಂಬೆ



ಕಂಚವಾಳ



ಚೂತ



ಕಕ್ಕೆ



ಕಮಲ



ಉನ್ಮತ್ತ



ಏಕ್ಕೆ



ಸುರಹೊನ್ನೆ





ಅದಿಗಾಂತಿ



ಸಂಪಿಗೆ



ಬಾಳೆ



ಬೆಲ್ಲಪತ್ರೆ



ದವನ



ನೆಯ್ದಿಲೆ



ಇರುವಂತಿ



ಉತ್ತರಣಿ

ಎಡ್ವರ್ಡ್ ನೊರೋನ್ಹಾ, ಎಸ್. ಜೆ.

'ಪ್ಯಾರಡೈಸ್ ರಿಗೇಯ್ನ್ಡ್': ಕಾವ್ಯವಸ್ತು, ಅದರ ಮೂಲ ಮತ್ತು ವಿಕಾಸ

'ಪ್ಯಾರಡೈಸ್ ಲಾಸ್ಟ್', ಮತ್ತು 'ಪ್ಯಾರಡೈಸ್ ರಿಗೇಯ್ನ್ಡ್'–ಇವು ಅವಳಿ ಕಾವ್ಯ. ಮೊದಲನೆಯ ಕಾವ್ಯವು ಪ್ರಕಟವಾಗುವಷ್ಟರಲ್ಲಿ ಎರಡನೆಯದು ಸಿದ್ಧವಾಗಿತ್ತು ಎಂದು ಊಹಿಸಲಾಗಿದೆ.[1] ಹೆಸರೇ ಸೂಚಿಸುವಂತೆ 'ಪ್ಯಾರಡೈಸ್ ರಿಗೇಯ್ನ್ಡ್' 'ಪ್ಯಾರಡೈಸ್ ಲಾಸ್ಟ್' ಕಾವ್ಯದ ಉತ್ತರಾರ್ಧ ಎಂದು ಕಾಣುತ್ತದೆ. ಮತ್ತು 'ಪ್ಯಾರಡೈಸ್ ಲಾಸ್ಟ್'–ಇದನ್ನು ಸರಿಯಾಗಿ ಅರ್ಥಹಿಸದೆ, ಅದರ ಅನುವರ್ತಿ ಕಾವ್ಯವನ್ನು ಸರಿಯಾಗಿ ತಿಳಿದುಕೊಳ್ಳುವುದು ಕಷ್ಟ.

ಮಿಲ್ಟನನ ಇಳಿವಯಸ್ಸಿನಲ್ಲಿ, ಆ ವರೆಗೆ ಅವನು ನಿರತನಾಗಿದ್ದ ವಿದ್ಯಾವ್ರತದ ಫಲವೂ, ಅನುಭವಿಸಿದ ಕಷ್ಟ ಸುಖದ ಪರಿಶೀಲತದಿಂದ ಪಕ್ವವಾದ ಜೀವನ ದೃಷ್ಟಿಯ ಪೂರ್ಣ ಸ್ವರೂಪವೂ, ಧಾರ್ಮಿಕ ಮತ್ತು ಅರಸುತನದ ಒಡಿತಗಳನ್ನು ಕಿತ್ತೊಗೆದು ಸ್ವತಂತ್ರ ಚಿಂತನವನ್ನೇ ನಂಬಿರುವವನ ವೇದ ಮಂತ್ರವೂ, ಅಂದು ಲೋಕಮಾನ್ಯವೆನಿಸಿದ ಕ್ಲ್ಯಾಸಿಕಲ್ ಭಾಷೆಗಳ ಸಾಲಿನಲ್ಲಿ ನಿಲ್ಲುವ ಯೋಗ್ಯತೆಯನ್ನು ಇಂಗ್ಲಿಷ್ ಭಾಷೆಗೆ ಕೊಟ್ಟ ಮಹಾಕಾವ್ಯವೂ ಆಗಿ 'ಪ್ಯಾರಡೈಸ್ ಲಾಸ್ಟ್' ಅವತರಿಸಿತು. ಬೈಬಲ್ ಉಲ್ಲೇಖದಂತೆ, ದೇವರು ತಮಗೆ ಹಾಗೂ ತಮ್ಮ ವಂಶಜರಿಗೆ ಉಚಿತವಾಗಿ ಕೊಟ್ಟ ಅನೇಕಾನೇಕ ದೈಹಿಕ, ಬೌದ್ಧಿಕ ಹಾಗೂ ಆಧ್ಯಾತ್ಮಿಕ ಸವಲತ್ತುಗಳನ್ನು, ಆದಿ ಮಾನವ ದಂಪತಿಗಳು, ಸೇಟನನೆಂಬ ಪತಿತ ದೂತನ ಪ್ರಲೋಭನೆಗೆ ಒಳಗಾಗಿ ಕಳೆದುಕೊಂಡರು ಎಂಬುದು ಈ ಮಹಾಕಾವ್ಯದ ವಸ್ತು. ನಂದನವನದಲ್ಲಿರುವ ಭಾಗ್ಯವನ್ನು ಕಳೆದುಕೊಂಡಿರುವ ಆ್ಯಡಮನಿಗೆ ಮೈಕೆಲ್ ದೇವದೂತನು ಇನ್ನು ಮುಂದೆ ಬರಲಿರುವ ರಕ್ಷಕನ ರಕ್ಷಣಾಕಾರ್ಯವನ್ನು ತಿಳಿಸುತ್ತಾನೆ.[2] ಯೇಸುಕ್ರಿಸ್ತನೇ ರಕ್ಷಕನಾಗಿ ಬಂದು ಮನುಕುಲವನ್ನು ಆದಿ ದಂಪತಿಗಳ ಪಾಪದಿಂದಾಗಿ ಉಂಟಾದ ವಾಂಶಿಕ ಪಾಪದಿಂದಲೂ ತತ್ಪರಿಣಾಮವಾಗಿ ಮನುಷ್ಯರು ಮಾಡಲಿರುವ ವೈಯಕ್ತಿಕ ಪಾಪಗಳಿಂದಲೂ ಮುಕ್ತಗೊಳಿಸುವನು ಎಂಬುದರ ಸೂಚನೆ 'ಪ್ಯಾರಡೈಸ್ ಲಾಸ್ಟ್'ನಲ್ಲಿ ಇದೆ. ಈ ಸೂಚನೆಯು ಮುಂದಿನ ಕಾವ್ಯದಲ್ಲಿ ವಿಸ್ತರಿಸಲ್ಪಟ್ಟು ವಿಶದವಾಗುವುದು ಎಂದು ನಾವು ನಿರೀಕ್ಷಿಸಬಹುದು.

'ಪ್ಯಾರಡೈಸ್ ರಿಗೇಯ್ನ್ಡ್'–ಇದರ ಕಾವ್ಯವಸ್ತುವಿನ ಮೂಲವು ಬೈಬಲಿನ ಹೊಸ ಒಡಂಬಡಿಕೆಯಲ್ಲಿ ಸೈಂಟ್ ಲೂಕ್ ಬರೆದ ಸುವಾರ್ತೆಯಲ್ಲಿ ಇದೆ. ಇಲ್ಲಿ ಹೇಳಿರುವಂತೆ ಯೇಸುಕ್ರಿಸ್ತನು ಧರ್ಮಬೋಧನೆ, ದಲಿತ ಸೇವೆ ಕೈಗೊಳ್ಳುವ ಮೊದಲು, ಪವಿತ್ರಾತ್ಮನು ಅವನನ್ನು ಮರುಳುಗಾಡಿನ ಪ್ರದೇಶಕ್ಕೆ

---

1 Milton J., *Poetical Works* with Introductions by David Masson, Macmillan & Co., London, 1893: P 283

2 *Paradise lost*, XII 393 et. sq.,; 402–3; 415–19 (References to Mason's edition as above)

ಕೊಂಡೊಯ್ದನು. ಅಲ್ಲಿ ಸೇಟನನ ಪ್ರಲೋಭನೆಗಳನ್ನು ಅವನು ಎದುರಿಸಬೇಕಾಗಿತ್ತು. ಪ್ರಲೋಭನೆ ಎಂಬ ಮಾತನ್ನು "temptation" ಎಂಬ ಅರ್ಥದಲ್ಲಿ ಪ್ರಯೋಗಿಸಿದ್ದೇನೆ2a ಪಾಪ ಕರ್ಮಗಳತ್ತ ಇರುವ ಅಥವಾ ಉಂಟಾಗುವ ಸೆಳೆತ. ಪ್ರಚೋದನೆಯೇ ಪ್ರಲೋಭನೆ. ಬೈಬಲಿನಲ್ಲಿ ಹೇಳಿರುವಂತೆ ನಲ್ವತ್ತು ದಿನ ಯೇಸುಕ್ರಿಸ್ತನು ಕಠೋರ ತಪಸ್ಸನ್ನು ಆಚರಿಸಿದನು. ಆ ಮೇಲೆ ಮೂರು ಮುಖ್ಯ ವಿಧಗಳಲ್ಲಿ ಅವನು ಪ್ರಲೋಭನೆಗಳಿಗೆ ಒಳಗಾದನು. ಮೊದಲನೆಯದಾಗಿ ತನ್ನ ದೈಹಿಕ ಹಿತಕ್ಕಾಗಿ ತನ್ನ ದೈವಿಕವಾದ ಪವಾಡದ ಶಕ್ತಿಯನ್ನು ವಿನಿಯೋಗಿಸಲು ಸೆಳೆತ. ಎರಡನೆಯದಾಗಿ ಲೋಕದಲ್ಲಿ ಪ್ರತಿಷ್ಠಾಪಿತ ಚಕ್ರವರ್ತಿಯಾಗಿ ಮೆರೆದು ವಿಜೃಂಭಣೆಯಿಂದ ತನ್ನ ರಕ್ಷಣಾ ಕಾರ್ಯವನ್ನು ನೆರವೇರಿಸಲು ಕರೆ. ಮೂರನೆಯದು ಜನಸಾಮಾನ್ಯರನ್ನು ಬೆರಗುಗೊಳಿಸಿ. ಕ್ಷುಲ್ಲಕ ಜನಪ್ರಿಯತೆ ಸಂಪಾದಿಸಿ. ಸಾಮೂಹಿಕ ಹೊಗಳಿಕೆ ಘೋಷಣೆಗಳನ್ನು ಪಡೆದು ರಕ್ಷಣಾ ಕಾರ್ಯವನ್ನು ನೆರವೇರಿಸಲು ಆಹ್ವಾನ.

ಈ ಮೂರು ಪ್ರಲೋಭನೆಗಳನ್ನು ಯೇಸುವು ದೃಢಚಿತ್ತದಿಂದ ಎದುರಿಸಿದನು. ಸೇಟನನು ಬೈಬಲನ್ನು ಉದ್ಧರಿಸಿ ತನ್ನ ದುಷ್ಕಾರ್ಯವನ್ನು ಸಮರ್ಥಿಸುವಾಗ, ಯೇಸುವೂ ಬೈಬಲಿನ ಸೂಕ್ತ ವಚನಗಳಿಂದ ಅವನ ತಪ್ಪನ್ನು ಅವನಿಗೆ ತೋರಿಸಿ ಕೊಟ್ಟನು.

ಪ್ರಸ್ತುತ ಕಾವ್ಯದಲ್ಲಿ ಯೇಸುವಿಗೆ ಬಂದೊದಗಿದ ಪ್ರಲೋಭನೆಗಳನ್ನು ಹೇಳಿದೆ. ಬೈಬಲಿನಲ್ಲಿ ಇರುವ ವಿಚಾರಕ್ಕೆ ಕಾವ್ಯವು ಎಷ್ಟರ ಮಟ್ಟಿಗೆ ನಿಷ್ಠವಾಗಿದೆಯೆಂದು ಕೆಳಗಿನ ಸಂವಾದಿ ಭಾಗಗಳಿಂದ ಕಾಣಬಹುದು.

ಬೈಬಲ್:

"And Jesus, full of the Holy Spirit, returned
from the Jordan, and was led by the Spirit
for forty days in the wilderness, tempted
by the devil. And he ate nothing in those
days;and when they were ended, he was hungry."3

'ಪ್ಯಾರಡೈಸ್ ರಿಗೇಯ್ನ್ಡ್' :

Meanwhile the Son of God........
....
One day forth walked alone, the Spirit leading
And his deep thoughts........
....
He entered now the bordering desert wild"4
"Full forty days he apassed......
....
Nor tasted human food, nor hunger felt
Till those days ended"5

2a ಕ್ರಿಸ್ತನು ಎದುರಿಸಿದ ಪ್ರಲೋಭನೆಗಳ ಮುಖ್ಯ ಸ್ವರೂಪವು ದೇವರತ್ತ ಇರಬೇಕಾದ ವಿಧೇಯತೆಯ ಪರೀಕ್ಷೆ. ಅಲ್ಲದೆ ಇನ್ನಿತರ ಪುರಾಣಗಳಲ್ಲಿದ್ದ ಸಾಂಸಾರಿಕ ಜೀವನದತ್ತ ಸೆಳೆತವು ಅಲ್ಲ.

3 *Luke* IV, 1–2 (All bible references from Revised Standard Version, Catholic Edition C.T.S., London, 1966)

4 I, 183, 189–90; 193.

5 I, 303; 308–9

ಬೈಬಲ್:

> The devil said to him, "If you are the
> Son of God. command this stone to
> become bread."6

ಪ್ಯಾರಡೈಸ್ ರಿಗೇಯ್ನ್ಡ್:

> "But if thou be the Son of God, command
> That out of these hard stones be made thee bread"7

ಬೈಬಲಿನ ಉಳಿದ ಸಂವಾದಿ ವಾಕ್ಯಗಳನ್ನು ಇದೇ ರೀತಿಯಲ್ಲಿ ಗುರುತಿಸಬಹುದು8.

ಹೀಗೆ ಪಟ್ಟಿ ಮಾಡಿದ ಚರಣಗಳನ್ನು ಜೋಡಿಸಿ ಓದಿದರೆ ಲೂಕ್, IV 1–13 ಈ ಬೈಬಲ್ ಭಾಗವೇ ಪದ ಜೋಡಣೆ ಪರಿವೃತ್ತಿಗೊಂಡು ದೊರಕುತ್ತದೆ. ಇಡೀ ಕಾವ್ಯದಲ್ಲಿ ಇದಿಷ್ಟೇ ಇದ್ದರೆ ಮಹಾಕಾವ್ಯದಷ್ಟು ವ್ಯಾಪ್ತಿಯು ಈ ಕೃತಿಗೆ ಬರುತ್ತಿರಲಿಲ್ಲ. ಈ ವಿವೇಚನೆಗೆ ಆಸ್ಪದವೂ ಇರುತ್ತಿರಲಿಲ್ಲ. ಪ್ರಸ್ತುತ ನಮಗೆ ಬೇಕಾದುದು ಬೈಬಲ್ ಕಥನಕ್ಕೆ ಮಿಲ್ಟನನು ಸೇರಿಸಿದ ಅಂಶಗಳು ಯಾವುವು, ಅದರಲ್ಲಿ ಅವನು ಮಾರ್ಪಡಿಸಿರುವ ಅಂಶಗಳು ಯಾವುವು ಮತ್ತು ಅದರಲ್ಲಿ ಕೆಲವು ಅಂಶಗಳನ್ನು ಬಿಟ್ಟಿದ್ದರೆ, ಆ ಅಂಶಗಳು ಯಾವುವು ಎಂದು.

1

ಇದರ ಮೊದಲು ಬೈಬಲ್ ಕಥಾನಕದ ವಿವರವೂ ಕ್ರೈಸ್ತ ಧರ್ಮಶಾಸ್ತ್ರದಲ್ಲಿ ಯೇಸುವಿನ ಪ್ರಲೋಭನೆಗಳಿರುವ ಸ್ಥಾನವೂ ವಿಶದವಾಗಬೇಕು. "and was led by the spirit" ಎಂಬಲ್ಲಿ "led" ಎಂಬ ಇಂಗ್ಲಿಷ್ ಪದಕ್ಕೆ 'ಒಯ್ಯಲ್ಪಟ್ಟರು' ಎಂದು ಒಂದು ಭಾಷಾಂತರದಲ್ಲಿಯೂ9 'ದೇವ

---

6 *Luke* IV, 3.

7 I, 342–3.

8

Luke IV, 4–	*Paradise Regained*	I, 349–50 (Masson's edition, as in 1)
5		III, 251 et. sq.
6		IV, 103–4
7		IV, 166–7
8		IV, 175–6
9		IV, 541–8; 555
10		IV, 556–7.
11		IV, 558–9
12		IV, 560–1
13		IV, 562.

9 ಸಂತ ರಾಯಪ್ಪರ ಗುರುಮಠ, ಬೆಂಗಳೂರು–ಇಲ್ಲಿಯ ಕನ್ನಡ ಸಂಘ, ರಕ್ಷಕರಾದ ಜೇಸು ಕ್ರಿಸ್ತನಾಥರ ಪೂಜ್ಯ ಸುಸಂದೇಶ, ಸಂತ ಫಿಲೋಮಿನಮ್ಮನವರ ಮುದ್ರಣಾಲಯ, ಮೈಸೂರು, 1962; ಪು. 220

ರಾತ್ಮನಿಂದ ನಾಲ್ವತ್ತು ದಿನ ನಡಿಸಲ್ಪಡುತ್ತಾ' ಎಂದು ಇನ್ನೊಂದು ಭಾಷಾಂತರದಲ್ಲಿಯೂ10 ಕನ್ನಡ ರೂಪಗಳು ಸಿಗುತ್ತವೆ. ಯೇಸುಕ್ರಿಸ್ತನ ಸುವಾರ್ತೆಗಳಲ್ಲಿ (gospels) ಸಕೃದ್ವೀಕ್ಷ್ಯ (synoptic) ಸುವಾರ್ತೆಗಳೆಂಬ ಮೂರು ಸಂವಾದಿ ಗ್ರಂಥಗಳಿವೆ. ಇಂಥವುಗಳಲ್ಲಿ ಮಾರ್ಕನ ಸುವಾರ್ತೆಯಲ್ಲಿ ಬರುವ ''led'' ಪದಕ್ಕೆ ಸಂವಾದಿಯಾದ ಮೂಲ ಗ್ರೀಕ್ ಪದವನ್ನು ಬೋಸು. ಎ ಎಂಬ ಪ್ರಸಿದ್ಧ ವ್ಯಾಖ್ಯಾನಕಾರನು. ''According to St. Mark, he (Jess) was thrown, carried of. driven there'' ಎಂದು ವಿವರಿಸಿದ್ದಾನೆ.

ಈ ವ್ಯಾಖ್ಯಾನದಿಂದಾಗಿ ಯೇಸುವು ದೇವರಾತ್ಮನ ತೀವ್ರ ಒತ್ತಡಕ್ಕೆ ಒಳಗಾಗಿ ಮರುಳುಗಾಡಿಗೆ ಒಯ್ಯಲ್ಪಟ್ಟನೆಂದಾಗುತ್ತದೆ. ಈ ಪ್ರಸಂಗಗಳ ಪ್ರಮುಖತೆಗೆ ಇದು ಒಂದು ಕಾರಣ ಎನ್ನಬಹುದು.

ನಲ್ವತ್ತು ದಿನಗಳ ಕಾಲ ಯೇಸುವು ಧ್ಯಾನದಲ್ಲಿ ನಿರತನಾದನೆಂದರೆ. ಸಾಕಷ್ಟು ದೀರ್ಘ ಅವಧಿಯಲ್ಲಿ ಅವನು ಕಠೋರ ತಪಸ್ಸನ್ನು ಮಾಡುತ್ತಿದ್ದನೆಂದು ಅರ್ಥಮಾಡಿಕೊಳ್ಳಬೇಕು. ನಲ್ವತ್ತು ದಿನಗಳ ಪ್ರಸ್ತಾಪ ಅನ್ಯತ್ರ ಬೈಬಲಿನಲ್ಲಿ ಬಂದಾಗಲೂ ಇದೇ ವ್ಯಾಖ್ಯಾನವನ್ನು ವಿದ್ವಾಂಸರು ನೀಡುತ್ತಾರೆ. ಮೂರು ಪ್ರಲೋಭನೆಗಳನ್ನು ಸೇಟನನು ಆ ದೀರ್ಘ ಅವಧಿಯ ಅನಂತರ ಕ್ರಮವಾಗಿ ಒಡ್ಡಿದನು ಎಂದು ಅರ್ಥ ಮಾಡಿಕೊಳ್ಳುವುದಕ್ಕಿಂತ ಆ ದೀರ್ಘ ಅವಧಿಯಲ್ಲಿ ಸತತವಾಗಿಯೂ ಯೇಸುವು ಅಂಥ ಪ್ರಲೋಭನೆಗಳಿಗೆ ಒಳಗಾಗಿದ್ದನೆಂದೂ. ಆ ಪ್ರಲೋಭನೆಗಳು ಮುಖ್ಯವಾಗಿ ಮೂರು ರೀತಿಯವು ಆಗಿದ್ದವು ಎಂದೂ ನಾವು ತಿಳಿದುಕೊಳ್ಳಬೇಕು12. ಪಲೆಸ್ತೀನ್ ದೇಶಕ್ಕೆ ಯಾತ್ರಾರ್ಥಿಗಳಾಗಿ ಹೋದ ಪ್ರಾಚೀನ ಐರೋಪ್ಯರು ಜುಡಾ ಮರುಳುಗಾಡಿನಲ್ಲಿದ್ದ ಕಲ್ಲುಗಳನ್ನು 'ಲಾಪಿಸ್ ಯುದೈಕುಸ್' ಎಂದು ಕರೆಯುತ್ತಿದ್ದರು. ಆ ಕಲ್ಲುಗಳು ರೊಟ್ಟಿಯಂತೆ ಕಾಣುತ್ತಿದ್ದುವು ಎಂಬುದಾಗಿಯೂ ಯಾತ್ರಿಕರು ವರದಿ ಮಾಡಿದ್ದರು13. ಅಂದು ಪ್ರಚಲಿತವಾಗಿದ್ದ ಒಂದು ಐತಿಹ್ಯದ ಪ್ರಕಾರ ಯೆಹೂದ್ಯರನ್ನು ರಕ್ಷಿಸಲು ಬರುವ ಮೆಸ್ಸಾಯನು (ರಕ್ಷಕನು) ಜೆರೂಜಲೆಮ್ ದೇವಾಲಯದ ಮಹಾಗೋಪುರದ ಮೇಲೆ ಕಾಣಿಸಿಕೊಳ್ಳುವನೆಂದಿತ್ತು14. ಈ ವಿಚಾರಗಳಿಂದ ತಿಳಿದು ಬರುವ ಅಂಶಗಳೇನೆಂದರೆ ಯೇಸುವು ಎದುರಿಸಿದ ಅತಿತಾತ್ತ್ವಿಕ ಪ್ರಲೋಭನೆಗಳ ಸ್ವರೂಪವನ್ನು ಸಾಮಾನ್ಯವಾಗಿ ಎಲ್ಲರಿಗೆ ಅರ್ಥವಾಗುವ ರೀತಿಯಲ್ಲಿ. ನೈಸರ್ಗಿಕ ಹಾಗೂ ಜನರ ನಂಬಿಕೆಯ ಆಧಾರಗಳೊಂದಿಗೆ. ಪ್ರಥಮ ಶಿಷ್ಯರು ವರದಿ ಮಾಡಿದ್ದರು. ಇಲ್ಲವೆ ಸುವಾರ್ತೆಕಾರರು ಬರೆದಿಟ್ಟರು.

ಪ್ರಲೋಭನಾವೃತ್ತಾಂತವು ಎಲ್ಲ ಸಕೃದ್ವೀಕ್ಷ್ಯ ಸುವಾರ್ತೆಗಳಲ್ಲಿ ಇದೆ. ಮಾರ್ಕನ ವೃತ್ತಾಂತದಲ್ಲಿ ಎರಡೇ ವಚನಗಳಲ್ಲಿ ಇದರ ವಿವರ ಮುಗಿಸಿದೆ. ಮ್ಯಾಥ್ಯು–ಇವನ ವೃತ್ತಾಂತವು ಲೂಕನ ವೃತ್ತಾಂತದ ಹಾಗೆಯೇ ಇದೆ, ಆದರೆ ಎರಡನೆಯ ಮತ್ತು ಮೂರನೆಯ ಪ್ರಲೋಭನೆಗಳ ಕ್ರಮವು ತದ್ವಿರುದ್ಧವಾಗಿದೆ. ಪ್ರಲೋಭನೆಗಳ ಕಾಟ ಮುಗಿದ ಮೇಲೆ ದೇವದೂತರು ಯೇಸುವನ್ನು ಉಪಚರಿಸಿದರು ಎಂಬುದನ್ನು ಲೂಕ್ ಒಬ್ಬನೇ ಹೇಳುವುದಿಲ್ಲ.

ಸಾಮಾನ್ಯ ಕ್ರೈಸ್ತರ ನಂಬಿಕೆಗಳಲ್ಲಿ ಪ್ರಲೋಭನಾ ವೃತ್ತಾಂತಕ್ಕೆ ಹೆಚ್ಚು ಮಹತ್ತ್ವ ಇರುವುದು ಕಾಣುವುದಿಲ್ಲ. ಯೇಸುಕ್ರಿಸ್ತನು ತನ್ನ ಜೀವನ, ಮರಣ ಮತ್ತು ಪುನರುತ್ಥಾನದಿಂದ ಲೋಕರಕ್ಷಣೆ ಮಾಡಿದ ಎಂಬ ನಂಬಿಕೆಯಲ್ಲಿ ಜೀವನ ಎಂದಾಗ. ಜೀವನದ ಎಲ್ಲಾ ಘಟನೆಗಳು ಅವಶ್ಯವಾಗಿ ಬರಬೇಕು. ಒಂಟಿ

---

10 ಇಂಡಿಯಾ ದೇಶಗಳ ಸತ್ಯವೇದ ಸಂಘ, ಬೆಂಗಳೂರು, ಸತ್ಯವೇದವು, ಹೊಸ ಒಡಂಬಡಿಕೆ; ಪು.70

11 Corte, Nicolas, *Who is the Devil*, Burns & Oates, London, 1958: P 36.

12 id., p. 38

13 id., p. 38.

14 id., p. 40, foot–note.

ಯಾಗಿದ್ದಾಗ ಪ್ರಲೋಭನೆಗಳ ಜಂಜಡವನ್ನು ಎದುರಿಸಿದ ಯೇಸುವು, ಅವುಗಳ ಪ್ರಮುಖತೆಯನ್ನು ಅರ್ಥಮಾಡಿಕೊಂಡಿದ್ದುದರಿಂದ, ತಾನಾಗಿಯ್ಖೆ ಶಿಷ್ಯರಿಗೆ ಅವುಗಳ ವೃತ್ತಾಂತವನ್ನು ತಿಳಿಸಿದ್ದಿರಬೇಕು. ಈ ರೀತಿಯಲ್ಲಿ ಮಾತ್ರ ಈ ಕಥನವು ನಮಗೆ ಲಭಿಸಿರುವುದು ಸಾಧ್ಯ. ಎಂದ ಮೇಲೆ ಪ್ರಲೋಭನೆಗಳು ಯೇಸುವಿನ ಜೀವನದ ಮುಖ್ಯಾಂಶಗಳಲ್ಲಿ ಒಂದು ಎಂದಾಗುತ್ತದೆ15. ಹೀಗಿದ್ದರೂ ಆದಿದಂಪತಿಗಳ ಪಾಪದಿಂದಾಗಿ ಪತಿತ ಮಾನವಕುಲವನ್ನು ಯೇಸುಕ್ರಿಸ್ತನು ಉದ್ಧಾರ ಮಾಡಿದನು ಎಂದಾಗ, ಪ್ರಲೋಭನಾ ಪ್ರಸಂಗವು ಆ ಉದ್ಧಾರ ಕಾರ್ಯದಲ್ಲಿ ಭಾಗವಹಿಸಿದೆ ಎಂದು ಒಪ್ಪಿಕೊಳ್ಳಬೇಕಿದ್ದರೂ, ಯೇಸುವಿನ ಕಷ್ಟಪಡುವಿಕೆ ಹಾಗೂ ಮರಣವು ಮುಖ್ಯವೆನ್ನುವ, ಉಳಿದ ಎಲ್ಲಾ ಜೀವನ ಕಾರ್ಯವನ್ನು ಹಿನ್ನೆಲೆಗೆ ತಳ್ಳುವ ಪ್ರವೃತ್ತಿಯು ಸಾಮಾನ್ಯ ಭಕ್ತರಲ್ಲಿ, ಜನಪ್ರಿಯ ಪ್ರವಚನ, ಮತ್ತು ಭಕ್ತಿಕೀರ್ತನೆ, ಪ್ರಾರ್ಥನೆಗಳು- ಇವುಗಳ ಪ್ರಭಾವದಿಂದಾಗಿ ಬಲವಾಗಿದೆ. ಆದರೆ ವಿದ್ವಾಂಸರಲ್ಲಿ ಮತ್ತು ಈ ಕುರಿತು ಸ್ವಲ್ಪ ಹೆಚ್ಚು ಪರಿಭಾವಿಸಿದವರಲ್ಲಿ ಇಂಥಹ ಅಪೂರ್ಣ ತಿಳುವಳಿಕೆಯು ಇರುವುದಿಲ್ಲ.

ಆದಿ ದಂಪತಿಗಳು ಸೇಟನನ ಬಲೆಗೆ ಬಿದ್ದಾಗ, ತಮ್ಮನ್ನೂ ತಮ್ಮ ವಂಶವನ್ನೂ ಅವನಿಗೆ ಮಾರಿ ಕೊಂಡಿದ್ದರು ಎಂದು ಕ್ರೈಸ್ತ ಧರ್ಮದ ಆದ್ಯ ಪ್ರವರ್ತಕರು ನಂಬಿದ್ದರು16. ಹೇಗಿದ್ದರೂ ಆ್ಯಡಮನ ವಂಶದ ಮೇಲೆ ಸೇಟನನ ಹಿಡಿತವನ್ನು ಅಲ್ಲಗಳೆಯುವುದಕ್ಕೆ ಆಗದು, ಸೇಟನನ್ನು ಅಂಥಹ ಅಧಿಕಾರದಿಂದ ತಳ್ಳಿ ಹಾಕುವುದೇ ಮಾನವಕುಲದ ವಿಮೋಚನೆ (redemption) ಎಂದು ಕೋರ್ಟೆ ಅಭಿಪ್ರಾಯ ಪಟ್ಟಿದ್ದಾನೆ17. ಯೇಸುವಿನ ಜೀವನ ಮತ್ತು ಸಾವು, ಸೇಟನನ ವಿರುದ್ಧ ನಡೆಸಿದ ಹೋರಾಟವೆಂದೂ (confrontation, encounter) ಅದರಲ್ಲಿ ಯೇಸುವು ವಿಜಯಿಯಾದನೆಂದೂ ಸಹಜವಾಗಿ ಅರ್ಥವಿಸಬಹುದು ಎಂದು ಇವನು ಹೇಳುತ್ತಾನೆ18. ಇಂಥ ಹೋರಾಟದ ಪ್ರಪ್ರಥಮ ಹಾಗೂ ಖಡಾ ಖಂಡಿತವಾದ ಹೊಡೆತವು ಮರುಳು ಗಾಡಿನ ಪ್ರಲೋಭನೆಗಳಲ್ಲಿ ಸೇಟನನಿಗೆ ಆದ ಪರಾಭವ. ಇಲ್ಲಿ ಯೇಸುವು ಸೇಟನನನ್ನು ನಿರ್ಣಾಯಕವಾಗಿ ಗೆಲ್ಲುತ್ತಾನೆ. ಇದರ ಅನಂತರ ಅನೇಕ ದೆವ್ವ ಹಿಡಿದವರನ್ನು ಗುಣಪಡಿಸುವುದು, ಭೀಕರ ಯುದ್ಧಾನಂತರ ನಡೆಯುವ ಚಿಕ್ಕಪುಟ್ಟ ಘರ್ಷಣೆಗಳಷ್ಟೆ19. ಆದರೆ ಇದು ವಿಷಯದ ಒಂದು ಮುಖ ಮಾತ್ರ. ಯೇಸುವಿನ ಜೀವನ ಮತ್ತು ಸಾವಿನಿಂದ ಪಾಪಕ್ಕಾಗಿ ಅವನು ಪ್ರಾಯಶ್ಚಿತ್ತ ಮಾಡಿರುವನೆಂಬ ನಂಬಿಕೆಯು ಇನ್ನೊಂದು ಮುಖ20. ಯೇಸುವಿನ ಇಹಲೋಕ ಜೀವನವನ್ನು ಈ ಎರಡು ದೃಷ್ಟಿಗಳಿಂದ ನೋಡತಕ್ಕದ್ದು. ಹೀಗೆ ನೋಡಿದಾಗ ಪ್ರಲೋಭನಾ ವೃತ್ತಾಂತದ ಸ್ಥಾನವು ನಮಗೆ ಗೋಚರವಾಗುತ್ತದೆ. ಮುಕ್ತಿ ತಂದೊದಗಿಸುವ ಸಂರಕ್ಷಕ ಕ್ರಿಯೆಗಳಲ್ಲಿ ಇದು ಒಂದು ಅಲ್ಪವೆನ್ನಲಾಗದ ಕ್ರಿಯೆ. ಸೇಟನನ ಅಧಿಕಾರವ್ಯಾಪ್ತಿಯನ್ನು ಕಡಿದು ಹಾಕುವುದರಲ್ಲಿ ಇದು ಮೊದಲ ಘಟನೆ.

ಮೆಕ್‌ಕಿಂಜಿಯುವರು ಇನ್ನೊಂದು ಅರ್ಥವನ್ನು ಸೂಚಿಸಿದ್ದಾರೆ. ಈ ಪ್ರಸಂಗದ ವಿವರಣೆಯನ್ನು ವಾಸ್ತವ ಘಟನೆಗಳಲ್ಲಿ ಅರಸುವುದಕ್ಕಿಂತ ಧರ್ಮ, ತತ್ತ್ವ ಸಂಕೇತ ಪದ್ಧತಿಯಲ್ಲಿ ಅರಸುವುದು ಸೂಕ್ತ ವಾದೀತು ಎಂದು ಇತ್ತೀಚಿನ ವ್ಯಾಖ್ಯಾನಕಾರರು ನಂಬಿರುತ್ತಾರೆ. ಯೇಸುವು ಯಾವ ಸ್ವಭಾವದ ಮೆಸ್ಸಾಯನೆಂದು ಸೂಚಿಸುವುದರಿಂದ ದೇವರ ವಾಕ್ಯದಿಂದಲೇ ಬದುಕಿರುವ ಮತ್ತು ಈ ಲೋಕವನ್ನು ಆರಾಧಿಸದೆ, ಅದರ ಸೇವೆಗೈಯದೆ, ದೇವರೊಬ್ಬನನ್ನೇ ಆರಾಧಿಸಿ ಅವನ ಸೇವೆ ಮಾಡುವ ನೂತನ

---

15 id., p. 36.

16 id., p. 45.

17 id., p. 45

18 id., p.34.

19 Best, Ernest, *the Temptations and the Passion, the Markan Soteriology,* Cambridge University Press, 1965: p.15.

20 *I Corinthians,* XV, 3–4.

ಇಸ್ರಯೇಲಿನ ಎಂದರೆ ಧರ್ಮ ಸಭೆಯ (Chruch) ಸೂಚನೆ ಈ ವೃತ್ತಾಂತದಲ್ಲಿ ಇದೆ. ತನ್ನ ಧರ್ಮ ಸಭೆಯು ಅನುಭವಿಸಲಿರುವ ಪ್ರಲೋಭನೆಗಳನ್ನು ಯೇಸುವು ಪೂರ್ವಭಾವಿಯಾಗಿ ವಿರೋಧಿಸಿ ನಿರಾಕರಿಸುತ್ತಾನೆ21.

ಸನಾತನ ಕ್ರೈಸ್ತಧರ್ಮವು ಯೇಸುವು ನಿಜವಾಗಿಯೂ ದೇವರು ಹಾಗೂ ನಿಜವಾಗಿಯೂ ಮನುಷ್ಯನು ಎಂದು ನಂಬಿಕೊಂಡಿದೆ. ಯೇಸುವು ಮನುಷ್ಯನಾಗಿದ್ದಾಗ ಮೂಲಪಾಪದ ದುಷ್ಪರಿಣಾಮಗಳಿಂದಾಗಿ ಅವನಲ್ಲೇ ಪಾಪದತ್ತ ಪ್ರೇರಣೆಗಳು ಹುಟ್ಟುವುವು ಎಂದರೆ ಅದು ಅವನ ದೇವತ್ವಕ್ಕೆ ಸರಿಹೋಗದು. ಪ್ರಸ್ತುತ ಪ್ರಸಂಗದಲ್ಲಿ ಪ್ರಲೋಭನೆಗಳು ಯೇಸುವಿನ ಹೊರಗಿನಿಂದ ಬಂದಿವೆ. ಸೇಟನನನ್ನು ದಮನಿಸಲಿಕ್ಕೆ ಅವಕಾಶವಾದುದಲ್ಲದೆ ಮುಂದೆ ಇಂಥ ಸಂದರ್ಭಗಳು ಬಂದಾಗ ಹೇಗೆ ವರ್ತಿಸುವುದು ಎಂಬುದಕ್ಕೂ ಯೇಸುವಿನ ಶಿಷ್ಯರಿಗೆ ಈ ಘಟನೆ ಮೂಲ ಮಾದರಿಯಾಯಿತು.

2

ಮಿಲ್ಟನನು ಎಷ್ಟರ ಮಟ್ಟಿಗೆ ಬೈಬಲ್ ಕಥನವನ್ನು ಮಾರ್ಪಡಿಸಿದ್ದಾನೆ ಎಂದು ನೋಡಬಹುದು. ಮೊತ್ತಮೊದಲಾಗಿ ಎರಡು ಮುಖ್ಯ ಮಾರ್ಪಾಡುಗಳನ್ನು ಗಮನಿಸಬೇಕು. ಬೈಬಲಿನಲ್ಲಿ ಯೇಸುವು ರಾಜಕೀಯ ಉದ್ಧಾರಕನು ಎಂದು ಎಲ್ಲಿಯೂ ಹೇಳಲಿಲ್ಲ ಮಾತ್ರವಲ್ಲ ತನ್ನ ಕಾರ್ಯವು ರಾಜಕೀಯವಲ್ಲ ಎಂಬ ಸ್ಪಷ್ಟ ಹೇಳಿಕೆಯನ್ನು ಯೇಸುವು ಪಿಲಾತನಿಗೆ ನೀಡಿದ್ದನು22. ಯೆಹೂದ್ಯರ ಅರಸು ಎಂಬು ಬಿರುದು ಯೇಸುವಿಗೆ ಇತ್ತಾದರೂ ಅದಕ್ಕೆ ಆಧ್ಯಾತ್ಮಿಕ ಅರ್ಥವೇ ಸರಿಯಾದ ಅರ್ಥ. ಯೆಹೂದ್ಯರನ್ನು ಪಾಪ ಕ್ಷೇತ್ರದಿಂದ ಪಾರುಮಾಡುವುದು ಯೇಸುವಿನ ಉದ್ದೇಶವಾಗಿತ್ತು ಅಲ್ಲದೆ ರೋಮನರ ಆಳ್ವಿಕೆಯಿಂದ ಪಾರುಮಾಡುವುದು ಆಗಿರಲಿಲ್ಲ. ಹೀಗಿದ್ದರೂ ಮಿಲ್ಟನನು ಯೇಸುವಿನ ಬಾಯಲ್ಲಿ ಈ ಮಾತುಗಳನ್ನು ಹಾಕುತ್ತಾನೆ:

> "....victorious deeds
> Flamed in my heart, heroic acts– one while
> To rescue Israel from the Roman yoke;
> Then to subdue and quell, o'er all the earth
> Brute violence and proud tyrannic power"23

ಈ ಮಾತುಗಳು ಅನ್ಯ ಸ್ವಭಾವವನ್ನು ಯೇಸುವಿಗೆ ಆರೋಪಿಸುತ್ತವೆ.

ಬೈಬಲಿನಲ್ಲಿ ಯೇಸುವು ನಿಜವಾದ ದೇವರು ಎಂಬುದನ್ನು ಅಲ್ಲಗಳೆಯುವ ಉದ್ದೇಶ ಸೇಟನನಿಗೆ ಇರಲಿಲ್ಲ.24 ಪ್ರಲೋಭನಾ ಪ್ರಸಂಗದ ಹೊರತು ಉಳಿದೆಡೆಯಲ್ಲೂ ಸೇಟನನ ಅನುಯಾಯಿಗಳಾದ ಇತರ ಪಿಶಾಚಿಗಳನ್ನು ಯೇಸುವು ಹೊರದಬ್ಬಿದಾಗ ಆ ಪಿಶಾಚಿಗಳಿಗೂ, ಸಾಮಾನ್ಯ ಮನುಷ್ಯರನ್ನು ದೇವರ ಪುತ್ರರು ಎನ್ನುವ ಅರ್ಥಕ್ಕಿಂತಲೂ ಮಿಗಿಲಾದ ಅರ್ಥದಲ್ಲಿ ಯೇಸುವು ದೇವರ ಪುತ್ರನು, ದೇವರಿಗೆ ಸರಿಸಮಾನನು ಎಂಬುದು ತಿಳಿದಿತ್ತು ಎಂದು ಅವರ ಮಾತುಗಳಿಂದ ನಾವು ಕಾಣಬಹುದು. ಆದರೆ

---

21 Mckenzie, John. L., *Dictionary of the Bible,* Geoffery Chapnan, London, 1965:p.879.

22 *John* XVIII, 36.

23 *P. R.*, I, 215–9.

24 Corte, p. 38.

ಮಿಲ್ಟನನ ಸೇಟನನಿಗೆ ಈ ನಂಬಿಕೆಯಲ್ಲಿ ವಿಶ್ವಾಸವಿಲ್ಲ. ಯೇಸುವು ಸಾಮಾನ್ಯ ಮನುಷ್ಯನಾಗಿರಬೇಕೆಂದೇ ಅವನ ಸಂದೇಹ. ಅವನನ್ನು ಪರೀಕ್ಷಿಸಲು ಅವನು ವಿವಿಧ ಪ್ರಲೋಭನೆಗಳನ್ನು ಒಡ್ಡುತ್ತಾನೆ.

"that I might learn
In what degree or meaning thou art called
The Son of God, which bears no single sense.
The Son of God I also am, or was;
And, if I was, I am; relation stands;
All men are sons of God;"25

ಈ ಮಾತುಗಳಿಂದ ಯೇಸುವು ಸಂಪೂರ್ಣವಾಗಿ ದೇವರು ಅಲ್ಲವೇನೋ ಎಂಬ ಅಂಶವು ಸೇಟನನ ಮನಸ್ಸಿನಲ್ಲಿ ಇತ್ತೆಂದು ಧ್ವನಿತವಾಗುತ್ತಿದೆ. ಇದು ಬೈಬಲಿನಲ್ಲಿ ಇರುವ ಕಥನಕ್ಕೆ ನಿಷ್ಠವಾಗಿಲ್ಲ.

ಯೇಸುವು ನಿಜವಾದ ಮನುಷ್ಯನೆಂದೂ ಸನಾತನ ಕ್ರೈಸ್ತ ಧರ್ಮದ ನಂಬಿಕೆ. ಎಂದರೆ ಸಾಮಾನ್ಯ ಮನುಷ್ಯನಂತೆಯೇ ಅವನು ಜೀವಿಸಿದ್ದನು. ಆದುದರಿಂದ ಬಾಲ್ಯದಲ್ಲಿ, ಬಡಗಿಯಾಗಿರುವಾಗ ಅವನು ಆಟವಾಡದೆ ಧ್ಯಾನದಲ್ಲಿಯೇ ನಿರತನಾಗಿರುವುದು ಅಸಂಭವನೀಯ–ಸಾಮಾನ್ಯವಾಗಿ ಅದು ನಡೆಯದು. ಯೇಸುವಿನ ತಾಯಿ ಮೇರಿ ಅಂದಿನ ಧರ್ಮಗ್ರಂಥಗಳನ್ನು ಅಭ್ಯಾಸಮಾಡಿಸಿದ್ದಳು ಎಂಬುದು ಸಹಜ. ಆದರೆ "no childish play to me was pleasing" 26 ಎಂದು ಯೇಸುವು ಹೇಳುವುದು ಸಹಜವಲ್ಲ; ಈ ವಾಕ್ಯದಿಂದಾಗಿ ಮಿಲ್ಟನನು ಬಾಲಕ ಯೇಸುವಿಗೆ ಅನ್ಯ ಸ್ವಭಾವವನ್ನು ಆರೋಪಿಸಿದ್ದಾನೆ ಎಂದು ತೋರುತ್ತದೆ.

ಇನ್ನು ಕೆಲವು ಚಿಕ್ಕ ಅಂಶಗಳು: ಯೇಸುವು ಮರುಳುಗಾಡಿಗೆ ಹೋಗುವ ಮೊದಲು ಬೆತಬರದಲ್ಲಿ ತಂಗಿದ್ದನು ಎಂದು ಬೈಬಲಿನಲ್ಲಿ ಹೇಳಿಲ್ಲ. ಮರುಳುಗಾಡಿಗೆ ಹೋಗುವ ಉದ್ದೇಶವು ತನ್ನ ಆ ವರೆಗಿನ ಜೀವನದ ಮತ್ತು ಮುಂದಿನ ಸೇವಾಕಾರ್ಯದ ಬಗೆಗೆ ಧ್ಯಾನಾಸಕ್ತನಾಗುವುದಕ್ಕೆ ಎಂಬುದಕ್ಕೂ ಪ್ರತ್ಯಕ್ಷ ಪ್ರಮಾಣವಿಲ್ಲ. ಮೇರಿಯ ಕಳವಳ, ಶಿಷ್ಯರ ಆತುರವೂ ಇಲ್ಲ. ಕೊನೆಯ ರಾತ್ರಿ ಪ್ರಕೃತಿಯ ಕೋಲಾಹಲದ ಮಾತು ಬೈಬಲಿನಲ್ಲಿ ಕಂಡುಬರುವುದಿಲ್ಲ.

ಮಿಲ್ಟನನು ನಲ್ವತ್ತು ದಿನಗಳ ಅವಧಿಯನ್ನು ಅಕ್ಷರಶಃ ಪಾಲಿಸಿದ್ದಾನೆ. ಮೂರು ಪ್ರಲೋಭನೆಗಳನ್ನು ಕ್ರಮವಾಗಿ ಮೂರುದಿನಗಳಲ್ಲಿ ನಡೆಯುವಂತೆ ಏರ್ಪಡಿಸಿದ್ದಾನೆ. ಮೊದಲನೆಯ ಪ್ರಲೋಭನೆಯಲ್ಲಿ ಮುದಿ ಒಕ್ಕಲಿಗನು ಬರುವುದು ಮಿಲ್ಟನನ ಕಲ್ಪನೆ. ಎರಡನೆಯ ದಿನ ಬೈಬಲಿನಲ್ಲಿ ಒಂದೇ ಬಾರಿ ಹೇಳಿದ ಹಸಿವಿನ ಪ್ರಲೋಭನೆಯನ್ನು ಎರಡನೆಯ ಬಾರಿಯೂ ತರುತ್ತಾನೆ. ಬೈಬಲಿನಲ್ಲಿ ಜಗತ್ತಿನ ರಾಜ್ಯಗಳನ್ನೆಲ್ಲಾ ಕೊಡುವೆನೆಂದು ಮಾತ್ರ ಸೇಟನನು ಹೇಳಿದ್ದನು. ಮಿಲ್ಟನನಲ್ಲಿ ಅಧಿಕಾರ ಲಾಲಸೆಯು ಈ ಕೊಡುಗೆಗೆ ಕಾರಣ ಎಂದಿದೆ. ಅಲ್ಲದೆ ಬೈಬಲಿನಲ್ಲಿ ಇಲ್ಲದ ಅಥೆನ್ಸ್ ನಗರದ ಬೌದ್ಧಿಕ ಹಾಗೂ ಕಲಾ ಪ್ರೌಢಿಮೆಯ ಆಕರ್ಷಣೆಯೂ ವರ್ಣಿತವಾಗಿದೆ. ಲೂಕನ ಪ್ರಸಂಗದಲ್ಲಿ ಇರದ, ಮ್ಯಾಥ್ಯೂ ಹೇಳಿರುವ27 ದೇವದೂತರ ಸೇವೆಯ ಮಾತನ್ನು ಮಿಲ್ಟನನು ಎತ್ತಿಕೊಂಡಿದ್ದಾನೆ.

ಪ್ರಲೋಭನಾವೃತ್ತಾಂತಕ್ಕೆ ಸೇರದಿದ್ದರೂ ಬೈಬಲಿನಲ್ಲಿದ್ದ ಕೆಲವು ಅಂಶಗಳನ್ನು ಮಿಲ್ಟನನು ಹೇಳಿದ್ದಾನೆ. ಯೇಸುವಿನ ಜನನ, ಬಾಲ್ಯ, ಜ್ಞಾನಸ್ನಾನ ಪ್ರಸಂಗ, ಭವಿಷ್ಯತ್ತಿನ ಸುಳುಹು, ಹಳೆಯ ಒಡಂಬಡಿಕೆಯ ಕೆಲವು ಉಪಾಖ್ಯಾನಗಳು, ಬೈಬಲಿನಲ್ಲಿ ಇಲ್ಲದ ಈ ವಿಚಾರಗಳನ್ನು ಮಿಲ್ಟನನು ಹೇಳಿದ್ದಾನೆ

---

25 *P. R.*, IV, 515–20.
26 *P. R.*, I, 201–2
27*Mathew*, IV, 11.

ಸೇಟನನ ಮತ್ತು ಅವನ ಕೇಡಿಗ ಕಿಬ್ಬಂದಿಯ ಮಹಾಸಭೆ. ಸಭೆಯಲ್ಲಿ ಚರ್ಚೆ. ನಿರ್ಣಯ ಅಂಗೀಕಾರ. ಮಿಲ್ಟನನಿಗೆ ತಿಳಿದಿದ್ದ ಭೂಗೋಳಶಾಸ್ತ್ರ, ಚರಿತ್ರೆ. ಗ್ರೀಕ್. ಲ್ಯಾಟಿನ್ ಆದಿ ಸಾಹಿತ್ಯದ ಕೆಲವು ಉಪಾಖ್ಯಾನಗಳ ರೂಪರೇಷೆಗಳು.

ಇನ್ನು ಇವುಗಳನ್ನು ತೃಪ್ತಿಕರವಾಗಿ ವಿವರಿಸುವುದು ಸಾಧ್ಯವೇ ಎಂದು ಪರಿಶೀಲಿಸಬೇಕಾಗಿದೆ.

3

ಚಿಕ್ಕಪುಟ್ಟ ವಿವರಗಳನ್ನು ಪರಿಶೀಲಿಸುವ ಮೊದಲು ಬೈಬಲ್ ಪ್ರಸಂಗವನ್ನು ಮಿಲ್ಟನ್ ನಿರ್ವಹಿಸುವಾಗ ಉದಯಿಸುವ ಎಲ್ಲ ಸಮಸ್ಯೆಗಳಿಗೆ ಕೀಲಿಕೈಯಂತಿರುವ ಒಂದು ಕೇಂದ್ರ ಪ್ರಶ್ನೆಯನ್ನು ನಾವು ಎದುರಿಸಬೇಕಾಗಿದೆ. ಯೇಸುವಿನ ಜೀವನದ ಇತರ ಎಲ್ಲಾ ಪ್ರಸಂಗಗಳನ್ನು ಬಿಟ್ಟು ಇದೊಂದನ್ನೇ ಕವಿ ಆರಿಸಲು ಕಾರಣವೇನು? ಸನಾತನ ಕ್ರೈಸ್ತರ ನಂಬಿಕೆಗಳಲ್ಲಿ ಪ್ರಲೋಭನಾ ವೃತ್ತಾಂತದ ಸ್ಥಾನವು ಅಲ್ಪವಲ್ಲ ಎಂದು ನಾವು ನೋಡಿದೆವು. ಸೇಟನನ ಪರಿಭವಕ್ಕೆ ಮೊದಲು ವಿನಾಶಿಕಾರಿ ಆಘಾತವಾಗಿ ಈ ವೃತ್ತಾಂತದಲ್ಲಿ ಯೇಸುವಿನ ವಿಜಯವು ಪರಿಗಣಿತವಾಗಿದೆಯೆಂದೂ ಈಗಾಗಲೇ ಹೇಳಿದೆ. ಆದರೆ ಕ್ರೈಸ್ತ ಧರ್ಮದಲ್ಲಿ ಯೇಸುವಿನ ಕೊನೆಯ ದಿನಗಳು. ಸಾವು. ಪುನರುತ್ಥಾನ–ಇವುಗಳ ಸ್ಥಾನವೂ ಅಲ್ಪವೇನಲ್ಲ. ಪ್ರಲೋಭನಾ ವೃತ್ತಾಂತದಲ್ಲಿ ಪಾಪದ ಸೆಳೆತವನ್ನು ನಿಗ್ರಹಿಸುವುದಕ್ಕೆ ಯೇಸುವು ಮಾದರಿಯಾಗಿದ್ದರೆ. ಯಾತನಾ ಪ್ರಸಂಗದಲ್ಲಿ (passion) ಕ್ರೈಸ್ತನ ಜೀವನದ ಕೇಂದ್ರ ತತ್ತ್ವವೇ ಆಗಿರುವ ಲೌಕಿಕ ಬಡತನ. ನಿಂದೆ. ಅಪಮಾನ. ದೈಹಿಕ ಸಂಕಷ್ಟಗಳ ಅಗ್ರಸ್ಥಾನ–ಇದರ ಪ್ರತಿಪಾದನೆ ಇದೆ. ಧಾರ್ಮಿಕ ಆಚಾರಗಳಲ್ಲಂತೂ ಯಾತನಾಪ್ರಸಂಗಕ್ಕೆ ಇರುವಷ್ಟು ಮಹತ್ತ್ವ ಪ್ರಲೋಭನಾಪ್ರಸಂಗಕ್ಕೆ ಇಲ್ಲವೇ ಇಲ್ಲ. ದಿನ ನಿತ್ಯದ ಪ್ರಾರ್ಥನೆ ಜಪಗಳಲ್ಲಿ ಅನೇಕಾನೇಕವರ್ತಿ ಭಕ್ತರು ಸ್ಮರಿಸುವುದು ಯಾತನಾಪ್ರಸಂಗವನ್ನು ಪ್ರಲೋಭನೆಗಳನ್ನಲ್ಲ.

'ಪ್ಯಾರಡೈಸ್ ಲಾಸ್ಟ್' ಕಾವ್ಯದಲ್ಲಿ ಪತನಕ್ಕೆ ಕಾರಣವಾದ ಮರಕ್ಕೆ ಕ್ಯಾಲ್ವರಿ ಬೆಟ್ಟದ ಶಿಲುಬೆಯ ಮರವು ಯೋಗ್ಯ ವಿರೋಧನ್ಯಾಸ (antithesis) ಆಗುತ್ತಿತ್ತು. ಅಥವಾ ಲಿಂಬೊ ಎನಲಾದ ಸ್ವರ್ಗನರಕಗಳ ನಡುವಿನ ಪ್ರದೇಶದಲ್ಲಿ ಸೇಟನನ ಪ್ರಭಾವದಿಂದ ಸ್ವರ್ಗಕ್ಕೆ ಪ್ರವೇಶ ದೊರಕದೆ ತೊಳಲುತ್ತಿದ್ದವರನ್ನು ಯೇಸುವು ಬಿಡುಗಡೆಗೊಳಿಸುವುದು ಮಿಲ್ಟನನ ಕಾವ್ಯಶಕ್ತಿಗೆ ಸರಿಯಾದ ಕಾವ್ಯವಸ್ತುವಾಗುತ್ತಿತ್ತು ಎಂದು ಬೇಲ್ಲಿ ಎಂಬವನು ಸೂಚಿಸಿದ್ದಾನೆ[28].

ಬ್ರುಕ್ ಎಂಬ ವಿಮರ್ಶಕನು ಮಿಲ್ಟನನು ಆರಿಸಿದ ವಿಷಯವನ್ನು ಕುರಿತು ಹಲವು ಜನ ಹರವಾರು ನಿರುಪಯುಕ್ತ ಪುಟಗಳನ್ನು ತುಂಬಿಸಿ ಇಟ್ಟಿದ್ದಾರೆ ಎಂದು ಈ ವಿಚಾರ ಎತ್ತುವವರ ಮೇಲೆ ಪ್ರತಿಬಂಧಕ ಅಸ್ತ್ರವನ್ನು ಹೂಡಿದ್ದಾನೆ[29]. ಆದರೆ ಈ ಪ್ರಶ್ನೆಯಲ್ಲಿ ತೊಡಕು ಸಾಕಷ್ಟು ಇದೆ ಎಂದು ನಾವು ಸದ್ಯದಲ್ಲೇ ತಿಳಿಯಬಹುದು.

ಹೆಚ್ಚಿನ ವಿಮರ್ಶಕರು ಮಿಲ್ಟನನು ಪ್ರಲೋಭನಾ ವೃತ್ತಾಂತವನ್ನೇ ಏಕೆ ತೆಗೆದುಕೊಂಡನು ಎಂಬುದಕ್ಕೆ ಈ ಕಾರಣಗಳನ್ನು ಕೊಡುತ್ತಾರೆ. (1) ಕ್ರೈಸ್ತ ಸಹೃದಯರ ಮನಸ್ಸಿನಲ್ಲಿ ಯಾವ ವಿಧದ ಧರ್ಮಸಂಕಟ. ಅಸಹನೆ ಉಂಟಾಗದಂತೆ ಯಾತನಾಪ್ರಸಂಗವನ್ನು ನಿರ್ವಹಿಸುವುದು ಕಷ್ಟ. (2) ಸುವಾರ್ತೆಕಾರರು ಯಾತನಾಪ್ರಸಂಗವನ್ನು ವಿವರ ವಿವರವಾಗಿ ಹೇಳಿದ್ದಾರೆ. ಆದರೆ ಪ್ರಲೋಭನಾಪ್ರಸಂಗವನ್ನು ಸ್ವಲ್ಪದರಲ್ಲಿ ಮುಗಿಸಿದ್ದಾರೆ. ಮೊದಲನೆಯದರಲ್ಲಿ ಕವಿ ಕಲ್ಪನಾ ಸ್ವಾತಂತ್ರ್ಯಕ್ಕೆ ಸ್ವಚ್ಛಂದವಾಗಿ ವಿಹರಿಸುವ

---

28 Bailey, John, *Milton*, Williams & Norgate, London, 1915 : p. 198

29 Brooke, S. A., *Milton*, Macmillan & Co., London, 1915 : p. 150

ಅವಕಾಶ ಇಲ್ಲ. ಎರಡನೆಯದರಲ್ಲಿ ಇದೆ. (3) ನಂದನವನದ ಪ್ರಲೋಭನೆ ಸಂವಾದಿಯಾಗಿ ಮರುಳುಗಾಡಿನ ಪ್ರಲೋಭನೆಯನ್ನು ವರ್ಣಿಸುವುದು ಉಚಿತವಾಗಿದೆ. (4) ಯೇಸುವಿನ ಜೀವನದಲ್ಲಿ ಪ್ರಮುಖ ಹಾಗೂ ನಿರ್ಣಾಯಕ ಪಾತ್ರಧಾರಿಯಾಗಿ ಸೇಟನನು ಕಾಣಿಸಿಕೊಳ್ಳುವುದು ಇಲ್ಲಿ ಮಾತ್ರ30 (5) ಯಾತನಾ ಪ್ರಸಂಗವನ್ನು ಕುರಿತಾದ "the passion" ಎಂಬ ಕವಿತೆಯನ್ನು ಮಿಲ್ಟನನು ಅಪೂರ್ಣವಾಗಿ ಬಿಟ್ಟು

> "This subject the author finding to be above the year he had when he wrote it, and nothing satisfied with what was begun, left it unfinished",

ಎಂಬ ಟಿಪ್ಪಣಿಯನ್ನು ಸೇರಿಸಿದ್ದಾನೆ.31

ಇಷ್ಟು ಯಾತನಾ ಪ್ರಸಂಗವನ್ನು ಕೈಬಿಡಲು ಕಾರಣಗಳು. ವಿಷಯ– ಇಷ್ಟೆ ಇದ್ದರೆ ಈ ಕಾವ್ಯದ ಅಧ್ಯಯನವು ಸುಗಮವೇ ಸರಿ. ಆದರೆ ಇನ್ನೂ ಕೆಲವು ಎಡರುಗಳು ಇವೆ. ಪ್ರಲೋಭನಾ ವೃತ್ತಾಂತವನ್ನು ಯಥಾಪ್ರಕಾರ ಎತ್ತಿಕೊಳ್ಳದೆ ಅಲ್ಲಿ ಯೇಸುವಿಗೆ ರಾಜಕೀಯ ಸ್ಪರ್ಶ ಕೊಟ್ಟಿರುವುದೇಕೆ? ಯೇಸುವು ನಿಜಕ್ಕೂ ದೇವರು ಎಂದು ನಂಬಿಕೆ ಇದ್ದಾಗ ಆ ನಂಬಿಕೆಯಲ್ಲಿ ಅನ್ಯಮನಸ್ಕತೆ ಕಾಣಬರುವುದು ಏಕೆ? ನಿಜಕ್ಕೂ ಮನುಷ್ಯನು ಎಂದು ನಂಬಿರುವ ಯೇಸುವಿನ ಬಾಲ್ಯದಲ್ಲಿ ಬಡಗಿ ವೃತ್ತಿಯ ಬಾಲಕನಲ್ಲಿ ಇರಬಾರದ ಗುಣಗಳನ್ನು ಆರೋಪಿಸಿರುವ ಕಾರಣ ಯಾವುದು? ಈ ಪ್ರಶ್ನೆಗಳು ಏಳುತ್ತವೆ.

ಮೊತ್ತ ಮೊದಲನೆಯದಾಗಿ 'ಪ್ಯಾರಡೈಸ್ ರಿಗೇಯ್ನ್ಡ್' ಕಾವ್ಯವನ್ನು ನಾವು ಯಾವ ರೀತಿಯಲ್ಲಿ ಅರ್ಥಮಾಡಿಕೊಳ್ಳಬೇಕು ಎಂಬುದು ಸ್ಪಷ್ಟವಾಗಬೇಕು. 'ಪ್ಯಾರಡೈಸ್ ಲಾಸ್ಟ್' ಕಾವ್ಯದಲ್ಲಿ ಮಿಲ್ಟನನು ತನ್ನ ವ್ಯಕ್ತಿತ್ವದ ನಿರ್ಭೀತ, ಸ್ವತಂತ್ರ ಮತ್ತು ಸ್ವಲ್ಪಮಟ್ಟಿಗೆ ಉದ್ಧಟ ಸ್ವಭಾವವನ್ನು ಕಾಣಿಸಿದ್ದನು ಎಂಬುದು ವಿಮರ್ಶಕರು ಸಾಮಾನ್ಯವಾಗಿ ಹೇಳುವ ಮಾತು32. 'ಪ್ಯಾರಡೈಸ್ ರಿಗೇಯ್ನ್ಡ್' ಕಾವ್ಯವು 'ಪ್ಯಾರಡೈಸ್ ಲಾಸ್ಟ್' ಪ್ರಕಟವಾಗುವಷ್ಟರಲ್ಲೆ ಸಿದ್ಧವಾಗಿತ್ತು ಎಂಬುದು ಈ ಮೊದಲು ಸೂಚಿತವಾಗಿದೆ. ಆದುದರಿಂದ 'ಪ್ಯಾರಡೈಸ್ ಲಾಸ್ಟ್'–ಇದರ ಬಗೆಗೆ ಬಂದ ವ್ಯಾಖ್ಯಾನಗಳಿಂದ ನಮ್ಮ ಸಮಸ್ಯೆಗಳಿಗೆ ಪರಿಹಾರ ಸೂಚನೆ ಸಿಗಬಹುದು ಎಂದು ನಾವು ಊಹಿಸಿದರೆ ತಪ್ಪೇನಾಗಲಿಕ್ಕಿಲ್ಲ.

ರೆವರೆಂಡ್ ರೋಜ್‌ಡೇಲ್ ಎಂಬ ವಿದ್ವಾಂಸನು 1908ರಲ್ಲಿ ಲಂಡನ್ ರಾಯಲ್ ಸೊಸೈಟಿ ಆಫ್ ಲಿಟರೆಚರ್–ಈ ವಿದ್ವತ್ಸಭೆಯಲ್ಲಿ ಮಿಲ್ಟನನ ಮಹಾಕಾವ್ಯಗಳ ಬಗೆಗೆ ಒಂದು ಹೊಸ ವ್ಯಾಖ್ಯಾನವನ್ನು ಮಂಡಿಸಿದನು. 'ಪ್ಯಾರಡೈಸ್ ಲಾಸ್ಟ್', 'ಪ್ಯಾರಡೈಸ್ ರಿಗೇಯ್ನ್ಡ್' 'ಸ್ಯಾಂಸನ್ ಅಗನಿಸ್ಟೆಸ್'– ಈ ಕಾವ್ಯಗಳು ಧಾರ್ಮಿಕ ಕಾವ್ಯಗಳು ಅಲ್ಲವೇ ಅಲ್ಲ. ಹೆಚ್ಚೇಕೆ ಮಿಲ್ಟನನು ನೇರ ಧರ್ಮಬೋಧೆಯನ್ನೇ ಗುರಿಯಾಗಿಟ್ಟು ಒಂದೇ ಕೃತಿಯನ್ನು–ಗದ್ಯವನ್ನಾಗಲಿ ಪದ್ಯವನ್ನಾಗಲಿ–ರಚಿಸಿಲ್ಲ33. ಅವನ ಪ್ರತಿ ಒಂದು ಕೃತಿಯೂ, ಅದರಲ್ಲೂ ಈ ಮೂರು ದೀರ್ಘಕವನಗಳು, ಯಾವುದೋ ಒಂದು ಪೂರ್ವನಿಯಾಮಕ ಪ್ರಚೋದನೆಯ (pre-disposing stimulus) ಫಲವಾಗಿ ಸೃಷ್ಟಿಯಾದುವು34.

---

30 Bailey, pp. 199-200

31 *Poetical Works*, p. 495 ; Hutchinson, F.E., *Milton & the English Mind* Hodden & Stoughton, London, 1946 : p. 139

32 Saldanha, A., *Unpublished Works*, St. Joseph's College Bangalore : p. 20.

33 Rosedale, H.G., Rev. *Milton: His Religion and Polemics, Ecclesiastical as well as Theological*, Milton Memorial Lectures, (Ed) Pery W. Ames, Henry Frowde, London, 1908. p. 167

34 id., p. 168

"All his strongest and most bitter animosities, his pet theories and his most dominant beliefs, do appear again and again in those works (Paradise Lost, Paradise Regained and Samson Agonistes,) but they appear in the less obvious form of poetic allegory, none the less deep and intense because they have been modified by time and experience and are legible only to his initiated readers under the cloak of magnificent verse and imagery"35

"ಮಿಲ್ಟನನ ದ್ವೇಷರಾಗಗಳು, ಶ್ರದ್ಧಾಪೂರ್ವಕ ನಂಬಿಕೆಗಳು, ಕಾಲಾನುಭವಗಳಿಂದ ಮಾಗಿ ಇನ್ನೂ ಆಳವೂ ಗಾಢವೂ ಆಗಿದ್ದಂಥವು ಮಹಾಕಾವ್ಯದ ವೈಭವದಲ್ಲಿ ಸಂಕೇತಗಳ ಸೋಗಿನಲ್ಲಿ ಈ ಕಾವ್ಯಗಳಲ್ಲಿ ಪದೇ ಪದೇ ಕಾಣುತ್ತಾ ಇವೆ. ಈ ರಹಸ್ಯದ ಮಂತ್ರೋಪದೇಶ ಪಡೆದವರಿಗೆ ಮಾತ್ರ ಇವುಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯ". ರೋಜ್‌ಡೇಲನು ಈ ನಿಲುವಿಗೆ ಹಲವಾರು ಕಾರಣಗಳನ್ನು ಕೊಡುತ್ತಾನೆ. (1) ರೆಸ್ಟೊರೇಶನ್ ಆದ ಬಳಿಕ ಅರಸನಿಗೆ ವಿರುದ್ಧವಾಗಿದ್ದ ಅವನು ತನ್ನ ಮತವನ್ನು ಬಹಿರಂಗವಾಗಿ ಹೇಳಿಕೊಳ್ಳುವುದು ಅತ್ಯಂತ ಅಪಾಯಕಾರಿಯಾಗಿತ್ತು36 (2) 'ಸ್ಯಾಂಸನ್ ಅಗನಿಸ್ಟೆಸ್' ಕಾವ್ಯವು ಬೈಬಲ್ ಕಥಾನಕವನ್ನು ಆಶ್ರಯಿಸಿದ್ದರೂ ಅದು ನೇರವಾಗಿ ಮಿಲ್ಟನನಿಗೆ ಸಂಬಂಧಪಟ್ಟಿರುವುದು ಎಂದು ಕಾವ್ಯದಿಂದಲೂ ಮಿಲ್ಟನನ ಅಂದಿನ ಸ್ಥಿತಿಯಿಂದಲೂ ಸ್ಪಷ್ಟವಾಗಿತ್ತು37. (3) 'ಪ್ಯಾರಡೈಸ್ ಲಾಸ್ಟ್' ಕಾವ್ಯದಲ್ಲಿ ಆಗ ತಾನೆ ಮರಣ ದಂಡನೆಗೆ ಗುರಿಯಾದ ರಾಜನ ವಿಷಯವು ಧ್ವನಿತವಾಗಿದೆ ಎಂಬುದು ಮಿಲ್ಟನನ ವಿರೋಧವಾಗಿ ಪ್ರಕಟವಾದ ಒಂದು ಪುಸ್ತಿಕೆಯಿಂದ ತಿಳಿದು ಬರುತ್ತದೆ38. (4) ಮಿಲ್ಟನನಂಥ ಬುದ್ಧಿಜೀವಿಯು ಜೀವಮಾನವಿಡೀ ಕೆಲವು ನಂಬಿಕೆಗಳಿಗಾಗಿ ವಾದವಿವಾದ ನಡೆಸಿ, ಜೀವನದ ಅಂತ್ಯದಲ್ಲಿ ಅವುಗಳನ್ನು ಸಂಪೂರ್ಣವಾಗಿ ಮರೆಯುವುದು ಅಸಂಭವನೀಯ39. ಇದಕ್ಕೆ ಮಾಸ್ಸೊಂ ಅವರ ಬೆಂಬಲವೂ ಇದೆ40. ಆದುದರಿಂದ ಆ ನಂಬಿಕೆಗಳನ್ನು ಕಾವ್ಯ ರೂಪದಲ್ಲಿ ಇರಿಸುವುದರಲ್ಲಿ ಅಸಹಜತೆ ಇಲ್ಲ. (5) ಮಿಲ್ಟನನು ದೈವಶಾಸ್ತ್ರವನ್ನು (theology) ಸರಿಯಾಗಿ ತಿಳಿದವನು; 'ಪ್ಯಾರಡೈಸ್ ಲಾಸ್ಟ್'ನಲ್ಲಿ ಇರುವ, ಈ ಶಾಸ್ತ್ರಕ್ಕೆ ಸಂಬಂಧಪಟ್ಟ ದೋಷಗಳನ್ನು ಅವನು ಗಮನಿಸಲಿಲ್ಲ ಎನ್ನಲಾಗದು. ಕಾವ್ಯವು ತನ್ನ ಇತರ ಚಿಂತನಗಳ ವಾಹಿನಿಯಷ್ಟೆ ಆದುದರಿಂದ ಆ ದೋಷಗಳು ಗೌಣ ಎಂದು ಸುಮ್ಮನಿದ್ದಿರಬೇಕು41.

ರೋಜ್‌ಡೇಲನ ಪ್ರಕಾರ 'ಪ್ಯಾರಡೈಸ್ ಲಾಸ್ಟ್'ನಲ್ಲಿ ಆ್ಯಡಮ್ ಮತ್ತು ಈವ್ ಪ್ರಾಟೆಸ್ಟಂಟ್ ಮತಾವಲಂಬಿಯಾದ ಇಂಗ್ಲೆಂಡಿನ ಪ್ರತೀಕ. ಸೇಟನನು ರೋಮ್ ನಗರದಲ್ಲಿದ್ದು ಇಂಗ್ಲೆಂಡಿಗೆ ಮತ ಪ್ರಚಾರಕರನ್ನು ಕಳುಹಿಸುತ್ತಿದ್ದ ಸನಾತನ ಕ್ರೈಸ ಧರ್ಮದ ಸಂಕೇತ. ಯೂರಿಯೆಲ್ ದೇವದೂತನು ಆದಿ ದಂಪತಿಗಳನ್ನು ಎಚ್ಚರಿಸಲು ಬರುವುದೆಂದರೆ ಇಂಗ್ಲೆಂಡಿನ ಸ್ವಾತಂತ್ರ್ಯದ ಬಗೆಗೆ ಮಿಲ್ಟನನು ಜನತೆ

---

35 id., p. 159., see Eliot., T. S., *Milton*, Faber & Faber, London, 1968; p. 26

36 id., p. 185

37 id. p. 167

38 id. p. 187

39 id. p. 177

40 id., 169, p. 185

41 id., p. 177

ಯನ್ನು ಎಚ್ಚರಿಸಲು ತೊಡಗುವುದು. ಸೇಟನನು ಕರೆದಿರುವ ಶೃಂಗಸಭೆಯು ಇಂಗ್ಲೆಂಡಿನ ರೆಸ್ಟೊರೇಶನ್,42

ಇದೇ ವಿಮರ್ಶಕನು, "In the two great works 'Paradise Lost' and 'Paradise Regained' we have the history of those times no less than Milton's aspirations and prophecies for the England he loved, veiled in poetic allegory, based on scripture"43

ಎಂದಿದ್ದರೂ ತನ್ನ ವಿವರಣೆಯನ್ನು ಮೊದಲ ಕಾವ್ಯಕ್ಕೆ ಮಾತ್ರ ಸೀಮಿತಗೊಳಿಸಿದ್ದಾನೆ. 'ಪ್ಯಾರಡೈಸ್ ರಿಗೇಯ್ನ್ಡ್'–ನಲ್ಲಿ ಬರುವ ಯೇಸುವಿನ ಪಾತ್ರದಲ್ಲಿ ಕ್ರೊಮ್‌ವೆಲನ ಚಿತ್ರವನ್ನು ಒಬ್ಬ ವಿಮರ್ಶಕನೂ44 ಮಿಲ್ಟನನ ಚಿತ್ರವನ್ನು ಇನ್ನೊಬ್ಬನೂ 45ಕಂಡಿದ್ದಾನೆ. ಆದುದರಿಂದ ಈ ಕಾವ್ಯದಲ್ಲಿ ಅಂದಿನ ಚರಿತ್ರೆಯ ಛಾಯೆಯನ್ನು ಮತ್ತು ಮಿಲ್ಟನನ ಸ್ವಂತ ನಂಬಿಕೆಗಳ ಎಳೆಯನ್ನು ನಾವು ಹುಡುಕಿದರೆ ನಮಗೆ ಕಾವ್ಯದ ಬಾಗಿಲು ತೆರೆಯುವುದು.

'ಪ್ಯಾರಡೈಸ್ ರಿಗೇಯ್ನ್ಡ್'ನ ಯೇಸುವಿನ ಚಿತ್ರವು ಹೆಚ್ಚಿನ ಮಟ್ಟಕ್ಕೆ ಕ್ರೊಮ್‌ವೆಲನ ಪಾತ್ರಕ್ಕೆ ಸರಿಹೋಗುತ್ತದೆ. ಅರಸುತನವನ್ನು ವಿರೋಧಿಸಿ ಪ್ರಜಾಪ್ರಭುತ್ವವನ್ನು ಇಂಗ್ಲೆಂಡಿನಲ್ಲಿ ಸ್ಥಾಪಿಸಿದ ಧೀರ ಕ್ರೋಮ್‌ವೆಲ್. ನಾಡಿನ ಅರಸು ಮನೆತನದ ಪಕ್ಷದವರ ಹಲವಾರು ಬಗೆಯ ಪ್ರಲೋಭನೆಗಳನ್ನು ಅವನು ಧೈರ್ಯದಿಂದ ಎದುರಿಸಿ, ಪ್ರಜಾಪ್ರಭುತ್ವವನ್ನು ಉಳಿಸಿಕೊಂಡಿದ್ದನು. ಪ್ರಜಾಪ್ರಭುತ್ವದ ಲ್ಯಾಟಿನ್ ಕಾರ್ಯದರ್ಶಿಯಾಗಿದ್ದಾಗ ಮಿಲ್ಟನನಿಗೆ ಕ್ರೊಮ್‌ವೆಲನ ಬಗೆಗೆ ಗೌರವಿತ್ತು; ಭಕ್ತರ ರಾಜ್ಯವನ್ನು (Rule of the Saints) ಇಂಗ್ಲೆಂಡಿನಲ್ಲಿ ಸ್ಥಾಪಿಸಲು ಬಂದವರಲ್ಲಿ ಕ್ರೊಮ್‌ವೆಲ್ ಹಿರಿಯವನು ಎಂದು ಅವನು ದೃಢವಾಗಿ ನಂಬಿದ್ದನು. "Defensio Secunda" ಗ್ರಂಥದಲ್ಲಿ ಮಿಲ್ಟನನು ಕ್ರೊಮ್‌ವೆಲನನ್ನು ಪ್ರಶಂಸಿಸಿ ಬರೆದ ಭಾಗಗಳಿಗೂ ಕಾವ್ಯದ ಕೆಲವು ಭಾಗಗಳಿಗೂ ತೀರಾ ಹತ್ತಿರದ ಸಾದೃಶ್ಯವಿದೆಯೆಂದು ಕಾಣಬಹುದು.

"for he was a solider disciplined to perfection in the knowledge of himself. He had either extinguished, or by habit had learned to subdue, the whole hort of vain hopes, fears and passions, which infest the soul. He first acquired the government of himself and overhimself acquired the most signal victories; so that on the first day he took the field again the exterior enemy, he was a veteran in arms, consummately practised in the toils and exigencies of war".46

---

42 id., pp.178–184

43 id. p. 184

44 Grierson, H.J.C., *Milton and Wordsworth,* Cambridge University Press, 1937:p. 134

45 Hutchinson, p. 139.

46 Milton, John, *Prose works,* (Ed.) J.A. St. John, Henry G. Bohn London, 1848, Volume I: p. 285–6

"ಪ್ಯಾರಡೈಸ್ ರಿಗೇಯ್‌ನ್ಡ್"

"Yet he who reigns within himself, and rules
Passions, desires, and fears, is more a kind
Which every wise and virtuous man attains;
And who attains not ill aspires to rule
Cities of men; or headstrong multitudes,
Subject himself to anarchy within,
Or lawless passions in him, which he serves".47

ಹಾಗೆಯೇ,

"The good and the brave were from all
quarters attracted to his camp, not only
as to the best school of military talents, but
of piety and virtue....he retained
and still retained the obedience of his troops not
by largesses or indulgence, but by his sole authority48"

"ಪ್ಯಾರಡೈಸ್ ರಿಗೇಯ್‌ನ್ಡ್"

"This attracts the soul,
Governs the inner man, the nobler part;
That other o'er the body only reigns,
And oft by force–which to a generous mind
So reigning can be no sincere delight '49

ಇಂಥ ಇನ್ನೊಂದು ಸಂವಾದಿ ಜೋಡಿಯನ್ನೂ ಕಾಣಬಹುದು50.

"When he sees that you are in so special
a manner the favoured object of divine
regard,' 51 "This alone seems to be a sufficient
proof of his extra–ordinary and almost
supernatural virtue '52

---

47 II, 466–72
48 *Prose Works,* Vol. I: p: 286.
49 II, 476–9
50 *Prose Works,* Vol. I: p. 285; *P.R.*, I, 201–19
51 *Prose Works* Vol. I: 287.
52 id., p. 286.

ಕ್ರೋಮ್‌ವೆಲನನ್ನು ಹೊಗಳಿ ಮಿಲ್ಟನನು ಬರೆದ ಪಂಕ್ತಿಗಳಿವು. ಆದರೆ ದೈವಕ್ಕಿಂತ ಸ್ವಲ್ಪ ಕೆಳ ಮಟ್ಟದಲ್ಲಿ ಇದ್ದಂತೆ ವರ್ಣಿಸಲಾದ ಯೇಸುವಿನ ವರ್ಣನೆಯನ್ನೇ ಈ ಭಾಗಗಳು ಧ್ವನಿಸುತ್ತವೆ.

ಆದುದರಿಂದ ‘ಪ್ಯಾರಡೈಸ್ ರಿಗೇಯ್‌ನ್ಡ್ ‘ಒಂದು ಸಾಂಕೇತಿಕ ಕಾವ್ಯ’. ಅಲ್ಲಿ ಯೇಸುವಿನ ಪಾತ್ರದಲ್ಲಿ ಕ್ರೊಮ್‌ವೆಲನನ್ನು ಕಾಣಬೇಕು. ರೋಜ್‌ಡೇಲ್ ಹೇಳಿರುವಂತೆ, ‘ಪ್ಯಾರಡೈಸ್ ಲಾಸ್ಟ್’ನ ರೋಮನ್ ಧರ್ಮ ಸಭೆಯು ಮಾತ್ರವಲ್ಲದೆ ಸ್ವಾತಂತ್ರ್ಯಕ್ಕೆ ಅಡ್ಡಿ ಎಂದು ಮಿಲ್ಟನನಿಗೆ ಎನಿಸಿದ ಅರಸನು ಮತ್ತು ಅವನ ಪಕ್ಷದವರು–ಇವರಿಗೆ ಎಲ್ಲರಿಗೆ ಸೇಟನನು ಸಂಕೇತ. ಪ್ಯೂರಿಟನ್ ಧರ್ಮದ, ವಿಸ್ತಾರ ಸ್ವಾತಂತ್ರ್ಯದ, ವಿಧಿನಿಯಮರಾಹಿತ್ಯದ ರಾಜ್ಯವನ್ನು ಸ್ಥಾಪಿಸುವಾಗ ಸಂಧಿ, ಲಂಚ ಇತ್ಯಾದಿಗಳಿಂದ ಪ್ರಜಾಪ್ರಭುತ್ವದ ಪಕ್ಷದವರನ್ನು, ಕ್ರೊಮ್‌ವೆಲನನ್ನು, ಆ ರಾಜ್ಯ ಸ್ಥಾಪನೆಯ ಗುರಿಯಿಂದ ದೂರಸೆಳೆಯಲು ಈ ಸೇಟನನು’ ಒಡ್ಡಿದ ಪ್ರಲೋಭನೆಗಳನ್ನು ಈ ‘ಯೇಸುವು’ ಯಶಸ್ವಿಯಾಗಿ ಗೆದ್ದನು.

ಈ ರೀತಿಯಲ್ಲಿ ಕಾವ್ಯವನ್ನು ಅರ್ಥಮಾಡಿಕೊಂಡರೆ ಯೇಸುವಿಗೆ ರಾಜಕೀಯ ಸ್ವಭಾವವನ್ನು ಆರೋಪಿಸಿದ ಸಮಸ್ಯೆಯ ಬಗೆ ಹರಿಯುತ್ತದೆ. ಕೊಮ್‌ವೆಲನು ಯಾವ ಶಕ್ತಿಗೆ ವಿರುದ್ಧ ಹೋರಾಡುತ್ತಿದ್ದನೋ ಅದೇ ಶಕ್ತಿಗಳನ್ನು ಮಿಲ್ಟನ್ ‘The Roman Yoke’ ಎಂದು ಕರೆದಿರಬಹುದು. ಕವಿಗೆ ಕ್ರೊಮ್‌ವೆಲನು ಅರಸನ ಪಕ್ಷದವರನ್ನು ಸೋಲಿಸಿದ್ದಾನೆ ಎಂದು ಹೇಳಬೇಕಿತ್ತು. ಅದಕ್ಕೆ ಪ್ರತ್ಯಕ್ಷ ಒಂದು ಯುದ್ಧ ನಡೆದು, ಅಲ್ಲಿ ನಾಯಕನು ವಿಜಯಿಯಾದ ಪ್ರಸಂಗಬೇಕಿತ್ತು. ಯಾತನಾ ಪ್ರಸಂಗದಲ್ಲಿ ಸಾಂಕೇತಿಕವಾಗಿ ಇಂಥ ಹೋರಾಟ ಇದೆಯಾದರೂ ಪ್ರತ್ಯಕ್ಷವಾಗಿ ಇಲ್ಲ. ಆದುದರಿಂದ ಸೇಟನ್–ಯೇಸು ಇವರ ಆಧ್ಯಾತ್ಮಿಕ ಕದನವನ್ನೊಳಗೊಂಡ ಪ್ರಲೋಭನಾವೃತ್ತಾಂತವನ್ನು, ತನ್ನ ಉದ್ದೇಶಕ್ಕೆ ಯೋಗ್ಯವಾದುದೆಂದು ಆರಿಸಿದನು.

ಯೇಸುವಿನ ದೈವತ್ವದ ಬಗೆಗೆ ಮೂಡಿರುವ ಅನುಮಾನಗಳು ಕವಿಯ ಉದ್ದೇಶ ನಿರ್ವಹಣೆಗೆ ವಿಘ್ನತರುವುದಿಲ್ಲವಾದುದರಿಂದ ಅವುಗಳನ್ನು ಕವಿಯು ಅರಿತಿದ್ದರೂ ಅಲಕ್ಷಿಸಿರಬೇಕು. ಕವಿಗೆ ಧಾರ್ಮಿಕ ನಿರ್ದುಷ್ಟತೆ ಬೇಕಾಗಿರಲಿಲ್ಲ. ತನ್ನ ಗುರಿಯನ್ನು ಸಾಧಿಸಲಿಕ್ಕೆ ಅವಕಾಶಕೊಡುವ ಸಂಕೇತವಷ್ಟೇ ಬೇಕಾಗಿತ್ತು. ಇನ್ನೊಂದು ಕಾರಣವನ್ನು ಸೂಚಿಸುವುದಾದರೆ ಕವಿಯು ‘ಪ್ಯಾರಡೈಸ್ ಲಾಸ್ಟ್’ನಲ್ಲೇ, ಈ ಅನುಮಾನದ ಬೀಜಗಳನ್ನುಬಿತ್ತಿದ್ದನು53.ಆದರೆ ಆಗ ಅವು ಹೆಚ್ಚಿನವರ ಗಮನವನ್ನು ಸೆಳೆಯಲಿಲ್ಲ. ‘ದೆ ದೊಕ್ಟ್ರೀನಾ ಕ್ರಿಸ್ತಿಯಾನಾ’ ಗ್ರಂಥವು ಮಿಲ್ಟನನ ಮರಣಾನಂತರ ಅಚ್ಚಾದಾಗ, ವಾಸ್ತವವಾಗಿ ‘ಮಿಲ್ಟನನು ಏರಿಯನಿಜಂ’ (Arianism)54 ಎಂಬ ಮತಭೇದವನ್ನು ಹೊಂದಿದ್ದನೆಂದೂ ಯೇಸುವು ದೇವರಲ್ಲವೆಂದು ಅವನು ನಂಬಿದ್ದನೆಂದೂ ತಿಳಿದು ಬಂತು. ಇದೇ ನಂಬಿಕೆಯನ್ನು ಅವನು ಈ ಕಾವ್ಯದಲ್ಲಿ ಪ್ರದರ್ಶಿಸಿದನು. ಈ ನಂಬಿಕೆಗೆ ವಾಹಕವನ್ನಾಗಿ ಅವನು ತನ್ನ ಕಾವ್ಯವನ್ನು ಬಳಸಿ, ಕಾವ್ಯ ವಸ್ತುವಿನಲ್ಲಿ ಮಾರ್ಪಾಟು ಮಾಡಿಕೊಂಡನು.

ಮಿಲ್ಟನನ ಪ್ಯೂರಿಟನ್ ಧರ್ಮದ ಪ್ರಕಾರ ಜಪತಪಗಳಿಗೆ ಸ್ವಚಿಂತನಕ್ಕೆ ಆದ್ಯ ಸ್ಥಾನ.55 ಬಾಲಕ ಯೇಸುವು ಧ್ಯಾನದಲ್ಲಿಯೇ ನಿರತನಾಗಿದ್ದನು ಎಂಬುದಕ್ಕೆ ಈ ಮನೋಪ್ರವೃತ್ತಿಯು ಬಹುಮಟ್ಟಿಗೆ ಕಾರಣ ಎನ್ನಬಹುದು. ಇಲ್ಲಿ ಸಂಬಂಧಪಟ್ಟ ಪಂಕ್ತಿಗಳನ್ನು ಮಿಲ್ಟನನ ಭಾವಚಿತ್ರದ ಅಡಿಯಲ್ಲಿ ಚಿತ್ರಕಾರನು ಬರೆದಿರುವುದನ್ನು ಇಂದಿಗೂ ಕಾಣಬಹುದೆಂದೂ, ಅದು ಔಚಿತ್ಯಪೂರ್ಣವಾಗಿದೆಯೆಂದೂ ವಿಲಿಯಂಸನ್ ಹೇಳಿರುತ್ತಾರೆ56. ‘ಸ್ಯಾಂಸನ್ ಅಗನಿಸ್ಟೆಸ್’ನಲ್ಲಿ ಮಿಲ್ಟನನು ಸ್ವಚಿತ್ರವನ್ನು ಬರೆದಿರುವುದು ಓದುಗರಿಗೆ

---

53 *P.L.*, VIII, 403–11., Hutchinson, p. 172

54 ಯೇಸುವು ನಿಜವಾಗಿಯೂ ದೇವರು ಎಂಬುದನ್ನು ಅಲ್ಲಗಳೆಯುವುದು *Prose Works*. Vol. IV, ‘pp. 293–4

55 Wood, H. G., *Puritanism,* in Encyclopaedia of Religion and Ethics, Vol. X, T.T. Clark, Edinburgh, 1951,p. 514

56 Williamson G. C., Portraits of Milton, Milton Memorial Lectures: p.2

ಕಷ್ಟವಿಲ್ಲದೆ ತಿಳಿಯುತ್ತದೆ. 'ಪ್ಯಾರಡೈಸ್ ರಿಗೇಯನ್ಡ್'ನಲ್ಲಿ ತನ್ನ ನಂಬಿಕೆ, ಒಲವುಗಳನ್ನು ಕಾವ್ಯರೂಪದಲ್ಲಿ ಬಚ್ಚಿಟ್ಟುಕೊಂಡರೂ, ಈ ಪಂಕ್ತಿಗಳಲ್ಲಿ ಬಾಲಕ ಮಿಲ್ಟನನ ಚಿತ್ರವು ಸಾಕಷ್ಟು ಸ್ಫುಟವಾಗಿ ಎದ್ದು ಕಾಣುತ್ತದೆ.

ದೇವರ ಆತ್ಮನು ಯೇಸುವನ್ನು ಮರುಳುಗಾಡಿಗೆ ಕೊಂಡೊಯ್ದ ಉದ್ದೇಶವು ಅವನು ತನ್ನ ಹಿಂದಿನ ಜೀವನದ ಘಟನೆಗಳನ್ನು ಪುನರಾವರ್ತನೆ ಮಾಡಿನೋಡುವುದು ಎಂಬ ಅರ್ಥವು ಬೈಬಲ್ ಪ್ರಸಂಗಕ್ಕೆ ವ್ಯತಿರಿಕ್ತವಾಗದು. ಆದರೂ ಧ್ಯಾನದ, ಆತ್ಮ ಪರಿಶೀಲನದ ಪ್ರಾಶಸ್ತ್ಯದಲ್ಲಿ ಪ್ಯೂರಿಟನ್ ಮತದ ಪ್ರಭಾವವೂ ಇದೆ.

ಗ್ರೀಸ್ ದೇಶದ ಬೌದ್ಧಿಕ ಸಾಧನೆಗಳನ್ನು ವರ್ಣಿಸಲು 'ಹ್ಯೂಮನಿಜಂ' (humansim) ಎಂದು ಅಂದು ಪ್ರಚಲಿತವಾಗಿದ್ದ ಮಾನವತಾ ವಾದವು ಸ್ವಲ್ಪ ಮಟ್ಟಿಗೆ ಕಾರಣವಾಗಿರಬಹುದು. ಆಧ್ಯಾತ್ಮಿಕ ರಾಜ್ಯಕ್ಕೆ ಬಾಧ್ಯಸ್ಥನಾದ ಯೇಸುವಿಗೆ ಐಹಿಕ ರಾಜ್ಯಗಳಿಗಿಂತ ಬೌದ್ಧಿಕ ಆಕರ್ಷಣೆಯೇ ಬಲವಾಗಿ ಕಾಡುವುದು ಎಂದು ಸೇಟನನು ಸರಿಯಾಗಿ ಊಹಿಸಿದ್ದಿರಬೇಕು. ವಿಷಯ ಲೋಲುಪತೆಯಿಂದ ಒಂದೇ ಸಮನೆ ಬೌದ್ಧಿಕ ಆಕರ್ಷಣೆಗೆ ಹಾರದೆ ಅಧಿಕಾರ ಲಾಲಸೆಯ ಆಸೆಯನ್ನು ತೋರಿಸಲು ಸೇಟನ್ ಮರೆಯುವುದಿಲ್ಲ. ಗ್ರೀಕರ ಬೌದ್ಧಿಕ ಪ್ರೌಢಿಮೆಯು ಹೀಬ್ರು ಜನರ ದೈವೋಕ್ತ ಸಾಹಿತ್ಯಕ್ಕಿಂತ ಮೇಲು ಮಟ್ಟದ್ದು ಏನಲ್ಲ ಎಂದು ಹೇಳಿರುವುದು ಪ್ಯೂರಿಟನ್ ಧರ್ಮದ ಸ್ಪಷ್ಟವಾದ ಪ್ರಭಾವ, ಏಕೆಂದರೆ ಪ್ಯೂರಿಟನರು ಬೈಬಲಿನ ಮೇಲೆ ಅಪಾರ ನಂಬಿಕೆ, ಭಕ್ತಿಯನ್ನು ಇಟ್ಟಿದ್ದರು. ತಾಯಿ ಮೇರಿ ಮತ್ತು ಶಿಷ್ಯರ ಕಳವಳವು ಯೇಸುವಿನ ಜೀವನ ಚರಿತ್ರೆಯ ಕೆಲವು ಅಂಶಗಳನ್ನು ಅವರ ಮುಖೇನ ಹೇಳಿಸಲಿಕ್ಕೆ ಉಪಯೋಗಿಸಿದ ತಂತ್ರವಷ್ಟೆ.

ಮಿಲ್ಟನನು ದೈವಶಾಸ್ತ್ರವನ್ನು ಸರಿಯಾಗಿ ಅಭ್ಯಾಸ ಮಾಡಿದ ವಿದ್ವಾಂಸನಾಗಿದ್ದನು. ಆದುದರಿಂದ ಲೋಕರಕ್ಷಣಾ ಕಾರ್ಯಕ್ಕೆ ಯೇಸುವಿನ ಜೀವನ ಮರಣಗಳೆರಡೂ ಹೊಣೆ ಎಂಬುದು ಅವನಿಗೆ ತಿಳಿದಿತ್ತು. ಈ ಕಾರಣಗಳಿಂದಾಗಿ ಯೇಸುವಿನ ಜನನ, ಬಾಲ್ಯ, ಮುಂದಿನ ಜೀವನದ ಕೆಲವು ರೇಖೆಗಳನ್ನು ಮಿಲ್ಟನನು ಕಾವ್ಯದಲ್ಲಿ ಮೂಡಿಸಿದ್ದಾನೆ. ಸಾಧ್ಯವಾದಲ್ಲೆಲ್ಲಾ ಕವಿಯು ಧರ್ಮನಿಷ್ಠನಾಗಿದ್ದಾನೆ.

'ಪ್ಯಾರಡೈಸ್ ರಿಗೇಯ್ನ್ಡ್' ಮಹಾಕಾವ್ಯವೆಂದೇ ಮಿಲ್ಟನನ ಅಭಿಪ್ರಾಯವಾಗಿತ್ತು.57. ಬೈಬಲ್ ಕಥಾನಕಕ್ಕೆ ಮಿಲ್ಟನನ ಕಾವ್ಯ ಪ್ರತಿಭೆಯಿಂದಾಗಿ ಬಂದು ಸೇರಿದ ಶಾಖೋಪಶಾಖೆಗಳು ಮಹಾಕವಿಯ ವಿಶಾಲ ಚಿತ್ರಣದಲ್ಲಿ ಬರುವುದು ಸಹಜ. ಆದರೆ ಎಲ್ಲ ಲಂಬನೆಗಳನ್ನು ವ್ಯತ್ಯಾಸಗಳನ್ನು ಇದೊಂದು ಕಾರಣದಿಂದ ವಿವರಿಸುವುದು ಅಸಾಧುವೆನಿಸಿದರೂ, ಮಿಲ್ಟನನ ಭೂಗೋಳಜ್ಞಾನ, ಚರಿತ್ರೆ, ಗ್ರೀಕ್, ಲ್ಯಾಟಿನ್ ಆದಿ ಸಾಹಿತ್ಯದ ನಿಕಟ ಪರಿಚಯದ ಪ್ರದರ್ಶನ ಇವುಗಳನ್ನು ಈ ತರಗತಿಯಲ್ಲಿ ಹೇಳಬಹುದು. ಹಳೆಯ ಒಡಂಬಡಿಕೆಯ ಪ್ರಸ್ತಾಪ ಬರಲು ಇದೂ ಒಂದು ಕಾರಣ. ಸೇಟನನಿಗೆ ಮುದಿ ಒಕ್ಕಲಿಗನ ವೇಷ ಕೊಡುವುದು, ನಲ್ವತ್ತು ದಿನಗಳ ಅವಧಿಯನ್ನು ಅಕ್ಷರಶಃ ಪಾಲಿಸಿರುವುದು, ಪ್ರಲೋಭನೆಗಳನ್ನು ಕ್ರಮವಾಗಿ ಮೂರು ದಿನಗಳ ವರೆಗೆ ಏರ್ಪಡಿಸಿರುವುದು ಕಾವ್ಯ ನಿರ್ಮಾಣ ಸೌಕರ್ಯಕ್ಕಾಗಿ ಬಳಸಿರುವ ತಂತ್ರಗಳು ಎನ್ನಬಹುದು. ಬೈಬಲಿನಲ್ಲಿ ಈ ಘಟನೆಗಳ ಸರಿಯಾದ ಅರ್ಥ ಏನೆಂಬುದನ್ನೂ ಮಿಲ್ಟನ್ ತಿಳಿದಿದ್ದನು. ಹಾಗಾಗಿ ಇವುಗಳ ಅವಜ್ಞೆ ಯಾವ ಮಾರ್ಪಾಡುಗಳಿಗೂ ಕಾರಣವಲ್ಲ. ಕಾವ್ಯ ಸೌಕರ್ಯವೆ ಕಾರಣ ಎಂದಾಗುತ್ತದೆ. ಪ್ಯೂರಿಟನರು ಬೈಬಲನ್ನು ಅಕ್ಷರಶಃ ನಂಬುವ ವಾಡಿಕೆ ಇತ್ತು.58. ಇದೂ ಮಿಲ್ಟನನು ಪ್ರಸಂಗವನ್ನು ಈ ರೀತಿಯಲ್ಲಿ ವಿವರಿಸಲು ಕಾರಣ ಇರಬಹುದು. ಮ್ಯಾಥ್ಯು ಹೇಳಿರುವ ದೇವದೂತರ ಸೇವೆಯನ್ನೂ ಮಿಲ್ಟನನು ಉದ್ದೇಶಪೂರ್ವಕವಾಗಿ ಬಳಸಿದ್ದಾನೆ. ಈ ವಿವರವನ್ನು ಬಣ್ಣಿಸಿದರೆ, ದೇವದೂತರು ಮಹಾಗೋಪುರದಿಂದ ಯೇಸುವನ್ನು ಆಕಾಶಮಾರ್ಗವಾಗಿ ಹೊತ್ತು ತಂದು ಹೂವಿನ ಬಯಲ ಮೇಲಿರಿಸಿ ಉಪಚರಿಸಿದರು ಎಂಬ ನಾಟಕೀಯವಾದ ಪರಿಸಮಾಪ್ತಿಗೆ ಅನುಕೂಲವಾಗುತ್ತದೆ.

---

57 *Poetical Works:* p. 290.
58 Wood, H. G., p. 512.

ಮೆಕ್‌ಕಿಂಜಿಯವರು ಇತ್ತೀಚೆಗೆ ಹೇಳಿರುವ ಪ್ರಲೋಭನಾ ವೃತ್ತಾಂತವನ್ನು ಧರ್ಮಸಭೆಗೆ ಅನ್ವಯಿಸುವ ಕ್ರಮವನ್ನು ಮಿಲ್ಟನನು ನಾಲ್ಕು ಶತಮಾನಗಳ ಹಿಂದೆಯೇ ತನಗೆ ಪ್ರಿಯವಾಗಿದ್ದ ಧರ್ಮಸಭೆಗೆ ತನಗೆ ಪ್ರಿಯವಾದ ರೀತಿಯಲ್ಲಿ ಅನ್ವಯಿಸಿದ್ದನು. ಕವಿಯ ತೀಕ್ಷ್ಣ ಚಿಂತನ ಧ್ಯಾನಗಳಿಗೆ ಇದು ಒಂದು ಉದಾಹರಣೆ.

ಗ್ರಂಥಋಣ

Bailey, J., *Milton,*
Best, E., *The Temptations and the Passion*
Brooke S.A., *Milton*
Corte, W., *Who is the Devil*
Daiches, D., *Milton*, Hutchinson University Library, London 1957
Eliot T. S., *Milton.*
Ferrier, F., *What is the Incarnation*
Grierson, H. J. C., *Milton*
Grierson, H. J. C., *Milton and Wordsworth*
Harvey, R. J., Reformation, in Encyclopoedia Britanica, Vol. 23, Cambridge, 1911
Hutchinson, F. E., *Milton and the English Mind*
Masson, D., *Milton* (in part) in Encylopaedia Britanica
Mckenzie, J., *Dictionary of the Bible*
Milton, J., *Poetical Works*
Milton J., *Prose Works*. Vol.s I, IV.
Rosedale H. G. *Milton: His Religion and Polemics*
Saldanha, A., *Unpublished Papers.*
Smith, W., *A Concise Dictionary of the Bible*, John Murray, London, 1875
Williamson, G. C., *Portraits of Milton*
The Holy Bible
ಸತ್ಯವೇದವು
ರಕ್ಷಕರಾದ ಜೇಸುಕ್ರಿಸ್ತನಾಥರ ಪೂಜ್ಯ ಸುಸಂದೇಶವು

ಆರ್. ದೇವಾಜಿ

ಪ್ರಲಾಪ

ಎಂದಿನಿಂದಲೋ
ನನ್ನ ಸಮರ್ಥತೆಯ ಬಗ್ಗೆ
ನನಗೇ ಸಂಶಯ ಬರುತ್ತಿದೆ

ನನ್ನನ್ನು
ಪತ್ತರೊಳಗೆ ಪಸ್ಸೊಂದು ಮಾಡಬಯಸುವ
'ಏಜೆನ್ಸಿ'ಗಳ ಮೇಲೆ
ಸೇಡು ತೀರಿಸಿಕೊಳ್ಳಲಾಗದೆಂದು
ಕೊರಗುತ್ತ....ಕರಗುತ್ತಿದ್ದೇನೆ.
ಎಲ್ಲೋ......ತಿರುಗುತ್ತಿದ್ದೇನೆ.
ಗೂಟವೊಂದಕ್ಕೆ ಬಿಗಿಸಿಕೊಂಡು
ಅನವರತವೂ ತಿರುಗುತ್ತಿದ್ದೇನೆ.
ತಿರುಗುತ್ತ, ತಿರುಗುತ್ತ,
ತ್ರಿಜ್ಯ ಕಡಿಮೆಯಾಗುತ್ತಿರುವ
ಅರಿವಾಗುತ್ತಿದೆ.
ನನ್ನ, ಅವರ, ನಡುವಣ
ಮೇಣದ ಗೋಡೆಗೆ ಬೆಂಕಿ ಹಚ್ಚುವ
ಪ್ರಯತ್ನದಲ್ಲಿ
ಪ್ರತಿಬಾರಿಯೂ ವಿಫಲನಾಗಿ,
ಪ್ರಯತ್ನವನ್ನೂ ಬಿಡಲಾಗದೆ
ತೊಳಲಿನಲ್ಲಿ
ಕ್ಷಣ ಕ್ಷಣವೂ
ಕೊಂಚ ಕೊಂಚವಾಗಿ
ಸಾಯುತ್ತಿದ್ದೇನೆ.

ಗೊರೂರು ರಾಮಸ್ವಾಮಿ ಅಯ್ಯಂಗಾರ್

ಸಾಬರ್ಮತಿಯಲ್ಲಿ ಆಶ್ರಮಜೀವನ

ಮಹಾತ್ಮಗಾಂಧೀಜಿ, ದಕ್ಷಿಣ ಆಫ್ರಿಕದಲ್ಲಿ ಸುಮಾರು ಇಪ್ಪತ್ತು ವರುಷಗಳು ಭಾರತೀಯರ ಹಕ್ಕು ಬಾಧ್ಯತೆಗಾಗಿ ಅಲ್ಲಿನ ಬಿಳಿಯರ ಸರ್ಕಾರದೊಂದಿಗೆ ಸತ್ಯಾಗ್ರಹ ಹೋರಾಟವನ್ನು ಹೂಡಿ, ಆತ್ಮಶಕ್ತಿಯಿಂದ ಪಾಶವೀಬಲವನ್ನು ಎದುರಿಸಬಹುದೆಂಬ ಒಂದು ಹೊಸ ತತ್ವವನ್ನು ಕಂಡುಕೊಂಡು, ಜಯಶೀಲರಾಗಿ ಭಾರತಕ್ಕೆ ಸಾವಿರದ ಒಂಭೈನೂರ ಹದಿನೈದನೇ ಸಂವತ್ಸರದಲ್ಲಿ ಹಿಂದಿರುಗಿದರು. ಆಫ್ರಿಕದಲ್ಲಿ ಅವರು ಸತ್ಯಾಗ್ರಹ ಚಳುವಳಿಯ ಅಂಗವಾಗಿ ಸತ್ಯದ ಅನ್ವೇಷಣೆ, ಅನುಸರಣೆ, ಬ್ರಹ್ಮಚರ್ಯ, ಅಸ್ಪೃಶ್ಯತೆಯ ನಿರ್ಮೂಲನ, ಜಾತೀಯ ಐಕ್ಯತೆ, ಸರ್ವಸಮಾನತೆ, ದೇವರೆಂಬ ಶಕ್ತಿಯಲ್ಲಿ ನಂಬಿಕೆ ಸಾಮೂಹಿಕ ಸಂಘ ಜೀವನ, ಸಹಕಾರ ಜೀವನ, ಆಸ್ತಿಯ ತ್ಯಾಜ್ಯ, ನಾಲಿಗೆಯ ಮೇಲೆ ಹತೋಟಿಗಳನ್ನು ತಾವು ಅನುಷ್ಠಾನಕ್ಕೆ ತಂದು, ಸಹಸ್ರಾರು ಸಂಖ್ಯೆಯ ತಮ್ಮ ಅನುಯಾಯಿಗಳಿಗೆಲ್ಲ ಆ ಗುಣವನ್ನು ಅಭ್ಯಾಸ ಮಾಡಿಸಿದರು. ಅಲ್ಲಿ ಫೀನಿಕ್ಸ್ ಆಶ್ರಮ, ಟಾಲಸ್ಟಾಯ್ ಫಾರಂ ಮುಂತಾದ ಶಿಸ್ತಿನ ಸಂಸ್ಥೆಗಳನ್ನು ಸ್ಥಾಪಿಸಿ, ನಿಯಮಬದ್ಧವಾದ ಜೀವನಕ್ರಮವನ್ನು ಅಳವಡಿಸಿ, ಗಾಂಧೀಜಿ ಜನತೆಯನ್ನು ಸತ್ಯಾಗ್ರಹಕ್ಕೂ ಉನ್ನತ ಆದರ್ಶಸೇವಾ ಜೀವನಕ್ಕೂ ಸಿದ್ಧಗೊಳಿಸಿದರು. ಭಾರತಕ್ಕೆ ಹಿಂದಿರುಗಿದ ಮೇಲೆ, ಇಲ್ಲಿ ಸಹ, ಇಲ್ಲಿನ ಸಮಸ್ಯೆಗಳ ಪರಿಹಾರಕ್ಕಾಗಿಯೂ ಜನಜೀವನದಲ್ಲಿ ಹೊಸ ಚೈತನ್ಯವನ್ನೂ ಸ್ಫೂರ್ತಿಯನ್ನೂ ಮೂಡಿಸುವುದಕ್ಕಾಗಿಯೂ ಮತ್ತು ಸತ್ಯಾಗ್ರಹ ಅಸ್ತ್ರವನ್ನು ಎಷ್ಟರಮಟ್ಟಿಗೆ ಈ ನಲವತ್ತು ಕೋಟಿ ಜನಾಂಗದ ಕೈಯಲ್ಲಿ ಕಾರ್ಯಕಾರಿಯಾಗಿ ಮಾಡಬಹುದು ಎಂಬುದನ್ನು ಕಂಡುಕೊಳ್ಳುವುದಕ್ಕಾಗಿಯೂ, ಇಲ್ಲಿ ಒಂದು ಆಶ್ರಮವನ್ನು ಸ್ಥಾಪಿಸುವುದು ಅವರಿಗೆ ಅನಿವಾರ್ಯವಾಯಿತು. ಆ ವೇಳೆಗಾಗಲೇ ಗಾಂಧೀಜಿ ತಾವು ಒಬ್ಬರೇ ತಮಗಾಗಿ ಜೀವಿಸುವುದನ್ನು ನಿಲ್ಲಿಸಿ, ತಾವು ತಮ್ಮ ಅನುಯಾಯಿಗಳ ಜೊತೆ, ಒಂದೇ ಕುಟುಂಬದಂತೆ ಸಂಘ ಜೀವನವನ್ನು ನಡೆಸುವುದಕ್ಕೆ ಪ್ರಾರಂಭಿಸಿಯೇ ಹದಿನೈದು ಇಪ್ಪತ್ತು ವರುಷಗಳಾಗಿದ್ದವು. ಗಾಂಧೀಜಿ, ಭಾರತಕ್ಕೆ ಹಿಂದಿರುಗಿದಾಗ, ಅವರ ಜೊತೆ ಬಂದಿದ್ದ ಅವರ ಆಶ್ರಮವಾಸಿಗಳಿಗಾಗಿಯೂ ಒಂದು ಆಶ್ರಮವನ್ನು ಸ್ಥಾಪಿಸಬೇಕಾಗಿದ್ದಿತು. ಹೀಗೆ ಅಹಮ್ಮದಾಬಾದಿನಲ್ಲಿ ಸಾಬರ್ಮತಿನದಿಯ ತೀರದಲ್ಲಿ ಸತ್ಯಾಗ್ರಹ ಆಶ್ರಮ 1915ನೆಯ ಮೇ ತಿಂಗಳನಲ್ಲಿ ಸ್ಥಾಪನೆಯಾಯಿತು. ಅದರಲ್ಲಿ, ಪ್ರಾರಂಭದಲ್ಲಿ, ಗಾಂಧೀಜಿಯ ಜೊತೆಯಲ್ಲಿ ದಕ್ಷಿಣ ಆಫ್ರಿಕದಿಂದ ಬಂದಿದ್ದ ಇಪ್ಪತ್ತೈದು ಸ್ತ್ರೀ ಪುರುಷರೂ ಹೊಸದಾಗಿ ಭಾರತದಲ್ಲಿ ಬಂದು ಸೇರಿದ ಹದಿನೈದು ಜನ (ಹೀಗೆ ಒಟ್ಟು ನಲವತ್ತು ಜನ)ರಿದ್ದರು. ಪ್ರಾರಂಭದಲ್ಲಿ ಸ್ವಲ್ಪಕಾಲ, ಆಶ್ರಮ ಬೇರೆ ಬಾಡಿಗೆಯ ಮನೆಯಲ್ಲಿದ್ದು, ಅನಂತರ ಸ್ವಂತ ಕಟ್ಟಡಕ್ಕೆ ಹೋಯಿತು.

ಆಶ್ರಮಧ್ಯೇಯ :

ಮಹಾತ್ಮಾಗಾಂಧೀಜಿಯವರ ಎಲ್ಲ ಕಾರ್ಯಗಳಂತೆ, ಸಾಬರ್ಮತಿ ಆಶ್ರಮವೂ ಸಹ ಸೇವಾನಿಷ್ಠ ಆಧ್ಯಾತ್ಮಸಾಧಕ ವ್ರತನಿಷ್ಠ ನಿಯಮಬದ್ಧ ಜೀವಿಗಳ ಆದರ್ಶ ಆಚರಣೆಯಿಂದ, ಭಾರತದ ಜನಜೀವನದಲ್ಲಿ ಹೊಸಸ್ಫೂರ್ತಿಯನ್ನೂ ಕರ್ತವ್ಯನಿಷ್ಠೆಯನ್ನೂ ತ್ಯಾಗವನ್ನೂ ಬೆಳಸಿ, ದೇಶದ ವಾತಾವರಣವನ್ನೇ

ಧಾರ್ಮಿಕವೂ ನೀತಿಯುಕ್ತವೂ ಆಗಿ ಮಾಡುವುದಾಗಿದ್ದಿತು. ಆಶ್ರಮವಾಸಿಗಳಿಗೆ ನಿಯಮಗಳು ಕಠಿಣ ವಾಗಿದ್ದರೂ, ಅವು ನೀರಸವೂ, ಅರ್ಥಹೀನವೂ ಶುಷ್ಕವೂ ಆಗಿರಲಿಲ್ಲ. ಯಾವ ನಿಯಮವೂ ಜಡವಾಗಲು ಅವಕಾಶಕೊಡದೆ, ಪ್ರತಿಯೊಂದು ನಿಯಮವನ್ನು ಕ್ಷಣ ಕ್ಷಣದಲ್ಲಿಯೂ, ಜೀವಿತ ಸಮಸ್ಯೆಗಳಿಗೆ ಅನ್ವಯಿಸಿ ಕೊಂಡು ಆಚರಣೆ ಮಾಡುತ್ತಾ ಆಧ್ಯಾತ್ಮ ಪ್ರಪಂಚದಲ್ಲಿ ನಿತ್ಯವೂ ನೂತನ ಪ್ರಯೋಗವನ್ನು ಮಾಡುವ ಒಂದು ರಂಜಕ ಸಾಹಸದಲ್ಲಿ ಆಶ್ರಮವಾಸಿಗಳು ತೊಡಗಿದ್ದರು. ಆಶ್ರಮವನ್ನು ಸ್ಥಾಪಿಸುವಾಗ ತಾವು ಮುಂದೆ ಅಷ್ಟು ಬೇಗ ಒಂದು ದೊಡ್ಡ ಚಕ್ರಾಧಿಪತ್ಯದೊಂದಿಗೆ ರಾಜಕೀಯ ಹೋರಾಟವನ್ನು ಮಾಡ ಬೇಕಾಗುವ ಸಂಭವ ಒದಗಬಹುದೆಂದು ಗಾಂಧೀಜಿ ಭಾವಿಸಿರಲಿಲ್ಲ.

ಏಕಾದಶವ್ರತಗಳು

ಆಶ್ರಮವಾಸಿಗಳೆಲ್ಲ ಕಟ್ಟು ನಿಟ್ಟಾಗಿ, ಮುಂದೆ ಶ್ಲೋಕರೂಪದಲ್ಲಿ ಅಳವಡಿಸಲ್ಪಟ್ಟ ಹನ್ನೊಂದು ವ್ರತಗಳನ್ನು ಆಚರಿಸಲೇಬೇಕಾಗಿದ್ದಿತು. ಆ ರೀತಿ ತಾವು ಆಚರಿಸುವುದಾಗಿ ವಾಗ್ದಾನ ಮಾಡಿ, ಆಚರಿಸ ಬಲ್ಲೆವೆಂದು ಗಾಂಧೀಜಿಗೆ ನಂಬಿಕೆಯನ್ನು ಹುಟ್ಟಿಸಿದವರಿಗೆ ಮಾತ್ರ ಆಶ್ರಮದಲ್ಲಿ ಸ್ಥಳ ಸಿಕ್ಕುತ್ತಿತ್ತು. ಎಲ್ಲದರಲ್ಲಿಯೂ ಗಾಂಧೀಜಿ, ಗುಣಕ್ಕೆ ಬೆಲೆಯನ್ನು ಕೊಡುತ್ತಿದ್ದರೇ ಹೊರತು ಮೊತ್ತಕ್ಕಲ್ಲ. ಆಶ್ರಮ ವಾಸಿಗಳ ಸಂಖ್ಯೆಯನ್ನು ದೊಡ್ಡದು ಮಾಡಿ ಆ ಮೂಲಕ ಆಶ್ರಮವನ್ನು ಪ್ರಸಿದ್ಧಮಾಡಬೇಕೆಂಬ ಹಂಬಲ, ಗಾಂಧೀಜಿಗೆ ಎಂದಿಗೂ ಇರಲಿಲ್ಲ. 'ಸತ್ಯವನ್ನು ಕಟ್ಟುನಿಟ್ಟಾಗಿ ಅನುಸರಿಸುವ ಒಬ್ಬನೇ ಸಿಕ್ಕಿದರೂ ನನಗೆ ಸಾಕು. ಬಹು ಸಂಖ್ಯೆ ಎಂದರೇ ನನಗೆ ಭಯ (I am afraid of majority) ಎಂದು ಅವರು ಹೇಳುತ್ತಿದ್ದರು. ವ್ರತಗಳನ್ನು ನಿಯಮಬದ್ಧವಾಗಿ ಅನುಸರಿಸಲೇಬೇಕೆಂಬುದು ಅವರ ಸ್ಪಷ್ಟ ಆದೇಶ ವಾಗಿತ್ತು. ಅವರೂ ಹಾಗೆ ಅನುಸರಿಸಿ ತೋರಿಸುತ್ತಿದ್ದರು. ತಾವೇ ಸ್ವತಃ

ಅಹಿಂಸಾ ಸತ್ಯ ಅಸ್ತೇಯ ಬ್ರಹ್ಮಚರ್ಯ ಅಸಂಗ್ರಹಃ
ಶರೀರಶ್ರಮ, ಅಸ್ವಾದ ಸರ್ವತ್ರ ಭಯವರ್ಜನಂ
ಸರ್ವಧರ್ಮೀ ಸಮಾನತ್ವ ಸ್ವದೇಶಿ ಸ್ಪರ್ಷ ಭಾವನಾ
ಹೀ ಏಕಾದಶ ಸೇವಾವಿನಮ್ರತ್ವೇ ವ್ರತನಿಶ್ಚಯೇ.

ಅಹಿಂಸೆ, ಸತ್ಯ, ಅಸ್ತೇಯ (ಕದಿಯದೆ ಇರುವುದು) ಬ್ರಹ್ಮಚರ್ಯ, ಸಂಗ್ರಹಿಸದಿರುವುದು, ಕಾಯಕ, ನಾಲಗೆಯ ಹತೋಟಿ, ಭಯವಿಲ್ಲದಿರುವುದು, ಎಲ್ಲ ಧರ್ಮಗಳಲ್ಲಿಯೂ ಸಮಾನಪ್ರೇಮ, ಸ್ವದೇಶೀ, ಅಸ್ಪೃಶ್ಯತಾವಿರೋಧ ಈ ಏಕಾದಶವ್ರತಗಳೇ ನಮ್ಮ ಕಾವಲು ಎಂದು ಗಾಂಧೀಜಿ ಹೇಳುತ್ತಿದ್ದರು.

ಬ್ರಾಹ್ಮೀ ಮುಹೂರ್ತ ಪ್ರಾರ್ಥನೆ

ಆಶ್ರಮ ಜೀವನ, ಎಲ್ಲ ಆಶ್ರಮವಾಸಿಗಳಿಗೂ ಬೆಳಗಿನ ಝಾವ ನಾಲ್ಕು ಘಂಟೆಗೆ ಪ್ರಾರಂಭ ವಾಗುತ್ತಿದ್ದಿತು. ಆದರೆ ಗಾಂಧೀಜಿಗೆ ಅದು ಮೂರು ಘಂಟೆಗೇ ಪ್ರಾರಂಭವಾಗುತ್ತಿದ್ದಿತು.

ಯಾ ನಿಶಾ ಸರ್ವಭೂತಾನಾಂ
ತಸ್ಯಾಂ ಜಾಗರ್ತಿ ಸಂಯಮೀ।
ಯಸ್ಯಾಂ ಜಾಗ್ರತಿ ಭೂತಾನಿ
ಸಾ ನಿಶಾ ಪಶ್ಯತೋ ಮುನೇಃ॥

(ಎಲ್ಲ ಪ್ರಾಣಿಗಳಿಗೆ ಯಾವುದು ರಾತ್ರಿಯೋ, ಆಗ ಜಿತೇಂದ್ರಿಯನು ಎಚ್ಚರದಿಂದಿರುತ್ತಾನೆ. ಯಾವುದರಲ್ಲಿ ಪ್ರಾಣಿಗಳು ಎಚ್ಚೆತ್ತಿರುವುವೋ ಅದು, ನೋಡುತ್ತಿರುವ ಮುನಿಗೆ ರಾತ್ರಿ)

ಗಾಂಧೀಜಿ ಆ ಕಾಲವನ್ನು ಬ್ರಾಹ್ಮೀ ಮುಹೂರ್ತವೆಂದು ಕರೆಯುತ್ತಿದ್ದರು. ಅವರು ಮೂರು ಘಂಟೆಗೆ ಎದ್ದು ಪ್ರಾರ್ಥನೆ ಮಾಡುತ್ತಿದ್ದರು. ಆಗ ಅವರ ಜೊತೆ ಅವರ ಅತ್ಯಂತ ನಿಕಟ ಅನುಯಾಯಿಗಳು ಕೆಲವರು ಮಾತ್ರ ಇರುತ್ತಿದ್ದರು. (ಕೆಲವು ವೇಳೆ ಆ ಪ್ರಾರ್ಥನೆಯಲ್ಲಿ ಗಾಂಧೀಜಿಯನ್ನು ನೋಡಲು ಬಂದಿರುತ್ತಿದ್ದ ಕೆಲವು ಸಂದರ್ಶಕರೂ ಇರುತ್ತಿದ್ದರು. ಬ್ರಾಹ್ಮೀ ಮುಹೂರ್ತದ ಪ್ರಾರ್ಥನೆಯಾದ ನಂತರ, ಗಾಂಧೀಜಿ ತಮ್ಮ ಪತ್ರವ್ಯವಹಾರದಲ್ಲಿ ತೊಡಗುತ್ತಿದ್ದರು. ಅನಂತರ ನಾಲ್ಕು ಘಂಟೆಗೆ, ಬೆಳಗಿನ ಝಾವ ಎಲ್ಲರೂ ಏಳಬೇಕಾದ ಘಂಟೆ ಸದ್ದು ಆಗುತ್ತಿದ್ದಿತು. (ಕಂಬಕ್ಕೆ ಕಟ್ಟಿದ್ದ ರೈಲು ಕಂಬಿ ಚೂರನ್ನು ಬಡಿಯುತ್ತಿದ್ದರು.) ಆಶ್ರಮವಾಸಿಗಳೆಲ್ಲ ಬರುವವರೆಗೆ ಗಾಂಧೀಜಿ ಮೌನವಾಗಿ ತಮ್ಮ ಪತ್ರ ವ್ಯವಹಾರ ವನ್ನು ನಡೆಸುತ್ತಲೇ ಇರುತ್ತಿದ್ದರು. ಒಂದು ಸಲ ಕಣ್ಣು ಬಿಟ್ಟು ನೋಡಿದ ಕೂಡಲೇ "ಯಾರು ಬಂದಿಲ್ಲ?" ಎಂಬುದೂ ಅವರಿಗೆ ಗೊತ್ತಾಗುತ್ತಿದ್ದಿತು. ಅನಂತರ (ಈಚೆಗೆ ದೇಶದಲ್ಲೆಲ್ಲ 'ಆಶ್ರಮ ಪ್ರಾರ್ಥನೆ' ಎಂದು ಪ್ರಸಿದ್ಧವಾದ) ಪ್ರಾರ್ಥನೆಯನ್ನು ಎಲ್ಲರೂ ಹೇಳುತ್ತಿದ್ದರು. ಒಕ್ಕೊರಲಿನ ಸುಸ್ವರದಲ್ಲಿ, ಬೆಳಗಿನ ಝಾವದ ಮೌನವನ್ನು ಭೇದಿಸಿಕೊಂಡು ಆ ಭಕ್ತಿಪೂರ್ಣವಾದ ಶ್ರದ್ಧಾವಂತ ಪ್ರಾರ್ಥನೆ ಉಷೆಯಂತೆ ದಿನವನ್ನು ಸ್ವಾಗತಿಸುತ್ತಾ ಹೊರಡುತ್ತಿತ್ತು.

ಪ್ರಾತಃ ಸ್ಮರಾಮಿ ಹೃದಿಸಂಸ್ಫುರದಾತ್ಮತತ್ವಂ
ಸಚ್ಚಿತ್ಸುಖಂ ಪರಮಹಂಸಗತಿಂತುರೀಯಂ।
ಯತ್ ಸ್ವಪ್ನ ಜಾಗರ ಸುಷುಪ್ತಮವೈತಿ ನಿತ್ಯಂ
ತದ್ ಬ್ರಹ್ಮ ನಿಷ್ಕಲಮಹಂ ನಚ ಭೂತ ಸಂಘಃ॥

ಹೀಗೆ ವೇದಗಳು ಸೂಕ್ತಗಳು ಉಪನಿಷತ್ತುಗಳು ಇವುಗಳಿಂದಲೆಲ್ಲ ನಿಯಮಿತವಾದ ಶ್ಲೋಕಗಳ ಪ್ರಾರ್ಥನೆಯಾದ ನಂತರ, ಆಶ್ರಮವಾಸಿಗಳ ಪೈಕಿ ಮಧುರಕಂಠವುಳ್ಳ ಕೆಲವರು ತುಳಸೀದಾಸ ರಾಮಾ ಯಣದಿಂದ ಸ್ವಲ್ಪ ಭಾಗವನ್ನು ಪಠಿಸುತ್ತಿದ್ದರು. ಅನಂತರ ಆಶ್ರಮವಾಸಿಗಳೆಲ್ಲ ತಮ್ಮ ನಿತ್ಯಕರ್ಮಗಳನ್ನು ಮುಗಿಸಿಕೊಂಡು ಆರುಘಂಟೆಯ ವೇಳೆಗೆ ಆಶ್ರಮದ ಕೆಲಸಗಳಿಗೆ ಸಿದ್ಧರಾಗುತ್ತಿದ್ದರು. ಗಾಂಧೀಜಿ, ಬೆಳಗ್ಗೆ 6 ಘಂಟೆಗೆ ತಪ್ಪದೆ ನಿತ್ಯ ಸ್ವಲ್ಪ ಹೊತ್ತು ಸಂಚಾರ ಹೊರಡುತ್ತಿದ್ದರು. ಅವರ ಜೊತೆಯಲ್ಲಿ ಅವರ ನೆಚ್ಚಿನ ಅನುಯಾಯಿಗಳು, ಅವರನ್ನು ಸಂದರ್ಶಿಸಲು ಅಥವಾ ಅವರ ಸಲಹೆಯನ್ನು ಪಡೆಯಲು ಬಂದಿದ್ದವರು, ಅಥವಾ ಇತರ ನಾಯಕರು ಇವರು ಇರುತ್ತಿದ್ದರು. ಪ್ರಾತಃಕಾಲದ ತಿರುಗಾಟ ಬರಿಯ ಗಾಳಿಸೇವನೆ ವ್ಯಾಯಾಮಕ್ಕೆ ಮಾತ್ರ ಮೀಸಲಾಗಿರಲಿಲ್ಲ. ಆಗಲೂ ಸಹ ಅನೇಕ ಜಟಿಲ ಸಮಸ್ಯೆಗಳ ಚರ್ಚೆ ಪರಿಹಾರ ವಿಮರ್ಶೆ ನಡೆಯುತ್ತಿದ್ದಿತು.

ಸದಾಶುಚಿ

ಗಾಂಧೀ ಆಶ್ರಮದಲ್ಲಿ ಸ್ವಚ್ಛತೆಗೆ ಅತ್ಯಂತ ಹೆಚ್ಚಿನ ಪ್ರಾಮುಖ್ಯತೆ ಕೊಡಲ್ಪಡುತ್ತಿದ್ದಿತು. ಗಾಂಧೀಜಿ "ನನ್ನಲ್ಲಿ, ನನ್ನ ಅನುಯಾಯಿಗಳಲ್ಲಿ ನನ್ನ ಸುತ್ತಮುತ್ತ ಎಲ್ಲಿಯೂ ಅಸ್ವಚ್ಛತೆ ಅಥವಾ ಕೊಳಕು ಇರು ವುದನ್ನು ನಾನು ಸಹಿಸುವುದಿಲ್ಲ" ಎಂದು ಪದೆ ಪದೆ ಹೇಳುತ್ತಿದ್ದರು. ಆಶ್ರಮವಾಸಿಗಳು ಸದಾ ಶುಚಿ ಯಾಗಿರಬೇಕೆಂಬುದು ಗಾಂಧೀಜಿಯ ಆದೇಶವಾಗಿತ್ತು. ಆಶ್ರಮವಾಸಿಗಳಿಗೆಲ್ಲ ಬೇರೆ ಬೇರೆ ಕೆಲಸಗಳು ನಿಯಮಿತವಾಗಿದ್ದರೂ ಶುಚಿತ್ವ ಸಫಾಯಿ ಆಶ್ರಮವಾಸಿಗಳಿಗೆಲ್ಲ ಸೇರಿದ ಕಾರ್ಯವಾಗಿದ್ದಿತು. ಸಾಬರ್ಮತಿ ಆಶ್ರಮದಲ್ಲಿ ಸಾಮೂಹಿಕವಾಗಿ ಒಂದೇ ಅಡಿಗೆ ಮನೆಯಲ್ಲಿ ಎಲ್ಲರಿಗೂ ಅಡಿಗೆ ತಯಾರಾಗುತ್ತಿದ್ದಿತು. ಅಲ್ಲಿ ಜಾತಿ ಮತ ಪ್ರಾಂತ ಮುಂತಾದ ಯಾವ ಭೇದಭಾವವೂ ಇರಲಿಲ್ಲ. ಸರದಿಯ ಮೇಲೆ ಕೆಲವರು ಅಡಿಗೆಮನೆಯ ಹೊಣೆಗಾರಿಕೆಯನ್ನು ಹೊರುತ್ತಿದ್ದರೂ, ಎಲ್ಲರೂ ಎಲ್ಲ ಕಾರ್ಯಗಳಲ್ಲಿಯೂ ಸಮಾನವಾಗಿ ಪಾಲುಗೊಳ್ಳುತ್ತಿದ್ದರು. ಯಾರೊಬ್ಬರಿಗೂ ಬೇರೆ ವಿಶಿಷ್ಟವಾದ ಅಥವಾ ವಿಶೇಷವಾದ ಅಡಿಗೆ ಎಂಬುದು ಇರಲಿಲ್ಲ. ಸ್ವತಃ ಗಾಂಧೀಜಿಯೇ ಅಡಿಗೆ ಮನೆ ವ್ಯವಸ್ಥೆಯನ್ನೂ ನೋಡುತ್ತಿದ್ದರು. ದಿನಕ್ಕೆ ಎರಡು

ಊಟ; ಸಾಧಾರಣವಾಗಿ ಗೋಧಿ ಚಪಾತಿ ತರಕಾರಿ ಸ್ವಲ್ಪ ಬೆಲ್ಲ; ಕೆಲವು ದಿನ ಮಜ್ಜಿಗೆ. ಬೇಳೆ ಉಪಯೋಗಿಸಿದ ದಿನ ಮಜ್ಜಿಗೆ ಇಲ್ಲ. ಆಹಾರ ಸರಳವಾಗಿದ್ದರೂ ಪುಷ್ಟವಾದ ಸಾಕಾಗುವಷ್ಟು ಆಹಾರವಾಗಿದ್ದಿತು. ಆಹಾರಕ್ಕೆ 'ರೇಶನ್' ಇರಲಿಲ್ಲ. ಗಾಂಧೀಜಿಯೇ ಯಾವಾಗಲೂ ಆಹಾರವಸ್ತುಗಳ ಮೇಲೆ ಪ್ರಯೋಗ ನಡೆಸುತ್ತಾ ಅವುಗಳ ಸತ್ವವನ್ನು ಪರೀಕ್ಷಿಸುತ್ತಾ, "ಇಂತಹ ಇಂತಹ ಆಹಾರ ಇಷ್ಟು ತಿಂದರೆ ಸಾಕು" ಎಂದು ಕಸ್ತೂರಿ ಬಾರೊಂದಿಗೆ ಚರ್ಚಿಸಿ ನಿರ್ಣಯಿಸುತ್ತಿದ್ದರು. ಕಾಫಿ, ಟಿ, ಕೊಕೋ ಮುಂತಾದ ಯಾವ ಮಾದಕ ಅಥವ ಅರ್ಧಮಾದಕವಸ್ತುಗಳ ಉಪಯೋಗವೂ ಇರಲಿಲ್ಲ. ಎರಡು ಹೊತ್ತಿನ ಊಟವನ್ನು ಬಿಸಿಯಾಗಿಯೇ ಮಾಡುತ್ತಿದ್ದೆವು. ಹಳೆಯ ಬೇಯಿಸಿದ ವಸ್ತುವನ್ನು ಯಾವಾಗಲೂ ಉಪಯೋಗಿಸುತ್ತಿರಲಿಲ್ಲ. ಬೆಳಗಿನ ಊಟವಂತೂ ಸರಿಯೆ; ಸಂಜೆಯ ಊಟ ಸಹ ಬೆಳಕಿನಲ್ಲಿಯೇ ಆಗುತ್ತಿದ್ದಿತು. ಆಹಾರ ಸರಳವಾಗಿ ಸತ್ವಪೂರ್ಣವಾಗಿದ್ದರೂ ಅದನ್ನು ತಯಾರಿಸುವ ವಿಧಾನ ಅತ್ಯಂತ ಸ್ವಚ್ಛವಾಗಿತ್ತು.

ಪೂರ್ಣಜೀವನ ವಿಕಾಸ

ಆಶ್ರಮದಲ್ಲಿ, ಸದಸ್ಯರಿಗೆ ಮೂರುಬಗೆಯಲ್ಲಿ ಜೀವನವಿಕಾಸಕ್ಕೆ ಅವಕಾಶವಿದ್ದಿತು. ಪ್ರತಿಸದಸ್ಯರಿಗೂ ಬೇರೆ ಬೇರೆ ನಿಯತವಾದ ಮತ್ತು ಸಾಮೂಹಿಕವಾದ ಕಾರ್ಯಗಳು ಗೊತ್ತಾಗಿದ್ದವು. ಗಾಂಧೀಜಿಯವರ ವಿಧಾನದಲ್ಲಿ ಯಾವಾಗಲೂ ಕಾರ್ಯಕ್ಕೆ ಪ್ರಾಧಾನ್ಯ. ಪ್ರತಿಯೊಬ್ಬರೂ ಸಾಧ್ಯವಾದಷ್ಟು ಕಾಲವನ್ನು ಯಾವುದಾದರೂ ಉಪಯುಕ್ತವಾದ ಕೆಲಸದಲ್ಲಿ ವಿನಿಯೋಗಿಸಬೇಕೆಂಬುದೇ ಅದರ ಮುಖ್ಯತತ್ತ್ವ. ಕಾರ್ಯದಿಂದಲೇ ಮನುಷ್ಯನ ಯೋಗ್ಯತೆ. ಗಾಂಧೀ ಆಶ್ರಮದಲ್ಲಿ ಒಬ್ಬ ಕೆಲಸಗಾರನ ಯೋಗ್ಯತೆಯನ್ನು ವಿವರಿಸಬೇಕಾದರೆ "ಅವನು ಒಳ್ಳೆಯ ಕಾರ್ಯಕರ್ತ" He is a great worker ಎನ್ನುತ್ತಿದ್ದರು. ಹೀಗೆ ಅವರವರಿಗೆ ನಿಯತವಾದ ಕಾರ್ಯಗಳ ಜೊತೆಗೆ, ಆಶ್ರಮದಲ್ಲಿ ಪ್ರತಿಯೊಬ್ಬ ಕೆಲಸಗಾರರಿಗೂ ಯೋಗ್ಯನಾಗಿ ಸತ್ಪ್ರಜೆಯಾಗಿ ದೇಶಸೇವಕನಾಗಿ ಬಾಳಲು ಆವಶ್ಯಕವಾದ ಬುದ್ಧಿ ಶಿಕ್ಷಣ, ಸಾಮಾನ್ಯ ಆರ್ಥಿಕ ಸಾಮಾಜಿಕ ವಿಜ್ಞಾನಗಳು ಇವುಗಳಲ್ಲಿ ಸುಮಾರು ಮೂರು ಘಂಟೆಗಳ ಕಾಲ ಪಾಠಪ್ರವಚನಗಳು ನಡೆಯುತ್ತಿದ್ದವು. ವ್ಯಕ್ತಿತ್ವವಿಕಾಸಕ್ಕೆ ಸಾಧಕವಾದ ಮೂರನೆಯ ಅಂಶವೆಂದರೆ ಪ್ರತಿಯೊಬ್ಬ ಆಶ್ರಮವಾಸಿಗೂ ಮಹಾತ್ಮಗಾಂಧಿಯವರ ಸಾನ್ನಿಧ್ಯ, ಆಶ್ರಮವಾತಾವರಣ, ಸದಾ ಕಾರ್ಯತತ್ಪರತೆಯ ದರ್ಶನ, ಗಾಂಧೀಜಿಯವರನ್ನು ಸಂದರ್ಶಿಸಲು ಬರುತ್ತಿದ್ದ ದೇಶ ದೇಶದ ವಿದ್ವಾಂಸರು ಮಹನೀಯರು ಇವರ ಸಹವಾಸ, ಆಶ್ರಮದಲ್ಲಿ ಸದಾ ನೆಲಸಿದ್ದ "ಕೆಲಸ ಮತ್ತು ಪ್ರಾರ್ಥನೆಯ ವಾತಾವರಣ" ಇವುಗಳಿಂದ ಪ್ರತಿ ಆಶ್ರಮವಾಸಿಯ ಆತ್ಮವಿಕಾಸಕ್ಕೆ ಸಾಧಕವಾಗುತ್ತಿದ್ದಿತು. ಗಾಂಧೀಜಿ, ಪ್ರತಿಯೊಬ್ಬ ಆಶ್ರಮವಾಸಿಯ ಶಕ್ತಿ, ಯೋಗ್ಯತೆ ವಿದ್ಯೆ ಕಾರ್ಯದಕ್ಷತೆ ಇವುಗಳನ್ನೆಲ್ಲ ಅರಿತಿದ್ದು, ಅವನವನಿಂದ ಆಗಬಹುದಾದ ಕಾರ್ಯವನ್ನು ಆಶ್ರಮಕ್ಕಾಗಿ ಮಾಡಿಸುತ್ತಿದ್ದರು. ತಮ್ಮ ತಮ್ಮ ವಿಷಯಗಳಲ್ಲಿ ನಿಪುಣರಾದವರು ಅವುಗಳಲ್ಲಿ ಇತರರಿಗೆ ಶಿಕ್ಷಣವನ್ನು ಕೊಡುತ್ತಿದ್ದುದರಿಂದ, ಎಲ್ಲರೂ ಎಲ್ಲರಿಗೂ ಶಿಕ್ಷಕರೂ ವಿದ್ಯಾರ್ಥಿಗಳೂ ಆಗಿ ಸಮರಸ ಜೀವನವನ್ನು ನಡೆಸುತ್ತಿದ್ದರು. ಭಾಷೆ, ಸಂಸ್ಕೃತ ಮುಂತಾದ ಪಾಠಗಳನ್ನು ಆಶ್ರಮವಾಸಿಗಳು ಅಭ್ಯಾಸ ಮಾಡುತ್ತಿದ್ದಾಗ ಗಾಂಧೀಜಿ ಸಹ ಬಂದು ವಿದ್ಯಾರ್ಥಿಗಳ ಜೊತೆ ಕುಳಿತು ಗಮನಿಸುತ್ತಿದ್ದರು. ತೋಟಗಾರಿಕೆಯಲ್ಲಿ ಪರಿಶ್ರಮವುಳ್ಳವರು ಆಶ್ರಮದ ಆವರಣದಲ್ಲಿ ತರಕಾರಿ ಬೆಳೆಯುವುದನ್ನು ಗಮನಿಸುತ್ತಿದ್ದರು. ಯಾವ ಒಬ್ಬ ಆಶ್ರಮವಾಸಿಯ ಶಕ್ತಿ ಬುದ್ಧಿ ಉತ್ಸಾಹ ದಕ್ಷತೆ ವ್ಯರ್ಥವಾಗದಂತೆ ಅವುಗಳು ಬೆಳೆಯಲು ಆಶ್ರಮದ ವಾತಾವರಣ ಅನುಕೂಲವಾಗಿತ್ತು.

ಅಮಂತ್ರಮಕ್ಷರಂ ನಾಸ್ತಿ, ನಾಸ್ತಿ ಮೂಲಮನೌಷಧಂ
ಅಯೋಗ್ಯಃ ಪುರುಷೋನಾಸ್ತಿ ಯೋಜಕಃ ತತ್ರದುರ್ಲಭಃ

(ಮಂತ್ರಶಕ್ತಿಯಿಲ್ಲದ ಅಕ್ಷರವಿಲ್ಲ; ಔಷಧವಲ್ಲದ ಮೂಲಿಕೆಯೂ ಇಲ್ಲ. ಯೋಗ್ಯತೆ ಇಲ್ಲದ ಪುರುಷನಾರೂ ಇಲ್ಲ. ಆದರೆ ಎಲ್ಲವನ್ನೂ ಅರಿತು ಯೋಜಿಸಿ ಅವರನ್ನೆಲ್ಲ ಸರಿಯಾಗಿ ಉಪಯೋಗಿಸುವ ಪ್ರಾಜ್ಞ ಇಲ್ಲ).

ಆದರೆ ಗಾಂಧೀಜಿ ಎಲ್ಲರನ್ನೂ ಅರಿತು ಉಪಯೋಗಿಕೊಳ್ಳುತ್ತಿದ್ದರು. ಯಾರ ಶಕ್ತಿಯೂ ಯಾರ ಬುದ್ಧಿ ಕಲೆ ಕರಕೌಶಲ ಯಾವುದನ್ನೂ ಗಾಂಧೀಜಿ ವ್ಯರ್ಥವಾಗಗೊಡುತ್ತಿರಲಿಲ್ಲ.

ಸತತೋದ್ಯೋಗ

ಆಶ್ರಮವನ್ನು ಪ್ರವೇಶಿಸಿದ ಕೂಡಲೇ ಮೊದಲು ಕಣ್ಣಿಗೆ ಬೀಳುತ್ತಿದ್ದುದು ಜೇನುಗೂಡಿನಂತೆ ಅವಿಚ್ಛಿನ್ನವಾಗಿ ಹಿತವಾದ ಶಬ್ದಗಳೊಡನೆ ನಡೆಯುತ್ತಿದ್ದ ಖಾದಿ ಉದ್ಯಮ ಮತ್ತು ಅದಕ್ಕೆ ಸಂಬಂಧಪಟ್ಟ ಕೆಲಸ ಕಾರ್ಯಗಳು. ಆಶ್ರಮದ ಕಟ್ಟಡದ ಬಹುಭಾಗ ಖಾದಿ ಉದ್ಯಮಕ್ಕಾಗಿ ವಿನಿಯೋಗವಾಗಿತ್ತು. ನಾನಾ ರೀತಿಯ ಚರಕಗಳು, ಹತ್ತಿಯಿಂದ ಬೀಜವನ್ನು ಬೇರ್ಪಡಿಸುವ, ಹತ್ತಿಯನ್ನು ಬಿಲ್ಲಿನಿಂದ ಎಕ್ಕುವ ಹಿಂಜಿಯನ್ನು ಮಾಡುವ ಉಪಕರಣಗಳು. ಹಿಂಭಾಗದಲ್ಲಿ ನಾನಾ ವಿಧಗಳಾದ ಪ್ರಯೋಗಗಳನ್ನು ಎಸಗುತ್ತಿದ್ದ ನೇಯ್ಗೆ ಮಗ್ಗಗಳು, ಉಕೆಸಾಧನಗಳು. ಆಶ್ರಮದ ಮುಖ್ಯಕೆಲಸಗಳಲ್ಲಿ ಖಾದಿವಿಜ್ಞಾನ ಒಂದಾಗಿತ್ತು. ದೇಶದ ನಾನಾಭಾಗಗಳಿಂದ ನೂಲುವುದರಲ್ಲಿ ಎಕ್ಕುವುದರಲ್ಲಿ ಹಿಂಜಿಮಾಡುವುದರಲ್ಲಿ ಅಗ್ರಗಣ್ಯರಾದವರು ಅಲ್ಲಿ ಬಂದು ಇರುತ್ತಿದ್ದರು. ಒಂದು ಸಲ ಆಂಧ್ರದ ಇಬ್ಬರು ಕುರುಡು ಮಹಿಳೆಯರು ಬಂದು ಆಶ್ರಮದಲ್ಲಿ ಇತರರಿಗೆ ತರಪೇತಿ ಕೊಟ್ಟರು. ಖಾದಿಯ ವಿಷಯದಲ್ಲಿ ಪ್ರತಿಯೊಂದು ಅಂಕಿಅಂಶ–ಯಾವ ಚರಕದಲ್ಲಿ ಎಷ್ಟು ಗಜ, ಘಂಟೆಗೆ ನೂಲಬಹುದು, ಯಾವ ಹತ್ತಿಯಲ್ಲಿ ನೂಲು ಚೆನ್ನಾಗಿ ಬರುತ್ತೆ ನೂಲಿನ ಹುರಿ ಹೇಗಿರಬೇಕು, ಪ್ರತಿಯೊಂದು ಅಂಶವನ್ನೂ ಕೆಲಸಗಾರರು ಪ್ರಯೋಗ ಪರಿಶೀಲನಾದೃಷ್ಟಿಯಿಂದ ಸಂಗ್ರಹಿಸಿ ಗಾಂಧೀಜಿಯವರ ಮುಂದೆ ಇಟ್ಟು, ದೇಶದ ಕೆಲಸಗಾರರ ಕಾರ್ಯಕ್ಕೆ ಮಾರ್ಗದರ್ಶನ ಮಾಡುತ್ತಿದ್ದರು. ಸರ್ ಪಿ. ಸಿ. ರೆ ಅವರಂತವರು ಸಹ "ಸತ್ಯಾಗ್ರಹ ಆಶ್ರಮದವರು ಪ್ರಕಟಿಸುವ ಖಾದಿಕೈಗಾರಿಕೆಯ ಮಾಹಿತಿಗಳು ಪ್ರಯೋಗದಿಂದ ದೊರೆತ ಖರಾರುವಾಕು ಅಂಕಿ ಅಂಶಗಳೇ ಹೊರತು ಬರಿಯ ಅಂದಾಜಿನ ಅಂಕಿಗಳಲ್ಲ" ಎಂದು ಹೇಳಿದರು. ಖಾದಿಯ ಅಂಕಿ ಅಂಶಗಳ ವಿಷಯಗಳನ್ನು ಪರೀಕ್ಷಿಸಲು ಶ್ರೀಮತಿ ಆನಿ ಬೆಸೆಂಟರು, ಒಂದು ಸಲ ಇಬ್ಬರು ಕೆಲಸಗಾರರನ್ನು ಸಾಬರ್ಮತಿ ಆಶ್ರಮಕ್ಕೆ ಕಳುಹಿಸಿದರು. ಅವರು ಬಂದು ಆಶ್ರಮದಲ್ಲಿ ಒಂದುವಾರ ನಿಂತು, ಪ್ರಕಟವಾದ ಅಂಕಿ ಅಂಶಗಳು, ಪ್ರತ್ಯಕ್ಷವಾಗಿ ಕಾರ್ಯ ನಡೆಯುತ್ತಿರುವ ಮಾಹಿತಿಗಳಿಗೆ ಸರಿಯಾಗಿವೆಯೆ? ಎಂದು ನೋಡಿ ತೃಪ್ತರಾಗಿ, ಶ್ರೀಮತಿ ಆನಿಬೆಸೆಂಟರಿಗೆ ತಿಳಿಸಿದಾಗ ಅವರು ತಮ್ಮ ಪತ್ರಿಕೆಯಲ್ಲಿ "ಮಹಾತ್ಮ ಗಾಂಧೀಯವರು ತಮ್ಮ ಎಲ್ಲ ಕಾರ್ಯದಲ್ಲಿ ಮಾಡುವಂತೆ ಖಾದಿಯ ವಿಷಯದಲ್ಲಿಯೂ ಸ್ವಂತ ಅನುಭವದಿಂದ ದೊರೆತ ಫಲಿತಾಂಶಗಳನ್ನೇ ಪ್ರಕಟಿಸಿದ್ದಾರೆ" ಎಂದು ಬರೆದರು.

ಖಾದಿಯಿಂದ ನೈತಿಕ ಪುನರುಜ್ಜೀವನ

ಮಹಾತ್ಮಗಾಂಧೀಯವರ ಕಾರ್ಯಕ್ರಮದಲ್ಲಿ ಖಾದಿಯ ಸ್ಥಾನ ಹೇಗೆ ಪ್ರಾಮುಖ್ಯವಾದುದೋ ಹಾಗೆಯೇ ಆಶ್ರಮದ ಕಾರ್ಯಕ್ರಮದಲ್ಲಿಯೂ ಖಾದಿಗೆ ತುಂಬ ಪ್ರಾಧಾನ್ಯವಿತ್ತು. ವಿಜ್ಞಾನಿ ಹೇಗೆ ಒಂದು ವಿಷಯವನ್ನು ಆರಿಸಿಕೊಂಡು ಹಗಲುರಾತ್ರಿ ಅದನ್ನೇ ಅನುಸರಿಸುತ್ತಾ, ಖರಾರುವಾಕ್ಕಾಗಿ ಅಂಕಿ ಅಂಶಗಳನ್ನು ಗಮನಿಸಿ ಅನ್ವೇಷಣೆ ಮಾಡುತ್ತಾನೋ ಹಾಗೆ ಗಾಂಧೀಜಿ, ತಮ್ಮ ಎಲ್ಲ ರಾಜಕೀಯ ಕಾರ್ಯಗಳಿಗಿಂತಲೂ ಹೆಚ್ಚಾಗಿ ಖಾದಿಗೆ ಮಹತ್ವವನ್ನು ಕೊಟ್ಟಿದ್ದರು. ಗಾಂಧೀಜಿ ಪ್ರತಿದಿನವೂ ನೂಲುತ್ತಿದ್ದರು; ಆಶ್ರಮವಾಸಿಗಳೆಲ್ಲ ಪ್ರತಿದಿನವೂ ನೂಲುತ್ತಿದ್ದರು. ಚರಕ, ಖಾದಿ ಈ ಎರಡು ಮಂತ್ರಗಳಿಂದ ಜನತೆಯ ಬಾಳಿನಲ್ಲಿ ಒಂದು ಅದ್ಭುತ ಬದಲಾವಣೆಯಾಗಿ ಅವರಲ್ಲಿ ಒಂದು ಹೊಸ ಆತ್ಮಪ್ರತ್ಯಯವೂ, ಕೆಚ್ಚೂ, ಧ್ಯೇಯದ ಆದರ್ಶವೂ ನೈತಿಕ ಉನ್ನತಿಯೂ ಉಂಟಾಗುತ್ತಿದ್ದಿತು. ನಮ್ಮ ಜನರಲ್ಲಿ ನಮ್ಮ ಸಂಸ್ಕೃತಿಗೆ ಅನುಗುಣವಾದ ಜೀವನವನ್ನೂ ತ್ಯಾಗವನ್ನೂ ಶಾಂತಿ ತೃಪ್ತಿಯನ್ನೂ ಒದಗಿಸುವ ಗುಣ ಚರಕ, ಖಾದಿಗಳಲ್ಲಿ ಇದ್ದವು. ಅಂದಿನ ಕಾಲದಲ್ಲಿ ಸಹ, ಅನೇಕರು ಚರಕದ ಆರ್ಥಿಕ ಯೋಗ್ಯತೆಯನ್ನು ಅಲ್ಲಗಳೆದರೂ, ಅದರ ನೈತಿಕ ಪರಿಣಾಮವನ್ನು ಮೆಚ್ಚುತ್ತಿದ್ದರು. ಒಂದು ಸಲ ವಲ್ಲಭಾಯಿ ಪಟೇಲರೇ "ಚರಕ ಮನೆಗೆ ಬಂದ ಕೂಡಲೇ, ಟಾಡಿ ಸೀಸೆ ಮನೆಬಿಡುತ್ತದೆ" ಎಂದು ಹೇಳಿದರು.

ನಿಜವಾದ ಕಮ್ಯೂನಿಸಂ

ಸಾಧಾರಣವಾಗಿ ಸಂಜೆಯ ಪ್ರಾರ್ಥನೆಯಾದ ನಂತರ, ಗಾಂಧೀಜಿ, ಆಶ್ರಮವಾಸಿಗಳಿಗೆ ನಾಲ್ಕು ಮಾತುಗಳನ್ನು ಹೇಳುತ್ತಿದ್ದರು. ಅವು ಸಾಧಾರಣವಾಗಿ ಪ್ರಾರ್ಥನೆ ದೇವರು ಮುಂತಾದ ವಿಷಯಗಳಿಗೆ ಸಂಬಂಧಿಸಿದುವಾದರೂ, ಆಶ್ರಮದ ದಿನದಿನದ ವ್ಯವಹಾರಕ್ಕೂ ಸಂಬಂಧಪಟ್ಟವುಗಳಾಗಿರುತ್ತಿದ್ದವು. ಗಾಂಧೀಜಿ, ಎಷ್ಟೇ ಕಠಿಣವಾದ ವ್ರತ ನಿಯಮಗಳನ್ನು ನಡೆಸುತ್ತಿದ್ದರೂ, ಎಷ್ಟೇ ಜಟಿಲ ರಾಜಕೀಯ ಪ್ರಶ್ನೆಗಳನ್ನು ಎದುರಿಸುತ್ತಿದ್ದರೂ ಅವರು ಯಾವಾಗಲೂ ಹಸನ್ಮುಖಿಗಳಾಗಿಯೇ ಇರುತ್ತಿದ್ದರು; ಅವರ ಮಾತುಗಳಲ್ಲಿ ಸಹ ವಿನೋದದ ಚಕಮಕಿ ಇರುತ್ತಿತ್ತು. ಅವರು ಯಾವಾಗಲೂ ಮುಖವನ್ನು ಗಂಟು ಹಾಕಿಕೊಳ್ಳುತ್ತಿರಲಿಲ್ಲ. ತಮ್ಮ ಅನುಯಾಯಿಗಳ ದೌರ್ಬಲ್ಯದಿಂದ ಅವರಿಗೆ ಒಂದೇ ಕ್ಷಣ ಬೇಸರ ಬಂದರೂ, ಮುಂದಲ ಕ್ಷಣವೇ ಮೋಡ ಮರೆಯಾದ ಸ್ವಚ್ಛ ಸೂರ್ಯನಂತೆ ಅವರು ಮಗುವಿನಂತೆ ಉಲ್ಲಾಸಯುಕ್ತರಾಗಿರುತ್ತಿದ್ದರು. ಬೆಳಿಗ್ಗೆ ಸಾಯಂಕಾಲ ಅವರ ಮುಖವನ್ನು ನೋಡುವುದರಿಂದಲೇ ಆಶ್ರಮವಾಸಿಗಳಿಗೆಲ್ಲ ಒಂದು ಆನಂದವುಂಟಾಗುತ್ತಿದ್ದಿತು. ಅವರು ಎಲ್ಲ ಕೆಲಸಗಾರರೊಂದಿಗೆ, ಅವರನ್ನೆಲ್ಲ ಸಮಾನರಾಗಿ ಅರಿತು, ಕೆಲವು ವಿಷಯಗಳಲ್ಲಿ ಅವರೇ ತಮಗಿಂತ ಮೇಲು ಎಂದು ಸಹ ಹೇಳಿ ತೋರಿಸಿ ಕೆಲಸ ಮಾಡುತ್ತಿದ್ದರು. ಆಶ್ರಮದ ಎಲ್ಲರಿಗೂ ದೊರಕದ ಯಾವ ಸೌಲಭ್ಯವನ್ನೂ ಗಾಂಧೀಜಿ ಎಂದೂ ಅಂಗೀಕರಿಸಲೂ ಇಲ್ಲ. ಬಯಸಲೂ ಇಲ್ಲ. ಆಶ್ರಮವಾಸಿಗಳೆಲ್ಲ, ಕಠಿಣವಾದ ನಿಯಮಬದ್ಧ ಜೀವನವನ್ನು ನಡೆಸುತ್ತಿದ್ದರೂ, ಆತ್ಮೋನ್ನತಿ ಮತ್ತು ದೇಶಸೇವೆಯ ಮಾರ್ಗದಲ್ಲಿ ಇದೊಂದು ಮಹಾಪ್ರಯೋಗ ಎಂದುಕೊಂಡು ಗೆಲುವಾಗಿ ಸಂತೋಷದಿಂದ ಕೆಲಸಮಾಡುತ್ತಿದ್ದರು. ಅದು ನಿಜವಾದ ಕಮ್ಯೂನಿಸಂ. ಗಾಂಧೀಜಿಯೆ "ನಾನು ಹಿಂಸಾರಹಿತ ಕಮುನಿಸ್ಟ್" (I am a nonviolent Communist) ಎಂದು ಹೇಳುತ್ತಿದ್ದರು. ಲೆನಿನ್ ಮೋಶ್ ಸೆ ತುಂಗ್‌ರ ಬಾಯ್ದಂಬುಲಕ್ಕೆ ಕೈ ಆನುತ್ತಾ "ರಕ್ತಕ್ರಾಂತಿ ಬುಡಮೇಲು ಕೃತ್ಯಗಳಲ್ಲಿ ತೊಡಗದಿದ್ದರೂ ಕಮ್ಯೂನಿಸಂ ಆಗಲೀ ಸಮಾನತೆಯಾಗಲೀ ಆಗುವುದೇ ಇಲ್ಲವೆಂದು" ಅಕೃತ್ಯಗಳನ್ನು ಪ್ರೇರಿಸುವ ಕಮೂನಿಸಂ ಅಲ್ಲ ಅದು. ಕೊನೆಯಲ್ಲಿ ಗಾಂಧೀಜಿ ಉಪ್ಪಿನ ಸತ್ಯಾಗ್ರಹಕ್ಕಾಗಿ ಈ ಆಶ್ರಮವಾಸಿಗಳಲ್ಲಿ 89 ಮಂದಿಯನ್ನು ಆರಿಸಿಕೊಂಡು ಆ ಐತಿಹಾಸಿಕ ಘಟನೆಯ ಹೊಣೆಯನ್ನು ಹೊರಲು ಅವರೆಲ್ಲ ಅರ್ಹರಾಗಿದ್ದರೆಂಬುದನ್ನು ಜಗತ್ತಿಗೆ ಸಾರಿ ತೋರಿಸಿದರು.

ಯಾವ ಕೆಲಸದಲ್ಲಿಯೂ ಅಚ್ಚು ಕಟ್ಟು

ಆಶ್ರಮದ ನಿಯಾಮಾವಳಿಗಳಲ್ಲಿ ಯಾವ ಕೆಲಸವನ್ನೂ ಚೆನ್ನಾಗಿ ಅಚ್ಚು ಕಟ್ಟಾಗಿ ಕಲಾತ್ಮಕವಾಗಿ ಮಾಡಬೇಕೆಂಬ ನಿಯಮವಿತ್ತು. ಅದಕ್ಕೆ ಗಾಂಧೀಜಿಯೇ ಪ್ರಥಮ ಉದಾಹರಣೆಯಾಗಿದ್ದರು. ಅವರು ತಮ್ಮ ತುಂಡು ಪಂಚೆಯನ್ನು (loin cloth)ತಾವೇ ಒಗೆದುಕೊಳ್ಳುತ್ತಿದ್ದರು. ಅದರ ಅರಗಿಗೆ ತಾವೇ ಸೂಜಿಯಲ್ಲಿ ಹೊಲಿಗೆ ಹಾಕುತ್ತಿದ್ದರು. ಅದರಿಂದಲೇ ಸ್ವಲ್ಪಭಾಗ ಬಟ್ಟೆಯನ್ನು ಹರಿದು, ಅದರ ಅರಗನ್ನೂ ಹೊಲಿದು ಕರವಸ್ತ್ರವನ್ನಾಗಿ ಮಾಡಿಕೊಳ್ಳುತ್ತಿದ್ದರು. ಆಶ್ರಮಕ್ಕೆ ಬಂದ ಪ್ರೇಕ್ಷಕರನ್ನು "ಇಲ್ಲಿಯ ವ್ಯವಸ್ಥೆಯಲ್ಲಿ ಏನಾದರೂ ದೋಷಗಳಿವೆಯೆ?" ಎಂದು ಕೇಳುತ್ತಿದ್ದರು. ಆಶ್ರಮದ ಮುಂದುಗಡೆ ಇದ್ದ ನಲ್ಲಿ, ಒಂದು ಸಲ, ಯಾವಾಗಲೂ ಸೋರುತ್ತಲೇ ಇದ್ದಿತು. ಸೋರಿದ ನೀರು ಅಲ್ಲಿಯೇ ಇಂಗುತ್ತಿದ್ದಿತು; ಮುಂದಕ್ಕೆ ಹರಿದು ಹೋಗಲು ಸರಿಯಾದ ಚರಂಡಿ ವ್ಯವಸ್ಥೆ ಇರಲಿಲ್ಲ. ಒಂದು ಸಲ ಆಶ್ರಮವನ್ನು ನೋಡಲು ಬಂದ ಒಬ್ಬ ಯೂರೋಪ್‌ನವರು ಆ ನಲ್ಲಿಯ ಕಡೆಯೇ ನೋಡುತ್ತಿದ್ದುದನ್ನು ನೋಡಿ ಗಾಂಧೀಜಿ "ಹೌದು ಹೀಗೆ ನೀರು ಇಲ್ಲಿ ಬಿದ್ದು ಇಂಗುವುದು ಸರಿಯುಲ್ಲ. ಸೊಳ್ಳೆ ಹೆಚ್ಚುತ್ತೆ. ಸರಿಯಾದ ಚರಂಡಿ ವ್ಯವಸ್ಥೆ ಮಾಡಬೇಕು" ಎಂದರು. ಬಂದಿದ್ದವರು "ನೀವು ಕೈಕೊಂಡಿರುವ ಅಗಾಧ ಕಾರ್ಯದಲ್ಲಿ ಇದೊಂದು ಸಣ್ಣವಿಷಯ" ಎಂದರು. ಕೂಡಲೇ ಗಾಂಧೀಜಿ "ನಾವು ಇಲ್ಲಿ ನಡೆಸುತ್ತಿರುವ ಜೀವನಕ್ರಮದಲ್ಲಿ ಸಣ್ಣದು ದೊಡ್ಡದು ಎಂಬ ವ್ಯತ್ಯಾಸವಿಲ್ಲ. ನಮ್ಮ ತತ್ವದಂತೆ, ಯಾವ ಕಾರ್ಯವನ್ನೂ ದೋಷಯುಕ್ತವಾಗಿ ಮಾಡಲೇ ಕೂಡದು. ಎಲ್ಲವನ್ನೂ ಅಚ್ಚುಕಟ್ಟಾಗಿಯೇ ಮಾಡಬೇಕು. ನಿಮ್ಮ ಕಣ್ಣು ಆ ದೋಷದ ಮೇಲೆ ಬಿದ್ದುದು ಸರಿ. ತಿಳಿದವರಿಂದ ಕಲಿಯದಷ್ಟು ನಾವು ಇನ್ನೂ ದೊಡ್ಡವರಾಗಿಲ್ಲ" ಎಂದರು.

ಮಾನವೀಯತೆ

ಇಡೀ ಮಾನವ ಕುಲವನ್ನೇ ಅಣ್ಣ ತಮ್ಮನಾಗಿ ಭಾವಿಸಿ, ಜೀವಮಾನದಲ್ಲಿ ಯಾರನ್ನೂ ನಿಕೃಷ್ಟ, ಕೀಳು, ಅಸ್ವತಂತ್ರ ಅಸಮಾನ ಎಂದು ಪರಿಗಣಿಸದೆ, ಸೇವೆ ಮಾಡುವುದಕ್ಕಾಗಿಯೇ ಹರಿಜನನಾಗಿ, ವಿಧವೆಯಾಗಿ, ನೀಗ್ರೋ ಆಗಿ, ಕಾನ್ವಿಕ್ಟ್ ವಾರ್ಡರ್ ಆಗಿ ಝಾಡಮಾಲಿಯಾಗಿ ಮತ್ತೆ ಜನಿಸಬೇಕೆಂದು ಬಯಸಿದ ಕರುಣಾಮೂರ್ತಿ ಗಾಂಧೀಜಿಯವರ ಆಶ್ರಮದಲ್ಲಿ, ಶುಷ್ಕ ಶಿಸ್ತಿಗಿಂತ ಹೆಚ್ಚಾಗಿ ಕರುಣೆ, ಪರಸ್ಪರ ಹೊಂದಾಣಿಕೆ ಮಾನವೀಯತೆ ಇವುಗಳ ಆಧಾರದ ಮೇಲೆಯೇ ಕೆಲಸಗಳೆಲ್ಲ ನಡೆಯುತ್ತಿದ್ದವು. ಗಾಂಧೀಜಿ, ಮಾನವೀಯತಾಗುಣಗಳ ಆದರ್ಶವಾಗಿದ್ದರು. ಒಂದು ಸಲ, ಒಬ್ಬ ಆಶ್ರಮವಾಸಿಗೆ ಜ್ವರ ಬಂದಿತು. 3–4 ದಿನಗಳಾದರೂ ಜ್ವರ ಗುಣವಾಗಲಿಲ್ಲ. ರೋಗಿಯು, "ಪುಡಿ ಹೆಚ್ಚಾಗಿ ಹಾಕಿದ ಕಾಫಿಯನ್ನು (ಸ್ಟ್ರಾಂಗ್) ಕುಡಿದರೆ ತನ್ನ ಜ್ವರ ವಾಸಿಯಾಗುವುದೆಂದು ಮತ್ತೊಬ್ಬ ಆಶ್ರಮವಾಸಿಯೊಂದಿಗೆ ಹೇಳಿದ ನೆಂಬುದು ಗಾಂಧೀಜಿಯ ಕಿವಿಗೆ ಬಿದ್ದಿತು. ಆಶ್ರಮದಲ್ಲಿ ಕಾಫಿ, ಟೀ, ಕೋಕೋ ಯಾವುದರ ಪ್ರವೇಶವೂ ಇರಲಿಲ್ಲ. ಆದರೂ ಮರುದಿನ ಬೆಳಿಗ್ಗೆ ಗಾಂಧೀಜಿಯೇ ಒಂದು ಲೋಟ ಘಮಘಮಿಸುವ ಸೊಗಸಾದ ಕಾಫಿಯನ್ನು ತಯಾರ್ಮಾಡಿ, ತೆಗೆದುಕೊಂಡು ಹೋಗಿ ರೋಗಿಗೆ ಕೊಟ್ಟರು. ಈ ವಿಶ್ವಪ್ರೇಮಿಯ ಕರುಣೆ ಯನ್ನು ನೋಡಿ ರೋಗಿಯ ಕಣ್ಣುಗಳಲ್ಲಿ ನೀರು ಬಂದಿತು.

ಭಾರತದ ಪುಣ್ಯದ ಫಲ

ಗಾಂಧೀಜಿ, ಭಾರತದ ಸಮಸ್ತ ಸದ್ಗುಣಗಳ ಫಲ. ನೂರೈವತ್ತು ವರುಷ ಗುಲಾಮಗಿರಿಯಲ್ಲಿದ್ದ ನಿರ್ವೀರ್ಯ ನಲವತ್ತು ಕೋಟಿ ಜನತೆಯನ್ನು, ಸತ್ಯ ಅಹಿಂಸೆ ತ್ಯಾಗ ಬಲಿದಾನಗಳ ಮೂಸೆಯಲ್ಲಿ ತಿದ್ದಿ, ಮಣ್ಣಿನಿಂದ ಮನುಷ್ಯರನ್ನು ಮಾಡಿ, ಹೇಡಿಗಳನ್ನು ಧೀರರನ್ನಾಗಿ ಮಾಡಿ, ಇಪ್ಪತ್ತೈದು ವರುಷಗಳ ಕಾಲ ಹೋರಾಟ ನಡೆಸಿ ನಮಗೆ ಸ್ವರಾಜ್ಯವನ್ನು ಸಂಪಾದಿಸಿಕೊಟ್ಟರು. ಈ ದೇಶದ ಸ್ತ್ರೀ ಪುರುಷರು, ಅವರ ನೇತೃತ್ವದಲ್ಲಿ ಯಾವ ಪುರಾಣ ಕಾಲದಲ್ಲಿಯೂ ತೋರಿಸದ ಅದ್ಭುತ ಧೈರ್ಯವನ್ನೂ ಸಾಹಸವನ್ನೂ ಮಾಡಿದರು. ವಿನಿಸೆಂಟ್‌ಶೇನ್‌ರು ಹೇಳುವಂತೆ "ನಮ್ಮ ಕಾಲದಲ್ಲಿ ಗಾಂಧೀಜಿಗೆ ಸಮಾನರು ಯಾರೂ ಇಲ್ಲ. ಅವರು ಎಲ್ಲರನ್ನೂ ಸಮನಾಗಿ ಕಂಡರು. ನಮಗೆ ತಿಳಿದ ಮಟ್ಟಿಗೆ, ಹಿಂದೆ ಸಾಕ್ರಟೀಸನ ವಿಷಯದಲ್ಲಿ ಹೇಳಿದಂತೆ ಇವರ ವಿಷಯದಲ್ಲಿಯೂ ಹೇಳಬಹುದು. ಇವರು ಅತ್ಯುತ್ತಮರು ಮತ್ತು ಜ್ಞಾನಿಗಳು"

ಜಗತ್ತಿನ ಇಂತಹ ಅದ್ವಿತೀಯ ಮಹಾಪುರುಷನನ್ನು ನಮ್ಮ ನಡುವೆ ಹೊಂದಿ ಅವರೊಂದಿಗೆ ಬಾಳುವ ಪುಣ್ಯವನ್ನು ನಾವು ಪಡೆದೆವು. ಅವರ ಆದರ್ಶಗಳನ್ನು ಅನುಸರಿಸಿ ಅವರಿಗೆ ನಾವು ಅರ್ಹ ರಾಗುವೆವೆ?

ಬಿ. ಎ. ಸನದಿ

ಅಳು ಬಂತು

ನಮ್ಮಪ್ಪ ಸತ್ತಾಗ
ತಾಪಿಯ ಸಂತಾಪದಂತೆ
ನನ್ನ ಕಂಗಳ ನದಿಗೆ ಮಹಾಪೂರ ಬರಲಿಲ್ಲ;
ಎಲ್ಲರಪ್ಪಂದಿರೂ ಸಾವ ಕಾಣುವವರೆ
'ಸಾವು ಕಾಣದ ಮನೆಯ ಸಾಸಿವೆ'ಯ ಕಣಜಕ್ಕೆ
ಸುರಂಗ ಹೊಡೆಯುವವರೆ!

....

ನನಗೊಮ್ಮೆ ಒಂದಿನಿತು
ಅಳು ಬಂತು, ಸುಳ್ಳಲ್ಲ-
ಅಪ್ಪ ಸತ್ತುದಕಲ್ಲ;
ಮರಣಸಮಯದೊಳವನ ಪಕ್ಕದೊಳು
ನಾನಿರದೆ
ತಾನಿದ್ದು
ಜಾಹೀರು ದುಃಖ ಪ್ರದರ್ಶನಗೈದುದಕೆ
ಕೂಲಿ ಕೇಳಿದ ನಮ್ಮ ಅಪ್ಪನ ಮಗಳ ವೈಭವಕ್ಕೆ.

(ಸಂ) ವಿ. ಶಿವಾನಂದ

ಪುಲಿಗೆರೆಯ ಮಹಾಲಿಂಗದೇವರ ಅಭವಕಂದ

ಕರ್ತೃವಿಚಾರ :

ವೀರಶೈವಸಾಹಿತ್ಯದ ಪುನರುತ್ಥಾನ ಹಾಗೂ ಪುನರ್ವಿರಚನೆಗಳ ಇತಿಹಾಸದಲ್ಲಿ ಪ್ರೌಢದೇವರಾಯನ ಕಾಲವು (ಕ್ರಿ.ಶ. 1424–1446) ಮಹತ್ತರವಾಗಿದೆ. ಬಸವಾದಿ ಪ್ರಮಥರ ಕಾಲದಲ್ಲಿ ರಚನೆಯಾದ ವಚನಗಳಿಗೆ ಸಂಬಂಧಿಸಿ ವಚನ ಸಂಕಲನ, ಸಂಯೋಜನ, ಸ್ಥಲ–ಕಟ್ಟು ನಿರ್ಮಾಣ, ಸೂತ್ರರಚನೆ, ವಚನ ರೂಪದ ಹಾಡುಗಳ ಯೋಜನೆ, ಅವಕ್ಕೆ ರಾಗತಾಳ ನಿರ್ದೇಶನ, ವಚನಗಳ ಟೀಕೆ, ವ್ಯಾಖ್ಯಾನಗಳ ಕುರಿತು ವಿಪುಲ ಸಾಹಿತ್ಯ ಈ ಕಾಲಕ್ಕೆ ಹೊರಹೊಮ್ಮಿದೆ. ಈ ಅವಧಿಯಲ್ಲಿ ಮಹಾಲಿಂಗದೇವನ–(1) ಏಕೋತ್ತರ ಶತಸ್ಥಲ (2) ಷಟ್‌ಸ್ಥಲ ಚಾರಿತ್ರ ವಚನ ಟೀಕೆಗಳು ವಿರಳ ಕಾಣಿಕೆಯಾಗಿವೆ. ಇವನ ಕಾಲವನ್ನು ಕವಿ ಚರಿತ್ರೆಕಾರರು ಕ್ರಿಶ. 1425 ಎಂದಿದ್ದಾರೆ1. ಈ ಮಹಾಲಿಂಗದೇವನೇ ಪ್ರಸ್ತುತ ಅಭವಕಂದದ ಕರ್ತೃವಾಗಿದ್ದಾನೆ.

ಮಹಾಲಿಂಗದೇವನು ತನ್ನ 'ಏಕೋತ್ತರ ಸ್ಥಲ'ದ ಆರಂಭದಲ್ಲಿ "ಸ್ವಸ್ತಿ ಸಮಸ್ತ ಭುವನ ಜನ ತಿಮಿರ ಹರಣ ಕಾರಣ ಸ್ವರೂಪರುಂ ಭಕ್ತಿ ದೇಹಿಕ ದೇವರುಂ, ಭಕ್ತಿವತ್ಸಲರುಂ, ಸರ್ವಾಂಗ ಪ್ರಾಣ ಲಿಂಗಮೂರ್ತಿ ವಿಲಾಸರುಂ, ಪುಲಿಗೆರೆಯ ಪುರವರಾಧೀಶ್ವರರುಂ ಅಪೂರ್ವ ಸ್ವಯಂಭು ಪ್ರಸನ್ನ ಚನ್ನ ದಕ್ಷಿಣ ಶ್ರೀ ಸೋಮನಾಥ ದೇವರ ದಿವ್ಯ ಶ್ರೀಪಾದ ಪದ್ಮಾರಾಧಕರುಂ, ಪರಮ ವೀರಶೈವಾಗಮಾಚಾರ್ಯರುಂ, ಶ್ರುತಿ ಸ್ಮೃತಿ ಪುರಾಣಾಗಮಂ ಇತಿಹಾಸಾದಿ ನಾನಾ ಶಾಸ್ತ್ರ ಕೋವಿದರುಂ, ಗುರು ಮೂರ್ತಿ ಜಗದಾರಾಧ್ಯರುಮಪ್ಪ ಮಹಾಲಿಂಗ ದೇವರ ಅನಾದಿ ಸಂಸಿದ್ಧ ಗುರುಕುಲದನ್ವಯವೆಂತೆಂದೊಡೆ"2 ಎಂಬ ಉದ್ಧರಣೆಯಿಂದ ಇವನು ಪುಲಿಗೆರೆಯ (ಈಗಿನ ಲಕ್ಷ್ಮೇಶ್ವರ)ವನೆಂದೂ, ಅಲ್ಲಿಯ ಸ್ವಯಂಭು ಸೋಮನಾಥನ ಆರಾಧಕನಾಗಿ, ವೇದಶಾಸ್ತ್ರ ಪುರಾಣ ಪಾರಂಗತನಾಗಿ, ಪರಮ ವೀರಶೈವಾಗಮಾಚಾರ್ಯನಾಗಿ, ನಾಮಖ್ಯಾತನಾಗಿದ್ದ ಸಂಗತಿ ಗೊತ್ತಾಗುತ್ತದೆ. ಮಹಲಿಂಗದೇವನು ಹೇಳಿಕೊಂಡಿರುವ ತನ್ನ 21 ಗುರುಕುಲದನ್ವಯದಲಿ 'ಘನ ವೀರಶೈವಕ್ಕೆ ಮುಖ್ಯರಾದ' ಸೋಮ ಶಂಭು ದೇಶಿಕ, ಸಂಹಿತೆಯ ಕಾಳಿದಾಸ ಭಟ್ಟ, ಪುಲಿಗೆರೆಯ ಪುರಾಣದ ಮಾಯಿದೇವ ಪಂಡಿತ, ಕಾಮಿಕಾದಿ ಆಗಮಗಳಿಗೆ ವೃತ್ತಿ ದೀಪಿಕೆ ಬರೆದ ಸಕಲಾಗಮಾಚಾರ್ಯ, ವಚನಕಾರ ಉರುಲಿಂಗ ಪೆದ್ದಣ್ಣ, ಶ್ರೇಷ್ಠರಾಗಿದ್ದಾರೆ. ಇವರಲ್ಲಿ 20ನೆಯವನು ಮಹಾಲಿಂಗ ದೇವನಾಗಿದ್ದಾನೆ. ಇವನ ಶಿಷ್ಯ ಪ್ರಭುದೇವರ ವಚನಗಳಿಗೆ ಟೀಕೆ ಬರೆದ ಕುಮಾರ ಬಂಕನಾಥ. ಬಂಕನಾಥನ ಶಿಷ್ಯ ಪ್ರೌಢದೇವರಾಯನ ಮಂತ್ರಿ 'ಭಕ್ತಿ ಭಂಡಾರಿ' ಜಕ್ಕಣಾರ್ಯ, ಈತ ನೂರೊಂದು ಸ್ಥಲದ ಕರ್ತೃ. ಮಹಾಲಿಂಗ ದೇವನ ವಂಶಿಕರಲ್ಲೇ ಒಬ್ಬನಾದ ನೀಲಕಂಠಾಚಾರ್ಯ ಕ್ರಿಯಾಸಾರದ ರಚಕ. ಇವನ ಶಿಷ್ಯ ಬೊಮ್ಮರಸ. ಹೀಗೆ ಮುಂದುವರಿದು

---

1 ಕವಿಚರಿತೆ ಭಾವಿ ಪು. 10

2 ಏಕೋತ್ತರ ಶತಸ್ಥಲ ಹ.ಪ್ರ.ವ. 291

ಬಂದ ಈ ಶಿಷ್ಯ–ಪ್ರಶಿಷ್ಯ ಪರಂಪರೆ ಕನ್ನಡದ ಅನುಭಾವಿಗಳ ಬಹುದೊಡ್ಡ ಸಾಹಿತ್ಯಕ್ಕೆ ನೆಲೆಯಾಗಿದೆ. ಅಪಾರವಾದ ಪಾಂಡಿತ್ಯ–ಪ್ರತಿಭೆಗಳ ಸಂಸ್ಕಾರ ಬೀಜವನ್ನು ಕಾಲಕಾಲಕ್ಕೆ ಬಿತ್ತಿ ಪರತತ್ವವನ್ನು ಬೆಳೆದುಣ್ಣುವ ಒಕ್ಕಲು ಮಕ್ಕಳಂತೆ ಮಹಾಲಿಂಗ ದೇವನ ವಂಶ ಪರಂಪರೆ ಇದೆ. ಇವನು 'ನೂರೊಂದು ವಿರಕ್ತ'ರಲ್ಲಿ ಒಬ್ಬನಲ್ಲವಾದರೂ 'ನೂರೊಂದು ಸ್ಥಳ–ಕುಳ'ದ ಹಿನ್ನೆಲೆಯಲ್ಲಿ ವಚನಾಗಮವನ್ನು ಅಳವಡಿಸುವುದರಲ್ಲಿ ಆದಿ ಮತ್ತು ಅಗ್ರಗಣ್ಯನೆಂದು ಹೇಳಬಹುದು. ಮಹಾಲಿಂಗದೇವನು 'ಏಕೋತ್ತರ ಶತಸ್ಥಲವನ್ನಲ್ಲದೆ ಇನ್ನೂ ಕೆಲವು ಕೃತಿಗಳನ್ನು ರಚಿಸಿದ್ದಾನೆ. ಮೊದಲ ಬಾರಿಗೆ ಬೆಳಕಿಗೆ ಬರುತ್ತಿರುವ ಅವನ ಕೃತಿಗಳಲ್ಲೊಂದಾದ 'ಅಭವ ಕಂದ'ದ ಸಂಕ್ಷಿಪ್ತ ಪರಿಚಯವನ್ನಿಲ್ಲಿ ಮಾಡಿಕೊಟ್ಟಿದೆ.

ಅಭವಕಂದ

'ಕವಿಚರಿತೆ'ಯಲ್ಲಾಗಲಿ 'ಕವಿಚರಿತೆಯ ಅನುಕ್ತಕೃತಿ ಸೂಚಿ'ಯಲ್ಲಾಗಲಿ ಈವರೆಗೆ 'ಅಭವಕಂದ'ದ ನಾಮೋಲ್ಲೇಖವಿಲ್ಲ. ಅದು ನೆಲದ ಮರೆಯ ನಿಧಾನದಂತಿರುವ ತಾಳೆಗರಿಯ ಹಲವು ಹತ್ತು ಕಂದಗಳ ನಡುವೆ ಸೇರಿಕೊಂಡ ಒಂದು ತಬ್ಬಲಿ ಕಂದವಾಗಿರುವುದೇ ಇದಕ್ಕೆ ಕಾರಣ. ನಮಗೆ ದೊರೆತ ಒಂದು ತಾಳೆಗರಿ ಪ್ರತಿಯಲ್ಲಿ1 ಒಂದೆಡೆ 'ಮಹಾಲಿಂಗ ದೇವರು ನಿರೂಪಿಸಿದ ಕಂದ ಏಳುನೂರರೊಳಗೆ ತೆಗೆದ ಸ್ತೋತ್ರದ ಕಂದ ಸಮಾಪ್ತಮಂಗಳ ಮಹಾಶ್ರೀ' ಎಂದಿದೆ. ಇದರ ಹಿಂದೆ 'ಅಭವ' ಎಂಬ ಅಂಕಿತದಲ್ಲಿ ಮುಗಿಯುವ 41 ಪದ್ಯಗಳನ್ನು ಸೇರಿಸಿ 'ಅಭವಸ್ತೋತ್ರದ ಕಂದ' ಎಂದು ಹೆಸರಿಸಿದೆ. ಇದಕ್ಕೆ ಹೊರತಾದ ಇತರ 659 ಕಂದಗಳೆಲ್ಲವೂ ಒಂದೆಡೆ ದೊರಕುವದು ಕಷ್ಟಸಾಧ್ಯ. ಸದ್ಯಕ್ಕೆ ಅವೂ ಕೂಡ ಇದೇ ಮಾದರಿಯ ಬೇರೆ ಬೇರೆ ರೂಪದ ಸ್ತೋತ್ರ ಸಂಗ್ರಹಗಳಾಗಿರಬೇಕೆಂದು ಊಹಿಸಬಹುದು.

ಅಭವಕಂದದ ರಚನೆ ಸರಳವಾಗಿದೆ. ನಡುಗನ್ನಡದಲ್ಲಿ ರಚಿತವಾಗಿರುವದರಿಂದ 'ೞ' ಕಾರದ ಪ್ರಯೋಗ ವಿರಳವಾಗಿದೆ. 'ಅಭವ', 'ರಕ್ಷಿಪುದಭವ', ಎಂಬ ಅಂಕಿತನೊಡನೆ ಇದರ ಎಲ್ಲ ಪದ್ಯ ಮುಗಿಯುವದು ವಿಶಿಷ್ಟಪೂರ್ಣವಾಗಿದೆ. ಅಂಕಿತವಿರುವ ಕಂದಗಳನ್ನು ಕೆಲವರು 'ಶತಕ'ವೆಂದು ಪರಿಗಣಿಸಿರುವುದರಿಂದ2 ಇದೂ ಶತಕರೂಪದ ಕಂದವೆಂದು ಕರೆಯಬಹುದಾಗಿದೆ. ಆದರೆ ಇಲ್ಲಿ 100 ಪದ್ಯಗಳಿಲ್ಲ. ಇದರಲ್ಲಿ ಭಾವಗೀತೆಯ ಕೆಲವು ಲಕ್ಷಣಗಳು ಸ್ಪಷ್ಟವಾಗಿ ಗೋಚರಿಸುವದನ್ನು ಕಾಣುತ್ತೇವೆ." "ನೀನಭವ ನಾನು ಭವಯುತ""ನಿನ್ನ ಸ್ವಲೀಲೆಯಿಂದ ಮಿಗೆ ಬಿನ್ನಣದ ರೂಪ ಮಾಡಿ ಮುದ್ದಿಸಿ ಮೋಹಿಸಿ ಬಣ್ಣಿಸಿ ಭಾವಿಸಿ ಮರ್ತ್ಯಕೆ ಎನ್ನಂ ಕಳುಹಲ್ಕೆ ಬಂದೆನಭವ" "ಪರತತ್ವದಿರವೆ ಎನ್ನಯ ಕರಕಮಲದೊಳಡಗಿದೆಯಭವ" ಎಂಬೀ ಕಡೆಗಳಲ್ಲಿ ಅಂತರಂಗ ನಿರೀಕ್ಷಣೆಗೆ ಅನುಭವದ ವಿರಳತೆ ಒಪ್ಪವಿಟ್ಟುದನ್ನು ಕಾಣುತ್ತೇವೆ. 'ಅಭವಕಂದ'ವು ಚಿಕ್ಕದಾದರೂ ವೀರಶೈವ ತತ್ವಜ್ಞಾನದ ದೃಷ್ಟಿಯಿಂದ ಮಹತ್ವಪೂರ್ಣವಾಗಿದೆ. ಪರಮಾತ್ಮನ ಅಗೋಚರ ಸ್ಥಿತಿ. ಲೀಲಾ ವಿನೋದಮಾತ್ರದಿಂದ ಪರಶಿವತತ್ವ. ಅಂಗಲಿಂಗವೆಂದೆರಡಾಗುವನು. ಪಿಂಡ, ಪಿಂಡಜ್ಞಾನ. ಗುರುಕಾರುಣ್ಯ. ಶರಣಸತಿ–ಲಿಂಗಪತಿಭಾವ. ಲಿಂಗಾಂಗ ಸಾಮರಸ್ಯಗಳ ಸೂಕ್ಷ್ಮ ವಿಚಾರಗಳು ಮನೋಜ್ಞವಾಗಿಯೂ, ಸುಲಲಿತವಾಗಿಯೂ ಈ ಕಂದದಲ್ಲಿ ನಿರೂಪಿತವಾಗಿರುವುದರಿಂದ ಪ್ರಾತಃಸ್ಮರಣೀಯ ಸ್ತೋತ್ರವಾಗಿದೆ. ಕನ್ನಡದ ಸ್ತೋತ್ರರೂಪದ ಕಂದ ಸಾಹಿತ್ಯಕ್ಕೆ ಮಹಲಿಂಗದೇವನ ಸ್ವತಂತ್ರ ಕಾಣಿಕೆಗಳಲ್ಲಿ ಇದು ಒಂದಾಗಿದೆ.

ಮೂಲಪಾಠ

ಇದರ ಮೂಲಪಾಠವನ್ನು ಕರ್ನಾಟಕ ವಿಶ್ವವಿದ್ಯಾನಿಲಯದ ವಚನ ಭಂಡಾರದಲ್ಲಿ ದೊರಕಿದ ತಾಳೆಯೋಲೆಯಿಂದ (ಪ್ರತಿ ನಂಬರು 791) ಎತ್ತಿಕೊಳ್ಳಲಾಗಿದೆ. ಪ್ರತಿ ಶುದ್ಧವಿದ್ದರೂ ಒಂದೆರಡು ಕಡೆಗಳಲ್ಲಿ ತ್ರುಟಿತವಾಗಿದೆ. ಅದನ್ನು [ ]ಈ ಸಂಜ್ಞೆಯಿಂದ ಸೂಚಿಸಿದೆ. ನರರಜೂಯದ (ಪ.4) ಎಂಬಲ್ಲಿ 'ಅಜೂ'

---

1 ತಾಳೆಗರಿ ಪ್ರತಿ ನಂ. 791 ವಚನ ಭಂಡಾರಕ ವಿ. ವಿ: ಧಾರವಾಡ

2 ರತ್ನಾಕರ ಶತಕ ಸಾಹಿತ್ಯ ಪು. 234 ನೋ.

ಸಿದ್ಧಿತವಾಗಿ 'ಜ' ಕಾರವನ್ನುಳಿಸಿಕೊಂಡಿದೆ. ಕೀಳು (ಪ. 6) ಎನ್ನುವನು (9) ಎಂಬೀ ಕಡೆಗಳಲ್ಲಿ ವ್ಯಂಜನಾಂತ್ಯ, ಸ್ವರಾಂತ್ಯಗಳಾಗಿವೆ. ಪೋಗು (12) ಕಳಪು (11) ಎಂಬಲ್ಲಿ ಪಕಾರವು ಹಕಾರವಾಗಿದೆ. ಒಟ್ಟಿನಲ್ಲಿ ನಡುಗನ್ನಡ ಕಂದದ ಲಕ್ಷಣಗಳಿಗೆ ಇದು ಮಾದರಿಯಾಗಿದೆ. ಒಂದೇ ಪ್ರತಿಯನ್ನವಲಂಬಿಸಿ ರುವದರಿಂದ ಇದರ ಬೇರೆ ಪಾಠಾಂತರಗಳನ್ನಿಲ್ಲಿ ಬಿಟ್ಟುಕೊಟ್ಟಿದೆ. ಇದರ ಸಂಶೋಧನೆ ಮತ್ತು ಸಂಪಾದನೆಗೆ ನೆರವು ನೀಡಿ 'ಅಭವ ಕಂದ'ದ ಅಮೂಲ್ಯ ಪ್ರತಿಯನ್ನು ಒದಗಿಸಿಕೊಟ್ಟ ವಚನ ಭಂಡಾರದ ಡೈರೆಕ್ಟರ್ ಆದ ಡಾ. ಆರ್. ಸಿ. ಹಿರೇಮಠ ಅವರಿಗೆ ನಾನು ಕೃತಜ್ಞನಾಗಿದ್ದೇನೆ.

ಮಹಾಲಿಂಗದೇವರ 'ಅಭವಕಂದ'

ಶ್ರೀ ಸದಾಶಿವ ಮಹೇಶ್ವರ
ಶಾಶ್ವತ ಸರ್ವಜ್ಞ ಗುರುವರೇಣ್ಯ ಕೃಪಾಕರ
ಈಶ ಎನ್ನಯ ನಿಜಕರ
ವಾಸಾ ಸರ್ವೇಶ ರಕ್ಷಿಸೆನ್ನನಭವ ॥೧॥

ಜಯಸಕಲ ದೇವ ವಲ್ಲಭ
ಜಯ ಸಕಲಾಗಮ ಪುರಾಣಶಾಸ್ತ್ರಕೆ ದುರ್ಲಭ
ಜಯದೋಷ ವಿಪಿನ ಪಾವಕ
ಜಯವಿತ್ತನವರತಲೆನ್ನ ರಕ್ಷಿಪುದಭವ ॥2॥

ಧರೆ ಗಗನಾದಿಗಳಿಲ್ಲದೆ
ನಿರವಯದೊಳು ಲೀಲೆಯಿಂದ ಶೂನ್ಯವೆನಿಪ್ಪ
ಪರತತ್ವದಿರವೆ ಯೆನ್ನಯ
ಕರಕಮಲದೊಳಡಗಿಯಭವ ರಕ್ಷಿಸು ಕೃಪೆಯಿಂ ॥3॥

ಶಂಭು ಸ್ವಯಂಭು ನೀನೆ
ಅಂಬಕತ್ರಯ ನಿನ್ನದೊಂದು ಲೀಲಾಮಾತ್ರದಿ
ಕುಂಭಿನಿಯೊಳೆಯ್ದಿ ಯೆನ್ನಯ
ಬೆಂಬಳಿವಿಡಿದರಸಿ ಬಂದ ಬಗೆ ಲೇಸಭವ ॥4॥

ನರರಱಿಯದ ಸುರರರಱಿಯದ
ಸರಸಿಜಭವಜಾಕ್ಷರರಸಿಯು ಕಾಣದ
ಪರತತ್ವದಿರವೆಯೆನ್ನಯ
ಶರಿರೇಂದ್ರಿಯದಲ್ಲಿ ನಿಂದು ರಕ್ಷಿಪುದಭವ ॥5॥

ನೀನೆ ಗುರು ನೀನೆ ಶಿಷ್ಯನು
ನಾನೆಂಬುದಿಲ್ಲ ದಾನಿ ನಿನ್ನಯ ಮೋಹಕೆ
ನೀನೆನ್ನ ಕರದೊಳಗಿದ್ದಡೆ
ನಾ[ ]ತ್ರಭವ ಕೀಳು ಕೀಳಲೆ ತಂದೆ ॥6॥

ಅಂದುಯಿಂದುಯೆಂದು
ಸಂದೇಹಗಳೇಕೆ ನಿನಗೆ ಸತಿ ನಾಂ ಪತಿ ನೀಂ

ಕುಂದು ಹೆಚ್ಚುಗಳುಮಿರ್ಪರಿ
ಗೆಂದೆಂದುಮಿಲ್ಲ ತಂದೆ ನಡೆಸು ಗಡಭವ ॥7॥

ಗಣಸಾಕ್ಷಿಯಾಗಿಯೆನ್ನನು
ನಿನಗೆಂದುಂ ಕೊಟ್ಟು ಧಾರೆಯೆರೆದುದನಱಿಯ
ಅನಪಮ ಶ್ರೀಗುರುರಾಯಂ
ಅನಘ ನೀನೆನ್ನ ಮರೆವುದುಚಿತವೆಯಭವ ॥8॥

ಶರಣಸತಿ ಲಿಂಗಪತಿಯೆಂ
ದುರೆತರ ವಾಕ್ಯಗಳು ನಿಮ್ಮೊಳಿರುತಿರೆಯದರಿಂ
ಹೊರೆಯಿಲ್ಲದಂತೆಯೆನ್ನನು
ನೆರೆದುಳುಹೆಲೆ ತಂದೆ ಕುಂದದೆನ್ನುವನಭವ ॥9॥

ನಿನ್ನ ಸ್ವಲೀಲೆಯಿಂ ಮಿಗೆ
ಬಿನ್ನಾಣದ ರೂಪು ಮಾಡಿ ಮುದ್ದಿಸಿ ಮೋಹಿಸಿ
ಬಣ್ಣಿಸಿ ಭಾವಿಸಿ ಮರ್ತ್ಯಕೆ
ಎನ್ನಂ ಕಳುಹಲ್ಕೆ ಬಂದೆನಳುಕೆನಭವ ॥10॥

ನಾ ನಿನ್ನ ಬೇಡಿಕೊಂಡೆನು
ನೀನೆ ನಿನ್ನರ್ತಿಗಾಗಿ ಮರ್ತ್ಯಕೆನ್ನನ
ದೇನೆಂದು ಕಳುಹಿ ಸುಮ್ಮನೆ
ಮೋನದೊಳಿರಲೇಕೆ ತಂದೆ ಬೆಸಸು ಗಡಭವ ॥11॥

ಮುಂದು ಕಳುಹುತಲಿ ನಾನೆಲೆ
ಬಂದಪೆ ನಿನ್ನೊಡ ಹೋಗು ಹೋಗೆಂದಭಯವ
ಅಂದು ನೀನಿತ್ತ ಕಾರಣ
ತಂದೆ ನಾ ಬಂದೆ ರಕ್ಷಿಸೆನ್ನುವನಭವ॥12॥

ಮಾತೆಯ ಜಠರದೊಳಗಂ-
ಓತು ಮಹಾಕೃಪೆಯೊಳೇಕ ಮಾಸಂ ತೊಡಗುತೆ
ಭೂತೇಶನೆ ನವಮಾಸಕೆ
ಪ್ರೀತಿಯೊಳೆನಗಶನವಿತ್ತುದಿಲ್ಲವೆಯಭವ ॥13॥

ಇಟ್ಟೆಡೆಯ ಬಟ್ಟೆಯೊಳಗಂ
ನೆಟ್ಟನೆ ಕೈವಿಡಿದು ತೆಗೆದು (?)
ಪೊಟ್ಟಣವ ಕಟ್ಟಿ ಸುಧೆಯಂ
ಕಟ್ಟಕ್ಕರೊಳಿತ್ತು ಸಲಹುತಿಲ್ಲವೆಯಭವ ॥14॥

ಮಾನವ ಜನ್ಮದೊಳೆನ್ನಂ
ನೀಂ ಬರಿಸಿದೊಡಾನು ಬಂದೆನೆಲೆ ಸರ್ವೇಶ

ನಾನೇನಾದೊಡೆ ಸ್ವತಂತ್ರನೆ
ನೀ ನಡಸಿದ ತೆರದೊಳಾನು ನಡೆದಪೆನಭವ ॥15॥

ಸಿಸುವಾಗಿ ಕೆಲವು ದಿವಸಂ
ಪಶುಬಾಲ್ಯತೆಯಿಂದಾಂ ಪಲವು ದಿವಸಂಗಳೊಳಂ
ಹಸಗೆಡುತೆವ್ವನ ಮದದಿಂ
ಪಶುಪನೆ ನಾಂ ಮುಂದುಗೆಟ್ಟೆ ರಕ್ಷಿಪುದಭವ ॥16॥

ಹೊನ್ನು ಹೆಣ್ಣೆಂಬ ಆಸೆಯು
ಕಣ್ಣಿನ ಮುಂದೊಡ್ಡಿ ನಿನ್ನ ತಪ್ಪಿಸಿ
ಬನ್ನಂಬಡೆವಂತು ಮಾಡಿದೆ
ಕಣ್ಣಂ ಮೂರ್ಯೆದುವುಳ್ಳ ಕರುಣಿಯೆ ಅಭವ ॥17॥

ಅಷ್ಟಮದವೆನ್ನ ದೇಹವ
ನಟ್ಟುಳಿಯ ಮಾಡಿ ನಿಮ್ಮ ಶ್ರೀ ಪದಪದ್ಮದ
ಬಟ್ಟೆಯನು ಮರಸಿ ಕಾಲನ
ಅಟ್ಟುಳಿಯೊಳಗಿರಿಸದೆನ್ನ ರಕ್ಷಿಪುದಭವ ॥18॥

ನರಚರ್ಮದೇಹಿ ನಾಸೆಲೆ
ಮರವೆಯ ವಸವಾಗಿ ಸಪ್ತ ವ್ಯಸನದೆ ಬಿದ್ದಿಹ
ನಿರವಂ ನೀ ನೋಡದೊಡಾಂ
ಗುರಿಯಹೆನು ಮಾಯೆಗಭವ ರಕ್ಷಿಸು ಕೃಪೆಯಿಂ ॥19॥

ಅರಿಷಡ್ವರ್ಗದ ಬಾಧೆಗೆ
ಗುರಿ ಮಾಡದಿರಭವ ನಿನ್ನ ಮೋಹದ ಶಿಶುವಂ
ಗುರುವೆಯೆನ್ನಯ ಪುಣ್ಯದ
ತರುವೆ ಸುರತರುವೆ ರಕ್ಷಿಸೆನ್ನುವನಭವ ॥20॥

ಪರಧನ ಪರಸತಿಗಳುಪುವ
ಪರನಿಂದೆಗೆ ಪರರ ಕೊಲೆಗೆ ಹೇಸದ ಅಜ್ಞಾನ
ಪರಮ ಕೃಪಾಕರ ಸಿಂಧುವೆ
ಪರಿರಕ್ಷಿಸುಯೆನ್ನ ತಪ್ಪುನೋಡದೆ ಅಭವ ॥21॥

ಮುನ್ನೊಬ್ಬ ಶಬರ ಬೇಂಟೆಗೆ
ಕಣ್ಣಿಗೆ ಮರೆಯಾದ ತಳಿರ ಮುರಿಮುರಿದೊಟ್ಟಲು
ನಿನ್ನ ಪದ ಪೂಜೆಯಾದುದು
ಮನ್ನಿಸಿ ಶಿವಲೋಕಿತ್ತುದಿಲ್ಲವೆಯಭಯ ॥22॥

ಪಾತಕವೇಶಿಯ ಮುಡಿಗಂ
ಪ್ರೀತಿಯೊಳಂ ಪುಷ್ಪದರಳತರುತಿರೆ ಬೀಳಲು

ಶ್ವೇತ ಶಿವಗೆನಲು ಭಕ್ತಿ
ಪ್ರೀತನೆ ಶಿವಲೋಕವಿತ್ತುದಿಲ್ಲವೆಯಭವ ॥23॥

ಹರಿದರಳು ಬಿದಿರಿದುದ ಕರದಿ
ಸುರಪದವಿಯದಾವುದೆಂದುವೇನಂ ನುತಿಯಿಸೆ
ಪರಮೇಶ ಕರುಣವಾದುದೆ
ಪರಿರಕ್ಷಿಸುಯೆನ್ನ ತಪ್ಪು ನೋಡದೆಯಭವ (?) ॥24॥

ಹುಸಿ ಕಳವು ಗುಪ್ತಪಾತಕ
ಶಿಶುವಧೆ ಹೆಂಗೊಲೆಯು ಅಸುವಿನ ವಧೆಯು
ಶಶಿಮೌಳಿ ನಿಮ್ಮ ಪೂಜಿಸೆ
ತುಸುಮಾತ್ರಮದಾಗಿ ಕೆಟ್ಟು ಹೋಗದೆಯಭವ ॥25॥

ಬಲ್ಲಿದರ ಮರೆಯ ಹೊಕ್ಕಡೆ
ಕೊಲ್ಲುವ ಹಗೆಗೊಪ್ಪಿಸುವನೆ ಕರುಣಾಕರನೆ
ಫುಲ್ಲಶರವೈರಿ ಕಾಲನ
ತಲ್ಲಣವನು ಬಿಡಿಸು ನಿಮ್ಮ ಧರ್ಮವದಭವ ॥26॥

ನಿನ್ನನಾ ಬೇಡಿಕೊಂಬೆನು
ಇನ್ನಿವಗಾನೇನನೀವೆನೆಂದೆನಬೇಡೈ
ಅನ್ಯ ಫಲಪದವನೊಲ್ಲೆನು
ಮನ್ನಿಸುವನವೇನ ಬೇಡಲದನಿತ್ತಭವ ॥27॥

ಶ್ರೀ ಗುರುಶಿವನೆಂದೆಂಬುದ
ಶ್ರೀ ಗುರುವಿನ ರಾಣಿ ಗಿರಿಜೆ ತಾನೆಂಬುದ
ಶ್ರೀ ಗುರುವೆಯಧಿಕವೆಂಬುವ
ಶ್ರೀ ಗುರು ಗತಿಯೆಂಬ ಮಂತ್ರವೀವುದಭವ ॥28॥

ಅಂಗೈಯೊಳಿರುಳು ಹಗಲು
ಲಿಂಗವ ನೆಱೆ ತಳೆದು ಪಾಡಿ ವಚನಾಮೃತದಿಂ
ಹೊಂಗದೆ ಕಂಗಳೊಳೀಕ್ಷಿಸಿ
ಹೊಂಗುವ ಸುಖವಿತ್ತು ರಕ್ಷಿಸೆನ್ನುವೆನಭವ ॥29॥

ಗುರುಲಿಂಗವೆಂಬುವೆರಡಕೆ
ವರ ಪ್ರಾಣಮದಾಗಿಯೊಪ್ಪಿ ರಾಜಿಸುತಿರ್ಪ
ಪರಮ ಚರ ಮೂರ್ತಿಯಂಘ್ರಿಗೆ
ಹರುಷದೊಳೊಂದಿಸುದ ನಿರುತವೀವುದು ಅಭವ ॥30॥

ಪಾದೋದಕ ಪ್ರಸಾದದಿ
ಭೇದವನಱಿಯದಲೆ ನಂಬಿನಚ್ಚುವ ನಿಷ್ಠೆಯ

ಮೂದೇವರೊಡೆಯ ಮರೆಯದೆ
ಈ ಧರಣಿಯೊಳೆನಗೆ ಕೊಟ್ಟು ರಕ್ಷಿಪುದಭವ ॥31॥

ಎನ್ನಯ ಶರೀರದೊಳಗಂ
ಚಿನ್ಮಯನೆ ನಿನ್ನ ಕೈಮಣಿಯು ಶ್ರೀ ಭಸಿತಂಗಳು
ಭಿನ್ನವಿಲ್ಲದತಿ ಹೃದಯದಿ
ಓಂ ನಮಃ ಶಿವಾಯೆಂಬ ಮಂತ್ರವಿವು ಅಭವ ॥32॥

ವೀರಮಹೇಶ್ವರ ವ್ರತಿಗಳ
ಸಿರಿ ಮಹಾಜ್ಞಾನ ತತ್ವ ವಚನಾಮೃತಮಂ
ಪೂರೈಸಿಯೆನ್ನ ಕರ್ಣದಿ
ಭೋರಿಡುತಿಹ ಸುಖವನಿತ್ತು ರಕ್ಷಿಪುದಭವ ॥33॥

ನಡೆವ ನುಡಿವ ನಿಮ್ಮಯ
ಅಡಿದಾವರೆಯೆನ್ನ ಹೃದಯ ನಿರ್ಮಲ ಪಂಕದಿ
ಬಿಡದೆ ಬೇರ್ವರಿದು ಸಂತತ
ಮೃಡನೆ ಶಿವಯೆಂಬ ಮಂತ್ರವಿವು ಅಭವ ॥34॥

ಜಾಗ್ರತ್ ಸ್ವಪ್ನ ಸುಪ್ತಿಗ
ಳಾಗಳುಮೀದೇಹದಲ್ಲಿ ನಿನ್ನಯ ನೆನಹಂ
ನಾಗ ಕಂಕಣನೆ ಕರುಣದೆ
ಶ್ರೀ ಗುರುಶಿವಯೆಂಬ ಮಂತ್ರವಿವು ಅಭವ ॥35॥

ಎನ್ನ ನಾಲಗೆಯ ತುದಿಯೊಳು
ಅಮೃತವಪ್ಪ ಶಬ್ದವೆಂಬ ಕನಸಂಗೂಡಿಸಿಯೆ
ಸನ್ನುತಿಗೆಯ್ವುದನಿತ್ತತಿ
ನಿನ್ನಯ ನಿಜವನೆಯ ಮಾಡಿ ರಕ್ಷಿಪುದಭವ (?) ॥36॥

ಪರಶಿವನೆ ನಿನ್ನ ನೆನಹಂ
ಮರೆಯದವೊಲು ಇರುಳುಹಗಲಂ ಸ್ಥಿರವಾಗೆನಗಂ
ಹರಕರುಣದಿಂದೆ ಪಾಲಿಸಿ
ನೆಱೆ ರಕ್ಷಿಸೆನ್ನ ತಪ್ಪನೋಡದೆ ಅಭವ ॥37॥

ನೀನಭವ ನಾನು ಭವಯುತ
ನೀನು ನಿತ್ಯ ನಾನನಿತ್ಯನೆಲೆ ಸರ್ವೇಶ
ನೀಂ ಶಂಕರನಾಂ ಕೃಪಣನು
ನೀನೆನ್ನಂ ವೊಲಿದು ಸಲಹಲಿಲ್ಲವೆಯಭವ ॥38॥

ನೀನು ದೊರೆ ನಾನು ದರಿದ್ರನು
ನೀನೊಡೆಯ ನಾನು ಬಂಟನೆಲೆ ಸರ್ವೇಶ

ನೀನಲ್ಲದೆನಗೆ ಗತಿಯಂ
ನಾನಱಿಯೆನು ನಿಮ್ಮ ಧರ್ಮ ರಕ್ಷಿಪುದಭವ ॥39॥

ಸ್ಮರಹರನೆ ದುರಿತಹರನೆ
ಪುರಹರವಪಮೃತ್ಯುಯಾಂತಕ ಹರನೆ
ಗುರುವರ ಸುಸ್ಥಿರ ಕರುಣಾ
ಕರ ರಕ್ಷಿಸಭವ ರಕ್ಷಿಸು ಕೃಪೆಯಿಂ ॥40॥

ಉರಗ ಬೇತಾಳ ಅರಿಗಳು
ಉರಿವಗ್ನಿಯು ತಾಪ ತರ್ಕ ಯಮದೂತರುಗಳು
ಉರಿಗೊಡ್ಡಿದರಗಿನಂದದಿ
ಕರಗುವವೀ ಸ್ತೋತ್ರ ಸ್ಮರಣೆ ಮಾತ್ರದೊಳಭವ ॥41॥

ಮಹಾಲಿಂಗ ದೇವರು ನಿರೂಪಿಸಿದ ಕಂದಯೇಳುನೂರರೊಳಗೆ ತೆಗೆದ ಸ್ತೋತ್ರದ ಕಂದ ಸಮಾಪ್ತಂ

ಮಂಗಳ ಮಹಾ ಶ್ರೀ ಶ್ರೀ ಶ್ರೀ

ಆರ್. ಎ. ಹೆಗಡೆ

ಕನ್ನಡದ ಪ್ರಥಮ ಸಾಮಾಜಿಕ ಕಾದಂಬರಿ 'ಇಂದಿರಾಬಾಯಿ'

ರೆಂಟಾಲ ವೆಂಕಟ ಸುಬ್ಬರಾಯರು 1895ರಲ್ಲಿ 'ಕೇಸರಿ ವಿಲಾಸ' ಎಂಬ ಕಾದಂಬರಿಯನ್ನು ಬರೆದರೆಂದು ಹೇಳಲಾಗುತ್ತದೆ. ಈ ಕೃತಿಯು ಮೊದಲು ತೆಲುಗಿನಲ್ಲಿ ಬರೆಯಲ್ಪಟ್ಟು ಅವರಿಂದಲೇ ಕನ್ನಡಿಸಲ್ಪಟ್ಟಿತು. ಇದು ತೀರಾ ಸಾಮಾನ್ಯ ಮಟ್ಟದ ಕೃತಿ ಎಂದು ವಿದ್ವಾಂಸರ ಅಭಿಪ್ರಾಯ. ಡಾ॥ ಹಾವನೂರರವರು ಲಕ್ಷ್ಮಣ ಭೀಮರಾವ ಗದಗಕರನ 'ಸೂರ್ಯಕಾಂತೆ'(1892) ಎಂಬ ಕಾದಂಬರಿಯನ್ನು ಕನ್ನಡದ ಮೊದಲ ಸಾಮಾಜಿಕ ಕಾದಂಬರಿಯೆಂದು ವಿವರಿಸಿದ್ದಾರೆ. (ಕಸ್ತೂರಿ' ಮೇ 1970ರ ಸಂಚಿಕೆ, ಪು. 124) ಇದರ ಕಥೆ ಅರ್ಧ ಐತಿಹಾಸಿಕ ಮತ್ತು ಅರ್ಧ ಸಾಮಾಜಿಕ. ಇದೊಂದು ಸರಳ ಕಥೆ ಇದೆ ಎಂದು ಒಪ್ಪಿಕೊಳ್ಳಲಾಗಿದೆ. ಹೀಗಿದ್ದುದಾದರೆ ವೈಶಿಷ್ಟ್ಯರಹಿತವಾದ ಈ ಕೃತಿಯು ಪ್ರಪ್ರಥಮ ಸಾಮಾಜಿಕ ಕಾದಂಬರಿಯ ಗೌರವ ಪಡೆಯಲಾರದೆಂದು ನಮ್ಮ ಮತ. 1898ರಲ್ಲಿ ಗಳಗನಾಥರ "ಪ್ರಬುದ್ಧ ಪದ್ಮನಯನೆ" ಪ್ರಕಟವಾಯಿತು. ಇದೊಂದು ರೋಮಾಂಚಕಾರಿ ಕಾದಂಬರಿಯೇ ವಿನಾ ನಮ್ಮ ಸಾಮಾಜಿಕ ಜೀವನಕ್ಕೆ ಕನ್ನಡಿ ಹಿಡಿಯುವ ಪ್ರಯತ್ನ ಇದರಲ್ಲಿಲ್ಲ. ವಸ್ತು, ವಾತಾವರಣ, ಪಾತ್ರಚಿತ್ರಣ ಹಾಗೂ ಶೈಲಿ ಎಲ್ಲ ದೃಷ್ಟಿಯಿಂದ 'ಇಂದಿರಾಬಾಯಿ'ಯೇ ಪ್ರಪ್ರಥಮ ಸಾಮಾಜಿಕ ಕಾದಂಬರಿಯೆಂದು ಒಪ್ಪಿಕೊಳ್ಳಬಹುದಾಗಿದೆ.

ಮಂಜೇಶ್ವರ ಗೋವಿಂದ ಪೈ, ಡಾ. ಆರ್. ಎಸ್. ಮುಗಳಿ ಮತ್ತು ಡಾ. ಶಿವರಾಮ ಕಾರಂತರಂಥ ಕನ್ನಡ ವಿದ್ವಾಂಸರೂ ಕೂಡ ಇದನ್ನು ಕನ್ನಡದ ಮೊದಲ ಸಾಮಾಜಿಕ ಕಾದಂಬರಿ ಎಂದು ಒಪ್ಪುತ್ತಾರೆ.

ಲೇಖಕರು ಈ ಕೃತಿಗೆ ಎರಡು ಶೀರ್ಷಿಕೆಗಳನ್ನಿತ್ತಿದ್ದಾರೆ. 'ಇಂದಿರಾ ಬಾಯಿ' ಅಥವಾ 'ಸದ್ಧರ್ಮ ವಿಜಯ'. ಇದರ ರಚನಾ ಕಾಲವು ಸಾಮಾಜಿಕ ಕ್ರಾಂತಿಯ ಕಾಲ. ಅಂದಿನ ಸಂಪ್ರದಾಯ ನಿಷ್ಠ ಸಮಾಜವು ಆಂಗ್ಲ ಸಂಸ್ಕೃತಿ–ಸಭ್ಯತೆಯಿಂದ ಪ್ರಭಾವಿತವಾದ ಹೊಸ ವಿಚಾರಧಾರೆಯೊಡನೆ ಸಂಘರ್ಷವನ್ನೆದುರಿಸುತ್ತ ಹೊಸ ವಾತಾವರಣದೊಡನೆ ಹೊಂದಾಣಿಕೆ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದ ಸಂಕ್ರಮಣ ಕಾಲ. ಸಾಮಾಜಿಕ ಕ್ರಾಂತಿಯ ಹೊಸ್ತಿಲಲ್ಲಿ ಹೆಜ್ಜೆ ಇಡುತ್ತಿದ್ದ ಸಾರಸ್ವತಬ್ರಾಹ್ಮಣ ಸಮಾಜದ ಗೊಂದಲಮಯ ವಾತಾವರಣದ ಚಿತ್ರವನ್ನು ಇಲ್ಲಿ ಕಾಣಬಹುದು.

ಕಥಾವಸ್ತು

ಭೀಮರಾಯನು ಗುಮಾಸ್ತೆಯಾಗಿ ಹೇರಳ ಹಣ ಗಳಿಸುತ್ತಾನೆ. ಸುಂದರರಾಯನೆಂಬ ಓರ್ವ ಯುವಕನು ಇವನನ್ನು ಆಶ್ರಯಿಸಲು ಬರುತ್ತಾನೆ. ಭೀಮರಾಯನು ತನ್ನ ಪತ್ನಿ ಅಂಬಾಬಾಯಿಯ ದುರಾಗ್ರಹಕ್ಕೆ ಒಳಗಾಗಿ ವಿಷಕೊಟ್ಟು ಸುಂದರರಾಯನನ್ನು ಕೊಲ್ಲಿಸುತ್ತಾನೆ. ಹಣದ ಬಲವಿದ್ದುದಕ್ಕೆ ಪೋಲೀಸರ ಕೈಯಿಂದ ತಪ್ಪಿಸಿಕೊಳ್ಳುತ್ತಾನೆ. ಬಹುಕಾಲದ ನಂತರ ಆತನಿಗೆ ಓರ್ವ ಮಗಳು ಹುಟ್ಟುತ್ತಾಳೆ. ಅವಳೇ ಇಂದಿರಾಬಾಯಿ. ಬಾಲ್ಯ ವಿವಾಹದ ಪರಿಣಾಮವಾಗಿ ತಾರುಣ್ಯದ ಹೊಸ್ತಿಲಲ್ಲಿ ಕಾಲಿಡುವಷ್ಟರಲ್ಲಿ

ಅವಳಿಗೆ ವೈಧವ್ಯವು ಪ್ರಾಪ್ತವಾಗುತ್ತದೆ. ತಂದೆ–ತಾಯಿಯರ ಸಂಪ್ರದಾಯ ಪ್ರಿಯತೆಯಿಂದಾಗಿ ತವರಿನಲ್ಲಿ ಅನೇಕ ಪೀಡೆಗಳನ್ನು ಸಹಿಸಬೇಕಾಗುತ್ತದೆ. ಕೊನೆಗೆ ತವರನ್ನು ಬಿಟ್ಟು ಅಮೃತರಾಯನೆಂಬ ವಕೀಲನನ್ನು ಆಶ್ರಯಿಸುತ್ತಾಳೆ. ಶಾಲೆಯಲ್ಲಿ ಕಲಿತು ಶಿಕ್ಷಿತಳಾಗುತ್ತಾಳೆ. ಅಮೃತರಾಯನ ಆಶ್ರಯದಲ್ಲೇ ವಿದ್ಯಾಭ್ಯಾಸ ಮುಗಿಸಿ ಆಯ್.ಸಿ.ಎಸ್ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದ ಸುಂದರರಾಯನ ಅನಾಥ ಮಗನಾದ ಭಾಸ್ಕರನು ಈ ಬಾಲ ವಿಧವೆ ಇಂದಿರೆಯ ಕೈ ಹಿಡಿದು ಸೌಖ್ಯ ಪಡೆಯುತ್ತಾನೆ.

ಪಾತ್ರಚಿತ್ರಣ

ಇದು ಕನ್ನಡದ ಮೊದಲ ಕಾದಂಬರಿಯಾಗಿದ್ದರೂ ಪಾತ್ರಚಿತ್ರಣದಲ್ಲಿ ಲೇಖಕರು ತೋರಿಸಿರುವ ಕಲಾತ್ಮಕ ಕುಶಲತೆಯನ್ನು ನಾವು ಮೆಚ್ಚಬೇಕು. ಪಾತ್ರಗಳನ್ನು ಚಿತ್ರಿಸುವಾಗ ಲೇಖಕರು ಸ್ವತಃ ಹಸ್ತಕ್ಷೇಪ ಮಾಡದೆ ಅವು ತಮ್ಮಷ್ಟಕ್ಕೆ ಅರಳಿ ಸೊಬಗನ್ನು ಬೀರಲು ಎಡೆಮಾಡಿಕೊಟ್ಟಿದ್ದಾರೆ.

ಭೀಮರಾಯ ಮತ್ತು ಅವನ ಹೆಂಡತಿ ಅಂಬಾಬಾಯಿ ಇವರಿಬ್ಬರ ಪಾತ್ರಗಳೂ ಅಕೃತ್ರಿಮವಾಗಿ ಚಿತ್ರಿತವಾಗಿವೆ. ಕಾರಣವಿಲ್ಲದೆ ಹೆರವರಿಗೆ ಪೀಡೆ ಕೊಟ್ಟು ಸಂತಸ ಪಡುವ ಸ್ವಭಾವ ಅಂಬಾಬಾಯಿಯದು. ಕಾದಂಬರಿಯ ಆರಂಭದಿಂದ ಕೊನೆಯ ವರೆಗೆ ನಡೆಯುವ ಅನೇಕ ವಿಷಾದಪೂರ್ಣ ಘಟನೆಗಳಿಗೆ ಅವಳೇ ಕಾರಣಳು. ಭೀಮರಾಯ ಸ್ವತಃ ಕೆಟ್ಟವನಲ್ಲದಿದ್ದರೂ ಹೆಂಡತಿಯ ಸಂಕೇತದಂತೆ ನರ್ತಿಸುವ ಸೂತ್ರದ ಗೊಂಬೆ. ಇದು ಆತನ ವ್ಯಕ್ತಿತ್ವದ ದೌರ್ಬಲ್ಯ. ಅವನ ಪ್ರತಿಷ್ಠೆ ಹಾಗೂ ಸಂಪತ್ತಿ ಎರಡೂ ಸಮಾಜದ ಕೇಡಿಗಾಗಿ ಉಪಯೋಗಿಸಲ್ಪಡುತ್ತವೆ. ತನ್ನ ದೌರ್ಬಲ್ಯದಿಂದಾಗಿಯೇ ಆತನು ಒಬ್ಬಳೇ ಮಗಳ ಹಿತವನ್ನೂ ಮಾಡಲು ಸಮರ್ಥನಾಗುವದಿಲ್ಲ. ಹೆಂಡತಿಯ ಎಲ್ಲ ಕುವಿಚಾರಗಳಿಗೆ ಅವನೇ ಪೋಷಕನಾಗಿರುತ್ತಾನೆ. ಆದರೆ ಅವನಲ್ಲಿ ದುಷ್ಕೃತ್ಯಗಳನ್ನೆಸಗುವ ಮನೋಧೈರ್ಯವಿಲ್ಲ.

ಅಂಬಾಬಾಯಿ ಎಂದೂ ಪರೋತ್ಕರ್ಷ ಸಹಿಸುವ ನಾರಿಯಲ್ಲ. ಅಂತೆಯೇ ಸುಂದರರಾಯನ ಬುದ್ಧಿಶಾಲಿಯಾದ ಮಗ ಭಾಸ್ಕರನ ಬಗ್ಗೆ ಕಾರಣವಿಲ್ಲದೆ ಅವಳಿಗೆ ದ್ವೇಷ! ತನ್ನ ಒಬ್ಬಳೇ ಮಗಳಾದ ಇಂದಿರೆಯನ್ನು ಅಮೃತರಾಯನ ಮನೆಯಿಂದ ಕರೆದುತರಲು ಹೋದಾಗ ಅವಳ ಬಾಯಿಯಿಂದ ಹೊರಡುವ ಕಠೋರ ವಚನಗಳು ಅವಳ ಅಹಂಕಾರದಿಂದ ತುಂಬಿದ ನಿರ್ದಯ ಹೃದಯದ ಪರಿಚಯ ಮಾಡಿಕೊಡುತ್ತವೆ.

ಭೀಮರಾಯನ ಪಾತ್ರಚಿತ್ರಣದಲ್ಲಿ ಒಂದು ಅವಾಸ್ತವಿಕತೆ ಕಾಣುತ್ತದೆ. ಸುಂದರರಾಯನ ಬಗೆಗೆ ಅವನಲ್ಲಿ ಆತ್ಮೀಯತೆ ಭಾವನೆ ಇದ್ದೂ ಸಹ ಹೆಂಡತಿಯನ್ನು ಸಂತೈಸುವುದಕ್ಕಾಗಿ ಅವನ ಕೊಲೆಗೆ ಹೇಗೆ ಸಿದ್ಧನಾಗುತ್ತಾನೆಂದು ತಿಳಿಯುವುದಿಲ್ಲ. ಅಂತಹ ದುಷ್ಕೃತ್ಯಗಳನ್ನೆಸಗುವ ಮುನ್ನ ಅವನ ಹೃದಯದಲ್ಲಿ ನಡೆಯುವ ಮಾನಸಿಕ ಸಂಘರ್ಷ ಹಾಗೂ ಮನೋ ಪರಿವರ್ತನೆಯ ಚಿತ್ರ ಎಲ್ಲೂ ಕಾಣುವದಿಲ್ಲ.

ಇಂದಿರೆ ತನ್ನ ವಿವಾಹದ ಸಮಯದಲ್ಲೇ ಮೊಟ್ಟಮೊದಲು ನಮ್ಮೆದುರು ಬರುತ್ತಾಳೆ. ವಿವಾಹದ ನಂತರ ಒಮ್ಮೆ ಮಾತ್ರ ಪತಿಯ ದುರಾಚಾರಗಳ ಬಗೆಗೆ ತನ್ನ ಕಳವಳವನ್ನು ವ್ಯಕ್ತಪಡಿಸುತ್ತಾಳೆ. ಅವಳ ಸರಿಯಾದ ವ್ಯಕ್ತಿತ್ವದ ಪರಿಚಯವಾಗುವುದು ಅವಳ ಗಂಡನ ಅನಾರೋಗ್ಯದ ಸಮಯದಲ್ಲಿ. ತನ್ನ ಗಂಡನಿಗೆ ಸರಿಯಾದ ಔಷಧವನ್ನು ಕೊಟ್ಟು ಚೆನ್ನಾಗಿ ಶುಶ್ರೂಷೆಯನ್ನು ನಡೆಸಬೇಕೆಂದು ಅವಳು ತಂದೆಯನ್ನು ಒತ್ತಾಯ ಪಡಿಸುತ್ತಾಳೆ. ಗಂಡನ ಕೊನೆಗಾಲವನ್ನು ಕಂಡು ಶೋಕಾರ್ತಳಾಗುತ್ತಾಳೆ. ದುಃಖಿಸುತ್ತಿರುವ ತನ್ನ ತಾಯಿಗೆ ಅಂಥ ಪ್ರಸಂಗದಲ್ಲೂ ಧೈರ್ಯ ಕೊಡುವ ಅವಳ ಎದೆಗಾರಿಕೆಯನ್ನು ನಾವು ಮೆಚ್ಚುತ್ತೇವೆ. ಓದುವುದರಲ್ಲಿ ಅವಳಿಗಿರುವ ಆಳವಾದ ಆಸಕ್ತಿ, ಭಜನ ಮಂಡಳಿಯ ಬಂದ ಪ್ರಸಂಗದಲ್ಲಿ ಅವಳ ನಡವಳಿಕೆ, ಅದರ ಅಧ್ಯಕ್ಷನು ಅವಳ ಮೇಲೆ ಅತ್ಯಾಚಾರವೆಸಗಲು ಪ್ರಯತ್ನಿಸಿದಾಗ ಅವಳು ತೋರಿದ ಧೃತಿ ಮತ್ತು ಚಾತುರ್ಯ, ಅಮೃತರಾಯನ ಮನೆಯಲ್ಲಿದ್ದಾಗಲೂ ತಂದೆ-ತಾಯಿಗಳ ಬಗ್ಗೆ ಅವಳಿಗಿದ್ದ ಶ್ರದ್ಧೆ ಮೊದಲಾದ ಅವಳ ವಿಶೇಷ ಗುಣಗಳನ್ನು ಕಂಡಾಗ ಅವಳ ವ್ಯಕ್ತಿತ್ವದ ಬಗ್ಗೆ ತುಂಬ ಗೌರವವೆನಿಸುತ್ತದೆ.

ಭಾಸ್ಕರನ ಪಾತ್ರ ಪೋಷಣೆಯು ಸರಿಯಾಗಿ ಆಗಿಲ್ಲ. ಆತನ ಜೀವನದ ಆರಂಭದ ಭಾಗವು ನಮ್ಮನ್ನು

ಆಕರ್ಷಿಸುವುದು ನಿಜ. ಆದರೆ ಈ ಭಾಗವು ಒಂದು ವಿವರಣೆಯಂತೆ ಒಂದೇ ಪ್ರಕರಣದಲ್ಲಿ ಮುಗಿದು ಹೋಗಿದೆ. 2–3 ಪುಟಗಳಲ್ಲಿ ಆತನು ಬಾಲ್ಯಜೀವನವನ್ನು ಕಳೆದು ಪದವೀಧರನಾಗುವದು, ಆಯ್. ಸಿ.ಎಸ್. ಆಗಿ ಉನ್ನತ ಅಧಿಕಾರಿಯಾಗುವದರ ವಿವರಣೆ ಮುಗಿದು ಹೋಗುತ್ತದೆ. ಇವನ ಬುದ್ಧಿ ಮತ್ತೆ, ಸಾಹಸ ಮತ್ತು ಸಜ್ಜನತೆಯ ಬಗ್ಗೆ ಮೆಚ್ಚಿಗೆ ಎನಿಸಿದರೂ ಈ ಪಾತ್ರವು ನಮ್ಮ ಹೃದಯದ ಮೇಲೆ ಅಂಕಿತವಾಗುವುದಿಲ್ಲ. ಅಮೃತರಾಯ ಮತ್ತು ಅವನ ಪತ್ನಿ ಜಲಜಾಕ್ಷಮ್ಮ ಇವರು ತಮ್ಮ ಸಜ್ಜನತೆ ಯಿಂದಾಗಿ ನಮ್ಮ ಚಿತ್ತಭಿತ್ತಿಯಲ್ಲಿ ಅಳಿಯದ ಸ್ಥಾನವನ್ನು ಹೊಂದುತ್ತಾರೆ.

ವಾತಾವರಣ

ಇದರ ಕಥಾವಸ್ತು ಆ ಕಾಲದ ಸಾಮಾಜಿಕ ವಾತಾವರಣದ ಪೃಷ್ಠಭೂಮಿಯ ಮೇಲೆ ಚಿತ್ರಿತವಾಗಿದೆ. ಇದಕ್ಕೆ ಅಂದಿನ ಸಾರಸ್ವತ ಬ್ರಾಹ್ಮಣ ಸಮಾಜವೇ ಆಧಾರ. ಅದೇ ವಾತಾವರಣವು ಹೆಚ್ಚು ಕಡಿಮೆ ಅಂದಿನ ಇತರ ಸಮಾಜಗಳ ವಾತಾವರಣಗಳನ್ನು ಪ್ರತಿನಿಧಿಸುತ್ತದೆ ಎನ್ನಬಹುದಾಗಿದೆ. ಈ ಮೊದಲೇ ಹೇಳಿರುವಂತೆ ಆಂಗ್ಲ ಸಭ್ಯತೆಯ ಸಂಪರ್ಕದಿಂದಾಗಿ ನಮ್ಮಲ್ಲಿ ಹಳೆ–ಹೊಸತರ ತಿಕ್ಕಾಟವು ಆರಂಭವಾಗಿತ್ತು. ಇವೆರಡು ವಿಚಾರ ಸರಣಿಗಳಲ್ಲಿದ್ದ ಗುಣದೋಷಗಳ ವಿವೇಚನೆ, ಹಳೆಯ ವಿಚಾರ ಸರಣಿಯ ಮೇಲೆ ಹೊಸ ವಿಚಾರಗಳ ವಿಜಯವಾದ ರೀತಿ, ಜನರ ಮೂಢನಂಬಿಕೆಗಳು ಹಾಗೂ ಅವೈಜ್ಞಾನಿಕ ವಿಚಾರಗಳ ವಿಶ್ಲೇಷಣೆಯನ್ನು ಈ ಕಾದಂಬರಿಯಲ್ಲಿ ಕಾಣಬಹುದು. ಭೀಮರಾಯ ಮತ್ತು ಅವನ ಪತ್ನಿ ಇವರು ಪ್ರಾಚೀನ ಮೂಢ ಸಂಪ್ರದಾಯ ಶರಣ ಪ್ರವೃತ್ತಿಯ ಪ್ರತೀಕರಾಗಿದ್ದಾರೆ. ಇಂದಿರೆ ಮತ್ತು ಭಾಸ್ಕರ ಇವರಿಬ್ಬರು ಪ್ರಗತಿಶೀಲ ಯುವಕರಾಗಿದ್ದರೂ ಹಿಂದಿನ ಒಳ್ಳೆಯ ಮೌಲ್ಯಗಳನ್ನು ಉಳಿಸಿಕೊಂಡು ಬಂದವರು.

ಆ ಕಾಲದಲ್ಲಿ ಬ್ರಹ್ಮೋಸಮಾಜ, ಆರ್ಯಸಮಾಜ ಹಾಗೂ ಥಿಯಾಸೊಫಿಕಲ್ ಸೊಸೈಟಿ ಮೊದಲಾದ ಸಂಸ್ಥೆಗಳು ರಭಸದಿಂದ ತಮ್ಮ ಸಾಮಾಜಿಕ ಸುಧಾರಣೆಯ ಕಾರ್ಯವನ್ನು ನಡೆಸುತ್ತಿದ್ದವು. ಇಂಗ್ಲಿಷ್ ಓದಿನ ಪರಿಣಾಮವಾಗಿ ನವಶಿಕ್ಷಿತಯುವಕರಲ್ಲಿ ವೈಜ್ಞಾನಿಕ ದೃಷ್ಟಿಕೋನ ಬೆಳೆಯುತ್ತಲಿತ್ತು. ಅಂದು ಮಂಗಳೂರು ಪ್ರದೇಶದಲ್ಲಿ ಬ್ರಹ್ಮೋಸಮಾಜ ಮತ್ತು ಆರ್ಯ ಸಮಾಜದ ಆಂದೋಲನಗಳು ನಡೆದಿದ್ದವೆಂಬುದನ್ನು ಶ್ರೀಮಾನ್ ಸಂತೋಷ ಕುಮಾರ ಗುಲ್ವಾಡಿಯವರು ಇದರ ಲೇಖಕರಿಗೆ ಬರೆದ ತಮ್ಮ ಪತ್ರದಲ್ಲಿ ಚರ್ಚಿಸುತ್ತಾರೆ. ಮುಂದುವರಿದ ಸಾರಸ್ವತ ಸಮಾಜದ ಮೇಲೆ ಇದರ ಪ್ರಭಾವವಿದ್ದದ್ದು ಸ್ವಾಭಾವಿಕ. ಗುಲವಾಡಿ ವೆಂಕಟರಾಯರು ಈ ಆಂದೋಲನಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಬಾಲ್ಯ ವಿವಾಹ ವಿರೋಧ, ವಿಧವಾ ವಿವಾಹ ಮತ್ತು ಸ್ತ್ರೀಶಿಕ್ಷಣ ಪ್ರಸಾರದಂತಹ ಸಾಮಾಜಿಕ ಸುಧಾರಣೆಗಳಲ್ಲಿ ಅವರಿಗೆ ತುಂಬ ಆಸಕ್ತಿ ಇತ್ತು. ಇದರ ಪ್ರಭಾವ ಕಾದಂಬರಿಯಲ್ಲಿ ಕಾಣುತ್ತದೆ. ಇದರಲ್ಲಿ ಅಂದು ಬೀಸುತ್ತಿದ್ದ ಸಾಮಾಜಿಕ ಸುಧಾರಣಾ ಗಾಳಿಯ ಸೋಂಕನ್ನು ಸ್ಪಷ್ಟವಾಗಿ ಅನುಭವಿಸಬಹುದು. ಇಂದಿರೆ ಹಾಗೂ ಭಾಸ್ಕರರು ವಿಧವಾ ವಿವಾಹದ ಸಮರ್ಥಕರು. ಇಂಗ್ಲಿಷ್ ಶಿಕ್ಷಣದಿಂದಾಗಿ ಎಲ್ಲರೂ ಚರಿತ್ರ ಭ್ರಷ್ಟರಾಗುವರೆಂಬ ಭಾವನೆ ಅಂದಿನ ಸಂಪ್ರದಾಯ ಪ್ರೇಮಿಗಳಲ್ಲಿ ಬೇರೂರಿತ್ತು. ಅಂತೆಯೇ ಪ್ರಗತಿಶೀಲರಾದವರರಿಗೆ ಅವರನ್ನು ಎದುರಿಸಬೇಕಾಗುತ್ತಿತ್ತು. ಮಠದ ಸ್ವಾಮಿಗಳು ಮತ್ತು ಅವರ ಅನುಯಾಯಿಗಳು ಹೇಗೆ ಜನರ ಅಜ್ಞಾನದ ಲಾಭ ಪಡೆದು ಸಮಾಜವನ್ನು ಶೋಷಿಸುತ್ತಿದ್ದರು ಎಂಬು ದನ್ನೂ ಈ ಕಾದಂಬರಿಯಲ್ಲಿ ಕಾಣಬಹುದು. ಹೀಗೆ ಆ ಕಾಲದ ಸಮಾಜದ ನಿಜವಾದ ಸ್ವರೂಪವು ಈ ಕೃತಿಯಲ್ಲಿ ಮೂಡಿಬಂದಿದೆ ಎನ್ನಬಹುದು.

ತಂತ್ರ ಹಾಗೂ ಶೈಲಿ

ಇದು 62 ಪ್ರಕರಣಗಳು, 260 ಪುಟಗಳುಳ್ಳ ಒಂದು ಕಾದಂಬರಿ. ಇದರ ಶೀರ್ಷಿಕೆ ಸೂಚಿಸುತ್ತಿರುವಂತೆ ಇಂದಿರಾಬಾಯಿ ಮುಖ್ಯ ಪಾತ್ರ. ಅವಳ ಕಥೆಯೇ ಪ್ರಧಾನವಾಗಿರಬೇಕು. ಭೀಮರಾಯ ಹಾಗೂ ಭಾಸ್ಕರ ಇವರ ಪ್ರತ್ಯೇಕ ಪ್ರಾಸಂಗಿಕ ಕಥೆಗಳು ಪ್ರಧಾನ ಕಥೆಯನ್ನು ಕೂಡುತ್ತವೆ. ಈ ಕಾದಂಬರಿಯಲ್ಲಿಯು

ಕ್ರಿಯಾವ್ಯಾಪಾರ (Action)ಗಳನ್ನು ನೋಡಿದರೆ ಭೀಮರಾಯನೇ ಪ್ರಮುಖನಾಗಿ ಕಾಣುತ್ತಾನೆ. ಆದರೆ ಆತನ ಕಥೆ ಇಂದಿರೆಯ ಕಥೆಗೆ ಕೇವಲ ತಳಪಾಯವೆನ್ನಬಹುದು. ಮೊದಲಿನ 17 ಪ್ರಕರಣಗಳಲ್ಲಿ ಇಂದಿರೆಯ ಜನ್ಮಕ್ಕಿಂತ ಪೂರ್ವದ ಕಥೆ ಇದೆ. ಅದು ಅನಂತರ ಇಂದಿರೆ–ಭಾಸ್ಕರರ ವಿವಾಹದ ಕಥೆಯೊಡನೆ ಒಂದಾಗುತ್ತದೆ. ಈ ಕಾದಂಬರಿಯಲ್ಲಿ ಮುಖ್ಯ ಕಥೆ ಮತ್ತು ಪ್ರಾಸಂಗಿಕ ಕಥೆಗಳು ಚೆನ್ನಾಗಿ ಹೆಣೆದುಕೊಂಡಿಲ್ಲ. ಕಾರಣ ಕಥಾ ವಸ್ತುವಿನ ಕಟ್ಟು ಸಡಿಲಾಗಿದೆ. ಇಂದಿರೆ–ಭಾಸ್ಕರರನ್ನು ಪ್ರೇಮ ವಿವಾಹದ ಬಂಧನದಲ್ಲಿ ಕಟ್ಟಿದ್ದರೂ ಅವರಿಬ್ಬರ ನಡುವೆ ಪ್ರೇಮದ ಬೆಳವಣಿಗೆ ಎಲ್ಲೂ ಚಿತ್ರಿತವಾಗಿಲ್ಲ. ಭೀಮರಾಯ ಮತ್ತು ಅಮೃತರಾಯರ ಪರಿವಾರಗಳ ನಡುವೆ ಪೂರ್ವ ಪರಿಚಯದ ಸಂದರ್ಭವೇ ಚಿತ್ರಿತವಾಗದೆ ಆಕಸ್ಮಿಕವಾಗಿ ಇಂದಿರೆ ಅಮೃತರಾಯನಲ್ಲಿ ಹೋಗಿ ಆಶ್ರಯ ಪಡೆಯುವುದರ ಔಚಿತ್ಯವು ಸ್ಪಷ್ಟವಾಗುವುದಿಲ್ಲ. ಹೀಗೆ ತಂತ್ರದ ದೃಷ್ಟಿಯಿಂದ ಲೇಖಕರಿಗೆ ಪೂರ್ಣ ಯಶ ಸಿಕ್ಕಿಲ್ಲ. ಆದರೆ ಇದು ಕನ್ನಡದ ಮೊದಲ ಕಾದಂಬರಿ ಎಂಬುದನ್ನು ಸ್ಮರಿಸಿದರೆ ಈ ಕಾದಂಬರಿಗೆ ಸಿಕ್ಕ ಸಫಲತೆಯನ್ನು ಮೆಚ್ಚಲೇಬೇಕು.

ಭಾಷಾಶೈಲಿಯ ಮೇಲೆ ತುರಮುರಿಯವರ 'ಬಾಣ ಕಾದಂಬರಿ'ಯ ಪ್ರತ್ಯಕ್ಷ ಪ್ರಭಾವವನ್ನು ನಾವು ಕಾಣಬಹುದು. ದೇಶಿಯ ಶಬ್ದಗಳ ಹಾಗೂ ಕನ್ನಡ ಪಡೆನುಡಿ–ಗಾದೆಯ ಮಾತುಗಳ ಬಳಕೆಯಿಂದಾಗಿ ಭಾಷೆಯ ಆಕರ್ಷಣೆಯು ಹೆಚ್ಚಿದೆ. ಲೇಖಕರು ಮುನ್ನುಡಿಯಲ್ಲಿ ತಮ್ಮ ಕೃತಿಯ ಉದ್ದೇಶವನ್ನು ವಿವರಿಸುತ್ತ ಸತ್ಯ ಮತ್ತು ನಿರ್ಮಲ ಹೃದಯಕ್ಕೆ ಜಯ ನಿಶ್ಚಿತವೆಂದು ಸಾರಿದ್ದಾರೆ. ಕಾದಂಬರಿಯ ಎರಡನೆಯ ಶೀರ್ಷಿಕೆ 'ಸದ್ಧರ್ಮ ವಿಜಯ'ದಲ್ಲಿಯೂ ಇದು ಸೂಚ್ಯವಾಗಿದೆ. ಇಂದಿರೆಯ ಬಾಳಿನ ಸಾಫಲ್ಯದಲ್ಲಿ ತಮ್ಮ ಈ ಉದ್ದೇಶವನ್ನು ಸಾಧಿಸಿದ್ದಾರೆ.

ನಿಷ್ಕರ್ಷೆ

ಹಿಂದಿನ ಕೃತಿಗಳನ್ನು ಇಂದಿನ ಮಾನದಂಡದಿಂದ ಅಳೆಯುವುದು ಸರಿಯಲ್ಲ. ಈ ದೃಷ್ಟಿಯಿಂದ ನೋಡಿದಾಗ ಪ್ರಪ್ರಥಮ ಸಾಮಾಜಿಕ ಕಾದಂಬರಿಯಾದ ಇದು ಒಂದು ಸಫಲ ಕೃತಿ ಎಂದೇ ಹೇಳಬಹುದು. ಈ ಕಾದಂಬರಿಯ ಭಾಷಾ ಶೈಲಿಯ ಮೇಲೆ 'ಮುದ್ರಾಮಂಜೂಷ' ಮತ್ತು 'ಬಾಣ ಕಾದಂಬರಿ'ಗಳ ಪ್ರಭಾವವನ್ನು ಕಾಣಬಹುದು. ವಸ್ತು ಮತ್ತು ತಂತ್ರದ ದೃಷ್ಟಿಯಿಂದ ಲೇಖಕರಿಗೆ ಇಂಗ್ಲಿಷ್ ಕಾದಂಬರಿಗಳಿಂದ ಪ್ರೇರಣೆ ದೊರೆತಿರಬಹುದು. ವಾಸ್ತವಿಕ ಜೀವನ ಚಿತ್ರಣದ ಬಗ್ಗೆ ಲೇಖಕರಿಗಿರುವ ಆಸಕ್ತಿ ಕಾದಂಬರಿಯಲ್ಲಿ ಕಾಣುವ ಸಾಮಾನ್ಯ ಜನ ಜೀವನ ಮತ್ತು ಸಾಮಾಜಿಕ ಸಮಸ್ಯೆಗಳ ಪ್ರಭಾವಶಾಲಿ ಚಿತ್ರಣ, ಅತಿಶಯೋಕ್ತಿಯಿಂದ ಮುಕ್ತವಾದ ಸರಳ ಶೈಲಿ, ದೇಸಿ ಶಬ್ದ ಮತ್ತು ಕನ್ನಡ ಪಡೆನುಡಿಗಳ ಬಳಕೆ, ಸಜೀವ ಪಾತ್ರಗಳನ್ನು ಚಿತ್ರಿಸುವ ಬಗೆಗೆ ಲೇಖಕರ ಪ್ರಯತ್ನ ಇವೆಲ್ಲ ಗುಣಗಳು ಈ ಕಾದಂಬರಿಯಲ್ಲಿ ಕಂಡು ಬರುವುವು. ಇವೇ ಆಧುನಿಕ ಕಾದಂಬರಿಯ ವಿಶೇಷಗುಣಗಳು.

ಈ ಕಾದಂಬರಿಯಲ್ಲಿ ಪದ್ಯ ಮತ್ತು ಶ್ಲೋಕಗಳ ಬಳಕೆ ಕಡಿಮೆ. ಉಪದೇಶ ಕೊಡುವ ಪ್ರವೃತ್ತಿ ಇದ್ದರೂ ಅಷ್ಟು ದೀರ್ಘ ಉಪದೇಶಗಳು ಇದರಲ್ಲಿಲ್ಲ. ಕಾರಣ ಕಥೆಯ ಓಟಕ್ಕೆ ಏನೂ ಬಾಧೆಯಾಗಿಲ್ಲ. ಗುಲವಾಡಿಯವರ ಈ ಕಾದಂಬರಿಯು ಕನ್ನಡದಲ್ಲಿ ಸ್ವತಂತ್ರ ಕಾದಂಬರಿಗಳಿಗೆ ಪರಿಣಾಮಕಾರಿ ತಳಪಾಯವಾಗಿದೆ. ಅಂತೆಯೇ ಕನ್ನಡ ಕಾದಂಬರಿ ಇತಿಹಾಸದಲ್ಲಿ ಇದೊಂದು ಗಮನಾರ್ಹವಾದ ಅಧ್ಯಾಯ.

ಬಿ. ಪಿ. ಚಂದ್ರಾಬಾಯಿ

ಸಂತ ತುಕಾರಾಮ್

"ಸಂತಾಂಚ್ಯಾ ವಿಭೂತಿ ಧರ್ಮಾಲಾಗಿ ಅವತರತಿ"
(ಸಂತರು ಧರ್ಮ ಸಂಸ್ಥಾಪನೆಗಾಗಿ ಅವತರಿಸುತ್ತಾರೆ)

–ಏಕನಾಥಾ ಗಾಥಾ

ರಾಗ ದ್ವೇಷಗಳಿಂದ ತಾಡಿತವಾದ ಸಂಸಾರದಲ್ಲಿಯೆ ಮುಳುಗಿ ಹೋಗದೆ, ಪರಮ ತತ್ತ್ವಾನ್ವೇಷಕರಾಗಿ ಬದುಕನ್ನು ಪಾವನ ಮಾಡಿಕೊಂಡ ಮಹಾಪುರುಷರಿಗೆ ಸಂತರೆಂದು ಕರೆಯುವ ವಾಡಿಕೆ ಇದೆ. ಸಂತರ ದೃಷ್ಟಿ ಸದಾ ವಿಶ್ವಕಲ್ಯಾಣದತ್ತ ಹರಿಯುತ್ತಿರುತ್ತದೆ. ಅವರ ಜ್ಯೋತಿ ಸದೃಶವಾದ ಜೀವನ ಎಷ್ಟೋ ತಪ್ತ ಹೃದಯಗಳಿಗೆ ಸಾಂತ್ವನ ನೀಡುತ್ತದೆ. ಸಮರ್ಥ ರಾಮದಾಸ, ಸಂತ ಜ್ಞಾನೇಶ್ವರ, ನಾಮದೇವ, ಏಕನಾಥ ತುಕಾರಾಮ, ಸಖುಬಾಯಿ ಮೊದಲಾದ ಸಂತರಿಗೆ ಜನ್ಮವಿತ್ತ ಪುಣ್ಯಭೂಮಿ, ಮಹಾರಾಷ್ಟ್ರ.

ನಾಥ ಸಂಪ್ರದಾಯ, ವಾರಕರಿ ಸಂಪ್ರದಾಯ, ಮಹಾನುಭಾವ ಸಂಪ್ರದಾಯ, ದತ್ತ ಸಂಪ್ರದಾಯ, ಸಮರ್ಥ ಸಂಪ್ರದಾಯ–ಎಂಬ ಐದು ಮುಖ್ಯ ಸಂಪ್ರದಾಯಗಳಿವೆ ಮಹಾರಾಷ್ಟ್ರದಲ್ಲಿ. ತುಕಾರಾಮರು ವಾರಕರಿ ಸಂಪ್ರದಾಯಕ್ಕೆ ಸೇರಿದ ಪ್ರಮುಖ ಸಂತರು. 'ವಾರಕರಿ' ಎಂಬ ಪದಕ್ಕೆ 'ಯಾತ್ರೆ ಹೋಗುವವನು' ಎಂಬ ಅರ್ಥವಿದೆ. ಯಾತ್ರೆ ಎಂದರೆ ಸಾಮಾನ್ಯವಾಗಿ ಪಂಢರಾಪುರಕ್ಕೆ ಹೋಗುವ ಯಾತ್ರೆ ಎಂದೇ ಅರ್ಥ. ತುಳಸಿಮಾಲೆಯನ್ನು ಧರಿಸಿ ವಿಠ್ಠಲನನ್ನು ಧ್ಯಾನಿಸುತ್ತ ಪಾಂಡುರಂಗ ವಿಠ್ಠಲನ ದರ್ಶನ ಮಾಡುವುದೇ ಜೀವನದ ಸಾಫಲ್ಯ ಎಂದು ತಿಳಿಯುತ್ತಾರೆ ಈ ಸಂಪ್ರದಾಯದವರು. ಇವರಲ್ಲಿ ನಾಮಸ್ಮರಣೆಗೆ ವಿಶೇಷ ಸ್ಥಾನ. ಏಕಾದಶಿ ವ್ರತ ಹಾಗೂ ಆಷಾಢ ಕಾರ್ತೀಕ ಮಾಸಗಳಲ್ಲಿ ಪಂಢರಾಪುರದ ಚಂದ್ರಭಾಗಾನದಿಯ ತೀರದಲ್ಲಿ 'ವಿಠ್ಠಲ ರಖುಮಾಯಿ, ವಿಠ್ಠಲ ರಖುಮಾಯಿ' ಎಂದು ಭಕ್ತಿ, ಆವೇಶ ಹಾಗೂ ಏಕಕಂಠದಿಂದ ಈ ಸಂಪ್ರದಾಯದ ಭಕ್ತರು ಹಾಡಿ ನಲಿಯುತ್ತಾರೆ.

ಈ ಸಂಪ್ರದಾಯದ ಪ್ರಮುಖ ಪ್ರವರ್ತಕರು ಸಂತ ಜ್ಞಾನೇಶ್ವರರು. ಈ ಸಂಪ್ರದಾಯಕ್ಕೆ 'ಭಾಗವತ ಧರ್ಮ' ಎಂಬ ಹೆಸರೂ ಇದೆ. ಇವರು ಶರೀರ, ಮನಸ್ಸು, ಇಂದ್ರಿಯ, ಬುದ್ಧಿ–ಇವುಗಳಿಂದ ಮಾಡುವ ಕೆಲಸಗಳೆಲ್ಲವನ್ನೂ ವಿಠ್ಠಲನಿಗೆ ಸಮರ್ಪಿಸುತ್ತಾರೆ. ಈ ಜಗತ್ತೆಲ್ಲ ವಿಷ್ಣು ರೂಪ ಎಂಬುದು– ಈ ಸಂಪ್ರದಾಯದ ನಿಶ್ಚಲ ನಂಬಿಕೆ. ಸಮರ್ಪಣ ಭಾವದಿಂದ ಜೀವಿಸುತ್ತಾ ಜನತೆಯಲ್ಲಿ ಜನಾರ್ದನನ್ನು ಕಾಣುವುದೇ ಈ ಮಾರ್ಗದ ಪರಮಧ್ಯೇಯ. "ವಿಷ್ಣುಮಯ ಜಗ ವೈಷ್ಣವಾಚಾ ಧರ್ಮ" (ಜಗತ್ತೆಲ್ಲಾ ವಿಷ್ಣುಮಯ ಎನ್ನುವುದು ವೈಷ್ಣವರ ಧರ್ಮ)–ಎಂದು ತುಕಾರಾಮರ ಅಭಿಮತ. ಜ್ಞಾನೇಶ್ವರ, ನಾಮದೇವ, ಏಕನಾಥ ಮೊದಲಾದ ಸುವಿಖ್ಯಾತ ವಾರಕರಿ ಸಂಪ್ರದಾಯದ ಮಹಾಪುರುಷರ ಪಂಕ್ತಿಗೆ ಸೇರಿದವರು ತುಕಾರಾಮರು. ಅವರ ಅಭಂಗವಾಣಿ ಮಹಾರಾಷ್ಟ್ರದ ಮನೆಮನೆಯಲ್ಲಿ ಪ್ರತಿಧ್ವನಿತವಾಗುತ್ತಿದೆ. ಅವರ ಹೃದಯಂಗಮವಾದ ಸರಳ ಅಭಂಗಗಳು ಜನಸಾಮಾನ್ಯರಿಗೂ ಅರ್ಥವಾಗುವಂತಿವೆ.

ಅವರ ಮಹಿಮಾನ್ವಿತ ಜೀವನದ ಪ್ರಭಾವದಿಂದ ಅನೇಕರು ಪುನೀತರಾದರು. ಅವರ ಜೀವನದ ರೂಪ ರೇಖೆಗಳನ್ನು ತಿಳಿಯೋಣ:

ಜೀವನ :

ಪುಣೆಯ ಸಮೀಪದಲ್ಲಿರುವ ಇಂದ್ರಾಯಣೀ ನದೀತೀರದಲ್ಲಿ ದೇಹೂ ಎಂಬ ಗ್ರಾಮವಿದೆ. ಆ ಗ್ರಾಮದಲ್ಲಿ ಕುಣಬಿ ಎಂಬ ರೈತ ವಂಶದಲ್ಲಿ ಕ್ರಿ.ಶ. 1598 ಮಾಘಮಾಸದ ಶುಕ್ಲ ಪಂಚಮಿ ಶುಭ ಮುಹೂರ್ತದಲ್ಲಿ ತುಕಾರಾಮರು ಜನ್ಮತಾಳಿದರು. ಅವರ ತಂದೆ ಬೋಲ್ಹೋಬಾ, ಅವರ ತಾಯಿ ಕನಕಾಯಿ. ಮಾತಾಪಿತೃಗಳಿಬ್ಬರೂ ವಿಠ್ಠಲನ ಪರಮ ಭಕ್ತರು. ತಂದೆ ತಾಯಿಗಳ ವಾತ್ಸಲ್ಯದಲ್ಲಿ ಹಾಗೂ ಭಕ್ತಿಯ ವಾತಾವರಣದಲ್ಲಿ ತುಕಾರಾಮರು ಬೆಳೆಯುತ್ತಾ ಬಂದರು. ಅವರಿಗೆ ಸಾವಜಿ ಎಂಬ ಅಣ್ಣನೂ, ಕಾನ್ಹೋಬಾ ಎಂಬ ತಮ್ಮನೂ ಇದ್ದರು. ಸ್ನೇಹಿತರ ಜೊತೆಗೂಡಿ ಅನೇಕ ರೀತಿಯ ಆಟಪಾಟಗಳಲ್ಲಿ ತುಕಾರಾಮರ ಬಾಲ್ಯ ಜೀವನ ಕಳೆಯಿತು. ತಂದೆ ಬಾಲ್ಹೋಬಾ ಮಗನಿಗೆ ಓದು, ಬರಹ, ಲೆಖ್ಖ ಮುಂತಾದವುಗಳನ್ನು ಕಲಿಸಿದರು. ತುಕಾರಾಮರು ಮೇಧಾವಿ ಹಾಗೂ ಅತ್ಯಂತ ಚತುರರು. ಹೇಳಿ ಕೊಟ್ಟದ್ದನ್ನು ಶೀಘ್ರದಲ್ಲಿ ಗ್ರಹಿಸಿದರು.

ತುಕಾರಾಮರ ಅಣ್ಣ ಸಾವಜಿಗೆ ಓದು ಬರಹದಲ್ಲಿ ಇಷ್ಟವಿರಲಿಲ್ಲ. ಅವರು ಯಾವಾಗಲೂ ತಂದೆಯ ಜೊತೆ ಭಜನೆ ಮತ್ತು ಅಭಂಗಗಳನ್ನು ಹಾಡುವುದರಲ್ಲಿಯೇ ನಿರತರಾಗುತ್ತಿದ್ದರು. ಬಾಲ್ಯದಲ್ಲಿಯೇ ವೈರಾಗ್ಯ ಅವರಲ್ಲಿ ನೆಲಸಿತ್ತು. ಇವರ ಈ ಪ್ರವೃತ್ತಿ ತಂದೆಗೆ ಕಳವಳವನ್ನುಂಟು ಮಾಡಿತು. ಮಗನಿಗೆ ಮದುವೆ ಮಾಡಿದರೆ ಸರಿ ಹೋಗುವುದೆಂದು ತಿಳಿದು, ಮಗನಿಗೆ ಅವನ ಹದಿನೈದನೆಯ ವಯಸ್ಸಿನಲ್ಲಿಯೆ ಮದುವೆ ಮಾಡಿದರು ತಂದೆ. ಮನೆಯ ಜವಾಬ್ದಾರಿಯನ್ನೂ ಮಗನು ನಿರ್ವಹಿಸಲೆಂಬ ಇಚ್ಛೆ ಪ್ರಕಟಿಸಿದರು. ಆದರೆ ಸಾವಜೀ ಇದನ್ನು ಸಂಪೂರ್ಣವಾಗಿ ನಿರಾಕರಿಸಿ, "ನನ್ನ ಮನಸ್ಸು ಸಂಸಾರದಲ್ಲಿ ಸ್ವಲ್ಪವೂ ನೆಲಸದು. ಈ ನರದೇಹ ಸಾರ್ಥಕತೆಗಾಗಿ ಎಲ್ಲವನ್ನೂ ತ್ಯಜಿಸಿ ತೀರ್ಥಯಾತ್ರೆಗೆ ಹೊರಡಬೇಕೆನಿಸಿದೆ"–ಎಂದರು. ಅವರನ್ನು ಸಮಾಧಾನ ಪಡಿಸುವ ತಂದೆಯ ಎಲ್ಲ ಕಾರ್ಯಗಳು ವ್ಯರ್ಥವಾದವು. ಕಡೆಗೆ ಮನೆಯ ಜವಾಬ್ದಾರಿ ತುಕಾರಾಮರ ಮೇಲೆ ಬಿತ್ತು. ತುಕಾರಾಮರಿಗೆ ತಮ್ಮ ತಂದೆ ತಾಯಿಯರಲ್ಲಿ ಅತ್ಯಂತ ಗೌರವ ಭಕ್ತಿಗಳಿದ್ದವು. ಅವರನ್ನು ತೃಪ್ತಿ ಪಡಿಸಲು ತುಕಾರಾಮ ತಮ್ಮ ಕೇವಲ 13ನೆಯ ವಯಸ್ಸಿನಲ್ಲಿ ಮನೆಯ ಭಾರವನ್ನು ಹೊರಲು ಸಿದ್ಧರಾದರು. ತುಕಾರಾಮರು ಶೀಘ್ರಮತಿಗಳಾದುದದರಿಂದ ತಮ್ಮ ಕೆಲಸವನ್ನು ಅತ್ಯಂತ ಚಾಕಚಕ್ಯತೆಯಿಂದ ನಿರ್ವಹಿಸುತ್ತಾ ತಂದೆಯ ಪ್ರೀತಿಗೆ ಪಾತ್ರರಾದರು.

ಮಗನಿಗೆ ಮದುವೆ ಮಾಡುವ ಆಸೆಯಾಯಿತು ತಂದೆಗೆ. ತುಕಾರಾಮರ ವಿವಾಹ ಅವರ 13ನೇ ವಯಸ್ಸಿನಲ್ಲಿ ರಖುಮಾಯಿಯೆಂಬ ಕನ್ಯೆಯೊಡನೆ ನೆರವೇರಿತು. ವಿವಾಹದ ಬಳಿಕ ತಿಳಿಯಿತು ರಖುಮಾಯಿಗೆ ಆಸ್ತಮ ಇರುವುದೆಂದು. ಪುನಃ ತುಕಾರಾಮರ ವಿವಾಹ ಶ್ರೀಮಂತ ಕನ್ಯೆ ಜೀಜಾಯಿಯೊಡನೆ ನೆರವೇರಿತು. ತುಕಾರಾಮರು ತಮ್ಮ ಸಂಸಾರ ಸುಖದಲ್ಲಿ ಮಗ್ನರಾದರು. ಹೀಗೆಯೇ ನಾಲ್ಕು ವರ್ಷಗಳು ಕಳೆದು ಹೋದವು.

ತಂದೆ ಬಾಲ್ಹೋಬಾ ತಮ್ಮ ಮಗನು ಸುಖವಾಗಿ ಸಂಸಾರ ಮಾಡುವುದನ್ನು ಕಂಡು ತೃಪ್ತರಾಗಿ ವೃದ್ಧಾವಸ್ಥೆಯಲ್ಲಿ ಸ್ವರ್ಗವನ್ನೈದಿದರು. ವೈರಾಗ್ಯ ಪ್ರವೃತ್ತಿಯ ಅಣ್ಣ ಸಾವಜಿ, ತಂದೆ ಕಾಲವಾದನಂತರ ಪೂರ್ಣ ವಿರಾಗಿಯಾಗಿ ಹೊರಟು ಹೋದರು. ಸಂಸಾರದ ಪೂರ್ಣ ಹೊಣೆ ತುಕಾರಾಮರ ಮೇಲೆ ಬಿತ್ತು. ಅವರು ಬಂದ ಕಷ್ಟಗಳನ್ನು ಧೈರ್ಯವಾಗಿ ಎದುರಿಸಿದರು. ತಮ್ಮ ಸಹೋದರ ಕಾಲ್ಹೋಬಾನ ವಿವಾಹವನ್ನು ವಿಜೃಂಭಣೆಯಿಂದ ನೆರವೇರಿಸಿ, ತಾಯಿಯ ಇಚ್ಛೆಯಂತೆ ಅವರನ್ನು ಅನೇಕ ಪುಣ್ಯಕ್ಷೇತ್ರಗಳ ಸಂದರ್ಶನಕ್ಕೆ ಕರೆದೊಯ್ದರು. ಈ ಯಾತ್ರೆಗಾಗಿ ತುಕಾರಾಮರು ಅಪಾರ ಹಣವನ್ನು ವ್ಯಯ ಮಾಡಬೇಕಾಗಿ ಬಂದಿತು. ಇದೇ ಸಮಯದಲ್ಲಿ ಅಂದರೆ ಕ್ರಿಶ. 1630ರಲ್ಲಿ ಮಹಾರಾಷ್ಟ್ರದಲ್ಲೆಲ್ಲ ಕ್ಷಾಮ ತಲೆದೋರಿತು. ಆಹಾರದ ಅಭಾವ ಮತ್ತು ಹಸಿವಿನಿಂದ ಅನೇಕರು ಸತ್ತರು. ತುಕಾರಾಮರ ತಾಯಿ, ಪತ್ನಿ ರಖುಮಾಯಿ, ಮತ್ತು ಅವರ ಮಗು ಸಾವನ್ನಪ್ಪಿದರು. ಸುಮಾರು ಒಂದು ವರ್ಷದ ಅವಧಿಯಲ್ಲಿ ನಾಲ್ಕು ಜನರು ಕಣ್ಮರೆಯಾದರು. ತುಕಾರಾಮರ ಹೃದಯ ತತ್ತರಿಸಿತು. ಮಾನವ ಶರೀರದ ನಶ್ವರತೆಯನ್ನು ಅವರು ತಿಳಿದರು. ಅವರ ಮನಸ್ಸಿನಲ್ಲಿ ವೈರಾಗ್ಯ ಮತ್ತು ಅನಾಸಕ್ತಿ ಮೂಡಲಾರಂಭಿಸಿತು. ಇದಕ್ಕೆ

ಪುಷ್ಟಿಕೊಡುವಂತೆ ಅವರ ಹೆಂಡತಿ ಜೀಜಾಯಿಯ ಸ್ವಭಾವವೂ ಕಠೋರವಾಗಿತ್ತು. ಅವರ ಮನಸ್ಸೆಲ್ಲಾ ಭಗವಂತನಲ್ಲಿ ಕೇಂದ್ರೀಕೃತವಾಗಲಾರಂಭಿಸಿತು. ಸಂಸಾರದತ್ತ ಅನ್ಯಮನಸ್ಕರಾದ ಅವರನ್ನು ಅನೇಕ ಕಷ್ಟಗಳು ಮುತ್ತಲಾರಂಭಿಸಿದವು. ಅವರ ಕೆಲಸಕಾರ್ಯಗಳೆಲ್ಲಾ ನಿಂತು ಹೋಯಿತು.

ದೇಹೂ ಗ್ರಾಮದ ಬಳಿ ಭಂಡಾರವೆಂಬ ಬೆಟ್ಟವಿದೆ. ಸಂಸಾರದಿಂದ ವಿರಕ್ತರಾದ ತುಕಾರಾಮರು ಪ್ರತಿನಿತ್ಯ ಆ ಪರ್ವತಕ್ಕೆ ಹೋಗಿ ಧ್ಯಾನ ಚಿಂತನೆಯಲ್ಲಿ ತಮ್ಮ ಕಾಲವನ್ನು ಕಳೆಯಲಾರಂಭಿಸಿದರು. ಜ್ಞಾನೇಶ್ವರರ–'ಯೋಗವಾಸಿಷ್ಠ' ಹಾಗೂ 'ಅನುಭವಾಮೃತ' ಮತ್ತು ನಾಮದೇವರ 'ಭಾವಾರ್ಥ ರಾಮಾಯಣ'ಗಳ ಪಠನದಿಂದ ಮನಸ್ಸನ್ನು ಏಕಾಗ್ರ ಮಾಡುವ ಪ್ರಯತ್ನದಲ್ಲಿ ಅವರು ತೊಡಗಿದರು. ಬೆಳಗ್ಗೆ ಮತ್ತು ಸಾಯಂಕಾಲ ವಿಠ್ಠಲನ ನಾಮಸ್ಮರಣೆ ಹಾಗೂ ಕೀರ್ತನೆಯಲ್ಲಿ ಅವರು ಮಗ್ನರಾದರು. ಪಾರಮಾರ್ಥಿಕ ಜೀವನದಿಂದ ವಿರಕ್ತರಾದ ಅವರನ್ನು ಅವರ ಹೆಂಡತಿ ಮತ್ತು ಸಹೋದರರು ಬಹು ಕಷ್ಟದಿಂದ ಪುನಃ ಮನೆಗೆ ಕರೆತಂದು ಸಂಸಾರದ ಸುಳಿಯಲ್ಲಿ ಸಿಕ್ಕಿಸುವ ಪ್ರಯತ್ನ ಮಾಡಿದರು. ಅವರ ತಂದೆ ಬಾಲ್ಹೋಬಾ ಕೊಟ್ಟ ಹಣವನ್ನು ವಸೂಲಿ ಮಾಡುವ ಕೆಲಸ ಇವರ ಪಾಲಿಗೆ ಬಂತು. ತುಕಾರಾಮರು ಆ ಕೆಲಸವನ್ನು ಬಹು ಕಷ್ಟದಿಂದ ಒಪ್ಪಿಕೊಂಡರು. ಆದರೆ ದಿನಕಳೆದಂತೆ ಅವರ ಮನಸ್ಸು ವಿಚಾರಶೀಲವಾಯಿತು. ಈ ಮಾನವ ಶರೀರವನ್ನು ಹೊತ್ತು ಸಂಸಾರಕ್ಕೆ ಬಂದಿರುವ ನಾವು ಭಗವಂತನಿಂದ ದೊಡ್ಡ ಸಾಲದ ಹೊರೆಯನ್ನು ಹೊತ್ತು ಬಂದಿದ್ದೇವೆ. ಅದರಿಂದ ಮುಕ್ತರಾಗದೆ ಬೇರೆಯವರಿಂದ ಹಣವನ್ನು ಪಡೆವ ಅಧಿಕಾರವಾದರೂ ನಮಗಿದೆಯೆ? ಎಂದು ಸುದೀರ್ಘ ಯೋಚನೆಯನ್ನು ಮಾಡಿ ತಮ್ಮನಾದ ಕಾಲ್ಹೋಬಾನ ಪಾಲನ್ನು ಬಿಟ್ಟು ತಮ್ಮ ಭಾಗಕ್ಕೆ ಬಂದ ಪತ್ರಗಳೆಲ್ಲವನ್ನೂ ಇಂದ್ರಾಯಣಿ ನದಿಯಲ್ಲಿ ತೇಲಿ ಬಿಟ್ಟರು. ಅಂದಿನಿಂದ ಅವರು ಹಣದ ಸ್ಪರ್ಶವನ್ನೂ ಮಾಡಲಿಲ್ಲ. ಅವರ ಹಿರಿಮೆಯನ್ನು ಕೇಳಿ ಶಿವಾಜಿ ಮಹಾರಾಜರು ತುಕಾರಾಮರಿಗೆ ಗೌರವ ರೂಪದಲ್ಲಿ ಹಣವನ್ನು ಕಳುಹಿಸಿ ಕೊಟ್ಟಾಗ ಅದನ್ನು ಅವರು ಸ್ವೀಕರಿಸಲಿಲ್ಲ. ದಿನಕಳೆದಂತೆ ವೈರಾಗ್ಯವೂ ವಿಠಲನ ಭಕ್ತಿಯೂ ಅವರಲ್ಲಿ ತೀವ್ರ ವಾಗುತ್ತಾ ಬಂದಿತು.

ತುಕಾರಾಮರು ನಿರಾತಂಕವಾಗಿ ವಿಠ್ಠಲನ ಧ್ಯಾನದಲ್ಲಿ ಆಸಕ್ತರಾದರು. ನಿರ್ಜನ ಪ್ರದೇಶದಲ್ಲಿ ಏಕಾಂಗಿಯಾಗಿ ಸಂಚರಿಸಲು ಆರಂಭಿಸಿದರು. ಅವರ ಮನಸ್ಸು ಭಗವಂತನ ಸ್ವರೂಪವನ್ನು ಕುರಿತು ಚಿಂತಿಸ ತೊಡಗಿತು. ಅವರ ಹೃದಯದಿಂದ ಅಭಂಗಗಳು ಮೂಡಿಬಂದವು. ಮಾನವಪ್ರೇಮ ಅವರಲ್ಲಿ ತುಂಬಿ ತುಳುಕುತ್ತಿತ್ತು. ದಾರಿಯಲ್ಲಿ ಯಾರಾದರೂ ಹೊರಲಾರದ ಹೊರೆಯನ್ನು ಹೊತ್ತು ಹೋಗು ತ್ತಿದ್ದರೆ, ಸ್ವಲ್ಪ ಹೊತ್ತು ಆ ಹೊರೆಯನ್ನು ಹೊತ್ತು ಅವರಿಗೆ ಸಹಾಯ ಮಾಡುತ್ತಿದ್ದರು. ಬಡಕಲು ಹಸುಗಳನ್ನು ಕಂಡರೆ ಅವಕ್ಕೆ ಹುಲ್ಲನ್ನು ಕೊಯ್ದು ಹಾಕುತ್ತಿದ್ದರು. ಕ್ರಮೇಣ ಅವರ ಮನಸ್ಸು ವಿಠ್ಠಲನ ನಾಮಸ್ಮರಣೆಯಲ್ಲಿ ಲೀನವಾಯಿತು. ಶ್ರೇಷ್ಠ ಅಭಂಗಗಳು ಅವರಿಂದ ಸೃಷ್ಟಿಯಾದವು. ಅವರ ಭಕ್ತಿ ಗೀತೆಗಳಾದ ಅಭಂಗಗಳನ್ನು ಕೇಳಲು ನೂರಾರು ಜನರು ಅವರ ಬಳಿಗೆ ಬರಲಾರಂಭಿಸಿದರು. ಇದರಿಂದ ಮನೆಯ ಸಂಸಾರ ನಡೆಯುವುದು ಕಷ್ಟವಾಯಿತು. ಪತ್ನಿ ಜೀಜಾಬಾಯಿ ಈ ವಿಚಾರವನ್ನು ಎಷ್ಟು ಹೇಳಿದರೂ ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ. ತುಕಾರಾಮರು ವಿಠ್ಠಲನ ನಾಮಸ್ಮರಣೆಯೇ ಸಕಲ ದುಃಖಗಳ ನಿರ್ಮೂಲನಕ್ಕೆ ಕಾರಣವೆಂದು ಹೇಳಿದುದನ್ನು ಪದೇ ಪದೇ ಕೇಳಿದ ಜೀಜಾಬಾಯಿ ಅದರಂತೆಯೇ ನಡೆಯಲು ಯತ್ನಿಸಿದಳು.

ತುಕಾರಾಮರ ಬಳಿಗೆ ಅನೇಕ ಭಕ್ತರು ಬಂದು ಅವರ ಅಭಂಗಗಳನ್ನು ಕೇಳಿ ಆನಂದಪರವಶ ರಾಗುತ್ತಿದ್ದುದನ್ನು ಕಂಡ ರಾಮೇಶ್ವರ ಭಟ್ಟ ಮತ್ತು ಮುಂಬಾಜಿ ಮೊದಲಾದ ಬ್ರಾಹ್ಮಣರು ಶೂದ್ರ ನಾದ ತುಕಾರಾಮನು ಆಧ್ಯಾತ್ಮಿಕ ವಿಚಾರವಾಗಿ ಪ್ರವಚನ ಮಾಡಲು ಯೋಗ್ಯನಲ್ಲವೆಂದು ಸಾರಿ, ತುಕಾರಾಮರಿಗೆ ಕಿರುಕುಳ ಕೊಡಲಾರಂಭಿಸಿದರು. ತುಕಾರಾಮರು ಶಾಂತ ಸ್ವಭಾವದಿಂದಲೇ ಆ ಬ್ರಾಹ್ಮಣರ ಮನಸ್ಸನ್ನು ಪರಿವರ್ತಿಸಿದರು. ವಿಠ್ಠಲನ ನಾಮಸ್ಮರಣೆ ಹಾಗೂ ಸಾತ್ವಿಕ ಜೀವನದ ಮಹಿಮೆಯನ್ನು ಸಾರುತ್ತ ಸಹಸ್ರಾರು ಜನರಿಗೆ ಭಕ್ತಿಯ ಮಹಿಮೆಯ ದಿಗ್ದರ್ಶನ ಮಾಡಿದ ತುಕಾರಾಮರು ಕ್ರಿ. ಶ. 1649ರಲ್ಲಿ ತಮ್ಮ ಪಾರ್ಥಿವ ಶರೀರವನ್ನು ತ್ಯಜಿಸಿದರೆಂದು ತಿಳಿದು ಬಂದಿದೆ. ಇಂದಿಗೂ ಮಹಾರಾಷ್ಟ್ರದ ಮನೆಮನೆಗಳಲ್ಲಿ ತುಕಾರಾಮರ ಅಭಂಗಗಳು ಪ್ರತಿಧ್ವನಿತವಾಗುತ್ತಿವೆ.

ತುಕಾರಾಮರ ಸಾಧನೆ :

ಧರ್ಮಗ್ರಂಥಗಳ ಪಠನ ಮತ್ತು ಹರಿಕೀರ್ತನೆಗಳಿಂದ ಆಕರ್ಷಿತರಾದ ಜನರು ಅವರ ಸಂದರ್ಶನಕ್ಕಾಗಿ ತಂಡ ತಂಡವಾಗಿ ಬರಲಾರಂಭಿಸಿದರು. ಆದರೆ ಕೆಲವರು ಅವರ ಯಶಸ್ಸನ್ನು ಕಂಡು ಅಸೂಯೆ ಪಟ್ಟರು. ದೇಹೂವಿನ ಬ್ರಾಹ್ಮಣ ಮಹಂತ ಮಂಬಾಜಿ ಮತ್ತು ವಾಘೋಲಿಯ ರಾಮೇಶ್ವರ ಭಟ್ಟ ಎಂಬುವವರು ತುಕಾರಾಮರನ್ನು ಟೀಕಿಸುತ್ತಾ ನಿಂದಿಸತೊಡಗಿದರು. ತುಕಾರಾಮರನ್ನು ಶೂದ್ರರೆಂದೂ, ಅವರಿಗೆ ಕಾವ್ಯ ರಚಿಸುವ ಹಾಗೂ ವೇದಶಾಸ್ತ್ರಗಳೂನ್ನೋದುವ ಹಕ್ಕಿಲ್ಲವೆಂದೂ ಘೋಷಿಸಿದರು. ಒಂದು ಸಲ ದೇವ ಸ್ಥಾನದಲ್ಲಿ ಪ್ರದಕ್ಷಿಣೆ ಮಾಡುವಾಗ ತುಕಾರಾಮರ ವಸ್ತ್ರಸ್ಪರ್ಶದಿಂದ ಕುಪಿತರಾದ ಮುಂಬಾಜಿಯುವರು ತುಕಾರಾಮರನ್ನು ತೀವ್ರವಾಗಿ ಖಂಡಿಸಿ ಅವರನ್ನು ಹೊಡೆದು ಹಿಂಸೆಪಡಿಸಿದರು. ಅದರಿಂದ ತೃಪ್ತರಾಗದೆ ಕಡೆಗೆ ತುಕಾರಾಮರು ಬರೆದ ಅಭಂಗಗಳೆಲ್ಲವನ್ನೂ ಇಂದ್ರಾಯಣಿ ನದಿಯಲ್ಲಿ ಮುಳುಗಿಸಿ ಬಿಟ್ಟರು. ಅದರಿಂದ ತುಕಾರಾಮರಿಗೆ ಅತೀವ ದುಃಖವಾಯಿತು. ಅವರು ತಮ್ಮ ದುಃಖವನ್ನು ಯಾರ ಮುಂದೆಯೂ ತೋರಲಿಲ್ಲ. ಭಗವಂತನೇ ನ್ಯಾಯ ದೊರಕಿಸುವನೆಂಬ ನಂಬಿಕೆಯಿಂದ ಇಂದ್ರಾಯಣಿ ನದಿಯ ತೀರದಲ್ಲಿ ನಿದ್ರಾಹಾರಗಳನ್ನು ತೊರೆದು ಹರಿ ಸಂಕೀರ್ತನೆ ಮಾಡುತ್ತಾ ಕುಳಿತರು. ಹನ್ನೆರಡು ದಿನಗಳು ಕಳೆದು ಹದಿಮೂರನೆಯ ದಿನ ಅವರ ಅಭಂಗಗಳೆಲ್ಲಾ ಇಂದ್ರಾಯಣೀ ನೀರಿನ ಮೇಲೆ ತೇಲಿ ಬಂದವಂತೆ! ಭಗವಂತನಿಗೆ ಜಾತಿಗಳ ಪಕ್ಷಪಾತವಿಲ್ಲವೆಂಬುದು ತುಕಾರಾಮರಿಗೆ ಖಚಿತವಾಯಿತು. ಕಷ್ಟಗಳ ಮಧ್ಯೆ ಬೆಳೆದು, ಕಷ್ಟಗಳನ್ನು ಅನುಭವಿಸುತ್ತಾ ಜೀವನದ ಹೋರಾಟವನ್ನು ಧೈರ್ಯ ಸಹನೆ, ಸಾಹಸಗಳಿಂದ ಎದುರಿಸಿದ ತುಕಾರಾಮರ ಜೀವನದಲ್ಲಿ, ಈ ಘಟನೆ ಅವರಿಗೆ ಭಗವಂತನಲ್ಲಿ ಪೂರ್ಣ ನಂಬಿಕೆ ಬೆಳೆಯಿತು.

ತುಕಾರಾಮರ ಸಂತ ಹೃದಯ ಸದಾ ವಿಶ್ವಕಲ್ಯಾಣಕ್ಕಾಗಿ ಮಿಡಿಯುತ್ತಿತ್ತು. ವಿಶ್ವದ ಚರಾಚರದಲ್ಲಿ ಶಾಂತಿ ಹಾಗೂ ಆನಂದವನ್ನು ಕಾಣುವ ಅಭೀಪ್ಸೆ ತುಕಾರಾಮರದು. ಅವರ ವಿಶ್ವಪ್ರೇಮ ಕೇವಲ ಮಾನವ ಕೋಟಿಯಲ್ಲಲ್ಲ, ಪಶು ಪಕ್ಷಿ, ಗಿಡಮರಗಳ ಮೇಲೂ ಇತ್ತು.

ಒಂದು ಸಲ ತುಕಾರಾಮರಿಗೆ ಕಾಳುಗಳಿಂದ ತುಂಬಿದ ಹೊಲವನ್ನು ಪಕ್ಷಿಗಳಿಂದ ರಕ್ಷಿಸುವ ಕೆಲಸ ಬಂತು. ಹರಿ ಸಂಕೀರ್ತನೆಯಲ್ಲಿ ತೊಡಗಿ ಕಾಯುತ್ತಾ ಕುಳಿತ್ತಿದ್ದರು. ಎಲ್ಲಿಂದಲೋ ಪಕ್ಷಿಗಳು ಗುಂಪು ಗುಂಪಾಗಿ ಬಂದು ರಸವತ್ತಾದ ಕಾಳುಗಳನ್ನು ತಿನ್ನಲಾರಂಭಿಸಿದವು. ತುಕಾರಾಮರಿಗೆ ಪಕ್ಷಿಗಳ ಆ ಸಂತೋಷವನ್ನು ಕಂಡು ಎಲ್ಲಿಲ್ಲದ ಹಿಗ್ಗು! ಹಕ್ಕಿಗಳ ಆನಂದದಲ್ಲಿ ತಾವೂ ಮಗ್ನರಾಗಿ ಅವುಗಳನ್ನೇ ನೋಡುತ್ತಾ ಕುಳಿತರು. ಪಕ್ಕಿಗಳು ತಮ್ಮ ಹೊಟ್ಟೆ ತುಂಬಿಕೊಂಡು ಹಾರಿಹೋದವು. ಜಮೀನಿನ ಮಾಲೀಕ ಬಂದು ನೋಡಿದಾಗ ಹಕ್ಕಿಗಳು ಕಾಳನ್ನು ತಿಂದು ಹೋಗಿದ್ದವು. ಅವನು ಕುಪಿತನಾಗಿ ತುಕಾರಾಮರನ್ನು ಪ್ರಶ್ನಿಸಿದಾಗ "ನಾನು ನನ್ನ ಕೆಲಸವನ್ನು ಸರಿಯಾಗಿ ನಿರ್ವಹಿಸಿದ್ದೇನೆ. ಪಕ್ಕಿಗಳ ಮೇಲೆ ಕಾವಲಿಡಲು ನೀನು ಹೇಳಿದ್ದೆಯಲ್ಲವೆ? ನಾನು ಅವುಗಳ ಮೇಲೆ ಕಾವಲಿಟ್ಟು ಅವು ತಮ್ಮ ಹೊಟ್ಟೆ ತುಂಬಿಕೊಂಡು ಹೋಗುವ ವರೆಗೆ ಕಾದು ಕುಳಿತೆ. ಇದರಲ್ಲಿ ನನ್ನ ಅಪರಾಧವೇನು?"–ಎಂದರು. ಜಮೀನಿನ ಮಾಲೀಕ ತನ್ನ ಕೋಪವನ್ನು ನುಂಗಿಕೊಂಡು ಹೊರಟು ಹೋದನು.

ಒಂದು ದಿನ ಹುಚ್ಚು ನಾಯಿಯೊಂದು, ತುಕಾರಾಮರು ನಡೆದು ಹೋಗುತ್ತಿದ್ದಾಗ, ಅವರ ಮುಂದೆ ಬರಲಾರಂಭಿಸಿತು. ಜನರೆಲ್ಲರೂ ಅವರಿಗೆ ಎಚ್ಚರಿಕೆ ಕೊಟ್ಟರು. ಅವರು ನಾಯಿಯನ್ನು ಪ್ರೀತಿ ಯಿಂದ ಕಂಡು ಅದರ ಮೈಯನ್ನು ಸವರಿ ಪ್ರೀತಿ ತೋರಿದರು. ನಾಯಿ ಅವರ ಸಾತ್ವಿಕ ಸ್ವಭಾವಕ್ಕೆ ಮಣಿದು ಅವರ ಕೈಯನ್ನು ನೆಕ್ಕಲಾರಂಭಿಸಿತು. ತುಕಾರಾಮರ ಪ್ರೀತಿ ಮನುಷ್ಯರಿಗೆ ಮಾತ್ರ ಮೀಸಲಾಗಿ ರಲಿಲ್ಲ. ಸಕಲ ಚರಾಚರಗಳ ಮೇಲೂ ಹರಿದಿತ್ತು.

ಸಂದೇಶ :

ತುಕಾರಾಮರ ದೃಷ್ಟಿಯಲ್ಲಿ, ಹರಿಯ ಭಕ್ತನು ಹರಿಯಂತೆಯೇ ಆಗುತ್ತಾನೆ ಎಂಬ ದೃಢ ನಂಬಿಕೆ ಅಂತಹ ಭಕ್ತನು ಸುಖದುಃಖಗಳನ್ನೂ ಮಾನಾಪಮಾನಗಳನ್ನೂ ಲಾಭನಷ್ಟಗಳನ್ನೂ ಸಮಾನವಾಗಿ

ಕಾಣುವವನು. ಶಾಂತಿ, ಸಮಾಧಾನ, ಕ್ಷಮೆ, ದಯೆ, ಸತ್ಯ, ಪರೋಪಕಾರ, ನಮ್ರತೆ, ನಿರ್ವೈರ, ಪ್ರೇಮ, ಕೃಪೆ–ಇವೆಲ್ಲಾ ಭಕ್ತನಲ್ಲಿ ಮೂರ್ತೀಭವಿಸಿರುತ್ತವೆ. ಅವನ ದೃಷ್ಟಿಯಲ್ಲಿ ಸಮಾನತೆ ತುಂಬಿತ್ತು. ಭಕ್ತರೆಲ್ಲ ಒಂದೇ ಜಾತಿ. ಅವರಲ್ಲಿ ಮೇಲು ಕೀಳೆಂಬುದಿಲ್ಲ. ಭಗವಂತನ ನಾಮಸ್ಮರಣೆಗೆ ಅವರು ತುಂಬಾ ಪ್ರಾಶಸ್ತ್ಯ ವಿತ್ತಿದ್ದರು. "ಕರುನಿಯಾ ಶುದ್ಧ ಮನ ನಾರಾಯಣ ಸ್ಮರಾವ"–"ಮನಸ್ಸನ್ನು ಶುದ್ಧಗೊಳಿಸಿ ನಾರಾಯಣ ನನ್ನು ಸ್ಮರಿಸಿ" ಎಂದಿದ್ದಾರೆ. ಭಕ್ತನ ಜೀವನದಲ್ಲಿ ಮುಖ್ಯವಾದುದು ಸದಾಚಾರ ಎಂದು ಒತ್ತಿ ಹೇಳಿದ್ದಾರೆ. ಪರಪೀಡೆ, ಪರನಿಂದೆ, ಪರದಾರ, ಪರಧನ– ಈ ನಾಲ್ಕರಿಂದ ಭಕ್ತನು ದೂರವಿರಬೇಕೆಂದು ಹೇಳಿದ್ದಾರೆ. "ಹೇಚಿ ದಾನ ದೇಗಾ-ದೇವಾ, ತುಝು ವಿಸರ ನ ವ್ಹಾವ" (ಹೇ ದೇವ, ನಿನ್ನನ್ನು ಮರೆಯ ದಿರುವ ದಾನವನ್ನು ದಯಪಾಲಿಸು).

ತುಕಾರಾಮರು ಜ್ಞಾನೇಶ್ವರ ವಿರಚಿತ 'ಜ್ಞಾನೇಶ್ವರಿ', ಏಕನಾಥರ 'ಭಾಗವತಗ್ರಂಥ,' 'ಭಗವದ್ಗೀತೆ' ಗಳನ್ನು ಚೆನ್ನಾಗಿ ಅಧ್ಯಯನ ಮಾಡಿದ್ದರು.

ಭಾವಶುದ್ಧಿ ಸಾಧಕನ ಜೀವನದಲ್ಲಿ ಅತ್ಯಂತ ಮುಖ್ಯವೆನ್ನುತ್ತಾರೆ ತುಕಾರಾಮರು. ನಿಷ್ಕಪಟ ವೃತ್ತಿ, ಶುದ್ಧಚಿತ್ತಗಳ ಆಧಾರದಿಂದಲೇ ಸಾಧಕನು ಮುಂದುವರಿಯಬೇಕು. ಭಗವಂತನು ಬಾಹ್ಯವೇಷ ಗಳಿಂದ ಒಲಿಯುವವನಲ್ಲ. ಅವನು ಭಕ್ತನ ಹೃದಯ ನೈರ್ಮಲ್ಯವನ್ನು ನೋಡುತ್ತಾನೆ. ಪಾಂಡಿತ್ಯ ಜಪ, ತಪ–ಇವುಗಳಿಂದ ಭಾವಶುದ್ಧಿ ಅತ್ಯಂತ ಶ್ರೇಷ್ಠವೆಂಬುದು ತುಕಾರಾಮರ ದೃಷ್ಟಿ.

ಆತ್ಮ ಸಾಕ್ಷಾತ್ಕಾರಕ್ಕಾಗಿ ಸಂಸಾರವನ್ನು ತ್ಯಜಿಸಿ ಓಡಬೇಕಾಗಿಲ್ಲ. ಮುಖ್ಯವಾಗಿ ಯಾವ ಕೆಲಸ ಮಾಡಿದರೂ ಅದು ಭಗವಂತನಿಗೆ ಸಮರ್ಪಿತವಾಗಲೆಂದು ಮಾಡಬೇಕು. ಆಗ ಕರ್ಮದಿಂದಲೂ ಸಿದ್ಧಿ ಲಭಿಸುತ್ತದೆ. ನಿಜವಾದ ಸುಖವೆಂದರೆ ಶಾಂತಿ. ಕಾಮಕ್ರೋಧ ಪ್ರಲೋಭನೆಗಳು ಮಾನವನ ಶತ್ರುಗಳು. ಅವುಗಳನ್ನು ದೂರವಿಡಬೇಕು.

ವಾರಕರಿ ಸಂಪ್ರದಾಯದಲ್ಲಿ ತುಕಾರಾಮರು ಬೆಳೆದರೂ ಕಡೆಗೆ ಬಾಹ್ಯಾಚಾರಗಳಿಂದ ಮೇಲೆದ್ದು ಹೃದಯದ ಪಾವಿತ್ರ್ಯಕ್ಕೆ ಹೆಚ್ಚಿನ ಪ್ರಾಶಸ್ತ್ಯವಿತ್ತರು. ಮನಸ್ಸಿನ ನೈರ್ಮಲ್ಯಕ್ಕೆ ಚಿತ್ತಶುದ್ಧಿಗೆ ಅವರ ದೃಷ್ಟಿಯಲ್ಲಿ ವಿಶೇಷ ಪ್ರಾಶಸ್ತ್ಯ.

"ಮನ ಕರಾರೆ ಪ್ರಸನ್ನ
ಸರ್ವ ಸಿದ್ಧಿಚೇ ಕಾರಣ್"

ಸರ್ವಸಿದ್ಧಿಗೂ ಮನಸ್ಸೇ ಕಾರಣ. ಆದುದರಿಂದ ಮನಸ್ಸು ಪ್ರಸನ್ನವಾಗಿರಬೇಕೆಂದರು.

ತುಕಾರಾಮರ ಅಭಂಗಗಳಲ್ಲಿ ಅವರ ಸಾಧನೆಯ ಹಂತಗಳನ್ನು ಗುರುತಿಸಬಹುದು. ನಾಮ ಸ್ಮರಣೆಯಿಂದ ಭವರೋಗವಿದೂರರಾಗಬೇಕೆಂದು ಸಾರಿದ್ದಾರೆ. ಅವರ ಅಭಂಗಗಳಲ್ಲಿ ಬರುವ ವಿಚಾರ ಧಾರೆಯನ್ನು ಹೀಗೆ ಗುರುತಿಸಬಹುದು.

1. ನಾಮಸ್ಮರಣೆ ಭವರೋಗಕ್ಕೆ ಔಷಧ.
2. ಸಂಸಾರದಲ್ಲಿದ್ದರೂ ಹರಿಯನ್ನು ಮರೆಯಬಾರದು.
3. ಹರಿನಾಮಸ್ಮರಣೆ ಮಾಡುತ್ತಾ, ಸರ್ವ ಕೆಲಸಗಳನ್ನು ಮಾಡಿ.
4. ಸಂಸಾರದಲ್ಲಿ ಸುಖಕ್ಕಿಂತ ಕಷ್ಟದ ಪಾಲೇ ಹೆಚ್ಚು.
5. ಚಿತ್ತ ಶುದ್ಧಿಯಾದರೆ ಶತ್ರುವೂ ಮಿತ್ರನಾಗುತ್ತಾನೆ.
6. ಪರದ್ರವ್ಯ ಮತ್ತು ಪರನಾರಿಗೆ ಆಶಿಸಿದಾಗಲೆ ಅಧಃಪತನ.
7. ನುಡಿದಂತೆ ನಡೆಯಬೇಕು. ಆಗ ಶ್ರದ್ಧೆ ತಾನಾಗಿ ಉದಿಸುತ್ತದೆ.
8. ಎಲ್ಲಿ ದಯೆ, ಕ್ಷಮೆ, ಶಾಂತಿ ನೆಲಸಿರುತ್ತದೆಯೋ ಅಲ್ಲಿ ದೈವೀಶಕ್ತಿಯ ಆವಿರ್ಭಾವ.
9. ಎಲ್ಲ ಕಾಲದಲ್ಲಿ ಎಲ್ಲರನ್ನೂ ತೃಪ್ತಿಪಡಿಸುವುದು ಸಾಧ್ಯವಿಲ್ಲ.
10. ಪರಿಶುದ್ಧ ಮನಸ್ಸಿನಿಂದ ವಿಠ್ಠಲನನ್ನು ಧ್ಯಾನಿಸಿದರೆ, ನಾವು ಕೃತಕೃತ್ಯರಾಗುತ್ತೇವೆ.

ಇಂತಹ ಅಮೂಲ್ಯವಾದ ಭಾವನೆಗಳು ಅವರ ಅಭಂಗಗಳಲ್ಲಿ ಸುಪ್ರಕಟ. ಅವರ ಅಭಂಗಗಳು ಅವರ ಹೃದಯದಿಂದ ಹೊರಹೊಮ್ಮುವ ಅನುಭವ ತರಂಗಗಳು. ಆದುದರಿಂದಲೆ, ಅವರ ಅಭಂಗಗಳು ಮಹಾರಾಷ್ಟ್ರದ ಜನರಿಗೆ ಅತ್ಯಂತ ಪ್ರಿಯ. ಅವರ ಐವತ್ತು ಅಭಂಗಗಳ ಭಾವಾನುವಾದವನ್ನು ಮುಂದೆ ಕೊಟ್ಟಿದೆ. ಇವು ಅವರ ವಿಚಾರಧಾರೆಯನ್ನು ತಿಳಿಯಲು ಸಹಾಯಕವಾಗಿವೆ.

ಅಭಂಗವಾಣಿ

1. ಭಗವಂತ ಕೃಪಾಮಯ, ದೀನನಾದ ಭಕ್ತನೆ ಅವನಿಗೆ ಪ್ರಿಯ.
ಭಕ್ತನ ಭಾರವನ್ನು ತಾನೇ ಹೊತ್ತು, ಅವನ ಯೋಗಕ್ಷೇಮದ ಚಿಂತನೆ
ಮಾಡುತ್ತಾನೆ ಅವನು.
ಧರ್ಮಮಾರ್ಗದಲ್ಲಿ ನಂಬಿಕೆ ಮೂಡಿಸಿ, ಕೈ ಹಿಡಿದು ಮುನ್ನಡೆಸಿ
ಸುಮಾರ್ಗವನ್ನು ತೋರುತ್ತಾನೆ.
ತುಕಾರಾಮ ಹೇಳುತ್ತಾನೆ: ಭಕ್ತನು ಏಕನಿಷ್ಠ ಭಾವನೆಯುಳ್ಳವನಾಗಿರಬೇಕು.

* *

2. ಶಾಂತಿಗಿಂತ ಮಿಗಿಲಾದ ಸುಖ ಮತ್ತೊಂದಿಲ್ಲ. ಉಳಿದೆಲ್ಲವೂ ದುಃಖಕ್ಕೆ ಕಾರಣ
ಆದುದರಿಂದ ಶಾಂತಿಯನ್ನು ಪಡೆಯಿರಿ, ಅದು ಸಂಸಾರ ಸಾಗರದಿಂದ
ಪಾರು ಮಾಡುತ್ತದೆ.
ಕಾಮಕ್ರೋಧಗಳು ಮನವನ್ನು ಹೊಕ್ಕರೆ, ವ್ಯಾಧಿಗಳ ನಿವಾಸವಾಗು
ತ್ತದೆ ಶರೀರ
ತುಕಾರಾಮ ಹೇಳುತ್ತಾನೆ: ಶಾಂತಿಯಿಂದ ತ್ರಿವಿಧ ತಾಪಗಳು
ತಾವಾಗಿ ಬಿಟ್ಟು ಹೋಗುತ್ತವೆ

* *

3. ಏಕಾಂತವಾಸ, ಗಂಗಾ ಸ್ನಾನ, ಮತ್ತು ಚಿಂತನೆ;
ದೇವರ ಪೂಜೆ ಮತ್ತು ತುಳಸಿಯ ಪ್ರದಕ್ಷಿಣೆ–ಇವುಗಳಲ್ಲಿ ನಿರತರಾಗಬೇಕು
ಮುಕ್ತಾಹಾರ ವಿಹಾರವಿರಬೇಕು; ಇಂದ್ರಿಯ ನಿಯಮವಿರಬೇಕು.
ಅತಿ ನಿದ್ರೆ, ಅತಿ ಮಾತು, ಸಲ್ಲದು.
ಪರಮಾರ್ಥವೆಂಬುದೇ ಮಹಾಧನ
ಈ ಮಾರ್ಗದಿಂದಲೆ ದೇವರ ಪದತಲದಲ್ಲಿ ಸ್ಥಾನ.
ಹೇ ದೇವ, ನಿನಗೆ ನನ್ನ ದೇಹ ಸಮರ್ಪಿತ. ಎಲ್ಲ ಭಾರಗಳಿಂದ
ಮುಕ್ತಗೊಳಿಸು
ತುಕಾರಾಮ ಹೇಳುತ್ತಾನೆ: ಆಗ ಎಲ್ಲ ಆನಂದಮಯ.

* *

---

1 ತುಕಾರಾಮರ ಮರಾಠಿ ಪದಗಳ ಮೂಲಕ್ಕೆ ಕೆಳಗಿನ ಪುಸ್ತಕವನ್ನು ನೋಡಿ:
ಮ. ಗೋ. ಮೋಡಕ್. 'ಅಭಂಗವಾಣಿ'. ಪು. 3. ಕ್ರ. ಸಂಖ್ಯೆ 4.
2 ಅದೇ. ಪು. 22. ಕ್ರ. ಸಂ. 35.
3 ಅದೇ ಪು. 24 ಕ್ರ. ಸಂಖ್ಯೆ 39

4. ಸಾಕಾಗುವಷ್ಟು ಅನ್ನವಸ್ತ್ರ, ಆಶ್ರಮ ಅಥವಾ ಗುಹೆಯಂತಿರುವ
ವಾಸಸ್ಥಾನವಿದ್ದರೆ ಸಾಕು
ಬಂಧನ ರಹಿತವಾದ ಬುದ್ಧಿ, ನಾರಾಯಣನನ್ನು ನೆನೆವ ಹೃದಯ,
ಜನರ ಮಧ್ಯೆ ಹೆಚ್ಚು ಸೇರದೆ ಮಿತಭಾಷಿಯಾಗಿರುವಿಕೆ ಬುದ್ಧಿಯನ್ನು
ಸ್ವಾಧೀನದಲ್ಲಿಟ್ಟು ಕೊಂಡಿರುವ ಇಂದ್ರಿಯ ನಿಗ್ರಹ,
ತುಕಾರಾಮ ಹೇಳುತ್ತಾನೆ: ತ್ರಿಗುಣ ಬಂಧನ ರಾಹಿತ್ಯ–ಇವುಗಳಿಂದ ಕ್ಷಣ
ಕ್ಷಣದ ಉಪಯೋಗವನ್ನು ಮಾಡಿಕೊಳ್ಳಬೇಕು

* *

5. ಮನಸ್ಸು ಪ್ರಸನ್ನವಾಗಿರಲಿ, ಅದೇ ಸರ್ವಸಿದ್ಧಿಗೆ ಕಾರಣ.
ಮನಸ್ಸೇ ಮೋಕ್ಷ ಅಥವಾ ಬಂಧನ; ಸುಖ ಸಮಾಧಾನ ಇಚ್ಛೆಗಳ ನೆಲೆ ಅದೇ.
ಮೂರ್ತಿಯನ್ನು ಸ್ಥಾಪಿಸುವುದು ಮನಸ್ಸು, ಮನಸ್ಸು ಮನಸನ್ನೇ
ಪೂಜಿಸುತ್ತದೆ.
ಮನಸ್ಸೆ ಮನಸ್ಸಿನ ಇಚ್ಛೆಯನ್ನು ಪೂರೈಸುತ್ತದೆ. ಎಲ್ಲದರ ಉಗಮ
ಸ್ಥಾನ ಮನಸ್ಸು
ಮನಸ್ಸೆ ಗುರು ಮತ್ತು ಶಿಷ್ಯ; ದಾಸನೂ ಮನಸ್ಸೇ.
ತನ್ನಲ್ಲಿಯೇ ಅದು ಪ್ರಸನ್ನ, ಉದ್ಧಾರ ಅಧೋಗತಿಗಳೂ ಮನಸ್ಸೇ!
ಸಾಧಕ, ವಾಚಕ, ಪಂಡಿತ, ವಾಕ್‌ಶ್ರೋತ–ಎಲ್ಲರೂ ಕೇಳಿ;
ತುಕಾರಾಮ ಹೇಳುತ್ತಾನೆ: ಮನಸ್ಸಿಗಿಂತಲೂ ದೊಡ್ಡ ದೇವರು ಬೇರೊಬ್ಬರಿಲ್ಲ

* *

6. ಭಾವಹೀನರು ಶಿಲೆ, ಹಿತ್ತಾಳೆ ಮತ್ತು ಅಷ್ಟಧಾತುಗಳಿಂದ ಮಾಡಿದ
ಮೂರ್ತಿಯನ್ನು ಏಕೆ ಪೂಜಿಸುವರೊ?
ಮೋಕ್ಷಕ್ಕೆ ಭಾವವೇ ಸಾಧನ ಎಂದು ಎಲ್ಲರೂ ಹೇಳುತ್ತಾರೆ.
ಕ್ಷಣ ಕ್ಷಣವೂ ವಿಷಯಗಳ ಜಪಮಾಡುವವರಿಗೆ, ಜಪಮಾಲೆ ಕಂಠ
ಮಾಲೆಗಳಿಂದ ಏನು ಪ್ರಯೋಜನ?
ಅಕ್ಷರಾಭಿಮಾನಿಯಾಗಿರಲು ಆಸೆಯಿದ್ದರೆ, ಪಾಂಡಿತ್ಯ ಅಥವಾ
ಭಾಷಣಗಳಿಂದ ಉಪಯೋಗವೇನು?
ಅಂತರಂಗದಲ್ಲಿ ಮಲಿನ ಕುಬುದ್ಧಿ ಇರಲು ಕುಶಲ ಗಾಯನದಿಂದ
ಉಪಯೋಗವೇನು?
ತುಕಾರಾಮ ಹೇಳುತ್ತಾನೆ:ಭಾವವಿಲ್ಲದ ಸೇವೆಯಿಂದ ಯಾವ ದೇವರಿಗೆ ಪ್ರೀತಿ?

* *

7. ರೂಪವಿಲ್ಲ, ನಾಮವಿಲ್ಲ, ಇರಲು ಸ್ಥಳವೂ ಇಲ್ಲ.
ಹೋದಲ್ಲೆಲ್ಲ ಅವನಿದ್ದಾನೆ. ವಿಠ್ಠಲನೆ ತಾಯಿ ತಂದೆ.

---

4 ಅದೇ ಪು. 25. ಕ್ರ. ಸಂ. 40
5 ಅದೇ ಪು. 28 ಕ್ರ. ಸಂ. 46
6 ಅದೇ ಪು. 32. ಕ್ರ. ಸಂ. 52
7 ಅದೇ ಪು. 36. ಕ್ರ. ಸಂ. 60

ಚರಾಚರದಲ್ಲಿ ವ್ಯಾಪ್ತನಾಗಿರುವ ಅವನಿಗೆ ಆಕಾರ ವಿಕಾರಗಳಿಲ್ಲ.
ಅವನು ನಿರ್ಗುಣನಲ್ಲ, ಸಗುಣನಲ್ಲ, ಅವನನ್ನು ತಿಳಿದವರಾರು?
ತುಕಾರಾಮ ಹೇಳುತ್ತಾನೆ:ಭಾವವಿಲ್ಲದವನು ಅವನ ಮನಸ್ಸನ್ನು ಆಕರ್ಷಿಸಲಾರ

* *

8. ನಿತ್ಯವೂ ವಿಠ್ಠಲನನ್ನು ಭಜಿಸುವ ಪಂಡಿತನೇ ಶ್ರೇಷ್ಠ
ಎಲ್ಲವೂ ಬ್ರಹ್ಮವೆಂದು ಭಾವಿಸಿ ಸಮದೃಷ್ಟಿಯುಳ್ಳವನು ಸರ್ವರಲ್ಲಿ
ವಿಠ್ಠಲನನ್ನು ಕಾಣುತ್ತಾನೆ.
ದೇವರಿಲ್ಲದ ಸ್ಥಳವಿಲ್ಲ, ಸರ್ವ ಪ್ರಾಣಿಗಳೂ ವಾಸುದೇವನ ರೂಪ
ತುಕಾರಾಮ ಹೇಳುತ್ತಾನೆ: ಭಕ್ತನ ಸಾನ್ನಿಧ್ಯ, ಎಲ್ಲಾ ದೋಷಗಳನ್ನು ಪರಿಹರಿಸುತ್ತದೆ

* *

9. ಜಗತ್ತೆಲ್ಲ ವಿಷ್ಣುಮಯವೆಂಬುದೇ ವೈಷ್ಣವರ ಧರ್ಮ.
ಭೇದ ಭಾವವೇ ಭ್ರಮೆ, ಅದು ಅಮಂಗಳಕಾರಿ.
ಭಾಗವತ ಧರ್ಮದ ಭಕ್ತರಾದ ನೀವೆಲ್ಲರೂ ಕೇಳಿ: ಹಿತವೂ ಸತ್ಯವೂ
ಆದ ಕಾರ್ಯವನ್ನೇ ಮಾಡಿ
ಯಾರಲ್ಲೂ ಮತ್ಸರದ ಭಾವ ಬಾರದಿರಲಿ, ಇದೇ ಸರ್ವೇಶ್ವರನನ್ನು
ಪೂಜಿಸುವ ಮರ್ಮ
ತುಕಾರಾಮ ಹೇಳುತ್ತಾನೆ: ಅವಯವಗಳು ಬೇರೆಯಾದರೂ ಅದಕ್ಕಾಗುವ
ಸುಖದುಃಖಗಳು ಜೀವಕ್ಕಾಗುವ ಅನುಭವ

* *

10. ಯಾಚಕನಲ್ಲದವನೇ ಭಗವಂತನಿಗೆ ಅತ್ಯಂತ ಪ್ರಿಯ
ಅವನನ್ನೆ ಭಗವಂತನೆಂದು ಭಾವಿಸಿ, ಅವನ ಪದತಲದಲ್ಲಿ ಶರಣಾಗಿ.
ಯಾರ ಹೃದಯದಲ್ಲಿ ವಿಶ್ವಪ್ರೇಮವಿದೆಯೋ ಅವರ ಮನೆಯಲ್ಲಿರುತ್ತಾನೆ
ಚಕ್ರಪಾಣಿ
ತುಕಾರಾಮ ಹೇಳುತ್ತಾನೆ: ಅವರಿಗೆ ಸಮಾನರಾದವರಾರೂ ಇಲ್ಲ.
ಅದಕ್ಕೆ ನಾನೇ ಜಾಮೀನು.

* *

11. ದೀನ ದಲಿತರನ್ನು ಯಾರು ತನ್ನವರೆನ್ನುವರೋ
ಅವನನ್ನೆ ಸಾಧು ಎಂದು ತಿಳಿಯಿರಿ, ದೇವರ ಅಸ್ತಿತ್ವ ಅಲ್ಲಿದೆ ಎಂದು ಭಾವಿಸಿ.
ಬೆಣ್ಣೆಯ ಬಾಹ್ಯ ಮೃದು, ಹೀಗೆಯೇ ಸಜ್ಜನರ ಚಿತ್ತ!

---

8 ಅದೇ ಪು. 39 ಕ್ರ. ಸಂ. 65
9 ಅದೇ ಪು. 40 ಕ್ರ. ಸಂ. 66
10 ಅದೇ ಪು. 41. ಕ್ರ. ಸಂ. 68
11 ಅದೇ ಪು. 46 ಕ್ರ. ಸಂ. 74

ಅನಾಥರಾದವರನ್ನು, ದಾಸ ದಾಸಿಯರನ್ನು ತನ್ನವರನ್ನಾಗಿ
ಮಾಡಿಕೊಂಡು ಪುತ್ರವಾತ್ಸಲ್ಯವನ್ನು ತೋರಿಸುವವನು ಸಾಧು
ತುಕಾರಾಮ ಹೇಳುತ್ತಾನೆ: ಅವನನ್ನು ಹೇಗೆ ವರ್ಣಿಸಲಿ? ಅವನೇ
ಭಗವಂತನ ಸಾಕ್ಷಾತ್ ಮೂರ್ತಿ

* *

12. ಅಂತಃಕರಣದಲ್ಲಿ ದಯೆಯನ್ನು ತುಂಬಿಕೊಂಡಿರುವವರೇ ಈ
ಸಂಸಾರದಲ್ಲಿ ಧನ್ಯರು.
ಸೇವೆ ಮಾಡಲು ಧರೆಗಿಳಿದು ಬಂದ ವೈಕುಂಠವಾಸಿಗಳವರು
ಅವರ ವಚನದಲ್ಲಿ ಅಸತ್ಯವಿಲ್ಲ, ದೇಹದ ಪರಿವೆಯಲ್ಲಿ ಅವರು ಉದಾಸೀನರು
ತುಕಾರಾಮ ಹೇಳುತ್ತಾನೆ:ಅವರ ಬಾಯಿಯಲ್ಲಿರುವುದು ಮಧುರ
ವಾಣಿ, ಹೃದಯದಲ್ಲಿರುವುದು ಕೃಪೆ!

* *

13. ಗಂಗಾಜಲ ಅಡಿಯಿಂದ ಮುಡಿಯವರೆಗೆ ಸ್ವಚ್ಛ, ಅಮೃತದಲ್ಲಿ
ದೋಷವಿದೆಯೆ?
ರವಿ, ವಜ್ರ ಮತ್ತು ದೀಪಗಳಿಗೆ ಕತ್ತಲೆ ತಿಳಿಯದು, ತಿಮಿರವನ್ನು ನಾಶ
ಮಾಡುವ ಶಕ್ತಿ ಅವುಗಳದು.
ಕರ್ಪೂರವನ್ನು ಪುಡಿಮಾಡಿದರೆ ನುಚ್ಚಾಗಲಿ, ಹೊಟ್ಟಾಗಲಿ ಸಿಗುವುದೆ?
ಸಮುದ್ರವು ಹೋಗಿ ಸೇರಲು ಯಾವ ಪ್ರದೇಶವಿದೆ?
ಸ್ಪರ್ಶಮಣಿ ಮತ್ತು ಚಿಂತಾಮಣಿಗಳು ಇತರರ ಸ್ಪರ್ಶದಿಂದ ತಮ್ಮ
ಗುಣವನ್ನು ಬದಲಾಯಿಸುವುವೆ?
ತುಕಾರಾಮ ಹೇಳುತ್ತಾನೆ: ಹೀಗೆ ಸಜ್ಜನರು ಗಗನದಂತೆ ಸರ್ವತ್ರ ಸಂಪೂರ್ಣ.

* *

14. ವೃಕ್ಷವು ಬೀಜದಲ್ಲಿದೆ, ಬೀಜವಾದರೋ ವೃಕ್ಷದಲ್ಲಿದೆ.
ಅಂತೆಯೆ ನಮ್ಮ ನಿಮ್ಮ ಸಂಬಂಧ ಒಂದರಲ್ಲಿ ಮತ್ತೊಂದು ಸೇರಿದೆ.
ನೀರಿನ ಮೇಲೆ ತರಂಗಗಳಿವೆ, ತರಂಗಗಳು ನೀರೊಳಗಿವೆ,
ತುಕಾರಾಮ ಹೇಳುತ್ತಾನೆ:ಬಿಂಬ ಪ್ರತಿಬಿಂಬಗಳು ವಿಲೀನವಾದಾಗ
ಅವುಗಳು ಐಕ್ಯ

* *

15. ಅವತಾರಿಯಾದ ದೇವರು, ಸಂಸಾರಿಯಾದ ಭಕ್ತ, ಇಬ್ಬರ ಧ್ಯೇಯವೂ ಒಂದೇ.
ಭಗವಂತನ ಸಾನ್ನಿಧ್ಯದಲ್ಲಿ ಭಕ್ತನಿಗೆ ಆನಂದ, ಭಕ್ತನೊಡನೆ ಭಗವಂತ ಸುಖಿ

---

12 ಅದೇ ಪು. 49 ಕ್ರ. ಸಂ. 78
13 ಅದೇ ಪು. 50 ಕ್ರ. ಸಂ. 80
14 ಅದೇ ಪು. 53. ಕ್ರ. ಸಂ. 86
15 ಅದೇ ಪು. 55. ಕ್ರ. ಸಂ. 89

ಭಗವಂತ, ಭಕ್ತನಿಗೆ ರೂಪ ಆಕಾರವನ್ನು ಕೊಟ್ಟಿದ್ದಾನೆ. ಭಗವಂತನ
ಮಹಿಮಾಮಯ ವರ್ಣನೆಯಿಂದ, ಅವನಿಗೆ ರೂಪ ಆಕಾರ
ಕೊಟ್ಟಿದ್ದಾನೆ ಭಕ್ತ.
ಭಕ್ತ ಮತ್ತು ಭಗವಂತ, ಸ್ವಾಮಿ ಮತ್ತು ಸೇವಕ–ಇವರು ಒಂದೇ
ಶರೀರದ ಎರಡು ಭಾಗಗಳಂತೆ!
ತುಕಾರಾಮ ಹೇಳುತ್ತಾನೆ: ಎಲ್ಲಿ ಭೇದ ಭಾವವಿಲ್ಲವೋ ಅಲ್ಲಿ ಭಕ್ತನೇ
ಭಗವಂತ, ಭಗವಂತನೇ ಭಕ್ತ!

* *

16. ವಿಷ್ಣುದಾಸನಿಗೆ ಕಾಯಾ ವಾಚಾ ಮನಸಾ ಕಾಮಕ್ರೋಧಗಳಿಲ್ಲ.
ಭಗವಂತನಲ್ಲಿ ವಿಶ್ವಾಸವಿಡುವವನೇ ಭಗವಂತನ ಸಕಲೈಶ್ವರ್ಯಗಳ
ಅನುಭವಿ
ತುಕಾರಾಮ ಹೇಳುತ್ತಾನೆ: ಮನಸ್ಸನ್ನು ನಿರ್ಮಲವಾಗಿಡಿ, ಅದು ಭಗವಂತನ
ನೆಲೆವೀಡು.

* *

17. ಗಾನದಲ್ಲಿ ವಿಠ್ಠಲ, ಚಿತ್ತದಲ್ಲಿ ವಿಠ್ಠಲ, ಭೋಗ ವಿಶ್ರಾಂತಿಗಳಲ್ಲಿ ವಿಠ್ಠಲ,
ಕಾರ್ಯದಲ್ಲಿ ವಿಠ್ಠಲ, ಶಯನದಲ್ಲಿ ವಿಠ್ಠಲ, ಭೋಜನದ ತುತ್ತು ತುತ್ತಿಗೂ ವಿಠಲ,
ಜಾಗ್ರತಿ ಸ್ವಪ್ನ ಸುಷುಪ್ತಿಗಳಲ್ಲಿ ವಿಠ್ಠಲ, ವಿಠ್ಠಲನನ್ನು ಬಿಟ್ಟು
ಬೇರೇನೂ ಇಲ್ಲ.
ವಿಠ್ಠಲನ ಆಧಾರ ಸರ್ವ ಸೌಂದರ್ಯ ಮತ್ತು ಸರ್ವಸುಖ.
ತುಕಾರಾಮ ಹೇಳುತ್ತಾನೆ: ಈ ಅನುಭವ ಪಡೆದವರು ದ್ವಂದ್ವತೆಯನ್ನು ನೀಗಿ
ವಿಠ್ಠಲನ ಸ್ವರೂಪವೇ ಆಗುತ್ತಾರೆ.

* *

18. ಎಲ್ಲಿ ನೋಡಿದರಲ್ಲಿ ನಿನ್ನದೇ ಪಾದಸ್ಪರ್ಶ, ವಿಶ್ವವೆಲ್ಲಾ ನೀನೇ.
ಎಲ್ಲೆಲ್ಲೂ ನಿನ್ನದೇ ರೂಪ ಗುಣ ನಾಮಗಳಿರಲು ಬೇರೆ ಇರುವುದಾದರೂ ಏನು
ಸಾಷ್ಟಾಂಗ ಪ್ರಣಾಮ ಮಾಡಿದ ಈ ಪೃಥ್ವಿ ಭಗವಂತನ ಅಂಗ.
ಹೃದಯದಲ್ಲಿ ಪ್ರೇಮ ತುಂಬಿದ್ದರೆ ಪರ್ವಕಾಲಗಳೆಲ್ಲ ಸುದಿನಗಳು,
ಸುಸಮಯಗಳು.
ಕೆಲಸ ಕಾರ್ಯಗಳೆಲ್ಲದರಲ್ಲೂ ನೀನೇ ಇರುವೆ, ಸಂಸಾರ ತ್ಯಾಜ್ಯವೆನಿಸುತ್ತದೆ.
ಎಲ್ಲೂ ಹೋಗಲಾರೆ, ಏನನ್ನೂ ಮಾಡಲಾರೆ, ನಿನ್ನ ಸ್ಮರಣೆ ಮತ್ತು
ಧ್ಯಾನವೇ ಸಾಕೆನಿಸುತ್ತದೆ.
ನಾಲಿಗೆ ಹಾಡುವುದೆಲ್ಲ ನಿನ್ನದೇ ಗುಣಗಾನ, ಮಂತ್ರ, ಜಪ, ಕಥೆ
ಸ್ತುತಿಗಳೆಲ್ಲವೂ ನಿನ್ನದೇ.
ಭೋಜನ, ಫಲ, ತಾಂಬೂಲ, ಪೂಜಾ ನೈವೇದ್ಯಗಳೆಲ್ಲವೂ ನೀನೇ

---

16 ಅದೇ ಪು. 57. ಕ್ರ. ಸಂ. 93
17 ಅದೇ ಪು. 58 ಕ್ರ. ಸಂ. 96
18 ಅದೇ ಪು. 62 ಕ್ರ. ಸಂ. 102

ನಡೆಯುವುದೆಲ್ಲ ನಿನ್ನ ಪ್ರದಕ್ಷಿಣೆ, ನಿದ್ರೆಯೆಲ್ಲಾ ನಿನಗೆ ಮಾಡುವ
ದಂಡವತ್ ಪ್ರಣಾಮ
ನೋಡುವುದು ನಿನ್ನನ್ನು, ಮಾತಾಡುವುದು ನಿನ್ನನ್ನು ಎಲ್ಲೆಲ್ಲೂ
ನಿನ್ನದೇ ಮೂರ್ತಿ!
ಬಾವಿ, ನದಿ, ಕೂಪಗಳ ನೀರೆಲ್ಲ ಗಂಗಾಜಲ.
ಅರಮನೆ, ಪ್ರಾಸಾದ, ಮನೆ ಜೋಪಡಿಗಳೆಲ್ಲವೂ ದೇವಾಲಯ.
ಕಿವಿಗೆ ಕೇಳುವ ಶಬ್ದಗಳೆಲ್ಲ ಹರಿನಾಮ ಧ್ವನಿ.
ತುಕಾರಾಮ ಹೇಳುತ್ತಾನೆ: ಈ ಅನುಭವ ಪಡೆದ ವಿಠ್ಠಲನ ದಾಸರು ಸದಾ
ವಿಶ್ವಪ್ರೇಮಿಗಳು.

* *

19. ಹೇ ಭಗವಂತ, ವಿನಮ್ರನನ್ನಾಗಿ ಮಾಡು. ಇರುವೆಗೆ ಸಕ್ಕರೆಯ ಕಣ
ವಾದರೂ ಸಿಗುತ್ತದೆ.
ಐರಾವತ ರತ್ನದಂತೆ ಹಿರಿದಾದುದು, ಆದರೆ ಅದಕ್ಕೆ ಅಂಕುಶದ ಪೆಟ್ಟು
ಯಾರಲ್ಲಿ ತಾನು ದೊಡ್ಡವನೆಂಬ ಹೆಮ್ಮೆ ಇರುವುದೊ ಅವರಿಗೆ
ಕಠಿನ ಯಾತನೆ
ತುಕಾರಾಮ ಹೇಳುತ್ತಾನೆ: ಅಲ್ಪಕ್ಕಿಂತ ಅಲ್ಪನಾಗಬೇಕು!

* *

20. ತೀರ್ಥಯಾತ್ರೆಗೆ ಹೋಗಿ ಏನನ್ನು ಸಾಧಿಸಿದೆ? ಚರ್ಮವನ್ನು
ಮೇಲೆ ಮೇಲೆ ತೊಳೆದೆ.
ಅದರಿಂದ ಗೌರವವನ್ನು ಪಡೆದಿರಬಹುದು, ಆದರೆ ಅದರಿಂದ
ಅಂತಃಕರಣ ಶುದ್ಧಿಯಾಯಿತೆ?
ಬೃಂದಾವನದ ಕಹಿ ಫಲಗಳನ್ನು ಸಕ್ಕರೆಯಲ್ಲಿ ಅದ್ದಿದರೂ
ಅದರೊಳಗಿನ ಕಹಿ ಹೋಗುವುದೇ?
ತುಕಾರಾಮ ಹೇಳುತ್ತಾನೆ:ಶಾಂತಿ, ಕ್ಷಮೆ, ದಯೆಗಳನ್ನು ಗಳಿಸದೆ
ಧಾರ್ಮಿಕತೆಯ ಟೊಳ್ಳು ಅಭಿಮಾನವೇಕೆ?

* *

21 ಮನದೊಳಗೆ ಮಲಿನವಿರಲು ಬಾಹ್ಯ ಶುದ್ಧಿ ಏಕೆ?
ಅದರೊಳಗೆ ಜನ್ಮಾಂತರದ ಅಸತ್ಯದ ಕೊಳೆ ತುಂಬಿದೆ.
ಬಾಹ್ಯಾಡಂಬರವನ್ನು ಬಿಟ್ಟು ಮನ ವಚನಗಳನ್ನು ಶುದ್ಧೀಕರಿಸು.
ನಿನ್ನ ಚಿತ್ತ ಶುದ್ಧಿಯ ಸಾಕ್ಷಿ ನೀನೇ.
ಶರೀರದೊಳಗೆ ಪಾಪ ಪುಣ್ಯದ ಮೈಲಿಗೆ ತುಂಬಿಕೊಂಡಿದೆ.
ಅದನ್ನು ನಿರ್ಲಕ್ಷಿಸಿ ನಿತ್ಯ ಪವಿತ್ರವಾದ ಪೃಥ್ವಿಯ ಮೇಲೆ
ಮಡಿ ಮೈಲಿಗೆಗಾಗಿ ಏಕೆ ಚಡಪಡಿಸುತ್ತಿರುವೆ?

---

19 ಅದೇ ಪು. 67. ಕ್ರ. ಸಂ. 108.
20 ಅದೇ ಪು. 70. ಕ್ರ. ಸಂ. 113
21 ಅದೇ ಪು. 70 ಕ್ರ. ಸಂ. 114

ಕಾಮಕ್ರೋಧಗಳನ್ನು ಬಿಟ್ಟು ಪವಿತ್ರನಾಗು.
ತುಕಾರಾಮ ಹೇಳುತ್ತಾನೆ: ಈ ಮಾರ್ಗವನ್ನು ಬಿಟ್ಟು ಇತರ
ಬಾಹ್ಯಾಡಂಬರಗಳೆಲ್ಲ ವ್ಯರ್ಥ.

* *

22. ಹೇ, ಅದೃಷ್ಟಹೀನ, ಶರೀರದೊಳಗೆ ಭಗವಂತನಿರಲು ವೃಥಾ
ಹುಡುಕುವುದೆಲ್ಲಿ?
ಭಗವಂತ ಅಂತರ್ಯಾಮಿ, ತೀರ್ಥಸ್ಥಳಗಳಲ್ಲಿ ಅವನನ್ನು ಹುಡುಕುವುದು ವ್ಯರ್ಥ
ಮೃಗದ ನಾಭಿಯಲ್ಲಿಯೇ ಕಸ್ತೂರಿ ಇದೆ. ಆದರೆ ವನದಲ್ಲೆಲ್ಲಾ ಹುಡುಕುತ್ತದೆ.
ಕಬ್ಬಿನೊಳಗೆ ಸಕ್ಕರೆ ಇರುವಂತೆ, ದೇಹದಲ್ಲಿಯೇ ಭಗವಂತನಿದ್ದಾನೆ.
ಹಾಲಿನಲ್ಲಿ ಬೆಣ್ಣೆ ಇದೆ. ಅದನ್ನು ಕಡೆದಾಗಲೇ ಸಿಗುವುದು.
ತುಕಾರಾಮ ಹೇಳುತ್ತಾನೆ: ಹೇ ಮೂರ್ಖರೆ, ದೇಹದೊಳಗಿನ
ಭಗವಂತನನ್ನು ಏಕೆ ಕಾಣಲಾರಿರಿ?

* *

23. ಭಗವಂತನ ಧ್ಯಾನ ತನುಮನಗಳ ಕಾರ್ಯವನ್ನು ಪರಿವರ್ತಿಸುತ್ತದೆ.
ಆಗ ಹೇಳುವುದೇನೂ ಇಲ್ಲ. ನಾನು ನನ್ನದೆಂಬುದೆಲ್ಲ ಆಗ ಹರಿಮಯ.
ಚಿಂತನದಲ್ಲಿ ಭಗವಂತನ ಧ್ಯಾನ ನೆಲಸಿದರೆ, ಸೃಷ್ಟಿಯೆಲ್ಲ ಹರಿ
ರೂಪವಾಗಿ ಕಾಣುತ್ತದೆ.
ತುಕಾರಾಮ ಹೇಳುತ್ತಾನೆ: ವರ್ಣಿಸುವುದೇನು? ಆಗ ದೃಷ್ಟಿಯೆಲ್ಲಾ
ಹರಿಮಯವಾಗುತ್ತದೆ.

* *

24. ಗಾನದಲ್ಲಿ ಕೃಷ್ಣ, ಚಿಂತನೆಯಲ್ಲಿ ಕೃಷ್ಣ,
ಕೃಷ್ಣನ ಧ್ಯಾನದಿಂದ ಕೃಷ್ಣರೂಪವೇ ಆಗುತ್ತಾರೆ.
ಕುಳಿತಾಗ, ನಿದ್ರಿಸಿದಾಗ, ಆಹಾರ ಸೇವಿಸಿದಾಗಲೆಲ್ಲಾ ನಾರಾಯಣನೆ
ಭೋಕ್ತೃವೆಂದು ತಿಳಿಯಿರಿ.
ಬೀಸುವಾಗ ನಾರಾಯಣನ ಸಂಕೀರ್ತನೆ, ಕುಟ್ಟುವಾಗ ಮತ್ತಿತರ
ಕೆಲಸಗಳಲ್ಲಿ ಅವನದೇ ಸ್ಮರಣೆ ಇರಲಿ.
ನಾರಾಯಣನಿಗೆ ನರ, ನಾರಿ, ಕೀಳು, ಮೇಲು ಎಂಬ ಭೇದವಿಲ್ಲ.
ಅವನ ಪ್ರೀತಿಯ ಒಲವು ಭಾವನೆಗನುಗುಣ
ತುಕಾರಾಮ ಹೇಳುತ್ತಾನೆ:ಭಾವಭರಿತರಾಗಿ ಭಗವಂತನನ್ನು ಭಜಿಸಿ
ನಿಮ್ಮ ರೂಪ ಬೇರೆಯಾದರೂ ಭಾವ ಒಂದಾಗುವುದು.

* *

---

22 ಅದೇ ಪು. 80 ಕ್ರ. ಸಂ. 130
23 ಅದೇ ಪು. 56 ಕ್ರ. ಸಂ. 92
24 ಅದೇ ಪು. 58 ಕ್ರ. ಸಂ. 95

25. ಮನವೇ, ಮಾಯಾಜಾಲದಲ್ಲಿ ಬಂಧಿತನಾಗಬೇಡ, ಅಂತ್ಯ ಕಾಲವು
ನಿನ್ನನ್ನು ಸಮೀಪಿಸುತ್ತಿದೆ
ನಿನ್ನ ಮೇಲೆ ಆ ಮಾಯೆ ಎಂದು ಬಲೆ ಬೀಸುವುದೋ ಅರಿಯೆ,
ನಿನ್ನನ್ನು ಬಿಡಿಸಲು ಮಾತಾಪಿತೃಗಳು ಅಸಮರ್ಥರು
ರಾಜನಾಗಲಿ, ಅಧಿಕಾರಿಯಾಗಲಿ, ನಿನ್ನ ಬಂಧು ಬಾಂಧವರೇ ಆಗಲಿ
ಅದರಿಂದ ನಿನ್ನನ್ನು ಬಿಡಿಸಲಾರರು.
ತುಕಾರಾಮ ಹೇಳುತ್ತಾನೆ: ಭಗವಂತನೊಬ್ಬನಲ್ಲದೆ ಬೇರೆ ಯಾರೂ
ನಿನ್ನನ್ನು ಬಂಧನದಿಂದ ಬಿಡಿಸಲಾರರು.

* *

26. ಧನವಂತನಿಗೆ ಜಗತ್ತಿನಲ್ಲಿ ಅತ್ಯಂತ ಗೌರವ
ತಾಯಿ, ತಂದೆ, ಬಂಧು ಜನರೆಲ್ಲರೂ ಅವನ ಮಾತನ್ನು ಗೌರವಿಸುತ್ತಾರೆ.
ಉದ್ಯೋಗ ಚೆನ್ನಾಗಿ ನಡೆಯುತ್ತಿದ್ದರೆ ತಂಗಿ ಸಹೋದರನನ್ನು
ಅಣ್ಣನೆಂದು ಕರೆಯುವಳು
ಶೃಂಗಾರ ಸಾಧನೆಗಳಿಂದ ಕೂಡಿದ ಪತ್ನಿಯೂ ಪತಿಯನ್ನು ಗೌರವಿಸುತ್ತಾಳೆ
ತುಕಾರಾಮ ಹೇಳುತ್ತಾನೆ:ಭಾಗ್ಯವಿರುವುದು ಧನದಿಂದ, ಆದರೆ
ಅದು ಅಶಾಶ್ವತವೆಂದು ತಿಳಿ

* *

27. ನಾಮಸ್ಮರಣೆಗೆ ಬೇರೆ ಕಾಲ ಬೇಡ, ಸರ್ವಕಾಲವೂ ನಾಮಸ್ಮರಣೆಗೆ ಯುಕ್ತ
ಸದಾ ಭಗವಂತನನ್ನು ಸ್ತುತಿಸುವ ವದನವೇ ಮಂಗಲಕಾರಿ
ಸರ್ವೋತ್ತಮನಿಗೆ ಬೇಕಾದುದು ಭಾವವೊಂದೇ, ಉಳಿದುವೆಲ್ಲ ವ್ಯರ್ಥ.
ತುಕಾರಾಮ ಹೇಳುತ್ತಾನೆ: ಜಗತ್ತಿನ ಜನರೆಲ್ಲರಿಗೂ ಇದೊಂದೇ
ನನ್ನ ಉಪದೇಶ

* *

28. ಉತ್ತಮ ವ್ಯವಹಾರದಿಂದ ಧನ ಸಂಗ್ರಹಿಸಿ,
ಉತ್ತಮ ವಿಚಾರ ಹಾಗೂ ಶ್ರೇಷ್ಠ ರೀತಿಯಲ್ಲಿ ಅದರ ಸದುಪಯೋಗ
ಮಾಡುವವನೇ
ಸುಕೃತ ಪದವಿಯನ್ನೂ, ಪವಿತ್ರ ಜನ್ಮವನ್ನೂ ಪಡೆಯುತ್ತಾನೆ.
ಪರನಿಂದೆ ಮಾಡದೆ, ಪರೋಪಕಾರ ಮಾಡುವವನೂ
ಪರಸ್ತ್ರೀಯನ್ನು ತಾಯಿ ಹಾಗೂ ಸಹೋದರಿಯಂತೆ ಕಾಣುವವನೂ
ಪಶುಪಕ್ಷಿ ಹಾಗೂ ಎಲ್ಲರಲ್ಲಿ ದಯಾಪರನೂ
ನಿರ್ಜನದಲ್ಲಿ ಬಾಯಾರಿದವರಿಗೆ ಜಲವನ್ನು ಕೊಡುವವನೂ

---

25 ಅದೇ ಪು. 90 ಕ್ರ.ಸಂ. 148
26 ಅದೇ ಪು. 91 ಕ್ರ. ಸಂ. 149
27 ಅದೇ ಪು. 93. ಕ್ರ. ಸಂ. 151
28 ಅದೇ ಪು. 95. ಕ್ರ. ಸಂ. 156.

ಶಾಂತ ಚಿತ್ತನೂ, ಪರರಿಗೆ ಕೇಡನ್ನು ಬಯಸದವನೂ
ವಂಶಕ್ಕೆ ಕೀರ್ತಿ ಗೌರವವನ್ನುಂಟು ಮಾಡುವವನೂ
ಚತುರ್ವಿಧ ಆಶ್ರಮವನ್ನು ಸಾಫಲ್ಯ ಗೊಳಿಸಿ, ವೈರಾಗ್ಯದಿಂದ
ಪರಮಪದವನ್ನು ಹೊಂದುತ್ತಾನೆ–ಎಂದು ಹೇಳುತ್ತಾನೆ ತುಕಾರಾಮ.

* *

29. ಆಸೆಯನ್ನು ಬುಡದಿಂದ ನಿರ್ಮೂಲ ಮಾಡಿದ
ಬಳಿಕ ವಿರಕ್ತ ಸಂನ್ಯಾಸಿಯಾಗಬೇಕು.
ಅದು ಸಾಧ್ಯವಾಗದಿದ್ದರೆ ಸಂಸಾರದಲ್ಲಿ ಸುಖವನ್ನು ಪಡೆಯಬೇಕು.
ಬೇರೆ ರೀತಿಯ ಡಂಭಾಚಾರ ಬೇಡ
ಆಸೆಗಳನ್ನು ಗೆದ್ದು ಜಯಗಳಿಸಿದ ಬಳಿಕ,
ಸಂಸಾರದಿಂದ ನಿರ್ಲಿಪ್ತನಾಗಬೇಕು.
ತುಕಾರಾಮ ಹೇಳುತ್ತಾನೆ: ಯೋಗಮಾರ್ಗದಲ್ಲಿ ಇಚ್ಛೆ ತೀವ್ರವಾಗಿದ್ದರೆ
ಆಸೆಯ ಬೀಜವನ್ನು ಮೊದಲು ಕಿತ್ತು ತೆಗೆಯಬೇಕು

* *

30. ಮಾನವರೆ, ಜಿಪ್ವೆಯೊಳಗೆ ಅನುಚಿತವಾಣಿ, ಮನದೊಳಗೆ ದುಷ್ಟ
ಬುದ್ಧಿ ಬಾರದಂತೆ,
ಭಗವಂತನಲ್ಲಿ ಅನುಕಂಪೆಯಿಂದ ಪ್ರಾರ್ಥಿಸಿ.
ಕಾಮಕ್ರೋಧಾದಿಗಳು ಮನಸ್ಸನ್ನು ಹೊಗದಂತೆ ನಿರಂತರ ಭಜಿಸಿ.
ತುಕಾರಾಮ ಹೇಳುತ್ತಾನೆ: ವಿನೋದಕ್ಕಾಗಿ ಅನ್ಯ ಹವ್ಯಾಸಗಳು ಬೇಡ.

* *

31. ಸದಾ ಮನದಲ್ಲಿ ಕುಟಿಲತೆಯ ಚಿಂತನೆ ಮಾಡುವವನಿಗೆ
ಕೊರಳಲ್ಲಿ ರುದ್ರಾಕ್ಷಿ ಮಾಲೆ ಏಕೆ?
ಧರ್ಮ, ದಯೆ, ಕ್ಷಮೆ, ಶಾಂತಿ ಇಲ್ಲದವನಿಗೆ ಭಸ್ಮ ಲೇಪನವೇಕೆ?
ಭಕ್ತಿಯ ಮಹಿಮೆಯನ್ನು ಅರಿಯದವನಿಗೆ ಬ್ರಹ್ಮಜ್ಞಾನದ ಉಪದೇಶವೇಕೆ?
ಮನಸ್ಸನ್ನು ಸ್ಥಿರವಾಗಿಡದವನು ಸಂಸಾರದಿಂದ ವಿಮುಖನಾಗಬಾರದು.
ತುಕಾರಾಮ ಹೇಳುತ್ತಾನೆ: ಹರಿಭಕ್ತಿಯನ್ನರಿಯದವನಿಗೆ ಕಾವಿಬಟ್ಟೆ ಏಕೆ?

* *

32. ಆಹಾರ ಸಿಗದಿದ್ದರೂ. ಸಂತಾನ ವೃದ್ಧಿಯಾಗದಿದ್ದರೂ ಭಗವಂತನ
ಕೃಪೆ ಮಾತ್ರವಿರಲಿ
ನನಗೆ ಹಾಗೂ ಇತರರಿಗೆ ಇದೇ ನನ್ನ ಉಪದೇಶ

---

29 ಅದೇ ಪು. 98. ಕ್ರ. ಸಂ. 160.
30 ಅದೇ ಪು. 99 ಕ್ರ. ಸಂ. 161
31 ಅದೇ ಪು. 100 ಕ್ರ. ಸಂ. 163
32 ಅದೇ ಪು. 103 ಕ್ರ. ಸಂ. 168

ಶರೀರ ನಶಿಸಬಹುದು, ವಿಪತ್ತುಗಳು ಬರಬಹುದು, ಆದರೆ
ಹೃದಯದಲ್ಲಿ ಮಾತ್ರ ಭಗವಂತನು ನೆಲಸಿರಲಿ
ತುಕಾರಾಮ ಹೇಳುತ್ತಾನೆ: ಸಕಲವೂ ನಶಿಸುತ್ತವೆ;
ಆದುದರಿಂದ ಗೋಪಾಲನನ್ನು ಭಜಿಸುವುದೊಂದೇ ಹಿತದ ಸಾಧನೆ.

* *

33. ನಿನ್ನ ಸಂಚಿತ ಕರ್ಮಗಳಿಗನುಸಾರವಾಗಿ ದೇಹಕ್ಕೆ ದಂಡನೆ.
ಹೇ ನಾರಾಯಣ ನಿನ್ನನ್ನು ದೂರುವಂತಿಲ್ಲ.
ಕಹಿ ಬೀಜವನ್ನು ಬಿತ್ತಿ ಅಮೃತ ಫಲವನ್ನು ಹೇಗೆ ಯಾಚಿಸುವುದು?
ಹತ್ತಿಯ ಗಿಡದೊಳಗೆ ಬಾಳೆಹಣ್ಣುಗಳು ಸಿಗುತ್ತವೆಯೆ?
ಸುಖ ಮತ್ತು ಭೋಗಗಳು ಶರೀರಕ್ಕೆ!
ಸತ್ಯವಾದ ಜ್ಞಾನ ಸಾಧನೆಯನ್ನು ಮಾತ್ರ ಬಿಡಬಾರದು.
ತುಕಾರಾಮ ಹೇಳುತ್ತಾನೆ: ಭಗವಂತನಲ್ಲಿ ಕೋಪಗೊಂಡರೆ
ಉಪಯೋಗವೇನು?
ಮನಸ್ಸಿನಿಂದ ಮಾಡುವ ಕಾರ್ಯಗಳನ್ನು ಪರೀಕ್ಷಿಸಿ ನೋಡು!

* *

34. ನಾವು ಬೇಡಿದುದನ್ನು ಕೊಡಲು ಭಗವಂತ ಕೈಚಾಚಿ ನಿಂತಿದ್ದಾನೆ.
ತಂದೆ, ತಾಯಿ, ಸರ್ವಜ್ಞ ಹಾಗೂ ಉದಾರನಾದ ಭಗವಂತ
ನಮಗೆ ಯುಕ್ತವಾದುದನ್ನು ನೀಡುತ್ತಾನೆ
ನಮ್ಮ ಪಾಲಿಗೆ ಸಿಕ್ಕಿದುದನ್ನು ಸ್ವೀಕರಿಸಿ ಸಂತೃಪ್ತರಾಗಬೇಕು.
ಬೀಜದಂತೆ ಫಲ, ಬದನೇ ಗಿಡದೊಳಗೆ ಬಾಳೆ ಬರುವುದೇ?
ತುಕಾರಾಮ ಹೇಳುತ್ತಾನೆ: ನಿನಗೆ ನೀನೇ ಶತ್ರು ಮತ್ತು ಮಿತ್ರ.
ಭಗವಂತನನ್ನು ದೂಷಿಸಿ ಫಲವಿಲ್ಲ.

* *

35. ಭಗವಂತ ಕೊಟ್ಟಿರುವುದರಲ್ಲಿ ತೃಪ್ತನಾಗು. ಪ್ರಯತ್ನ ಮಾಡಿದರೆ
ಯಾವುದು ತಾನೆ ಫಲಿಸದು?
ಕೃಪಾಸಿಂಧುವಾದ ಭಗವಂತ, ಭಕ್ತನನ್ನು ಉಪೇಕ್ಷಿಸುವುದಿಲ್ಲ.
ಅಂತಃಕರಣದ ವ್ಯಥೆಯನ್ನು ಅವನು ಅರಿಯ ಬಲ್ಲ.
ಕಂದನಿಗೆ ಬೇಕಾದುದನ್ನು ತಾಯಿ ತಿಳಿದಿರುತ್ತಾಳೆ.
ಹೇಳಿಸಿಕೊಳ್ಳದೆ, ಶ್ರಮಕೊಡದೆ ಕಂದನ ಯೋಗಕ್ಷೇಮವನ್ನು
ಅವಳು ನೋಡಿಕೊಳ್ಳುತ್ತಾಳೆ.
ತುಕಾರಾಮ ಹೇಳುತ್ತಾನೆ: ಇವೆಲ್ಲ ನನ್ನ ಅನುಭವದ ನುಡಿ. ಇದಕ್ಕೆ
ವಿರೋಧವಾದುದನ್ನು ನಾನು ಅರಿಯೆ.

* *

---

33 ಅದೇ ಪು. 103 ಕ್ರ. ಸಂ. 169.
34 ಅದೇ ಪು. 104. ಕ್ರ. ಸಂ. 170
35 ಅದೇ ಪು. 107 ಕ್ರ. ಸಂ. 176.

36. ಪರಿಭಕ್ತನಿಗೆ ಭಯ ಚಿಂತೆಗಳಿಲ್ಲ, ನಾರಾಯಣನೇ ಅವನ ದುಃಖ ನಿವಾರಕ.
ಸಂಸಾರದ ಉದ್ವೇಗಗಳ ಭಯಬೇಡ. ಭಗವಂತನೆ ಕಠಿಣ ಪ್ರಸಂಗಗಳ ನಿವಾರಕ,
ಸರ್ವಕಾಲದಲ್ಲೂ ಧೈರ್ಯ ಸಮಾಧಾನವಿರಬೇಕು. ಭಗವಂತ ನಮ್ಮ ಬಳಿಯೇ ಇದ್ದಾನೆ.
ತುಕಾರಾಮ ಹೇಳುತ್ತಾನೆ; ನನ್ನ ಭಗವಂತ ಪಾಂಡುರಂಗ, ಅವನೇ ವಿಶ್ವದಲ್ಲೆಲ್ಲಾ ವ್ಯಾಪಿಸಿದ್ದಾನೆ.

* *

37. ನೀನು ಮಾತೃವಿನಂತೆ ವಾತ್ಸಲ್ಯಪೂರ್ಣ, ಚಂದ್ರನಿಗಿಂತಲೂ ಶೀತಲ,
ಜಲಕ್ಕಿಂತಲೂ ಸ್ವಚ್ಛ, ಪ್ರೇಮ ಸಿಂಧು;
ಹೇ ಪುರುಷೋತ್ತಮ, ಯಾವ ಉಪಮೆಯನ್ನು ನಿನಗೆ ಕೊಡಲಿ?
ನಿನ್ನ ನಾಮಕ್ಕೆ ಸಮನಾದುದು ಬೇರೊಂದಿಲ್ಲ.
ಅಮೃತವನ್ನು ಸೃಷ್ಟಿಸಿದ ನೀನು ಅದಕ್ಕಿಂತಲೂ ಸಿಹಿ.
ಪಂಚ ತತ್ತ್ವಗಳ ಜನಕ ನೀನು, ಸಕಲ ಸರ್ವಾಧಿಕಾರಿ ನೀನು.
ಹೆಚ್ಚು ಹೇಳಲಾರೆ, ನಿನ್ನ ಪದದಡಿಯಲ್ಲಿ ನನ್ನ ನಮನ.
ತುಕಾರಾಮ ಹೇಳುತ್ತಾನೆ: ಹೇ ಪಂಡರಿನಾಥ, ನನ್ನ ಅಪರಾಧವನ್ನು ಕ್ಷಮಿಸು.

* *

38. ನಿನ್ನನ್ನು ಚಿಕ್ಕ ಪಾತ್ರೆಯಲ್ಲಿಟ್ಟು ಪೂಜಿಸುತ್ತೇವೆ,
ಆದರೆ ಹದಿನಾಲ್ಕು ಬ್ರಹ್ಮಾಂಡಗಳು ನಿನ್ನಲ್ಲಿವೆ.
ಆಡಂಬರಗಳಿಂದ ನಿನ್ನ ಆರಾಧನೆ ಮಾಡುತ್ತೇವೆ,
ಆದರೆ ನಿನಗೆ ರೂಪರೇಖೆಗಳಿಲ್ಲ.
ನಿನಗಾಗಿ ಹಾಡುಗಳನ್ನು ಹಾಡುತ್ತೇವೆ, ಆದರೆ ನೀನು ಶಬ್ದಾತೀತ!
ನಿನಗಾಗಿ ಕೊರಳಲ್ಲಿ ಜಪಮಾಲೆ ಧರಿಸುತ್ತೇವೆ; ಆದರೆ ನೀನು ಕರ್ಮಾತೀತ.
ತುಕಾರಾಮ ಹೇಳುತ್ತಾನೆ: ಹೇ ದೇವ, ಸಗುಣರೂಪವನ್ನು ತಾಳಿ, ನಮ್ಮ ಹಿತಚಿಂತನೆ ಮಾಡು.

* *

39. ಹೇ ಕೃಪಾಸಿಂಧು, ನಮ್ಮಲ್ಲಿ ಕೋಪಬೇಡ. ವಕ್ರೋಕ್ತಿಗಳಿಂದ ಪೀಡಿಸಿದರೂ ಕಡೆಗೆ ನಿನ್ನನ್ನೆ ಸ್ತುತಿಸುತ್ತೇವೆ.
ನಿನ್ನನ್ನು ನಾವು ಹೇಗೆ ಅರಿಯಬಲ್ಲೆವು? ನಿನ್ನ ಸೇವೆಯನ್ನು ಹೇಗೆ ಮಾಡುವೆವು?
ಅನಂತ, ಅರೂಪ, ಅಲಕ್ಷ, ಅಚ್ಯುತ, ನಿರ್ಗುಣ, ಸಚ್ಚಿದಾನಂದ,

---

36 ಅದೇ ಪು. 110 ಕ್ರ. ಸಂ. 181
37 ಅದೇ ಪು. 113. ಕ್ರ. ಸಂ. 187.
38 ಅದೇ ಪು. 114. ಕ್ರ. ಸಂ. 188
39 ಅದೇ ಪು. 117. ಕ್ರ. ಸಂ. 192.

ಸರ್ವೋತ್ತಮ, ಎಂಬ ನಾಮಗಳಿದ್ದರೂ ಭಕ್ತರಿಗಾಗಿ ವಾಮನ
ರೂಪವನ್ನು ತಾಳಿದೆ.
ತುಕಾರಾಮ ಹೇಳುತ್ತಾನೆ: ಹೇ ಭಗವಂತ, ನಿನ್ನ ಚರಣಗಳ ಮೇಲೆ ಸದಾ ನನ್ನ
ಮಸ್ತಕವಿರಲಿ.

* *

40. ನೀನು ನನ್ನ ಬಂಧು, ಸಜ್ಜನ ಸಂಗಾತಿ, ನಮ್ಮಿಬ್ಬರ ಪ್ರೀತಿ ಸದಾ ಇರಲಿ.
ನೀನು ನನ್ನ ಜೀವದ ಜೀವ, ಪ್ರೇಮ ಸಖಿ, ಅಂತರಂಗದ ಹೃದಯವೇ ನೀನು!
ನೀನು ನನ್ನ ಬಂಧು ಬಾಂಧವ, ಮಿತ್ರ; ಏಕೆ ನನ್ನ ಜೀವವೇ ನೀನು.
ನಿನ್ನ ಪದದಡಿಯಲ್ಲಿ ನಾನು ಅನನ್ಯ ಶರಣ.
ತುಕಾರಾಮ ಹೇಳುತ್ತಾನೆ: ನಾನು ನಿನ್ನ ದಾಸ. ನಿನ್ನ ಸತತ ಧ್ಯಾನವೇ
ನನಗೆ ಅತ್ಯಂತ ಪ್ರಿಯ!

* *

41. ನನ್ನನ್ನೇ ಹೇಗೆ ವರ್ಣಿಸಲಿ? ನಾನಾದರೋ ಅವಗುಣಿ, ಅನ್ಯಾಯಿ.
ವಿಠ್ಠಲನ ಪದದಡಿಯಲ್ಲಿ ನನಗೆ ಸ್ಥಾನವನ್ನು ಕೃಪೆಗೈ.
ಈ ಸಂಸಾರ ಸಾಕು. ಸಂಚಿತ ಕರ್ಮ, ಬಹು ಬಲಯುತ ಕಠಿಣ.
ಅದು ಒಂದು ಕಡೆ ನಿಶ್ಚಲವಾಗಿ, ಸ್ಥಿರವಾಗಿಸದು.
ಬುದ್ಧಿಗೆ ಅನಂತ ತರಂಗಗಳು, ಕ್ಷಣಕ್ಷಣವೂ ಅದರ ಬಣ್ಣ ಬದಲಾಯಿಸುತ್ತದೆ.
ಸ್ನೇಹ ಮಾಡಿದರೆ, ಕಡೆಗೆ ಅದೇ ಬಂಧನವಾಗುತ್ತದೆ.
ತುಕಾರಾಮ ಹೇಳುತ್ತಾನೆ: ಶ್ರೀ ಪಂಢರಿನಾಥ, ಮನಸ್ಸಿನ ಚಿಂತೆಯನ್ನು
ಹೋಗಲಾಡಿಸಿ. ನನ್ನ ಹೃದಯದಲ್ಲಿ ವಾಸಿಸು.

* *

42. ನಾನು ಕ್ರಿಯಾ ಮತಿಹೀನ. ನಿನ್ನಲ್ಲಿ ದೀನ ನಾನು
ಹೇ ಭಗವಂತ, ನನ್ನನ್ನು ರಕ್ಷಿಸು, ನನ್ನ ಮನಃಕ್ಲೇಶವನ್ನು ಹರಿಸು.
ನನ್ನ ಗುಣದೋಷಗಳನ್ನು ನೋಡಿ, ನನ್ನನ್ನು ತ್ಯಜಿಸಬೇಡ
ತುಕಾರಾಮ ಹೇಳುತ್ತಾನೆ: ನನ್ನ ಅನಂತ ಅಪರಾಧಗಳನ್ನು ಕ್ಷಮಿಸಿ ರಕ್ಷಿಸು.

* *

43. ಹೃದಯದಲ್ಲಿ ಭಗವಂತನ ವಾಸವಿರುವವನ ಸತ್ಸಂಗ ಲಭಿಸಲಿ
ಮನಸ್ಸಿನ ಈ ಬಯಕೆಯನ್ನು ಪೂರ್ಣವಾಗಿಸು, ಭಗವಂತ.
ಹರಿಚಿಂತನೆಯಲ್ಲಿರುವವರ ಸಹವಾಸದಲ್ಲಿ ಭಂಗಬಾರದಿರಲಿ.
ತುಕಾರಾಮ ಹೇಳುತ್ತಾನೆ: ಸತ್ಸಂಗದಿಂದ ಮನುಷ್ಯನ ಜನ್ಮ ಸುಕೃತ.

* *

---

40 ಅದೇ ಪು. 117 ಕ್ರ. ಸಂ. 193.
41 ಅದೇ ಪು. 126 ಕ್ರ. ಸಂ. 208 .
42 ಅದೇ ಪು. 127 ಕ್ರ. ಸಂ. 209
43 ಅದೇ ಪು. 130 ಕ್ರ. ಸಂ. 215

44. ಕಣ್ಣುಗಳು ಪಾಪಕರ್ಮಗಳನ್ನು ನೋಡದಿರಲಿ. ಅದಕ್ಕಿಂತಲೂ ಕುರುಡು ಲೇಸು.
ಕಿವಿಗಳು ನಿಂದೆಯನ್ನು ಕೇಳದಿರಲಿ. ಅದಕ್ಕೆ ಬದಲಾಗಿ ಭಗವಂತನು
ಕಿವುಡನನ್ನಾಗಿ ಮಾಡಲಿ.
ವದನದಲ್ಲಿ ಅಪವಿತ್ರವಾಣಿ ಬಾರದಿರಲಿ, ಅದಕ್ಕೆ ಬದಲು
ಮೂಕನಾಗುವುದು ಲೇಸು.
ಪರಸ್ತ್ರೀಸಂಗ ಎಂದೂ ಬೇಡ. ಅದಕ್ಕೆ ಬದಲು ಆಯುಷ್ಯ
ಮುಗಿಯುವುದು ಲೇಸು.
ತುಕಾರಾಮ ಹೇಳುತ್ತಾನೆ: ನಾನು ಸರ್ವವನ್ನೂ ತ್ಯಜಿಸಿರುವೆ
ನೀನೊಬ್ಬನೇ ನನಗೆ ಪ್ರಿಯ.

* *

45. ನಾನು ಅನಾಥ, ಅಪರಾಧಿ, ಕರ್ಮಹೀನ, ಮಂದಮತಿಯವ.
ಹೇ ಕೃಪಾಸಿಂಧು, ಮಾತಾಪಿತೃ ಸ್ವರೂಪನೆ, ನಿನ್ನನ್ನು ನಾನು
ಎಂದೂ ಸ್ಮರಿಸಲಿಲ್ಲ.
ಗೀತೆಗಳನ್ನು ಹಾಡಲಿಲ್ಲ. ಕೇಳಲಿಲ್ಲ. ಲಜ್ಜೆಯಿಂದ ಅಹಿತವನ್ನೆಸಗಿದೆ.
ಪುರಾಣಕಥೆ ನನಗೆ ರುಚಿಸಲಿಲ್ಲ. ಸತ್ಸಂಗ ಮಾಡಲಿಲ್ಲ. ಪರನಿಂದೆಯನ್ನು
ಮಾಡಿದೆ.
ಪರೋಪಕಾರವನ್ನು ಮಾಡಲಿಲ್ಲ, ಮಾಡಿಸಲಿಲ್ಲ. ಪರಪೀಡೆಯಲ್ಲಿ
ತೊಡಗಿದೆ, ನಾನು ದಯೆ ತೋರಲಿಲ್ಲ.
ಮಾಡಬಾರದ ಕೆಲಸ ಮಾಡಿದೆ. ಕುಟುಂಬದ ಸಂರಕ್ಷಣೆಯಲ್ಲಿ ಮಾತ್ರ
ನಿರತನಾದೆ.
ತೀರ್ಥಯಾತ್ರೆ ಮಾಡಲಿಲ್ಲ. ನನ್ನನ್ನು ಮಾತ್ರ ನಾನು ಪೋಷಿಸಿದೆ.
ದಾನ ಹಾಗೂ ಸಂತರಸೇವೆ ಮಾಡಲಿಲ್ಲ. ಮೂರ್ತಿಪೂಜೆಯನ್ನಾಗಲಿ,
ದರ್ಶನವನ್ನಾಗಲಿ ಮಾಡಲಿಲ್ಲ.
ಅನ್ಯಾಯ, ಕುಸಂಗತಿಯನ್ನು ಮಾಡಿದೆ. ಅನೇಕ ಅಧರ್ಮಗಳನ್ನು
ಮಾಡಿರುವೆ.
ಹಿತ ಯಾವುದೆಂದು ಅರಿಯೆ. ಹಿತ ಯಾವುದೆಂದು ಹೇಳಲಾರೆ.
ನನಗೆ ನಾನೇ ಶತ್ರು. ನನಗೆ ನಾನೇ ಘಾತಕ.
ತುಕಾರಾಮ ಹೇಳುತ್ತಾನೆ: ನೀನು ಕೃಪಾಸಾಗರ. ಭವ ಸಮುದ್ರದಿಂದ
ನನ್ನನ್ನು ಪಾರು ಮಾಡು.

* *

46. ಸರ್ವರಲ್ಲೂ ಪರಬ್ರಹ್ಮವನ್ನು ಕಾಣುವ ಆ ಭಾಗ್ಯ ಎಂದು ಬರುವುದು?
ಆ ಸುಖಕ್ಕೆ ಆದಿ ಅಂತ್ಯವಿಲ್ಲ. ಆನಂದ ಸಾಗರದಂತೆ ಉಕ್ಕಿ ಬರುವುದು.
ಶಾಂತಿ, ಕ್ಷಮಾ ದಯಾ ಮೂರ್ತಿಯಾಗಿ, ಕಾಮಕ್ರೋಧಾದಿಗಳಿಂದ
ಎಂದು ವಿಮುಖನಾಗುವೆ?

---

44 ಅದೇ ಪು. 131. ಕ್ರ. ಸಂ. 217.
45 ಅದೇ ಪು. 133 ಕ್ರ. ಸಂ. 221.
46 ಅದೇ ಪು. 144. ಕ್ರ. ಸಂ. 238.

ವಿವೇಕ ವೈರಾಗ್ಯಗಳೊಡಗೂಡಿ ಜ್ವಲಂತ ಅಗ್ನಿಯಂತೆ ಎಂದು
ಪವಿತ್ರನಾಗುವೆ?
ಅಲಂಕಾರಕ್ಕೆ ಮಕುಟವಿರುವಂತೆ ನವವಿಧ ಭಕ್ತಿಯಿಂದೊಡಗೂಡಿದ ಭಾವ
ಶುದ್ಧಿ ಎಂದಾಗುವುದು?
ತುಕಾರಾಮ ಹೇಳುತ್ತಾನೆ: ನನ್ನ ಅಭೀಪ್ಸೆಗಳನ್ನು ನಾರಾಯಣನಲ್ಲದೆ
ಮತ್ತಾರು ಈಡೇರಿಸುವರು?

* *

47. ಹೆಜ್ಜೆ ಹೆಜ್ಜೆಗೂ ಸರ್ವವ್ಯಾಪಿಯಾದ ನಿನ್ನ ನೆನಪು. ದ್ವಂದ್ವತೆಯ ಭಾವ
ಬಾರದಿರಲಿ.
ಎಲ್ಲಿ ನೋಡಿದರಲ್ಲಿ ನಿನ್ನದೇ ಪದಚಿಹ್ನೆ ತ್ರಿಭುವನವೆಲ್ಲಾ ವಿಠ್ಠಲನ ರೂಪ.
ಭೇದಭಾವ ಮತ್ತು ಭ್ರಮೆಯೊಡನೆ ಸಂವಾದಕ್ಕೆ ಅವಕಾಶ ಬೇಡ.
ತುಕಾರಾಮ ಹೇಳುತ್ತಾನೆ: ನೀನಲ್ಲದೆ ಅಣುವಿಲ್ಲ, ನೀನು ಆಕಾಶಕ್ಕಿಂತ
ಮಹಿಮಾನ್ವಿತ.

* *

48. ಕಾಮಕ್ರೋಧವೆಂಬ ಪರ್ವತ ಅಡ್ಡ ಬರಲು ಭಗವಂತ ಆಚೆಯೇ ಉಳಿದ.
ದಾಟಲಾರೆ, ದಾರಿಕಾಣದು, ವೈರಿಯನ್ನು ಗೆಲ್ಲುವುದೂ ಕಷ್ಟ.
ಭಗವಂತ ನನ್ನ ಸಖನಾಗುವುದೆಂತು? ವಿಠ್ಠಲ ನನ್ನಿಂದ ಏಕೆ ದೂರಸರಿದೆ?
ತುಕಾರಾಮ ಹೇಳುತ್ತಾನೆ: ಬಹು ಅಮೂಲ್ಯವಾದ ಶರೀರ ವ್ಯರ್ಥ
ವಾಯಿತೆಂದು ಅರಿವಾಯಿತು.

* *

49. ಇತರರ ಗುಣ ದೋಷಗಳನ್ನೇಕೆ ನೋಡಲಿ? ಅವರಿಗಿಂತ ನನ್ನದೇನು
ಕಡಿಮೆಯೆ?
ಇತರರ ಪಾಪ ಪುಣ್ಯಗಳ ಗೊಡವೆಯೇಕೆ? ನನ್ನದೇನು ಕಡಿಮೆಯೆ?
ಇತರರ ದುಷ್ಟತನವನ್ನೇಕೆ ವರ್ಣಿಸಲಿ? ಅವರಿಗಿಂತ ಹೆಚ್ಚು ನನ್ನದು.
ದುಷ್ಟ ಚರಿತ್ರನೂ, ದುಷ್ಟನೂ ನನಗಿಂತ ಬೇರೆ ಯಾರಿದ್ದಾರೆ?
ಅಂತಹನನ್ನು ಈ ಕಣ್ಣುಗಳಿಂದ ನೋಡಲಾರೆ
ತುಕಾರಾಮ ಹೇಳುತ್ತಾನೆ: ಪಂಢರಿನಾಥ, ದುಷ್ಟತನದ ಭಂಡಾರ ನಾನು,
ನಿನ್ನ ಮುಂದೆ ಎಲ್ಲವನ್ನೂ ಬಹಿರಂಗ ಪಡಿಸಿದ್ದೇನೆ.

* *

---

47 ಅದೇ ಪು. 145. ಕ್ರ. ಸಂ. 239.
48 ಅದೇ ಪು. 147. ಕ್ರ. ಸಂ. 243
49 ಅದೇ. ಪು. 148. ಕ್ರ. ಸಂ. 244

50. ನುಡಿದಂತೆ ನಡೆಯುವವರ ಪಾದಕ್ಕೆ ಪ್ರಣಾಮಗಳು.
ಅವರ ಅಂಗಳವನ್ನು ಗುಡಿಸುವೆ. ಅವರ ದಾಸನಾಗುವೆ.
ಅವರ ಕಿಂಕರನಾಗುವೆ. ಅವರ ಸೇವೆಗೆ ಬದ್ಧ ಕಂಕಣನಾಗುವೆ
ತುಕಾರಾಮ ಹೇಳುತ್ತಾನೆ: ಭಗವಂತನ ಚರಣದಲ್ಲಿ ನನ್ನ ಭಕ್ತಿ ಚಿರವಾಗಲಿ.

* *

---

50 ಅದೇ ಪು. 153. ಕ್ರ. ಸಂ. 253

ಜಯತೀರ್ಥ ರಾಜಪುರೋಹಿತ

ಜಯವೇಂಕಟಾಚಾರ್ಯ ಕವಿ

"ಘಟಿಕಾಯಾಂ ಶತಶ್ಲೋಕ ನಿರ್ಮಾತಾ ಜಯವೇಂಕಟಃ"

ಒಂದು ಗಳಿಗೆಯಲ್ಲಿ ನೂರು ಶ್ಲೋಕ ರಚಿಸಬಲ್ಲ ಹೆಗ್ಗಳಿಕೆ ಈ ಕವಿಯದು. ಬಹುಹಿಂದೆ ಪ್ರಕಟವಾದ 'ಕನಕಗಿರಿಯ ಚರಿತ್ರೆ' (ಜಯತೀರ್ಥ ರಾಜಪುರೋಹಿತರಿಂದ–1953) ಎಂಬ ಕಿರುಹೊತ್ತಿಗೆಯಲ್ಲಿ ಸಂಗ್ರಹಿಸಲಾದ ಈ ಕವಿಯ ಬಗೆಗಿನ ಕೆಲವು ವಿವರಗಳನ್ನೂ ಆತನು ರಚಿಸಿದ ಭಟ್ಟಂಗಿ, ದಂಡಕಗಳನ್ನೂ ಬಿಟ್ಟರೆ ಇತರ ರಚನೆಯ ವಿವರಗಳು ದೊರೆತಿಲ್ಲ. ಕನ್ನಡದಲ್ಲಿ ಭಟ್ಟಂಗಿ ಮತ್ತು ದಂಡಕಗಳ ರಚನೆ ವಿರಳ. ಆ ಕಾರಣ ಈ ಕವಿ ಗಮನಾರ್ಹ.

ಈ ಕವಿಯ ಕಾಲ ಹದಿನೇಳನೆಯ ಶತಕದ ಕೊನೆಯ ಭಾಗ ಮತ್ತು ಹದಿನೆಂಟನೆಯ ಶತಕದ ಆದಿ ಭಾಗದ ನಡುವಣ ವರ್ಷಗಳೆಂದು ತೋರುತ್ತದೆ. ಕನಕ ಗಿರಿಯಲ್ಲಿ ರಂಗಪ್ಪನಾಯಕನ ಆಳಿಕೆ ಮತ್ತು ಆತನಿತ್ತ ಆಶ್ರಯದ ವಿಚಾರವಾಗಿ ಕವಿ ತನ್ನ ಕೃತಿಗಳಲ್ಲಿ ಹೇಳಿಕೊಳ್ಳುತ್ತಾನೆ. ಈ ರಂಗಪ್ಪ ನಾಯಕ ಕ್ರಿ. ಶ. 1727ಕ್ಕಿಂತ ಮುಂಚೆ ಇದ್ದುದಾಗಿ ಸುರಪುರದ ಇತಿಹಾಸದಿಂದ ತಿಳಿದು ಬರುತ್ತದೆ.

ಕನಕಗಿರಿ ಗುಜ್ಜಲ ವಂಶದ ನಾಯಕರ ರಾಜಧಾನಿ ಆಗಿತ್ತು. ಈಗ ರಾಯಚೂರು ಜಿಲ್ಲೆಯ ಗಂಗಾವತಿ ತಾಲೂಕಿನಲ್ಲಿ ಇದೆ. ಅಶೋಕ ಸಾಮ್ರಾಟನ ಚಟುವಟಿಕೆಯ ದಕ್ಷಿಣ ಭಾರತದ ಕೇಂದ್ರ ವಾಗಿದ್ದ ಸ್ವರ್ಣಗಿರಿ ಇದೇ ಎಂಬ ಊಹೆಯೂ ಇದೆ. ಅಶೋಕನ ಶಾಸನದ ಮಸ್ಕಿ ಇಲ್ಲಿಗೆ ಹತ್ತಿರ ವಿರುವುದೂ ಮತ್ತು ಬೌದ್ಧನಾದ ಕನಕಮುನಿಯ ತಪಸ್ಸಿನ ಸ್ಥಾನವೇ ಈ ಊರೆಂಬ ಐತಿಹ್ಯವಿರುವದೂ ಈ ಊಹೆಗೆ ಸಮರ್ಥಕವಾದರೂ ಆ ದಿಶೆಯಲ್ಲಿ ಇನ್ನೂ ಸಂಶೋಧನೆಗೆ ಅವಕಾಶವಿದೆ. "(ಕನಕ ಮುನಿ ಕರಕಮಲ ಪೂಜಿತಾಂಘ್ರಿ)"—ಜಗನ್ನಾಥದಾಸರ ಪದ. "ಕನಕ ಮುನೀಶ್ವರ ತಪವಮಾಡಿದ"–ವಿಜಯ ದಾಸರ ಸುಳಾದಿ.

ಕನಕಗಿರಿಯ ಮಾಂಡಲಿಕ ನಾಯಕರು ಮೊದಲು ವಿಜಯ ನಗರದ ನರಪತಿಗಳ ಅಧೀನರಾಗಿಯೂ ಅನಂತರ ಬಿಜಾಪುರ, ಹೈದರಾಬಾದು ಬಾದಷಹರ ಅಧೀನರಾಗಿಯೂ ಬಾಳಿದ ಇತಿಹಾಸವಿದೆ. ಈ ನಾಯಕರು ಕಟ್ಟಿಸಿದ ವಿಜಯನಗರದ ಶಿಲ್ಪ ಮಾದರಿಯ ಭವ್ಯವಾದ ಲಕ್ಷ್ಮೀನರಸಿಂಹ ದೇವಾಲಯವೂ, ಜಲಕ್ರೀಡಾಗೃಹವೂ, ಅನೇಕಾನೇಕ ದೇವಾಲಯಗಳೂ ಇಂದಿಗೂ ಕನಕಗಿರಿಯಲ್ಲಿ ಇವೆ. ಕೃಷ್ಣದೇವರಾಯ, ಅಚ್ಯುತರಾಯರು ಈ ದೇವರಿಗೆ ದತ್ತಿ ಗ್ರಾಮಗಳನ್ನು ಬಿಟ್ಟಿದ್ದರು.

ಇಂಥ ರಾಜಾಶ್ರಯದಲ್ಲಿ ಒಳ್ಳೆಯ ಅಗ್ರಹಾರ ಬೆಳೆದು ಸಾಹಿತ್ಯ ರಚನೆಗೆ ಉತ್ತೇಜನ ಸಿಕ್ಕುವುದರಲ್ಲಿ ಆಶ್ಚರ್ಯವಿಲ್ಲ.

"ಪಂಚಾಶ್ಯಯುತ ಕಲ್ಯಾಣ ಪೀಠಮಧ್ಯೇ ಸ್ಥಿತಸ್ಯ ವೈ।
ಶ್ರೀಮತ್ ಸ್ವರ್ಣಗಿರೀಶಸ್ಯ ನಾರಸಿಂಹಸ್ಯ ಶಾಸನಂ"॥

ಇದು ಕನಕಾಚಲ ದೇವಾಲಯದಲ್ಲಿರುವ ಶಾಸನದ ಮಂಗಳಶ್ಲೋಕ.

1ರಾಜಾ ರಂಗಪ್ಪ ನಾಯಕನ ಕಾಲದಲ್ಲಿ ಕನಕಗಿರಿ ಹೆಚ್ಚು ಸಮೃದ್ಧವಾಗಿ ಇದ್ದಂತೆ ಕಾಣುತ್ತದೆ.

"ಶ್ರೀಮದ್ ರಂಗ ಮಹೀಪಾಲ ರಾಜಧಾನೀ ಸುಖಾವಹಾ"

ಎನ್ನುತ್ತಾರೆ ಜಯವೆಂಕಟಾಚಾರ್ಯ.

ಜಯ ವೆಂಕಟಾಚಾರ್ಯನ ತಂದೆ ಮತ್ತು ಗುರು ಶ್ರೀನಿಧಿ ಆಚಾರ್ಯ. ಕನಕಗಿರಿಯಲ್ಲಿ ಮುಖ್ಯ ದೇವಾಲಯದ ಉತ್ತರ ಪಾರ್ಶ್ವದಲ್ಲಿ ಅವರ ಮನೆ. ಬಾಲ್ಯದಲ್ಲಿ ಚಂಚಲ ಸ್ವಭಾವದ ಉಡಾಳ ಹುಡುಗನಾಗಿದ್ದನಂತೆ, ಜಯವೆಂಕಟಾಚಾರ್ಯ. ತಂದೆಯ ಮೂದಲಿಕೆಯಿಂದ ನೊಂದು ಈಗ ಕನಕಾಚಲ ದೇವಸ್ಥಾನದ ಪಕ್ಕದಲ್ಲಿ ಇರುವ ಸಂಜೀವ ಮುಖ್ಯಪ್ರಾಣನ ಭವ್ಯಮೂರ್ತಿಯ ಹಿಂದುಗಡೆ ಅಡಗಿ ಕುಳಿತನೆಂದೂ, ಒಂದು ವಾರ ಏಕಾಗ್ರತೆಯಿಂದ ಕಳೆಯುವದರೊಳಗಾಗಿ ಪ್ರಾಣದೇವರೇ ಇವನ ನಾಲಗೆಯ ಮೇಲೆ ಬೀಜಾಕ್ಷರ ಬರೆದ ಕಾರಣ ಜಯವೇಂಕಟನು ಮಹಾವಿದ್ವಾಂಸನಾಗಿಯೇ ಹೊರಬಂದನೆಂದೂ, ಆ ಭಾಗದಲ್ಲಿ ಜನಜನಿತ ಕಥೆ.

ಅದೇನೇ ಇದ್ದರೂ ಜಯವೆಂಕಟಾಚಾರ್ಯ ಸಂಸ್ಕೃತ ಮತ್ತು ಕನ್ನಡದಲ್ಲಿ ಸಮರ್ಥ ವಿದ್ವಾಂಸನಿದ್ದನೆಂಬುದರಲ್ಲಿ ಸಂಶಯವಿಲ್ಲ. ಈತನ ವಂಶದ ಮೂಲ ಪುರುಷರಿಗೂ ರಾಜಾಶ್ರಯವಿತ್ತು. ಈತನೂ ಸುಮಾರು 2400 ರೂಪಾಯಿ ವರಮಾನದ ಅರಳಿಹಳ್ಳಿ ಮತ್ತು ನರಸಾಪುರ ಎಂಬ ಹಳ್ಳಿಗಳ ಜಹಗೀರನ್ನು ಪಡೆದಿದ್ದನು. ಗಂಗಾವತಿಯಲ್ಲಿ ಈಗಲೂ ಇರುವ ಈತನ ವಂಶದವರು ಮೊನ್ನೆ ಮೊನ್ನೆಯವರೆಗೆ ಈ ಜಾಗೀರಿಯನ್ನು ಅನುಭವಿಸುತ್ತಿದ್ದರು.

ಜಯ ವೇಂಕಟಾಚಾರ್ಯ ಒಂದು ರೀತಿಯಲ್ಲಿ ವೀರ ವೈಷ್ಣವನೇ ಆಗಿರಬೇಕು. ಅದ್ವೈತ ಸನ್ಯಾಸಿಯೊಬ್ಬನೊಂದಿಗೆ ವಾದ ಮಾಡಹೋಗಿ ತಾಳ್ಮೆ ತಪ್ಪಿ ಕೈಗೆ ಕೈ ಹತ್ತಿದಾಗ ಈತ ಮುಸ್ಲಿಂ ನ್ಯಾಯಾಧೀಶನೆದುರಿಗೆ ಹೋಗಿ ನಿಲ್ಲ ಬೇಕಾಯಿತು. ಆಚಾರ್ಯ ಸಮಯಸ್ಫೂರ್ತಿಯಿಂದ ದ್ವೈತ ಮತ್ತು ಇಸ್ಲಾಂ ಮತಗಳ ಸಮನ್ವಯ ಸಾರಿ ಬಿಟ್ಟ, ಈ ಕೆಳಗಿನಂತೆ:

"ಅಲ್ಲಾ–ದೇವೊ, ದೇವಪೂಜಾ–ನಮಾಜಾ
ಕಾಜೀ–ವಿದ್ವಾನ್, ಪಂಡಿತಃ ತತ್ರ–ಮುಲ್ಲಃ॥
ಪುರಾಣಃ–ಕುಶಾನಃ, ಕಿತಾಬಂ ಚ–ಶಾಸ್ತ್ರಂ
ಭಾಷಾಭೇದೋ, ನೈವ ಶಾಸ್ತ್ರೇಷು ಭೇದಃ॥

ಜಯ ವೇಂಕಟಾಚಾರ್ಯ ರಚಿಸಿದ ಕೆಲವು ಭಟ್ಟಂಗಿಗಳಲ್ಲಿ ಆತನ ಜೀವನದ ವಿವರ ಸಿಕ್ಕರೆ, ಇನ್ನು ಕೆಲವೆಡೆಯಲ್ಲಿ ಉತ್ತಮ ಕಾವ್ಯಗುಣ ಮತ್ತು ತನ್ನ ನಂಬಿಕೆಯ ದೇವರ ಸುಂದರ ವರ್ಣನೆಗಳನ್ನು ಕಾಣಬಹುದು.

ಜಯ ವೇಂಕಟಾಚಾರ್ಯ ಸಾಕಷ್ಟು ದೇಶಾಟನ ಮಾಡಿದ್ದಂತೆ ಕಾಣುತ್ತದೆ.

ಒಂದು ಭಟ್ಟಂಗಿಯಲ್ಲಿ

"ನೋಡಿದೆ ದಿವ್ಯದೇಶದೊಳ್ ವಿಚಿತ್ರ ತೀರ್ಥಕ್ಷೇತ್ರಗಳ।
ಮಾಡಿದೆ ಸ್ನಾನ ಪಾನ ಮೊದಲಾದ ಕರ್ಮಗಳ॥
ಈಡುಗಾಣೆ ನಿನ್ನಯ ಪಾದತೀರ್ಥಕೆ ಲೋಕವಂದ್ಯನೇ।
ಪಾಡುವೆ ತ್ರಿಭುವನವಂದ್ಯ ಸರಸೀರುಹಚಂದ್ರ, ಕನಕಾದ್ರಿಪ ರಂಗ
ದಯಾಪಯೋನಿಧೇ॥

---

1 ಆಪರಾಳ ತಮ್ಮಣ್ಣ ರಚಿಸಿದ "ಕೃಷ್ಣಪಾರಿಜಾತ" ದಲ್ಲಿಯೂ ಈ ರಂಗಪ್ಪನಾಯಕ, ನರಸಿಂಹದೇವರ ಉತ್ಸವಗಳ ವರ್ಣನೆ ಬರುತ್ತದೆ. (ಆರ್. ಜಿ. ಕುಲಕರ್ಣಿ–ಸಂಪಾದಿತ–ಕನ್ನಡ ಅಧ್ಯಯನ ಸಂಸ್ಥೆಯ ಪ್ರಕಟಣೆ)

ಬಾಲ್ಯದಲ್ಲಿ ಆಚಾರ್ಯ ರಸಿಕ ಜೀವನಕ್ಕೆ ಮಾರುಹೋಗಿರಬೇಕು.

"ಬಾಲ್ಯದಿ ಮೂಢನಾಗಿ ಬಹಳಾಟದಿ ನಿನ್ನಯ ನಾಮಕೀರ್ತನಾ।
ಹೇಳಲ ಮಾಡಿಬಿಟ್ಟೆ ಮದಗರ್ವದಿ ಯೂನನಾಗಿ ನಾ॥
ಬಾಲೆಯರಂಗಸಂಗ ಬಲವತ್ತರ ದುಃಖವೆ ಸೌಖ್ಯವೆಂದು।
ಲೋಲನಾಗಿ ಮೆರೆದೆ ವೃದ್ಧಭಾವದೋಳ್ ಪಾಲಕನ ಚಿಂತಿಸಿ ಕಾಲ
ಕಳೆವೆ ಕಾಯೊ। ಕನಕಾದ್ರಿಪ ರಂಗ......

ಈ ವಂಶದ ಹಿರಿಯರಿಗೆ ಕೃಷ್ಣದೇವರಾಯ ಜಾಗೀರು ಕೊಟ್ಟ ವಿವರ

"ಹಿಂದಕೆ ಕೃಷ್ಣರಾಯ ಧರಣೀಪತಿ ಹಿರೇರ ಪಾದಕೆ।
ವಂದಿಸಿ ತಾಮ್ರ ಶಾಸನವ ಲೇಖಿಸಿ ಕೊಟ್ಟ ಹಳ್ಳಿಯಾ।

ಎಂಬುದರಿಂದ ತಿಳಿಯುತ್ತದೆ.

ಇವರನ್ನಾರೋ ನಿಂದಿಸಿರಬೇಕು. ಒಂದು ಭಟ್ಟಂಗಿಯಲ್ಲಿ

".........ಕುಹಕೋಕ್ತಿಯಿಂದವಮಾನ ಮಾಡುವ।
ಮಂದಿಯ ಹಲ್ಲು ಕೀಳು ಕನಕಾದ್ರಿಪ ರಂಗ ದಯಾಪಯೋನಿಧೇ॥

ಎನ್ನುತ್ತಾರೆ. ಇನ್ನೊಂದರಲ್ಲಿ ರಾಜಾಶ್ರಯದ ಕೋರಿಕೆ ಇದೆ.

"ಮುಪ್ಪಿನ ಕಾಲದೋಳ್ ಪರದೇಶಕೆ ಪೋಗಿ ಮಹಾಮದಾಂಧರಾ।
ಗಿಪ್ಪ ನರನಾಥರ ಯಾಚಿಸಲಾರೆನೈ॥
ತಪ್ಪದೆ ಅನ್ನ ವಸ್ತ್ರವ ಕೊಟ್ಟು ಸಾಕುವಂತೆ ರಂ।
ಗಪ್ಪಗೆ ಹೇಳಿ ಸಲಹೊ ತಂದೆ–ಕನಕಾದ್ರಿಪ ರಂಗ...॥

ಈ ಕವಿಯ ಕಾಲದಲ್ಲಿಯೇ ಸಂಸ್ಥಾನದ ಮೇಲೆ ದಾಳಿಯಾಗಿರಬೇಕು.

"ನುಡಿವೆ ನಿನಗೊಂದು ಮಾತು ಜಗದೀಶ್ವರ ಕೋಪವ ಮಾಡಲು ಬೇಡ ನೀ।
ಗುಡಿಯೊಳಗಿಹುದಿಲ್ಲ....................
ಪೊಡವಿಪ ರಂಗ ಬಾರೋ। ನಮ್ಮೊಡೆಯನ ಪಾಲಿಸಯ್ಯ......".

ಎನ್ನುತ್ತಾನೆ.

ಈ ಕವಿಯ ಕೊನೆಯ ದಿನಗಳಲ್ಲಿ ಸಂಸ್ಥಾನಕ್ಕೆ ದುಸ್ಥಿತಿ ಬಂದು ಇವನಿಗೆ ಆಶ್ರಯದ ಸಮೃದ್ಧಿ ಕಡಿಮೆಯಾಗಿರಬಹುದು.

"......ದುಃಖತತಿಯೆಲ್ಲವಂ ಪೇಳಲಿದಾರ ಮುಂದೆ ಯ।
ನ್ನಡದವರಿಲ್ಲ ತಂದೆ ಬಹು ಧರ್ಮದಿ ರಾಜ್ಯವಾಳುತಿಪ್ಪ ಸ।
ತ್ಪೊಡವಿಪರಲ್ಲದೆ ದೇಶದ ಅಧಿಕಾರಕೆ ಬಂದವರೆಲ್ಲರು
ಬಡತನವರಿವರೈ...ಕನಕಾದ್ರಿಪ ರಂಗ...

ಲಕ್ಷ್ಮೀದೇವಿಯನ್ನು ಸ್ತುತಿಸುವಾಗ ಈ ಕವಿಯ ಕಾವ್ಯಲಹರಿಯನ್ನು ಗುರುತಿಸಬಹುದು.

"ಮದನನು ಮತ್ತೆ ತನ್ನ ಜೈಭೇರಿಯ ಹೊಯ್ಸು ತಾ।
ಕದನದಿ ಮೂರು ಲೋಕವ ಗೆದ್ದ ಮೇಲೆ ಫಲವಿ॥

ಲ್ಲದ ಭೇರಿಯ ಡಬ್ಬು ಹಾಕಿ ತನ್ನ ಹಸನದಿ ತೋರ್ಪ
ಕುಚಕುಂಭಗಳೋಳ್ ಸಮಸ್ತ ಸೌಂದರೀ ಅಮಿತಗುಣಾಭಿರಾಮೆ...
ಕನಕಾದ್ರಿಪ ರಂಗನ ಪಟ್ಟದೊಲ್ಲಭೇ॥

"ಅಂಬೇ ದಯಾಕದಂಬೇ ನೆರೆನಂಬಿದೆ ನಿನ್ನ ಪದಾಂಬುಜದ್ವಯಾ।
ಲಂಬನವುಳ್ಳ ಭಕ್ತರಿಗಭೀಷ್ಟಗಳೀವ ಕೃಪಾ ಪಯೋನಿಧಿಯಂತ
ಕೇಳಿ ಹಿಗ್ಗಿ ಬಹು ಬಿನ್ನಹ ಮಾಡುವೆ ಪಾಲಿಸನ್ನರಾ।
ಹಂಬಲ ಪುಟ್ಟದಂತೆ ಮಾಡು ಕನಕಾಚಲರಂಗನ ಪಟ್ಟದೊಲ್ಲಭೇ॥

ಕವಿ ಪಡೆದ ದರ್ಶನ ಈ ಭಟ್ಟಂಗಿಯಲ್ಲಿದೆ.

ಮೇರೂ ಪೀಠವಾಗಿ, ಇನಚಂದ್ರರು ತಾವು ಸೂರ್ಯಪಾನಗಳಾಗಿ।
ತಾರಕೆಗಳು ದಿವ್ಯಪುಷ್ಪಗಳಾಗಿ, ಧ್ರುವಮಂಡಳವು ದೀಪ್ತ ಕಿರೀಟವಾಗಿ॥
ಧಾರುಣಿಯು ರಾಣಿಯಾಗಿ, ಶ್ರೀ ದೇವಿಯು ಭೂಷಣವಾಗಿ।
ಪಾರ್ವತಿಯು ದಿವಾಣಕಾಯ್ದು ವಿಭವ ರಕ್ಷಿಸೋ...ವೇಂಕಟಶೈಲ ವಲ್ಲಭೋ

ಭಟ್ಟಂಗಿಗಳಲ್ಲಿ ಜಯ ವೇಂಕಟಾಚಾರ್ಯರ ವ್ಯಕ್ತಿ ಜೀವನ ಮತ್ತು ಸಮಕಾಲೀನ ವಿಚಾರಗಳ ಸೂಚನೆ ದೊರೆತರೆ ಅವರು ರಚಿಸಿದ ದಂಡಕಗಳಲ್ಲಿ ಆಚಾರ್ಯರ ತತ್ವನಿಷ್ಠೆಯ ಹುಮ್ಮಸ್ಸು, ಕೃತಿ ನಿರ್ಮಾಣ ಕಾರ್ಯದಲ್ಲಿ ಅವರಿಗಿರುವ ಲವಲವಿಕೆ ಮತ್ತು ಭಾಷೆಯ ಬಳಕೆಯಲ್ಲಿ ಅವರಿಗಿದ್ದ ಸಾಮರ್ಥ್ಯಗಳು ಎದ್ದು ಕಾಣುತ್ತವೆ. ದಂಡಕದ ಪ್ರಾರಂಭ ಎಷ್ಟು ಮನೋಜ್ಞವಾಗಿದೆ ನೋಡಿ. ಮಹಾಕಾವ್ಯದ ಪ್ರಾರಂಭದ ಝಳುಕು ಕಾಣುತ್ತದೆ.

"ಶುಭ ಗುಣಮಯ ವಿಗ್ರಹೋಲ್ಲಾಸ। ಲಕ್ಷ್ಮೀಮನೋನಾಥ। ನಾಭೀಸರೋಜಾತ। ಜಾತಾಂಡ ಮಧ್ಯೋಲ್ಲ। ಸದ್ದೇಶ ಕರ್ನಾಟ ವೆಂಬಲ್ಲಿ ಬಲ್ಲಂಥಾ। ಪೊಂಪಾ ಸರೋವಾಮ। ಷಟ್ಕ್ರೋಶ ದೂರ್ದಲ್ಲಿ। ಸರ್ವರ್ ನೆರೇಗೊಂಡು। ಮೆರೆವಂಥ ಹೇಮಾದ್ರಿ। ಎಂಬೋ ಪೆಸರ್ನಿಂದ। ವಿಖ್ಯಾತಮಾದಂಥ। ಭೂಪಟ್ಟಣಂ...

(ಇದು ಅವರು ಕಂಡ ಕನಕಗಿರಿ)

"ಸರ್ವಸಾಮ್ರಾಜ್ಯದಿಂದಾಳಿ ಬಾಳ್ವಂಥ ಶ್ರೀಮನ್ಮಹಾನಾಯಕಾಚಾರ್ಯ। ನಾಯಕ ಶಿರೋರತ್ನ। ಗುಜ್ಜಲ ಮಹಾವಂಶ। ವಾರಾನಿಧೀ ಚಂದ್ರ। ದೀ ಸಾಂದ್ರ ರಂಗಾಖ್ಯ। ಭೂಮೀಂದ್ರನಂ ಪೊಂದಿ। ವಿಖ್ಯಾತ ಪಾಂಡಿತ್ಯ। ಧಿರೋನ್ನತ ಶ್ರೀನಿಧಿ ಶ್ರೀನಿಧಿ ಶ್ರೀನಿಧೀ।...ಎಂಬೋ ಗುರ್ವಂಘ್ರಿ। ಪಂಕೇರುಹ ದ್ವಂದ್ವ।ಮಂ ಧ್ಯಾನಿಸುತ್ತಿರ್ದ ಹತ್ತಾರು ಸಂಸ್ಥಾನಗಳ್ನೆಲ್ಲ। ಪಾಂಡಿತ್ಯದಿಂ ಜೈಸಿ। ಸಿದ್ಧಾರ್ಥನಾದಂಥ। ಅನ್ವರ್ಥ ಜೈವೇಂಕ।ಟಾಚಾರ್ಯನೆಂಬೋ। ಪೆಸರ್ ಪೆತ್ತ ವಾದೀಭ।ಪಂಚಾನನಂ...'

ಎಂದೆಲ್ಲ ತಮ್ಮ ವಿವರ ಹೇಳಿಕೊಳ್ಳುತ್ತಾರೆ ಜಯವೇಂಕಟರು.

ಮಧ್ವಾಚಾರ್ಯರ ಇನ್ನೆರಡು ಅವತಾರಗಳೆನಿಸಿದ ಹನುಮ ಭೀಮರ ಸಂಕ್ಷಿಪ್ತ ಜೀವನ ವಿವರಗಳೊಂದಿಗೆ ಮಧ್ವ ಮತವಿಚಾರವನ್ನು ದಂಡಕಗಳಲ್ಲಿ ಹೇಳುತ್ತ ಹೋದಂತೆ ಸನ್ನಿವೇಶಕ್ಕೆ ತಕ್ಕಂತೆ ಶೈಲಿಯ ಮಾರ್ಪಾಡನ್ನು ಗುರುತಿಸಬಹುದು. ಉದಾಹರಣೆಗೆ ಭೀಮಾವತಾರದ ಈ ಭಾಗವನ್ನು ನೋಡಬಹುದು.

"......ಸಂಗ್ರಾಮದೊಳ್ ಮತ್ತೆ। ವೀರಾಧಿವೀರರ್ನೆ। ಬೇರೊರಸಿ ಕತ್ತರಿಸಿ। ದುಷ್ಟಂ ಜರಾಸಂಧ।ನೆಂಬೋ ಮಹಾದುಷ್ಟ। ನಾರಾಯಣದ್ವೇಷಿ। ಮೂರ್ಧನ್ಯನಂ ಕೊಂದು। ಯುದ್ಧಾಶ್ವಮೇಧಾಖ್ಯ ಯಜ್ಞಾಂಗವಂ ಮಾಡಿ। ಅಲ್ಲಿಂದ ಸೌಗಂಧಿ।

ಕೋದ್ಯಾನದೊಳ್ ಬಂದ। ಮಾತಂಗ ಮಣಿಮಂತ ದೈತ್ಯೇಯರನ್ನೆಲ್ಲ। ಘಟ್ಟೆಂದು ಕುಟ್ಟ್ಯಾಕಿ। ಸಂಪತ್ಸಮೃದ್ಧಂ। ಪ್ರಜಾಸೌಖ್ಯದಿಂದಾಗ। ಇರಲಾಗ......

ಮಧ್ವಾವತಾರದ ವರ್ಣನೆಯಲ್ಲಿ ತತ್ವ ನಿಷ್ಠೆ ವ್ಯಕ್ತವಾಗಿದೆ.

"...ಜಯ ಶ್ರೀಮದಾನಂದ ತೀರ್ಥಾರ್ಯ। ಪುಂಸಿಂಹ ಶಹಾಬಾಸ್। ಸಂತೋಷ ಮೇಲ್।ಚೆನ್ನಾಯಿ ಚೆನ್ನಾಯಿ ಚೆನ್ನಾಯಿತೋ ಕೀರ್ತಿ। ಹೇ ದುಷ್ಟ ದುರ್ವಾದಿ। ಗೋಮಾಯಿಗಳ್ನೀವು। ಸಿಂದ್ರೋದು ಎಂಥಾದು। ಕೂಗಾಟಮಾಡ್ಸಲ್ಲ। ಓಡಾಟ ಆಗ್ದೆಲ್ಲ।...ಶುದ್ಧಾಗಮೋದ್ವಾಸ। ಸಿದ್ಧಾಂತಮಂ ಸೇರಿ। ಬದುಕೋದು ಒಳ್ಳೇದು। ಜನ್ಮವ್ಯಥಾ ಕೆಡಿಸಿ। ಕೊಂಡ್ಹೋಗಬ್ಯಾಡ್ರೆಂದು। ಸುಡಿದದ್ನು ತಮ್‌ತಮ್ಮ। ಮನದೋಳೊ ಡಂಬಟ್ಟು। ತಮ್‌ತಮ್ಮ ದುಶ್ಯಾಸ್ತ್ರ। ಮಾರ್ಗಂಗಳಂ ಬಿಟ್ಟು......

ಹೀಗೆ ನಿರರ್ಗಳವಾಗಿ ಸಾಗುತ್ತದೆ ಈ ಕವಿಯ ಶೈಲಿ.ಈಕವಿ ಸಂಸ್ಕೃತ ಗ್ರಂಥಗಳನ್ನೂ ರಚಿಸಿರುವನೆಂಬ ಪ್ರತೀತಿ ಇದೆ. ಆದರೆ ಒಂದೆರಡು ಅವರವೆಂದು ಹೇಳಲಾಗುವ ಶ್ಲೋಕಗಳ ಹೊರತು ಯಾವ ಗ್ರಂಥವೂ ಇದುವರೆಗೆ ದೊರೆತಿಲ್ಲ. ಈಗ ಕೇವಲ 28 ಭಟ್ಟಂಗಿಗಳೂ ಮತ್ತು ಒಂದು ದಂಡಕ ಮಾತ್ರ ಸಿಕ್ಕಿದೆ.

ಕನಕಗಿರಿಯ ಶ್ರೀ ಜಯವೇಂಕಟಾಚಾರ್ಯರು ರಚಿಸಿದ ಭಟ್ಟಂಗಿಗಳು

ಪ್ರಾಣದೇವರ ಕುರಿತು

1. ರಾವಣ ಕುಂಭಕರ್ಣ ಮೊದಲಾಗಿಹರೆಲ್ಲ ನುಗ್ಗು ಮಾಡಿ ಆ।
ದೇವಿಗೆ ಚೂಡರತ್ನ ತೋರ್ದ ಸಮರ್ಥ ಭಾಪುರೇ ಸಂ।
ಜೀವನವ ಕಾಯ್ದು ತಂದ ನಮ್ಮ ಕನಕಾದ್ರಿ ಪರಮಪದಾಜ್ಜ ಸೇವಕಾ॥

2. ಜಗದೊಳು ಹಿಂದಕಿದ್ದ ರಘುರಾಮನು ಸಾಂಪ್ರತ ನೋಡಲು ಭೂಮಿಗೆ।
ಮಿಗಿಲಾದ ದೇವ ಕನಕಾದ್ರಿಪನೊರ್ವನ ಬಿಟ್ಟು ಅನ್ಯ ಸೇವೆಯು ತ॥
ನ್ನಗೆಯೇಕೆ ಬೇಕು ಬಹುಸೌಖ್ಯವು ತೋರಲೆಂದು ತನ್ನ ಕೈ।
ಮುಗಿದಿಹ ವಾಯುಪುತ್ರ ಕನಕಾದ್ರಿಪ ರಮಪದಾಬ್ಜ ಸೇವಕಾ॥
ಲಕ್ಷ್ಮಿದೇವಿಯ ಕುರಿತು

ಲಕ್ಷ್ಮೀದೇವಿಯ ಕುರಿತು

3. ಇಂದಿರೆ ಲೋಕಮಾತೆ ನರಸಿಂಹನ ಪಟ್ಟದ ರಾಣಿವಾಸಿಯೆ।
ಸಿಂಧುಜ ಚಂದ್ರ ವಕ್ತ್ರೆ ಘನಸಿದ್ಧ ಮುನೀಶ್ವರರಿಂದ ವಂದ್ಯಳೇ॥
ಸಂದು ಸಿರಸುಬಾಗಿ ತವಪಾದ ಸರೋರುಹಧೂಳಿಗೀಗಾ ನಾ।
ಹೊಂದಿದೆನವ್ವ ತಾಯಿ ಕನಕಾದ್ರಿಪ ರಂಗನ ಪಟ್ಟದೊಲ್ಲಭೆ॥

4. ಅಂಬೇ ದಯಾಕದಂಬೇ ನೆರನಂಬಿದೆ ನಿನ್ನ ಪದಾಂಬುಜದ್ವಯಾ।
ಲಂಬನವುಳ್ಳ ಭಕ್ತರಿಗಭೀಷ್ಟಗಳೀವ ಕೃಪಾಪಯೋನಿಧಿಯಂತ ಕೇಳಿ
ಹಿಗ್ಗಿ ಬಹು ಬಿನ್ನಹ ಮಾಡುವೆ ಪಾಲಿಸನ್ಯರಾ।
ಹಂಬಲಪುಟ್ಟದಂತೆ ಕನಕಾದ್ರಿಪ ರಂಗನ ಪಟ್ಟದೊಲ್ಲಭೇ॥

5. ಮನದಲಿ ನಿನ್ನ ಪಾದ ವನಜಾರ್ಚನೆ ಮಾಡುವ ಭಕ್ತವರ್ಗಕೆ।
ಧನಕನಕಾಶ್ವ ಹಸ್ತಿ ರಥರಾಜ್ಯಗಳೀವ ದಯಾ ಸಮುದ್ರಳೆಂ॥
ದನುದಿನ ಕೇಳಿ ನಿನ್ನ ಪದಪದ ಪದ್ಮವ ಸೇರಿದೆನಮ್ಮ ಪ್ರೇಮದಿಂ।
ದಣುಗನನು ನೋಡು ತಾಯಿ ಕನಕಾದ್ರಿಪ ರಂಗನ ಪಟ್ಟದೊಲ್ಲಭೆ॥

6. ನಾಡೊಳು ಹಿಂದಕೊಮ್ಮೆ ಹಿರೇಕರ್ತನಿಗೆ ನೀ ಮೊಲೆಹಾಲುಣಿಸಿ
ರೂಡಿಗೆ ತಂದೆ ಎಂಬ ಬಿರುದಾವಳಿ ಲೋಕವೆಲ್ಲ ಕೊಂ॥
ಡಾಡಲು ಕೇಳಿ ನಿನ್ನ ಪದ ಪದ್ಮವ ಸೇರಿದೆನೊಬ್ಬ ರಾಶಿಯಂ।
ಮಾಡದ ಹಾಗೆ ಮಾಡು ತಾಯಿ ಕನಕಾದ್ರಿಪ ರಂಗನಪ ಟ್ಟದೊಲ್ಲಭೆ॥

(ನವಾಬ ಉಡಿಚಿ ನಾಯಕ ಹುಟ್ಟಿದಾಗ ಕೇವಲ ಮಾಂಸದ ಪಿಂಡವಾಗಿದ್ದು– ಈ ಲಕ್ಷ್ಮೀ ದೇವಿಯ ಗುಡಿಯಲ್ಲಿ ತಂದಿಟ್ಟ ಮೇಲೆ ಅದು ಬೆಳೆದು ಕೂಸಾಗಿ ಆಕೆಯ ಹಾಲಿನಿಂದಲೇ ಬೆಳೆದು ನಾಯಕನಾದನೆಂಬ ಐತಿಹ್ಯವಿದು)

7. ನುಡಿವೆ ನಿನಗೊಂದು ಮಾತು ಜಗದೀಶ್ವರ ಕೋಪವ ಮಾಡಲು ಬೇಡ ನೀ
ಗುಡಿವಳಗಿಹುದಿಲ್ಲ ಆ ಜಗದಂಬೆಗೆ ವಂಚಿಸಿ ಪೋಗುವಿಯೆಲ್ಲಿಗೆ?॥
ಪೊಡವಿಪ ರಂಗ ಬಾರೊ ಸಮಯೋಚಿತ ಕಾಯ್ದು ಕೊಂಬೆ ನ।
ಮ್ಮೊಡನೆಯನ ಪಾಲಿಸಯ್ಯ...ಕನಕಾದ್ರಿಪ ರಂಗ...॥

8. ತನುವಿದು ಜೀರ್ಣವಾಗಿಹುದು ಪರರು ನೋಡಿ ಹೇಸಿಕೊಂಬರೈ।
ಮನವಿದು ಸಂಚಿತಾರ್ಥದಲಿ ಕುಂಠಿತ ನಿನ್ನ ನಾಮ ಕೀರ್ತನಾ॥
ಕೊನೆಯಲಿ ರಾಮಕೃಷ್ಣ ಹರಿಕೇಶವ ಎನುವೆ ಕಾಯೊ।
ಕನಕಾದ್ರಿಪ ರಂಗ ದಯಾಪಯೋನಿಧೆ॥

9. ಒಡಲೊಳಗಿದ್ದ ದುಃಖತತಿಯೆಲ್ಲವಂ ಪೇಳಲಿದಾರ ಮುಂದೆಯು।
ನ್ನಡದವರಿಲ್ಲ ತಂದೆ ಬಹುಧರ್ಮದಿ ರಾಜ್ಯವಾಳುತಿಪ್ಪ ಸ॥
ತ್ಪೊಡವಿಪರಲ್ಲದೆ ದೇಶದ ಅಧಿಕಾರಕೆ ಬಂದವರೆಲ್ಲರು ಬಡ
ಬಡತನವರಿವರೈ ?।
ಮೃಡವಂದಿತ ದುಃಖವೆಂಬ ಕಡಲನು ದಾಟಿಸಯ್ಯ
ಕನಕಾದ್ರಿಪ ರಂಗ...॥

10. ಹಿಂದಕೆ ಕೃಷ್ಣರಾಯ ಧರಣೀಪತಿ ನಮ್ಮ ಹಿರೇರ ಪಾದಕೆ॥
ವಂದಿಸಿ ತಾಂಮ್ರಶಾಸನವ ಲೇಖಿಸಿಕೊಟ್ಟ ಹಳ್ಳಿಯಾ॥
ಇಂದಿಗೆ ದಯದಿಂದಲಿ ಕನಕಮಹೀಶನಿಂದಲೇ।
ಹೊಂದಿಸಿ ತಂದ ದೇವ ಕನಕಾದ್ರಿಪ ರಂಗ...॥

(ಕನಕಮಹೀಶ=ರಂಗಪ್ಪ ನಾಯಕನ ಮಗ ಮುಮ್ಮಡಿ ಕನಕಪ್ಪ ನಾಯಕನಿರಬೇಕು)

ಆಶ್ರಯದಾತ ಮತ್ತು ಅವನ ವಂಶ

11. ಸಜ್ಜನ ರಂಗ ಭೂಪ ಕುಲದೀಪಕ ಪುಟ್ಟಿದನೆಂಬ ಹರ್ಷದಿಂ।
ಗುಜ್ಜಲ ವಂಶವನು ಪಿಡಿದಾದರದಿಂದ ಮುದ್ದನೀವನೋ॥
ನಿರ್ಜರವಂದ್ಯನಾದ ಜಗದೀಶನು ತನ್ನ ನಿಜ ಭಕ್ತರ ಕಾಡುವ ಶತ್ರು।
ಭರ್ಜನೆ ಮಾಳ್ಪುದಕೆ ಪಿಡಿದ ದಿವ್ಯ ಭಾವವೊ ಗಾನಲೋಲನೋ
ಕನಕಾದ್ರಿಪ ರಂಗ...॥

12. ಶರಧಿ ಸಮಾನ ವರ ಗುಜ್ಜಲ ವಂಶಖ್ಯಾತ ಭೂವರ ಹಿರೇಉಡಚೇಂದ್ರ
ಗುಣಸಾಂದ್ರ ಸುರೇಂದ್ರ ವೈಭವ।
ಹರಿಚರಣಾರವಿಂದ ಭೃಂಗ ಮದನ ಮಹೀಶನೋಳ್॥
ಹೃದಯಾಬ್ಜದಿ ನಿಂತು ಅಖಿಲೇಷ್ಟವ ಕೊಟ್ಟು ರಕ್ಷಿಸೊ।
ಶರಣರ ಕಾವ ದೇವ ಕರುಣಾಕರ ಕಾಮಿತಪ್ರದಾ ಪರತರ
ಪಾವನಾಂಗ ಕನಕಾದ್ರಿಪ ರಂಗ॥

13. ಮದನನು ಮತ್ತೆ ತನ್ನ ಜೈಭೇರಿಯ ಹೊಯ್ಸುತಾ।
ಕದನದಿ ಮೂರುಲೋಕವ ಗೆದ್ದ ಮೇಲೆ ಫಲವಿ॥
ಲ್ಲದೆ ಭೇರಿಯ ಡಬ್ಬು ಹಾಕಿ ತನ್ನ ಹಸ
ನದಿ ತೋರ್ಪ ಕುಚಕುಂಭದೋಳ್ ಸಮಸ್ತ ಸೌಂದರೀ
ಅಮಿತ ಗುಣಾಭಿರಾಮೆ ಕನಕಾಚಲರಂಗನ ಪಟ್ಟದೊಲ್ಲಭೇ॥

ಜೀವನ ವಿವರ

14. ಬಾಲ್ಯದಿ ಮೂಢನಾಗಿ ಬಹಳಾಟದಿ ನಿನ್ನಯ ನಾಮ ಕೀರ್ತನಾ।
ಹೇಳಲ(?) ಮಾಡಿಬಿಟ್ಟೆ ಮದಗರ್ವದಿ ಯೂನನಾಗಿ ನಾ॥
ಬಾಲೆಯರಂಗಸಂಗ ಬಲವತ್ತರ ದುಃಖವೆ ಸೌಖ್ಯವೆಂದು।
ಲೋಲುಪನಾಗಿ ಮೆರೆದೆ ವೃದ್ಧಭಾವದೊಳ್ ಪಾಲಕನ ಚಿಂತಿಸಿ
ಕಾಲ ಕಳೆವೆ ಕಾಯೊ ಕನಕಾದ್ರಿಪ ರಂಗ ದಯಾನಿಪಯೋನಿಧೆ॥

15. ನೋಡಿದೆ ದಿವ್ಯದೇಶಗಳ ವಿಚಿತ್ರ ತೀರ್ಥಕ್ಷೇತ್ರಗಳ।
ಮಾಡಿದೆ ಸ್ನಾನಪಾನ ಮೊದಲಾದ ಕರ್ಮಗಳ॥
ಈಡುಗಾಣೆ ನಿನ್ನಯ ಪಾದತೀರ್ಥಕೆ ಲೋಕವಂದ್ಯನೇ।
ಪಾಡುವೆ ತ್ರಿಭುವನವಂದ್ಯ ಸರಸೀರುಹ ಚಂದ್ರ ಕನಕಾದ್ರಿಪ ರಂಗ
ದಯಾಪಯೋನಿಧೆ॥

16. ನೆಂಟರಿಷ್ಟರೊಳ್ ನಗೆಪಾಟಲವೇತಕೆ।
ಕಂಟಕವೇನುಕಾರಣ ಕಾಮಿತ ಫಲವನೀವ ದೇವನೇ॥
ಬಂಟನ ಹೀನ ಹಾನಿಗಳೆಲ್ಲ ನಿನ್ನವಲ್ಲವೈ।
ಉಂಟನೆ ಮಾಡಿತೋರು... ಕನಕಾದ್ರಿಪ ರಂಗ...॥

17. ಮುಪ್ಪಿನ ಕಾಲದೊಳ್ ಪರದೇಶಕೆ ಪೋಗಿ ಮಹಾಮದಾಂಧರಾ।
ಗಿಪ್ಪ ನರನಾಥರ ಯಾಚಿಸಲಾರೆನೈ॥
ತಪ್ಪದೆ ಅನ್ನವಸ್ತ್ರ ಕೊಟ್ಟು ಸಾಕುವಂತೆ ರಂ।
ಗಪ್ಪಗೆ ಹೇಳಿ ಸಲಹೊ ತಂದೆ...ಕನಕಾದ್ರಿಪ ರಂಗ...॥

18. ಮಕ್ಕಳ ಮೇಲೆ ಮಮಕಾರದಿಂದ ನೋಡು ಬೇಗನೇ।
ಸಕ್ಕರೆ ಹಾಲು ತುಪ್ಪಗಳ ಸೊಬಗಿಲಿ ಉಣಿಸು ಪ್ರೀತಿಯಿಂದಲಿ॥
ಚೊಕ್ಕಟ ವಸ್ತ್ರ ಭೂಷಣಂಗಳ ಕೊಟ್ಟು ಸದಾವಕಾಲದೊಳ್।
ಪಕ್ಕದೊಳಿಟ್ಟು ರಕ್ಷಿಸೊ ಪರತರ ದಿವ್ಯಮೂರ್ತಿ–ಕನಕಾದ್ರಿಪ ರಂಗ॥

19. ಇಂದಿಗೆ ದೇವ ನಿಮ್ಮ ಪಾದ ತೀರ್ಥವನು ಸೇವಿಸಿ ಕೃತಾರ್ಥನಾದೆನೈ।
ಮಂದಿರ ಮಕ್ಕಳ ಕಂಡು ಸಮೃದ್ಧನಾದೆನೈ॥

ಇಂದಿಗೆ ಸುಳ್ಳು ಎಂಬ ಕುಹಕೋಕ್ತಿಯಿಂದವಮಾನ ಮಾಡುವ।
ಮಂದಿಯ ಹಲ್ಲು ಕೀಳು–ಕನಕಾದ್ರಿಪ ರಂಗ...॥

ಕನಕಾಚಲ ಮಹಿಮೆ-ಸ್ತೋತ್ರ ವರ್ಣನೆ

20. ಸೃಷ್ಟಿಗೆ ಕರ್ತನಾದ ನರಸಿಂಹನೇ ನಿನ್ನಯ ತೊಟ್ಟಿಲ ತೀರ್ಥವಂ।
ದಿಷ್ಟದಿ ನಿಷ್ಠೆಯಿಂದ ಪ್ರತಿನಿತ್ಯದಿ ಸೇವಿಸಿದರ್ಗೆ ಹತ್ತಿದಾ॥
ಕುಷ್ಠ ಭಗಂದರಾದಿ ಬಹುಕುತ್ಸಿತ ರೋಗಗಳಷ್ಟು ನಷ್ಟವೈ।
ಕಷ್ಟ ದಾರಿದ್ರ್ಯ ಭಂಗ ಕನಕಾದ್ರಿಪ ರಂಗ...॥

21. ಕನಕಗಿರೀಶ ನಿನ್ನಯ ಶುಭನಾಮಗಳೆನ್ನಯ ಜಿಹ್ವೆಗೇ।
ಅನುದಿನಯ್ಯೆದುವಂತೆ ದಯಪಾಲಿಸು ಮಾಧವಾಚ್ಯುತಾ॥
ದಿನಕರ ಕೋಟಿ ತೇಜ ಸನಕಾದಿ ಮುನೀಂದ್ರ ವಂದಿತಾ।
ಘನ ಸದ್ಗುಣ ದೋಷದೂರ ಪಾವನತರ ಚರ್ಯವರ್ಯ-ಕನಕಾದ್ರಿಪ ರಂಗ...॥

22. ನಾರಗನೆಂದ ಮಾತ್ರದಿ ನಾಶ ಮಾಡಿದ ಪಾತಂಕಗಳಾ।
ಸಾರಥಿಯಾದೆ ಅಜುನಗೆ ಸಾಮಜವರದ ವಿಭವ ರಕ್ಷಿಸೊ॥
ವಾರಿಜನಾಭನೆಂಬೆ ವರವಿತ್ತರೆ ತಪ್ಪದಯ್ಯ ಕನಕಾದ್ರಿಪ ರಂಗ...॥

23. ಉತ್ತಮರಾಮನಂದು ಬಲು ಹೇಳಲು ಕೇಳಿ ಸಮುದ್ರದಾಂಟಿ ನಾ
ಪೊತ್ತುರಗಲ್ಲು ಪೊತ್ತು ಪಡಿಪಾಟಲ–ಬಟ್ಟುದಕೇನು ಕಂಡೆನೈ॥
ಕರ್ತುರ್ ನರಸಿಂಹನ ಸೇವೆಯೆನಗೊಳಿತೆಂದು ಆ।
ಸತ್ಯದ ಮೇಲೆ ನಿಂತೆ ಕನಕಾದ್ರಿಪ ರಂಗ...॥

24. ನರಪತಿ ದೀರ್ಘ ದಂಡವ ಮಾಡಲು ನಾ ಬಲು ತುಷ್ಟನಾದನೈ।
ತೊರಿತದಿ ಎಚ್ಚರೆಂದು ಪೆಗಲೇರಿದ ಸ್ವಾಮಿಯ ಮಾತು ಕೇಳಿ॥
ತೀವ್ರದಿ ಮಂಡಿಯನಿಕ್ಕಿ ಕರೆವೆತ್ತುವ ಭಾವದಿ ಕೈ ತೋರುವ।
ಗರುಡನ ಮೇಲೆ ನಿಂತ ಕನಕಾದ್ರಿಪ ರಂಗ...॥

(ಕನಕಗಿರಿಯಲ್ಲಿ ಈಗಲೂ ಪ್ರಸಿದ್ಧವಿದ್ದ ಗರುಡೋತ್ಸವದ ವರ್ಣನೆ ಇದು)

25. ನಿನ್ನಯ ಪಾದ ತೀರ್ಥವನು ಸೇವಿಸಿದಾಕ್ಷಣ।
ಮುನ್ನ ಮಾಡಿದ ಘನ ವಿಪತ್ತು ಪಾತಕ ರಾಶಿಗಳು ಬಿಟ್ಟು ಪೋಪವೈ॥
ಎನ್ನಯ ಜನ್ಮ ಬಲು ಸಾರ್ಥಕವಾಯಿತು ಕೃತಾರ್ಥನಾದೆನೈ।
ಸನ್ನುತ ಮಂಗಳಾಂಗ ಕನಕಾದ್ರಿಪ ರಂಗ...॥

26. ನತಜನಪರಿಪಾಲ ಘನ ಮಾರುತದೇವ ಸನ್ನುತ।
ಮದನಾರಿಮುಖಸುರವರವಂದಿತ ಪಾದ ಪಂಕಜೋನ್ನತಾ॥
ವಿತತ ಚರಿತ್ರ ನರಕಾಂತಕ ವಾಮನರಾಮ ನರಸಿಂಹ
ಉಪೇಂದ್ರ ಅಚ್ಯುತ
ಅತಿಬಲ ದೈತ್ಯಭಂಗ ಕನಕಾದ್ರಿಪ ರಂಗ...॥

27. ಸೃಷ್ಟಿಗೆ ಕರ್ತನಾದ ಕನಕಾದ್ರಿಪ ನಿನ್ನಯ ಜಾತ್ರೆಯ ಕಾಲದೋಳ್।
ಕಟ್ಟಿದ ಯಜ್ಞಶಾಲೆಯೋಳ್ ಮಾಡುವ ಹೋಮವೆ ಅಗ್ನಿಹೋತ್ರವೈ॥

ಪೊಟ್ಟೆ ಹೊರುವುದಕೆ ಕಪಟದಿ ಡಂಬಕ ಅಗ್ನಿಹೋತ್ರವ।
ನಿಟ್ಟರೆ ಮೆಚ್ಚನಯ್ಯ ಕನಕಾದ್ರಿಪ ರಂಗ...॥

ಈ ಕವಿಯ ದರ್ಶನ

ಮೇರೂ ಪೀಠವಾಗಿ ಇನ ಚಂದ್ರರು ತಾವು ಸೂರ್ಯಪಾನಗಳಾಗಿ।
ತಾರಕೆಗಳು ದಿವ್ಯಪುಷ್ಪಗಳಾಗಿ ಧ್ರುವಮಂಡಳವು ದೀಪ್ತ ಕಿರೀಟವಾಗಿ॥
ಧಾರುಣಿಯು ರಾಣಿಯಾಗಿ ಶ್ರೀದೇವಿ ಭೂಷಣವಾಗಿ।
ಪಾರ್ವತಿಯು ದಿವಾಣಕಾಯ್ದು ವಿಭವ ರಕ್ಷಿಸೋ ವೇಂಕಟ
ಶೈಲವಲ್ಲಭೋ॥

ಕನ್ನಡ ದಂಡಕ (ಕಾವ್ಯಾರಂಭ)

ಶುಭಗುಣಮಯ ವಿಗ್ರಹೋಲ್ಲಾಸ। ಲಕ್ಷ್ಮೀ ಮನೋನಾಥ।ನಾಭೀ ಸರೋಜಾತ। ಜಾತಾಂಡ ಮಧ್ಯೋಲ್ಲ। ಸದ್ದೇಶ ಕರ್ನಾಟ।ವೆಂಬಲ್ಲಿ ಬಲ್ಲಂಥ। ಪಂಪಾ ಸರೋವಾಮ। ಷಟ್ಕ್ರೋಶ ದೂರ್ದಲ್ಲಿ।ಸರ್ವರ್ಗ್ಗೆರೇಗೊಂಡು। ಮೆರೆವಂಥ ಹೇಮಾದ್ರಿ। ಎಂಬೋ ಪೆಸರ್‌ನಿಂದ। ವಿಖ್ಯಾತಮಾದಂಥ। ಭೂ ಪಟ್ಟಣಂ ಸರ್ವ। ಸಾಮ್ರಾಜ್ಯದಿಂದಾಳಿ। ಬಾಳ್ವಂಥ ಶ್ರೀಮನ್।ಮಹಾನಾಯಕಾಚಾರ್ಯ। ನಾಯಕ ಸಿರೋರತ್ನ।ಗುಜ್ಜಲ ಮಹಾ ವಂಶ। ವಾರಾನಿಧೀ ಚಂದ್ರ। ಧೀಸಾಂದ್ರ ರಂಗಾಖ್ಯ। ಭೂಮೀಂದ್ರನಂ ಪೊಂದಿ। ವಿಖ್ಯಾತ ಪಾಂಡಿತ್ಯ। ಧೀರೋನ್ನತ ಶ್ರೀನಿಧಿ ಶ್ರೀನಿಧಿ ಶ್ರೀನಿಧೀ ಎಂಬ ಗುರುವಂಘ್ರಿ। ಪಂಕೇರುಹ ದ್ವಂದ್ವ।ಮಮ್ ಆವಗಂ ಧ್ಯಾನಿ।ಸುತ್ತಿರ್ದ ಹತ್ತಾರು। ಸಂಸ್ಥಾನಗಳ್‌ನೆಲ್ಲ। ಪಾಂಡಿತ್ಯದಿಂ ಜಯಿಸಿ। ಸಿದ್ಧಾರ್ಥನಾದಂಥ।ಅನ್ವರ್ಥ ಜಯವೆಂಕ।ಟಾಚಾರ್ಯನೆಂಬೋ। ಪೆಸರ್ ಪೆತ್ತ ವಾದೀಭ। ಪಂಚಾಸನಂ ತನ್ನ।ವಾಗ್ಗುಂಫ ಸಂಫುಲ್ಲ। ಮಂದಾರ ಪುಷ್ಪಾಂತ। ರೋದ್ಯನ್ಮರಂದರಸ। ಪ್ರೌಢಲೋಕಾವ।ಳೀಗೆಲ್ಲ ಬೀಳ್ವಂತೆ। ವಿನ್ಯಾಸದಿಂದೀಗ। ಪೇಳ್ವೇನು ಕೇಳಂತೆ।ನಾನೇನು ನನ್ನಿಂದ ಪೊಸದೆಂದು ತಂದಿಟ್ಟ। ಗುಟ್ಟೆಂದು ಪೇಳ್ವಿಲ್ಲ।ಯನ್ನಾಳ್ದ ಸರ್ವೇಶ। ತನ್ದಾಸ ವಾಗೀಶ।ನಿಂದೀಗ ಬೋಧಿಸಲ್।ನುಡಿವೆನು।

1 (ಹನುಮಾವತಾರ)

ಒಂದೇ ರಮಾಕಾಂತಂ।ರಾಮಾವತಾರಂ।ದಶಶ್ಯಂದನಾಧೀಶ। ಕೌಶಲ್ಯರೊಳ್ ಮಾಡಿ। ದಂದೆ ಮರುದ್ದೇವ। ಆ ಕೆಸರೀ ಅಂಜ।ನಾದೇವಿ ಪೊಟ್ಟೀಲಿ। ಪುಟ್ಟಿರ್ದಲಾಗಲಾ। ರಾಮತನ್ನಾರ್ಯಳಂ।ಕದ್ದೈದ ದೈತ್ಯನಂ।ಕೊಲ್ಲಬೇಕೆಂದಾಗಿ। ಉದ್ಯೋಗದಿಂದಾಗ। ಸದ್ಯೋಹನೂಮಂತ। ಬಲವಂತ ಧೀಮಂತ। ಆ ದಾಶರಥ್ಯಾಂಘ್ರಿ। ಪಾಥೋಜಗಳ್ಕಂಡು। ಸತ್ಕರಿಸಿ ಸುಗ್ರೀವ। ಸೈನ್ಯಂ ಬಲಂ ನೆರಿಸಿ। ಶೈಲಂಗಳಂ ತರಿಸಿ। ವಾರ್ಧೀನೆಲೆ ಮುರಿಸಿ ದೈತ್ಯರ್ ತಲೇಪರಿಸಿ।ಸೀತೆಯನಾದರಿಸಿ। ರಾಮಂಗೆ ಒಪ್ಪಿಸಿ। ಸಾವಿತ್ರ ವಂಶಾಭ್ಯ। ರಾಜೇಂದ್ರರಾಳ್ದಂಥ।ಯೋಧ್ಯಾಪುರಂ ಸೇರಿ। ಸೀತಾರಘುಶ್ರೇಷ್ಠ।ಗರ್ಗಾವಸಿಷ್ಠಾದಿ। ಸಿಷ್ಟೌ ಘರೆಷ್ಟಾಹರಷ್ಠೂ ಸಹಾ ಬಂದು। ಪಟ್ಟಾಭಿಷೇಕೋತ್ಸವಂ ಮಾಡಿದಾ ಮ್ಯಾಲೆ।

2 (ಭೀಮಾವತಾರ)

ಚಂದ್ರಾನ್ವಯೋತ್ಪನ್ನ। ಪೃಥ್ವೀಶರೊಳ್ ಜನಿಸಿ। ತಾಯ್ತಂದೆಗಳ್ಗೀ। ಚತುರ್ಬಾಹು ಸೌಂದರ್ಯ। ತದ್ರೂಪವಂ ತೋರಿ। ನಂದವ್ರಜಂ ಪೊಂದಿ। ಕಾಲಿಂದಿ ಭಂಡೀ।ವಡೇಕುಟ್ಟಿ

ದುಷ್ಪೂತ।ನಾಸ್ತನ್ಯನೆವದಿಂದ।ಕೊಂದ್ಪಾಕಿ ತಾರ್ಣಾಸುರನ್ಪೊಡೆದು। ಗರ್ಗೇಯನಿಂದಿತ್ತ। ನಾಮಂಗಳಂ ತಾಳ್ದು। ವತ್ಸಾಸುರನ್ಕೊಂದು। ಗೊಲ್ಲಾರ ಮನೆಯಲ್ಲಿ। ಪಾಲ್ಮೊಸರು ಚಲ್ಲಾಡಿ। ನವನೀತಮಂ ತಿಂದು। ಗೋಪೆಂಗಳಂ ಕೂಡಿ। ಗೋಪಾಂಗ್ನೆಯರ್ನೆಲ್ಲ। ಕಾಮಾತುರಂ ಮಾಡಿ। ವೇಣುಸ್ವನಂ ಹೂಡಿ। ಸನ್ಮೋಹವಂ ತೀಡಿ। ಪೋರಾಟಗಳ್ ಮಾಡಿ। ಅಕ್ರೂರನಲ್ಲಿಂವ ಕರೆದೊಯ್ಯ ಬರಲಂದು। ಚಾಣೂರ ಮುಷ್ಠೀಕ ನಷ್ಟತ್ವವಂ ಮಾಡಿ। ಕಂಸನಾ ಸಂಹರಿಸಿ। ವೃದ್ಧೋಗ್ರಶೇನಂಗೆ। ರಾಜ್ಯಾಸನಂ ಕೊಟ್ಟು। ಕೈವಾರಮಂ ಪೊಗಳಿ। ಬಂದೀಮನೆಯಲ್ಲಿದ್ದ। ತಾಯ್ತಂದೆಗಳ್ ಬಿಡಿಸಿ। ರಾಜಾಧಿರಾಜರ್ನೆರೆಗೊಂಡು। ಸಂಗ್ರಾಮದೋಳ್ಕಾದು। ಕನ್ಯಾಮಣೀ ಪಾಣಿ ಸಂಪೀಡಿನಂ ಮಾಡಿ ಕೊಂಡರ್ಥಿಲಿಂ ಪಾಂಡು। ಭೂಮೀಶನಂ ಪತ್ನಿ। ಕೊಂತೀಸತೀಗರ್ಭ।ದಿಂದಲ್ಲಿ ಸಂಜ್ಯಾತ ವಾಯೂ ಕುಮಾರಂ। ನೃಪಂ ಭೀಮಶೇನಂ। ಮಹಾ ಮತ್ತ ನಾಗಾಯು। ತತ್ರಾಣ ಬಾಲತ್ವ। ದಿಂದಲ್ಲಿ ಸಿಂಪಾದಿ। ಸಂಹಾರ ಲೀಲಾವಿ।ನೋದಂಗಳಂ ಮಾಡಿ। ಶಸ್ತ್ರಾಸ್ತ್ರ ವಿದ್ಯಂಗ।ಳಂ ಕಲಿತು ವಿಷದನ್ನ।ವಂ ಮೆದ್ದು ಮಡುವಂಗ।ಳಂಗೆದ್ದು ಲಾಕ್ಷಾಗ್ರ।ಹಂ ಒದ್ದು ಕೌರವ್ಯ।ರಿಂದಾಗ ಬಡಿದಾಟ। ಬರಲಾಗ ಅಜ್ಞಾತ।ದೋಳ್ ನೀಚನಾ ಕೀಚ।ಕನ ಕೊಂದು ಆ ಕೃಷ್ಣ ಯಿಂತಂದು ತಮ್ಮರ್ಜು। ನಂಗಿತ್ತು ಸಂಗ್ರಾಮ।ದೋಳ್ ಮತ್ತೆ ವೀರಾಧಿ।ವೀರರ್ನೆ ಬೇರೊರಿಸಿ। ಕತ್ತರಿಸಿ ದುಷ್ಟಂ ಜ। ರಾಸಂಧನೆಂಬೋ ಮಹಾ।ನಾರಾಯಣ ದ್ವೇಷಿ। ಮೂರ್ಧನ್ಯಂ ಕೊಂದು। ಯುದ್ಧಾಶ್ವಮೇಧಾಖ್ಯ। ಯಜ್ಞಾಂಗವಂ ಮಾಡಿ। ಅಲ್ಲಿಂದ ಸೌಗಂಧಿಕೋದ್ಯಾನದೋಳ್ ಬಂದ ಮಣಿಮಂತ। ಮಾತಂಗ ಮುಂತಾದ। ದೈತ್ಯೇಯ ರನ್ನೆಲ್ಲ। ಘಟ್ಟೆಂದು ಕುಟ್ಟಾಕಿ। ಸಂಪತ್ಸಮೃದ್ಧಂ। ಪ್ರಜಾಸೌಖ್ಯದಿಂದಾಗಯಿರಲಾಗ। ಆ ದುಷ್ಟ ದೈತ್ಯೇಯ।ರಷ್ಪೂ ಮಹಾ ದುಷ್ಟ। ದುಶ್ಚೋದ್ಯದುರ್ಯೋ।ಚನೇ ಮಾಡಿ ಕಲಿಕಾಲ।ದೋಳ್ ಜನಿಸಿ ವೇದಾದ್ರಿ ಮಾರ್ಗಂಗಳನ್ನೆಲ್ಲ। "ಮಿಥ್ಯಾರ್ಥ ಸಿದ್ಧಾಂತ ದುರ್ಗ್ರಂಥ ದುರ್ಯುಕ್ತಿ ದುಷ್ಕಂಟಕಾ ಕೀರ್ಣವಂ ಮಾಡಿ। ನೈರ್ಗುಣ್ಯ ನೈಷ್ಕರ್ಮ ನಿರ್ವಿಗ್ರಹತ್ವಾದಿ" "ಮಾಯಾ ವಿಲಾಸಾಸ್ರಿತಂ ಸರ್ವಂ ಮಿಥ್ಯಾ।ಗುರು ಶಿಷ್ಯ ಭಾವಂಗಳೇ ಸುಳ್ಳು।ಯದ್ದೃಷ್ಟಂ ತನ್ಮಿಥ್ಯಾ।ವೇದಾದಿ ಮಾರ್ಗಂಗಳಾ ತತ್ವಾವೇದಕಾತ್ಮೈಕ್ಯ ತಾತ್ಪರ್ಯ ದಿಂದೆಲ್ಲ ಲಾಕ್ಷಾಣಿಕತ್ವಂ ಪದಾರ್ಥ ದ್ವಯಾಭೇದ ಶಬ್ದಾಪರೋಕ್ಷಂ। ಮಹಾ ಸೂರ್ಯಭಾಸಂ। ಮನೋಭಾಸಗೈಲಾಗ। ಸಂಸಾರ ಮೂಲಭ್ರಮಂ ಪೋಗಿ ಚಿತ್ಸಾಂದ್ರ ನಂಜೀವಿ ನಾಗೋದೆ ತನ್ಮುಕ್ತಿಯೆಂಬೋ ಪ್ರಕಾರಂಗಳಿಂದೆಲ್ಲ ದುರ್ದೈತ್ಯರರ್ಭಾಟನಡಿಸಲ್ ಸಂತರ್ನಿಜಜ್ಞಾನ ಶೂನ್ಯತ್ವ ದಿಂ। ಕೆಡುವರೆಂತೆಂದು ಚಿಂತಾಸಮಾಕ್ರಾಂತರಾಗಲ್ಕದೇ ಕಾಲದಲ್ಲಿ।

3 ಮಧ್ವಾವತಾರ

ಲಸದ್ರೌಪ್ಯ ಪೀಠಾಖ್ಯ। ಸುಕ್ಷೇತ್ರದಲ್ಲಿದ್ದ ಸನ್ಮಧ್ಯಗೇಹಾಖ್ಯ। ವಿಪ್ರಸ್ಸತೀ ಶುದ್ಧ। ಭಾಸ್ವದ್ವಪುರ್ನಿಂದ। ಭೂಲೋಕದೋಳ್ ಬಂದು। ತದ್ವಾಪರಾಂತಾವತೀರ್ಣಂ ಗುರುಂ ವ್ಯಾಸ। ನಾರಾಯಣಂ ಪೇಳ್ದ ಸಿದ್ಧಾಂತಮಂ ತಾನು। ಉದ್‌ಘೋಷಮಂ ಮಾಡ ಬೇಕೆಂದು ಮಧ್ವಾಭಿ।ಧೋದ್ಗೀತ ಯೋಗೀಂದ್ರ ಭಾವಂ ಸಲೆ ೕಗೈದು।ಶಾಖೋಪಶಾಖಾದಿ ಭೇದಂಗಳಿಂದಾಲೆ।ವಿಸ್ತೀರ್ಣ ವೇದಾಂತ ವೀಚೀತರಂಗಮಂ। ನೋಡಿ ಮಾಡಿದ್ದ ಸೂತ್ರ ಪ್ರಬಂಧಾದ್ಯ।ನೇಕಾಮೋಘಂಗ।ಳನ್ನೆಲ್ಲ ಗಂಭೀರ। ಸಂಭಾವಿತಾನಂವ। ಗೂಢಾರ್ಥ ಉಳ್ಳಂಥ। ಸದ್ಭಾರತ ಗ್ರಂಥ।ಮರ್ಮಾಶಯ ಗ್ರಂಥಿ। ಬಿಚ್ಚಿಟ್ಟು" "ನಾನಾ ಮನೋದೀನ ದುರ್ವಾಸನಾರಣ್ಯ। ದಾವಾನಲೋದ್ದಾಮ।ಕೀಳ ಕರಾಳ ತೇಜಃ ಸ್ಫುರನ್ಯುಕ್ತಿಮಾನ ಪ್ರಮಾಣಾಗಮಾಪೌರುಷೇಯತ್ವ ಸಂಸ್ಥಾಪನಂ ಗೈದು" ಚಾರ್ವಾಕ, ನಾಸ್ತೀಕ,

ವೈಭಾಷಿ ಸೌತ್ರಾಂತಿಕರ್ಬುದ್ಧ ಜೈನರ್ಕಪಾಲೀಯು, ಜೈಮಿನ್ಯುದಂತ ಕಾಣಾದಾಕ್ಷಪಾದ ದುರಾಚಾರ ಯೋಗಂಗಳಂ ಸಾಂಖ್ಯಮಾರ್ಗೇಣ ಪ್ರಚ್ಛನ್ನಬೌದ್ಧಮರ್ಹಾಮಂತ್ರ। ಮಾಯಾಮತಾಭಾಸ।ದುದ್ರಾವಿತ ಗ್ರಂಥ ವೇದಾಂತವೆಂಬಂಥ।ಪಾಷಾಂಡರಾದ್ಧಾಂತ ದುರ್ಧಾಂತಗಳ್ನೆಲ್ಲ।ವಿಧ್ವಂಸನಂ ಮಾಡಿ ಸನ್ಮಾರ್ಗವಂ ತೋರಿ। ಸಚ್ಛತ್ರ ಸಂತೋಷವಂ ಕೊಟ್ಟು। ಜಗದೊಳಗೆ ತನ್ನಂಥ। ದೈಶ್ಯೇಕ ಸಂಚಾರ।ದಿಂ ಶುದ್ಧ ವಿಸ್ಫೂರ್ತಿ। ಉದ್ದಾಮ ಚಂಡಪ್ರ।ಕಾಶ ಪ್ರಭು ಶ್ರೀಮದಾನಂದ ತೀರ್ಥಾರ್ಯ। ಮಧ್ವಾರ್ಯ ಪ್ರಬೋಧಾರ್ಯ। ವಿಧ್ವಸ್ತದುರ್ವಾದಿರಾದ್ಧಾಂತ। ಸದ್ವೈಷ್ಣವೋದ್ಧಾರ। ಸಿದ್ಧಾಂತ ಸಂಸ್ಥಾಪನಾಚಾರ್ಯ ಸೂರ್ಯಂ। ಜನರ್ ನೋಡಿ ಸತ್ವ ಸ್ವಭಾವಸ್ಥರಪ್ಪೂ ಮಹೋತ್ಸಾಹ। ದುಸ್ನಾಹ ಸಸ್ನಾಹ ದಾಶ್ಚರ್ಯಮಂ ತೊಟ್ಟು।ನೋಡ್ತೈ ಜಗದ್ಭಾರಮಾಗಿರ್ದ ದುಃಶಾಸ್ತ್ರ। ಸದ್ದಡಗಿ ಎತ್ತೆತ್ತಲೋ ಪೋಯಿತೀಗ। ಹಾಹಾ ದುಷ್ಟಮೂಢರ್। ಮಹಾರ್ಭಟವ ಮಾಡೀಗ ನಷ್ಟಾದುದಂ ಕಂಡ। ನಾವೇ ಮಹಾದೃಷ್ಟವಂತರ್ ಜಯ ಶ್ರೀ।ಮದಾನಂದತೀರ್ಥಾರ್ಯ ಪುಂಸಿಂಹ ಶಾಬಾಸ್। ಸಂತೋಷ ಮೇಲ್ ಚನ್ನಾಯಿ ಚನ್ನಾಯಿ ಚನ್ನಾಯಿತೋ ಕೀರ್ತಿ। ಹೇ ದುಷ್ಟ ದುರ್ವಾದಿ ಗೋಮಾಯಿಗಳ್ ನೀವು। ನಿಂದ್ರೋದು ಎಂಥಾದು। ಕೂಗಾಟ ಮಾಡ್ಸಲ್ಲ ಓಡಾಟ ಆಗ್ದೆಲ್ಲ। ದುರ್ಭಾವ ದುರ್ಯೋನಿ। ದುರ್ವಾಸನಾರಣ್ಯ। ನಿಮಗೀಗ ಬಂತಿಸ್ನು ಶುದ್ಧಾಗವೋದ್ಭಾಸ ಸಿದ್ಧಾಂತಮಂ ಸೇರಿ। ಬದುಕೋದು ಒಳ್ಳೇದು। ಜನ್ಮವೃಥಾ ಕೆಡಸಿ ಕೊಂಡ್ಹೋಗಬ್ಯಾಡೆಂದು। ನುಡಿದಪ್ಪು। ತಮ ತಮ್ಮ ಮನದೊಳ್। ತಾವೇ ಒಡಂಬಟ್ಟು ತಮತಮ್ಮ ದುಃಶಾಸ್ತ್ರ।ಮಾರ್ಗಂಗಳಂ ಬಿಟ್ಟು। ಸದ್ವೈಷ್ಣವರ್ಪಾದ ಧೂಳೀಸರಿಸ್ನಾನ।ಮಂ ಮಾಡಿ ಸಚ್ಛಕ್ರ ಶಂಖಾಂಕಿತಾಕಾರ।ಗಳ್ಧರಿಸಿ ವೈಕುಂಠ ಲೋಕಾವಲೋಕಸ್ಪ್ರ।ಹಾ ಶೀಲ ಭಕ್ತಾತ್ಮರಾಗೀಪರೆಷ್ಟೋ ಇದೇ ರೀತಿ। ಇಂದಿಂದಿರಾನಾಥ ಸರ್ವೇಶ ಸರ್ವೋತ್ತು-।ಮಾನಂತ ನಿರ್ದೋಷಿ ಕಲ್ಯಾಣ ಭಾಸ್ವಚ್ಚಿ।ದಾನಂದ ಮುಂತಾದ ಷಾಡ್ಗುಣ್ಯ ಸದ್ವಿಗ್ರ।ಹಾನೇಕ ಪೂರ್ಣಾವತಾರಾಂಶ ರೂಪಾಕ್ರ।ತಿರ್ನಾಮಭೇದಂಗಳನ್ನೆಲ್ಲ ತೋರ್ಬಲ್ಲ ನೋಡ್ಬಲ್ಲ ತಾನೇ ರಮಾ ಬ್ರಹ್ಮ ವಾಣೀ।ಮಹಾರುದ್ರ ಕಾಮೇಂದ್ರ,। ಮುಖ್ಯಾಮರೇಂದ್ರಾದಿ।ಋಷ್ಯಾದಿ ರಾಜಾದಿಗಳ್ ಶುದ್ಧ। ಸತ್ಸಂಪ್ರಾಯಪ್ರ।ದಾಚಾರ್ಯ ಪಾದಂಬು।ಜದ್ವಂದ್ವ ಭೃಂಗಾಯ। ಮಾನಾಂತರಂಗ ಬುಧರ್ಮೆಚ್ಚುವಂತೆ ನಿಜಶ್ರೀಲ ವಾಗ್ಜಾಲಮಂ ತೋರಿ ಪೇಳ್ದಂಥ ಮಧ್ವಾರ್ಯ ಸಿದ್ಧಾಂತ ಸದ್ದಂಡಕಂ ಓದಿ। ಬರೆದರ್ಗೆ ನುಡಿದರ್ಗೆ।ಸಾಕ್ಷಾದ್ರಮಾಕಾಂತ। ಸದ್ಭಕ್ತಿ ಸಚ್ಛ್ರೀಮದಾನಂದ ತೀರ್ಥಾರ್ಯರೂ ಪ್ರೇಮ ಮಾಡೋರು। ನಿಃಸಂಶಯಂ ಸರ್ವ ಭೂಮಂಡಲಾಧೀಶ ಸೌಭಾಗ್ಯ ಸಂತೋಷ ವಿಸ್ತಾರವಾಗೋದು ವಾಗ್ವಾಡ್ಯದೋಷಂಗಳುಂ ಪೋಗಿ।ಸದ್ಧೈರ್ಯ ಮರ್ಯಾದೆಗಳ್ ಕಲಿತು।ಸರ್ವಾರ್ಥ ಸಂಪನ್ನ ದೀರ್ಘಾಯುರಾರೋಗ್ಯ ಸಂತಾನ ಸದ್ಭಕ್ತಿ। ಸನ್ಮುಕ್ತಿಗಳ್ ನೀವ। ಮಂಗಳಂ ಮಹಾಶ್ರೀ ಪುನಃಶ್ರೀ ಸದಾ ಶ್ರೀ ನಮೋ ರಾಮ ತುಭ್ಯಂ।ನಮೋ ಕೃಷ್ಣತುಭ್ಯಂ ನಮಃವ್ಯಾಸ ತುಭ್ಯಂ। ನಮಃಪ್ರಾಣತುಭ್ಯಂ। ನಮಃ ಭೀಮತುಭ್ಯಂ। ನಮಃ ಶ್ರೀಮದಾನಂದ। ತೀರ್ಥಾರ್ಯ ತುಭ್ಯಂ। ನಮಸ್ತೇ ಜಯಸ್ತೇ ಪುನಸ್ತೇ ನಮೋನಮಃ ಕನಕಗಿರಿಯ ಶ್ರೀ ಜಯವೆಂಕಟಾಚಾರ್ಯ ವಿರಚಿತ ಸಮಾಪ್ತ

ಇಂದಿಗೂ ಕನಕಾಚಲ ದೇವಾಲಯದಲ್ಲಿ ಹಾಡುವ ಮಂಗಳಾರತಿ ಪದದ ಮೊದಲ ನುಡಿಯಲ್ಲಿ "ಮಂಗಳಂ ಜಗದಂತ ರಂಗ ಭೂಪಾಲರಿಗೆ" ಎಂದು ರಂಗಪ್ಪನಾಯಕನನ್ನು ನಿರ್ದೇಶಿಸಿರುವ ಕಾರಣ ಈ ಪದದ ಕರ್ತೃವೂ ಜಯವೇಂಕಟಾಚಾರ್ಯನೇ ಆಗಿರಬಹುದು.

ಜಯ ಮಂಗಳಂ ನಿತ್ಯ ಶುಭ ಮಂಗಳಂ
ಮಂಗಳಂ ಕನಕಾದ್ರಿ ನರಸಿಂಹಗೆ॥ಜಯ ಮಂಗಳಂ॥
ಮಂಗಳಂ ಮಧು ಕೈಟಭಾಸುರಾಮರ್ದನಗೆ
ಮಂಗಳಂ ಮದನ ಕೋಟಿ ವಿಲಾಸಗೇ॥
ಮಂಗಳಂ ಜಗದಂತ ರಂಗ ಭೂಪಾಲಗೆ।
ಮಂಗಳಂ ಕನಕಾದ್ರಿ ನರಸಿಂಹಗೆ॥

ಕೆ. ಕುಶಾಲಪ್ಪ ಗೌಡ

ದ್ವಿತೀಯಾ ವಿಭಕ್ತಿ

ಆಧುನಿಕ ಭಾಷಾವಿಜ್ಞಾನಿಗಳ ಪ್ರಕಾರ ಒಂದು ಸರಳ ವಾಕ್ಯದಲ್ಲಿ ಒಂದೇ ವಿಭಕ್ತಿಯುಳ್ಳ ಎರಡು ನಾಮ ಪದಗಳು ಬರಲಾರವು. (Fillmore : The case for case ಪು. 21). ಈ ಮಾತು ಇಂಗ್ಲಿಷ್, ಕನ್ನಡ, ತಮಿಳು, ತೆಲುಗು ಅಥವಾ ಇನ್ನಾವುದೇ ಭಾಷೆಗಾದರೂ ಅನ್ವಯಿಸುತ್ತದೆ. ಇದು ಸಾರ್ವತ್ರಿಕ ಸತ್ಯವೂ ಹೌದು. ಕೆಲವೇಳೆ ನಮಗೆ ಒಂದೇ ಜಾತಿಯ ಎರಡು ವಿಭಕ್ತಿಗಳಿರುವ ವಾಕ್ಯಗಳು ಕಂಡುಬಂದರೆ ಮೇಲಿನ ಹೇಳಿಕೆ ತಪ್ಪೆಂದು ಒಮ್ಮೆಲೇ ನಿರ್ಧರಿಸಲಾಗದು. ಹಾಗೆ ಎರಡು ಸಮಾನ ವಿಭಕ್ತಿಗಳು ಒಂದು ವಾಕ್ಯದಲ್ಲಿ ಬರುವುವೆಂದಾದರೆ ಅದಕ್ಕೇನಾದರೂ ಕಾರಣಗಳಿರಬಹುದು. ಕೆಳಗೆ ಅಂಥ ಕಾರಣಗಳನ್ನು ಕೊಡಲಾಗಿದೆ:

1. ವಾಕ್ಯ ವ್ಯಾಕರಣಶುದ್ಧವಾಗಿರಲಾರದು;
2. ಮಿಶ್ರವಾಕ್ಯಗಳು (compound sentence) ಅದರಲ್ಲಿ ಅಡಕವಾಗಿರಬಹುದು. ಅಂದರೆ ವಿಶ್ಲೇಷಿಸಿ ನೋಡಿದಾಗ ಆ ಒಂದೊಂದು ವಿಭಕ್ತಿಗಳು ಒಂದೊಂದು ಸ್ವತಂತ್ರವಾದ ವಾಕ್ಯದಲ್ಲಿ ಬರುವಂಥವುಗಳಾಗಿರಬಹುದು.
3. ಅದು ಸಂಕೀರ್ಣವಾಕ್ಯ (complex sentence) ವಾಗಿದ್ದು ಎರಡರ ಪೈಕಿ ಒಂದು ವಿಭಕ್ತಿ ನಿಜವಾಗಿ ಬೇರೆಯೇ ವಿಭಕ್ತಿಯಾಗಿರಬಹುದು. ಮೇಲ್ಮೈಯಲ್ಲಿ ಮಾತ್ರ ಎರಡೂ ಒಂದೇ ಎಂದು ತೋರಬಹುದು.

ಎರಡೂ ವಿಭಕ್ತಿಗಳು ಒಂದೇ ಆಗಿರುವ ಕೆಳಗಿನ ವಾಕ್ಯಗಳನ್ನು ಗಮನಿಸೋಣ:

1. *ರಾಮನನ್ನು ಕೃಷ್ಣನನ್ನು ಆಟಕ್ಕೆ ಕರೆದೆ.[1]
2. *ಜಯಾಳನ್ನು ಸೀತೆಯನ್ನು ನೋಡಿ ಬಂದೆ.
3. *ಕಾರನ್ನು ಮನೆಯನ್ನು ಕೊಂಡುಕೊಂಡ.

–ಅನ್ನು ಎಂಬ ದ್ವಿತೀಯಾ ವಿಭಕ್ತಿ ಮೇಲಿನ ಪ್ರತಿಯೊಂದು ವಾಕ್ಯದಲ್ಲಿ ಎರಡೆರಡು ನಾಮಪದಗಳಿಗೆ ಸೇರಿದೆ. ಇವು ವ್ಯಾಕರಣಶುದ್ಧವಾಗಿಲ್ಲದ ವಾಕ್ಯಗಳೆಂದು ಕನ್ನಡ ಮಾತಾಡುವ ನಮಗೆ ಕೂಡಲೇ ತಿಳಿಯುತ್ತದೆ. ಸಮುಚ್ಚಯದ-ಊ, ಅಥವಾ 'ಮತ್ತು' ಎಂಬುವು ಈ ವಿಭಕ್ತಿಯುತ ನಾಮಪದಗಳಿಗೆ ಕ್ರಮವಾಗಿ ಸೇರಿ ಅಥವಾ ನಡುವೆ ಬಂದರೆ ವಾಕ್ಯಗಳು ವ್ಯಾಕರಣ ಶುದ್ಧವಾಗುತ್ತವೆ.

1ಎ. ರಾಮನನ್ನೂ ಕೃಷ್ಣನನ್ನೂ ಆಟಕ್ಕೆ ಕರೆದೆ; ಅಥವಾ
ರಾಮನನ್ನು ಮತ್ತು ಕೃಷ್ಣನನ್ನು ಆಟಕ್ಕೆ ಕರೆದೆ.

---

1 ವಾಕ್ಯಗಳು ವ್ಯಾಕರಣ ರೀತಿಯಲ್ಲಿ ತಪ್ಪಾಗಿದ್ದು ಬಳಕೆಯಲ್ಲಿ ಬಾರದಂಥವಾಗಿದ್ದರೆ ಅವನ್ನು * ಈ ಗುರುತಿನಿಂದ ತೋರಿಸುವುದು ಆಧುನಿಕ ಭಾಷಾ ವಿಜ್ಞಾನಿಗಳು ಬಳಸುವ ಕ್ರಮ.

2ಎ. ಜಯಾಳನ್ನೂ ಸೀತೆಯನ್ನೂ ನೋಡಿ ಬಂದೆ; ಅಥವಾ
ಜಯಾಳನ್ನು ಮತ್ತು ಸೀತೆಯನ್ನು ನೋಡಿ ಬಂದೆ.
3ಎ. ಕಾರನ್ನೂ ಮನೆಯನ್ನೂ ಕೊಂಡುಕೊಂಡ; ಅಥವಾ
ಕಾರನ್ನು ಮತ್ತು ಮನೆಯನ್ನು ಕೊಂಡುಕೊಂಡ.

1ಎ, 2ಎ, ಮತ್ತು 3ಎ. ವಾಕ್ಯಗಳು ವ್ಯಾಕರಣ ಶುದ್ಧವಾಗಿವೆ. ಆದರೆ ಅವುಗಳು ಸರಳ ವಾಕ್ಯಗಳಲ್ಲ, ಮಿಶ್ರವಾಕ್ಯಗಳು. ಎರಡೆರಡು ಸರಳವಾಕ್ಯಗಳು ಅವುಗಳಲ್ಲಿ ಅಂತರ್ಗತವಾಗಿವೆ.

1ಬಿ. ರಾಮುನನ್ನು ಆಟಕ್ಕೆ ಕರೆದೆ
1ಸಿ. ಕೃಷ್ಣನನ್ನು ಆಟಕ್ಕೆ ಕರೆದೆ
2ಬಿ. ಜಯಾಳನ್ನು ನೋಡಿ ಬಂದೆ
2ಸಿ. ಸೀತೆಯನ್ನು ನೋಡಿ ಬಂದೆ
3ಬಿ. ಕಾರನ್ನು ಕೊಂಡುಕೊಂಡ
3ಸಿ. ಮನೆಯನ್ನು ಕೊಂಡುಕೊಂಡ

ಇವುಗಳು ಆ ಮಿಶ್ರವಾಕ್ಯದಲ್ಲಿ ಬರುವ ತುಂಡುವಾಕ್ಯಗಳು. ಸಮುಚ್ಚಯದ ಮೂಲಕ ಈ ತುಂಡು ವಾಕ್ಯಗಳು ಜತೆಯಾಗಿ 1ಎ. 2ಎ. ಮತ್ತು 3ಎ. ರೂಪ ಧರಿಸಿವೆ. ಸಮುಚ್ಚಯ ರಹಿತವಾಗಿದ್ದರೆ, ಅವು ವ್ಯಾಕರಣ ವಿರುದ್ಧವಾಗುತ್ತವೆ. ಆದರೆ ಶಾಸನ ಭಾಷೆಯಲ್ಲಿ ಸಮುಚ್ಚಯ ರಹಿತವಾದ ದ್ವಿತೀಯಾ ವಿಭಕ್ತಿ ಸೇರಿರುವ ಎರಡು ನಾಮಪದಗಳಿರುವ ವಾಕ್ಯ ಪ್ರಯೋಗವಾಗಿದೆ2.

4. ...ಕವಿಲೆಯಂ ಬ್ರಾಹ್ಮಣರಂ ಕೊಂದಂ

1, 2 ಮತ್ತು 3 ವ್ಯಾಕರಣಶುದ್ಧವಲ್ಲದ ವಾಕ್ಯಗಳೆಂದು ನಾವು ಆಡುವ ಮಾತಿನ ರೂಢಿಯಿಂದ ತಿಳಿಯುತ್ತೇವೆ. ಆದರೆ ನಮ್ಮ ಪ್ರಚಲಿತ ರೂಢಿಯಿಂದ ಆ ಶಾಸನದ ವಾಕ್ಯ ತಪ್ಪೆಂದು ಒಮ್ಮೆಯೇ ತೀರ್ಮಾನಿಸುವುದು ವೈಜ್ಞಾನಿಕವಲ್ಲ. ಅದನ್ನು ವ್ಯಾಕರಣ ಶುದ್ಧವೆಂದು ಒಪ್ಪುವುದಾದರೆ ಅದಕ್ಕೆ ಕಾರಣವೇನಾದರೂ ಇರಬಹುದು. ಶಾಸನದಲ್ಲಿ ಲಿಖಿತವಾಗಿರುವುದರಿಂದ ಒಂದು ವೇಳೆ ಆ ಕಾಲದ ಕನ್ನಡದಲ್ಲಿ ಇಂತಹ ವಾಕ್ಯಗಳು ರೂಢಿಯಲ್ಲಿದ್ದರೂ ಇರಬಹುದೆಂಬ ಸಂಶಯವೂ ಬರಬಹುದು. ಒಟ್ಟಿನಲ್ಲಿ ನಮ್ಮ ವ್ಯಾಕರಣ ರೂಢಿಯಲ್ಲಿ ಇದು ಅಪರೂಪ. ಆದುದರಿಂದ ತಪ್ಪು ಎಂದು ನಮಗೆ ಕಾಣುತ್ತದೆ. ಇದನ್ನು ವಿಮರ್ಶಿಸಬೇಕು.

ಹಳಗನ್ನಡದಲ್ಲಿ ಸಮುಚ್ಚಯದ ಪ್ರಯೋಗ ದ್ವಿತೀಯಾ ವಿಭಕ್ತಿ ಪ್ರತ್ಯಯಕ್ಕಿಂತ ಪೂರ್ವಸ್ಥಾನದಲ್ಲಿ ಪ್ರಯೋಗವಾಗುತ್ತಿತ್ತು.3 ಮಿಕ್ಕ ವಿಭಕ್ತಿಗಳಿಗೆ ಪರವಾದ ಸ್ಥಾನದಲ್ಲಿ ಸಮುಚ್ಚಯ ಬರುತ್ತಿತ್ತು. (ಎ)

---

2 ಕ್ರಿ. ಶ. 11, 12, 13 ಮತ್ತು 14ನೆಯ ಶತಮಾನದಲ್ಲಿ ಕೊಡಗು, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡಗಳಲ್ಲಿ ದೊರೆಯುವ ಕನ್ನಡ ಶಾಸನಗಳ ಭಾಷೆಯನ್ನು ವಿಶ್ಲೇಷಿಸುವಲ್ಲಿ ಕಂಡು ಬರುವ ಭಾಷಾಪ್ರಕ್ರಿಯೆಯನ್ನು ಇಲ್ಲಿ ಹೇಳಲಾಗಿದೆ.

3 ಇದು ಹಳಗನ್ನಡದಲ್ಲಿ ಮಾತ್ರ ಕಂಡುಬರುವ ವೈಶಿಷ್ಟ್ಯ. ಇತರ ಯಾವ ದ್ರಾವಿಡಭಾಷೆಯಲ್ಲೂ ವಿಭಕ್ತಿ ಪ್ರತ್ಯಯದ ಪೂರ್ವಸ್ಥಾನದಲ್ಲಿ ಸಮುಚ್ಚಯ ಬರುವುದಿಲ್ಲ. ಹಳಗನ್ನಡದಲ್ಲಿ ಮಾತ್ರ ದ್ವಿತೀಯಾ ವಿಭಕ್ತಿ ಪ್ರತ್ಯಯಕ್ಕಿಂತ ಮೊದಲಿಗೆ ಸಮುಚ್ಚಯ ಬರುವುದು ದ್ರಾವಿಡ ಭಾಷೆಗಳ ಸಾಮಾನ್ಯ ಪದ್ಧತಿಗೆ ವಿರೋಧವಾಗಿದೆ. ಹೊಸಗನ್ನಡದಲ್ಲಿ ಸಮುಚ್ಚಯ ಪ್ರತ್ಯಯ, ದ್ವಿತೀಯಾವಿಭಕ್ತಿ ಸೇರಿದಂತೆ ಎಲ್ಲಾ ವಿಭಕ್ತಿಗಳ ನಂತರದ ಸ್ಥಾನದಲ್ಲಿಯೇ ಬರುತ್ತದೆ. ಹೀಗಿರುವುದರಿಂದ ಇತರ ದ್ರಾವಿಡ ಭಾಷಾ ಪದ್ಧತಿಗೂ ಕನ್ನಡದಲ್ಲಿಯೂ ಇತರ ವಿಭಕ್ತಿಗಳ ಮತ್ತು ಸಮುಚ್ಚಯದ ಸಂಬಂಧಕ್ಕೂ ಅನುಗುಣವಾದ ಪ್ರಯೋಗವೇ ಬಳಕೆಯಲ್ಲಿ ಬಂದಂತಾಯ್ತು.

ಎರಡು ದ್ವಿತೀಯಾ ವಿಭಕ್ತಿಗಳಿರುವ ವಾಕ್ಯದಲ್ಲಿ ಸಮುಚ್ಚಯದ, (ಬಿ) ಒಂದೇ ದ್ವಿತೀಯಾ ಪ್ರತ್ಯಯವಿರುವಲ್ಲಿ ಅವಧಾರಣೆಯ ಸಲುವಾಗಿ ಇದು ಬರುತ್ತಿತ್ತು. ಈ ಪ್ರಕ್ರಿಯೆಗಳಿಗೆ ಕೇಶಿರಾಜನ ಉದಾಹರಣೆಗಳನ್ನು ನೋಡಬಹುದು.

5. ಒಂದೆಡೆಯೊಳ್ ಕಟ್ಟುವುದೆ ಪುಲಿಯುಮಂ ಕವಿಲೆಯುಮಂ?
6. ಅವರುಮನಂತಕನೊರ್ಮೆಯೆ ಸವಿನೋಡಲ್

ಎಂಬುವು ಮೇಲೆ ಹೇಳಿದ ಎ. ಮತ್ತು ಬಿ.ಗಳಿಗೆ ಉದಾಹರಣೆಗಳು. ಇನ್ನು ವಿಭಕ್ತಿ ಪ್ರತ್ಯಯಾನಂತರ ಬರುವ ಸಮುಚ್ಚಯಗಳ ಉದಾಹರಣೆಯಾಗಿ ಕೆಳಗಿನ ವಾಕ್ಯಗಳನ್ನು ಕೇಶಿರಾಜ ಕೊಟ್ಟಿದ್ದಾನೆ.

7. ನರನುಂ ನರ ನಂದನನುಂ (ಪ್ರಥಮಾ ವಿಭಕ್ತಿಯ ನಂತರ)
8. ಕಾಲಿಂದೆಯುಂ ಕೈಯಿಂದೆಯುಂ (ದ್ವಿತೀಯಾ ವಿಭಕ್ತಿಯ ನಂತರ)
9. ವಂಚಿಸುವುದವಂಗೆಯುಂ ನಿನಗೆಯುಂ ಸರಿ ಬಿಡಿಸಲ್ ಬರ್ಕುಮೆ?(ಚತುರ್ಥೀ ವಿಭಕ್ತಿಯ ನಂತರ)
10. ಅಲ್ಲಿಯುಂ ಇಲ್ಲಿಯುಂ ಎಲ್ಲಿಯುಂ ನರಂ (ಸಪ್ತಮೀ ವಿಭಕ್ತಿಯ ನಂತರ)

ಪಂಚಮಿಗೆ ಉದಾಹರಣೆಯನ್ನು ಕೊಟ್ಟಿಲ್ಲ. ಅದು ತೃತೀಯೆಗೆ ಸಮವೆಂಬ ಕಾರಣದಿಂದಾಗಿರಬಹುದು. ಇವುಗಳ ಹೋಲಿಕೆಯಿಂದ ನೋಡಿದಾಗ, 4ನೆಯದು ಶಾಸನಗಳಲ್ಲಿ ಸಾಮಾನ್ಯವಾಗಿ ಬರುವ ರೂಪಾಂತರ ವಾಕ್ಯ (deviational sentence) ವಾಗಿರಬಹುದೆಂದು ನಾವು ತಿಳಿಯಬೇಕಾಗುತ್ತದೆ. ಈ ತೀರ್ಮಾನಕ್ಕೆ ಪುಷ್ಟಿಕೊಡುವಂತೆ ಇನ್ನೊಂದು ಶಾಸನದಲ್ಲಿ ಕೆಳಗೆ ಕೊಟ್ಟಿರುವ ವಾಕ್ಯ ದೊರೆಯುತ್ತದೆ.

11. ಅವಂ ಬಾಣರಾಸಿಯಲಿ ಹಸುವುಂ ಹಾರುವರಂ ಕೊಂದ...

ಮೇಲಿನ ವಾಕ್ಯದಲ್ಲಿ ಹಸು ಮತ್ತು ಹಾರುವ ಎಂಬೆರಡು ಪದಗಳೂ ಕರ್ಮ ಪದಗಳಾಗಿವೆ. ಆದರೆ ಒಂದರಲ್ಲಿ ಸಮುಚ್ಚಯ ಪ್ರತ್ಯಯ ಮಾತ್ರವಿದೆ; ವಿಭಕ್ತಿ ಪ್ರತ್ಯಯವಿಲ್ಲ. ಇನ್ನೊಂದರಲ್ಲಿ ವಿಭಕ್ತಿ ಪ್ರತ್ಯಯವಿದೆ, ಸಮುಚ್ಚಯ ಪ್ರತ್ಯಯವಿಲ್ಲ. ಈ ಎರಡು ಕರ್ಮ ಪದಗಳ ಬಾಹ್ಯ ರಚನೆ:

ನಾಮ ಪದ + ಸಮುಚ್ಚಯ + (   )
ನಾಮಪದ + (   ) + ದ್ವಿತೀಯಾ ಪ್ರತ್ಯಯ

ಎಂದಿದೆ. ಕಂಸದೊಳಗೆ ಪದದ ಶುದ್ಧರೂಪದಲ್ಲಿ ಬರಬಹುದಾದ, ಆದರೆ ಮೇಲ್ಮೈಯಲ್ಲಿ ಕಾಣದ ಅವ್ಯಕ್ತ ರೂಪವನ್ನು ಗುರುತಿಸಲಾಗಿದೆ. ಅಂತೂ ಮೂಲತಃ4 ಮತ್ತು 11ನೆಯ ವಾಕ್ಯಗಳಲ್ಲಿ ಸಮುಚ್ಚಯಕ್ಕೆ ನಿರ್ದಿಷ್ಟ ಸ್ಥಾನವಿತ್ತು–ಎಂದು ತಿಳಿಯಲು ಆದುದರಿಂದ 4 ಮತ್ತು 11ನೆಯ ವಾಕ್ಯಗಳು ಸಹಜವಾಗಿ:

4ಎ. ಕವಿಲೆ(ಯುಮ್)ಅಂ ಬ್ರಾಹ್ಮಣರ್(ಉಂ)ಅಂ ಕೊಂದಂ...

11ಎ. ಅವಂ ಬಾಣರಾಸಿಯಲಿ ಹಸುವುಮ್(ಅಂ) ಹಾರುವರ್(ಉಂ) ಅಂ ಕೊಂದ...

ಎಂದಿರಬೇಕೆಂಬುದಾಗಿ ನಿರ್ಧರಿಸಬೇಕಾಗುತ್ತದೆ. ಈ ಕಾರಣದಿಂದಾಗಿ 4 ಮತ್ತು 11ನೆಯ ವಾಕ್ಯಗಳು ಮೇಲ್ಮೈಯಲ್ಲಿ ತಪ್ಪೆಂದು ಕಂಡರೂ ಅಂತರಾಳ ಸ್ತರದಲ್ಲಿ ತಪ್ಪಲ್ಲ. ಮೇಲೆ ಕಂಡಂತಹ ರೂಪಗಳು ಶಾಸನಗಳಲ್ಲಿ ಕಂಡು ಬರುವ ರೂಪಾಂತರ ವಾಕ್ಯಗಳೆಂದೂ,ಶಾಸನಭಾಷೆಯಲ್ಲಿ ಇದೇನೂ ಅಪೂರ್ವವಲ್ಲವೆಂದೂ ತಿಳಿಯಬೇಕು.

ಕೆಲವು ವೇಳೆ ಈ ಕೆಳಗೆ ಕೊಟ್ಟಂತಹ ವಾಕ್ಯಗಳನ್ನು ನಾವು ಕಾಣಬಹುದು:

12. ನಾನು ಮಗುವನ್ನು ಹಾಲು ಕುಡಿಸಿದೆ; ಅಥವಾ

12ಎ. ನಾನು ಮಗುವನ್ನು ಹಾಲನ್ನು ಕುಡಿಸಿದೆ.

13. ನಾನು ಮಗುವನ್ನು ಸ್ನಾನ ಮಾಡಿಸಿದೆ; ಅಥವಾ
13ಎ. ನಾನು ಮಗುವನ್ನು ಸ್ನಾನವನ್ನು ಮಾಡಿಸಿದೆ.

ಮೇಲಿನ ವಾಕ್ಯಗಳಲ್ಲಿ ಎರಡೆರಡು ಕರ್ಮಪದಗಳಿರುವುದರಿಂದ, ಮೊದಲು ಹೇಳಿದ ನಿಯಮಾನುಸಾರ ಈ ವಾಕ್ಯಗಳು ವ್ಯಾಕರಣದೂಷ್ಯವಾಗಿರಬೇಕು. ಆದರೆ ಹಾಗಿಲ್ಲ. ಹಾಗಿಲ್ಲದಿರುವುದರಿಂದ ಮೇಲೆ ಹೇಳಿದ ನಿಯಮ ತಪ್ಪೇ ಎಂದರೆ ಅದೂ ಅಲ್ಲ. ಹೀಗಾಗಿ ಕಾರಣವನ್ನು ಕಂಡು ಹಿಡಿಯಬೇಕು. ಒಂದು ತರದ ಸುಲಭ ವಿವರಣೆಯೆಂದರೆ, ಹಾಲುಕುಡಿ, ಸ್ನಾನಮಾಡು ಎಂಬುದನ್ನು ಒಂದೇ ಕ್ರಿಯಾಘಟಕವೆಂದು ವಿಶ್ಲೇಷಿಸುವುದು. ಕನ್ನಡದಲ್ಲಿ ಸಹಾಯಕ ಕ್ರಿಯಾಪದಗಳ (Auxiliary verbs) ವಾಕ್ಯರಚನೆಯಾಗುವ ಹಲವು ಸಂದರ್ಭಗಳಿವೆ. ಉದಾ: ಕೊಂಡುಕೊಂಡೆ; ಬಂದಿದ್ದೆ ಇತ್ಯಾದಿ. ಇಲ್ಲಿ ಕೊಳ್ ಮತ್ತು ಇರ್ ಧಾತುಗಳು ಕೊಂಡು, ಬಂದು ಎಂಬ ಕೃದ್ವಾಚಿ ಪದಗಳಿಗೆ ಸೇರಿದ ಸಹಾಯಕ ಕ್ರಿಯಾಪದಗಳಾಗಿವೆ. ಈ ತರ ಹಾಲುಕುಡಿ(12), ಸ್ನಾನಮಾಡು(13) ಎಂಬವುಗಳನ್ನು ವಿಶ್ಲೇಷಿಸುವುದು ಲಾಭದಾಯಕವಲ್ಲ. ಕಾರಣ, ನಾಮ + ಕ್ರಿಯಾಪದಗಳಿಂದ ಕೂಡಿದ ಅಸಂಖ್ಯಾತ ಉದಾಹರಣೆಗಳು ನಮಗೆ ದೊರೆಯುತ್ತವೆ ಉದಾ: ಊಟ ಮಾಡು, ಪುಸ್ತಕ ಓದು, ಕಥೆಹೇಳು ಇತ್ಯಾದಿ. ಇವೆಲ್ಲವುಗಳನ್ನು ಸಹಾಯಕ ಕ್ರಿಯಾರಚನೆಯಿಂದಾದುವೆಂದು ಹೇಳಲಿಕ್ಕಾಗುವುದಿಲ್ಲ. ನಪುಂಸಕಲಿಂಗವಾಚಿ ಪದಗಳಿಗೆ ದ್ವಿತೀಯಾವಿಭಕ್ತಿ ಪ್ರತ್ಯಯ, ಕನ್ನಡ ಹಾಗೂ ಇತರ ದ್ರಾವಿಡ ಭಾಷೆಗಳಲ್ಲಿ ವಿಕಲ್ಪವಾಗಿ ಸೇರುವುದು ನಮಗೆ ತಿಳಿದ ವಿಷಯ.

14. ನಾನು ಕಥೆ ಬರೆದೆ
15. ಅವನು ಅಂಗಿ ಹಾಕಿದ

ಎಂಬುದನ್ನು ವ್ಯಾಕರಣಶುದ್ಧವಾಗಿರಬೇಕು ಎಂದು ತಿಳಿದುಕೊಂಡು ನಾನು ಕಥೆಯನ್ನು ಬರೆದೆ, ಅವನು ಅಂಗಿಯನ್ನು ಹಾಕಿದ ಎಂದು ಹೇಳಲೇ ಬೇಕೆಂಬ ನಿಯಮ ನಮ್ಮ ವ್ಯಾಕರಣ ಪದ್ಧತಿಯಲ್ಲಿಲ್ಲ. ಹಾಗೆ ಹೇಳಿದರೆ ಕೃತಕವಾಗಿ ಕಾಣುತ್ತದೆ. 12ಎ. ಮತ್ತು 13ಎ.ಗಳಲ್ಲಿ ದ್ವಿತೀಯಾ ವಿಭಕ್ತಿಯ ಪ್ರತ್ಯಯವನ್ನು ವ್ಯಕ್ತವಾಗಿ ಹೇಳಲಾಗಿದೆ. ಹಾಲು, ಸ್ನಾನ, ಕಥೆ, ಅಂಗಿ ಮುಂತಾದ ಪದಗಳನ್ನು ಕ್ರಿಯಾಪದದ ಒಂದು ಭಾಗವೆಂದು ತೆಗೆದುಕೊಳ್ಳಲು ಸಾಧ್ಯವಿಲ್ಲ. ಸಾಪೇಕ್ಷರೂಪಕ್ಕೆ (Relative form) ಈ ವಾಕ್ಯಗಳನ್ನು ಪರಿವರ್ತಿಸಿದರೆ ಇದು ಮುಂದಟ್ಟಾಗುತ್ತದೆ.

16. ನಾನು ಮಗುವನ್ನು ಕುಡಿಸಿದ ಹಾಲು ಸಿಹಿಯಾಗಿತ್ತು
17. ನಾನು ಮಗುವನ್ನು ಮಾಡಿಸಿದ ಸ್ನಾನ ಬೆಚ್ಚಗಿತ್ತು

ಹಾಲು ಕುಡಿಸು, ಸ್ನಾನಮಾಡಿಸು ಎಂಬವುಗಳನ್ನು ಸುಲಭವಾಗಿ ಸಾಪೇಕ್ಷ್ಯ ರೂಪಕ್ಕೆ ತಿರುಗಿಸಲು ಸಾಧ್ಯವಿದೆ. ಹಾಗೆ ಮಾಡುವುದರಿಂದ ಅರ್ಥ ವ್ಯತ್ಯಾಸವಾಗಲೀ, ಅಸ್ವೀಕೃತ ರೂಪವಾಗಲೀ ಆಗುವುದಿಲ್ಲ. ಆದರೆ ಈ ಪರಿವರ್ತನೆ ಕೆಳಗೆ ಕೊಟ್ಟ ವಾಕ್ಯಗಳಲ್ಲಿ ನಡೆಯದು.

18. ನಾನು ಪುಸ್ತಕ ಕೊಂಡುಕೊಂಡೆ
19. ಅವನು ಬಂದಿದ್ದ

ಕೊಳ್ ಮತ್ತು ಇರ್ (ಕೊಂಡೆ,–ಇದ್ದ ಎಂಬ ಕ್ರಿಯಾಪದಗಳು) ಸಹಾಯಕ ಕ್ರಿಯೆಗಳಾಗಿ 18 ಮತ್ತು 19ರಲ್ಲಿ ಬರುತ್ತವೆ. ಇವುಗಳನ್ನು *ಕೊಂಡ ಕೊಂಡು *ಇದ್ದ ಬಂದು ಎಂಬ ಸಾಪೇಕ್ಷ್ಯ ರೂಪಗಳಿಗೆ ಪರಿವರ್ತನೆ ಮಾಡಲು ಸಾಧ್ಯವಿಲ್ಲ. ಆದುದರಿಂದ ಹಾಲು ಕುಡಿಸು, ಸ್ನಾನ ಮಾಡಿಸು ಎಂಬವುಗಳು ಸಹಾಯಕ ಕ್ರಿಯಾಪದಗಳಲ್ಲ. ದ್ವಿತೀಯಾ ವಿಭಕ್ತಿ ಪ್ರತ್ಯಯವಿರುವ ಕರ್ಮಪದ ಮತ್ತು ಕ್ರಿಯಾಪದವಿರುವ ವಾಕ್ಯ ಭಾಗಗಳೆಂದು ತಿಳಿಯಬೇಕು.

ಈಗ ಎರಡು ಕರ್ಮಪದಗಳು ಈ ವಾಕ್ಯದಲ್ಲಿರುವುದರಿಂದ ಮೊದಲು ಹೇಳಿದ ಏಕಜಾತೀಯ ವಿಭಕ್ತಿಗಳು ಒಂದೇ ಸರಳವಾಕ್ಯದಲ್ಲಿ ಬರಲಾರವೆಂದು ಹೇಳಿದ ಮಾತು ಸರಿಯೇ ಎಂಬ ಸಂದೇಹ

ಬರಬಹುದು. ಆದರೆ ಕೂಲಂಕಷ ವಿಮರ್ಶೆಮಾಡಿ ನೋಡಿದಾಗ 12, 12ಎ, 13 ಮತ್ತು 13ಎ.ಯಲ್ಲಿ ಬರುವ ಮಗುವನ್ನು ಎಂಬುದು ಕರ್ಮಪದವಲ್ಲವೆಂದೂ, ಈ ವಾಕ್ಯ ಎರಡು ಭಿನ್ನ ವಿಭಕ್ತಿಗಳಿರುವ ಸಂಕೀರ್ಣವಾಕ್ಯಗಳೆಂದೂ ತಿಳಿದು ಬರುವುದು.

–ಇಸು ಎಂಬ ಪ್ರೇರಣಾರ್ಥಕವು ಈಗ ಪ್ರತ್ಯಯ ರೂಪದಲ್ಲಿದ್ದರೂ, ಅದನ್ನು ಒಂದು ಕ್ರಿಯಾಪದವೇ ಎಂದು ಪರಿಗಣಿಸಬೇಕಾಗುತ್ತದೆ. ಕನ್ನಡದಲ್ಲಿ ಮತ್ತು ತೆಲುಗಿನಲ್ಲಿ ಇದು ಪ್ರತ್ಯಯರೂಪದಲ್ಲಿಯೇ ಇದೆ. ಇಂಗ್ಲಿಷಿನಂತೆ ತಮಿಳಿನಲ್ಲಿ ಈಗಲೂ ಸ್ವತಂತ್ರ ಕ್ರಿಯಾಪದವನ್ನೇ ಪ್ರೇರಣಾರ್ಥದಲ್ಲಿ ಉಪಯೋಗಿಸುತ್ತಾರೆ. ಉದಾ: I made him run (ಇಂಗ್ಲಿಷ್) 'ನಾನ್ ಅವನೆ ಓಡ ವೈತ್ತೇನ್ (ತಮಿಳು) ='ನಾನು ಅವನನ್ನು ಓಡಲು ಮಾಡಿದೆ' ಇಟ್ಟೆ ಎಂಬಲ್ಲಿ **made**, ವೈ (ಮಾಡು, ಇಡು) ಎಂಬವುಗಳು ಸ್ವತಂತ್ರ ಕ್ರಿಯಾಪದಗಳು. ಕನ್ನಡದಲ್ಲಿಯ ಉ ಹೋಗಲಿ, ಬರಲಿ, ಎಂಬ ಪ್ರಥಮ ಪುರುಷ ವಿಧ್ಯರ್ಥಕ ಕ್ರಿಯೆಯಲ್ಲಿಯೂ ತೋರಿಕೆಗೆ ಒಂದೇ ಕ್ರಿಯಾಧಾತುವಿದೆಯಾದರೂ, ಸಹಜವಾಗಿ ಅದು ಹೋಗಲ್ + ಈ ಎಂಬ ಎರಡು ಧಾತುಗಳು ಸೇರಿದ ಸಂಯುಕ್ತ ಕ್ರಿಯಾಪದವಾಗಿದೆ. ಹೋಗಲಿ ಎಂಬುದು ಹೋಗು ಎಂಬುದರ ಸತಿಸಪ್ತಮಿ ರೂಪ (Infintive), ಈ ಎಂದರೆ ಕೊಡು, ಬಿಡು ಎಂಬರ್ಥದ ವಿಧ್ಯರ್ಥಕ ರೂಪ. ಪ್ರೇರಣಾರ್ಥಕ ಕ್ರಿಯಾಪ್ರತ್ಯಯವೂ, ಇದೇ ತರ ಸ್ವತಂತ್ರಧಾತುವಾಗಿದ್ದುದು, ಈಗ ಪ್ರತ್ಯಯವಾಗಿ ರೂಪಾಂತರ ಹೊಂದಿರಬಹುದು. ಹೇಗಿದ್ದರೂ ಪ್ರೇರಣಾರ್ಥಕ ಕ್ರಿಯೆ ಪ್ರತ್ಯಯ ರೂಪದಲ್ಲಿದ್ದರೂ ಈ ವಿಶ್ಲೇಷಣೆಯ ಬಗ್ಗೆ ಅದನ್ನು ಸ್ವತಂತ್ರ ಕ್ರಿಯಾಪದವೇ ಎಂದಿಟ್ಟುಕೊಳ್ಳಬೇಕಾಗುತ್ತದೆ. ಹಾಲು ಕುಡಿಸು, ಸ್ನಾನ ಮಾಡಿಸು ಎಂಬ 12 ಮತ್ತು 13ನೆಯ ವಾಕ್ಯಗಳು ಸಂಕೀರ್ಣ ವಾಕ್ಯಗಳು. ಮಗುವನ್ನು ಎಂಬುದು ಕರ್ಮಕಾರಕದಲ್ಲಿಲ್ಲ. ಅದು ಹಾಲು ಕುಡಿ, ಸ್ನಾನಮಾಡು ಎಂಬುದರ ಕರ್ತೃ ರೂಪ ಎಂಬುದು ನಿಶ್ಚಯ. ಅದು ಮೇಲ್ಮೈಯ ತೋರಿಕೆಯಲ್ಲಿ ಕರ್ಮವೆಂದು ಕಂಡರೂ, ಅಂತರಾಳ ಸ್ತರದಲ್ಲಿ (Deep structure) ಅದು ಒಂದು ಅಂತರ್ಗತವಾಕ್ಯದ ಕರ್ತೃ ಪದವಾಗಿದೆ. ಹಾಲನ್ನು ಕುಡಿ ಎಂಬ ಅಂತರಾಳದ ಆಖ್ಯಾತವು ಪ್ರೇರಣಾರ್ಥದ ಕ್ರಿಯೆಯೊಡನೆ ಆಖ್ಯಾತೋತ್ಥಾನ (Predicate raising) ಕ್ರಿಯೆಯಿಂದ ಲೀನವಾಗುತ್ತದೆ. ಕರ್ತೃಪದವಾಗಿದ್ದ ಮಗು ಎಂಬುದು, ಕರ್ಮಪದ ಗೊಣಸಿನ (Object node) ಕೆಳಗಿದ್ದುದು ಮೇಲೆ ಹೇಳಿದ ಪ್ರಕ್ರಿಯೆಯಿಂದಾಗಿ, ಮೇಲ್ಮೈಯಲ್ಲಿ ಕರ್ಮಪದವಾಗಿ ಮಾರ್ಪಡುತ್ತದೆ. ಪ್ರಕ್ರಿಯೆಯನ್ನು ಕೆಳಗಿನ ನಕ್ಷೆಯಲ್ಲಿ ಕಾಣಿಸಲಾಗಿದೆ.



ಹೀಗೆ ಆಖ್ಯಾತೋತ್ಥಾನದ ಪರಿಣಾಮವಾಗಿ ಮಗು ಎಂಬ ಕರ್ತೃ ಪದವೂ, ಹಾಲು ಎಂಬ ಸಹಜ ಕರ್ಮಪದವೂ ಒಂದೇ ತರದ ವಿಭಕ್ತಿಯನ್ನು ಮೇಲ್ಮೈಯ ಪದರಿನಲ್ಲಿ ಪಡೆದು ಅವೆರಡೂ ಒಂದೇ ಎಂಬ ಭ್ರಮೆಯನ್ನಾಗಿಸುತ್ತವೆ.

ಕೇಶಿರಾಜ ಶಬ್ದಮಣಿದರ್ಪಣದ 146ನೇ ಸೂತ್ರದಲ್ಲಿ ವಿಭಕ್ತಿಪಲ್ಲಟವನ್ನು ಹೇಳುವಾಗ ದ್ವಿಕರ್ಮಕವಾಗಿ ಕಾಣುವ ಈ ವಾಕ್ಯಗಳನ್ನು ಉದಾಹರಣೆಯಾಗಿ ಕೊಡುತ್ತಾನೆ.

20. ದೇವರಂ ಪೂವನರ್ಚಿಸಿದಂ
21. ಪೊನ್ನಂ ಬಡ್ಡಿಯಂ ಕೊಟ್ಟಂ
22. ಮಾಣವಕನಂ ಕಾರ್ಯಮಂ ಬೆಸಗೊಂಡಂ

ಮೇಲಿನ ಮೂರು ವಾಕ್ಯಗಳಲ್ಲಿ ಪ್ರತಿಯೊಂದರಲ್ಲಿಯೂ ಎರಡೆರಡು ದ್ವಿತೀಯಾ ವಿಭಕ್ತಿಗಳಿರುವ ಪದಗಳಿವೆ. ದೇವರಂ–ಪೂವಂ; ಪೊನ್ನಂ–ಬಡ್ಡಿಯಂ; ಮಾಣವಕನಂ–ಕಾರ್ಯಮಂ. ಕೇಶಿರಾಜನು ಇವೆರಡೂ ಮೂಲತಃ ಒಂದೇ ಜಾತಿಯ ವಿಭಕ್ತಿಗಳಲ್ಲವೆಂದು ಹೇಳಿರುವುದು ಸಂತೋಷದಾಯಕವಾದ ಸಂಗತಿ: ಆದರೆ ಅವನು ಅದಕ್ಕೆ ವಾಕ್ಯ ವಿಶ್ಲೇಷಣೆಯನುಸಾರ ಕಾರಣವನ್ನೇನೂ ಹೇಳದಿರುವುದೊಂದೆ ಕೊರತೆ. ಕೇಶಿರಾಜನ ಪ್ರಕಾರ 20ನೆಯ ವಾಕ್ಯ,

20ಎ. ದೇವರಂ ಪೂವಿಂದರ್ಚಿಸಿದಂ

ಎಂಬುದರಿಂದ ವ್ಯುತ್ಪನ್ನವಾದುದು. ಆದರೆ ಇದು ಹೇಗೆ ಸಾಧಿಸಿತು? ಎಂಬುದನ್ನು ಪರಿಶೀಲಿಸಬೇಕು. (1) ಪ್ರಶ್ನೆ. (2) ಸಾಪೇಕ್ಷ್ಯ ಪರಿವರ್ತನೆ (Relativizing transformation) ಗಳಿಂದ ದೇವರಂ ಮತ್ತು ಪೂವಂ ಎಂಬವು ಭಿನ್ನ ಭಿನ್ನ ವಿಭಕ್ತಿಗೆಳೆಂದು ತಿಳಿದುಕೊಳ್ಳಬಹುದು.

(1) ಪ್ರಶ್ನಾರ್ಥಕ ಪರಿವರ್ತನೆ:

ಆರಂ ಅರ್ಚಿಸಿದಂ? ಎಂಬ ಪ್ರಶ್ನೆಗೆ–20ಬಿ. ದೇವರಂ ಅರ್ಚಿಸಿದಂ ಎಂಬ ಉತ್ತರ ಬರುತ್ತದೆ. ಇದು ಆಕ್ಷೇಪಣಾರ್ಹ ವಾಕ್ಯವಲ್ಲ. ಅದೇ ರೀತಿಯ ಪ್ರಶ್ನೆಯಾಗಿ–
ಆವುದಂ ಅರ್ಚಿಸಿದಂ–ಎಂದರೆ 20ಸಿ. *ಪೂವಂ ಅರ್ಚಿಸಿದಂ–ಎಂದು ಬರುವ ಉತ್ತರ ಸ್ವೀಕಾರಾರ್ಹವಲ್ಲ. ಎರಡೂ ಪದಗಳೂ ದ್ವಿತೀಯಾ ಅಂದರೆ ಕರ್ಮಕಾರಕದಲ್ಲಿದ್ದಿದ್ದರೆ ಮೇಲಿನ ಪ್ರಶ್ನಾರ್ಥಕ ಪರಿವರ್ತನೆಗೆ ದೊರೆಯುವ ಎರಡೂ ಉತ್ತರಗಳು ಸ್ವೀಕಾರಾರ್ಹವಾಗಿದ್ದಿರಬೇಕಿತ್ತು. ಹಾಗಿಲ್ಲವಾದುದರಿಂದ ಅವೆರಡೂ ದ್ವಿತೀಯಾ ವಿಭಕ್ತಿಯಲ್ಲಿ ಸಹಜವಾಗಿಲ್ಲ. ಎರಡೂ ಭಿನ್ನಕಾರಕ ಸಂಬಂಧದಲ್ಲಿವೆಯೆಂದು ಸ್ಪಷ್ಟವಾಗುತ್ತದೆ.

(2) ಸಾಪೇಕ್ಷ್ಯ ಪರಿವರ್ತನೆ:

ಈ ಪರಿವರ್ತನೆಯಿಂದ ನಮಗೆ ಸಿದ್ಧಿಸುವ ರೂಪಗಳು:

20ಡಿ. ದೇವರಂ ಅರ್ಚಿಸಿದ ಪೂ
20ಇ. *ಪೂವನರ್ಚಿಸಿದ ದೇವರ್

20ಡಿ. ಸ್ವೀಕಾರಾರ್ಹ ವಾಕ್ಯ. ಹಾಗೆಯೇ 20ಇ. ಸ್ವೀಕಾರಯೋಗ್ಯವಲ್ಲ. ದೇವರಂ ಮತ್ತು ಪೂವಂ ಎಂಬ ಪದಗಳಿಗೆ, ಇನ್ನೂ ಒಂದೇ ತರದ ಪ್ರಶ್ನೆ ಹಾಕಬಹುದು. ಯಾವುದರಿಂದ ಅರ್ಚಿಸಿದ ಎಂಬ ಪ್ರಶ್ನೆಗೆ ಕೆಳಗಿನ ಉತ್ತರಗಳು ಸಿಗುತ್ತವೆ:

20ಎಫ್. ಪೂವಿಂದಂ ಅರ್ಚಿಸಿದಂ
20ಜಿ. *ದೇವರಿಂ ಅರ್ಚಿಸಿದಂ

ದೇವರಂ ಮತ್ತು ಪೂವಂ ಎಂಬೆರಡು ಪದಗಳು ಮೇಲ್ಮೈಯಲ್ಲಿ ದ್ವಿತೀಯಾ ವಿಭಕ್ತಿ ಪ್ರತ್ಯಯ ಸಹಿತವಾಗಿದ್ದರೂ, ಅವೆರಡೂ ಅಂತರಾಳ

ಸ್ವರದಲ್ಲಿ ಭಿನ್ನ ಭಿನ್ನ ಕಾರಕ ಪ್ರಕ್ರಿಯೆಗಳನ್ನೊಳಗೊಂಡಿವೆಯೆಂದು ಸ್ಪಷ್ಟವಾಗುತ್ತದೆ. ಕೇಶಿರಾಜನೂ ಇದನ್ನು ಹೇಳಿದ್ದಾನೆ. ಆದರೆ ಯಾವ ಕಾರಣದಿಂದ ಹಾಗಾಗುತ್ತದೆಯೆಂದು ಸ್ಪಷ್ಟ ಪಡಿಸಿಲ್ಲ, ಅಷ್ಟೆ.

ಈಗ 21ನೇ ವಾಕ್ಯವನ್ನು ಪರಿಶೀಲಿಸೋಣ. ತೋರಿಕೆಗೆ ಇದು 1, 2 ಮತ್ತು 3ನೆಯ ವಾಕ್ಯಗಳಂತೆ ವ್ಯಾಕರಣಶುದ್ಧವಾಗಿಲ್ಲದ ವಾಕ್ಯಗಳೆಂದು ಕಾಣಬಹುದು. 4ನೆಯ ವಾಕ್ಯದಂತೆ ಸಂಕೀರ್ಣವಾಗಿಯೂ ತೋರಬಹುದು. –ಏನಂ–ಏಕೆ ಎಂಬ ಪ್ರಶ್ನಾರ್ಥಕ ಪರಿವರ್ತನೆಯಿಂದ ನಮಗೆ ಇವೆರಡು ಭಿನ್ನ ಕಾರಕ ಗಳೆಂದು ತೋರಲಾರದು. ಈ ಪ್ರಶ್ನೆಗೆ ಪೊನ್ನಂ ಕೊಟ್ಟಂ, ಬಡ್ಡಿಯಂ ಕೊಟ್ಟಂ, ಪೊನ್ಗೆ ಬಡ್ಡಿಯಂ ಕೊಟ್ಟಂ, ಮತ್ತು ಬಡ್ಡಿಗೆ ಪೊನ್ನಂ ಕೊಟ್ಟಂ ಎಂಬ ಉತ್ತರಗಳು ದೊರೆಯುತ್ತವೆ. ಅವೆಲ್ಲವೂ ಸ್ವೀಕಾರಾರ್ಹ ವಾಗಿಯೂ ಇವೆ. ಪ್ರತಿಷೇಧಕ ಮತ್ತು ಸಾಪೇಕ್ಷ್ಯಪರಿವರ್ತನೆಗಳೆರಡನ್ನೂ ಸಂಯೋಜಿಸಿದಾಗ ಮಾತ್ರ ಇವು ಭಿನ್ನ ಕಾರಕ ಸಂಬಂಧದಲ್ಲಿವೆಯೆಂದು ತಿಳಿದು ಬರುತ್ತದೆ.

21ಎ. *ಪೊನ್ನಿಗೆ ಕೊಟ್ಟ ಬಡ್ಡಿ ಬರಲಿಲ್ಲ

21ಬಿ. ಬಡ್ಡಿಗೆ ಕೊಟ್ಟ ಪೊನ್ ಬರಲಿಲ್ಲ.

21ಎ. ಸ್ವೀಕಾರಾರ್ಹ ವಾಕ್ಯವಾಗಿಲ್ಲ. ಕಾರಣ ಕೊಟ್ಟ ಎಂಬ ಭೂತಕೃದ್ವಾಚಿಯಿಂದ ಬಡ್ಡಿಯನ್ನು ಆಗಲೇ ಕೊಟ್ಟಾಗಿದೆ ಎಂದು ತಿಳಿಯುತ್ತದೆ. ಅದು ಬರಲಿಲ್ಲ ಎಂದರೆ ಅರ್ಥ ವಿಪರೀತವಾಗುತ್ತದೆ. 21ಬಿ ಹಾಗಲ್ಲ. ಬಡ್ಡಿಯನ್ನು ಪಡೆಯುವುದಕ್ಕೋಸ್ಕರ ಯಾರೋ ಹಣಕೊಟ್ಟಿದ್ದಾರೆ. ಅವನಿಗೆ ಆ ಹಣ ಅಂದರೆ. ಅಸಲು ಹಣ ಬಂದಿಲ್ಲ; ಬಡ್ಡಿ ಈ ಮೊದಲೇ ಬಂದಿರಬೇಕು ಎಂದು ಅರ್ಥವಾಗುತ್ತದೆ. ಅರ್ಥಕ್ಕೆ ಭಂಗ ಬಂದಿಲ್ಲವಾದುದರಿಂದ ಈ ವಾಕ್ಯ ಸ್ವೀಕಾರಾರ್ಹ. ಈ ಕಾರಣದಿಂದ ಪೊನ್ನಂ– ಬಡ್ಡಿಯಂ ಎಂಬ ಪದಗಳು ಭಿನ್ನ ಕಾರಕಗಳೆಂದು ತಿಳಿಯುತ್ತದೆ. ಅದೂ ಅಲ್ಲದೆ ಇವೆರಡರ ವ್ಯತ್ಯಾಸವನ್ನು ಇನ್ನೊಂದು ವಾಕ್ಯರೂಪದಿಂದಲೂ ತಿಳಿಯಬಹುದು.

21ಸಿ. ಆ ಪೊನ್ನಂ ಬಡ್ಡಿಗೆ ಕೊಟ್ಟಂ

21ಡಿ. *ಆ ಬಡ್ಡಿಯಂ ಪೊನ್ಗೆ ಕೊಟ್ಟಂ

21ಡಿ.ಯಲ್ಲಿ ಅರ್ಥಭಂಗವಾಗುತ್ತದೆ–ಹೊನ್ನಿಗಾಗಿ ಬಡ್ಡಿಯನ್ನು ಕೊಡುವುದು ಅಸಮಂಜಸವಾದುದು. ಬಡ್ಡಿಗಾಗಿ ಹೊನ್ನನ್ನು ಕೊಡುವುದು ಲೋಕ ರೂಢಿಯ ಪ್ರಕಾರ ಸಮಂಜಸವಾದುದು. ಹೀಗೆ ಒಂದೇ ಚೌಕಟ್ಟಿನಲ್ಲಿ ಎರಡು ಪದಗಳನ್ನು ನೋಡಿದಾಗ, ಒಂದರ ರಚನೆ ಅರ್ಥಸಾಮಂಜಸ್ಯವುಳ್ಳದಾಗಿಯೂ, ಇನ್ನೊಂದು ಅದಕ್ಕೆ ಹೊರತಾಗಿಯೂ ಕಂಡುಬರುವುದರಿಂದ ಎರಡೂ ಪದಗಳೂ ಒಂದೇ ವಿಭಕ್ತಿಯಿಂದ ಕೂಡಿದ್ದರೂ, ಅಂತರಾಳದಲ್ಲಿ ಅವು ಭಿನ್ನ ಭಿನ್ನ ಕಾರಕಗಳಿಂದ ಕೂಡಿವೆಯೆಂದು ತಿಳಿಯಬೇಕು. ಈ ಕಾರಣದಿಂದ, 21ನೇ ವಾಕ್ಯ ಮೂಲರೂಪದಲ್ಲಿ,

21ಎ. ಪೊನ್ನಂ ಬಡ್ಡಿಗೆ ಕೊಟ್ಟಂ

ಎಂದು ನಿರ್ಧರಿಸಬೇಕಾಗುತ್ತದೆ.

22ನೇ ವಾಕ್ಯದ ಮಾಣಕನಂ ಎಂಬ ಪದವೂ, ದ್ವಿತೀಯಾ ವಿಭಕ್ತಿಯಲ್ಲಿದ್ದರೂ ಅಂತರಾಳಸ್ವರದಲ್ಲಿ ಅದು ಭಿನ್ನಕಾರಕಕ್ಕೆ ಸೇರಿದೆಯೆಂಬುದನ್ನು ಪ್ರಶ್ನಾರ್ಥಕ ಪರಿವರ್ತನೆಗಳಿಂದ ತೀರ್ಮಾನಿಸಬಹುದು.

ಪ್ರ. 1ಅ. ಆರಂ ಬೆಸಗೊಂಡಂ?

ಮಾಣವಕನಂ ಬೆಸಗೊಂಡಂ

ಬಿ. ಆವುದಂ ಬೆಸಗೊಂಡಂ

ಕಾರ್ಯಮಂ ಬೆಸಗೊಂಡಂ

ಪ್ರ. 2ಎ. ಆರಿಂದಂ ಬೆಸಗೊಂಡಂ?
ಮಾಣವಕನಿಂ ಬೆಸಗೊಂಡ
ಬಿ. ಆವುದರಿಂದಂ ಬೆಸಗೊಂಡಂ?
*ಕಾರ್ಯದಿಂದಂ ಬೆಸಗೊಂಡಂ
ಪ್ರ. 3ಎ. ಆರ ಕಾರ್ಯಂ
ಮಾಣವಕನ ಕಾರ್ಯಂ
ಬಿ. *ಆವುದರ ಮಾಣವಕಂ?
*ಕಾರ್ಯದ ಮಾಣವಕಂ
ಪ್ರ. 4ಎ. ಆರೊಳ್ ಬೆಸಗೊಂಡಂ?
ಮಾಣವಕನೊಳ್ ಬೆಸಗೊಂಡಂ
ಬಿ. ಆವುದರೊಳ್ ಬೆಸಗೊಂಡಂ?
ಕಾರ್ಯದೊಳ್ ಬೆಸಗೊಂಡಂ
ಪ್ರ. 5ಎ. ಆರೊಡನೆ ಬೆಸಗೊಂಡಂ?
ಮಾಣವಕನೊಡನೆ ಬೆಸಗೊಂಡಂ
ಬಿ. ಆವುದರೊಡನೆ ಬೆಸಗೊಂಡಂ?
*ಕಾರ್ಯದೊಡನೆ ಬೆಸಗೊಂಡಂ

ಮೇಲಿನ ಪ್ರಶ್ನಾದ್ವಂದ್ವಗಳಲ್ಲಿ ಪ್ರ. 2ರಿಂದ ಪ್ರ. 5ರ ವರೆಗಣವುಗಳಲ್ಲಿ, ಪ್ರ. 3ಎ; ಪ್ರ. 4ಎ. ಮತ್ತು ಪ್ರ. 5ಎ.ಗಳು ಮಾತ್ರ ಸ್ವೀಕಾರಾರ್ಹ ಉತ್ತರಗಳನ್ನು ಪಡೆಯುತ್ತವೆ. ಹೀಗಾಗಿ 22ನೇ ವಾಕ್ಯದಲ್ಲಿ ಬರುವ ಮಾಣಕನಂ ಎಂಬ ಪದವನ್ನು ಮಾಣವಕನಿಂ, ಮಾಣವಕನೊಳ್ ಅಥವಾ ಮಾಣವಕನೊಡನೆ ಎಂಬುದಾಗಿ ತೆಗೆದುಕೊಳ್ಳಬಹುದು.

'ದೋಹನಾದಿಗಳೊಳ್ ದ್ವಿಕರ್ಮಕವುಂಟು'–ಎಂದು ಕೇಶಿರಾಜನು ಇನ್ನೊಂದು ವಾಕ್ಯದ್ವಂದ್ವ ವನ್ನು ಕೊಟ್ಟಿದ್ದಾನೆ.

23. ಗುರುವಂ ಜ್ಞಾನಮಂ ಬೆಸಗೊಂಡಂ
24. ಪಶುವಂ ಪಾಲಂ ಕರೆದಂ

20ರಿಂದ 22ರ ವರೆಗಣ ವಾಕ್ಯಗಳನ್ನು ವಿಶ್ಲೇಷಿಸಿದಂತೆ ಇವನ್ನೂ ವಿಶ್ಲೇಷಿಸಿದಾಗ ಇಲ್ಲಿಯೂ ದ್ವಿಕರ್ಮಕ ವಿಲ್ಲ. ಮೇಲಿನವಂತೆ ಇಲ್ಲಿಯೂ ಅಂತರಾಳಸ್ತರದಲ್ಲಿ ಪ್ರತಿಯೊಂದು ವಾಕ್ಯದ ಎರಡೂ ಪದಗಳು ಬೇರೆ ಬೇರೆ ಕಾರಕಗಳನ್ನೊಳಗೊಂಡಿವೆಯೆಂದು ತಿಳಿಯುತ್ತದೆ. 23ನೇ ವಾಕ್ಯ ಈ ಕೆಳಗಿನ ವಾಕ್ಯಗಳಲ್ಲಿ ಯಾವುದಾದರೂ ಒಂದಾಗಿರಬಹುದು.

23ಎ. ಗುರುವಿಂದಂ ಜ್ಞಾನಮಂ ಬೆಸಗೊಂಡಂ
23ಬಿ. ಗುರುವಿನೊಳ್ ಜ್ಞಾನಮಂ ಬೆಸಗೊಂಡಂ
23ಸಿ. ಗುರುವಿನೊಡನೆ ಜ್ಞಾನಮಂ ಬೆಸಗೊಂಡಂ.

24ನೆಯ ವಾಕ್ಯ:

24ಅ. ಪಶುವಿಂದಂ ಪಾಲಂ ಕರೆದಂ

23ರಂತೆ–ಇಂದಂ–ಒಳ್–ಒಡನೆ ಎಂಬ ಆಯ್ಕೆಗೆ ಇಲ್ಲಿ ಎಡೆಯಿಲ್ಲ. ಪಶುವಿಂದಂ ಎಂದು ಮಾತ್ರ ಹೇಳ ಬಹುದು. ಪಶುವಂ ಮತ್ತು ಪಾಲಂ ಎಂಬವುಗಳ ನಡುವಣ ವ್ಯತ್ಯಾಸವನ್ನು ಹೀಗೆ ಗುರುತಿಸಬಹುದು.

24ಬಿ. ಪಶುವಿಂ ಕರೆದ ಪಾಲ್

24ಸಿ. *ಪಾಲಿಂ ಕರೆದ ಪಶು

24ಬಿ.ಯಿಂದ, ಪಾಲ್ ಎಂಬುದು ದ್ವಿತೀಯಾ ವಿಭಕ್ತಿಯಲ್ಲಿದೆಯೆಂದೂ, ಪಶು ಎಂಬುದು ಹಾಗಿಲ್ಲವೆಂದೂ ತಿಳಿಯುತ್ತದೆ. 23 ಮತ್ತು 24ನೆಯ ವಾಕ್ಯಗಳು ಅಂತರಾಳ ಸ್ತರದಲ್ಲಿ ಭಿನ್ನ ಭಿನ್ನ ವಿಭಕ್ತಿಗಳಿಂದ ಕೂಡಿವೆ. ಮೇಲ್ಮೈಯಲ್ಲಿ ತೋರಿಕೆಗೆ ಎರಡು ಪದಗಳೂ ಒಂದೇ ವಿಭಕ್ತಿಪ್ರತ್ಯಯವನ್ನೊಳಕೊಂಡಿದ್ದರೂ, ಅವು ವ್ಯಾಕರಣವಿರುದ್ಧ ವಾಕ್ಯಗಳಲ್ಲ. ದ್ವಿಕರ್ಮಕ ವಾಕ್ಯಗಳೆಂದು ಕೇಶಿರಾಜ ಹೇಳಿದರೂ, ಅವು ದ್ವಿಕರ್ಮಕ ಗಳಲ್ಲ. ಕೇಶಿರಾಜನಿಗೆ ಅದ್ಭುತವಾದ ವಿಚಾರದೃಷ್ಟಿಯಿದ್ದೂ ಇವನ್ನು ಅವನು ಸರಿಯಾಗಿ ವಿವೇಚಿಸು ವುದರಲ್ಲಿ ಹಿಂದೆಗೆದಿದ್ದಾನೆಂಬುದು ಸೋಜಿಗ.

ವಿಭಕ್ತಿ ಪಲ್ಲಟವನ್ನು ಹೇಳುವಾಗ ಪ್ರಥಮಾ ಮತ್ತು ದ್ವಿತೀಯಾ ವಿಭಕ್ತಿಗಳೊಳಗೆ ಪಲ್ಲಟವಾಗುವ ಕೆಳಗಿನ ಉದಾಹರಣೆಗಳನ್ನು ಕೇಶಿರಾಜ ಕೊಟ್ಟಿದ್ದಾನೆ:

25. ಅವಂ ನುಣ್ಪುಳ್ಳವಂ

ಪ್ರಥಮಾವಿಭಕ್ತಿ ದ್ವಿತೀಯೆಯ ಸ್ಥಾನವನ್ನಾಕ್ರಮಿಸಲು ಕಾರಣವೇನೆಂದು ಹೇಳಿಲ್ಲ. ಅದಕ್ಕೆ ಬದಲಾಗಿ ನುಣ್ಪನ್ ಎಂಬುದು ನುಣ್ಪು ಎಂದಾಗುತ್ತದೆಂದು ಮಾತ್ರ ಹೇಳಿದ್ದಾನೆ. ಉಳ್–ಎಂಬ ಕ್ರಿಯಾಪದಕ್ಕೆ ಮೇಲ್ಮೈಯಲ್ಲಿ ಎರಡು ಗುಣಗಳಿವೆ: (1) ಅಕರ್ಮಕ; ಚತುರ್ಥೀ ಅಥವಾ ಸಪ್ತಮೀ ವಿಭಕ್ತಿಗಳಿರುವ ನಾಮಪದಗಳೊಡನೆ ಉಳ್–ಅಕರ್ಮಕ ರೂಪವನ್ನು ಹೊಂದುತ್ತದೆ:

25ಎ. ಆವಂಗೆ ನುಣ್ಪುಳ್ಳುದು

25ಬಿ. ಅವನೊಳ್ ನುಣ್ಪುಳ್ಳುದು

25ಎ. ಮತ್ತು ಬಿ.ಗಳಿಗೆ ಏನು ಎಂಬ ಪ್ರಶ್ನೆಯನ್ನು ಮಾತ್ರ ಕೇಳಬಹುದು, ಏನನ್ನು ಎಂದು ಕೇಳಲು ಸಾಧ್ಯವಿಲ್ಲ. ಹಾಗಾಗಿ ಇಲ್ಲಿ ಉಳ್ ಎಂಬ ಕ್ರಿಯೆ ಅಕರ್ಮಕ: (2) ಸಕರ್ಮಕ: ವಾಕ್ಯದಲ್ಲಿ ಪ್ರಥಮಾ ವಿಭಕ್ತಿಯುಳ್ಳ ಕರ್ತೃ ಪದವಿದ್ದರೆ ಉಳ್–ಎಂಬ ಕ್ರಿಯಾಪದದ ಸಕರ್ಮಕವಾಗುತ್ತದೆ. ಉದಾಹರಣೆ 25ನೇ ವಾಕ್ಯ.

ಉಳ್–ಎಂಬುದು ಒಂದು ವಸ್ತುವಿನ ಇರುವಿಕೆಯನ್ನು ಸೂಚಿಸುವುದಾದರೂ (25ಎ. ಮತ್ತು ಬಿ.ಯಂತೆ) ಅಂತರಾಳಸ್ತರದಲ್ಲಿ ಅದು ಸ್ವಾಮಿತ್ವದ ಅರ್ಥವನ್ನು ಸೂಚಿಸುತ್ತದೆ. 25ನೇ ವಾಕ್ಯದಲ್ಲಿ ದ್ವಿತೀಯಾ ವಿಭಕ್ತಿಯ ಪ್ರತ್ಯಯ ಬರಲಿಲ್ಲವಾದುದರಿಂದ ಅದು ಪ್ರಥಮಾದೊಡನೆ ಪಲ್ಲಟವಾಗುವುದಲ್ಲ, ಸಹಜವಾಗಿ ಅದು ದ್ವಿತೀಯಾ ವಿಭಕ್ತಿಯೇ. ನಪುಂಸಕ ನಾಮಪದಗಳೊಡನೆ ದ್ವಿತೀಯಾ ವಿಭಕ್ತಿ ಪ್ರತ್ಯಯ ಸಹಜವಾಗಿಯೇ ಬರಬಹುದು, ಬಾರದೆಯೂ ಇರಬಹುದು. ಇದು ದ್ರಾವಿಡಭಾಷೆಗಳಲ್ಲಿರುವ ಸಾಮಾನ್ಯ ವ್ಯಾಕರಣ ನಿಯಮ. ಈ ದೃಷ್ಟಿಯಿಂದ ನೋಡಿದರೆ ಮಾತ್ರ ಕೇಶಿರಾಜ ಹೇಳಿದ ವಿಭಕ್ತಿಗಳ ಪಲ್ಲಟ ಸರಿ ಯೆಂದು ಒಪ್ಪಬಹುದು.

ಪ್ರಥಮಾವಿಭಕ್ತಿಯು, ದ್ವಿತೀಯಾ, ಚತುರ್ಥೀ ಮತ್ತು ಷಷ್ಠೀ ಮತ್ತೆ ಷಷ್ಠೀ ಪ್ರಥಮಾದಸ್ಥಾನದಲ್ಲಿ, ಪಲ್ಲಟವಾಗುವುದು ಕ್ರಿ. ಶ. ಎಂಟನೆಯ ಶತಮಾನಕ್ಕೆ ಸೇರಿದ ಶಾಸನಭಾಷೆಯಲ್ಲಿ (ಜಿ. ಎಸ್. ಗಾಯ್: (Historical Grammar of Old Kannada ಪು 63), ಶಬ್ದಮಣಿ ದರ್ಪಣದಲ್ಲಿ ಕೇಶಿ ರಾಜನು ಹೇಳಿದ ಗ್ರಾಂಥಿಕ ಭಾಷೆಯಲ್ಲಿರುವಂತೆಯೇ ಕಂಡುಬರುತ್ತದೆ. ಆದರೆ 11, 12, 13 ಮತ್ತು 14ನೆಯ ಶತಮಾನದ ಕೊಡಗು, ದಕ್ಷಿಣಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಿಗೆ ಸೇರಿದ ಶಾಸನಗಳಲ್ಲಿ ಈ ಪ್ರಕ್ರಿಯೆ ಕಂಡುಬರುವುದಿಲ್ಲ.

ಗ್ರಂಥಸೂಚಿ:

1. *Fillmore C. J. and Langendon, D.T.* (Eds) 1971.
Studies in Linguistic Semantics, New York.

2. *Gai, G. S.*
Historical Grammar of Old Kannada (based entirely on the Kannada Inscriptions of the 8th, 9th and 10th Centuries, A.D.) Poona.

3. *Kushalappa Gowda, K.* 1972.
A Grammar of Kannada (based on the inscriptions of Coorg, South Kanara and North Kanara Dts, 1000 to 1400 A.D.), Annamalaingar.

ಎಚ್. ಚಂದ್ರಶೇಖರ್

ಜನಪ್ರಿಯ ಕ್ರಾಂತಿಕಾರಿ ಹಾಗೂ ಕವಿ: ಮಖದೂಮ್

"ಮಖದೂಮ್ ಈಗ ಭೂಗತರಾಗಿದ್ದಾರೆ",
"ಮಖದೂಮ್ ಈಗ ಬಂಧಿತರಾಗಿದ್ದಾರೆ"
"ಮಖದೂಮ್ ಕಾರ್ಮಿಕರ ಮೆರವಣಿಗೆಯೊಂದನ್ನು ಮುನ್ನಡೆಸುತ್ತಿದ್ದಾಗ ಲಾಠಿ ಏಟುಗಳನ್ನು ತಿಂದರು"
"ಮಖದೂಮ್ ಈಗ ವಿಧಾನಸಭೆಗೆ ಚುನಾಯಿತರಾದರು"

ಎಂಬಿತ್ಯಾದಿ ಸುದ್ದಿಗಳಿಗೆ ಕಾರಣರಾದ ವ್ಯಕ್ತಿ ಒಬ್ಬ ಕವಿ–ಸಾಹಿತ್ಯ ಅಕಾಡೆಮಿಯಿಂದ ಸಮ್ಮಾನಿತ ಕವಿ–ಎಂದರೆ ಸಾಮಾನ್ಯ ಓದುಗರಿಗೆ ಅಚ್ಚರಿಯಾದೀತು. ಕವಿಗೂ ಕ್ರಾಂತಿಗೂ ಎಲ್ಲಿಯ ಸಂಬಂಧ ಎನ್ನಬಹುದು. ಆದರೆ ತಮ್ಮ "ಬಿಸಾತೆ ರಕ್ಸ್" (ನಾಟ್ಯರಂಗ) ಎಂಬ ಉರ್ದು ಕವನ ಸಂಕಲನಕ್ಕೆ ಈ ಸಲದ* (ಮರಣೋತ್ತರ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು ಪಡೆದ ದಿ: ಮಖದೂಮ್ ಮೊಹಿಉದ್ದೀನ್ ಅವರು ಕ್ರಾಂತಿಕಾರಿಯೂ ಅಹುದು, ಕವಿಯೂ ಅಹುದು. ಕವಿ ಮಖದೂಮ್ ಮತ್ತು ಕ್ರಾಂತಿಕಾರಿ ಅಥವಾ ರಾಜಕಾರಿಣಿ ಮಖದೂಮ್ ಇವರ ಮಧ್ಯೆ ಖಚಿತವಾದ ಗಡಿಗೆರೆಯನ್ನೆಳೆಯುವುದು ಕಠಿಣ ಕೆಲಸ. ರಾಜಕೀಯ ಜೀವನ ಕಾವ್ಯ ಜೀವನಕ್ಕೆ ಸ್ಫೂರ್ತಿಯನ್ನು ನೀಡಿದರೆ ಕಾವ್ಯ ರಾಜಕೀಯ ವಿಚಾರಧಾರೆಯ ಅತ್ಯುತ್ತಮವಾದ ವಾಹಕವಾಗಿದೆ–ಕಲೆಯ ಸುಂದರ ಚೌಕಟ್ಟಿನಲ್ಲಿ. ಇದು ಮಖದೂಮ್‌ರ ವ್ಯಕ್ತಿ ವೈಶಿಷ್ಟ್ಯ.

ಸಿಡಿಲಮರಿ :

ಹಿಂಸೆಯ ಕೊರಳ ಕತ್ತರಿಸುವ ಅರ ನಾನು
ಪಂಜರವ ಸುಟ್ಟುರಿವ ಸಿಡಿಲಮರಿ ನಾನು (ಬಾಗಿ ಎಂಬ ಕವನ)

ಎಂದು ಹಾಡಿದ, ಹಾಗೂ ಜೀವನದುದ್ದಕ್ಕೂ ಹಾಗೆಯೇ ಬದುಕಿದ ಈ ಕ್ರಾಂತಿಯ ಸಿಡಿಲಮರಿ ಮೇದಕ್ ಜಿಲ್ಲೆಯ ಅಂದೋಲಾ ತಾಲೂಕಿನಲ್ಲಿ 1910ರಲ್ಲಿ ತಾಲ್ಲೂಕ ಕಚೇರಿಯಲ್ಲಿ ಗುಮಾಸ್ತೆಯಾಗಿದ್ದ ಗೌಸ ಮೊಹಿದ್ದೀನರ ಮಗನಾಗಿ ಜನಿಸಿತು. ಮಖದೂಮ್‌ರು ನಾಲ್ಕನೆಯ ವಯಸ್ಸಿನಲ್ಲಿಯೇ ತಂದೆಯನ್ನು ಕಳೆದುಕೊಂಡು ಕಕ್ಕ ಬಷೀರುದ್ದೀನರ ದೇಖರೇಖೆಯಲ್ಲಿಯೇ ಬೆಳೆದು 1929ರಲ್ಲಿ ಸಂಗಾರೆಡ್ಡಿಯ ಹೈಸ್ಕೂಲಿನಿಂದ ಮ್ಯಾಟ್ರಿಕ್ ಪಾಸಾದರು. ನಂತರ ಹೆಚ್ಚಿನ ವ್ಯಾಸಂಗಕ್ಕೆಂದು ಹೈದ್ರಾಬಾದಿನ ಉಸ್ಮಾನಿಯ ವಿಶ್ವವಿದ್ಯಾಲಯವನ್ನು ಸೇರಿದರು. ಇಲ್ಲಿಯ ವಿದ್ಯಾರ್ಥಿಜೀವನ ತರುಣ, ಆದರ್ಶವಾದಿ ಮಖು

---

* 1969ರ70ರ ಸಾಲಿನ

ದೂಮ್‌ನ ಮೇಲೆ ಬಹು ಮುಖ್ಯವಾದ ಪರಿಣಾಮ ಮಾಡಿತೆಂದು ತೋರುತ್ತದೆ. ಕೆಳ ಮಧ್ಯಮ ದರ್ಜೆಯ ಕುಟುಂಬದಿಂದ ಬಂದಿದ್ದ ಮಖದೂಮ್‌ರ ವಿದ್ಯಾರ್ಥಿ ಜೀವನ ಅಷ್ಟು ಸುಖಕರವಾಗಿರಲಿಲ್ಲ. ಆರ್ಥಿಕ ಮುಗ್ಗಟ್ಟಿನ ಜೊತೆಗೆ ವಿದ್ಯಾರ್ಥಿಯ ನಿಶಿತ ಹಾಗೂ ಚಿಕಿತ್ಸಕ ಬುದ್ಧಿಯ ವಾದಗಳಿಗೆ ಉತ್ತರ ನೀಡಲಾಗದ ಅಧ್ಯಾಪಕರೊಬ್ಬರ ಅವಕೃಪಾದೃಷ್ಟಿಯೂ ಸೇರಿ ವಿದ್ಯಾರ್ಥಿ ಮಖದೂಮ್ ತುಂಬಾ ಕಷ್ಟ ನಷ್ಟಗಳನ್ನು ಅನುಭವಿಸಬೇಕಾಯಿತು. ಇಂಥ ದುರ್ಧರ ಕಾಲದಲ್ಲಿಯೂ ಮಖದೂಮ್ ಹಸನ್ಮುಖಿ ಯಾಗಿದ್ದು ತನ್ನ ಗೆಳೆಯರನ್ನು ನಗೆಯ ಕಥೆಗಳನ್ನು ಹೇಳಿ ನಗಿಸುತ್ತಿದ್ದ. ತಾನು ನೋವನ್ನು ನುಂಗಿ ಪರರನ್ನು ನಲಿಸುವ ಈ ಮಹೋನ್ನತ ಗುಣವೇ ಮಖದೂಮ್‌ರನ್ನು ಜನಪ್ರಿಯ ಕವಿಯನ್ನಾಗಿ ಜನ ಪ್ರಿಯ ನಾಯಕನನ್ನಾಗಿ ಮಾಡಿತು. ಈ ಅವಧಿಯಲ್ಲಿ ಅವರ ಸಮೀಪದ ಬಂಧುಗಳೊಬ್ಬರ ಮಗಳು ತುಂಬಾ ನೆರವಾದಳು–ಈ ಹುಡುಗಿಯೇ ಮಖದೂಮ್‌ರ ಬಾಳಿನ ಸಂಗಾತಿಯಾದಳು. ಮಖದೂಮ್‌ರ ಕಾವ್ಯದಲ್ಲಿ ಬಹಳ ಕಡಿಮೆ ಪ್ರಮಾಣದಲ್ಲಿರುವ ರೋಮ್ಯಾಂಟಿಕ್ ಸ್ನಿಗ್ಧತೆಗೆ ಈಕೆಯೇ ಸ್ಫೂರ್ತಿಯೆಂದು ಅವರನ್ನು ಸಮೀಪದಿಂದ ಅರಿತ ಕೆಲವರ ಅಭಿಪ್ರಾಯ. ಇಲ್ಲವಾದಲ್ಲಿ ಬಹುಶಃ ಮಖದೂಮ್‌ರು ಕೇವಲ ಆರ್ಥಿಕ ಸಾಮಾಜಿಕ ರಾಜಕೀಯ ವಿಷಯಗಳಲ್ಲಿಯೇ ಸೀಮಿತರಾಗುತ್ತಿದ್ದರೇನೋ! 1936ರಲ್ಲಿ ಪ್ರಗತಿಶೀಲ ಲೇಖಕರ ಸಂಘವನ್ನು ಸ್ಥಾಪಿಸಿ ವಿದ್ಯಾರ್ಥಿಜೀವನದಲ್ಲಿಯೇ ಸಂಘಟನಾ ಚಟುವಟಿಕೆ ಗಳನ್ನು ಪ್ರಾರಂಭಿಸಿದರು. 1937ರಲ್ಲಿ ಉರ್ದು ಭಾಷೆಯನ್ನು ಮುಖ್ಯ ವಿಷಯವನ್ನಾಗಿ ತೆಗೆದುಕೊಂಡು ಎಂ.ಎ. ಪದವಿಯನ್ನು ಗಳಿಸಿದರು. ಇಷ್ಟೊತ್ತಿಗಾಗಲೇ ಕವಿಯೆಂದೂ ನಾಟಕಕಾರರೆಂದೂ ನಟರೆಂದೂ ಸಾಕಷ್ಟು ಹೆಸರನ್ನು ಗಳಿಸಿದ್ದರು.

1939ರಲ್ಲಿ ಇನ್‌ಕಿಲಾಬ ಎಂಬ ಕವಿತೆಯನ್ನು ಪ್ರಕಟಿಸಿ ಧರ್ಮಾಂಧರಿಂದ "ಕಾಫಿರ್", ಪ್ರತಿಗಾಮಿ ಗಳಿಂದ "ಕಮ್ಯೂನಿಸ್ಟ್" ಎಂಬ ಬಿರುದು ಬಾವಲಿಗಳನ್ನು ಗಳಿಸಿದ ಮಖದೂಮ್ ಆಗಿನ್ನೂ ಸಿಟಿ ಕಾಲೇಜಿ ನಲ್ಲಿ ಉಪನ್ಯಾಸಕವೃತ್ತಿ (Lecturership)ಯನ್ನು ಪ್ರಾರಂಭಿಸಿದ್ದರು. ಆಗಲೇ ರಾಜಕೀಯದತ್ತ ಸೆಳೆತ ಹೆಚ್ಚಾಗುತ್ತಲಿತ್ತು. 1941ರಲ್ಲಿ, ಜೆ. ವಿ. ನರಸಿಂಗರಾವ್ (ಆಂಧ್ರ ಪ್ರದೇಶದ ಉಪ ಮುಖ್ಯ ಮಂತ್ರಿ) ದಿ. ಜಯಸೂರ್ಯ, ಸಬ್ತೆಹುಸೇನ ಇತ್ಯಾದಿ ಗೆಳೆಯರೊಡಗೂಡಿ "ಮಾರ್ಕ್ಸಿಸ್ಟ ಅಧ್ಯಯನ ಮಂಡಲಿ" (Marxist Study Circle)ಯನ್ನು ಸ್ಥಾಪಿಸಿದರು. ಆಗಲೇ ತಮ್ಮ ಕೆಲಸಕ್ಕೆ ರಾಜೀನಾಮೆಯನ್ನಿತ್ತರು. 1942ರಲ್ಲಿ ಹೈದರಾಬಾದ ಕಮ್ಯುನಿಸ್ಟ ಪಾರ್ಟಿಯ ಸ್ಥಾಪಕರಲ್ಲಿ ಒಬ್ಬರಾಗಿ ಅದರ ಪೂರ್ಣಾವಧಿಯ ಕೆಲಸಗಾರರಾಗಿ ದುಡಿದರು.

ಕ್ರಾಂತಿಯ ಪೈಗಂಬರ :

ಮುಂದಿನ 8–10 ವರ್ಷಗಳ ಅವಧಿಯು ಮಖದೂಮ್‌ರ ಜೀವನದಲ್ಲಿ ನಿಕರ ಹೋರಾಟದ ಹಾಗೂ ಅವರ ಪರೀಕ್ಷಾ ಕಾಲವಾಗಿತ್ತು. 1942ರಲ್ಲಿ ರೇಲ್ವೆ ಕಾರ್ಮಿಕರ ಸಂಘವನ್ನು ಸ್ಥಾಪಿಸಿ ಅದರ ಉಪಾಧ್ಯ ಕ್ಷರಾಗಿ ಚುನಾಯಿಸಲ್ಪಟ್ಟರು. ಇದೇ ಕಾಲಕ್ಕೆ ಸರಕಾರ ಇವರನ್ನು ವಿದ್ರೋಹಿ ಎಂದು ಮೂರು ತಿಂಗಳ ಶಿಕ್ಷೆಯನ್ನು ನೀಡಿತು. ಹೊರಬಂದ ಮಖದೂಮ್ ಮುಮ್ಮಡಿಗೊಂಡ ಉತ್ಸಾಹದಿಂದ ಮೂರು ವರ್ಷಗಳ ಅವಧಿಯಲ್ಲಿ 42 ಕಾರ್ಮಿಕ ಸಂಘ (Trade Unions)ಗಳನ್ನು ಸಂಘಟಿಸಿದರು. ಗಾಬರಿ ಗೊಂಡ ನಿಜಾಮ ಸರಕಾರ ಪುನಃ ಬಂಧಿಸಿದರೂ ನ್ಯಾಯಾಂಗ ವಿಚಾರಣೆಯ ನಂತರ ನಿರ್ದೋಷಿಯೆಂದು ಸಾರಲಾಯಿತು. 1946ರಲ್ಲಿ ಗುಲಬರ್ಗಾ ಜಿಲ್ಲೆಯ ಶಹಾಬಾದ ಸಿಮೆಂಟ ಕಾರ್ಖಾನೆಯ ಕಾರ್ಮಿಕರ ಕಷ್ಟಗಳನ್ನು ಮುಖತಃ ಅರಿಯಲು ಶಹಾಬಾದಿಗೆ ಬಂದಾಗ ಮಖದೂಮ್‌ರನ್ನು ಬಂಧಿಸುವ ಆಜ್ಞೆ ಜಾರಿಯಾಯಿತು. ಆದರೆ ಇದರ ಸುಳಿವನ್ನು ಮೊದಲೇ ಪಡೆದ ಮಖದೂಮ್ ಭೂಗತರಾದರು. ಮುಂದಿನ ಐದು ವರ್ಷಗಳನ್ನು ಅವರು ವೇಷಾಂತರಿಸಿಕೊಂಡು ಕಳೆದರೂ ಹೋರಾಟದ ಕಣದಿಂದ ದೂರವಿರದೆ ಅದರ ಕರ್ಣಧಾರತ್ವವನ್ನು ವಹಿಸಿದ್ದರು. ತೆಲಂಗಾಣದಲ್ಲಿಯ ಜಾಗೀರದಾರರು ಶ್ರೀಮಂತ ಭೂ ಒಡೆಯರು ಮತ್ತು ಅವರನ್ನು ಸಂರಕ್ಷಿಸುತ್ತಿದ್ದ ನಿಜಾಂ ಸರಕಾರ ಹೀಗೆ ಈ ಮೂರು ಪಟ್ಟಭದ್ರರ ವಿರುದ್ಧ ಸಶಸ್ತ್ರ ಕ್ರಾಂತಿಯನ್ನು ಸಂಘಟಿಸಿ ತೆಲಂಗಾಣದ ಬಡರೈತರ, ಕೂಲಿಕಾರರ ಕಣ್ಮಣಿಯಾದರು.

ಈ ಕ್ರಾಂತಿಯ ಸಂದರ್ಭದಲ್ಲಿಯ ಆ ಪ್ರದೇಶದ ಚಿತ್ರವನ್ನು ಅವರ ತೆಲಂಗಾಣ ಎಂಬ ಕವಿತೆಯಲ್ಲಿ ಕಾಣಬಹುದು.

ಪವಿತ್ರ ಭಾರತದ ನಾಯಕ ನಾಡು ತೆಲಂಗಾಣ
ಹೊಸ ಬೆಳಕನೊಂದು ನೀಡುತಿದೆ ತೆಲಂಗಾಣ
ಸರ್ವ ದಿಸೆಗಳಿಂದಲೂ ಕರೆಯುತಿದೆ ತೆಲಂಗಾಣ
ನೀ ಕ್ರಾಂತಿಯ ಪೈಗಂಬರ ತೆಲಂಗಾಣ
ಶಸ್ತ್ರ ಸನ್ನದ್ಧರಾಗಿ ನಡೆದಿರುವ ಅಗಣಿತ ಜಲಾಲರು*
ಆಕಾಡು ಬೆಟ್ಟಗಳ ಸುತರು ಮಣ್ಣಿನ ಲಾಲರು
ರಾಜ ಶೋಷಿತ ಸೊರಗಿದ ಸೋತ ಕಲಿಗಳು
....
....
ಶಾಹೀ ನಿರ್ಮಿತ ವಿಭವಕಿಂದು ಬಿದ್ದಿದೆ ವಿಘಾತ
ಹುಜೂರ್ ಆಸಿಫ ಜಾಹಿಯ ಸರಕಾರವಿಂದು ಹತಾಹತ

ಮತಾಂಧರೂ ಪ್ರತಿಗಾಮಿಗಳೂ ಆದ ರಜಾಕಾರರ ಕೈಯಲ್ಲಿದ್ದ ಸರಕಾರ ಮುಖದೂಮ್‌ರ ತಲೆಗೆ ಐದು ಸಾವಿರ ರೂಪಾಯಿಯ ಬಹುಮಾನವನ್ನು ಸಾರಿತು. ಆದರೆ ಹೈದ್ರಾಬಾದಿನಲ್ಲಿಯೇ ಇರುತ್ತಿದ್ದ ಜನ ನಾಯಕ ಮುಖದೂಮ್‌ರನ್ನು ಹಿಡಿಯುವುದು ಪೋಲೀಸರಿಂದ ಸಾಧ್ಯವಾಗಲಿಲ್ಲ.

ಪೋಲೀಸ ಕಾರ್ಯಾಚರಣೆಯ ನಂತರ 1951ರ ಮಾರ್ಚ್ ತಿಂಗಳಲ್ಲಿ ಹೈದ್ರಾಬಾದಿನಲ್ಲಿ ಪ್ರಕಟಗೊಂಡಾಗ ಬಂಧಿತರಾದರು. ಆದರೆ 1952ರಲ್ಲಿಯೇ ಬಿಡುಗಡೆಯಾಗಿ ಅದೇ ವರ್ಷದ ಉಪಚುನಾವಣೆಯಲ್ಲಿ ಕಮ್ಯೂನಿಸ್ಟ ಪಕ್ಷದ ಹುರಿಯಾಳಾಗಿ ಹುಜೂರ್ ನಗರ ಕ್ಷೇತ್ರದಿಂದ ಹೈದ್ರಾಬಾದಿನ ವಿಧಾನ ಸಭೆಗೆ ಆರಿಸಲ್ಪಟ್ಟರು. 1956ರಿಂದ ಹೃದಯಾಘಾತದಿಂದ ಕೊನೆಯುಸಿರನ್ನೆಳೆಯುವ ವರೆಗೆ (ಅಂದರೆ ಆಗಸ್ಟ 25, 1969ರವರೆಗೆ) ವಿಧಾನಪರಿಷತ್ತಿನ ಸದಸ್ಯರಾಗಿದ್ದುದಲ್ಲದೆ ಕಮ್ಯೂನಿಸ್ಟ ಬಣದ ನಾಯಕರಾಗಿದ್ದರು.

ನ್ಯಾಯಾಲಯದಲ್ಲಿ ಪೋಲೀಸರು ಸಲ್ಲಿಸುವ ಆರೋಪಣಾ ಪತ್ರ (Charge sheet)ದಂತಿರುವ ಕವಿ ಮುಖದೂಮ್‌ರ ಉತ್ಪ್ರೇಕ್ಷೆಯಲ್ಲದ ಹೋರಾಟ ಭರಿತ ಜೀವನದ ಸಂಕ್ಷಿಪ್ತ ಚಿತ್ರಣವಿದು.

ಕಾವ್ಯದ ಗುರಿ :

ಮುಖದೂಮ್‌ರು ಕವಿಗಳನ್ನುದ್ದೇಶಿಸಿ ಈ ರೀತಿಯಾಗಿ ಕಾವ್ಯದ ಗುರಿಯನ್ನು ನಿರ್ದೇಶಿಸಿದರು– "ನೀವು ನಿಮ್ಮ ಕಲೆಯ ಹಾಗೂ ಕಾವ್ಯದ ಬೆಳಕನ್ನು ಅಂಧಕಾರದಿಂದ ತುಂಬಿರುವ ಸಾಮಾನ್ಯ ಜನರ ಹೃದಯದಲ್ಲಿ ಪಸರಿಸಬೇಕು. ಅತ್ಯಾಚಾರಿ ಶಾಸಕವರ್ಗವು ಅವರನ್ನು ವಿದ್ಯೆ, ಸಾಹಿತ್ಯ, ಸಭ್ಯತೆ ಮತ್ತು ಸಂಸ್ಕೃತಿ ಇತ್ಯಾದಿ ಸದ್ಗುಣಗಳಿಂದ ದೂರವಿಟ್ಟಿದೆ. ಅವರು ಬಾಯಾರಿದವರಂತೆ ನಿಮ್ಮ ಸುತ್ತಲೂ ನೆರೆಯುತ್ತಾರೆ. ಅವರಿಗೆ ನಿಮ್ಮ ಸೆರೆಯ ದುರ್ಗಂಧದ ಆವಶ್ಯಕತೆ ಇಲ್ಲ. ಅವರ ಜೀವನದಲ್ಲಿ ಈಗಾಗಲೇ ದುರ್ಗಂಧಗಳಿವೆ". ಅವರೇ ಇನ್ನೊಂದು ಸಲ "ಕಾರ್ಮಿಕರು ಸಾಮಾನ್ಯ ಜನರು ಮತ್ತು ಅವರ ಚಳುವಳಿಯೊಡನೆ ನಿಕಟವರ್ತಿಯಾಗಿರುವುದರಿಂದ ನಿಮ್ಮ ಕಾವ್ಯ ಸಾಧನೆಗೆ ವ್ಯತ್ಯಯವಾಗುವುದಿಲ್ಲವೆ?" ಎಂಬ ಪ್ರಶ್ನೆಗೆ ಉತ್ತರಿಸುತ್ತಾ ಈ ರೀತಿ ಹೇಳಿದರು–"ಕಾರ್ಮಿಕರೊಡನೆ ಹಾಗೂ ಜನಸಾಮಾನ್ಯರೊಡನೆ ಇರುವುದರಿಂದ ನನ್ನ ಕಾವ್ಯಕ್ಕೆ ಜೀವನದ ಕಾವು ಸಿಗುತ್ತದೆ. ಅದೇ ನನ್ನ ಕಾವ್ಯಕ್ಕೆ ಸ್ಫೂರ್ತಿ. ಕಾವ್ಯ ನನ್ನ ಆದರ್ಶವಲ್ಲ; ಆದರೆ ಆದರ್ಶದತ್ತ ಸಾಗಿಸುವ ಒಂದು ಸಾಧನ ಮಾತ್ರ. ಈ ರೀತಿ

---

* ಜಲಾಲ = ಬೆಳಕಿನ ಮೂಲಸ್ಥಾನ

ಯಾಗಿ ಕಾವ್ಯಕ್ಕೆ ಒಂದು ಗುರಿಯನ್ನು ಮತ್ತು ಕವಿಗೆ ಒಂದು ಕರ್ತವ್ಯದ ಹೊರೆಯನ್ನು ನಿರ್ದೇಶಿಸಿದ ಮಖದೂಮ್‌ರು ಅದನ್ನು ಅಕ್ಷರಶಃ ಪಾಲಿಸಿದುದನ್ನು, 1934ರಲ್ಲಿ ಪ್ರಕಟಗೊಂಡ ತೂರ್ (ಬೆಟ್ಟ) ಎಂಬ ಪ್ರಥಮ ಕವನದಿಂದ ಆರಂಭವಾದ ಮತ್ತು ದಿವಂಗತರಾಗುವುದಕ್ಕಿಂತ ಕೆಲ ತಿಂಗಳುಗಳ ಪೂರ್ವದಲ್ಲಿ ರಚಿಸಿದ "ಋತು" ಎಂಬ ಕವನದೊಂದಿಗೆ ಕೊನೆಗಂಡ ಅವರ ಕಾವ್ಯ ಜೀವನದಲ್ಲಿ ಕಾಣಬಹುದು.

ಬಿಸಾತೆ ರಕ್ಸ್:

ಗಾತ್ರದ ದೃಷ್ಟಿಯಿಂದ ಮಖದೂಮ್‌ರ ಸಾಹಿತ್ಯ ಕೃಷಿ ಕಿರಿದು, ಆದರೆ ಗುಣದ ದೃಷ್ಟಿಯಿಂದ ಹಿರಿದು. "ಠಾಕೂರ್ ಮತ್ತು ಅವರ ಕಾವ್ಯ" ಎಂಬ ಗ್ರಂಥ 1933–34ರಲ್ಲಿ ಪ್ರಕಟಗೊಂಡ ಗದ್ಯಕೃತಿ. ಕೆಲವು ನಾಟಕಗಳನ್ನು ರಚಿಸಿದ್ದಾರೆ. 'ಸುರ್ಖ ಸವೇರಾ' (ಕೆಂಬಣ್ಣದ ಬೆಳಗು) ಮತ್ತು 'ಗುಲೆ ತರ್' (ಜಲಮಯ ಪುಷ್ಪ) ಎಂಬ ಕವನ ಸಂಗ್ರಹಗಳು ಅನುಕ್ರಮವಾಗಿ 1944 ಮತ್ತು 1961ರಲ್ಲಿ ಪ್ರಕಟಗೊಂಡವು. ಈ ಎರಡೂ ಸಂಗ್ರಹದಲ್ಲಿಯ ಕವನಗಳನ್ನೂ ಮತ್ತು 61–66ರ ಅವಧಿಯಲ್ಲಿ ರಚಿತ ಇತರ ಕವನಗಳನ್ನೂ ಸೇರಿಸಿ ಅವರ 55ನೇ ಜನ್ಮದಿನದಂದು ಮಖದೂಮ್ ಸನ್ಮಾನ್ಯ ಸಮಿತಿಯವರು 'ಬಿಸಾತೆ ರಕ್ಸ' (ನಾಟ್ಯ ರಂಗಸ್ಥಳ) ಎಂಬ ಕವನ ಸಂಗ್ರಹವನ್ನು 1966ರಲ್ಲಿ ಪ್ರಕಟಿಸಿದರು. ಈ ಸಂಗ್ರಹವೇ ಮಖದೂಮ್‌ರಿಗೆ ಮರಣೋತ್ತರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು ಗಳಿಸಿ ಕೊಟ್ಟಿತು.

ಕಾವ್ಯಕೃಷಿಯ ಹಕ್ಕಿನೋಟ

ಮಖದೂಮ್‌ರ ಕಾವ್ಯಕೃಷಿಯನ್ನು ಎರಡು ಗುಂಪುಗಳಲ್ಲಿ ವಿಂಗಡಿಸಬಹುದು. ಒಂದನೆಯ ಗುಂಪು ಕಾವ್ಯದ ಸೂಕ್ಷ್ಮವಾದ ಒರೆಗಲ್ಲಿಗೆ ಹಚ್ಚಿದಾಗ ಕಲಾತ್ಮಕತೆ ಕೊಂಚ ಕಡಿಮೆಯಾಗಿದ್ದು ಅವು ಕ್ರಾಂತಿ ಕಾರಕ ಹಾಡುಗಳ ವರ್ಗಕ್ಕೆ ಸೇರುವಂಥವು. 'ಜಂಗ' (ಯುದ್ಧ) 'ಜಂಗೆ ಆಝಾದಿ' (ಸ್ವಾತಂತ್ರ್ಯ ಯುದ್ಧ) 'ಕಹೋ ಹಿಂದುಸ್ತಾನ್ ಕಿ ಜೈ'' (ಹಿಂದುಸ್ಥಾನಕ್ಕೆ ಜಯವಾಗಲಿ) ಇತ್ಯಾದಿ ಹಾಡುಗಳು ಈ ವರ್ಗದ ಪ್ರತಿನಿಧಿಗಳು. ಈ ಹಾಡುಗಳು ಕಾರ್ಮಿಕರ, ಭೂಹೀನ ರೈತರ, ಹೋರಾಟದ ಕಾಲದಲ್ಲಿ ಸಾವಿರಾರು ನಾಲಗೆಗಳಲ್ಲಿ ಕುಣಿದ ಹಾಗೂ ಸಾವಿರಾರು ನಿರಾಶೆ ಹೊಂದಿದ ಹೃದಯಗಳಿಗೆ ಆಶೆಯ ಚೇತನಾಶಕ್ತಿಯನ್ನು ನೀಡಿದ ಪರುಷ ಮಣಿಗಳು. ಜಂಗೆ ಆಝಾದಿ ಎಂಬ ಕವಿತೆಯನ್ನು ಮಖದೂಮ್‌ರು 1942ರ ಆಂದೋಲನ ಕಾಲದಲ್ಲಿ ರಚಿಸಿದರು. ಜನನಾಯಕರೆಲ್ಲಾ ಜೈಲಿನಲ್ಲಿದ್ದಾಗ, ಜನ ಮುಂಗಾಣದಂತಿದ್ದ ಪರಿಸ್ಥಿತಿಯನ್ನು ಈ ಕವಿತೆಯನ್ನು ರಚಿಸಿ ಜನರಿಗೆ ದಾರಿಯನ್ನು ತೋರಿಸಿದರು. ಈ ಕವಿತೆ ಇಂದಿಗೂ ತನ್ನ ಲೋಕಪ್ರಿಯತೆಯನ್ನು ಕಳೆದುಕೊಂಡಿಲ್ಲ. ಒಂದು ಉದ್ದೇಶ ಸಾಧನೆಯೇ ಗುರಿಯಾಗಿಟ್ಟುಕೊಂಡು ರಚಿಸಿದರೂ, ಕವಿತೆಯು ಕವಿಯ ಆತ್ಮಾನುಭಾವದ ಪ್ರಯೋಗ ಶಾಲೆಯಲ್ಲಿ ಸಿದ್ಧವಾಗಿ ಶಬ್ದ ರೂಪಾಂತರಗೊಂಡರೆ ಅದು ಸಾರ್ವಕಾಲಿಕ ಲೋಕಪ್ರಿಯತೆಯನ್ನು ಪಡೆಯಬಲ್ಲದೆಂಬುದಕ್ಕೆ ಈ ಕವಿತೆಯೇ ನಿದರ್ಶನ.

ಸ್ವತಂತ್ರ ಪತಾಕೆಯಡಿಯಲ್ಲಿ ಕದನ
ಕದನವಿದು ಸ್ವಾತಂತ್ರ್ಯಕ್ಕಾಗಿ ಕದನ–

ಎಂದು ಆರಂಭವಾಗುವ ಈ ಗೀತೆ ಇಂದಿಗೂ ಕಾರ್ಮಿಕರಿಗೆ ಗಾಯತ್ರಿ.

ಕಾವ್ಯ ಸೌಂದರ್ಯದ, ಕಾವ್ಯಾನಂದದ ಮತ್ತು ಕಲೆಯ ಸೂಕ್ಷ್ಮ ತಕ್ಕಡಿಯಲ್ಲಿ ತೂಗಿದರೂ ಸಲ್ಲಬಲ್ಲಂಥ ಹಾಗೂ ನಿಲ್ಲಬಲ್ಲಂಥ ಕವನಗಳದು ಇನ್ನೊಂದು ವರ್ಗ, 'ಅಂಧೇರಾ' (ಅಂಧಕಾರ) 'ಕೈದ' (ಬಂಧನ) 'ಚಾಂದ ತಾರೌಂಕಾ ಬನ' (ಚಂದ್ರ ತಾರೆಯರ ಬನ) 'ಮಶ್‌ರಿಕ್ (ಪೂರ್ವ)' 'ಶಾಯರ್' (ಕವಿ), 'ಹವೇಲಿ' (ಅರಮನೆ', ಇನ್‌ಕಿಲಾಬ' (ಕ್ರಾಂತಿ) ವಿಯೆಟ್ನಾಂ ಯುದ್ಧದ ಹಿನ್ನೆಲೆಯಲ್ಲಿ ರಚಿತ 'ದರ್–ಏ–ಮೌತ' (ಸಾವಿನ ಕಂದರ), 'ಮೌತಕಾಗೀತ' (ಮೃತ್ಯುಗೀತೆ), 'ಬಾಗಿ' (ವಿದ್ರೋಹಿ) ಇತ್ಯಾದಿ

ಕವನಗಳು ಈ ವರ್ಗದ ಪ್ರತಿನಿಧಿಗಳು. ಮೂಲಭಾಷೆಯಾದ ಉರ್ದುವಿನಲ್ಲಿರುವ ಈ ಕವನಗಳ ಶಬ್ದ ಮಾಧುರ್ಯ, ಕಾವ್ಯ ಸೌಂದರ್ಯ, ಕಲಾಪೂರ್ಣತೆಯನ್ನು ಕನ್ನಡದಲ್ಲಿ ಭಾಷಾಂತರಿಸುವದು (ನನ್ನ ಮಟ್ಟಿಗೆ) ತುಂಬಾ ಕಠಿಣದ ಕೆಲಸ. ಆದರೂ ಕನ್ನಡಿಗರಿಗೆ ಈ ಕವಿಯ ಪರಿಚಯ ಮಾಡಿಸಲೋಸುಗ, ಅಲ್ಲಲ್ಲಿ ಕನ್ನಡೀಕರಿಸಲ್ಪಟ್ಟ ಸಾಲುಗಳನ್ನು ಉದ್ಧರಿಸಿದ್ದೇನೆ. ಇದೊಂದು ನಮ್ರ ಪ್ರಯತ್ನ. ಕೇಳುಗರಿಗೆ ರುಚಿಸಿದರೆ ಆದರ ಶ್ರೇಯಸ್ಸು ಮಖದೂಮ್ ಅವರದು, ರುಚಿಸದಿದ್ದಲ್ಲಿ ಆದರ ಕೊರತೆ ನನ್ನದು.

ಜನ ಸಾಮಾನ್ಯರು, ಕಾರ್ಮಿಕರು, ದೀನ ದಲಿತರು ಹಾಗೂ ರೈತರು ಅನುಭವಿಸುವ ಕಷ್ಟ ಕಾರ್ಪಣ್ಯ ಗಳು ಹಣೆಬರಹವೆಂದು, ತಾರ್ಕಿಕ ಬುದ್ಧಿಯ ಹಾಗೂ ಜೀವಂತ ಪ್ರಜ್ಞೆಯ ಈ ಕವಿ ಒಪ್ಪುವುದಿಲ್ಲ. ನಿರಾಶನಾಗಿ ಈ ರೀತಿಯಿಂದ ಹಾಡುತ್ತಾರೆ.

ರೈತನ ರಕುತದದ ನದಿಯಲ್ಲಿ ವಿನಾಶದ ನಾವೆಯ ಚಲನೆಯನ್ನು
ಸುತ್ತಲೂ ಕವಿದಿದ್ದ ನ್ಯಾಯದ ಚಿತೆಯಿಂದೆದ್ದ ಹೊಗೆಯನ್ನು
ನನ್ನ ಪಾಪಿ ಕಂಗಳು ಕಂಡು ಕಂಬನಿಸಿದವು
ನನ್ನ ದು ಖಿ ಮನ ನೊಂದಿತ್ತು, ಬೆಂದಿತ್ತು

ಇನ್ನೊಂದೆಡೆಯಲ್ಲಿ ನಿರಾಶೆಯ ಬಂಧನದಲ್ಲಿ ಸಿಕ್ಕಾಗ,

ನೂರಾರು ಸಾವಿರಾರು ಸೊರಗಿದ ಶ್ರೀ ಸಾಮಾನ್ಯರು
ಇವರೆಲ್ಲಾ ಶಾಹೀ ಪೀಡಿತರು,
ಇವರೆಲ್ಲಾ ರಾಜಕೀಯ ಶೋಷಿತರು (ಕೈದ)

ಎಂದು ಕನಿಕರಿಸುತ್ತಾನೆ ಕವಿ.

ಬಂಧನ ಮಿತಿ ಇರದ ಬಂಧನ
ಘೋರ ಅತ್ಯಾಚಾರ
ಫಿರ್ಯಾದೆ ಇಲ್ಲ, ಇಲ್ಲ ಉಪಚಾರ (ಕೈದ)

ಎಂದು ನಿಸ್ತೇಜ ನಿರ್ವಿಣ್ಣಗಳ ಬಂದಿಯಾದ ಕವಿ ನಿಟ್ಟುಸಿರನ್ನಿಡುತ್ತಾನೆ.

ಅನ್ಯಾಯ ಅತ್ಯಾಚಾರಗಳನ್ನು ಕಂಡುಂಡು ಕೈ ಕಟ್ಟಿ ಕುಳಿತುಕೊಳ್ಳದ ಈ ಹುಟ್ಟು ಕ್ರಾಂತಿಕಾರಿ ಹಾಗೂ ಹೋರಾಟಗಾರ ಕವಿ–"ಈ ನಾಪಾಕ ಜಗವನ್ನೇ ಭಸ್ಮೀಕರಿಸೋಣ ಬನ್ನಿ" ಎಂದು ಕರೆ ನೀಡು ವುದಲ್ಲದೆ

"ಹುತಾತ್ಮರಾಹುತಿ ನಿತ್ಯ ನಡೆದರೂ ಸುಮ್ಮನಿರಬೇಡ
ಕರೆ ಕೇಳಿ ಬರುತಿದೆ ಕೇಳು ವಧಾಸ್ತಂಭದಿಂದ–
ಸುಮ್ಮನಿರಬೇಡ ಸುಮ್ಮನಿರಬೇಡ
ಜಯವಾಗಲಿ ನ್ಯಾಯಕ್ಕೆ ಸತ್ಯಕ್ಕೆ ಜೀವನಕ್ಕೆ"
(ಚುಪ್ ನ ರಹೋ)

ಎಂದು ಹೋರಾಟ ನಡೆಸಲು, ಮುಂದುವರೆಸಲು ಹೇಳುತ್ತಾನೆ.

ಇಂಥ ಹೋರಾಟ ನಡೆಸುವಂಥ ವ್ಯಕ್ತಿ ಹೇಗಿರಬೇಕೆಂಬುದನ್ನು ಬಾಗಿ (ಬಂಡುಗಾರ) ಎಂಬ ಕವನದಲ್ಲಿ ಕವಿ (ತನ್ನನ್ನು ತಾನೇ ವರ್ಣಿಸುವುದರ ಮೂಲಕ) ಈ ರೀತಿಯಾಗಿ ವರ್ಣಿಸುತ್ತಾನೆ–

"ಹಿಂಸೆಯ ಕೊರಳ ಕತ್ತರಿಸುವ ಆರ ನಾನು
ಪಂಜರವ ಸುಟ್ಟುರಿವ ಸಿಡಿಲು ಮರಿ ನಾನು

ಭೂತಕಾಲದ ಮೂರ್ತಿಯ ಭಂಜಿಸುವೆ ಸಿಡಿಲಾಗಿ ನಾನು
ಜಾತಿ ಮತ ಭೇದಗಳ ಛೇದಿಸುವೆ ನಾನು
ಅಶಕ್ಯವೆನಿಸುವ ಈ ನನ್ನ ಕನಸನ್ನು ಕಣಸಾಗಿಸುವೆ ನಾನು"

ನಿಕರ ಹೋರಾಟದ ವಾತಾವರಣದಲ್ಲಿ ಮತ್ತು ನಿರಾಶೆಯ ನಿಶೆಯಲ್ಲಿಯೂ ಆಶೆಯ ಬೆಳಕನು ಕಂಡು ತನ್ನ ಸಹ ಪಥಿಕರಿಗೆ ಗುರಿಯನ್ನು ತೋರಿಸುತ್ತಾನೆ ಕವಿ.

"ಈಗಿದೆ ರಾತ್ರಿಯ ಕೊನೆಯ ಗಳಿಗೆ
ಅಂಧಕಾರವೂ ಇದೆ, ನಸು ಬೆಳಕೂ ಇದೆ
ನಿಶೆಯಳಿದು ಬೆಳಕು ಬರಲಿದೆ
ಓ ನನ್ನ ಸಖರೆ
ಭುಜಕೆ ಭುಜಕೊಟ್ಟು
ಗುರಿಯ ನೇರಕೆ ನಡೆಯಿರಿ
ಪ್ರೇಮವೇ ನಮ್ಮಗುರಿ
ಇಲ್ಲವೇ ಬಲಿಯೇ ನಮ್ಮ ಗುರಿ
(ಚಾಂದ ತಾರೌಂಕಾ ಬನ್)

ನಿಜವಾದ ಅರ್ಥದಲ್ಲಿ ಸಮತಾವಾದಿಯಾಗಿದ್ದ ಕವಿ ಮಖದೂಮ್‌ರು ಭಾರತದ ಮೇಲೆ ಚೀನಾ ದಾಳಿ ಮಾಡಿದ ನಂತರದ ಹದಗೆಟ್ಟ ಸಂಬಂಧವನ್ನು ಮತ್ತು ರಶಿಯ ಹಾಗೂ ಚೀನಾಗಳ ನಡುವಣ ತಾತ್ವಿಕ ಭಿನ್ನಾಭಿಪ್ರಾಯದ ಹೆಸರಿನಲ್ಲಿಯ ತಿಕ್ಕಾಟವನ್ನು 'ಸಬಕಾ ಖಾಬ'(ಎಲ್ಲರ ಕನಸು) ಎಂಬ ಕವನದಲ್ಲಿ ಈ ರೀತಿಯಾಗಿ ಮಾರ್ಮಿಕ ಪ್ರತಿಮೆಗಳ ಮೂಲಕ ಬಣ್ಣಿಸಿದ್ದಾರೆ–

"ಸ್ಪಂದಿಸಿದೆವು ಒಂದೇ ಹೃದಯದೊಲು
ಮಿಡಿದೆವು ಒಂದೇ ಮನದೊಲು
ನಾವು ಬಿರಿದಾಗ ಜಗದ ತುಂಬೆಲ್ಲಾ ಹಬ್ಬಿತ್ತು ಗಂಧ
ಓಲ್ಗಾದ ಯಾಂಗ್ಸಿಯ, ನೈಲಿನ, ಗಂಗೆಯ ಗಂಧ
ನಮ್ಮ ನಮ್ಮಲ್ಲಿಯ ಹೃದಯದಲ್ಲಿದ್ದ ಆ ಶಾಖವಿಂದು
ಆ ದೇವರಿಗೆ ಗೊತ್ತು, ಹೋಗಿದೆಲ್ಲಿಗೆಂದು?"

ರಾಜಕೀಯ, ಸಾಮಾಜಿಕ ಹೋರಾಟದ ಇಂಥ ಕವನಗಳನ್ನಲ್ಲದೆ, ದಿ. ಮಖದೂಮ್‌ರು 'ಇಂತೆಜಾರ್' (ನಿರೀಕ್ಷೆ), 'ಚಾರಾಗಾರ್' (ಉಪಚಾರಕ), 'ಯಾದ ಹೈ' (ನೆನಪಿದೆ), 'ಆಜ ಕೀ ರಾತ್' ನಜಾ' (ಈ ದಿನದ ಇರುಳೇ ಹೋಗದಿರು)' ಇತ್ಯಾದಿ ಜನಪ್ರಿಯ ಪ್ರಣಯ ಗೀತೆಗಳನ್ನೂ ಗಜಲ್‌ಗಳನ್ನೂ ರಚಿಸಿದ್ದಾರೆ. ತುಲನಾತ್ಮಕವಾಗಿ ಮಖದೂಮ್‌ರ ರಚನೆ ಈ ವಿಭಾಗದಲ್ಲಿ ಗಾತ್ರದ ದೃಷ್ಟಿಯಿಂದ ಕಿರಿದಾದರೂ, ಗುಣದ ದೃಷ್ಟಿಯಿಂದ ಅಷ್ಟೇ ಹಿರಿದು.

ನೆಹರು ಅವರ ನಿಧನಾನಂತರ 'ನೆಹರು' ಎಂಬ ಕವಿತೆಯನ್ನು ಪ್ರಕಟಿಸಿದರು. ಅದರ ಭಾವಾನುವಾದ ಈ ಕೆಳಗಿನಂತಿದೆ.

ಕಾಲದ ಚಾಪದಲ್ಲಿ ಸಾವಿರ ವರ್ಣಗಳು ಮಿಶ್ರಿತ
ಸಾವಿರ ರೂಹುಗಳಳಿಸಿ ಹೋದುವು ಕಾಲಚಕ್ರದಿ
ಆದರೆ ಗಂಧದ, ಪುಷ್ಪದ, ಹಾಗೂ ಚೈತ್ರದೀ ಸುಗಂಧ
ಸ್ವರ್ಗದ ಕಣಿವೆಯುತ್ತ ತೇಲಿದೆ ವಿಹಾರಕೆಂದು
ಯುಗದ ಕೈಯಿಂದ ಹೊರಟ ಜೀವನದ ಬಾಣ
ದೂರ ಬಹುದೂರ ಅದರ ಪಯಣ
ಅಲ್ಲಿಯೂ ಅದು ಹೋರಾಟದ ಹರಣ.

ಕವಿ ಮಖದೂಮ್‌ರು ತಮ್ಮ ಕೊನೆಯುಸಿರಿನವರೆಗೂ ದೀನದಲಿತರಿಗಾಗಿ, ರೈತರಿಗಾಗಿ, ಕಾರ್ಮಿಕರಿಗಾಗಿ, ಸಮತೆಗಾಗಿ, ನ್ಯಾಯಕ್ಕಾಗಿ, ಸತ್ಯಕ್ಕಾಗಿ, ಸುಸಂಸ್ಕೃತ ಜೀವನಕ್ಕಾಗಿ ಹೋರಾಟವನ್ನು ಸಂಘಟಿಸಿ, ಅದರ ಹರಣವಾಗಿದ್ದರು. ಬಹುಶಃ ಸ್ವರ್ಗದಲ್ಲಿಯೂ ಅವಶ್ಯವಿದ್ದರೆ ಹೋರಾಟದ ಹರಣವಾಗಿರುವರೋ!!*

ವಿ.ಸೂ: ಈ ಲೇಖನ ಬರೆಯುವಾಗ, ಉರ್ದು ಸಾಹಿತ್ಯ ಹಾಗೂ ಭಾಷೆಯ ನಿಕಟ ಪರಿಚಯವಿರುವ ನನ್ನ ಗೆಳೆಯ ಶ್ರೀ ಅಡವಿರಾಜರಿಂದ ನನಗೆ ಸಿಕ್ಕಿರುವ ಸಹಾಯ ಸಹಕಾರಗಳನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.

* 'ಧಾರವಾಡ ಆಕಾಶವಾಣಿ' ಕೃಪೆಯಿಂದ.

ಎಂ. ಎನ್. ಜೈಪ್ರಕಾಶ್

ಅಧಿಕಾರ

ಸುತ್ತ ಹಸಿರಲ್ಲಿ ಬಾಯಿಮುಕ್ಕಳಿಸುವ
ಈ ಶರದ
ಹುಲ್ಗಾವಲ ಕೆನ್ನೆಗೆ ತುಟಿಯೊತ್ತಿ
ಗುನುಗುವ ಇಬ್ಬನಿಯ ಮಣಿಗಳಿಗೆ
ಬೆಳ್ದಿಂಗಳಿಳಿದು
ಬೆಳ್ದಿಂಗಳಿಸುವ ಗಳಿಗೆ
ನಾನು
ನಿನ್ನ ಸಾನ್ನಿಧ್ಯದ ತಡಿಗೆ

ಆಗ, ಅಂಬೆಗಾಲಿಕ್ಕಿ
ತೆವಳುವ ಗಾಳಿಗೆ
ಸುಯ್ಲಿನಲಿ ಹೆಡೆಬೀಸಿ ಬಾಗುವ—
ಬಾಗಿ ಮೈಮರೆಸುವ–
ತೆಂಗುಗರಿಗಳ ಚೌರಿ ತೊನೆದ
ತೂರುವ ಕಳ್ಳ ಚಂದ್ರನ
ನಗೆ: ನನಗೆ, ದೋಣಿಗೊರಗಿದ
ನಿನ್ನ ಓರೆಕೋರೆಗಳ ಭಾವಭಂಗಿಗಳ
ನಿರೀಕ್ಷೆಯ ಅನಿಮೀಲಿತ ನೇತ್ರಗಳ
ಸೃಷ್ಟಿಸುವ ಬಗೆ!

ತರುವಾಯ–
ನಿನ್ನ ಹೆರಳಲ್ಲಿ ನಿಡುಸುಯ್ಯುತಿರುವ
ಪಚ್ಚೆತೆನೆ, ಕಾಮುಕಸ್ತೂರಿ, ರಾತ್ರಿರಾಣಿ,
ಚಿಕ್ಕೆ ಬಳಗಕ್ಕೆಲ್ಲ
ಆಗೊಮ್ಮೆಗೇ ಹಿಗ್ಗಿನ ಸುಗ್ಗಿ
ಬಂದು
ಮುಡಿತುಂಬ ಮುಗುಳ್ನಗೆಯ ಮಲ್ಲಿಗೆ!

ಜಿ. ವರದರಾಜರಾವ್

ಅಚಲಾನಂದ ದಾಸರು

(ಒಂದು ಪುನರಾಲೋಕನ)

ಅಚಲಾನಂದದಾಸರ ವಿಚಾರವನ್ನು ಕನ್ನಡಿಗರೆಲ್ಲರ ಗಮನಕ್ಕೆ ತಂದ ಕೀರ್ತಿ ಶ್ರೀ. ಬೇಲೂರು ಕೇಶವ ದಾಸರಿಗೆ ಸೇರಿದ್ದು. ಶ್ರೀಯುತರು ತಮ್ಮ 'ಕರ್ಣಾಟಕ ಭಕ್ತವಿಜಯ' ಎಂಬ ಗ್ರಂಥದಲ್ಲಿ ಹಲವಾರು ಹರಿದಾಸರುಗಳ ಪರಿಚಯ ಮಾಡಿಕೊಡುವ ಸಂದರ್ಭದಲ್ಲಿ ಎಲ್ಲರಿಗಿಂತ ಮೊದಲು ಅಚಲಾನಂದ ದಾಸರನ್ನು ಕುರಿತು ಪ್ರಸ್ತುಪಿಸಿದ್ದಾರೆ[1]. ಶ್ರೀಯುತರು ಈ ಮಹಿಮರ ವಿಚಾರವಾಗಿ ಅನೇಕ ಸಂಗತಿಗಳನ್ನು ಸಂಗ್ರಹಿಸಿರುವುದಲ್ಲದೆ ಅವರ ಕಾಲವನ್ನು ನಿರ್ಣಯಿಸಲು ಈ ಕೆಳಗಿನ ಪದ್ಯವನ್ನು ಉದಾಹರಿಸಿರುವರು.

ಕಾಶೀತಿ ಸಂಖ್ಯಾ ಶಕ ಕಾಲಕೇಬ್ದೇ
ವಿಳಂಬಿ ವರ್ಷೇ ಕಲಿ ಚೈತ್ರಶುಕ್ಲೇ
ಪಕ್ಷೇ ದಶಮ್ಯಾಂ ದಿನಮಧ್ಯ ಕಾಲೇ
ಪ್ರತ್ಯಕ್ಷಕೋಭೂದ್ಗುರು ವಿಠಲಾಖ್ಯಃ

ಅಚಲಾನಂದರು ಪಂಢರಾಪುರದಲ್ಲಿ ಭೀಮಾನದಿಯಲ್ಲಿ ಸ್ನಾನಮಾಡುತ್ತ ಮಧ್ಯಾಹ್ನ ಕಾಲದಲ್ಲಿ ಅರ್ಘ್ಯವನ್ನು ಬಿಡುತ್ತಿರಲು ಅವರಿಗೆ ಪಾಂಡುರಂಗನ ದರ್ಶನವಾದ ದಿನವನ್ನು ಕುರಿತ ಪದ್ಯವಿದು. ಶ್ರೀಯುತರು 'ಕಾಶೀತಿ' ಎಂದರೆ ಶಾ.ಶಕ 801 ಎಂಬುದಾಗಿ ಅರ್ಥವಾಗುವುದೆಂದು ಹೇಳಿರುವುದರಿಂದ ಆ ಮೇರೆಗೆ ಅಚಲಾನಂದರ ಕಾಲ ಕ್ರಿ.ಶ. 879 ಇಲ್ಲವೇ 9ನೆಯ ಶತಮಾನವಾಗುತ್ತದೆ.

ಅಚಲಾನಂದರ ಕಾಲಕ್ಕೂ ಅಚಲಾನಂದರ ವಿಠಲಾಂಕಿತದಲ್ಲಿ ದೊರೆಯುವ ರಚನೆಗಳ ಭಾಷೆಗೂ ಇರುವ ಅಂತರವನ್ನೂ ಗಮನಿಸಿ, ಅವುಗಳು ಅವರ ವಂಶೀಕರು ಈಚೆಗೆ ಮಾಡಿದ್ದರೂ ಮಾಡಿರಬಹುದೆಂದು ಶಂಕಿಸುವರು.

ಇದೇ ಸಂದರ್ಭದಲ್ಲಿ ಶ್ರೀಯುತರು ಇತರ ಕೆಲವು ಸಂಗತಿಗಳನ್ನು ಹೇಳಿರುವರು. ಅವುಗಳಲ್ಲಿ ಮುಖ್ಯವಾದುವು ಇವು. "ಅಚಲಾನಂದದಾಸರ ವಂಶೀಕರು ಸ್ಮಾರ್ತ ಬ್ರಾಹ್ಮಣರೆನ್ನಿಸಿದ್ದರೂ ಮಾಧ್ವ ವೈಷ್ಣವರಂತೆ ಗೋಪೀಚಂದನ ಮುದ್ರೆಗಳನ್ನು ಧರಿಸುವರು. ಅವರು ಸರದಿಯ ಮೇರೆಗೆ ಅಚಲಾನಂದ ದಾಸರು ಪೂಜಿಸುತ್ತಿದ್ದ ವಿಠಲ ವಿಗ್ರಹ ಮತ್ತು ಸಾಲಿಗ್ರಾಮಗಳನ್ನು ಪೂಜಿಸುತ್ತ ಬಂದಿರುವರು. ಅಚಲಾನಂದದಾಸರ ಪೂರ್ವಾಶ್ರಮನಾಮ ನೃಸಿಂಹದಾಸರು. ಈ ವಂಶೀಯರು ಈಗ ತುಮಕೂರು ಜಿಲ್ಲೆಯ ತುರುವೇಕೆರೆಯಲ್ಲಿ ನೆಲಸಿರುವರು. ಅಚಲಾನಂದದಾಸರು 'ಭರತಖಂಡದ ಪ್ರತ್ಯೇಕ ಆರು ಸ್ಥಳಗಳಲ್ಲಿ ತಮ್ಮ ಶಾಖಾಪೀಠಗಳನ್ನು ಸ್ಥಾಪಿಸಿ ಅಲ್ಲಲ್ಲಿ ಭಾಗವತಧರ್ಮ ಪ್ರಚಾರಕ್ಕೆ ಶಿಷ್ಯರನ್ನು ನೇಮಿಸಿದರು. ಆ ಪೀಠಗಳು ಎಲ್ಲೆಲ್ಲಿ ಸ್ಥಾಪಿತವಾದುವೆಂಬ ವಿವರಣೆ ದೊರೆಯುವುದಿಲ್ಲ".

---

1 ಕರ್ಣಾಟಕ ಭಕ್ತ ವಿಜಯ, ಭಾಗ 1, (1933), ಪು. 7–12.

ಈ ದಾಸರು ರಾಷ್ಟ್ರಕೂಟರ ಸಮಕಾಲೀನರೆಂದೂ, ಈ ಪೀಳಿಗೆಯಲ್ಲಿ ಕ್ರಮವಾಗಿ ಮುದ್ದುವಿಠಲ, ಗೋಪೀನಾಥ, ಹರಿದಾಸ, ತಿಮ್ಮಣ್ಣದಾಸ ಮತ್ತು ಪಾಂಡುರಂಗದಾಸರೆಂಬ ಪ್ರಖ್ಯಾತ ಹರಿದಾಸರು ಆಗಿ ಹೋದರೆಂದೂ ಹೇಳುವರು. 'ಅಚಲಾನಂದರ ಆರು ಪೀಠಗಳಲ್ಲಿ ಯಾವುದೋ ಪೀಠಕ್ಕೆ ಸೇರಿದ ಅಚ್ಯುತದಾಸರೆಂಬವರ ಹೆಸರು ಆನೇಗೊಂದಿಯ (ವಿಜಯನಗರದ ಕೃಷ್ಣದೇವರಾಯ) ಅರಸರ ಕಾಲದಲ್ಲಿ ಮತ್ತೆ ಪ್ರಶಂಸೆಗೆ ಬರುತ್ತದೆ" ಎಂದು ಸೂಚಿಸುವರು.

ಕಡೆಯದಾಗಿ "ಏನೇ ಆಗಲಿ, ಚಾರಿತ್ರಿಕ ದೃಷ್ಟಿಯಿಂದ ನೋಡುವವರಿಗೆ ಒಂಬತ್ತನೇ ಶತಮಾನ ದಷ್ಟು ಹಿಂದಿನ ಕಾಲದಲ್ಲೂ ಅಚಲಾನಂದರೆಂಬ ದಾಸರಿದ್ದ ಸಂಗತಿಯು ಸಂತೋಷವನ್ನುಂಟುಮಾಡುತ್ತದೆ" ಎಂದು ಹೆಮ್ಮೆಪಡುವರು.

ಶ್ರೀ ಬೇಲೂರು ಕೇಶವದಾಸರ ಈ ಹೇಳಿಕೆಗಳು ಆ ಕಾಲದಲ್ಲಿ ಕನ್ನಡ ವಿದ್ವಾಂಸರಿಗೆ ತುಂಬ ಕುತೂಹಲವನ್ನು ಕೆರಳಿಸಿರಬೇಕು. 9ನೆಯ ಶತಮಾನದ ಹರಿದಾಸರ ರಚನೆಗಳು ಆ ಕಾಲಕ್ಕೆ ತಕ್ಕ ಭಾಷಾ ಸ್ವರೂಪವನ್ನು ಹೋಲದಿರುವುದಕ್ಕೆ ಅವರಿತ್ತ ಸಮಾಧಾನೋಕ್ತಿಯಂತೂ ಬಹಳ ಮಂದಿಗೆ ಒಪ್ಪಿಗೆಯಾಗಲಿಲ್ಲವೆಂದು ತೋರುತ್ತದೆ.

ಈ ವಿಚಾರವನ್ನು ಮತ್ತೆ ವಿಮರ್ಶೆ ಮಾಡಿದವರಲ್ಲಿ ದಿ|| ಕಿನ್ನರಿ ವಿದ್ವಾನ್ ಶ್ರೀ ಹುಲಗೂರು ಕೃಷ್ಣಾಚಾರ್ಯರು ಪ್ರಮುಖರು. ಇವರು ತಮ್ಮಿಂದ ವಿರಚಿತವಾದ 'ಕರ್ನಾಟಕ ಸಂಗೀತವೂ ದಾಸ ಕೂಟವೂ' ಎಂಬ ಪುಸ್ತಕದಲ್ಲಿ ಅಚಲಾನಂದದಾಸರ ಬಗ್ಗೆ ತಮಗೆ ದೊರೆತ ಕೆಲವು ಹೊಸ ಸಂಗತಿಗಳನ್ನು ಹೇಳಿರುವುದಲ್ಲದೆ, ಅವರ ಕಾಲವನ್ನು ಕುರಿತ ಪದ್ಯಕ್ಕೆ ಹೊಸ ತೆರನಾಗಿ ವ್ಯಾಖ್ಯಾನ ಮಾಡಿರುವರು. "ಕಾಶೀತಿ ಶಾಕೇ ಗತ ಕಾಲಿಕಾಬ್ದೇ" ಎಂದು ಪಾಠವಿದ್ದರೆ ಮಾತ್ರ ಶ್ರೀ. ಕೇಶವದಾಸರು ಹೇಳುವಂತೆ 801 ನಿರ್ಣಯವಾಗುತ್ತಿತ್ತು. ಸಂಖ್ಯಾಶಬ್ದವನ್ನು ಉದ್ದೇಶಪೂರ್ವಕವಾಗಿ ಹಾಕಿದ್ದರಿಂದ 1281 ಶಕ ವಿಳಂಬಿ ಸಂವತ್ಸರ ಎಂದು ಆಗುವುದು. ಆದುದರಿಂದ ಮೇಲಿನ ಮಿತಿಯು ಕ್ರಿ. ವ. 1359 ಎಂದಾಗುವುದು" ಎಂಬುದಾಗಿ ತಿಳಿಸಿರುವರು[2]. ಇದಕ್ಕೆ ಪೋಷಕವಾಗಿ, ಅಚಲಾನಂದ ವಿಠಲಾಂಕಿತವಾಗಿ ತಮಗೆ ದೊರೆತ ಕೆಲವು ಕೃತಿಗಳನ್ನು ಉಲ್ಲೇಖಿಸಿರುವರು. ಇವುಗಳಲ್ಲಿ ಒಂದರಲ್ಲಿ 'ಕೇಳೋ ಜೀವನವೆ ನೀ ಮಧ್ವ ಮತವನನುಸರಿಸಿ ಶ್ರೀಲೋಲನಂಘ್ರಿಗಳ ನೆನೆದು ಸುಖಿಸೋ" ಎಂಬುದಾಗಿ ಮಾಧ್ವಮತದ ಪ್ರಸ್ತಾಪವೇ ನೇರವಾಗಿ ಬರುವುದರಿಂದ ಈ ದಾಸರು ಶ್ರೀ ಮಧ್ವಾಚಾರ್ಯರ ತರುವಾಯದವರೆಂದು ನಿರ್ಧರವಾಗುವುದಾಗಿ ಹೇಳುವರು[3]. ಶ್ರೀ ಹುಲಗೂರು ಕೃಷ್ಣಾಚಾರ್ಯರ ಈ ಅಭಿಪ್ರಾಯ ತರ್ಕಬದ್ಧವಾಗಿದ್ದು, ಭಾಷಾ ಸ್ವರೂಪದ ತೊಡಕನ್ನೂ ಪರಿಹರಿಸುವುದರಿಂದ ಇದು ಬಹುಮಟ್ಟಿಗೆ ವಿದ್ವಜ್ಜನರ ಮೆಚ್ಚಿಗೆಗೆ ಪಾತ್ರವಾಗಿರುವಂತೆ ತೋರುತ್ತದೆ. ಏಕೆಂದರೆ, ಇದೇ ಸಂಗತಿಯನ್ನು ಪುನಃ ಪರಿಶೀಲಿಸಿರುವ ಶ್ರೀ ಆರ್. ಎಸ್. ಪಂಚಮುಖಿಯವರು 'ಶ್ರೀ ಪುರಂದರ ದಾಸರ ಜೀವನ ಚರಿತ್ರೆ' ಎಂಬ ತಮ್ಮ ಪುಸ್ತಕದಲ್ಲಿ ಶ್ರೀ ಹುಲಗೂರು ಕೃಷ್ಣಾಚಾರ್ಯರ ಅಭಿಪ್ರಾಯವನ್ನು ಅನುಮೋದಿಸಿ, "ಅಚಲಾನಂದದಾಸರು ಉಗಾಭೋಗ ಪದ್ಧತಿ (13ನೆಯ ಶತಮಾನ)ಯ ಪ್ರಚಾರಾನಂತರ ಬಹುಶಃ ನರಹರಿ ತೀರ್ಥರಾದ ಮೇಲೆ, ನನ್ನ ಅಭಿಪ್ರಾಯದಂತೆ ಪುರದಂರದಾಸರ ಸಮಕಾಲದಲ್ಲಿ ಬಾಳಿದ್ದರೆಂದೂ, ಈ ಕಾಲಮಾನವು ಅವರ ಭಾಷೆಯ ಹೊಸತನಕ್ಕೆ ಹೊಂದಿಕೆಯಾಗುವುದೆಂದೂ ವ್ಯಕ್ತವಾಗುತ್ತದೆ. ಕನ್ನಡದಲ್ಲಿ ವೈಷ್ಣವದಾಸ ಕೂಟಕ್ಕೆ ಆದ್ಯ ಪ್ರವರ್ತಕರೆಂದರೆ ಶ್ರೀ ನರಹರಿ ತೀರ್ಥರೆಂದೇ ತಿಳಿಯಬಹುದು" ಎಂದು ಇತ್ಯರ್ಥ ಮಾಡಿರುವರು[4].

ಶ್ರೀ ಗೋರಬಾಳ ಹನುಮಂತರಾಯರು ಕರ್ನಾಟಕ ಶ್ರೀ ಹರಿದಾಸರ ಪರಂಪರೆಯನ್ನು ನಿರೂಪಿಸುತ್ತ, ಶ್ರೀ ವಿಜಯದಾಸರ ಸುಳಾದಿಯೊಂದನ್ನು ಅವಲಂಬಿಸಿ ಶ್ರೀ ನರಹರಿ ತೀರ್ಥರಿಗೂ,

---

2 ಕರ್ನಾಟಕ ಸಂಗೀತವೂ ದಾಸಕೂಟವೂ (1951), ಪು. 89.

3 ಕರ್ನಾಟಕ ಸಂಗೀತವೂ ದಾಸಕೂಟವೂ, ಪು. 91.

4 ಶ್ರೀ ಪುರಂದರದಾಸರ ಜೀವನ ಚರಿತ್ರೆ (1956) ಪು. 8–9

ಶ್ರೀಪಾದರಾಜರಿಗೂ ಮಧ್ಯೆ 60 ಜನ ಆದ್ಯರೂ 9 ಜನ ಆರಾಧ್ಯರೂ ಆಗಿ ಹೋದರೆಂದೂ, ಆ ಆದ್ಯರಲ್ಲಿ ಅಚಲಾನಂದದಾಸರೂ ಒಬ್ಬರೆಂದೂ ಭಾವಿಸುವರು5. ಅವರಿಂದ ಸಂಗ್ರಹಿಸಲ್ಪಟ್ಟ ಈ ಆದ್ಯರು ರಚಿಸಿರುವ ಕೆಲವು ಉಗಾಭೋಗಗಳನ್ನು ಕೊಡುವಲ್ಲಿ ಅಚಲಾನಂದ ವಿಠಲಾಂಕಿತವಾದ 27 ಕೃತಿಗಳನ್ನು ಒಂದೆಡೆ ಪ್ರಕಟಿಸಲಾಗಿದೆ6.

ಮುಖ್ಯವಾಗಿ ಶ್ರೀ ಬೇಲೂರು ಕೇಶವದಾಸರೊಬ್ಬರನ್ನು ಬಿಟ್ಟು ಉಳಿದವರೆಲ್ಲರೂ ಅಚಲಾನಂದ ದಾಸರು ಶ್ರೀನರಹರಿತೀರ್ಥರಿಗಿಂತ ಈಚಿನವರೆಂಬ ಅಭಿಪ್ರಾಯಕ್ಕೆ ಪುರಸ್ಕಾರವಿತ್ತಿರುವುದು ವಿದಿತ ವಾಗುತ್ತದೆ.

2

ತುರುವೇಕೆರೆಯಲ್ಲಿರುವ ಅಚಲಾನಂದದಾಸರ ಮನೆತನಕ್ಕೆ ಸೇರಿದ ಮಹನೀಯರ ಮನೆಗೆ ಹೋಗುವ ಅವಕಾಶವೂ, ಅಲ್ಲಿ ರಾಶಿ ರಾಶಿಯಾಗಿದ್ದ ಕೆಲವು ಓಲೆ ಪ್ರತಿಗಳನ್ನು ಪರಿಶೀಲಿಸುವ ಸುಕೃತವೂ ನನಗೆ ಇತ್ತೀಚೆಗೆ ಲಭಿಸಿತ್ತು. ಇಲ್ಲಿರುವ ಗ್ರಂಥಗಳಲ್ಲಿ ಹಲವು ತುಂಬ ಕಲಸಿ ಹೋಗಿರುವುದರಿಂದ ವ್ಯವಸ್ಥಿತ ವಾಗಿ ವಿಂಗಡಿಸುವ ಕೆಲಸ ಮೊದಲು ಆಗಬೇಕಾಗಿದೆ. ಈ ಗ್ರಂಥ ಸಮುದಾಯದಲ್ಲಿ ಸಂಸ್ಕೃತ ಕೃತಿಗಳೇ ಹೆಚ್ಚಾಗಿವೆ. ಕನ್ನಡದ ಲಿಪಿಯಲ್ಲಿರುವ ಕೃತಿಗಳೂ ಸಹ ಬಹುಮಟ್ಟಿಗೆ ಸಂಸ್ಕೃತದ್ದೇ ಆಗಿವೆ. ಈ ಮಧ್ಯೆ ಕನ್ನಡ ಕೃತಿಯೊಂದರ ನಾಲ್ಕೇ ನಾಲ್ಕು ಓಲೆಗಳು (ಸಂ. 20, 22, 23, 24) ನನ್ನ ಗಮನಕ್ಕೆ ಬಂದವು. ಅವುಗಳನ್ನು ಪರಿಶೀಲಿಸಿದಾಗ ಅವು ಅಚಲಾನಂದದಾಸರ ಜೀವನ ವೃತ್ತಾಂತಕ್ಕೆ ಸಂಬಂಧಿಸಿರುವುದಾಗಿ ವಿದಿತವಾಯಿತು. ಈ ಓಲೆಗಳನ್ನು ಓದುವಲ್ಲಿ ಅಚಲಾನಂದರು ತಮ್ಮ ಪತ್ನೀಪುತ್ರ ಪರಿವಾರ ಸಮೇತರಾಗಿ ಪಂಢರಾಪುರಕ್ಕೆ ತೆರಳಿ, ಅಲ್ಲಿ ಭೀಮಾನದಿಯಲ್ಲಿ ಸ್ನಾನ ಮಾಡುತ್ತಿರುವಾಗ ಮಧ್ಯಾಹ್ನ ಕಾಲದಲ್ಲಿ ಅವರಿಗೆ ವಿಠಲನ ಅನುಗ್ರಹವಾದ ಸಂಗತಿಯನ್ನು ಕನ್ನಡ ಗದ್ಯದಲ್ಲಿ ಈ ಕೆಳಗೆ ಕಂಡಂತೆ ನಿರೂಪಿಸಿರುವುದು ನನ್ನ ಗಮನಕ್ಕೆ ಬಂದಿತು.

> "ಸ್ವಸ್ತಿ ಶ್ರೀ ವಿಜಯಾಭ್ಯುದಯ ಶ್ರೀಮನ್ನೃಪ ಶಾಲಿವಾಹನ ಶಕ ವರ್ಷಃ 801ನೆ ವಿಳಂಬಿ ಸಂವತ್ಸರದ ಚೈತ್ರ ಶುದ್ಧ 10ಯಲು ಶ್ರೀಮದ...ನದಿಯಲು ಮಾಧ್ಯಾಹ್ನಿಕಾರ್ಘ್ಯ ಪ್ರದಾನ ಕಾಲದಲ್ಲಿ ಪ್ರತ್ಯಕ್ಷರಾಗಿ ಹಸ್ತಗತರಾದ ಶ್ರೀ ವಿಠಲಮೂರ್ತಿಯ..."

ಅನಂತರ ನಾಗನದಿಯ ಸಮೀಪದಲ್ಲಿದ್ದ ತಮ್ಮ ಊರಿಗೆ (ಇಂದಿನ ತುರುವೇಕೆರೆ) ಹಿಂದುರಿಗಿದ ಬಳಿಕ ಅವರು ತಮ್ಮ ಪೂಜಾವ್ಯವಸ್ಥೆಯನ್ನು ಹೇಗೆ ಏರ್ಪಡಿಸಿದರೆಂಬುದನ್ನು ಈ ರೀತಿ ತಿಳಿಸಿದೆ.

> "ಆಗ್ಗೆ ಇದ್ದ ಬಳ್ಳಾಳ ರಾಜರಿಂದ ಸರ್ವಮಾನ್ಯವನು ಅಗ್ರಹಾ...ಮಾಡಿ ತೊಂಬತ್ತಾರು ಕುಟುಂಬಕೆ ಕೊಟ್ಟು ನೃಶಿಂಹಪುರವೆಂದು ಅಗ್ರಹಾರಕೆ ನಾಮುಮಂ ಕಲ್ಪಿಸಿ ಈ ಗ್ರಾಮದಲ್ಲಿ ವೃತ್ತರೆಗೆ ಕೊಟ್ಟು ದಕ್ಷಿಣ ಭಾಗದಲ್ಲಿ ತಂಮ್ಮ ದೇವತಾರ್ಚನೆ ಇಡತಕ್ಕ ಮಠಕ್ಕೂ ತಂಮ್ಮ ವಾಸಕ್ಕೂ ಇಟ್ಟುಕೊಂಡಿದ್ದ ಶಕವರ್ಷ 803ನೆಯ ಶಾರ್ವರಿ ಸಂವತ್ಸರದ ಮಾಘಶುದ್ಧ 12 ಯಲ್ಲೂ ತಂಮ್ಮಾ...ರಿಗೆ ಈ ದೇವತಾರ್ಚನೆ ಮುಂತಾದ್ದು ವಹಿಸಿದ್ದಲ್ಲದೆ ಚಿಕ್ಕ ಹೆಂಡತಿ ಮಕ್ಕಳಾದ ಗೋಪಿನಾಥದಾಸರಿಗೆ 12 ಕ್ಷೇತ್ರ ಸಾಲಿಗ್ರಾಮ ಪ್ರತ್ಯೇಕವಾದ ವಿ...ಷವಾದ ಅನಂತಮೂರ್ತಿ ಸಾಲಿಗ್ರಾಮ 1 ಸಹ ತಾವು ಪಡದಿದ್ದ 5 ವುಪಗ್ರಾಮದಿಂದ ವಳಿತವಾದ ಅಣತಿ ಅಗ್ರಹಾರದಲ್ಲಿ ವಾಸಕ್ಕೆ ನಿಂತು ನಂತರ ಮುದ್ದು ವಿಠಲದಾಸರು ಪುತ್ರಪೌತ್ರಪಾರಂಪರ್ಯ ವಾಗಿ ದೇವರಸೇವೆ ನಡಿಸುತ್ತಾ ಪಾಂಡುರಂಗ ದಾಸರ ದಿವಸದವರಿಗೂ ನಡೆಯಿತು. ಅದು

---

5 ಶ್ರೀ ಪುರಂದರದಾಸರು ಮತ್ತು ಕರ್ನಾಟಕ ಶ್ರೀ ಹರಿದಾಸರ ಪರಂಪರೆ (1944), ಪು. 6–7.

6 ಶ್ರೀ ಹರಿದಾಸರ ಉಗಾಭೋಗಗಳು (ಹರಿದಾಸ ಭಾರತಿ, ವಿಜಯಾಂಕ ರತ್ನ ೫–1965) ಪು.1–7 ಪ್ರಕಾಶಕರು, ಹರಿದಾಸ ರತ್ನಂ ಶ್ರೀ ಗೋಪಾಲದಾಸರು)

ವರೆಗೆ ದೊ. 1464ನೆಯ ನಂದನ ಸಂವತ್ಸರದಲ್ಲಿ ಅಚ್ಚುತಮಹಾರಾಜರಿಂದ ತಾವು ಸರ್ವಮಾನ್ಯ ಗ್ರಾಮಗಳಂನ್ನು ಪಡೆದು ಸಹಾವಂಶೀಯರೆಲ್ಲರೂ ನಿರ್ವಿವಾದವಾಗಿ ಅನುಭವಿಸುವುದಕ್ಕೋಸ್ಕರ ತ...ಗಿದ್ದದ್ದನ್ನು ಮೂರು ಬುಡಕಟ್ಟುಯಂಬದಾಗಿ ನಿಬಂಧನೆ ಮಾಡಿ ಈ ಬುಡಕಟ್ಟಿನವರು ಅನ್ಯೋನ್ಯವಾಗಿ ತ್ರಿರಾತ್ರಿ, ಆಶೌಚಾನುಷ್ಠಾನ ಮಾಡಬೇಕೆಂತಲೂ ಈ ಸ್ಥಿತಿಗತಿಗಳಂನು ತಂಮ್ಮತಂಮ್ಮ ಭಾಗ ಪ್ರಕಾರ ಅನುಭವಿಸುತ್ತಾ ದೇವತಾರಾಧನೆಯನ್ನು ಪೂಜೋಪಕರಣಗಳಂನ್ನು ಸಹಾ ಆಯಾಯಾ ಕಾಲಕ್ಕೆ ಸರ್ವರೂ...ವ್ಯತ್ಯಾಸವಿಲ್ಲದಂತೆ ವೊಪ್ಪಿಸುತ್ತಾ ನಡೆಯಬೇ[ಕು]".

"ಅಚಲಾನಂದ ಸ್ವಾಮಿಗಳವರ ಮಠದ ವಿವರ" ಎಂಬುದಾಗಿ ಸೂಚಿಸಿ "ಪಾಂಡುರಂಗೆಯಲ್ಲೂ ಮಠ 1, ಕಳಸದಲ್ಲೂ ಮಠ 1, ವಿದ್ಯಾನಗರದಲ್ಲಿ ಮಠ1, ಪೆನುಗೊಂಡೆಲಿ ಮಠ1, ರಾಮೇಶ್ವರದಲ್ಲಿ ಮಠ1, ಕಾಶಿಯಲ್ಲಿ ಅವಿಮುಕ್ತದ ಮಠ 1, ಕೆಳದಿ ಬಿದುಲೂರಲ್ಲೂ ಮಠ 1, ಅಂತು ಮಠ 7" ಎಂದೂ ಹೇಳಿದೆ.

ಅಚಲಾನಂದರ ಕಾಲದಿಂದ ಪೂಜಿಸುತ್ತಾ ಬಂದಿರುವ ಮೂರ್ತಿ, ಸಾಲಿಗ್ರಾಮಗಳ ವಿವರವನ್ನೂ ಆ ಮಠಕ್ಕೆ ದತ್ತಿಯಾಗಿ ಬಂದಿದ್ದ ಗ್ರಾಮಗಳೇ ಮೊದಲಾದುವನ್ನೂ, ಅಚಲಾನಂದರ ಶಿಷ್ಯರ ಹೆಸರುಗಳನ್ನೂ ಕೊಟ್ಟಿದೆ.

ಹೀಗೆಯೇ ಸಂಸ್ಕೃತದಲ್ಲಿ ರಚಿತವಾದ ಗ್ರಂಥವೊಂದರ ಓಲೆಯಲ್ಲಿ ಈ ಕೆಳಕಂಡಂತೆ ಉಕ್ತವಾಗಿದೆ.:

> "ಶ್ರೀಮತ್ಪಾಂಡುರಂಗ ಭಗವತ್ಪಾದಾಚಾರ್ಯ ವಿರಚಿತೇ ಸ್ವತಂತ್ರ ವೈಷ್ಣವ ಮರ್ಮಭೇದ ಸದಾಚಾರ ವಿಠಲಭಾಷ್ಯಂನ್ನಾಮ ನವಮಾಧ್ಯಾಯಃ...ನಂದನ ಸಂವತ್ಸರದ ಚೈತ್ರ ಶುದ್ಧ 5 ಮಿಯಲ್ಲೂ ಹರಿದಾಸ್ಯೆಯ್ಯನವರು ಬರಶಿದಂಥಾ ವಿಠಲ ಭಾಷ್ಯದ ಗ್ರಂಥದ ಪುಸ್ತಕಕ್ಕೆ ಮಂಗಳ ಮಹಾಶ್ರೀ ಶ್ರೀಶ್ರೀ".

ಪ್ರಕೃತದಲ್ಲಿ ನಮಗೆ ಲಭಿಸಿರುವ ಈ ದಾಖಲೆಗಳಿಂದ ಅಚಲಾನಂದ ದಾಸರನ್ನು ಕುರಿತು ಈ ವರೆಗೆ ನಡೆದಿರುವ ಚರ್ಚೆಗಳನ್ನು ಪುನರ್ವಿಮರ್ಶಿಸುವುದು ಸೂಕ್ತವೆನ್ನಿಸುತ್ತದೆ.

ಮೇಲ್ಕಂಡ ಕನ್ನಡದ ಓಲೆಯ ಗ್ರಂಥವು ಅಚಲಾನಂದದಾಸರ ಸಮಗ್ರ ಜೀವನವನ್ನು ಕುರಿತುದಾಗಿರಬೇಕು. ಈಗ ದೊರೆತ ನಾಲ್ಕೇ ನಾಲ್ಕು ಓಲೆಗಳನ್ನು ಪರಿಶೀಲಿಸಿದಾಗ, ಅದರಲ್ಲಿ ಅಚ್ಚುತರಾಯನ ಹೆಸರನ್ನು ಹೇಳಿರುವುದಲ್ಲದೆ ಆತನು ರಾಜ್ಯಭಾರ ಮಾಡುತ್ತಿದ್ದ ಕಾಲವನ್ನು ಶಾ.ಶ. 1464 (ಕ್ರಿ. ಶ. 1542) ಎಂಬುದಾಗಿ ನಿರೂಪಿಸಿದೆ. (ಇಲ್ಲಿ ಉಕ್ತವಾಗಿರುವ ವರ್ಷದ ಹೆಸರು ಸ್ವಲ್ಪ ತಪ್ಪಾಗಿದೆ. ಅದು ನಂದನ ಸಂವತ್ಸರವೇ ಆಗಿದ್ದಲ್ಲಿ ಆಗ ಕಾಲ ಶಾ. ಶ. 1454 ಆಗುತ್ತದೆ. ಇಲ್ಲವೇ 1464ನೆಯ ವರ್ಷವೇ ಆಗಿದ್ದಲ್ಲಿ ಆಗ ಶುಭಕೃತು ಸಂವತ್ಸರವಾಗುತ್ತದೆ.) ಒಟ್ಟಿನಲ್ಲಿ ಇದು ವಿಜಯನಗರದ ಅಚ್ಯುತರಾಯನ ಕಾಲಕ್ಕೆ ಸರಿಹೋಗುತ್ತದೆ. ಕಾಲಕ್ರಮೇಣದಲ್ಲಿ ಈ ವಂಶೀಯರಲ್ಲಿ ಆದ ಮೂರು ವಿಭಾಗಗಳ ವ್ಯವಸ್ಥೆ, ಮುದ್ದು ವಿಠಲದಾಸರ ತರುವಾಯ ಬಂದಂಥ ಪಾಂಡುರಂಗದಾಸರ ಉಲ್ಲೇಖ, (ಈ ಪಾಂಡುರಂಗ ದಾಸರನ್ನು 'ಭಗವತ್ಪಾದಾಚಾರ್ಯರಾದ ಪಾಂಡುರಂಗದಾಸರು' ಎಂಬುದಾಗಿಯೂ ನಿರ್ದೇಶಿಸಿದೆ.) ಈ ಮಾಹಿತಿಗಳನ್ನು ಇದೇ ವಂಶದಲ್ಲಿ "ಅಪುತ್ರವಂತರಾದ ಜ್ಯೇಷಾಂಶದ ಲಕ್ಷ್ಮಯನವರಿಗೆ ಕನಿಷ್ಠ ಸಂತತಿಯಿಂದ ದತ್ತನಾದ ನರಸಿಂಹನ ತಿಳುವಳಿಕೆಗೋಸ್ಕರ ಹರಿ[ದಾಸಯ್ಯ]'ನವರು ಬರೆಸಿದ್ದು ಮೊದಲಾದುವುಗಳನ್ನು ಗಮನಿಸಿದಾಗ, ಈ ಕೃತಿ ಕ್ರಿ.ಶ. 1532 ಇಲ್ಲವೇ ಕ್ರಿ.ಶ. 1542ರಿಂದ ಈಚೆಗೆ ರಚಿತವಾದದ್ದು ಎನ್ನುವುದು ಸ್ಪಷ್ಟವಾಗುತ್ತದೆ.

ಅಚಲಾನಂದದಾಸರನ್ನು ಕುರಿತು ಸಂಸ್ಕೃತ ಪದ್ಯದ ವ್ಯಾಖ್ಯಾನದ ಬಗ್ಗೆ ಉಂಟಾಗಿರುವ ಭಿನ್ನಾಭಿಪ್ರಾಯಗಳು ಇಲ್ಲಿ ಗದ್ಯದಲ್ಲಿ ಸೂಚಿತವಾಗಿರುವ ಕಾಲಸೂಚನೆಯಿಂದ ಬಹುಮಟ್ಟಿಗೆ ಪರಿಹಾರವಾಗುತ್ತದೆ ಎನ್ನಬಹುದು. ಅಚಲಾನಂದರಿಗೆ ಪಾಂಡುರಂಗನು ಪ್ರತ್ಯಕ್ಷವಾದದ್ದು ಶಾ.ಶ. ವಿಳಂಬಿ ಸಂವತ್ಸರ 801 ಎಂದು ಒಂದು ಕಡೆ ಹೇಳಿರುವುದಲ್ಲದೆ (ಇಲ್ಲಿ ಸಂವತ್ಸರಾನುಸಾರವಾಗಿ ಹೇಳುವುದಾದರೆ ಇದು 800 ಎಂದಾಗಬೇಕು), ಆ ಬಳಿಕ ಅಚಲಾನಂದರು ತಮ್ಮ ಪೂಜಾವ್ಯವಸ್ಥೆಯನ್ನು ಮಾಡಿದ ಕಾಲವನ್ನು

ಶಾ.ಶ. ಶಾರ್ವರಿ ಸಂವತ್ಸರ 803 ಎಂದೂ ತಿಳಿಸುವುದರಿಂದ (ಇಲ್ಲಿ ವಾರದ ಹೆಸರು ಏಕೆ ಬಿಟ್ಟು ಹೋಗಿ ಗಿರುವುದೋ ತಿಳಿಯದು), ಈ ಉಭಯಘಟನೆಗಳೂ 9ನೆಯ ಶತಮಾನಕ್ಕೇ ಸೇರಿದ್ದು, ಪರಸ್ಪರ ಪೂರಕವಾಗುತ್ತವೆ. ಇದರಿಂದ ಅಚಲಾನಂದದಾಸರ ಕಾಲ ಕ್ರಿ. ಶ. 879 ಹಾಗೂ ಕ್ರಿ. ಶ. 891 ಎಂದು ಸ್ವವಿದಿತವಾಗುತ್ತದೆ. ಈ ಕಾಲಾವಧಿ ರಾಷ್ಟ್ರಕೂಟರದು ಆದೀತೇ ವಿನಾ ಗ್ರಂಥದಲ್ಲಿ ಉಕ್ತವಾಗಿರುವಂತೆ ಬಲ್ಲಾಳರದು ಆಗುವುದಿಲ್ಲ.

ಅಚಲಾನಂದರನ್ನು 'ಅಚಲಾನಂದ ಸ್ವಾಮಿಗಳು' ಎಂಬುದಾಗಿಯೂ ಕರೆದಿರುವುದಲ್ಲದೆ ಅವರು ಸ್ಥಾಪಿಸಿದ 7 ಮಠಗಳ ವಿವರಗಳನ್ನು (ಇದು ಶ್ರೀ ಬೇಲೂರು ಕೇಶವದಾಸರಿಗೆ ದೊರೆಯದಿದ್ದ ಸಂಗತಿ), ಅವರ ಶಿಷ್ಯವರ್ಗವನ್ನೂ, ಅವರಿಗೆ ದತ್ತಿಯಾಗಿ ಬಂದ ಹಲವಾರು ಗ್ರಾಮಗಳನ್ನೂ ಹೇಳಿರುವುದರಿಂದ ಇವರು ಸಂನ್ಯಾಸಾಶ್ರಮವನ್ನು ಸ್ವೀಕರಿಸಿ ಮಹಾಪ್ರಭಾವಶಾಲಿಗಳಾಗಿದ್ದ ಯೋಗಿಗಳಾಗಿದ್ದಿರಬಹುದೆಂದು ಹೇಳಲು ಅವಕಾಶವಿದೆ. (ಅವರ ವೃಂದಾವನದ ಸಂಗತಿಯೇನಾದರೂ ಬೆಳಕಿಗೆ ಬಂದರೆ ಈ ಊಹೆ ದೃಢ ವಾಗುತ್ತದೆ.) ಅವರ ಶಿಷ್ಯರಲ್ಲಿ ಮೊದಲಿನ ಕೆಲವರನ್ನು 'ಅಚಲಾನಂದರ ಕಾಲದವರು' ಎಂದು ಸೂಚಿ ಸುವುದರಿಂದ ಉಳಿದ ಇತರರು ಬೇರೆ ಬೇರೆ ಕಾಲಗಳಲ್ಲಿ ಈ ಸಪ್ತ ಮಠಗಳ ಪೀಳಿಗೆಯಲ್ಲಿ ಬಂದವರೆಂದು ತೋರುತ್ತದೆ. ಇವರಲ್ಲಿ 'ಹರಿಕಾರ ದಾಸೈಯ್ಯ, ಹರಿದಾಸೈಯ್ಯ, ಹರಿದಾಸೈಯ್ಯ' ಎಂಬ ಮೂರು ಹೆಸರುಗಳು ಬೇರೆ ಬೇರೆಯಾಗಿ ಬರುತ್ತವೆ. ಈ ಮೂವರೂ ಬೇರೆ ಬೇರೆ ಕಾಲಕ್ಕೆ ಸೇರಿದವರಿರಬೇಕು. ಇಲ್ಲಿ ದೊರೆತಿರುವ ಸಂಸ್ಕೃತ ಗ್ರಂಥವನ್ನು ಹರಿದಾಸೈಯ್ಯನು ಬರೆಸಿದನೆಂದು ಸ್ಪಷ್ಟವಾಗಿ ಉಲ್ಲೇಖಿಸಿದೆ. ಅಲ್ಲದೆ ಅದರ ಕರ್ತೃವನ್ನು 'ಶ್ರೀಮತ್ಪಾಂಡುರಂಗ ಭಗವತ್ಪಾದಾಚಾರ್ಯ' ಎಂದು ನಿರ್ದೇಶಿಸಿದೆ. ಮೇಲೆ ಉಕ್ತವಾದ ಅಚಲಾನಂದರ ಪೀಳಿಗೆಯ ಪಾಂಡುರಂಗದಾಸರನ್ನು 'ಭಗವತ್ಪಾದಾಚಾರ್ಯರು ಪಾಂಡುರಂಗದಾಸರು' ಎಂದು ಕರೆದಿರುವುದಲ್ಲದೆ, ಪ್ರಕೃತ ಕನ್ನಡ ಗ್ರಂಥದಲ್ಲಿನ ವಿವರಗಳನ್ನು ಈ ದಾಸರು ನಿಬಂಧಿಸಿ ಲೇಖನಗೊಳಿಸಿದರೆಂದೂ, ಅದನ್ನು ಹರಿದಾಸೈಯ್ಯನೇ ಬರೆಸಿರಬಹುದೆಂದೂ ಕಡೆಯಲ್ಲಿನ ಅಸ್ಪಷ್ಟ ಪಂಕ್ತಿಗಳ ಮೂಲಕ ಮನವರಿಕೆಯಾಗುತ್ತದೆ. ಈ ಅಂಶಗಳನ್ನೆಲ್ಲ ಗಮನಿಸಿದರೆ ಅಚಲಾನಂದರ ಶಿಷ್ಯವರ್ಗದವರಾದ ಪಾಂಡುರಂಗದಾಸರು ಅವರಂತೆಯೇ ಸಂನ್ಯಾಸಾಶ್ರಮ ಸ್ವೀಕರಿಸಿ, ಅಚಲಾನಂದರ ಅನುಗ್ರಹ ದೇವತೆಯಾದ ವಿಠಲನನ್ನು ಕುರಿತು ಒಂದು ಭಾಷ್ಯವನ್ನು ರಚಿಸಿರಬೇಕೆಂದು ತೋರುತ್ತದೆ. ಇಲ್ಲಿ ಪ್ರಯೋಗವಾಗಿರುವ 'ಸ್ವತಂತ್ರ ವೈಷ್ಣವ ಮರ್ಮಭೇದ ಸದಾಚಾರ' ಎಂಬ ಮಾತುಗಳು ಯಾವುದೋ ವಿಶೇಷಾರ್ಥವನ್ನು ಒಳಗೊಂಡಿರಬೇಕು ಎನ್ನಿಸುತ್ತದೆ.

ಈ ಮೇಲ್ಕಂಡ ಪರಿಶೀಲನೆಗೆ ಅನುಸಾರವಾಗಿ ಪೂರ್ವೋಕ್ತ ಅಚಲಾನಂದದಾಸರನ್ನು 'ಅಚಲಾನಂದ ಸ್ವಾಮಿ'ಗಳೆಂದು ಎಣಿಸಿ, ಅವರನ್ನು ಕ್ರಿ. ಶ. 9ನೆಯ ಶತಮಾನಕ್ಕೆ ಸೇರಿದವರೆಂದೂ, ಅವರು ವಿಠಲೋ ಪಾಸಕರಾಗಿ ಭಾಗವತಧರ್ಮವನ್ನು ಅನುಸರಿಸಿದವರೆಂದೂ ಹೇಳಬೇಕಾಗುತ್ತದೆ.

ಇನ್ನು ಅಚಲಾನಂದ ವಿಠಲಾಂಕಿತವಾಗಿ ದೊರೆಯುವ ಕೃತಿಗಳ ವಿಚಾರದತ್ತ ಸ್ವಲ್ಪ ಪರಿಶೀಲಿಸು ವುದು ಅಗತ್ಯ. ಈ ಅಂಕಿತದಲ್ಲಿ ಈಗಾಗಲೇ ಹಲವಾರು ಉಗಾಭೋಗಗಳೂ, ಸುಳಾದಿಗಳೂ ಕೀರ್ತನೆಗಳೂ ನಮ್ಮ ಗಮನಕ್ಕೆ ಬಂದಿವೆ. ಇವುಗಳು ಭಾಷಾದೃಷ್ಟಿಯಿಂದ ನಡುಗನ್ನಡ ಕಾಲಕ್ಕೆ ಸೇರಿದುವುವಾಗಿರು ವವಲ್ಲದೆ, ಮಾಧ್ವಮತದ ಹೆಸರನ್ನೂ ಉಲ್ಲೇಖಿಸಿರುವುದರಿಂದ ಈ ರಚನೆಗಳ ಕರ್ತೃ ಮಾಧ್ವ ಸಂಪ್ರ ದಾಯಕ್ಕೆ ಸೇರಿದ ಹರಿದಾಸರೊಬ್ಬರ ಕೃತಿಗಳಿರಬೇಕೆಂಬುದರಲ್ಲಿ ಸಂದೇಹವಿಲ್ಲ. ಈ ಹರಿದಾಸರು ಶ್ರೀ ಗೋರಬಾಳು ಹನುಮಂತರಾಯರು ಸೂಚಿಸಿರುವಂತೆ 60 ಜನ ಆದ್ಯರಲ್ಲಿ ಒಬ್ಬರಾಗಿರಬಹುದು. ಇಲ್ಲವೇ ಆರ್. ಎಸ್. ಪಂಚಮುಖಿಯವರು ಅಭಿಪ್ರಾಯ ಪಡುವಂತೆ ಪುರಂದರದಾಸರ ಸಮಕಾಲೀನರೇ ಆಗಿರಬಹುದು. ಪ್ರಕೃತದಲ್ಲಿ ಗೋರಬಾಳು ಹನುಮಂತರಾಯರೂ ಮತ್ತು ಪಾವಂಜೆ ಗುರುರಾಯರೂ ಅಚಲಾನಂದ ವಿಠಲಾಂಕಿತವಾದ ಉಗಾಭೋಗಗಳನ್ನು ಪ್ರಕಟಿಸಿರುವರು. ಇವುಗಳಲ್ಲಿ ಕೆಲವು ಅಂಕಿತ ಪಲ್ಲಟಗಳಾಗಿ ಪ್ರಯೋಗದಲ್ಲಿದೆಯೆಂಬುದನ್ನು ಶ್ರೀ. ಕಪಟರಾಳು ಕೃಷ್ಣರಾಯರು ಬರೆದಿರುವ 'ಹರಿ ದಾಸರ ಪರಂಪರೆ' ಎಂಬ ಲೇಖನದಿಂದ ಸ್ಪಷ್ಟವಾಗುತ್ತದೆ7. ಆದ್ದರಿಂದ ಈಗ ನಮಗೆ ದೊರೆತಿರುವ

7 ಕರ್ನಾಟಕ ಸಂಸ್ಕೃತಿಯ ಸಂಶೋಧನೆ (1970), ಪು. 285–290

ಈ ರಚನೆಗಳಲ್ಲಿ ಖಚಿತವಾಗಿ ಅಚಲಾನಂದ ವಿಠಲಾಂಕಿತವಾದುವು ಎಷ್ಟು ಎನ್ನುವುದು ಮೊದಲು ನಿರ್ಧಾರವಾಗಬೇಕಾಗುತ್ತದೆ.

ಈ ಉಭಯ ಅಚಲಾನಂದದಾಸರ ಶಂಕೆ ಹೊಸದೇನೂ ಅಲ್ಲ. ಶ್ರೀ ಬೇಲೂರು ಕೇಶವದಾಸರ ಕಾಲಕ್ಕೇ ಈ ಸಂದೇಹ ತಲೆದೋರಿರಬೇಕು ಎನ್ನಿಸುತ್ತದೆ. ಏಕೆಂದರೆ ಅವರು ತಮ್ಮ 'ಹರಿದಾಸ ಸಾಹಿತ್ಯ' ಎಂಬ ಕೃತಿಯಲ್ಲಿ ಈ ವಿಚಾರವನ್ನು ಮುಂದಿಟ್ಟು 'ಹರಿದಾಸ ಪರಂಪರೆಯಲ್ಲಿ ಇಬ್ಬರು ಅಚಲಾನಂದ ರಾಗಿಲ್ಲ. ಅಚಲಾನಂದ ಶಿಷ್ಯರು ಅನೇಕರಾಗಿದ್ದರೂ ಸಂತತಿಯುವರು ತಂದೆ ಅಚಲಾನಂದ ವಿಠಲ, ಗುರು ಅಚಲಾನಂದ ವಿಠಲ, ಮುದ್ದು ಅಚಲಾನಂದ ವಿಠಲ ಎಂಬುದಾಗಿ ಹಾಡಿದ ಹಾಡುಗಳಿವೆ' ಎಂದು ವಾದಿಸಿರುವರು8. ಆದರೂ ಉಪಲಬ್ಧವಿರುವ ಕೆಲವು ಕೃತಿಗಳ ಆಂತರಿಕ ಪ್ರಮಾಣ ಮತ್ತು ಭಾಷಾ ಸ್ವರೂಪವನ್ನು ಸಂಪೂರ್ಣವಾಗಿ ಅಲಕ್ಷಿಸಿ, ಇವುಗಳನ್ನೆಲ್ಲ ಕ್ರಿ.ಶ. 9ನೆಯ ಶತಮಾನಕ್ಕೆ ಸೇರಿದ ಅಚಲಾನಂದರು ಬರೆದಿರಬಹುದೆಂದು ಹೇಳುವುದು ಉಚಿತವೆನ್ನಿಸದು. ಹಾಗೆಯೇ ಈ ಕೃತಿಗಳ ಸಲುವಾಗಿ 9ನೆಯ ಶತಮಾನಕ್ಕೆ ಸೇರಿರಬಹುದಾದ ಮಹಾಮಹಿಮರಾದ ಒಬ್ಬರನ್ನು 13 ಇಲ್ಲವೇ 16 ನೆಯ ಶತಮಾನಕ್ಕೆ ಕರೆತರುವುದೂ ಅಷ್ಟೇ ಸೂಕ್ತವೆನ್ನಿಸದು.

ಅಚಲಾನಂದರು ಇಬ್ಬರಿರಬಹುದೆಂಬ ಈ ನಮ್ರ ಸೂಚನೆ ನಮ್ಮ ವಿದ್ವಾಂಸರಿಗೆ ಒಪ್ಪಿಗೆಯಾದಲ್ಲಿ ಆಗ ಒಬ್ಬರನ್ನು ಪ್ರಾಚೀನರಾದ ಭಾಗವತ ಸಂಪ್ರದಾಯದವರೆಂದೂ, ಇನ್ನೊಬ್ಬರನ್ನು ಮಾಧ್ವಮತಕ್ಕೆ ಸೇರಿದ ದ್ವೈತ ಪಂಥದವರೆಂದೂ ಹೇಳಲು ಸಾಧ್ಯವಾದೀತು. ಪ್ರಕೃತ ಈ ಮನೆತನದವರಲ್ಲಿ, ಕಾಲ ಕ್ರಮೇಣದಲ್ಲಿ ಈ ಎರಡು ಸಂಪ್ರದಾಯಗಳ ಮಿಶ್ರಣವೇನಾದರೂ ಕಂಡುಬರಬಹುದು. ಈ ಬಗ್ಗೆ ಈ ಮನೆತನಕ್ಕೆ ಸೇರಿದ ಸನ್ಮಾನ್ಯರಾದ ಹಿರಿಯರು ಇನ್ನೂ ಹೆಚ್ಚಿನ ಮಾಹಿತಿಗಳನ್ನು ತಿಳಿಸಿದ್ದೇ ಆದರೆ, ಈ ಸಮಸ್ಯೆ ತನಗೆ ತಾನಾಗಿಯೇ ಪರಿಹಾರವಾದೀತೆಂದು ವಿನಯಪೂರ್ವಕವಾಗಿ ವಿನಂತಿ ಮಾಡಿಕೊಳ್ಳ ಬಯಸುತ್ತೇನೆ.

---

8 ಹರಿದಾಸ ಸಾಹಿತ್ಯ (1944), ಪು.7

ವಿ.ಸೂ: ಮೈಸೂರು ವಿಶ್ವವಿದ್ಯಾನಿಲಯದವರು ಕೈಗೊಂಡಿರುವ ಹರಿದಾಸ ಸಾಹಿತ್ಯ ಸಂಶೋಧನೆಯ ಸಂಬಂಧದಲ್ಲಿ 21–6–1970ರಂದು ತುರುವೇಕೆರೆಯಲ್ಲಿರುವ ಅಚಲಾನಂದದಾಸರ ಮನೆತನದಲ್ಲಿರುವ ಹಸ್ತಪ್ರತಿಗಳನ್ನು ನೋಡುವ ಸದವಕಾಶ ನನಗೆ ದೊರೆತ್ತಿತ್ತು. ಈ ಸಂದರ್ಶನಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟ ಇದೇ ದಾಸರ ಮನೆತನಕ್ಕೆ ಸೇರಿದವರೂ ಮತ್ತು ತಿಪಟೂರಿನಲ್ಲಿ ಸುಪ್ರಸಿದ್ಧ ವಕೀಲರೂ ಆದ ಶ್ರೀ ವಿ. ಎಚ್. ವಿಠಲನರಸಿಂಹಯ್ಯ ಬಿ.ಎ.,ಬಿ.ಎಲ್. ಅವರಿಗೆ ನಾನು ತುಂಬ ಕೃತಜ್ಞನಾಗಿದ್ದೇನೆ. ಈ ಸಂದರ್ಭದಲ್ಲಿ ನನಗೆ ನೆರವಾದ ನಮ್ಮ ಸಂಸ್ಥೆಯ ಶ್ರೀ ಎಚ್. ಎಸ್. ಹರಿಶಂಕರ್, ಎಂ.ಎ. ಅವರಿಗೂ ನನ್ನ ವಂದನೆಗಳು. ಈ ಕಾರ್ಯದಲ್ಲಿ ತುಂಬ ಆಸಕ್ತಿ ವಹಿಸಿ, ಇದು ನೆರವೇರುವಂತೆ ಸಹಕರಿಸಿದ ನನ್ನ ವಿದ್ಯಾಗುರುಗಳಾದ ದಿವಂಗತ ಡಾ. ಡಿ. ಎಲ್. ನರಸಿಂಹಾಚಾರ್, ಎಂ.ಎ., ಡಿ.ಲಿಟ್. ಅವರನ್ನು ನಾನು ಭಕ್ತಿಪೂರ್ವಕವಾಗಿ ನೆನೆಯುತ್ತೇನೆ.

ಡಿ. ಎಲ್. ನರಸಿಂಹಾಚಾರ್

ರುದ್ರನಾಟಕೋಪನ್ಯಾಸಗಳು—೫, ೬

ಹತ್ತೊಂಬತ್ತನೆಯ ಶತಮಾನದಲ್ಲಿ ರುದ್ರನಾಟಕಗಳು :

ನಾಟಕಮಾರ್ಗದಲ್ಲಿ ಸ್ವತಂತ್ರ ರಚನೆಯನ್ನು ಕೈಕೊಳ್ಳುವ ಲವಲವಿಕೆ ಕಾಣಿಸುತ್ತದೆ. ಇಂಗ್ಲಿಷ್ ಕಾವ್ಯ ಮಾರ್ಗದಲ್ಲಿ ಸ್ವತಂತ್ರಮಾರ್ಗವನ್ನು ಹಿಡಿದವರು, ರೊಮ್ಯಾಂಟಿಕ್ ಕಾವ್ಯಮಾರ್ಗದಲ್ಲಿ ಬರೆಯ ತೊಡಗಿದವರು, ಮಾದರಿಗೆಂಬಂತೆ ಒಂದೆರಡು ನಾಟಕಗಳನ್ನು ಬರೆದಿದ್ದಾರೆ. ವರ್ಡ್ಸ್‌ವರ್ತ್ ಸ್ವತಂತ್ರಮಾರ್ಗದ ದೇವದೂತ. ಷೆಲ್ಲಿ, ಕೋಲ್‌ರಿಜ್, ರಾಬರ್ಟ್ ಸದೆ ಮುಂತಾದ ಲೇಖಕರೆಲ್ಲ ಪದ್ಯ ಪ್ರಬಂಧಕಾರರ ಶ್ರೇಣಿಯಲ್ಲಿ ಪ್ರಥಮಸ್ಥಾನಕ್ಕೆ ಯೋಗ್ಯರಾದವರು. ನಾಟಕದಲ್ಲಿ ಮಾತ್ರ ಇವರಿಗೆ ಮೊದಲ ಸ್ಥಾನವಿಲ್ಲ. ಈ ಕಾಲದ ರುದ್ರನಾಟಕಗಳಲ್ಲಿ ಶ್ರೇಷ್ಠವಾದ್ದು ಷೆಲ್ಲಿಯ ಚೆಂಚಿ (The Cenci, a tragedy). ಸುವ್ಯವಸ್ಥಿತವಾದ ದೃಶ್ಯ ರಚನೆ, ದೃಷ್ಟಿ ವಿಶೇಷ; ಆದರೆ ಒಟ್ಟು ನಾಟಕ ಯಾವ ಮನಃ ಪರಿಪಾಕವನ್ನೂ ಉಂಟು ಮಾಡದು. ಷೆಲ್ಲಿ ಪ್ರಥಮತಃ ಕವಿ, ಆದರ್ಶವಾದಿ. ಲೋಕದ ಲೀಲೆಯನ್ನೇ ಪ್ರಧಾನವಾಗಿ ಉಳ್ಳ ನಾಟಕದ ರಚನೆಯಲ್ಲಿ ಅವನ ಪ್ರತಿಭೆಯ ಓಡಾಟ ಹೆಚ್ಚಾಗಿಲ್ಲ. 'ಚೆಂಚಿ'ಯನ್ನು ಈಗ ಓದಿದರೆ ಕೊಂಚ ಅಸಹ್ಯಕರವಾಗಿಯೇ ಕಂಡುಬರುತ್ತದೆ. ಅತಿ ಅಶ್ಲೀಲಕರವಾದ ಸಂದರ್ಭಗಳಿಂದ ಮನಸ್ಸು ಜಿಗುಪ್ಸೆಪಡುತ್ತದೆ. They deal with perverted sex impulses. ಪ್ರಮುಖ ಕವಿಗಳು ತಮ್ಮ ಕೈವಾಡವನ್ನು ತೋರಿಸಿದ್ದರೂ, ಅವರ ರಚನೆಗಳು ಎಲ್ಲವೂ ಉತ್ಕೃಷ್ಟವಾಗಿವೆಯೆನ್ನಲಾಗದು. ಮಧ್ಯಮವರ್ಗದ ರಚನೆಗಳ ಸೃಷ್ಟಿಕಾಲ. ಷೇಕ್ಸ್‌ಪಿಯರ್‌ನಿಂದ ಎರಡು ಶತಮಾನಗಳ ವರೆಗೆ, ಡ್ರೈಡನ್‌ವರೆಗೆ ಹೊಸ ತಂತ್ರ, ಯೋಜನೆ ಕಂಡುಬರುವುದಿಲ್ಲ. ಅನುಕರಣೆಯ ಕಾಲ ಇದು. 19ನೆಯ ಶತಕದ ನಾಟಕಕಾರರು ಕೆಲವು ವಿಚಾರಗಳಲ್ಲಿ ಸ್ವಲ್ಪ ಮುಂದೆ ಹೋಗಿದ್ದಾರೆ. ಬ್ರೌನಿಂಗ್, ಕೋಣೆಯಲ್ಲಿ ಕುಳಿತು ಹಾಯಾಗಿ ಓದಿ ಮನಸ್ಸಿನಲ್ಲಿಯೇ ಅನುಭವಿಸುವಂಥ ನಾಟಕಗಳನ್ನು ಬರೆದಿದ್ದಾನೆ. ಮನಸ್ಸಿನ ರಂಗಮಂದಿರದಲ್ಲಿ ಪಾತ್ರನಿರ್ಮಾಣ, ಬಾಹ್ಯರಂಗಮಂದಿರದಲ್ಲಿ ಅಲ್ಲ. ಇಲ್ಲಿ ಬರುವ ನಾಟಕ ಸಂವಿಧಾನದಲ್ಲಿ ಕ್ರಿಯೆಗೆ ಪ್ರಾಧಾನ್ಯವಿಲ್ಲ. ಕಿ ಯೆಗೆ ತಡೆ ಬರಬಾರದು, ಹಾಗೆ ಮುಖ್ಯ ಕ್ರಿಯೆಗೆ ನಿಲುಗಡೆ ಬಾರದ್ದು ಗ್ರೀಕ್ ನಾಟಕಗಳಲ್ಲಿ ನಮಗೆ ಗೊತ್ತಾಗುತ್ತದೆ. ಕಥೆ ತಡೆತಡೆದು ಹೋಗುವ ಸ್ವಭಾವ ಬ್ರೌನಿಂಗ್ ನಾಟಕಗಳಲ್ಲಿ ಕಾಣುತ್ತದೆ. ಕ್ರೈಸ್ತ ಪುರಾಣ ಬೈಬಲ್ಲಿನವು ಇವನ ವಸ್ತು. ಮತ್ತೆ ಕೆಲವನ್ನು ಸಮಾಜಜೀವನದಿಂದಲೂ ತೆಗೆದುಕೊಂಡಿದ್ದಾನೆ. ಪಾತ್ರ ರಚನೆಯಲ್ಲಿ ಹೆಜ್ಜೆ ಮುಂದಿಟ್ಟಿದ್ದಾನೆ. ಪಾತ್ರಗಳ ಹೊರಗಣ ಕ್ರಿಯೆಗಳನ್ನು ನೋಡಿ ಅವುಗಳ ಮನೋಧರ್ಮ ಹೇಗಿರಬೇಕೆಂದು ಊಹೆ ಮಾಡಿಕೊಳ್ಳುವುದು ಮುಖ್ಯವಲ್ಲ. ಮನಸ್ಸಿನ ಒಳಗಿನ ಅಂತರಂಗದ ಆವಿಷ್ಕಾರಕ್ಕೆ ಹೆಚ್ಚು ಪ್ರಾಧಾನ್ಯ ಕೊಟ್ಟಿದ್ದಾನೆ. ಈ ಪಾತ್ರರಚನೆ ಕ್ರಮ ಕ್ರಮವಾಗಿ ಅವಾಸ್ತವಿಕವಾದ ಅಗೋಚರವಾದ ಅತೀಂದ್ರಿಯವಾದ ಇನ್ನೊಂದು ಲೋಕಕ್ಕೆ ನಮ್ಮನ್ನು ಕೊಂಡೊಯ್ಯುತ್ತದೆ. ಆದ್ದರಿಂದ ಲೋಕರೂಢಿಯ ವಾಸ್ತವಿಕತೆ ಕಂಡು ಬರದು, ಬೇರೆ ಲೋಕಕ್ಕೆ ಸೇರಿದುವು ಎಂಬ ಪಂಗಡಕ್ಕೆ ಸೇರಿವೆ. ಇಲ್ಲಿ ಪಾತ್ರಗಳನ್ನು ಧ್ಯಾನಿಸಬೇಕು, ಅಭಿನಯಿಸಲಾಗದು. ಪಾತ್ರದ ಕ್ರಿಯೆಗಿಂತ ಪಾತ್ರದ ಆವಿಷ್ಕಾರಕ್ಕೆ ಪ್ರಯತ್ನ ಪಟ್ಟಿರುವುದರಲ್ಲಿ ಬ್ರೌನಿಂಗ್ ಭಿನ್ನಮಾರ್ಗದಲ್ಲಿ ಒಂದು

ಹೆಜ್ಜೆ ಮುಂದಿಟ್ಟಿದ್ದಾನೆ. 19ನೆಯ ಶತಕದ ಇಂಗ್ಲಿಷ್ ನಾಟಕ ಪ್ರಪಂಚದಲ್ಲಿ ಯಾವ ವಿಶಿಷ್ಟ ಪ್ರಗತಿಯೂ ಉಂಟಾಗಿಲ್ಲ. ರೂಪ ರಚನೆಗಳಲ್ಲಿ ಹೆಚ್ಚಾಗಿ ಷೇಕ್ಸ್‌ಪಿಯರ್ ಸಂಪ್ರದಾಯ ಪಾಲಿತವಾಗಿದೆ. ಇಂತಹದರಲ್ಲಿ ಬ್ರೌನಿಂಗ್ ಕವಿ ಪಾತ್ರದ ಹೃದಯರಹಸ್ಯವನ್ನು ಬಯಲಿಗೆಳೆಯುವುದು ಕಾಣುತ್ತದೆ.

ಯೂರೋಪ್‌ನಲ್ಲಿ ಬೇರೆ ರೀತಿಯ ಪ್ರಯತ್ನಗಳು ಕಾಣುತ್ತವೆ. ಜರ್ಮನ್ ನಾಟಕಗಳಲ್ಲಿ ರುದ್ರ ನಾಟಕಗಳಲ್ಲಿ, ವ್ಯಕ್ತಿಗೆ ಪ್ರಾಧಾನ್ಯವಿಲ್ಲ. ಪ್ರತಿವ್ಯಕ್ತಿ ಯಾವುದೋ ಶಕ್ತಿಯ ಪ್ರಭಾವಕ್ಕೆ ಸಿಕ್ಕಿ ನಾನಾ ಅವಸ್ಥೆ ಗಳನ್ನು, ಅನುಭವಗಳನ್ನು ಪಡೆದುಕೊಳ್ಳುತ್ತದೆ. ಉದಾಹರಣೆಗೆ ಗಯಟೆಯನ್ನು ತೆಗೆದುಕೊಳ್ಳಿ. ಮಾನವನ ಇಡಿಯ ಸಮಾಜ ಜೀವನವೇ ಗಯಟೆಕವಿಯ 'ಫೌಸ್ಟ್'ಗೆ ವಸ್ತುವಾಗಿರುವುದು ಕಂಡುಬರುತ್ತದೆ. ರಾಜಕೀಯ ಸಾಮಾಜಿಕವಾದ ನಾನಾ ಬಗೆಯ ಹೋರಾಟಗಳು ಒಂದೇ ನಾಟಕದಲ್ಲಿ ಚಿತ್ರಿತವಾಗಬೇಕೆಂಬ ಸಂಕಲ್ಪ. ನಾಯಕ ಯಾವುದೋ ಶಕ್ತಿಗೆ ಪ್ರತೀಕವಾಗಿ ನಿಂತಿದ್ದರೂ, ಅವನ ಪಾತ್ರದಲ್ಲಿ ಬೆಳೆವಣಿಗೆ ಯಿದೆ. ಇಂತಹ ಸಾಮೂಹಿಕವಾದ ಶಕ್ತಿ ವಿಶೇಷಗಳನ್ನು ತೋರಿಸುವುದರಲ್ಲಿ ಒಂದು ಸಂಕೇತ ವಿಧಾನ ಕಂಡುಬರುತ್ತದೆ. ಬಿರುಗಾಳಿ ಪ್ರವಾಹಗಳನ್ನು ರಂಗಭೂಮಿಯಲ್ಲಿ ತೋರಿಸಿದರೆ ಅದು ರಾಜಕೀಯ ಸಾಮಾಜಿಕ ಆಂದೋಲನವನ್ನು ಸಂಕೇತಿಸುತ್ತದೆ. ಫೌಸ್ಟ್‌ಪಾತ್ರದ ಪರಿವರ್ತನೆ: ನಿಸ್ಸಂಗತೆಯನ್ನು ಪಡೆದು ಮೊದಮೊದಲು ತನಗೆ ತಾನೇ ಯೋಚಿಸುವ ಧೀಮಂತ; ಜ್ಞಾನತೃಷೆ ಪಡೆದಿದ್ದವನು, ಮನುಷ್ಯನ ತರ್ಕಶಕ್ತಿಯನ್ನೂ ಬುದ್ಧಿಶಕ್ತಿಯನ್ನೂ ನಂಬಿದ್ದವನು. ಆದರೆ ಇದು ಸಾಲದು, ಇದರಿಂದ ಜೀವನದ ಸಮಸ್ಯೆಗೆ ಸಹಾಯವಾಗದು ಎಂದು ಈ ಮಾರ್ಗವಲ್ಲಿ ಆತನಿಗೆ ನಿರಾಸೆ ಸಂಭವಿಸುತ್ತದೆ. ಜ್ಞಾನಮಾರ್ಗ ವನ್ನು ಬಿಟ್ಟು ಕರ್ಮಮಾರ್ಗಕ್ಕೆ ಇಳಿಯುತ್ತಾನೆ. ತನ್ನ ಸಂಕಲ್ಪವನ್ನು ಮಾಡಿ ತೋರಿಸಲು ಯತ್ನಿಸುತ್ತಾನೆ. ಫೌಸ್ಟ್‌ಗೆ ಮನಸ್ಸಿನ ಶಾಂತಿ ಲಭಿಸುತ್ತದೆ. ನಿರಂತರವಾದ ಕರ್ಮನಿಷ್ಠೆಯೇ, ಇತರರಿಗೆ ಉಪಕಾರ ಮಾಡಲು ಕೈಕೊಂಡ ಕರ್ತವ್ಯನಿಷ್ಠೆಯೇ ತನ್ನ ಶಾಂತಿಗೆ ಕಾರಣವೆಂಬ ನಿರ್ಧಾರಕ್ಕೆ ಬರುತ್ತಾನೆ. ಮನುಷ್ಯನ ನಾಗರಿಕತೆಯ ಬೆಳವಣಿಗೆಯನ್ನು ಪ್ರತ್ಯಕ್ಷವಾಗಿ ತೋರಿಸಲು ಹೊರಟಿದ್ದರೂ ಅದು ರಾಜಕೀಯ ಸಾಮಾಜಿಕ ಮುಂತಾದ ಇತರ ಶಕ್ತಿಗಳಿಗೆ ಅಧೀನವಾಗಿ(?). ಇವನ್ನು ಗೆದ್ದು ಮನಶ್ಶಾಂತಿ ಪಡೆಯುತ್ತಾನೆ.

ಅರಿಸ್ಟಾಟಲ್ ಅಭಿಪ್ರಾಯದ ಪ್ರಕಾರ, ಷೇಕ್ಸ್‌ಪಿಯರನ ಪ್ರಕಾರದ ಅಭಿಪ್ರಾಯ ಮೀರಿ ವಸ್ತುವೇ ಅಗಾಧವಾದ ವ್ಯಾಪ್ತಿಯನ್ನು ಪಡೆದುಕೊಂಡಿದೆ. ಇದರಿಂದ ವಸ್ತುರಚನೆಯಲ್ಲಿ ಬಹಳಮಟ್ಟಿಗೆ ಶೈಥಿಲ್ಯ ಕಂಡುಬರುತ್ತದೆ. ಷೇಕ್ಸ್‌ಪಿಯರನಲ್ಲೂ ಇದು ಕಾಣುತ್ತದೆ, ಗ್ರೀಕ್‌ನೊಡನೆ ಹೋಲಿಸಿದರೆ. ಗಯಟೆ ಫೌಸ್ಟ್ ನಾಟಕವನ್ನು ಒಂದೇ ನಿಟ್ಟಿಗೆ ಮುಗಿಸಲಿಲ್ಲ. 70ನೆಯ ವಯಸ್ಸಿನಲ್ಲಿ ಆರಂಭಿಸಿ 80 ನೆಯ ವಯಸ್ಸಿನಲ್ಲಿ ಮುಗಿಸಿದ್ದಾನೆ. ವಸ್ತುರಚನೆಯಲ್ಲಿ ಐಕ್ಯತೆಯನ್ನು, ಬಿಗುಪನ್ನು ನಿರೀಕ್ಷಿಸುವುದು ಅಸಾಧ್ಯ. ಇದನ್ನು ದೋಷವೆಂದು ಹೇಳುವುದು ಸರಿಯಲ್ಲ; ಗುರುತರವಾದ ದೋಷವಲ್ಲ ಇದು. ಸಾಧಿಸುವುದು ದೊಡ್ಡದು. ತ್ರಿಲೋಕಸಂಚಾರಿಯಾಗಿ ಈ ನಾಟಕವಿದೆ. (ಭೂಲೋಕ, ಅಧೋಲೋಕ ಮತ್ತು ದ್ಯುಲೋಕ). ಮೆಫಿಸ್ಟಾಫಿಲೀಸ್ ಫೌಸ್ಟ್‌ನ ಪ್ರಭಾವವನ್ನು ಹೆಚ್ಚಿಸಲು ಬಂದಿರುವ ಅಪ್ರಧಾನ ಪಾತ್ರ. ಸ್ವತಂತ್ರ ನಿಯೋಜನೆ ಮತ್ತು ವಸ್ತುವಿನ ಆಯ್ಕೆ ಕಂಡು ಬರುತ್ತದೆ; ವಾಡಿಕೆಯ ವಸ್ತುಗಳನ್ನು ಕವಿ ಕೈಬಿಟ್ಟಿದ್ದಾನೆ. ಹೆಚ್ಚಾಗಿ Symbolic method ಹಿಡಿದಿದೆ. ತನ್ನ ಅಧ್ಯಾತ್ಮಾನುಭವದಿಂದ ಮನಗಂಡ ಮನುಷ್ಯೇತಿಹಾಸದ ಜ್ಞಾನಸಾರವನ್ನು ಕೊಟ್ಟಿದ್ದಾನೆ. ಇದು ಗಯಟೆಯ ಸ್ವಂತ ಕೃತಿ. ಯಾವುದು ನಮಗೆ ಅಲಭ್ಯವೋ ನಮಗೆ ಮನಸಾ ಅಗಮ್ಯವೋ ಅದನ್ನು ಪಡೆಯಲು ಮನಸ್ಸು ಹಾತೊರೆ ಯುತ್ತದೆ, ಕೂಗಿ ಕರೆಯುತ್ತದೆ. ಇದನ್ನು ಫೌಸ್ಟ್‌ನ ಪಾತ್ರದಲ್ಲಿ ನಾವು ನೋಡಬಹುದು. ಗಯಟೆಯ ಕಾಲದ ಜರ್ಮನ್ ಜನಾಂಗದ ಆಸೆ ಆಕಾಂಕ್ಷೆಗಳನ್ನು ಪ್ರತಿಬಿಂಬಿಸುವ ನಾಟಕ ಇದು. ಒಬ್ಬ ವ್ಯಕ್ತಿಗೆ ಸಂಬಂಧಿಸಿದ್ದಲ್ಲ; ಸಂದೇಹ ಆಸೆ ಆಕಾಂಕ್ಷೆಗಳು, ಭಾವಾವೇಶ ಹೋರಾಟ ಸಾಧನೆ ಸಿದ್ಧಿಗಳು ಸಮಸ್ತ ಮಾನವ ಕುಲಕ್ಕೆ ಮಾನವನ ಅಧ್ಯಾತ್ಮಕ್ಕೆ ಸಂಬಂಧಪಟ್ಟಂತೆ ಕಂಡುಬರುತ್ತದೆ ಇಲ್ಲಿ. ಇದು ಗಯಟೆಯ ವಸ್ತುವಿನ ಆಯ್ಕೆಯ ಹೊಸಮಾರ್ಗ. ಇದೊಂದು ರುದ್ರನಾಟಕ ಎನ್ನುತ್ತಾರೆ. ಏಕೆಂದರೆ ಫೌಸ್ಟ್ ಯಾವ ನಂಬುಗೆಯನ್ನು ಇದುವರೆಗೆ ನಂಬಿರುತ್ತಾನೆಯೋ ಅದು ಕುಸಿದು ಹೋಗಿ ಅವನ ಸಮಗ್ರವಾದ ವ್ಯಕ್ತಿತ್ವವೇ ಪರಿವರ್ತನೆಗೊಳ್ಳುತ್ತದೆ. ಅವನ ನಚ್ಚಿನ ನಂಬಿಕೆಗೆ, ಸಂಕಲ್ಪಕ್ಕೆ ಕೊನೆ ಸಂಭವಿಸುತ್ತದೆ.

ಸಂಕೇತ ಪ್ರಧಾನವಾದ ನಾಟಕಗಳು ಕನ್ನಡದಲ್ಲಿ ಹೇರಳವಾಗಿ ಉಂಟು. ಮನುಷ್ಯನ ಸದ್ಗುಣ

ಮರ್ಗುಣಗಳಿಗೆ ಪ್ರತಿನಿಧಿಯಾಗಿ ಬಂದ ಪಾತ್ರಗಳು ಇಲ್ಲಿರುತ್ತವೆ. 'ಪ್ರಬೋಧ ಚಂದ್ರೋದಯ', 'ಮೋಹರಾಜ ಪರಾಜಯ' ಇವು ಸಾಂಕೇತಿಕ ನಾಟಕಗಳು. ಆದರೆ ಇವುಗಳಲ್ಲಿ ಗಯಟೆ ಕವಿಯ ವಸ್ತುವಿನ ಅನಂತತೆ ವೈವಿಧ್ಯ ಇವು ಕಂಡು ಬರುವುದಿಲ್ಲ. ಒಂದು ನಾಗರಿಕತೆ ನಷ್ಟವಾಗಿ ಇನ್ನೊಂದು ಯುಗದ ನಾಗರಿಕತೆಯನು ಪುನಃ ಸೃಷ್ಟಿಸುವ, ಕಟ್ಟುವ ಹವಣಿಕೆ ಕಾಣುತ್ತದೆ. 'ಶ್ಮಶಾನ ಕುರುಕ್ಷೇತ್ರ'ದಲ್ಲಿ ಭೀಷ್ಮ, ಕೃಷ್ಣ ಮತ್ತು ದುರ್ಯೋಧನರ ಪಾತ್ರಗಳಿಗೆ ಪ್ರಾಧಾನ್ಯವಿದೆ. ಆದರೆ ಹಳೆಯ ನಾಗರಿಕತೆಯ ಸಮಾಧಿಯ ಮೇಲೆ ಹೊಸ ನಾಗರಿಕತೆ ಹೇಗೆ ಸೃಜಿತವಾಯಿತು ಎಂಬುದನ್ನು ಗಮನಿಸಿದರೆ, ಪಾತ್ರಕ್ಕಿಂತ ವಸ್ತುವಿಗೆ ಪ್ರಾಧಾನ್ಯ ಕಂಡುಬರುತ್ತದೆ. ಮಹಾಭಾರತದ ಒಟ್ಟುಕಥೆ ದುರಂತತೆಯಲ್ಲಿ ಪರ್ಯವಸಾನವಾಗುವ ಕಥೆ. ಆ ಕಾಲದ ನಾಗರಿಕತೆಯ ನಷ್ಟದಿಂದ ಆಗುವ ದುರಂತತೆಯ ಅನುಭವದಿಂದ, ಮುಂದೆ ಬರುವ ನಾಗರಿಕತೆ ಅದನ್ನು ಹೇಗೆ ಮೀರಿ ನಿಲ್ಲಬಲ್ಲದೆಂಬ ಆಶಾವಾದವನ್ನು ಈ ನಾಟಕ ತೋರಿಸುತ್ತದೆ. ಪಾತ್ರದ ಹೆಚ್ಚಿನ ಮರ್ಮವನ್ನು ಪ್ರತಿಬಿಂಬಿಸುವುದಿಲ್ಲ. ಆದರೆ ಸ್ವಲ್ಪಮಟ್ಟಿಗೆ ಪಾತ್ರಗಳನ್ನು ಇನ್ನೊಂದು ಕಾರ್ಯಕ್ಕೆ ಉಪಯೋಗಿಸಿಕೊಂಡಿದೆ. ಮುಂಬರುವ ಕಲಿಯುಗದಲ್ಲಿ, ಎಂಥೆಂಥ ಸುಂದರಗಳನ್ನು ಕಾಣಬಹುದು ಎಂಬುದನ್ನು ಒಂದು ಗದ್ಯಭಾಗದಲ್ಲಿ ಹೇಳಿದೆ. ದುರ್ಯೋಧನನ ಜ್ಞಾನದೃಷ್ಟಿಗೆ ಅದು ಕಲಿಕಾಲದ ಮಹಿಮೆಯಾಗಿ ಗೋಚರಿಸಿದೆ. ಹಳೆಯದು ಹೋಗಬೇಕೆಂಬ ಮನೋಭಾವ ಇಲ್ಲಿದೆ. 'ಅಶ್ವತ್ಥಾಮನ್' ಪ್ರಭಾವ ಇಲ್ಲಿ ಕಂಡುಬರುತ್ತದೆಂದು ಊಹಿಸಬಹುದು: ಯುದ್ಧವನ್ನು ಹೊತ್ತಿಸಿದ ಪರಮಪಾಪಿಯನ್ನು ನರಕದಲ್ಲಿ ಗಿಡಿಯಬೇಕೆಂಬ ಖೇದದ ನುಡಿ (?) ಯುದ್ಧದ ಸರ್ವನಾಶವನ್ನು ಮೇಳದ ನುಡಿ ತನ್ನ ಗರ್ಭದಲ್ಲಿ ಅಡಗಿಸಿಕೊಂಡಿದೆ. ಬಹುಶಃ 'ಅಶ್ವತ್ಥಾಮನ್' ತರುವಾಯ, 'ಶ್ಮಶಾನ ಕುರುಕ್ಷೇತ್ರ' ಪ್ರಧಾನತೆ ಕಂಡುಕೊಂಡಿದೆ. ಬೃಹತ್ ಶಕ್ತಿಯ ಪ್ರತೀಕ ದ್ವಾಪರಯುಗದ ಈ ದುರ್ಯೋಧನ!

ಇನ್ನು ಎರಡನೆಯದು ಇಫಿಜೀನಿಯಾ. ಗ್ರೀಕ್ ನಾಟಕವನ್ನು ಬೇರೆ ರೀತಿಯಲ್ಲಿ ಹೇಳಿದೆ. ನೂತನ ಯೋಜನೆ ಯಾವುದೂ ನಮಗೆ ಸಿಗುವುದಿಲ್ಲ. ನೂತನವಸ್ತುವನ್ನು ನಾಟಕಕಾರರಿಗೆ ದೊರಕಿಸಿಕೊಡುವ ಸ್ವತಂತ್ರ ಮಾರ್ಗ ಹಾಕಿಕೊಟ್ಟಿದೆ. ಗಯಟೆಯ ಮಾರ್ಗದರ್ಶಿತ್ವದ ನಾಟಕ ಜರ್ಮನಿಯಲ್ಲಿ ಹೀಗೆಯೇ ಬೆಳೆದುಕೊಂಡು ಬಂದ ಪಕ್ಷದಲ್ಲಿ ನೂತನತೆಗೆ ಇನ್ನೂ ಸ್ವಲ್ಪಕಾಲ ತಡೆಯಬೇಕಾಗಿತ್ತು. ಇಬ್ಸನ್ ಕವಿ ನೂತನ ಮಾರ್ಗವನ್ನು ನಿರ್ಮಾಣ ಮಾಡುವವರಿಗೆ ದಾರಿ ತೋರಿಸಿಕೊಟ್ಟಿದ್ದಾನೆ. ಪದ್ಯನಾಟಕ, ಗದ್ಯನಾಟಕ, ಸಮಸ್ಯಾನಾಟಕ, ಮಾನಸಿಕ ವ್ಯಾಪಾರವನ್ನು ಒಳಹೊಕ್ಕು ನೋಡುವ ನಾಟಕಗಳುಂಟು. ನಾಟಕಕ್ಕೆ ಬೇಕಾದ ವಸ್ತುಗಳನ್ನು ಹುಡುಕಲು ತನ್ನ ಸುತ್ತಮುತ್ತಣಿಂದಲೇ ವಸ್ತುವನ್ನು ಪಡೆಯುತ್ತಾನೆ. ದೈನಂದಿನ ಜೀವನ ಸಾಮಾನ್ಯದಿಂದ ವಸ್ತುವಿನ ಆಯ್ಕೆ. ಕಾದಂಬರಿಗೂ ನಾಟಕಕ್ಕೂ ಹೆಚ್ಚು ವ್ಯತ್ಯಾಸ ಕಂಡುಬರುವುದಿಲ್ಲ. ಸುತ್ತಣ ಜೀವನದ ಪರಿಚಯವನ್ನು ಮಾಡಿಕೊಡಲು ಅಲ್ಲಿ ಕಾದಂಬರಿಗಳು ತೊಡಗಿರಲು ನಾಟಕದ ಪ್ರಾಧಾನ್ಯತಗ್ಗಿ ಹೋಯಿತು. ಇಬ್ಸನ್ ತನ್ನ ಕಾಲದ ಜನಸಾಮಾನ್ಯದ ಸಮಸ್ಯೆಗಳನ್ನೇ ಆಶ್ರಯಿಸಿದ್ದಾನೆ. ಸಮಾಜದಲ್ಲಿರುವ ಕೆಲವು ನಿಯಮಗಳ ರಭಸಕ್ಕೆ, ಬಡಿತಕ್ಕೆ ಸಿಕ್ಕಿದಂಥ ಬಾಳುವೆಯ ಅಸಂತೋಷದಿಂದೊದಗುವ ದುಃಖವನ್ನು ತೆಗೆದುಕೊಂಡಿದ್ದಾನೆ. ರಾಜಕೀಯವಾಗಿ, ಪೀನಲ್ ಕೋಡ್ ವಿಧಿಸುವಾಗ ನಡೆಯುವ ತಪ್ಪುಗಳುಂಟು. ಅಪರಾಧಿ ತಪ್ಪಿಸಿಕೊಂಡು ನಿರಪರಾಧಿಗೆ ಶಿಕ್ಷೆಯೊದಗುವುದುಂಟು. ಇವು ಕಾನೂನಿನ ದೃಷ್ಟಿಯಿಂದ ಸರಿಯೇ ಹೊರತು ನ್ಯಾಯದ ದೃಷ್ಟಿಯಿಂದ ಸರಿಯಲ್ಲ. ಸಮಾಜದ ಶಕ್ತಿಯನ್ನೂ, ಅದರ ಆಘಾತಕ್ಕೆ ಒಳಪಟ್ಟ ವ್ಯಕ್ತಿ ಜೀವನವನ್ನೂ ಸೇರಿಸಿ ಇಬ್ಸನ್ ರುದ್ರನಾಟಕ ರಚಿಸಿದ್ದಾನೆ. ಅಡ್ಡಿಮಾಡುವ ಸಮಾಜಶಕ್ತಿಗೆ ಪ್ರತಿಭಟನೆ–ವಿಜಯ ಲಭಿಸುವುದಿಲ್ಲ–ಆಘಾತಕ್ಕೆ ತುತ್ತಾಗಿ ಜೀವನದ ಮುರಿವು–ಇಂಥ ಸನ್ನಿವೇಶ ಆರಿಸಿಕೊಂಡಿದ್ದಾನೆ. ಆದ್ದರಿಂದ ಈತನ ನಾಟಕಗಳು ಗೃಹಜೀವನವನ್ನು ಪ್ರತಿಬಿಂಬಿಸುವ ನಾಟಕಗಳಾಗಿ ಕಾಣುತ್ತವೆ; ಈ ಬದುಕು ಬೇರೆ ಸಾಮಾಜಿಕ ರಾಜಕೀಯ ಶಕ್ತಿಗಳಿಂದ ಹೇಗೆ ದುಃಖಕ್ಕೆ, ದುರಂತಕ್ಕೆ ಕಾರಣವಾಗುತ್ತದೆ ಎಂಬುದನ್ನು ತೋರಿಸುತ್ತವೆ.

'ಡಾಲ್ಸ್ ಹೌಸ್, ('ಸೂತ್ರದ ಗೊಂಬೆ') ನಾಟಕ ತೆಗೆದುಕೊಳ್ಳಿ. ಒಂದು ಸಂಸಾರ; ಗಂಡ–ಹೆಂಡತಿ. ಗಂಡ ಸಂಪ್ರದಾಯವಾದಿ, ಹೆಂಡತಿ ಅದನ್ನು ಸಹಿಸಳು. ಈ ಕಷ್ಟದ ಬಿಡುಗಡೆಗೆ ಪ್ರಯತ್ನ ಮಾಡುತ್ತಾಳೆ. ಅವಳಿಗೂ ಗಂಡನಿಗೂ ದೃಷ್ಟಿ ವಿಶೇಷದಲ್ಲಿ ಹೊಂದಾಣಿಕೆಯಿರದೆ, ತನ್ನತನವನ್ನು ಕಂಡುಕೊಳ್ಳಲು ಆಕೆ

ಹೊರಟುಹೋಗುತ್ತಾಳೆ. ಯಾರೂ ಸಾಯುವುದಿಲ್ಲ. ರೋಮಾಂಚಕಾರಿಯಾದ ಘಟನೆ, ಮತ್ಸರ, ಕೊಲೆ ಎಂಬುದು ಇಲ್ಲೇನೂ ಕಾಣಿಸುವುದಿಲ್ಲ. ನಮ್ಮದನ್ನು ನಾವು ರೂಪಿಸಿಕೊಳ್ಳಬೇಕು. ಸ್ವತಂತ್ರವಾಗಿರಬೇಕು ಎನ್ನುವುದರಲ್ಲಿ ಸಮಾನ ನಿಷ್ಠುರತೆಯಿಂದ ಕೂಡಿರುವ ಎರಡು ದೃಷ್ಟಿಗಳೂ ಒಟ್ಟಿಗೆ ಬಂದು ಸೇರಲಿಕ್ಕೆ, ಸಮಂಜಸವಾಗಿ ಸೇರಲಿಕ್ಕೆ ಅಶಕ್ಯವಾಗಿ, ಆ ಕಾರಣದಿಂದ ದುರಂತತೆ ಸಂಧಿಸುತ್ತದೆ. ಸಾಮಾನ್ಯ ವ್ಯಕ್ತಿಗಳ ಜೀವನದಲ್ಲಿಯೂ ಅವರ ಉದ್ದೇಶ ಆದರ್ಶಗಳಲ್ಲಿಯೂ ದುರಂತತೆ ಬೇಕಾದಷ್ಟಿದೆ. ನಾಟಕಕ್ಕೆ ಅಳವಡಿಸಿಕೊಳ್ಳುವ ನೈಪುಣ್ಯದ ಮೇಲೆ ಇದು ಅವಲಂಬಿಸಿರುತ್ತದೆ. ಈ ಸಾಮಾನ್ಯತೆಯಿಂದ ನಾಟಕ ರಚನೆಯೇ ಸಾಧ್ಯವಿಲ್ಲ ಎನ್ನಲಾಗದು. ರುದ್ರನಾಟಕಕ್ಕೆ ವಸ್ತುವನ್ನು ಆಯ್ಕೆ ಮಾಡುವಾಗ ಪುರಾಣ ಇತಿಹಾಸಗಳ ಪ್ರಪಂಚವನ್ನೇ ಹುಡುಕಬೇಕಾದ ಆವಶ್ಯಕತೆಯಿಲ್ಲ. ಸಾಮಾನ್ಯ ಜನರ ಜೀವನದ ಗಣಿಯಲ್ಲಿಯೇ ಆ ವಸ್ತು ಸಿಕ್ಕುತ್ತದೆ. ಆದ್ದರಿಂದ ದುರಂತವಸ್ತುವಿನ ಕೊರತೆ ಮಾಯವಾಗುತ್ತದೆ. ಗ್ರೀಕ್ ಟ್ರ್ಯಾಜಿಡಿಯ ನಾಟಕಕಾರರು, ಸೆನೆಕ, ರಾಸೀನ್ ಇವರೆಲ್ಲರಲ್ಲೂ ಒಂದೇ ವಸ್ತು ಕಂಡ ಬರುತ್ತದೆ. ಇಬ್ಸೆನ್ ಪ್ರಭಾವ ಐರೋಪ್ಯನಾಟಕಕಾರರಲ್ಲಿ ಹೇರಳವಾಗಿ ಉಂಟು. ಷೇಕ್ಸ್‌ಪಿಯರನ ಅನಂತರ ಐರೋಪ್ಯನಾಟಕಕಾರನೆಂದರೆ ಇಬ್ಸನ್. ಅವನಿಗೆ ಉಂಟಾದ ಖ್ಯಾತಿ ಇವನಿಗೂ ಲಭಿಸಿದೆ.

ಸಾಮಾಜಿಕ ಸಮಸ್ಯೆಗಳನ್ನು ಅಳವಡಿಸಿಕೊಂಡಾಗ ಕೆಲವು ಅಶ್ಲೀಲ ಸಂಗತಿಗಳು ಕಾಣಿಸಿಕೊಳ್ಳುತ್ತವೆ. ಸ್ತ್ರೀಪುರುಷರ ಸಂಬಂಧದ ವಿಚಾರಗಳನ್ನು, ಸಂಕೋಚವಾಗುವಂಥ ಹೇಳಲಾಗದಂಥ ಅಸಹ್ಯವಾದವನ್ನು, ಹೇಳಬಾರದೆಂದು ಎಲ್ಲರೂ ಹೇಳುತ್ತಾರೆ. ಇದನ್ನು ತಿಳಿದುಕೊಳ್ಳಬೇಕು: ಗಾಂಭೀರ್ಯವಿರಬೇಕು, ಅಷ್ಟೆ. ಮನಸ್ಸಿಗೆ ಹೇಸಿಗೆಯಾಗಬಾರದು. ತತ್ತ್ವದೃಷ್ಟಿಯಿಂದ ಇದನ್ನು ತಿಳಿದುಕೊಳ್ಳಬೇಕು. ಸಮಾಜದಲ್ಲಿ ಕೊಳೆತು ನಾರುತ್ತಿರುವ ಹುಣ್ಣುಗಳನ್ನು ತೋರಿಸಲು ಹಿಂದೆ ಸರಿಯುವುದಿಲ್ಲ ಇಬ್ಸನ್. ತಂದೆ ಮಕ್ಕಳ ಸಂಬಂಧವನ್ನು ನಿರ್ದಾಕ್ಷಿಣ್ಯವಾಗಿ ಹೊರಗೆಳೆದುಹಾಕಿದ ಮುಚ್ಚುಮರೆಯಿಲಿತನವನ್ನು ಜನರು ಒಪ್ಪಿಕೊಳ್ಳಲಿಲ್ಲ. ಕಾಲಕ್ರಮದಲ್ಲಿ ಇಂಥ ರಚನೆ ಎಷ್ಟು ಮುಖ್ಯವಾದ್ದು ಎಂಬ ಅಭಿಪ್ರಾಯ ಜನಕ್ಕೆ ಬಂತು. ಒಟ್ಟಿನಲ್ಲಿ ಇಬ್ಸನ್ನಿನ ನೂತನ ನಿಯೋಜನೆ ಎರಡು ಬಗೆಯಾದ್ದು: 1. ವಸ್ತುವನ್ನು ಪೂರ್ಣವಾಗಿ ಬದಲಾಯಿಸುವುದು; 2. ರಹಸ್ಯವೂ ಮಾರ್ಮಿಕವೂ ಆದ ಸಂಗತಿಗಳನ್ನು ನಿಸ್ಸಂಕೋಚವಾಗಿ ಪ್ರತಿಪಾದಿಸುವುದು. ನಾಟಕದಲ್ಲಿ ಹೆಚ್ಚಾಗಿ ಹೃತ್ಸಂವಾದವನ್ನೂ ಸ್ವಗತ ಭಾಷಣವನ್ನೂ ಇವನು ತರುವುದಿಲ್ಲ. ಷೇಕ್ಸ್‌ಪಿಯರಿನಲ್ಲಿ ಅವು ಪಾತ್ರದ ಒಳಗನ್ನು ತೋರಿಸುತ್ತವೆ. ಪಾತ್ರಗಳ ಅಂತರಂಗ ಕ್ರಿಯೆಯನ್ನು ತೋರಿಸುತ್ತವೆ. ನಾಟಕದ ಷಡಂಶಗಳಲ್ಲಿ[?]. ಸಂಭಾಷಣೆಗಳಲ್ಲಿ ಕೆಲವು ಸೂಕ್ಷ್ಮತೆ ನಯಗಳನ್ನು ತಂದು ಸೇರಿಸಿ Soliloquyಗಳ ಕೆಲಸವನ್ನು ಇಲ್ಲಿ ಇಬ್ಸನ್ ಮಾಡಿಸಿದ್ದಾನೆ. ಇದು ಹೊಸ ಮಾರ್ಗ. ಸಂಭಾಷಣೆಯಲ್ಲಿ ಇದುವರೆಗೂ ಯಾವ ಪ್ರಗತಿಯಾಗಲಿ ಆದಂತೆ ನಾಟಕದ ಚರಿತ್ರೆಯಲ್ಲಿ ಕಂಡು ಬಂದಿರಲಿಲ್ಲ. ಬರಿಯ ಉಪನ್ಯಾಸವಷ್ಟೇ ಅಲ್ಲ. ಪಾತ್ರಗಳ ಹೃದಯದ ರಹಸ್ಯವನ್ನು ತೋರಿಸಲು, ಉಚಿತವಾದ ಮಾತಿನ ಅರ್ಥಗರ್ಭಿತವಾದ ಸೂಕ್ಷ್ಮವಾಕ್ಯಸರಣಿಯನ್ನು ಆತನು ಬೆಳೆಸಿದ್ದಾನೆ. ನೂತನ ಸಂಭಾಷಣಾ ವಿಧಾನ ಇಬ್ಸನ್ನಿನ ಘನತೆಗೆ ನೆರವಾದ ಅಂಶ. ಕ್ರಿಯೆಯನ್ನು ತಳ್ಳಿ ಮನಸ್ಸಿನ ವ್ಯಾಪಾರವನ್ನು ಇಬ್ಸನ್ ಹೇಳುವುದು ಇದಕ್ಕೆ ಉದಾಹರಣೆ. ಹೆಚ್ಚು ಹೆಚ್ಚು ಅಂತರಿಕವಾಗಿ ಪಾತ್ರರಚನೆ ಪರಿಣಾಮ ಹೊಂದುವಂತೆ ಮಾಡುವುದು ಇಲ್ಲಿ ಕಾಣುತ್ತದೆ. ಕ್ರಿಯೆ ಪ್ರಧಾನವಾದ ನಾಟಕವಲ್ಲ ಈತನದು. ಕ್ರಿಯೆ ಪಾತ್ರದ ಮನೋಧರ್ಮವನ್ನು ಹೆಚ್ಚು ಸ್ಪಷ್ಟ ಪಡಿಸಲು ಸಹಕಾರಿಯಾಗುತ್ತದೆ. ವ್ಯಕ್ತಿಗೆ ಪ್ರಾಧಾನ್ಯ, ಅವನ ಕರ್ಮಕ್ಕೆ ಅಲ್ಲ. ಇಬ್ಸನ್ನಿನ ರಂಗಸ್ಥಳ ಪ್ರೇಕ್ಷಕರ ಮನೋಮಂದಿರ. ನಮ್ಮ ಮನೋರಂಗದಲ್ಲಿ ಆತನ ನಾಟಕದ ವ್ಯಕ್ತಿಗಳು ಆಡುತ್ತವೆ.

ಮುಂದಿನ ನಾಟಕಕಾರರು ಈ ಮಾರ್ಗದಲ್ಲಿ ಹೆಚ್ಚು ಒಳಹೊಗಲು ಯತ್ನಿಸಿದಂತೆ ಕಂಡುಬರುತ್ತದೆ. ಜರ್ಮನ್ ನಾಟಕಕಾರ ಫ್ರೆಡರಿಕ್ ಹೆಬ್ಬೆಲ್ 'ಮೇರಿಯಾ ಮಾಗ್ದಲೀನಾ' ನಾಟಕ ಬರೆದಿದ್ದಾನೆ. ಕನ್ಯಾವಸ್ಥೆಯಲ್ಲಿ ಶಿಶುಜನನ. ಕಳ್ಳತನಕ್ಕಾಗಿ ದಸ್ತಗಿರಿ. ಕಳ್ಳನ ತಂಗಿಯನ್ನು ಮದುವೆಯಾಗುವುದು ಹೇಗೆ ಎಂದು ಸಮಾಜಕ್ಕೆ ಹೆದರಿಕೊಂಡು ಅವಳನ್ನು ಮದುವೆಮಾಡಿಕೊಳ್ಳಲು ಒಪ್ಪದಿರುವುದು. ಕ್ಲಾರಾ(?)ಳಿನ ತಂದೆ ಮಾನಹೋದಂತೆ ಭಾವಿಸಿ ಆತ್ಮಹತ್ಯ ಮಾಡಿಕೊಳ್ಳುವುದು. ಪ್ರಿಯನು ತನ್ನ ಕೆಳೆಯನನ್ನು ಕೊಂದ ಕಾರಣಕ್ಕಾಗಿ ಕ್ಲಾರಾ ನೀರು ಮುಳುಗಿ ಸಾಯುವುದು[?]–ಹೀಗೆ ಕಥೆ ಅಸಹ್ಯಕರವಾದ್ದು.

ಪಾತ್ರಗಳ ಹೃದಯವನ್ನು ಹೆಚ್ಚು ಸೂಕ್ಷ್ಮತೆಯಿಂದ ಪ್ರದರ್ಶಿಸಿದ್ದಾನೆ. ವಿಧಿಯ ಕೈವಾಡ, ಅಗೋಚರ ಶಕ್ತಿಯ ಕೈವಾಡ ಹೇಗೆ ಪಾತ್ರಗಳ ಮೇಲೆ ಆಗಿದೆಯೆಂಬುದು ನಮಗೆ ಅಚ್ಚರಿಯನ್ನುಂಟು ಮಾಡುತ್ತದೆ.

ನಾರ್ವೆಯ ಜಾರ್ನ್ಸನ್, ರಷ್ಯದ ಆಂಟನ್ ಚೆಖೋವ್, ಪೋಲೆಂಡ್‌ನ ಪ್ರಿಸ್‌ಬಿಸ್ ಮುಂತಾದವರು ಇಬ್ಸನ್ ಮಾರ್ಗವನ್ನು ತುಳಿದವರು. ದಿನದಿನಕ್ಕೆ ಹೊಸ ಶೈಲಿ ಗಟ್ಟಿಯಾಗಿ ಒಳಹೊಕ್ಕಿತು. ಉದ್ದಾಮ ವಾಗಾಡಂಬರದ ಶೈಲಿಯಲ್ಲ. ಸಾಮಾನ್ಯ ಮನುಷ್ಯನ ಸಾಧಾರಣವಾದ ಮಾತು ಮೇಲಾಯಿತು ಕಾವ್ಯಾಂಶ ಕಳೆದುಕೊಂಡಿತು. ಮಾನವ ಸ್ವಭಾವವನ್ನು ಹೊಕ್ಕು ನೋಡುವುದು ಹೆಚ್ಚಾಯಿತು. ಮನಶ್ಶಾಸ್ತ್ರಜ್ಞರ ಮಾನಸಿಕ ಸಂಶೋಧನೆಗಳು ಈ ನಾಟಕಗಳ ಮೇಲೆ ಆಗಿವೆ. ಸುಪ್ತಚೇತನ ವ್ಯಾಪಾರಗಳು ಜಾಗ್ರದವಸ್ಥೆಯ ವ್ಯಾಪಾರಗಳನ್ನು ನಿಯೋಜಿಸುತ್ತವೆ. ಪಾತ್ರರಚನೆಯಲ್ಲಿ ಮನಶ್ಶಾಸ್ತ್ರದ ದಾಳಿ ಬಂದು ಹೆಚ್ಚು ಹೆಚ್ಚು ಆಂತರಿಕತೆ ಕಂಡುಬರುತ್ತದೆ.

ಸ್ವೀಡನ್ನಿನ ಅಗಸ್ಟ್ ಸ್ಟ್ರಿಂಡ್‌ಬರ್ಗ್, ಇಂಗ್ಲೆಂಡಿನ ಗಾಲ್ಸ್‌ವರ್ದಿ, ಬರ್ನಾರ್ಡ್‌ಷಾ ಮುಂತಾದವರೂ ಇಬ್ಸನ್ ಮಾರ್ಗಾನುವರ್ತಿಗಳು.

ಈಚಿನ ನಾಟಕ ಪ್ರವೃತ್ತಿಗಳು

1. ಇಬ್ಸನ್ ತತ್ತ್ವಗಳನ್ನು ಹೆಚ್ಚು ಹೆಚ್ಚಾಗಿ ಪ್ರತಿಪಾದಿಸುವುದು, ಸಾಮಾನ್ಯ ಮನುಷ್ಯನ ರಾಗಾವೇಶಗಳನ್ನು ಚಿತ್ರಿಸುವುದು ನಾಟಕದ ಕೆಲಸ. ಸ್ವತಂತ್ರ ಅಥವಾ ಸಂಪ್ರದಾಯ ಮಾರ್ಗದ ವ್ಯಕ್ತಿಗಳಲ್ಲಿರುವ ಅಪರಿಚಿತತ್ವ ಮಾಯವಾಗಿ, ನಮ್ಮ ಸುತ್ತುಮುತ್ತಿನ ವ್ಯಕ್ತಿಗಳೇ ಇಲ್ಲಿ ನಮಗೆ ಕಾಣಸಿಗುತ್ತಾರೆ. ಕಲ್ಪನೆಗೆ ಎಟುಕದವರು ಇಲ್ಲಿ ಕಾಣುವಂತಿಲ್ಲ. ಶ್ರೀಮಂತ, ಮಧ್ಯಮ ಮತ್ತು ಕೂಲಿಕಾರರ ವರ್ಗದಲ್ಲಿರುವ ಜೀವನರೀತಿ ಪ್ರಧಾನತೆಯನ್ನು ಕಂಡು ಕೊಂಡಿದೆ.
2. ಹೆಚ್ಚು ಹೆಚ್ಚಾಗಿ ಕ್ರಿಯೆ ತನ್ನ ಪ್ರಧಾನತೆಯನ್ನು ಕಳೆದುಕೊಂಡು ಭಾವಪ್ರಧಾನತೆಯನ್ನು ಯನ್ನು ಪಡೆಯುತ್ತದೆ (drama of Ideas). ಸಂಭಾಷಣೆಯನ್ನು ನೋಡಿದರೆ, ಒಂದೊಂದು ಪಾತ್ರ ಯಾವ ಯಾವ ತತ್ತ್ವಕ್ಕೆ ಪಕ್ಷಕ್ಕೆ ಸೇರಿದೆಯೋ ಅದರ ಸಮರ್ಥನೆಗೆ ಪ್ರಯತ್ನ ಮಾಡುವಂತೆ ಕಾಣುತ್ತದೆ. ಭಾವಗಳೂ ಕ್ರಾಂತಿಕಾರಕವಾದವು; ದಾಂಪತ್ಯ ಮತ್ತು ತತ್ಸಂಬಂಧವಾದ ಸಮಸ್ಯೆಗಳು ಇತ್ಯಾದಿ. ನಾಟಕದಲ್ಲಿ ಹೆಚ್ಚು ವಸ್ತುಗಳನ್ನು ಒದಗಿಸಿ ಕೊಡುವ ಸಮಸ್ಯೆಗಳಿಗೆ ಉತ್ತರವಿದೆ. ತಾಯ್ತಂದೆಯರಿಗೆ ಮಕ್ಕಳ ಮೇಲಿನ ಅಧಿಕಾರ ಸಡಿಲ ವಾಗುವ ಸಂದರ್ಭಗಳು, ಸಂಪ್ರದಾಯವನ್ನು ಮುರಿಯುವುದು, ಸ್ತ್ರೀ ಸ್ವಾತಂತ್ರ್ಯದ ಚಳುವಳಿ (ಸೂತ್ರದ ಗೊಂಬೆಯ ನೋರಾ ಪಾತ್ರ), ಸ್ತಿಮಿತತೆ ಇಲ್ಲದಿರುವುದು, ತಪ್ಪು ಯಾವುದು ಸರಿಯಾವುದು ಎಂಬ ಹೊಯ್ದಾಟ, ಪರಿಸ್ಥಿತಿಯ ಬಗ್ಗೆ ಅತೃಪ್ತಿ, ಈಗಿನ ಯುವಕರಲ್ಲಿ ಕಂಡುಬರುವ ಈ ಬಗೆಯ ಆಲೋಚನಾಲಹರಿ—ಇವು ನಾಟಕಕ್ಕೆ ವಸ್ತು. ಪ್ರೇಮಕ್ಕಿಂತಲೂ ಮಿಗಿಲಾದ್ದು ಜೀವಶಕ್ತಿ (Life force, Elan vital). It wants to assert itself ; love is merely an expression of it. ಏನು ಪ್ರಯತ್ನ ಮಾಡಿದರೂ ಪ್ರತಿಪಾತ್ರವೂ ಯಾವುದೋ Life forceನ urgeಗೆ ಸಿಕ್ಕಿ ಕೆಲಸಮಾಡಿರುವುದು ಕಂಡುಬರುತ್ತದೆ... ವೈಜ್ಞಾನಿಕ ದೃಷ್ಟಿ ಜೀವನದ ವಿಚಾರದಲ್ಲಿ ಅವಶ್ಯಕ. ದೀನದಲಿತರ ಜೀವನ, ನಗರವಾಸದ ನೆಲೆಗಳು ವೈಜ್ಞಾನಿಕ ರೀತಿಯಲ್ಲಿ ಸರಿಪಡಿಸಲು ಯತ್ನಿಸಿರುವುದು ತಿಳಿಯುತ್ತದೆ [?]. ಆಧುನಿಕ ಜೀವನದಲ್ಲಿ ವರ್ಗಕಲಹದ ಘರ್ಷಣೆ ಮುಂತಾದವು ಕಾಣುತ್ತದೆ.

ಷಾ, ಗಾಲ್ಸ್‌ವರ್ದಿಗಳಲ್ಲಿ ಕ್ರಿಯಾಭಾಗ ಶೂನ್ಯ; ವ್ಯಕ್ತಿಯ ಅಂತರ್ಗತವಾದ ಹೋರಾಟ ಮಿಗಿಲು. ಯಾವ ಭಾವವನ್ನು, ಆವೇಶವನ್ನು, ಮೂಲಗುಣವನ್ನು ಬಾಯಿಬಿಟ್ಟು ಹೇಳಲಾಗಲಿ ಬೇರೆ ರೀತಿಯಲ್ಲಿ

ವ್ಯಕ್ತಪಡಿಸಲಾಗಲಿ ಸಾಧ್ಯವಿಲ್ಲವೋ, ಆಗ ನಾಟಕದಲ್ಲಿ ಅವನ್ನು ಅಭಿವ್ಯಕ್ತಿಪಡಿಸುವುದು. ಮಾತಿನಲ್ಲಾಗದ್ದನ್ನು ಸಂಕೇತದ ಮೂಲಕ ತರಲು ಪ್ರಯತ್ನಿಸುವುದು. 'ದೆವ್ವಗಳು', 'ಕಾಡುಬಾತು' ಎರಡೂ ಸಂಕೇತ ಪ್ರಧಾನವಾದ ನಾಟಕಗಳು. ಇಲ್ಲಿಯ ಪಾತ್ರಗಳು ಮನುಷ್ಯರಲ್ಲ, ಅಲ್ಲಿ ಮನೆ ಮಾಡಿಕೊಂಡಿರುವ ಶಕ್ತಿಗಳು.

ಸಾಮಾಜಿಕ ಸಮಸ್ಯೆಯಲ್ಲಿ ದುರಂತತೆಯ ಪ್ರತಿಪಾದನೆ. ರಚನೆ ಬಹುಬಿಗಿ. ಶೈಥಿಲ್ಯಕ್ಕೆ ಎಡೆಯಿಲ್ಲ. ಅನಾವಶ್ಯಕವಾದ ಸಂಭಾಷಣೆ ಮುಂತಾದ್ದಕ್ಕೆ ಎಡೆಯಿಲ್ಲ. ಇದೇನು ಯಾಂತ್ರಿಕ ನಾಟಕವೋ ಎಂಬ ಮಟ್ಟಿಗೆ ಬೆರಗುಹುಟ್ಟಿಸುತ್ತದೆ. ರುದ್ರನಾಟಕದ ವಸ್ತುಗಳಲ್ಲಿಯೇ ವಿಹರಿಸುತ್ತಿದ್ದರೂ ಬರೆದ ನಾಟಕಗಳು ರುದ್ರನಾಟಕದ ರೀತಿಯಲ್ಲಿಲ್ಲ. ನಿರೂಪಣೆಯಲ್ಲಿ ರೌದ್ರತೆ ಕಡಮೆಮಾಡುವುದು. ರುದ್ರನಾಟಕಕ್ಕೆ ಇದು ಹೊಸ ಅಂಶ. 18ನೆಯ ಶತಕದಲ್ಲಿ ಕಂಡುಹಿಡಿದರು. ರೌದ್ರತೆಯ ಮೇಲು ಹಂತಕ್ಕೆ ಏರದ ಗಂಭೀರ ರೀತಿಯ ಒಂದು ಸಮಸ್ಯಾನಾಟಕ. ಇಲ್ಲಿ ಬರುವ ಭಾವಾವೇಶಗಳಾವುವೂ ರುದ್ರನಾಟಕದ ಭಾವದ ಮಟ್ಟಕ್ಕೆ ಏರುವುದಿಲ್ಲ. ಒಥೆಲೋವಿನಲ್ಲಿ ಮಾತ್ಸರ್ಯ ಬೃಹತ್ಪ್ರಮಾಣದಲ್ಲಿ ಬೆಳೆಯುವಂತೆ ಇಲ್ಲಿ ಬೆಳೆಯುವುದಿಲ್ಲ. ಒಟ್ಟಿನಲ್ಲಿ ದುರಂತತೆಯ ಅನುಭವವನ್ನು ತಂದುಕೊಡುತ್ತದೆ. ದುರಂತತೆಯಲ್ಲಿ ಮುಗಿಯಬೇಕಾದ್ದು, ಹಾಗೆ ಮುಗಿಯದೆ ಒಂದು ರೀತಿಯ ಸಮರಸತೆಯಲ್ಲಿ ಕೊನೆಗೊಳ್ಳುತ್ತದೆ. ದುರಂತನಾಟಕಕ್ಕೆ ಸಮೀಪವರ್ತಿಯಾದ್ದು, ಆದರೆ ಅದೇ ಅಲ್ಲ.

ಜಾನ್ ಗಾಲ್ಸ್‌ವರ್ದಿಯ 'ನ್ಯಾಯ', 'ಬೆಳ್ಳಿ ಪೆಟ್ಟಿಗೆ', ಇವುಗಳಲ್ಲಿ ದುರಂತನಾಟಕದ ಪರಿಣಾಮ ಸಿಗುತ್ತದೆ. ಶ್ರೀಮಂತ ಮತ್ತು ಕಾರ್ಮಿಕ ವರ್ಗದ ಚಿತ್ರಣ, ವ್ಯಕ್ತಿಯ ನಿಸ್ಸಹಾಯಕತೆ, ಸಾಮಾಜಿಕ ಸ್ವಭಾವದ ಏರುಪೇರು, ಆದರ ಆಘಾತದಿಂದ ಜೀವನ ಕರುಣಾಪೂರ್ಣವಾದ ಅಂತ್ಯವನ್ನು ಕಾಣುವುದು. ಇವನ ನಾಟಕಗಳನ್ನು ಓದಿ ಮುಗಿಸಿದ ಮೇಲೆ ಒಂದು ಸಮಗ್ರ ಭಾವನೆ ಬರುತ್ತದೆ. ಈ ಜೀವನವೆಲ್ಲ ವ್ಯರ್ಥ. ಜೀವನೋದ್ದೇಶವೆಲ್ಲ ನಿಷ್ಪ್ರಯೋಜಕ. (ಷೇಕ್ಸ್‌ಪಿಯರ್‌ನಲ್ಲಿ ವ್ಯಕ್ತವಾಗುವ ಈ ಬಗೆಯ ಭಾವನೆಯೊಡನೆ ಹೋಲಿಸಿ).ಮನುಷ್ಯ ಪರಸ್ಪರ ಕಾದಾಡುವಲ್ಲಿ ಚೈತನ್ಯಶಕ್ತಿಯನ್ನುಪಯೋಗಿಸುತ್ತಾನೆ. ಅದನ್ನು ಕಾಪಾಡುವ ಮಾರ್ಗಕ್ಕೆ ಉಪಯೋಗಿಸಿಕೊಳ್ಳುವುದು ಬಿಟ್ಟು ತನ್ನ ಬಾಳನ್ನೇ ಹಾಳುಮಾಡಿಕೊಳ್ಳುತ್ತಿದ್ದಾನೆ. ಇದು 20ನೆಯ ಶತಮಾನದ ಮೂಲಶ್ರುತಿ.

* * * *

ಷೇಕ್ಸ್‌ಪಿಯರ್ ಕವಿಯ 'ಕಿಂಗ್ ಲಿಯರ್'

ಲಿಯರ್ ದೊರೆ ರುದ್ರನಾಯಕನೇ ? ಷೇಕ್ಸ್‌ಪಿಯರ್ ಪ್ರಕಾರ ಒಂದು ದೌರ್ಬಲ್ಯ,ಅದರಿಂದ ಇಕ್ಕಟ್ಟಿಗೆ ಸಿಕ್ಕಿ ಮನಸ್ಸಿನ ಒಳತೋಟಿ. ಅವನ ದೌರ್ಬಲ್ಯದಿಂದ ಅವನ ಮರಣ. ಈ ರೀತಿಯಾಗಿ ಮನಸ್ಸಿನಲ್ಲಿ ಮೂಡಿದ ದೌಷ್ಟ್ಯದಿಂದ ಪ್ರಚೋದನೆಗೊಂಡು ಒಂದು ಕಾರ್ಯಕ್ಕೆ ತೊಡಗಿದಾಗ ಅದರಿಂದ ಕೊನೆಗೆ ಹಾನಿ. ಇಂಥ ದೌರ್ಬಲ್ಯ ಲಿಯರ್‌ನಲ್ಲಿ ಏನು ? ಅದು ದೌರ್ಬಲ್ಯವೇ? ಅವನ ದೋಷದ ಸ್ವರೂಪ ಒಂದನೇ ಅಂಕದಲ್ಲಿ ಸಿಕ್ಕುತ್ತದೆ. ಆದರೆ ಅದನ್ನು ದೋಷವೆನ್ನಲಾಗುವುದಿಲ್ಲ. ಆದರೆ ಹಾಗೆ ಅನ್ನದಿದ್ದರೆ ಅವನು ಇತರ ದುರಂತನಾಯಕರಂತಾಗುವುದಿಲ್ಲ. ಇತರರ ಕಾರ್ಯತತ್ಪರತೆ ಈ ಲಿಯರ್‌ನಲ್ಲಿಲ್ಲ. ಅವನ ಮನಸ್ಸಿಗೆ ನಾನಾ ಕಡೆಗಳಿಂದ ಸಂತಾಪದ ಅಲೆಗಳು ಅಪ್ಪಳಿಸುತ್ತವೆ. ಇದು ಮನೋರಂಗದಲ್ಲಿ ಪ್ರಭಾವಶಾಲಿಯಾದ ನಾಟಕ, ರಂಗಸ್ಥಳದಲ್ಲಿ ಅಲ್ಲ ಎಂದು ಕೆಲವರು ವಿಮರ್ಶಕರು ಹೇಳುತ್ತಾರೆ. ಮನಸ್ಸು ಹಿಂಡಿದಂತಾಗಿ, ಕರುಣೆಯಲ್ಲಿ ನಮ್ಮ ಮನವನ್ನು ಮುಳುಗಿಸುತ್ತದೆ; ಅದೂ ಬಹಳ ಅಲ್ಪಾವಧಿಯಲ್ಲಿ. ಈ ನಾಟಕದಲ್ಲಿ ಕಾವ್ಯತ್ವ ಹೆಚ್ಚಾಗಿದೆ. ಕವಿ ಕಾರ್ಡೀಲಿಯಾ ಪಾತ್ರದ ಮಹೋನ್ನತಿಯನ್ನು ಅತಿ ಅಲ್ಪ ಕಾಲದಲ್ಲಿಯೇ ತೋರಿಸಿದ್ದಾನೆ. ಇದನ್ನು ಆತನು ತನ್ನ ಪರಿಣತ ವಯಸ್ಸಿನಲ್ಲಿ ಬರೆದನಂತೆ.

ದುಡುಕು ಸ್ವಭಾವ: ಲಿಯರ್‌ಗೆ ಮನುಷ್ಯರ ಯೋಗ್ಯತೆಗಳನ್ನು ತಿಳಿಯುವ ಸ್ವಭಾವ ಕಡಮೆ. ಮಕ್ಕಳ ನಡುವೆ ಬಹುಕಾಲವಿದ್ದರೂ ಅವರ ಮರ್ಜಿಯನ್ನು ಅವನು ತಿಳಿಯಲಿಲ್ಲ. ಆತ ತನಗೆ ಹಿತವರು ಯಾರು, ಶತ್ರು ಯಾರು ಎಂಬುದನ್ನು ವಿವೇಚಿಸಿ ತಿಳಿಯಲಾರ. ಇದು ಒಂದು ದೌರ್ಬಲ್ಯ. ಈ ರೀತಿಯ ದೌರ್ಬಲ್ಯದಿಂದ ಮನುಷ್ಯ ಕಷ್ಟಗಳಿಗೆ ಸಿಕ್ಕಬೇಕಾಗುತ್ತದೆ. ಈ ದೌರ್ಬಲ್ಯ ಸ್ವಭಾವನಿಕ್ಷಿಪ್ತವೋ

ವಯಸ್ಸು ಕಾರಣವಾಗಿ ಬಂತೋ ತಿಳಿಯದು. ದುಡುಕು ಸ್ವಭಾವ ಮನಸ್ಸಿನ ಪರಿಣಾಮವಿರಬಹುದು. ಯಾರು ಏನು ಹೇಳಿದರೆ ಅದನ್ನು ನಂಬುತ್ತಾನೆ. ಅವನ ಅಸಾಮರ್ಥ್ಯವೇ ಇದಕ್ಕೆ ಕಾರಣವಿರಬೇಕು. ವಿವೇಕಹೀನನಾಗಿ ಶತ್ರುಗಳನ್ನು ಮಿತ್ರರೆಂದು ಭಾವಿಸಿ, ಮಿತ್ರರನ್ನು ಶತ್ರುಗಳೆಂದು ತಿಳಿದು ತೊಲಗಿಸುವ ಯತ್ನದಿಂದ ಅವನ ದೌರ್ಬಲ್ಯ ಇದೇ ಎಂದು ನಮಗೆ ಕಾಣುತ್ತದೆ. ಇದು ಬಿಟ್ಟು ಬೇರೆ ದೋಷವಾವುದೂ ಅವನಲ್ಲಿಲ್ಲ.

'ಕಿಂಗ್ ಲಿಯರ್' ನಾಟಕದಲ್ಲಿ ಎರಡು ಕತೆಗಳು ಒಟ್ಟಿಗೆ ಹೊಸೆದು ಬಂದಿರುವುದು ಕಾಣುತ್ತದೆ. ಇದರಿಂದ ದೋಷ ಕಾಣುತ್ತದೆ ಎಂದು ಕೆಲವರು ವಿಮರ್ಶಕರು. ಷೇಕ್ಸ್‌ಪಿಯರನ ಅತ್ಯುತ್ತಮವಾದ ನಾಟಕ ಇದೆಂದು ಕೆಲವರು. ಇನ್ನು ಕೆಲವರು ಇದರಲ್ಲಿ ಎಷ್ಟೋ ದೋಷಗಳಿವೆ ಎನ್ನುತ್ತಾರೆ. ರಂಗಸ್ಥಳಕ್ಕೆ ಅನುಕೂಲವಾಗುವಂತೆ ನಾಟಕವಿದೆ. ಮಾನಸಿಕ ರಂಗಸ್ಥಳದಲ್ಲಿ ನಾಟಕದ ಪಾತ್ರಗಳನ್ನು ಅಭಿನಯಿಸಲು ಬಿಟ್ಟರೆ ಪರಿಪೂರ್ಣವಾಗಿರುವಂತೆ ತೋರುತ್ತದೆ. ಭಾವಯಿತ್ರೀ ಪ್ರತಿಭೆಗೆ ನಿಲುಕುವಂತೆ ನಾವೇ ನಾಟಕವನ್ನು ನೋಡಿದರೆ ಇದರ ಶಕ್ತಿ ಅತ್ಯುತ್ತಮ, ಬೇರೆ ನಟರಿಂದ ಅಭಿನಯಿಸಲ್ಪಟ್ಟರೆ ದೋಷಗಳು ಕಂಡು ಬರುತ್ತವೆ ಎಂದು ಕೆಲವರ ಭಿನ್ನದೃಷ್ಟಿ. ರಂಗಸ್ಥಳದ ಪ್ರಾಯೋಗಿಕದೃಷ್ಟಿಯಿಂದ ದೋಷ ಕಂಡುಬರುತ್ತದಾದರೂ ಕಲ್ಪನಾದೃಷ್ಟಿಯಿಂದ ಗುಣ ಕಂಡುಬರುತ್ತದೆ. ಷೇಕ್ಸ್‌ಪಿಯರನ ನಾಟಕ ಒಂದು ರೀತಿಯಾಗಿದ್ದರೆ, ಅದನ್ನು ಬದಲಾಯಿಸಿ ಕಡೆಯಲ್ಲಿ ಮಂಗಳಾಂತವಾಗಿ ಕೊನೆಗಾಣಿಸಿದ್ದಾರೆ (ಮೂಲ ದುರಂತನಾಟಕವಾದರೂ). ಕೃತಘ್ನತೆಗೆ ಬಲಿಯಾಗಿ ಅನೇಕ ದುಃಖಗಳಿಗೆ ಭಾಜನರಾದ ಈ ಇಬ್ಬರು ವ್ಯಕ್ತಿಗಳಿಗೆ ಅವರ ಅನುಭವಕ್ಕೆ ತಕ್ಕ ಫಲ. Poetic Justice ಪ್ರಕಾರ ಮಂಗಳಾಂತ ಮಾಡಿದ್ದಾರೆ[?] ಕೆಲವರು ನಾಟಕವನ್ನು ದುರಂತಮಾಡದೆ ಮಂಗಳಾಂತವಾಗಿ ಬರೆದಿದ್ದರೆ ಚೆನ್ನಾಗಿತ್ತು ಎಂದಿದ್ದಾರೆ. ಪ್ರಕ್ಷೇಪಗಳು ಬಹಳ ಇರುವಂತೆ ಕಾಣುತ್ತದೆ ಎಂದು ಇಂಗ್ಲಿಷ್ ವಿದ್ವಾಂಸರು ಕೆಲವರು ಹೇಳುತ್ತಾರೆ.

ಈ ದುರಂತನಾಟಕವನ್ನು ಕವಿ ಹೇಗೆ ಮುಂದುವರಿಸಿದ್ದಾನೆ? ಇಲ್ಲಿ ಅಸಂಭಾವ್ಯ ಘಟನೆಗಳಿವೆಯೆಂತಲೂ ಹೇಳುತ್ತಾರೆ. ಮುದುಕ ದೊರೆ ಏನೂ ಕಾರಣವಿಲ್ಲದೆ ರಾಜ್ಯವನ್ನು ಮೂರು ಹೆಣ್ಣು ಮಕ್ಕಳಿಗೆ ಹಂಚುವುದರಲ್ಲಿ ಅರ್ಥವೇನು? ಒಬ್ಬ ರಾಣಿಗೆ ಕೊಡಬಹುದಿತ್ತು. ಆಗ ಪ್ರಜಾಸೇವೆ ಸರಿಯಾಗುತ್ತಿತ್ತು. ಮುದುಕನು ತಾನು ಧರಿಸಿರುವ ಕಿರೀಟವನ್ನು ಮೂರು ತುಂಡುಗಳನ್ನಾಗಿ ಮಾಡಿ ತನ್ನ ಅವಲಂಬನೆಯನ್ನೇ ಮರೆತು ಹೀಗೇಕೆ ಮಾಡಿದ? ಇನ್ನೊಂದು ಕತೆ, ಗ್ಲಾಸ್ಟರ್‌ನ ಧರ್ಮಸಂತಾನ ಮತ್ತು ಅಧರ್ಮ ಸಂತಾನಕ್ಕೆ ಸೇರಿದ ಮಕ್ಕಳ ಸಂಬಂಧವಾದ್ದು; ಮಾನವ ಲೋಕದಲ್ಲಿ ಕಾಣುವ ಕೃತಘ್ನತೆಯ ವಿವರಣೆಗಾಗಿ ಗಾಸ್ಟರ್ ಮತ್ತು ಈತನ ಇಬ್ಬರ ಮಕ್ಕಳ ಕತೆಯಿದೆ. ಕೃತಘ್ನತೆಗೆ ಪಕ್ಕಾದವರು ಅನಿರ್ವಚನೀಯವಾದ ನೋವಿಗೆ ನೆಲೆಯಾಗುವುದು ಹೇಗೆ ಎಂಬುದನ್ನೂ ಲಿಯರ್ ಕತೆ ನಮಗೆ ತಿಳಿಸುತ್ತದೆ. ನಾಯಕ ಪ್ರಶಸ್ತನಾದವನೂ ಸಮಾಜದಲ್ಲಿ ಉನ್ನತಮಟ್ಟಕ್ಕೆ ಸೇರಿರತಕ್ಕವನೂ ಸಾಮಾನ್ಯವಾಗಿ ಔದಾರ್ಯ ಗಾಂಭೀರ್ಯಾದಿ ಗುಣಗಳಿಗೆ ತವರಾದವನೂ ಆಗಿದ್ದು ಕೂಡ, ಒಂದು ಸೂಕ್ಷ್ಮವಾದ ತಪ್ಪು, ಭಾಗ್ಯದಲ್ಲಿ ಅವನತಿ ಉಂಟಾದಾಗ ನಾಶವಾಗುತ್ತಾನೆ. ಲಿಯರ್ ದೊರೆಯ ಮನದಲ್ಲಿ ನಡೆದ ಮಾನಸಿಕ ಹೋರಾಟಕ್ಕೆ ಪ್ರಧಾನತೆಯಿದೆ. ಇದು ಷೇಕ್ಸ್‌ಪಿಯರ್ ನಾಟಕಗಳ ಪ್ರಧಾನ ಲಕ್ಷಣ. ಲಿಯರ್ ದೊರೆಯ ದೋಷವೇನು? ಯಾರನ್ನು ನಂಬಬಾರದೋ ಅವರನ್ನು ನಂಬಿದ್ದು, ಯಾರನ್ನು ನಂಬಬೇಕೋ ಅವರನ್ನು ನಂಬದೆ ಹೋದ್ದು. ಹಾಗೂ ಹೊಗಳಿಕೆಗೆ ಬಾಯಿಬಿಟ್ಟದ್ದು.

* * * *

ರುದ್ರನಾಟಕದ ಸ್ವರೂಪ :

ದುರಂತನಾಟಕದ ಲಕ್ಷಣ ಹೇಗೆ ರೂಪಗೊಂಡಿದೆ? ಇವರಲ್ಲಿ ವಿಶೇಷಾಂಶಗಳೇನು ಕಾಣುತ್ತವೆ? ಇದಕ್ಕೆ ಷೇಕ್ಸ್‌ಪಿಯರ್‌ನ ಇತರ ದುರಂತ ನಾಟಕಗಳ ಪರಿಚಯ ಅಗತ್ಯ. ಬ್ರಾಡ್ಲೆ ಎಲ್ಲ ರುದ್ರನಾಟಕಗಳನ್ನೂ ಸಾಮೂಹಿಕವಾಗಿ ತೆಗೆದುಕೊಂಡು ಅವುಗಳ ಸಾಮಾನ್ಯ ಲಕ್ಷಣಗಳನ್ನು ಕ್ರೋಡೀಕರಿಸಿದ್ದಾನೆ ಅರಿಸ್ಟಾಟಲ್ ಗ್ರೀಕ್ ನಾಟಕಗಳಿಗೆ ಮಾಡಿದಂತೆ. ಗ್ರೀಕ್ ಮತ್ತು ಇಂಗ್ಲಿಷ್ ರುದ್ರನಾಟಕಗಳಲ್ಲಿ ದುರಂತ,

ಲಕ್ಷಣಗಳು ಹೇಗೆ ಕಾಣುತ್ತವೆ? ಹೋಲಿಸಬೇಕು. ಅರಿಸ್ಟಾಟಲ್: ರುದ್ರನಾಟಕದಲ್ಲಿ ಮಾನವಕ್ರಿಯೆಯ ಕರ್ಮಮಹತ್ವ, ಘನತೆ ಪರಿಪೂರ್ಣತೆ ಇರಬೇಕು; ಕಥನವೃಷ್ಟಿ ಮುಖ್ಯವಲ್ಲ, ಕ್ರಿಯಾಪ್ರಾಧಾನ್ಯತೆ. ಇಂಥ ನಾಟಕವನ್ನು ಓದುವುದರಿಂದ ಒಂದು ತೆರನಾದ ಭಯ ಉಂಟಾಗಬೇಕು. ಶುದ್ಧವಾದ ಭಾವಗಳು ತುಂಬಿಬರಬೇಕು, ಕ್ಷುದ್ರಭಾವಗಳ ವಿರೇಚನವಾಗಬೇಕು. ಇವೆಲ್ಲ ಷೇಕ್ಸ್‌ಪಿಯರಿನ ನಾಟಕಗಳಲ್ಲಿ ಕಂಡು ಬರುತ್ತವೆ.

ಗ್ರೀಕರ ರುದ್ರನಾಟಕಗಳಲ್ಲಿ ಕ್ರಿಯೆಯ ಉನ್ನತಿ ಇದ್ದಂತೆ ಇಲ್ಲಿಯೂ ಕಾಣುತ್ತದೆ. ಅಲ್ಪವಾದ ಕಾರಣಗಳಿಗಾಗಿ ಕ್ಷುದ್ರವಾದ ಕಾರ್ಯಗಳು ನಡೆಯುವುದಿಲ್ಲ. ಘನವಾದ ಕಾರ್ಯಗಳು, ಇಲ್ಲಿ ಬರುವ ನಾಟಕಕ್ರಿಯೆಯ ಪರ್ಯವಸಾನಕ್ಕೆ ಬರುತ್ತವೆ. ಬೆಳವಣಿಗೆ, ಮುಕ್ತಾಯದ ಪರಿಪೂರ್ಣತೆ ಕ್ರಿಯೆಯಲ್ಲಿ ಕಂಡುಬರುತ್ತವೆ. ಈ ಕ್ರಿಯೆ ಕವಿ ಹೇಳುವುದಿಲ್ಲ. ಕಥಾನಾಯಕನ ಪಾತ್ರದಲ್ಲಿ, ಅವನ ಮಾತುಗಳಲ್ಲಿ ಅದು ತೋರುತ್ತದೆ, ಸಾಗುತ್ತದೆ. ಇಂಥ ನಾಟಕದ ವೀಕ್ಷಣೆಯಿಂದ ಕರುಣೆ ಭಯಗಳು ಉತ್ಪನ್ನವಾಗಿ ಮನಸ್ಸಿನ ದುರ್ಭಾವನೆಗಳು ತೊಲಗಿ ಹೋಗುವುವು. ಇದು ಷೇಕ್ಸ್‌ಪಿಯರಿನಲ್ಲಿ ಕಾಣುತ್ತದೆ. ಗ್ರೀಕ್‌ನಲ್ಲಿ ಕಾಣದಿರುವ ಬೇರೆ ಅಂಶಗಳೂ ಇಲ್ಲಿ ಸಿಕ್ಕುತ್ತವೆ. ಅಲ್ಪ ವ್ಯತ್ಯಾಸ, ಹೊಸ ಸೇರಿಕೆಗಳಿಂದ ಗ್ರೀಕ್ ರುದ್ರ ನಾಟಕದ ಬೆಳವಣಿಗೆ ಈತನ ಕೈಯಲ್ಲಿ ನಡೆಯಿತು ಎನ್ನಬೇಕು. ಗ್ರೀಕ್ ನಾಟಕದ ಪ್ರಭಾವ ಇಂಗ್ಲಿಷ್‌ಗೆ ಸೆನೆಕನಿಂದ. ಇವನ ಕೃತಿಗಳನ್ನು, ಗ್ರೀಕರ ಕೃತಿಗಳನ್ನು ಷೇಕ್ಸ್‌ಪಿಯರ್ ಓದಿದ್ದನೋ ಹೇಗೆ ಎಂಬುದು ಸಂದೇಹ. ಕೆಲವರು ಸೆನೆಕನನ್ನು ಓದಿದ್ದಿರಬಹುದು. ಕೆಲವರು ರುದ್ರನಾಟಕದ ಸ್ವಭಾವ, ಸ್ವರೂಪವನ್ನು ಸ್ವಂತ ಚಿಂತನೆಯಿಂದ ಕಂಡುಕೊಂಡಿದ್ದರೆಂದು ತೋರುತ್ತದೆ. ನಾಟಕದ ಲಕ್ಷಣ, ನಾಯಕನ ಸ್ವರೂಪ ಇಂಥ ನಿಯಮಗಳನ್ನಿಟ್ಟುಕೊಂಡು ಬರೆಯಲಿಲ್ಲ, ಅವನ ಮನಃಪ್ರವೃತ್ತಿಗೆ ಅನುಸಾರವಾಗಿ ಬರೆದಿದ್ದಾನೆ ಷೇಕ್ಸ್‌ಪಿಯರ್(?). ಇದನ್ನು ವಿಮರ್ಶಿಸಿದರೆ ಅರಿಸ್ಟಾಟಲಿನ ಲಕ್ಷಣಗಳ ಸಮನ್ವಯ ಮತ್ತು ಹೊಸ ಅಂಶ ಎರಡೂ ಇರುವುದು ತಿಳಿಯುತ್ತದೆ. ಬ್ರಾಡ್ಲೆ ಅರಿಸ್ಟಾಟಲಿನ ಲಕ್ಷಣವನ್ನು ಕೈ ಬಿಟ್ಟು, ಷೇಕ್ಸ್ ಪಿಯರಿನ ಕೃತಿಗಳ ಅಭ್ಯಾಸದಿಂದ ತನ್ನ ವಿಮರ್ಶೆಯನ್ನು ಮಾಡಿದ್ದಾನೆ. ಪೂರ್ವಗ್ರಹಿಕೆಯಿಲ್ಲದೆ ವಿಚಾರ ಮಾಡಿರುವ ಮನಃಪ್ರವೃತ್ತಿಯಿದು. ಅರಿಸ್ಟಾಟಲಿನ ಲಕ್ಷಣಕ್ಕೆ ಅನುಸಾರವಾಗಿರುವುದನ್ನು ಹೇಳಿ, ಅದಕ್ಕೆ ಬೆಳವಣಿಗೆಯನ್ನು ಹೇಗೆ ಕಾಣಬಹುದೆಂದು ಅವರು ವಿಚಾರಕ್ಕೆ ತೊಡಗಲಿಲ್ಲ. ಅರಿಸ್ಟಾಟಲಿನ ಲಕ್ಷಣಗಳು ಬ್ರಾಡ್ಲೆಯಲ್ಲಿ ಪುನರುಕ್ತವಾಗಿವೆ: 1. ರುದ್ರನಾಟಕದ ಕಥಾ ಸ್ವರೂಪ 2. ನಾಯಕನ ಗುಣ ಲಕ್ಷಣಗಳು.

ಕಥೆಯ ಕ್ರಿಯೆಯಲ್ಲಿ ಉದಾತ್ತತೆ ಹೇಗೆ? ಇದು ಅರಿಸ್ಟಾಟಲ್ ಹೇಳಿರುವ ಅಂಶವೇ. ಈತನ ಹೇಳಿಕೆಯ ಪ್ರಕಾರ ಹೃದಯದಲ್ಲಿ ಅನುಕಂಪೆ, ಭಯೋತ್ಪಾದನೆ ಜತೆಜತೆಯಲ್ಲಿ ಕಂಡುಬರುತ್ತವೆ. ಕ್ರಿಯೆಯಲ್ಲಿ ಷೇಕ್ಸ್‌ಪಿಯರ್ ನಾಟಕಗಳಲ್ಲಿ ಬದಲಾವಣೆ ಹೆಚ್ಚಾಗಿದೆ. ಬ್ರಾಡ್ಲೆ–ಅರಿಸ್ಟಾಟಲ್ ಸಮನ್ವ-ಯಾಂಶಗಳನ್ನು ನೋಡಿ ಷೇಕ್ಸ್‌ಪಿಯರನ ಮುಂದುವರಿಕೆಯನ್ನು ಆಮೇಲೆ ನೋಡಬಹುದು.

ರುದ್ರನಾಟಕದ ಕಥೆ: ಸಂಭವಿಸುವ ಕ್ರಿಯೆ ಒಬ್ಬನಿಗೆ ಸಂಬಂಧಿಸಿದ್ದು– ಲಿಯರ್, ಮ್ಯಾಕ್ಬೆತ್. ನಾಯಕನಾದ ವ್ಯಕ್ತಿಗೆ ಸಮಸ್ತಕ್ರಿಯೆ ಸಂಭವಿಸುತ್ತದೆ. ಏಳುಬೀಳುಗಳಿಗೆ ಸಹಕಾರಿಯೂ ಪ್ರತಿಕೂಲವೂ ಆದ ಅಂಶಗಳು ಕಂಡುಬರುತ್ತವೆ. ರುದ್ರನಾಟಕವಲ್ಲದೆ ಒಂದು ಪ್ರಣಯ ನಾಟಕ, ಒಂದು ಪ್ರಹಸನ– ಎಲ್ಲಿಯೂ ಕಥಾನಾಯಕ ಒಬ್ಬ; ಅವನಿಗೆ ಸಂಬಂಧಿಸಿದ್ದು ನಾಟಕ ಕ್ರಿಯೆ. ಎಲ್ಲ ನಾಟಕಗಳಲ್ಲಿಯೂ ಇದು ಸಾಮಾನ್ಯ ಎಂದು ಬ್ರಾಡ್ಲೆ ಎಲ್ಲರೂ ಹೇಳಿರುವುದನ್ನು ಒಪ್ಪಿದ್ದಾರೆ.

ರುದ್ರನಾಟಕದ ನಾಯಕನ ಅತಿದಾರುಣವಾದ ವಿಪತ್ತು, ದುಃಖ, ಸಂತಾಪಗಳನ್ನು ವರ್ಣನೆ ಮಾಡಿ ಮರಣದಲ್ಲಿ ಮುಕ್ತಾಯವಾಗುವುದನ್ನು ಹೇಳುತ್ತದೆ, ದುಃಖಾಂತವಾದ ಕಥೆ. ದುಃಖತಪ್ತನಾದ ವ್ಯಕ್ತಿ ಅಸಹನೀಯವಾದ ದುಃಖಾನುಭವ ಮಾಡಿ ಮರಣವನ್ನು ಹೊಂದುತ್ತಾನೆ. ಈ ದುಃಖ ಅಸಾಧಾರಣ ವಾದ್ದು; ಸಾಮಾನ್ಯ ಅನುಭವದಿಂದ ಅತೀತವಾದ ಅಗಾಧವಾದ ಅಪರಿಹಾರ್ಯವಾದ ವಿಪತ್ತು ಇಲ್ಲಿ ಕಾಣುತ್ತದೆ. ಇಂಥ ಸಾಮಾನ್ಯವಾದ ಅಂಶಗಳನ್ನು ತಿಳಿಸಿ, ಗ್ರೀಕರ ರುದ್ರನಾಟಕದ ಕಲ್ಪನೆಯನ್ನು ಬಿಟ್ಟು, ಷೇಕ್ಸ್‌ಪಿಯರ್ ಕಾಲಕ್ಕೆ ಹೇಗೆ ಬೆಳೆದುಕೊಂಡು ಬಂತು ಎಂದು ಹೇಳುವಲ್ಲಿ ಭಾಸರನ ರುದ್ರಕಥೆಗಳನ್ನು ವಿಚಾರಮಾಡಿದ್ದಾನೆ. ಒಬ್ಬ ಮನುಷ್ಯ ಉನ್ನತಸ್ಥಿತಿಯಲ್ಲಿದ್ದು ನಿಕೃಷ್ಟವಾದ ಸ್ಥಿತಿಗೆ ಬರುತ್ತಾನೆ.

ಮೊದಲು ಸುಖಿ. ಬಳಿಕ ದುಃಖಿ. ಅವನ ದುಃಖದಲ್ಲಿ ಸಹಾನುಭೂತಿ, ಕರುಣೆ ಸಹಜ. ನಮಗೇ ಅಂಥ ಪರಿಸ್ಥಿತಿ ಬಂದರೆ ಗತಿ ಏನು ಎಂದು ಭಯವಾಗುವುದೂ ಉಂಟು. ರುದ್ರಕಾವ್ಯ ಮತ್ತು ನಾಟಕಗಳಲ್ಲಿ ಇಂಥ ಅಂಶಗಳು ಸಮಾನ.

ಭಾಗ್ಯ ಅಥವಾ ಅದೃಷ್ಟ (Fortune)ದ ಕೈವಾಡ ರುದ್ರನಾಟಕಗಳಲ್ಲಿ ಎಷ್ಟರ ಮಟ್ಟಿಗೆ ಇರುತ್ತದೆ, ನೋಡಬೇಕು. ಐರೋಪ್ಯಯುಗದ ನಡುಗಾಲ, ಗ್ರೀಕ್–ಷೇಕ್ಸ್‌ಪಿಯರ್ ನಡುವಣ ಕಾಲದ ದುರಂತ ಲಕ್ಷಣವೇನು? ರುದ್ರನಾಟಕದ ನಾಯಕನಿಗೆ ಒದಗುವ ವಿಪತ್ತು ಗಹನವೂ ದುರ್ಭರವೂ ಆಗಿದ್ದರೆ ಇದು ಎಲ್ಲಿಂದ ಬರುತ್ತದೆ? ದೈವಿಕ. ಪ್ರಕೃತಿ ಸಂಜನಿತ? ಉದಾತ್ತ ವ್ಯಕ್ತಿಗೆ ಸಿಡಿಲು ಬಡಿದು ಸತ್ತರೆ, ರುದ್ರಕಥೆಯಾಗುವುದಿಲ್ಲ ಅವನದು. ಒದಗುವ ವಿಪತ್ತು ಬಾಹ್ಯಕಾರಣ ಸಂಬಂಧಿಯಲ್ಲ. ಅವನ ಕರ್ಮದಿಂದಲೇ ಉತ್ಪನ್ನವಾಗಿ ಬರಬೇಕು. ರುದ್ರನಾಟಕದ ನಾಯಕ ಉದಾತ್ತ, ಗಂಭೀರ ಆಗಿದ್ದು ಸಮಾಜದಲ್ಲಿ ಉನ್ನತ ಪದವಿಯಲ್ಲಿದ್ದರೂ ಇತರರಿಗೆ ಅವನಲ್ಲಿ ಅತಿಶಯ ಗೌರವವಿದ್ದರೂ ಅವನದೇ ಆದ ಯಾವುದೋ ಕರ್ಮದ ಫಲವಾಗಿ ಅವನಿಗೆ ವಿಪತ್ತು ಬರುತ್ತದೆ (ಗ್ರೀಕ್ ನಾಟಕವನ್ನು ಹೋಲಿಸಿ). ಈ ವ್ಯಕ್ತಿಗೂ ಅವನು ಮಾಡುವ ಕಾರ್ಯಕ್ಕೂ ಅದರ ಪರಿಣಾಮಕ್ಕೂ ಅನುಸ್ಯೂತವಾದ ಸಂಬಂಧವಿದೆ. ನಾಟಕದ ಶಿವಾಶಿವ ಘಟನೆಗಳಲ್ಲದೆ ವ್ಯಕ್ತಿಯ ಶೀಲಾಶೀಲಗಳನ್ನು ಪರಿಶೀಲಿಸುವಾಗ, ವ್ಯಕ್ತಿಯ ಶೀಲ ಸ್ವಭಾವವೇ ಒಂದು ರೀತಿಯ ವಿಧಿಯಾಗಿ ಗೋಚರಿಸುತ್ತದೆ. ಹೊರಗಿನಿಂದ ಯಾವ ಶಕ್ತಿಯಾಗಲಿ ಬಂದು ವಿಪತ್ತು ತರುವುದಿಲ್ಲ. ತನ್ನ ಕಾರ್ಯದ ಪರಿಣಾಮವಾಗಿ ತಾನೇ ವಿಪತ್ತನ್ನು ತಂದುಕೊಳ್ಳುತ್ತಾನೆ. Character is destiny ಮನುಷ್ಯನ ಶೀಲ ಸ್ವಭಾವ–ಪ್ರಕೃತಿ ಸ್ವಭಾವವೇ ಅವನ ವಿಧಿ. ವಿಪತ್ತು ತನ್ನ ಕರ್ಮದಿಂದಲೇ ಆದ ಪಕ್ಷದಲ್ಲಿ ಈ ಕರ್ಮದ ಸ್ವರೂಪವೇನು? ಮನುಷ್ಯ ಯಾವ ಯಾವ ಅವಸ್ಥೆಯಲ್ಲಿ ಮಾಡಿದ ಕರ್ಮಗಳು ಅವನಿಗೆ ಅನಿಷ್ಟ ಮಾಡಿ ವಿಪತ್ತನ್ನು ತರುತ್ತವೆ? ಎಲ್ಲವೂ ಹಾಗೆ ವಿಪತ್ತು ತರುತ್ತದೆ ಎನ್ನಲಾಗದು. ಮನಸ್ಸಿನ ಪರಿಸ್ಥಿತಿಯನ್ನು ಅನುಸರಿಸಿದ್ದು ಅದು. ಮೂರು ಬಗೆಯಾದ ಮನಸ್ಸಿನ ಪರಿಸ್ಥಿತಿಗಳು ರುದ್ರನಾಟಕಗಳಲ್ಲಿ ವಸ್ತುವಾಗಲಾರದು. ಆದರೆ ಇವೇ ಇತರ ಕಾರಣಗಳೊಂದಿಗೆ ಸೇರಿ ರುದ್ರತೆಗೆ ಕಾರಣವಾಗಬಹುದು. ಉನ್ಮಾದ, ಬುದ್ಧಿಭ್ರಮಣೆಗೆ–ಹಂಗಾಮಿಯಾದುದಲ್ಲ, ಶಾಶ್ವತವಾಗಿ–ಒಳಗಾಗಿದ್ದರೆ, ಮರುಳುತನಕ್ಕೆ ಈಡಾಗಿದ್ದ ಪಕ್ಷದಲ್ಲಿ ಅಂತಹ ಮನಃಸ್ಥಿತಿ ದುರಂತನಾಟಕಕ್ಕೆ ವಸ್ತುವಾಗಲಾರದು. ಹುಚ್ಚನ ಕೆಲಸವನ್ನು ಉದ್ದೇಶಪೂರ್ವಕ ಎನ್ನಲಾಗದು. ಮಾಡುವ ಕೆಲಸದಲ್ಲಿ ಅವನಿಗೆ ಉದ್ದೇಶವೇನೂ ಇರುವುದಿಲ್ಲ. ಅತಿರೇಕವಾದ ಅಸಾಮಾನ್ಯವಾದ ಹಾಗೂ ಸಾಮಾನ್ಯ ಮನಃಪ್ರವೃತ್ತಿಯಿಂದ ಕೆಳಗಿಳಿದ ಅಥವಾ ಮೇಲೇರಿದ ಮನಃಸ್ಥಿತಿಯ ಕಾರ್ಯಗಳೂ ವಸ್ತುವಾಗಿ ಗ್ರಾಹ್ಯವಾಗಲಾರದು. ದೈವಿಕವಾದ ಅಂಶಗಳು, ಮನಸ್ಸಿನ ಅಸಾಮಾನ್ಯ ಸ್ಥಿತಿಗತಿಗಳು ಎಲ್ಲ ನಾಟಕಗಳಲ್ಲಿಯೂ ಬರಬಹುದು, ಆದರೆ ಅಲೌಕಿಕವೂ ದೈವಿಕವೂ ಆದ ಘಟನೆಗಳ ಪರಿಣಾಮವಾಗಿ ವ್ಯಕ್ತಿ ಕೆಲಸಮಾಡತೊಡಗಿದರೆ ಅದು ಅವನ ಹಾನಿಗೆ ಕಾರಣವಾಗಲಾರದು. ಭೂತಗಳು ಮಾಟಗಾತಿಯರು ಇವರಿಂದ ಆವಿಷ್ಟವಾದ ಮನಸ್ಸುಳ್ಳ ಕರ್ಮಗಳು ದುರಂತನಾಟಕಕ್ಕೆ ತಕ್ಕ ಕರ್ಮಗಳೆಂದು ಭಾವಿಸಲಾಗದು. ವ್ಯಕ್ತಿಯ ಸ್ವಾತಂತ್ರ್ಯವನ್ನು ತನ್ನ ವಿಪತ್ತನ್ನು ತಾನೇ ತಂದುಕೊಳ್ಳುವ ಪ್ರಯತ್ನಗಳನ್ನು ಇವು ಕಸಿದುಕೊಂಡು ಬಿಡುತ್ತವೆ. ವ್ಯಕ್ತಿಗತ ಪ್ರಯತ್ನಗಳಿಗೆ ವಿಘ್ನ ತಂದೊಡ್ಡುವ ಪಾತ್ರಗಳು ದುರಂತನಾಟಕಕ್ಕೆ ವಸ್ತುವಾಗಲಾರವು. ಮ್ಯಾಕ್ಬೆತ್ ನಾಟಕದ Witches ನಿಜವಾದ Witches ಅಲ್ಲ, ಮ್ಯಾಕ್ಬೆತ್ ಮನಸ್ಸಿನ ದುರಭಿಸಂಧಿಗಳ ಪ್ರತಿರೂಪ. ಮ್ಯಾಕ್ಬೆತ್ ಇಚ್ಛಾಪೂರ್ವಕವಾಗಿ ಕೈಕೊಂಡ ದುಷ್ಕೃತ್ಯದಿಂದ ಅವನ ಪತನವಾಗುತ್ತದೆ. ಇಲ್ಲಿ ಈ ಅಂಶ ರುದ್ರನಾಟಕಕ್ಕೆ ಸಹಕಾರಿ. ಹ್ಯಾಮ್ಲೆಟ್ ನಾಟಕದ ghost ಹ್ಯಾಮ್ಲೆಟನ ಸ್ವಭಾವಕ್ಕೆ ಮನಃಪ್ರವೃತ್ತಿಗೆ ಅನುಗುಣವಾಗಿ ಚಂಚಲತೆಯನ್ನು ಮೊದಲು ಉತ್ಪಾದಿಸಿ (ಉಚ್ಚಾಟಿಸಿ?) ಕಾರ್ಯಕ್ಕೆ ಪ್ರೇರಿಸುತ್ತದೆ. ಅವನ ಮನಸ್ಸಿನ ಸಂದೇಹವೇ ಈ ಪಿಶಾಚವನ್ನು ಸೃಷ್ಟಿಸಿ ಅವನನ್ನು ಕಾರ್ಯಕ್ಕೆ ಪ್ರೇರಿಸಿದೆ. ಈ ಅಮಾನುಷ ಅಂಶಗಳು ನಾಟಕದ ಪ್ರಗತಿಗೆ ಪೋಷಕವಾಗಿವೆ, ಅಂತರಾಯಕಾರಿಯಾಗಿಲ್ಲ.

ಆಕಸ್ಮಿಕ ಘಟನೆಗಳು (chances) ನಿಜಜೀವನದಲ್ಲಿ ಎಷ್ಟು ಸತ್ಯವೋ ನಾಟಕದಲ್ಲಿಯೂ ಅಷ್ಟೆ ಸತ್ಯ. ಏನೋ ಕೆಲಸವನ್ನು ನಾವು ಮಾಡುತ್ತಿದ್ದರೆ ಆವುದೋ ಅಲ್ಪಕಾರ್ಯ ನಡೆದು, ಆಕಸ್ಮಿಕವಾಗಿ

ತಡೆಯೊದಗಿ ಜಯ–ನಾಶ ಎರಡೂ ಸಂಭವಿಸಬಹುದು. ಈ ಆಕಸ್ಮಾತ್ ಘಟನೆಗಳನ್ನೇ ಪ್ರಧಾನವಾಗಿಟ್ಟುಕೊಂಡು ದುರಂತನಾಟಕದ ರಚನೆ ಸಾಧ್ಯವಿಲ್ಲ. ಈ ಆಕಸ್ಮಿಕಗಳನ್ನು ಮಿತವರಿತು ಬಳಸಿದರೆ ಮುಂದಿನ ವಿಪತ್ತನ್ನು ತರುವುದಕ್ಕೆ ಸಹಾಯಕಗಳಾಗುತ್ತವೆ. ಡೆಸ್ಡಿಮೋನಾ ಕರವಸ್ತ್ರವನ್ನು ಕಳೆದುಕೊಂಡದ್ದು, ಶಕುಂತಲೆ ಉಂಗುರವನ್ನು ಕಳೆದುಕೊಂಡದ್ದು–ಈ ಬಗೆಯುವು. ಎರಡೂ ಆಕಸ್ಮಾತ್ ಹೋದದ್ದು: ಯಾರೂ ಕದಿಯಲಿಲ್ಲ, ಉದ್ದೇಶದಿಂದ ಕಳೆಯಲಿಲ್ಲ. ಯಾವ ಕರ್ತೃವಿನ ಉದ್ದೇಶವೂ ಇಷ್ಟವೂ ಇಲ್ಲದೆ ನಡೆಯುವ ಘಟನೆಗಳು ಆಕಸ್ಮಿಕ ಘಟನೆಗಳು. ಇದನ್ನು ಅಧಿಕರಿಸಿಕೊಂಡು ಯಾವ ನಾಟಕಗಳನ್ನೂ ರಚಿಸಲಾಗದು. ಬಹಳ ಪ್ರಭಾವಶಾಲಿಯಾದಂತಹ ಸನ್ನಿವೇಶಗಳಲ್ಲಿ ಸೇರಿಕೊಂಡು ಬಂದರೆ ಅವಕ್ಕೆ ಪರಿಪೋಷಣೆ ಬರುತ್ತದೆ. ದುರುಂತನಾಯಕ ಮಾಡುವ ಕರ್ಮವೇ ಅವನಿಗೆ ವಿಪತ್ಕಾರಕವಾಗುವ ಹಾಗಿರಬೇಕು. ಈ ಕರ್ಮದಲ್ಲಿ ಹೆಚ್ಚಾಗಿ ನಾಯಕನ ಕೈವಾಡದ ಆವಶ್ಯಕತೆಯಿರಬೇಕು, ಆಕಸ್ಮಿಕಗಳಿಗೆ ಹೆಚ್ಚು ಅವಕಾಶವಿರಬಾರದು. ದೈವಿಕವಾದ್ದೂ ಅಲ್ಲ. ಇಚ್ಛಾಪೂರ್ವಕವಾದ ಕರ್ಮ, ಉನ್ಮಾದಕಾರಕ ಕರ್ಮವಲ್ಲ. ದೈವಿಕ, ಆಕಸ್ಮಿಕ. ಉನ್ಮಾದಕಾರಕ ಎಂಬ ಮೂರು ತೆರನ ಕಾರ್ಯ ವಿಶೇಷಗಳನ್ನೂ ತೆಗೆದು ಹಾಕಿದರೆ, ಉಳಿದವು ದುರಂತನಾಯಕನ ವಿಪತ್ತಿಗೆ ಕಾರಣಗಳಾಗಬಹುದು. ಇವನ್ನು ಬ್ರಾಡ್ಲೆ ಕೊಡುತ್ತಾರೆ, ಅರಿಸ್ಟಾಟಲ್ ಕೊಟ್ಟಿಲ್ಲ.

Conception of fate is different from God's hold....

ಗ್ರೀಕರ ರುದ್ರನಾಟಕಗಳು ಧರ್ಮಮೂಲದ್ದು. ಇಲ್ಲಿ ಧಾರ್ಮಿಕಾಂಶಗಳು ಬರಲೇಬೇಕು. ಷೇಕ್ಸ್‌ಪಿಯರಿನವು ಕ್ರೈಸ್ತಮತಕ್ಕೆ ಸೇರಿದ್ದರೂ ಅದರ ಪ್ರಭಾವ ಇಲ್ಲಿ ಕಂಡುಬರುವುದಿಲ್ಲ(?). ಹಾಗೆಯೇ ಸಂಸ್ಕೃತದ ಸಾಮಾಜಿಕ ನಾಟಕಗಳಲ್ಲಿ, ಸ್ವಪ್ನವಾಸವದತ್ತ, ಮೃಚ್ಛಕಟಿಕ ಲೌಕಿಕ ಜೀವನದಿಂದ ವಿಕಾಸಗೊಂಡದ್ದು. ಧರ್ಮದ ಪ್ರಭಾವ ಇಲ್ಲಿ ಎಳ್ಳಷ್ಟೂ ಇಲ್ಲ. ಆಕಸ್ಮಿಕ ಅಥವಾ ಅಪ್ರಾಕೃತಿಕ ಎಂಬುದನ್ನು ತೆಗೆದುಕೊಂಡರೆ, ಇದು ಲೋಕಾನುಭವಕ್ಕೆ ತೀರ ವಿರುದ್ಧವಲ್ಲ. ಆಗಾಗ ಅನಿರೀಕ್ಷಿತವೂ ಸಂಭವನೀಯವೇ. ಲೌಕಿಕ ನಾಟಕದ ದೈವಿಕಾಂಶ ಹಾಗೂ ಧರ್ಮಮೂಲದ ನಾಟಕಗಳ ದೈವಿಕಾಂಶಗಳಿಗೂ ಪ್ರಮಾಣದಲ್ಲಿ ಅಂತರವಿರುತ್ತದೆ. ಎರಡನೆಯ ಬಗೆಯ ನಾಟಕಗಳಲ್ಲಿ ಎಲ್ಲೆಲ್ಲಿಯೂ ದೈವದ ಪ್ರಭಾವ ಕಂಡು ಬರುತ್ತದೆ. ಬಹಳ ಸ್ವಲ್ಪ ಅಂಶಗಳು ಮಾನವಮೂಲದವಾಗಿರುತ್ತವೆ(?)

ಗ್ರೀಕ್ ರುದ್ರನಾಟಕಗಳು ಶುದ್ಧವಾಗಿ ಧರ್ಮಮೂಲದವು. ಷೇಕ್ಸ್‌ಪಿಯರ್ ರುದ್ರನಾಟಕಗಳು ಶುದ್ಧವಾಗಿ ಲೋಕಸಾಮಾನ್ಯ (secular) ವಾದ್ದಾಗಿರುತ್ತದೆ. ಈಸ್ಕಿಲಸ್ ನಾಟಕ ಪರ್ಸೇದಲ್ಲಿ ಲೌಕಿಕಾಂಶವಿದ್ದರೂ ಧಾರ್ಮಿಕಾಂಶಗಳೇ ಹೇರಳವಾಗಿ ಬರುತ್ತವೆ. ಮತಧರ್ಮದ ಆವರಣ ಷೇಕ್ಸ್‌ಪಿಯರನ ದುರಂತನಾಟಕಗಳಲ್ಲಿ ಕಂಡುಬರುವುದಿಲ್ಲ. ಇದರಿಂದ ಅವನ ಮತಧರ್ಮವನ್ನು ಗುರುತಿಸುವ ಸಾಕ್ಷ್ಯಗಳೇನೂ ಕಾಣುವುದಿಲ್ಲ. ಜೀವನದ ಆದರ್ಶವನ್ನೂ ವಾಸ್ತವಿಕ ಘಟನಾಪರಂಪರೆಗಳನ್ನೂ ಆತನು ತನ್ನ ನಾಟಕಗಳಿಗೆ ಉಪಯೋಗಿಸಿಕೊಂಡಿದ್ದಾನೆ.

ರುದ್ರನಾಟಕದ ಕಾರ್ಯ ನಡೆಯುವ ರೀತಿ

ರುದ್ರನಾಟಕದ ನಾಯಕನು ತನ್ನ ಮನದ ಯಾವುದೋ ಅಭೀಷ್ಟ ಸಾಧನೆಯ ಕಾರ್ಯದಲ್ಲಿ ತೊಡಗುತ್ತಾನೆ. ಇವನ ಅಭೀಷ್ಟ ಇತರ ಪಾತ್ರಗಳ ಅಭೀಷ್ಟದೊಂದಿಗೆ ವಿರುದ್ಧವಾಗಿ ಪರಿಣಮಿಸಿ ಹೋರಾಟ ನಡೆಯುತ್ತದೆ. ಇದು ಪರಸ್ಪರವಾಗಿ ನಡೆಯುವ ಹೋರಾಟ. ಹಲವು ವ್ಯಕ್ತಿಗಳ ಹಲವು ತೆರನ ಆವೇಶ, ಇಚ್ಛೆ, ಆಸೆಗಳಿಗೆ ಪರಸ್ಪರ ಸಂಘರ್ಷಣೆ ಉಂಟಾಗುವುದರಲ್ಲಿ ದುರಂತನಾಟಕದ ಕ್ರಿಯೆಯಿದೆ. ಈ ಹೋರಾಟದ ಸಂಘರ್ಷಣೆ ಹೇಗೆ ನಡೆಯಬಹುದು? ಮ್ಯಾಕ್ಬೆತ್ ನಾಟಕ : ಡಂಕನ್ ಮುದಿ ದೊರೆ; ತನಗೆ ಪ್ರಶಸ್ತಿ ಜನಾನುರಾಗ ಉಂಟು; ದೊರೆಯನ್ನು ಸಿಂಹಾಸನದಿಂದ ತಳ್ಳಿಹಾಕಿ ತಾನೇ ದೊರೆಯಾದರೆ ಚೆನ್ನೆಂಬ ಆಸೆಯಿಂದ ಪ್ರೇರಿತನಾಗಿ ಮ್ಯಾಕ್ಬೆತ್ ಮುಂದಿನ ಘೋರ ಕರ್ಮಗಳನ್ನು ನಡಸುತ್ತಾನೆ. ಇವನ ಆಸೆ ಆಕಾಂಕ್ಷೆಗಳಿಗೆ ವಿರುದ್ಧವಾದ ಬೇರೆ ಶಕ್ತಿಗಳು ನಾಟಕದ ಇತರ ಪಾತ್ರಗಳಲ್ಲಿ ಕಾಣುತ್ತದೆ. ಡಂಕನ್ನಿನ

ಪಕ್ಷದ ಜನ ವಿರುದ್ಧ ಕಾರ್ಯಗಳನ್ನೇ ಆಲೋಚಿಸುತ್ತಾರೆ. ಅಂತೂ ಇದು ಇಬ್ಬರು ವ್ಯಕ್ತಿಗಳಿಗೆ ಹಾಗೂ ಎರಡು ಗುಂಪುಗಳಿಗೆ ನಡೆಯುವ ಹೋರಾಟ (ವ್ಯಕ್ತಿಯ ಪಕ್ಷ–ಪ್ರತಿಪಕ್ಷ). ಇನ್ನು ತಲೆ ತಲಾಂತರದಿಂದ ದ್ವೇಷಿಸುತ್ತಿದ್ದ ಎರಡು ಮನೆತನದ ಹೋರಾಟದ ಪರಿಣಾಮವೇ ರೋಮಿಯೋ ಮತ್ತು ಜೂಲಿಯೆಟ್ ನಾಟಕದ ಕ್ರಿಯೆ. ಮೈ ಮೈಗೆ ಜರುಗಿದ ಹೋರಾಟವಲ್ಲ, ಉದ್ದೇಶಗಳಿಗೆ ವಿರೋಧಗಳೇರ್ಪಟ್ಟು ನಡೆದ ಹೋರಾಟ. ವ್ಯಕ್ತಿಯ ಅಂತರ್ಗತ ಆಶೆ ಆಕಾಂಕ್ಷೆಗಳು ಹೋರಾಡುತ್ತವೆ, ಒಂದೊಂದು ಪಕ್ಷದಲ್ಲೂ ಎಚ್ಚರಗೊಂಡಿರುವ ಆಶೆ ಆಕಾಂಕ್ಷೆಗಳು ಹೋರಾಡುತ್ತವೆ. ಮನುಷ್ಯನ ಆವೇಶ, ಮನಃಪ್ರಚೋದನೆ. ಕಾರ್ಯದಲ್ಲಿ ಆದರ ಪ್ರಕಟನೆ ಇವು ಉದ್ದೇಶ ಮೂಲವಾದವು. ಉದ್ದೇಶವನ್ನು ಹಿಡಿದು ನಾವು ಇದನ್ನು ನಿರ್ಧರಿಸಬೇಕು. ಎಲ್ಲಕ್ಕಿಂತಲೂ ಮುಖ್ಯ: ಒಬ್ಬ ವ್ಯಕ್ತಿಯ ಒಳಗೇ ಧರ್ಮ–ಅಧರ್ಮ, ಒಳ್ಳೆಯದು ಕೆಟ್ಟದ್ದಕ್ಕೆ ನಡೆಯುವ ಅಂತರಂಗದ ಹೋರಾಟ, ಒಳತೋಟಿ, ಮಾನಸಿಕ ಹೋರಾಟ. ಇದಕ್ಕೆ ಷೇಕ್ಸ್ಪಿಯರಿನಲ್ಲಿ ಹೆಚ್ಚು ಪ್ರಾಧಾನ್ಯವಿದೆ. ರುದ್ರನಾಟಕದ ಕ್ರಿಯೆಯ ಸ್ವರೂಪದಲ್ಲಿ ಪರಸ್ಪರ ವಿರುದ್ಧ ಶಕ್ತಿಗಳಿಗೆ ಹೋರಾಟವಾಗುವುದು, ವ್ಯಕ್ತಿಯಿಂದ ಹೊರಗಿರುವ ಇತರ ಶಕ್ತಿಗಳ ಪ್ರತಿಭಟನೆ ಇವು ಮುಖ್ಯವಲ್ಲ. ಇವು ಇಲ್ಲದಿದ್ದರೆ ನಾಟಕವೇನೋ ಮುಂದುವರಿಯುವುದಿಲ್ಲ. ಉದಾ: ಮ್ಯಾಕ್ಬೆತ್‌ನನ್ನು ಮ್ಯಾಕ್‌ಡಫ್ ಕೊಂದದ್ದು. ಆದರೆ ದುರಂತ ನಾಯಕನ ಒಳಗಡೆಯೇ ಶುಭ–ಅಶುಭ, ಧರ್ಮ–ಅಧರ್ಮ, ಇವುಗಳಿಗೆ ನಡೆವ ಒಳತೋಟಿ, ಮಂಗಳ–ಅಮಂಗಳ, ಕರ್ಮ–ಅಕರ್ಮ ಇವುಗಳಿಗೆ ನಡೆವ ಮಾನಸಿಕ ಹೋರಾಟ ಇವು ಪ್ರಮುಖಪಾತ್ರ ವಹಿಸುತ್ತವೆ. ಒಂದು ಧರ್ಮ ಇನ್ನೊಂದು ಧರ್ಮದೊಂದಿಗೆ ನಡಸಿದ ಹೋರಾಟವಾಗಬಹುದು. ಸ್ವಾಮಿಸೇವೆ, ಭ್ರಾತೃಪ್ರೇಮ ಎರಡೂ ಧರ್ಮಗಳೇ. ಯಾವುದನ್ನು ಹಿಡಿಯಬೇಕು? ಮನಸ್ಸು ಎರಡೂ ಕಡೆಗೆ ಹೊಯ್ದಾಡಿ ಈ ಹೋರಾಟವೇ ವ್ಯಕ್ತಿಯ ದುರಂತಕ್ಕೆ ಕಾರಣವಾಗಬಹುದು ಎನ್ನುವುದನ್ನು ನಾವು ಕರ್ಣನ ಪಾತ್ರದಲ್ಲಿ ಕಾಣುತ್ತೇವೆ. ರುದ್ರನಾಯಕನ ಆಂತರಂಗಿಕ ಹೋರಾಟದ ಚಿತ್ರಣವನ್ನು ಕೊಡಬೇಕಾದರೆ ಕವಿ ತುಂಬ ಪ್ರತಿಭಾಶಾಲಿಯಾಗಿರಬೇಕು. ಕಿಂಗ್‌ಲಿಯರ್, ಕರ್ಣ ಇತ್ಯಾದಿ ಪಾತ್ರಗಳ ರಚನೆ ನೋಡಿ.

ದುರಂತನಾಟಕದ ಕ್ರಿಯೆಯ ಸ್ವರೂಪ ಹೋರಾಟವಷ್ಟೆ. ಬಾಹ್ಯವಾದ ಹೋರಾಟಕ್ಕಿಂತ ಅಂತರಂಗಿಕ ಹೋರಾಟಕ್ಕೆ ಷೇಕ್ಸ್ಪಿಯರ್ ಹೆಚ್ಚು ಪ್ರಾಧಾನ್ಯ ಕೊಟ್ಟಿದ್ದಾನೆ. ಇದರ ವ್ಯಾವರ್ಣನೆಯಲ್ಲಿ ಅವನ ಪ್ರತಿಭೆಯ ಉತ್ಕೃಟ ಕಾಂತಿಯನ್ನು ಕಾಣುತ್ತೇವೆ. ಇದೇ ಅಂಶವನ್ನು ಅಧಿಕರಿಸಿಕೊಂಡು ಹೆಗೆಲ್ ತನ್ನ ನಿರೂಪಣೆಯನ್ನು ಸಮರ್ಥಿಸಿದ್ದಾನೆ. ಅರಿಸ್ಟಾಟಲ್ ನಾಟಕ ಕ್ರಿಯೆಯಲ್ಲಿ ಅಡಗಿರುವ ಈ ಬಗೆಯ ಪರಸ್ಪರ ಹೋರಾಟಕ್ಕೆ, ಒಳತೋಟಿಗೆ ಗಮನ ಸಲ್ಲಿಸಲಿಲ್ಲ (ಹೀಗೆ ಹೇಳಲು ನಮಗೆ ಆಧಾರವಿಲ್ಲ). ಹೆಗೆಲ್ ತನ್ನ ಸಿದ್ಧಾಂತಗಳನ್ನು ಗ್ರೀಕ್‌ನಾಟಕಗಳ ಆಧಾರದ ಮೇಲೆ ಕೊಟ್ಟಿದ್ದಾನೆ. ಷೇಕ್ಸ್ಪಿಯರ್ ನಾಟಕಗಳನ್ನು ಮಾತ್ರ, ಈ ಹೋರಾಟವನ್ನು ವಿವರಿಸುವಲ್ಲಿ ತೆಗೆದುಕೊಂಡಿಲ್ಲ. ದುರಂತ ಸತ್ಯವೆಂದರೆ ಈ ಹೋರಾಟ. ಉದಾಹರಣೆಗೆ: ಒರೆಸ್ಟಿಸ್ ಯಾತಕ್ಕೆ ತನ್ನ ತಾಯಿಯಾದ ಕ್ಲೈಟೆಮ್ನೆಸ್ಟ್ರಳನ್ನು ಕೊಂದ? ಕವಿ ಒರೆಸ್ಟಿಸ್ ಪಾತ್ರದಲ್ಲಿ ಒಳತೋಟಿಯನ್ನು ಕಂಡಿದ್ದಾನೆ. ಈಸ್ಕಿಲಸ್ ಅದನ್ನು ಷೇಕ್ಸ್ಪಿಯರ್ ರೀತಿಯಲ್ಲಿ ಚಿತ್ರಿಸಿದ್ದಾನೆಯೇ? ಮೃತನಾದ ತಂದೆಗೆ ಪಿತೃಋಣ ಸಲ್ಲಿಸಬೇಕು, ಆದರೆ ತಾಯಿಯನ್ನು ಕೊಲ್ಲುವುದು ಅಧರ್ಮ. ಯಾವುದು ಮಾಡುವುದು? ಒಳತೋಟಿ ಇಲ್ಲಿ ಸ್ಪಷ್ಟ. ತಂದೆಯ ಆತ್ಮಕ್ಕೆ ತೃಪ್ತಿ ಸಿಗುತ್ತದೆ ಎಂಬ ಉದ್ದೇಶದಿಂದ ಒರೆಸ್ಟಿಸ್ ತಾಯಿಯನ್ನು ಕೊಲ್ಲುವಾಗ ಮನಸ್ಸಿನಲ್ಲಿ ಹೋರಾಟ ನಡೆದಿದೆಯೇ? ಈ ಸನ್ನಿವೇಶದಲ್ಲಿ ಈಸ್ಕಿಲಸ್ ಒಳತೋಟಿಗೆ ಗಮನಕೊಟ್ಟಿಲ್ಲ. ಕೊಲ್ಲುವ ಮುಂಚೆ ಅವನು ಕೊಂಚ ಹಿಂತೆಗೆಯುತ್ತಾನೆ, ಪೈಲೇಡ್ಸ್ ಉತ್ಸಾಹಪಡುಂಬುತ್ತಾನೆ, ಅಷ್ಟೆ. ಇದೇ ನಾಟಕ ಷೇಕ್ಸ್ಪಿಯರನ ಕೈಗೆ ಸಿಕ್ಕಿದ್ದರೆ?

ಆದರ್ಶ ದುರಂತನಾಟಕ ಅಂತಿಗೊನೆ. ಇದಕ್ಕಿಂತ ಪರಿಪೂರ್ಣವಾದ ದುರಂತ ನಾಟಕ ಇಲ್ಲ. ಮಾನವಧರ್ಮ–ಮಾನವಧರ್ಮಾತೀತವಾದ ದೈವಿಕ ನಿಯಮ, ಮಾನವ ಕೃತ ನಿಯಮ–ದೈವಕೃತ ನಿಯಮ ಇವಕ್ಕೆ ಹೋರಾಟ. ಒರಿಸ್ಟಿಸ್ ನಾಟಕದಲ್ಲಿ ತನ್ನ ತಾಯಿಯನ್ನು ಕೊಂದ ಮೇಲೆ ನಾಟಕ ಮುಗಿಯುತ್ತದೆ. ಕ್ರೂರ ಕನ್ನಿಕೆಯರು (ಇರಿನಿಯೀಸ್) ಅವನನ್ನು ಬೆಂಬತ್ತಿ ಕಾಡುವ ಘಟ್ಟ ಬಂದಾಗ ನ್ಯಾಯ ಪಂಚಾಯಿತಿಗೆ ಹಿರಿಯರ ಸಭೆ ಕೂಡಿತು. ಸಮಾನವಾಗಿ ಮತಗಳು ಬರುತ್ತಲೂ ಅಥೇನೆ

ತನ್ನ ಮತವನ್ನು ಒರಿಸ್ಟಿಸ್ ಪರವಾಗಿ ಕೊಟ್ಟು ಆತನನ್ನು ನಿರಪರಾಧಿ ಎನ್ನುತ್ತಾಳೆ. ತಂತಮ್ಮ ಪಕ್ಷಗಳನ್ನು ಹಿಡಿದು ಎರಡು ಗುಂಪುಗಳೂ ಹೋರಾಡಿಲ್ಲ. ದುರಂತತೆ ಹೊರಟು ಹೋಗಿ ಒಂದು ರೀತಿಯ ರಾಜಿ ಏರ್ಪಟ್ಟಿದೆ. ಅಂತಿಗೊನೆ-ಕ್ರಯೋನ್ ಪಕ್ಷಗಳನ್ನು ಸಾಧಿಸುತ್ತಾರೆ. ಯಾರೂ ಸೋಲೊಪ್ಪಿಕೊಳ್ಳುವುದಿಲ್ಲ. ರಾಜಶಾಸನ ಮಾನವಕೃತಿ ಧರ್ಮ, ಭ್ರಾತೃವಿನ ಅಂತ್ಯಕ್ರಿಯೆ ದೈವಕೃತ ನಿಯಮ. ಕ್ರಯೋನ್ ಮೊದಲನೆಯದನ್ನು ಪಟ್ಟು ಹಿಡಿಯುತ್ತಾನೆ; ಅಂತಿಗೊನೆ ಎರಡನೆಯದೇ ಸರ್ವಕಾಲಕ್ಕೂ ಶ್ರೇಷ್ಠವೆನ್ನುತ್ತಾಳೆ. ಇಲ್ಲಿ ರಾಜಿ ಏರ್ಪಡಲು ಅವಕಾಶವಿಲ್ಲ. ಆದ್ದರಿಂದ ಇದು ದುರಂತನಾಟಕವಾಗಲು ಅವಕಾಶವಾಯಿತು. ಅರಿಸ್ಟಾಟಲ್ ಹೇಳದೆ ಬಿಟ್ಟಿರುವ Conflict ಎಂಬ ವಿಷಯವನ್ನು ತೆಗೆದು ಕೊಂಡು ಅದರ ಸೂಕ್ಷ್ಮವನ್ನು ಹೇಳಲು ಪ್ರಯತ್ನಪಟ್ಟಿದ್ದಾದರೆ, ದುರುಂತನಾಟಕದಲ್ಲಿ ಒಳತೋಟಿಗೆ ಗಮನಕೊಡಬೇಕು. ಅರಿಸ್ಟಾಟಲಿನ ತರುವಾಯದಲ್ಲಿ ಹೆಗೆಲ್ ಒಬ್ಬನೇ ದುರಂತನಾಟಕದ ಲಕ್ಷಣದ ವಿಚಾರವಾಗಿ ಹೆಚ್ಚು ಪರಿಷ್ಕಾರವಾದ ಅಂಶಗಳನ್ನು ಹೇಳಿದವನು. ಹೆಗೆಲ್ ಯೂರಿಪಿಡೀಸನನ್ನು ಒಪ್ಪಿಕೊಳ್ಳುವುದಿಲ್ಲ. ಇವನು ನವೀನ, ಗ್ರೀಕ್ ದುರಂತ ನಾಟಕಕ್ಕೆ ತಕ್ಕ ಪ್ರತೀಕವಾಗಲಾರನೆಂದು ಬಿಟ್ಟು ಬಿಟ್ಟಿದ್ದಾನೆ. ಆದರೆ ಹಿಪ್ಪೊಲಿಟಸ್,ಮೀಡಿಯಾ ಇಲ್ಲಿ ಪಾತ್ರಗಳ ಮನಸ್ಸಿನ ಹೋರಾಟವುಂಟು. ಮಕ್ಕಳನ್ನು ಕೊಲ್ಲಲೇ ಬೇಡವೇ ಎನ್ನುವಲ್ಲಿ ಮೀಡಿಯಾ ಮನಸ್ಸಿನ ಹೋರಾಟ ಕಾಣುತ್ತದೆ. ಹೆಗೆಲ್ ಯಾತಕ್ಕೋ ಏನೋ ಯೂರಿಪಿಡೀಸ್ ವಿಷಯದಲ್ಲಿ ಹೆಚ್ಚು ಆದರ ಹೊಂದಿಲ್ಲ. ಗ್ರೀಕ್ ರುದ್ರನಾಟಕದ ಪರಿಕಲ್ಪನೆಯಲ್ಲಿ ಒತ್ತಿ ಹೇಳದೆ ಇರುವ ಅಂಶ ಷೇಕ್ಸ್‌ಪಿಯರನ ನಾಟಕಗಳಲ್ಲಿ ಕಂಡುಬರುತ್ತದೆ ಎಂದು ಬ್ರಾಡ್ಲೆ ಹೇಳಿದ್ದಾರೆ. ಇದು ಸತ್ಯ.

ರುದ್ರನಾಟಕದ ನಾಯಕ

ಅಸಾಧಾರಣ ವ್ಯಕ್ತಿ, ಉದಾತ್ತ, ಗಂಭೀರ, ಘನವಂತ. ಇವನ ಜೀವನದಲ್ಲಿ ಸರ್ವಜನಾಸಕ್ತಿ ಕೇಂದ್ರೀಕೃತವಾಗಿರುತ್ತದೆ. ಕೆಲವು ಅದ್ಭುತವಾದ ಶಕ್ತಿಗಳಿರುತ್ತವೆ. ಸುಖದುಃಖಗಳನ್ನು, ಸಂತೋಷ-ಸಂತಾಪಗಳನ್ನು ಸಾಮಾನ್ಯರಿಗಿಂತ ವಿಶೇಷರೀತಿಯಲ್ಲಿ ಅನುಭವಿಸುವ ಮನಃಪ್ರವೃತ್ತಿ ಈತನದು. ಅತಿತೀವ್ರವಾದ ಯಾತನೆಗಳನ್ನು ಅನುಭವಿಸುವ ಚೇತನವಾಗಿರುತ್ತದೆ ಈತನದು (ಲಿಯರ್, ಈಡಿಪಸ್). ಅಸಾಮಾನ್ಯ ಭಾವನಾಯುಕನಾದವನ ಸಂತಾಪ, ಯಾತನೆ ಈತನಲ್ಲಿ ಕಾಣಬರುತ್ತದೆ. ಗ್ಲಾಸ್ಟೆರ್ ಕೊಂಚ ಸಾಮಾನ್ಯತೆಯ ಮಟ್ಟದಲ್ಲಿದ್ದಾನೆ. ಈತ ಕಣ್ಣು ಕೀಳಿಸಿ ಕೊಳ್ಳುವ ದುಃಖ ನಮಗೆ ವೇದ್ಯ. ಲಿಯರ್‌ನ ಸಂತಾಪದ ಭೂಮತೆ ಕಲ್ಪನಾತೀತವಾದ್ದು. ಉದಾತ್ತವಾದ ಹಾಗೂ ಪ್ರಭಾವಶಾಲಿಯಾದ ಶಕ್ತಿಯನ್ನುಳ್ಳ ವ್ಯಕ್ತಿ ಇವನು. ಕ್ಲಿಟೆಮ್ನೆಸ್ಟ್ರಳ ಸೇಡು ಸಾಮಾನ್ಯರ ರೋಷಕ್ಕಿಂತ ಅತಿಮಿಗಿಲಾದ್ದು. ಇದು ಎಲ್ಲ ರಸಗಳ ವಿಷಯದಲ್ಲೂ ಅನ್ವಯಿಸುತ್ತದೆ. ದುರಂತನಾಟಕದಲ್ಲಿ ಈ ಭಾವಸಾಂದ್ರತೆ ಇಷ್ಟು ಗಾಢವಾಗಿಯೂ ತೀವ್ರವಾಗಿಯೂ ಇರದಿದ್ದರೆ...(?)

ಈತ ಮಹತ್ತ್ವದ ಅನುಭವಗಳನ್ನು ಪಡೆಯಲು ಸಮರ್ಥ; ಮಹಾನುಭಾವ. ಸಾಮಾನ್ಯರ ಸಹನಶಕ್ತಿಗೆ ಸಾಧ್ಯವಿಲ್ಲದ, ಅಪರ ಕಲ್ಪನೆಗೂ ಮೀರಿದ ಅನುಭವಸಾಂದ್ರತೆಯನ್ನು ಪಡೆಯುವ ಶಕ್ತಿ ಆತನಲ್ಲಿ ಉಂಟು. ಅವನಲ್ಲಿ ಮಹಾ-ಅನುಭವತ್ವ ಕಾಣುತ್ತದೆ. ಸಾಮಾಜಿಕ ನಾಟಕಗಳ ಸಾಮಾನ್ಯ ನಾಯಕರಲ್ಲಿ ಇದು ಅಷ್ಟಾಗಿ ಕಾಣಸಿಗುವುದಿಲ್ಲ. ನಾಯಕನು ಸರ್ವಕಲ್ಯಾಣಗುಣಗಳಿಂದ ಸಂಶೋಭಿತನಾದ ವ್ಯಕ್ತಿಯೆಂದು ಗ್ರೀಕ್ ನಾಟಕಕಾರರಾಗಲಿ ಷೇಕ್ಸ್‌ಪಿಯರಾಗಲಿ ಒಪ್ಪುವುದಿಲ್ಲ. ಯಾವುದೋ ದೋಷ ದೌರ್ಬಲ್ಯ ನಾಯಕನಲ್ಲಿ ಇದ್ದೇ ಇರುತ್ತದೆ. ಮಿಕ್ಕ ಸದ್ಗುಣಗಳಿಂದ ಇದು ಆಚ್ಛಾದಿತವಾಗಿರುತ್ತದೆ, ಯಾವಾಗಲೋ ಹೊರಪಡುತ್ತದೆ. ಆ ಮುಂಚೆ ಯಾವಾಗಲೂ ಬೇತಾಳದಂತೆ ಬೆನ್ನಟ್ಟುತ್ತಿರುತ್ತದೆ. ರಾಜ್ಯ ಹಂಚಿಕೊಡುವಾಗ ಲಿಯರ್‌ಗಿದ್ದ ಸ್ವಾರ್ಥೋದ್ದೇಶ ಎಂದರೆ ಮುಂದಿನ ತನ್ನ ಜೀವನಕ್ರಮದ ಸುಗಮತೆಯೇ. ಮುಂದಿನ ಸುಖಜೀವನದ ಆಕಾಂಕ್ಷೆಯಿಂದ ಆತ ರಾಜ್ಯವಿಭಾಗವನ್ನು ಕೈಕೊಂಡ. ಆದರೆ ಈ ಆಕಾಂಕ್ಷೆ ಅವನು ನೆನಸಿದ ರೀತಿಯಲ್ಲಿ ನೆರವೇರದೆ, ಪ್ರತಿಕೂಲವಾಗಿ ನಡೆದು ಅವನ ದುರಂತತೆಗೆ ಕಾರಣವಾಯಿತು. ಇಲ್ಲಿ ದುರಂತತೆ ಏನು? ರಾಜ್ಯ ಹಂಚಿಕೊಟ್ಟದ್ದೇ ತಪ್ಪು. ಹಾಗೆ ಹಂಚಿಕೊಡುವಾಗ ತನ್ನ ಜೀವನದ ಸುಖ ಗ್ಯಾರಂಟಿ ಎಂದುಕೊಂಡ. ಮುಂಜಾಗ್ರತೆಯನ್ನು ತೆಗೆದುಕೊಳ್ಳಲಿಲ್ಲ. ಇಬ್ಬರು

ಮಕ್ಕಳ ಪ್ರೇಮದ ವಿಚಾರವಾಗಿ ಸಂದೇಹಿಸಲಿಲ್ಲ. ಅವರ ಸ್ವಭಾವನ್ನು ಸರಿಯಾಗಿ ಪರೀಕ್ಷಿಸದೆ ಅವರನ್ನು ನಂಬಿಬಿಟ್ಟ. ಈ ನಂಬುವುದೂ ದುರಂತತೆಯ ಮೂಲಗಳಲ್ಲಿ ಒಂದು. ಪ್ರಮಾಣಿಸಿ ನೋಡದೆ ನಂಬಬಾರದು. ಮ್ಯಾಕ್ಬೆತ್‌ನಲ್ಲಿ ಹುದುಗಿದ್ದ ರಾಜನಾಗಬೇಕೆಂಬ ಆಸೆ ಆತನ ಪ್ರಕೃತಿಸಿದ್ಧನಾದ ಸದ್ಗುಣಗಳನ್ನೆಲ್ಲ ನುಂಗಿಕೊಂಡು ತಾನೇ ತಾನಾಗಿ ವಿಜೃಂಭಿಸುತ್ತದೆ. ಅದರ ಸೆಳೆತಕ್ಕೆ ಸಿಕ್ಕ ಮ್ಯಾಕ್ಬೆತ್ ಕರ್ಮ ಮಾಡುತ್ತಾನೆ. ಆತನಲ್ಲಿ ಏಕಭಾವನಾಗ್ರಾಹಿತ್ವವಿರುತ್ತದೆ. ಈ ಸದ್ಗುಣವೂ ಪ್ರಕೃತಿಸಹಜ. ಸಾಮಾಜಿಕ ಕಟ್ಟುಕಟ್ಟಳೆ, ಧಾರ್ಮಿಕಭಾವನೆ ಅದನ್ನು ಹದ್ದಿನಲ್ಲಿರಿಸಿರುತ್ತದೆ. ಅದಕ್ಕೆ ಪರಿಪಾಕ ಒದಗುವ ಸಂದರ್ಭ ಬಂದರೆ ಅದುವರೆಗೂ ಮನಸ್ಸಿನಲ್ಲಿ ಅದುಮಿಟ್ಟ ಅಲ್ಪ ದೌರ್ಬಲ್ಯವೇ ಪ್ರಜ್ವಲಿಸಿ, ಸದ್ಗುಣಗಳನ್ನು ತಳ್ಳಿಹಾಕಿ, ವ್ಯಕ್ತಿಯನ್ನು ಆಕ್ರಮಿಸಿ ಅವನನ್ನು ದುರಂತತೆಗೆ ಒಳಪಡಿಸುತ್ತದೆ. ಹೆಚ್ಚಿನ ಪರಿಮಾಣದಲ್ಲಿ ದೌರ್ಬಲ್ಯದ ವೈವಿಧ್ಯವನ್ನು ಕಾಣಿಸುವುದು, ನಾನಾ ತೆರನ ವ್ಯಕ್ತಿಗಳನ್ನಾರಿಸಿಕೊಂಡು ಅವರಲ್ಲಿ ನಾನಾ ಬಗೆಯ ದುರಂತತೆಯ ದೌರ್ಬಲ್ಯವನ್ನು ಕಾಣಿಸುವುದು ಷೇಕ್ಸ್‌ಪಿಯರ್‌ನಲ್ಲಿ ಕಂಡುಬರುವ ವಿಶೇಷ.

ರುದ್ರನಾಟಕದಲ್ಲಿ ವಿಧಿ-ದೈವ :

ಈಚಿನ ರುದ್ರನಾಟಕಗಳಲ್ಲಿ ಇದು ಕಾಣುತ್ತದೆ. ಉದ್ದೇಶವಿಲ್ಲದೆ ವ್ಯಕ್ತಿಯ ಶಕ್ತಿಹ್ರಾಸ ಎಂದು ಬ್ರಾಡ್ಲೆ ಹೇಳಿದ್ದಾರೆ. ಕರ್ಣ ಉದಾತ್ತ ಗುಣನಿಧಿ. ಅವನಿಗೆ ಬಂದಂತಹ ಸಮಸ್ಯೆಗಳು ಬರದೆ ಇದ್ದರೆ, ಅವನ ಒಳ್ಳೆಯ ಗುಣಗಳಿಂದ ಅವನು ಲೋಕಕ್ಕೆ ಆದರ್ಶಪ್ರಾಯನಾಗುತ್ತಿದ್ದ. ಅವನ ಬಾಳುವೆಯೆಲ್ಲ ಬರಿದಾಗಿ ಹೋಯಿತು. ಎಲ್ಲಾ ದುರಂತ ನಾಟಕಗಳಿಗೂ ಇದು ಸಾಮಾನ್ಯ. ಲಿಯರ್‌ನ ಭಾವನಾಶಕ್ತಿ ಉತ್ಕೃಷ್ಟ. ಅವನ ನೆನಕೆಯ ರೀತಿಯಲ್ಲಿ ಮಾಡಿದ ಕಾರ್ಯ ಫಲವನ್ನು ಕೊಡದಿದ್ದರೂ ಚಿಂತೆಯಿರಲಿಲ್ಲ; ಕಾರ್ಡಿಲಿಯಾ ಜತೆ ಬಾಳಲಿಲ್ಲವಲ್ಲ, ಮುದುಕನನ್ನು ಹೀಗೆ ನೈಷ್ಠುರ್ಯದಿಂದ ಕೊಂದುದೇಕೆ ಎನಿಸುತ್ತದೆ. ಅವನ ಜೀವನ ವ್ಯರ್ಥವಾಗಿ ಅರ್ಥದ ಹಿತಕ್ಕಾಗಿ(?) ಸಂದು ಹೋದಂತೆ ಎನಿಸುತ್ತದೆ. ಹೀಗೆಯೇ ಒಮ್ಮೊಮ್ಮೆ ದುರಂತನಾಟಕದಲ್ಲಿ ಕಂಡುಬರುವ, ನಾಯಕನಲ್ಲದ ಇತರ ವ್ಯಕ್ತಿಗಳು ನಿರ್ದೋಷಿಗಳಾಗಿದ್ದರೂ ಅನ್ಯಾಯವಾಗಿ ಮರಣಹೊಂದುತ್ತಾರೆ (ಡೆಸ್ಡಿಮೋನಾ, ಕಾರ್ಡೀಲಿಯಾ). ಯಾವ ಪ್ರಯೋಜನವಿಲ್ಲದೆ ಜೀವನದ ಮುಕ್ತಾಯ. ಇದಕ್ಕೆ ಪರಿಹಾರ ಹೇಳಲು ಸಾಧ್ಯವೇ? ಹೇಳಲು ಕಷ್ಟ. ಜೀವನದ ಪರಮ ರಹಸ್ಯವನ್ನು ಬಿಡಿಸುವುದು ಕಷ್ಟ. ಈ ರಹಸ್ಯವನ್ನೇ ಕೆಲವರು ದೈವವೆಂದು ಹೇಳುತಾರೆ. ಈ ನಾಟಕ ಪ್ರಪಂಚದಲ್ಲಿ ಯಾವ ಶಕ್ತಿ ಮನುಷ್ಯನ ಬಾಳಿನ ಮೇಲೆ ಹೇಗೆ ಪ್ರಭಾವಬೀರುತ್ತದೆ ಎಂಬುದನ್ನು ನಿಷ್ಕರ್ಷೆ ಮಾಡಿ ಹೇಳುವುದಕ್ಕೆ ಸಾಧ್ಯವಿಲ್ಲ. ಸರ್ವಶಕ್ತವಾದ ದೈವಕ್ಕೆ ಮನುಷ್ಯರ ಆಗುಹೋಗುಗಳು ಅಧೀನ. ಈ ಸರ್ವ ಶಕ್ತಿಯಲ್ಲಿ ನಂಬಿಕೆಯಿಟ್ಟು ನಮ್ಮ ಬಾಳನ್ನು ನೇರವಾಗಿ ತಿದ್ದಿಕೊಳ್ಳಬೇಕು. ಆ ಶಕ್ತಿ ಎಂಬುದಿದೆಯೇ? ಅದರ ಸ್ವರೂಪವೇನು? ಧಾರ್ಮಿಕ ಪ್ರಪಂಚಕ್ಕೂ ಲೌಕಿಕವಾದ ದುರಂತನಾಟಕ ಪ್ರಪಂಚಕ್ಕೂ ವ್ಯತ್ಯಾಸ ಕಂಡುಬರುತ್ತದೆ. ಲೌಕಿಕ ಧಾರ್ಮಿಕ ಎಂದು ವಿಭಾಗಿಸುವುದು ಅನುಚಿತ. ಈ ಎರಡೂ ಬೇರೆ ಒಂದು ಶಕ್ತಿಯ ಅಧೀನದಲ್ಲಿ ಅಥವಾ ಒಂದೇ ಶಕ್ತಿಯ ಭಿನ್ನಮುಖಗಳಲ್ಲಿ ಇರಬಹುದು. ದೈವವಾದದಲ್ಲಿ (Fatalism) ಗ್ರೀಕ್‌ನಾಟಕಕಾರರಿಗೆ ಹೆಚು ನಂಬಿಕೆ. ಷೇಕ್ಸ್‌ಪಿಯರ್‌ಗೆ ಅಂಥ ನಂಬಿಕೆ ಇಲ್ಲವೆಂದು ಕಾಣುತ್ತದೆ. ದೈವವಾದದಲ್ಲಿ, ಮನುಷ್ಯನ ಬಾಳಿಕೆಯ ಆದ್ಯಂತ ಕ್ರಿಯೆಗಳೆಲ್ಲ ನಿರ್ದಿಷ್ಟ, ನಾವು ಹುಟ್ಟುವ ಮುಂಚೆ ನಮ್ಮ ಜಾತಕವನ್ನು ದೈವ ಬರೆದುಬಿಟ್ಟಿದೆ, ಯಾವುದೋ ಒಂದು ಅವಿದಿತವಾದ ವಿಧಿಯ ನಿಶ್ಚಯದಂತೆ ನಾವು ನಡೆಯಬೇಕು–ಎನ್ನುವುದಿದೆ. ಪಂಪ ಇವನ್ನು ಸುಂದರವಾಗಿ ಹೇಳುತ್ತಾನೆ:

> ಬಿದಿವಸದಿಂದೆ ಪುಟ್ಟುವುದು ಪುಟ್ಟಿಸುವಂ ಬಿದಿ ಪುಟ್ಟಿದಂದಿವಂ
> ಗಿದು ಬಿಯಮೊಳ್ಪಿವಂಗಿದು ವಿನೋದಮಿವಂಗಿದು ಸಾವ ಪಾಂಗಿವಂ
> ಗಿದು ಪಡೆಮಾತಿವಂಗಿದು ಪರಾಕ್ರಮಮೆಂಬುದನೆಲ್ಲ ಮಾಟ್ಕೆಯಿಂ
> ಬಿದಿ ಸಮಕಟ್ಟಿ ಕೊಟ್ಟೊಡೆದೆಯೊಳ್ ಕಿಡಿಸಲ್ ಕುಡಿಸಲ್ ಸಮರ್ಥರಾರ್॥

ಎಲ್ಲವೂ ಅಗೋಚರವಾದ ಶಕ್ತಿಗೆ ಅಧೀನ. ಎಂದ ಮೇಲೆ ಮನುಷ್ಯನು ಏಕೆ ಪ್ರಯತ್ನವನ್ನು ಮಾಡಬೇಕು? ದೈವನಿಯಮ ಅಚಲವಾದ್ದರಿಂದ ನನ್ನ ಪಾಲಿನ ನಿಯಮ ನನಗೆ ಏತಕ್ಕೆ ಬಾರದು?

ಹೀಗೆ ತಿಳಿಯಲು ಅವಕಾಶವಿದೆಯಾದ್ದರಿಂದ ದೈವವಾದಕ್ಕೆ ಹೆಚ್ಚು ಬೆಲೆ ಕಟ್ಟುವುದಕ್ಕಿಲ್ಲ. ಏಕೆಂದರೆ ಮನುಷ್ಯಜೀವನ ಅದರಿಂದ ನಡೆಯುವುದಿಲ್ಲ. ಈ ತೆರನ Fatalism ಪೂರ್ಣವಾಗಿ ದೈವವಾದವಲ್ಲ. ದೈವವಂತೂ ಅಲ್ಲವೇ ಅಲ್ಲ.

ಬೇರೆ ಯಾವುದೋ ನೈತಿಕ ಶಕ್ತಿ, ಒಂದು ಋತ, ಯಾವುದು ಲೋಕದ ಸಂಚಾರಕ್ಕೆ ಹಿಂದುಗಡೆ ಪ್ರೇರಕ ಶಕ್ತಿಯಾಗಿದೆಯೋ ಅದು ದುರಂತನಾಟಕವನ್ನಾಳುವ ಅಂಶ. ಗ್ರೀಕ್ ನಾಟಕದಲ್ಲಿ ದೇವತೆಗಳು (Furies), ನಿರಾಕಾರದೇವತೆಗಳು, ಶಕ್ತಿಗಳು ಕಂಡುಬರುತ್ತಾರೆ. ಮನುಷ್ಯನ ಬಾಳುವೆ Justice, moral order (ಋತ) ಎಂಬುದಕ್ಕೆ ಒಳಪಟ್ಟದ್ದು. ಷೇಕ್ಸ್‌ಪಿಯರ್ ನಾಟಕದ ಆತ್ಯಂತಿಕ, ಪರಮಶಕ್ತಿಯೆಂದರೆ ಈ ಋತ. ಒಳ್ಳೆಯದು ಕೆಟ್ಟದ್ದು ಎಂಬೆರಡರಲ್ಲಿ ಕೆಟ್ಟದ್ದನ್ನು ತೀರ ದ್ವೇಷಿಸುತ್ತದೆ ಇದು; ಹಾಗೆಯೇ ಒಳ್ಳೆಯದಕ್ಕೆ ತೀರ ಸಮೀಪಿಸುತ್ತದೆ. ಮೈಗೆ ಅಂಟಿದ ವಿಷದಂತಿರುವ ದೌರ್ಬಲ್ಯ ವನ್ನು ದುರಂತನಾಯಕ ಪ್ರತಿಭಟಿಸುತ್ತಾನೆ. ಇದಕ್ಕಾಗಿ ಅವನಲ್ಲಿ ಒಳತೋಟಿ ನಡೆಯುತ್ತದೆ. ಆ ವಿಷವನ್ನು ತನ್ನ ಮನದಿಂದ ಹೊರದೂಡಲು ಆತನು ಅಸಮರ್ಥನಾಗಿ, ಆ ಪ್ರಯತ್ನದಲ್ಲಿ ತನ್ನ ಮೇಲೆ ವಿಪತ್ತನ್ನು ತಂದುಕೊಳ್ಳುತ್ತಾನೆ. ಅಶುಭ, ಅಮಂಗಳಕರವಾದ್ದು ಈ ಕೊನೆ. ಆದರೆ ಅಶಿವವೂ ಕೂಡ ಶಿವದಲ್ಲಿಯೇ ಅಂತರ್ಗತವಾದ್ದು. ಶಿವ ತನ್ನಲ್ಲಿನ ಅಶಿವವನ್ನು ಹೊರದೂಡಲು ಯತ್ನಿಸುತ್ತಾನೆ. ಹೀಗೆ ನಡೆಯುವ ಪ್ರಯತ್ನವೇ ದುರಂತನಾಟಕದ ತಾತ್ತ್ವಿಕ ಪ್ರಪಂಚ ಎನ್ನುತ್ತಾರೆ. ಈ ರೀತಿ ವಿಮರ್ಶಿಸಿದರೆ ದುರಂತನಾಟಕಕ್ಕೆ ಅರ್ಥಬರುತ್ತದೆ. ಸಮಾನ ಸ್ವಭಾವದ ಲಿಯರ್ ದಂಪತಿಗಳಿಗೆ ಭಿನ್ನ ಸ್ವಭಾವದ ವ್ಯಕ್ತಿಗಳು ಹೇಗೆ ಹುಟ್ಟಿದರು? ರೀಗನ್, ಗಾನರಿಲ್ ಇಬ್ಬರೂ ಒಂದು ತೆರ. ಈ ಸ್ವಭಾವದ ವಿರುದ್ಧತೆ ಕಾರ್ಡೀಲಿಯಳಲ್ಲಿ. ಎಷ್ಟೋ ವೇಳೆ ಆನುವಂಶಿಕತೆಯೇ ದೈವದ ಸ್ಥಾನವನ್ನಾಕ್ರಮಿಸುತ್ತದೆ. ಆನುವಂಶಿಕತೆಯ ವಿಚಾರವಾಗಿ ತೀವ್ರವಾದ ಚಿಂತನೆಯಲ್ಲಿದ್ದ, ಷೇಕ್ಸ್‌ಪಿಯರ್ ಇದನ್ನು ಬರೆಯುವಾಗ. ಇದು ಋತದಲ್ಲಿ ಐಕ್ಯವಾಗುತ್ತದೆ. ಶಿವಕ್ಕೆ ತೀರ ಸಮೀಪ. ಅಶಿವ ದೂರವಾದ್ದು, ವಿರುದ್ಧವಾದ್ದು. ಅಶಿವವನ್ನು ತನ್ನ ಬಸಿರಿನಲ್ಲಿಯೇ ಮಡಗಿಕೊಂಡಂತಿದೆ. ಇದನ್ನು ದೂರಮಾಡುವುದಕ್ಕಾಗಿಯೇ ಅನಂತ ಪ್ರಯತ್ನ, ಒಳಿತು ಕೆಡುಕನ್ನು ಹೊರದೂಡಲು ನಡಸುವ ಪ್ರಯತ್ನ.

ನಾಟಕದ ವಸ್ತು, ಕ್ರಿಯೆ, ನಾಯಕ, ಮನಸ್ಸಿನ ಪರಿಣಾಮ, ವಿಧಿಯ ಕೈವಾಡ ಈ ಹಲವಂಶಗಳು ಗ್ರೀಕ್ ನಾಟಕದಲ್ಲಿಯೂ ಕಂಡುಬರುತ್ತವೆ. ಷೇಕ್ಸ್‌ಪಿಯರಿನಲ್ಲಿಯೂ ಕಂಡುಬರುತ್ತವೆ. ಈ ದೃಷ್ಟಿಯಿಂದ ವಿಚಾರಿಸಿದರೆ ಹೆಚ್ಚು ವೈಷಮ್ಯ ಕಾಣದು. ಗ್ರೀಕ್ ನಾಟಕಗಳನ್ನು ಓದಿ ಅವುಗಳ ಪ್ರಭಾವಕ್ಕೆ ಸಿಕ್ಕದೆಯೆ ಅವನು ರಮ್ಯವಾದ ನಾಟಕಗಳನ್ನು ರಚಿಸಿದ್ದಾನೆ(?) ಗ್ರೀಕ್ ನಾಟಕಗಳ ಲಕ್ಷಣಕ್ಕೆ ಸಮೀಪತರವಾಗಿದೆಯೇ ಇದೆ. ವ್ಯಕ್ತಿಗತವಾದ ಹೋರಾಟಕ್ಕೆ ಹೆಚ್ಚು ಮಾನ್ಯತೆ ಸಂದಿರುವುದು ಹೊರತು ಉಳಿದಂತೆ ದುರಂತ ತತ್ತ್ವದಲ್ಲಿ ಸಾಮ್ಯವಿದೆ. ಗ್ರೀಕ್ ರುದ್ರನಾಟಕಗಳಲ್ಲಿ ಹೆಚ್ಚು ಮುಖ್ಯವಲ್ಲದ ಮಾನಸಿಕ ಹೋರಾಟದ ಅಂಶವನ್ನು ಇಲ್ಲಿ ತೆಗೆದುಕೊಂಡು, ಪರಿಪುಷ್ಟಿಗೊಳಿಸಿ ಷೇಕ್ಸ್‌ಪಿಯರ್ ತನ್ನ ಪ್ರತಿಭೆಯನ್ನು ತೋರಿದ್ದಾನೆ. ಅರಿಸ್ಟಾಟಲ್ ರುದ್ರನಾಟಕದಲ್ಲಿ ಕಥೆಯನ್ನು ಜೀವಾಳವೆಂದು ಗಣಿಸಿದ್ದಾನೆ. ಆದರೆ ದುರಂತನಾಟಕದ ಜೀವಾಳ ವಸ್ತು, ಕಥೆ, ಪಾತ್ರವಲ್ಲ; ಅದು ಮಾನಸಿಕ ಹೋರಾಟ. ರುದ್ರನಾಟಕದ ಬೆಳವಣಿಗೆಗೆ ಇದು ಷೇಕ್ಸ್‌ಪಿಯರಿನ ಕಾಣಿಕೆ, ಆತನ ಅತ್ಯುನ್ನತ ಪ್ರತಿಭೆಗೆ ಸಾಕ್ಷಿ. ದೃಷ್ಟಿಗೋಚರವಲ್ಲದೆ ಜಟಿಲವಾಗಿ ಹೆಣೆದುಕೊಂಡ ರುದ್ರನಾಯಕನ ಒಳತೋಟಿಗಳಲ್ಲಿ ಆ ಹಿರಿಮೆಯಿದೆ. ಷೇಕ್ಸ್‌ಪಿಯರನ ರುದ್ರನಾಟಕಗಳಲ್ಲಿ ನಾಯಕ ಸಾಯುತ್ತಾನೆ, ನಿಜ. ಆದರೆ ದೈಹಿಕ ಮರಣವೇ ರುದ್ರನಾಟಕದ ಪ್ರಮುಖಾಂಶವಲ್ಲ; ಮಾನಸಿಕ ಮತ್ತು ಆತ್ಮಿಕ ಮರಣವೂ ಸಂಘಟಿಸಬಹುದು. (ಸಶೇಷ)

ಸಂ. ಟಿ. ವಿ. ವೆಂಕಟಾಚಲ ಶಾಸ್ತ್ರೀ

ಎಲ್. ಬಸವರಾಜು

ಸರ್ವಜ್ಞನಿಗೊಬ್ಬನೇ ಒಬ್ಬ ಲೇಖಕ ಶಿಷ್ಯ

ಸರ್ವಜ್ಞನಂತಹ ಏಕೈಕ ಜನತಾ ಕವಿಯನ್ನು ಯಾವೊಬ್ಬ ಪ್ರಾಚೀನ ಕನ್ನಡ ಕವಿಯೂ ತನ್ನ ಕೃತಿಯಲ್ಲಿ ಸ್ಮರಿಸದಿರುವುದು–ಕನ್ನಡ ಕವಿಚರಿತ್ರೆಯಲ್ಲೇ ಒಂದು ಕಳಂಕವೆನಿಸಿ–ನೆನೆದಾಗಲೆಲ್ಲ ಮನಸ್ಸು ನಿರಾಶೆಯಿಂದ ತಲ್ಲಣಿಸುವುದು. ನಮ್ಮ ಸಾಹಿತ್ಯ ಚರಿತ್ರೆಯಲ್ಲಿ ಸಧರ್ಮಿಯರು ಸಧರ್ಮಿಯರನ್ನು ಮಾತ್ರವೇ ನೆನೆಯುವುದೊಂದು (ವಿ)ಶಿಷ್ಟಾಚಾರ ತಾನೆ! ಆದುದರಿಂದ ಅವನು ಪಂಪನೇ ಆಗಲಿ, ಹರಿಹರನೇ ಆಗಲಿ, ಕುಮಾರವ್ಯಾಸನೇ ಆಗಲಿ–ಅವರನ್ನು ಅವರವರ ಮತಧರ್ಮದವರು ಬಿಟ್ಟು–ಅನ್ಯಧರ್ಮದ ಕವಿಗಳು–ಅವರನ್ನು ಬಲ್ಲರಾದರೂ, ಅಷ್ಟೇ ಅಲ್ಲ– ಅವರ ಕೃತಿಗಳನ್ನು ಓದಿ ಅವುಗಳಿಂದ ಪ್ರಭಾವಿತರಾಗಿದ್ದಾರೆಂದು ಸಾಧಿಸಿ ತೋರಿಸಬಹುದಾದರೂ ಅವರು ಅವರ ಹೆಸರನ್ನು ನಾಲಗೆಗೆ ತಂದರೆ, ಅದನ್ನು ದರ್ಭೆಯಿಂದ ಸುಡಬೇಕಾದೀತೆಂಬಷ್ಟು ಪಾಪ ಭೀತಿಯಿಂದಲೋ ಎಂಬಂತೆ ಉಸಿರೆತ್ತದೆ ನಾಲಗೆ ತುರುಕಿ ನಿಲ್ಲುತ್ತಾರೆ.

ಈ ಮುಟ್ಟು–ತಟ್ಟಿನ ಭಾವನೆ ಪ್ರತಿಯೊಂದು ಮತದ ಕವಿಗಳಿಗೂ ಸಮಾನವಾಗಿದ್ದುದರಿಂದ–ಅದೇ ಒಂದು ಸದಾಚಾರ ಸೂತ್ರವಾಯಿತೆನ್ನುವುದಾದರೆ, ಸರ್ವಜ್ಞನನ್ನು ಸ್ಮರಿಸುವಂತಹ ಗೌರವ ಭಾವನೆ ಅವನ ಸಧರ್ಮಿಯ ಕವಿಗಳಲ್ಲಿ ಯಾರೊಬ್ಬರಿಗೂ ಬರಲಿಲ್ಲವೇಕೆ? ಎಂದಾಗ ಸರ್ವಜ್ಞನು ಯಾವ ಮತದ ಎಂಥ (ಬಗೆಯ)ವನೆಂಬ ಮರುಪ್ರಶ್ನೆ ಎದುರಾಗುತ್ತದೆ.

ಸರ್ವಜ್ಞನ ವಚನಗಳು ಸಿಕ್ಕುವ ಅತ್ಯಂತ ಪ್ರಾಚೀನವಾದ (ಕ್ರಿ.ಶ. 1636) ಪ್ರತಿಯಲ್ಲೇ ಅದರ ಮೊದಲಿಗೇ ಬರುವ ಜಾತಿಸ್ಮರಣ ಪದ್ಧತಿಯ ಆಧಾರದ ಮೇಲಿಂದ–ಅವನು ಹುಟ್ಟು ವೀರಶೈವ ಜಾತಿಯವನಲ್ಲವೆಂಬುದಷ್ಟೇ ಅಲ್ಲ–ಅವನೊಬ್ಬ ವಿಜಾತಿಯವ–ಅಂದರೆ ಬ್ರಾಹ್ಮಣನೊಬ್ಬನು ಕುಂಬಾರಳೊಬ್ಬಳಲ್ಲಿ ಕೂಡಿದಾಗ ಕುಡಿಯೊಡೆದು ಬಂದ ಸಾಧಾರಣತಮ 'ಮಾನವಜಾತಿ'ಯವನಷ್ಟೇ ಆಗಿದ್ದನೆಂಬುದು ಸ್ಪಷ್ಟವಾಗುತ್ತದೆ.

ಸರ್ವಜ್ಞನ ಜನಕನು ಬ್ರಾಹ್ಮಣನಾದರೂ ಅವನು ಜನಿಸಿದ್ದು ಜಾರೆಯಾದ ಶೂದ್ರಿತಿ ಮಾಳಿಯ ಹೊಟ್ಟೆಯಲ್ಲಿ, ಬೆಳೆದದ್ದು ಅವನ ಬಸುರಿಗೆ ಕಾರಣನಲ್ಲದ, ಆದರೂ (ಆ ಮಾಳಿಗೆ) ಹೆಸರಿಗೆ (ಮಾತ್ರ) ಗಂಡನಾಗಿದ್ದ ಮಾಳನ ಭ್ರಮೆಯ ಬಾಹುಗಳಲ್ಲಿ. ಆ ಮಾಳ ಮಾಳಿಯರಲ್ಲಿ ಲೋಕರೂಢಿಯಂತೆ–ಇವನು ನಿನ್ನ ಮಗನಲ್ಲ, ನನ್ನ ಮಗನೆಂಬ ಕು-ಶಾಲಿನ ವಾದ–ವಿವಾದ ಆಗಾಗ ಎದ್ದು ಎಡೆಯಾಡುತ್ತಿತ್ತು. ಆಗ ಅವರಿಬ್ಬರೂ ಸರ್ವಜ್ಞ (ಬಾಲಕ)ನನ್ನೇ–ನೀನು ಯಾರ ಮಗ ನಿಜವಾಗಿ ಹೇಳು–ಎಂದು ಹಿಗ್ಗಾಮುಗ್ಗ ಜಗ್ಗಿದಾಗ, ಅವನು ದಿಕ್ಕು ತಪ್ಪದೆ–ತನ್ನ ತಂದೆ ಶಿವನೆಂದೇ ನಿಷ್ಠೆಯಿಂದ ಉಚ್ಚರಿಸುತ್ತಿದ್ದ–(ಅಂಥವರಿಗೆ ಶಿವನಲ್ಲದೆ ಇನ್ನಾರು ತಾಯಿ ತಂದೆ?). ಮತ್ತೆಯೂ ಪೀಡಿಸಿದಾಗ–"ತಂದೆ ಹಾರುವನಲ್ಲ, ತಾಯಿ ಮಾಳಿಯು ಅಲ್ಲ–ಚಂದ್ರಶೇಖರನ ವರಪುತ್ರ, ನಾ ನಿಮ್ಮ ಕಂದನಲ್ಲ–ಎಂದು ನಿಜವನ್ನು ಕಳೆದುಕೊಂಡು ನೈಜವನ್ನು ಕೂಡಿ–ಒಂದೇ ಉತ್ತರ ಹೇಳಿ ಸಮಸ್ಯೆ ಬಗೆಹರಿಸಿದ. ಕಂಡುದನ್ನೇ ಹೇಳುವ, ಉಂಡುದನ್ನೇ ತೇಗುವ–ಈ ಬುದ್ಧಿ ಸರ್ವಜ್ಞನಿಗೆ ಎಳವೆಯಿಂದಲೇ ಸಹಜವಾಗಿತ್ತು ಕರ್ಣ-ಕುಂಡಲಗಳಂತೆ. ಅಂಥವರ ಗತಿ ಗಂಗಮ್ಮನ ಪಾಲೆಂಬುದು–ಎಷ್ಟು ಹಳೆಯದೋ. ಅಷ್ಟೇ ಹೊಸದು ಕೂಡ.

ಹಬ್ಬಿದ ಹಾದರದ ಸುದ್ದಿಯ ಮದ್ದಿಗೆ ಈ ತರಲೆಯ ಈ ಮಾತೆಲ್ಲಿಯಾದರೂ ಚಕಮಕಿಯಾದೀತೆಂಬ ಭೀತಿಯಿಂದಲೋ ಏನೋ ಮಾಳ–ಮಾಳಿಯರಿಬ್ಬರೂ ಸರ್ವಜ್ಞನನ್ನು ಮನೆಯಿಂದ ಆಚೆ ತಳ್ಳುತ್ತಾರೆ.

ಅಂದಿನಿಂದ ಅವನು ತನ್ನನ್ನು ಸುತ್ತಿದ್ದ ಕಂತೆಬೊಂತೆಯನ್ನೆಲ್ಲಾ ಕಳಚಿಕೊಂಡು ಲೋಕದಲ್ಲಿ 'ಏಕ' ವಾಗುತ್ತಾನೆ. ಮುಂದೆ ಜಾತಿಬುದ್ಧಿಯಿಲ್ಲದ ಯಾವನೋ ಒಬ್ಬ ಸದ್ಗುರುವಿನಿಂದ–ವೀರಶೈವನೂ ಆಗಿರ ಬಹುದು. ಅದಕ್ಕೆ ಅವನ ವಚನಗಳಲ್ಲೇ ಬೇಕಾದಷ್ಟು ಸಾಕ್ಷಿ ಸಿಗುತ್ತದೆ–ಇಷ್ಟಲಿಂಗ, ಷಟ್ಸ್ಥಲ, ಬಸವ ಈ ಬಗ್ಗೆ ಅವನಿಗೆ ಅಪಾರ ವಿಶ್ವಾಸ–ಗೌರವ ಇದ್ದೇ ಇದೆ.

ಆದರೂ ಅವನಲ್ಲಿ ಯಾವ ವೀರಶೈವಕವಿಗೂ ವಿಶ್ವಾಸ ಗೌರವವಿದ್ದುದಕ್ಕೆ ಕಿಂಚಿತ್ ಮಾತ್ರವೂ ರುಜುವಾತು ಸಿಗುವುದಿಲ್ಲ. ನಿರ್ವಿವಾದವಾಗಿ ಸರ್ವಜ್ಞನಾದ ಮೇಲೆಯೇ ಇದ್ದವನೆಂದು ನಿರ್ಣಯಿಸ ಬಹುದಾದ ಷಡಕ್ಷರಿ ಮುಂತಾದವರೂ–ಸರ್ವಜ್ಞನ ಹೆಸರನ್ನು ನಾಲಗೆಗೆ ತರಲಿಲ್ಲ.

ಇದು ಒಟ್ಟಾರೆಯಾಗಿ ದೊರೆಯುವ ಜಿಗುಪ್ಸಾಕಾರಿಯಾದ ಚಿತ್ರವಾದರೂ–ಆ ಸಧರ್ಮೀಯರಲ್ಲೆ ಸಮಾನಧರ್ಮರೆನಿಸಿದವರು ಅಲ್ಲೊಬ್ಬರು ಇಲ್ಲೊಬ್ಬರು ಸರ್ವಜ್ಞನನ್ನು ಗುರುತಿಸಿದ್ದಾರೆ ಮತ್ತು ಗೌರವಿಸಿಯೂ ಇದ್ದಾರೆ. ತೋಂಟದ ಸಿದ್ಧಲಿಂಗನ ಶಿಷ್ಯ ಪರಂಪರೆಯಲ್ಲಿ ಬಂದ ಸಂಪಾದನೆಯ ಸಿದ್ಧ ವೀರ (ಹದಿನೇಳನೇ ಶತಮಾನದ ದ್ವಿತೀಯ ಭಾಗದಲ್ಲಿದ್ದವ)ನು ಸರ್ವಜ್ಞನ ಗರಿಮೆಯನ್ನು ಗುರುತಿಸಿ –ಅವನ ಹಲವಾರು ವಚನಗಳನ್ನು ಒಂದೆಡೆ ಸಂಕಲನ ಮಾಡಿಕೊಟ್ಟು, ವೀರಶೈವರೆನಿಸಿಕೊಂಡವರಿಗೆ ಅದರಲ್ಲಿ ಹುದುಗಿದ್ದ ಶಿವಧರ್ಮಾಚಾರ ಸಾರವಷ್ಟನ್ನೇ ಅಲ್ಲದೆ ಸೊಗಸನ್ನೂ ಮನಗಾಣಿಸಿ ಕೊಟ್ಟ. ಆ ಮೇಲೆ ವೀರಶೈವ ಜನಸಾಮಾನ್ಯರಿಗೆ ಸರ್ವಜ್ಞನೆಂದರೆ ಮಮತೆಯಾಗಲು ಆರಂಭವಾಯಿತಾದರೂ[1] ಆ ಜನಸಾಮಾನ್ಯರ ಮುಂಚೂಣಿಯಲ್ಲಿದ್ದ ಷಡಕ್ಷರಿಯಂತಹ ಪ್ರತಿಷ್ಠಿತರಿಗೆ ಆ ಸರ್ವಜ್ಞನು ಜಾತಿಭ್ರಷ್ಟ ನಾಗಿಯೇ ಕಾಣಿಸಿರಬೇಕನ್ನದೆ ಗತ್ಯಂತರವಿಲ್ಲ. ಇದು ಸರ್ವಜ್ಞನಿಗೆ ಹೊಸದೇನೂ ಅಲ್ಲ: ಅವನು ಹುಟ್ಟಿದಂದು ಅವನನ್ನು ಹುಟ್ಟಿಸಿದವನು ಬಂದು ಎತ್ತಿ ಮುತ್ತಿಡಲಾಗಲಿಲ್ಲ. ಆ ಕೆಲಸ ಮಾಡಿದವ ಪರಕೀಯನಾದ ಮಾಳ. ಬುದ್ಧಿವಂತನಾಗಿ ಬೆಳೆದು ನಿಂತ ಕಾಲಕ್ಕೆ ಆ ಮಾಳನಿಗೂ ಅವನು ಬೇಡವಾಗಿ– ಹಾದರದಲ್ಲೇ ಸಡಗರಿಸುತ್ತಿದ್ದ ಮಾಳಿಗೂ ಒಗ್ಗದವನಾಗಿ, ಕುಲದ ಜೊತೆಯಲ್ಲಿ ಮನೆಯೂ ಎರವಾಗಿ– ವಿಶ್ವಪ್ರಜೆಯಾಗಿ ಬಟ್ಟಬಯಲಲ್ಲಿ ನಿಂತ. ವೀರಶೈವ ಧರ್ಮಕ್ಕೆ ಬಂದ ಮೇಲಾದರೂ–ಅದು ಅವನನ್ನು 'ನೀನಾರ ಮಗ'ನೆಂದು ಕೇಳಿತೇ ಹೊರತು–'ಇವ ನಮ್ಮವ' ಎನ್ನಲಿಲ್ಲ. ಆದುದರಿಂದಲೇ ಅವನು ಸಾಂಸ್ಥಿಕ ವಾಗಿ–ಯಾವ ಮತಕ್ಕೂ ಅಂಟಿಕೊಳ್ಳಲಿಲ್ಲ: "ದಿನಪತಿಗೆ ಮಳೆಯಿಲ್ಲ, ಧನಪತಿಗೆ ಸ್ಥಿರವಿಲ್ಲ, ಅನುಭವಿಗೆ ಬೇರೆ ಮತವಿಲ್ಲ; ಲೋಕದ ಅನುಮತವೆ ಸಲ್ಲ"–ಎಂಬ ಸರ್ವಜ್ಞನ ವಚನದಲ್ಲಿರುವುದು ಅವನ ಈ ನೋವು ಬೇವಲ್ಲದೆ–ಕಲಿತ ಪ್ರವಚನವಲ್ಲ.

ಅಂಥವನಿಗೂ ಒಬ್ಬ ಶಿಷ್ಯನಿದ್ದನೆಂಬುದು "ಉತ್ಪತ್ಸ್ಯತೇ ಮಮ ಕೋಪಿ ಸಮಾನ ಧರ್ಮಾಃ" ಎಂಬುದನ್ನು ಮಾರ್ಮೊಳಗುತ್ತಿದೆ.

ವಿರತ ಮಹಲಿಂಗ ಎಂಬವನು ಬರೆದಿರುವ 'ಗುರು ಬೋಧಾಮೃತ'ವೆಂಬ ಒಂದು ತ್ರಿಪದಿಯ ಕಾವ್ಯ ಉಪಲಬ್ಧವಿದೆ[2]. ಅದರ ಕೊನೆಗೆ ಕವಿಯು

> ಗುರು ಸರ್ವಜ್ಞನ ಕೃಪೆಯಿಂ ಪರಮಾಮೃತವೆನಿಸಿ।
> ಮೆರೆವ ಗುರು ಬೋಧೆಯನಿದಂ ವಿರತ ಮಹಲಿಂಗದೇವನು।
> ವಿರಚಿಸಿದನು ಹರನ ನುತಿಸಿ ಪೂಜಿಸುವರಿಗಂ"(5–127)

---

1 ಈ ಮುಂಚೆಯೇ ಜೈನ ಮುಂತಾದ ಅನ್ಯ ಮತೀಯ ಜನ ಸಾಮಾನ್ಯರಲ್ಲಿ ಸರ್ವಜ್ಞನು ಮೆಚ್ಚಿಗೆ ಗಳಿಸಿದ್ದ.

2 ಎಂದೋ ನೋಡಿ ಮರೆತಿದ್ದ ಈ ಕಾವ್ಯವನ್ನು ನೆನಪಿಗೆ ತಂದು ಅದನ್ನು ಮತ್ತೆ ಪರಿಶೀಲಿಸಲು ಅನುಕೂಲವಾಗುವಂತೆ ತಾವು ಸಂಪಾದಿಸಿರುವ ಅದರ ಪರಿಷ್ಕೃತ ಪಾಠವನ್ನು ನನಗೆ ತೋರಿಸಿದ ಪಂಡಿತ ಶ್ರೀ ಸಿದ್ಧಗಂಗಯ್ಯನವರಿಗೆ ಧನ್ಯವಾದಗಳು ಸಲ್ಲಬೇಕು.

ಎನ್ನುತ್ತ–ತನ್ನ ಗುರು ಸರ್ವಜ್ಞನೆಂಬುದನ್ನು ಹೇಳಿಕೊಂಡಿದ್ದಾನೆ. ಇಲ್ಲಿ 'ಸರ್ವಜ್ಞ'ನೆನ್ನುವ ಮಾತು ಶಿವನಿಗೂ ಅನ್ವಯಿಸುವುದರಿಂದ ಅದು ಒಬ್ಬ ವ್ಯಕ್ತಿಯ ಅಂಕಿತನಾಮವಾಗುವುದಿಲ್ಲವೆನಿಸಿದರೆ–ಅದಕ್ಕೆ ಕಾರಣ–ಆ ಪದಕ್ಕಿರುವ ಅಮೂರ್ತವಾದ ಅರ್ಥಸ್ವರೂಪವೇ ಹೊರತು ಬೇರೆಯಲ್ಲ.

ಹೀಗಾಗಿಯೂ ಈ 'ಸರ್ವಜ್ಞ' ಎಂಬ ಮಾತು ಒಂದಲ್ಲ, ಎರಡಲ್ಲ, ಮೂರು–ನಾಲ್ಕು ಶತಮಾನಗಳಿಂದ 'ಅಜ್ಞಾತ'ವಾಗಿಯೇ ಉಳಿದುದು ಸರ್ವಜ್ಞನ ದುರ್-ಅ-ದೃಷ್ಟವೇ ಅಲ್ಲವೆ?

ಗುರುತತ್ವವು ಸಾಕ್ಷಾತ್ ಪರಶಿವ ತತ್ವಕ್ಕಿಂತ ಭಿನ್ನವಲ್ಲವೆಂದು ಪ್ರಥಿತವಾಗಿದ್ದ ಒಂದು ಶ್ರದ್ಧೆಯಿಂದಲೇ ಮಹಲಿಂಗನು ತನ್ನ ಗುರುವಾದ ಸರ್ವಜ್ಞ ಕವಿಯನ್ನು ಶಿವನೊಡನೆ ಶ್ಲೇಷಿಸಿ ಹೇಳಿರುವ ಪದ್ಯಗಳೂ ಪ್ರತ್ಯೇಕವಾಗಿಯೇ ಮೇಲೆ ಉಲ್ಲೇಖಿಸಿರುವ ಪದ್ಯದ ಅಕ್ಕಪಕ್ಕದಲ್ಲೇ (ಆ ಕಾವ್ಯದಲ್ಲೇ) ಸಿಗುತ್ತವೆ ಕೂಡ!

ಸ್ಮರಹರನೆ ದುರಿತಹರ ಪುರಹರ ಪುರಾತನರನು
ಹೊರೆವ ಸರ್ವಜ್ಞ ಗುರುವರನೆ ನಿಮ್ಮ ಶ್ರೀ
ಚರಣಕ್ಕೆ ಶರಣು ಶರಣಾರ್ಥಿ (5–126) ‖೧‖

ಶ್ರೀ ಸದಾಶಿವ ಮಹೇಶ್ವರ
ಶಾಶ್ವತ ಸರ್ವಗುರುವರೇಣ್ಯ ಕೃಪಾಕರ
ಈಶಾ ಎನ್ನಯ ನಿಜಕರ
ವಾಸಾ ಸರ್ವೇಶ್ವರ ರಕ್ಷಿಸಿದೆನ್ನನಭವ (5–128)‖೧‖

ಮೇಲಣ ಈ ಎರಡು ಪದ್ಯಗಳಲ್ಲಿ ಮಹಲಿಂಗನು ತನ್ನ ಗುರುವಾದ ಸರ್ವಜ್ಞ ಕವಿಯನ್ನು ಕ್ರಮವಾಗಿ ಪರಶಿವತತ್ವಕ್ಕೂ, ಇಷ್ಟಲಿಂಗಕ್ಕೂ–ಸುಮಸಮವೆಂದು ಪರಿಗ್ರಹಿಸಿರುವುದು ಸ್ಪಷ್ಟವಾಗಿಯೇ ಇದೆ–ಅಷ್ಟೇ ಪ್ರಶ್ನಾತೀತ ಸ್ಪಷ್ಟವಾಗಿದೆ–ಅವನು ತನ್ನ ಆ ಗುರುವಿನ ಅಂಕಿತನಾಮವನ್ನು ಸಂಕೀರ್ತನ ಮಾಡುತ್ತಿರುವುದು (ಹಿಂದಿನ ಪುಟದ) 5–127ನೇ ಪದ್ಯದಲ್ಲಿ. ಮತ್ತು ಸರ್ವಜ್ಞನ ಸುಭಾಷಿತ ಕೃತಿಗೆ ರೂಢಿಯ ಹೆಸರಾಗಿದ್ದ 'ಪರಮಾರ್ಥ'ವೆಂಬ ಪದ ಮಹಲಿಂಗನಿಗೂ ಬಳಕೆಯಲ್ಲಿದ್ದ ರೂಢಿಯ ಬಲದಿಂದಲೋ ಎಂಬಂತೆ ಅವನ ಗುರುಬೋಧಾಮೃತದಲ್ಲಿ ಅರ್ಥವತ್ತಾದ ಆಯಕಟ್ಟಿನ ಜಾಗದಲ್ಲೆ ಹಲವಾರೆಡೆ ನುಸುಳಿ ಬಂದಿರುವುದನ್ನು ಕಂಡಾಗ–ಅವನು ಮಾಡಿರುವ ಗುರುಸ್ತವದಲ್ಲಿ ಕುರಿತವನು ಸರ್ವಜ್ಞ ಕವಿಯೇ ಹೊರತು ಕೇವಲ ಪರಶಿವನಲ್ಲವೆಂಬುದು ಖಚಿತ.

ಅಱಿವುಳ್ಳರಿಗಾನಂದವು
ನೆಱೆತೋಱುವುದಿದು ವಿಚಿತ್ರದೊಳು ಕೇಳ್ ಮತ್ತಾ
ಬಱಿದಿಗ್ಭ್ರಮೆಯೊಳಿಹ ನರ
ಗುಱಿಗಳಿಗಿದು ಸಾಧ್ಯವಲ್ಲವಿದು ಪರಮಾರ್ಥಂ (1–2)3

‖೧‖ ಇಲ್ಲಿ ಮತ್ತು ಇಂಥ ಇನ್ನೂ ಕೆಲವೆಡೆಗಳಲ್ಲಿ ಈ ಗ್ರಂಥದ ಪಾಠ ಪರಿಷ್ಕರಣ ಸಮರ್ಪಕವಾಗಿಲ್ಲ.

3 ಸರ್ವಜ್ಞನಂತೆಯೇ ಮಹಲಿಂಗನೂ ಶಕಟರೇಫ಼ ಪ್ರಾಸವನ್ನು ಪಾಲಿಸಿದವನೆಂಬುದನ್ನು ಗಮನಿಸಿ ಮತ್ತು ಮಹಲಿಂಗನು ಪರಮಾರ್ಥ ಎಂಬ ಪದವನ್ನು ಬಳಸಿರುವ ಮತ್ತಷ್ಟು ಉಲ್ಲೇಖಗಳನ್ನು ನೋಡಿ.

1. 'ಪರಮಾರ್ಥ'ದ ತಿರುಳಿದ ವಿಸ್ತರಿಸಿದೆ
ನಿಜ ವೀರಶೈವ ಷಟ್ಸ್ಥಲಯುಕ್ತಗೆ (2–5)
2. "ನುಡಿಯಲ್ಲಿ ಪರಮಾರ್ಥ, ಒಡಲುಗೊಂಡಿದೆಯುವನ ನಡೆ" (2–74)
3. "ನುಡಿಯೆಲ್ಲಂ ಪರಮಾರ್ಥ" (ಮೆಚ್ಚುಗೆಯ ಅರ್ಥದಲ್ಲಿ) (2–88)

ಈ ಮಹಲಿಂಗ ಯಾರು? ಯಾವ ಕಾಲದವನು? ಇವನು 'ವಿರತ'ನೆಂಬಷ್ಟರಿಂದಲೇ (ಜನಜನಿತವಾಗಿರುವ) ಪ್ರೌಢದೇವರಾಯನ ಕಾಲ (ಕ್ರಿ.ಶ. 1419–1446)ದವನೆಂಬುದು ಕೇವಲ ಕಲ್ಪನಾವಿಲಾಸವಷ್ಟೆ! ಆದುದರಿಂದ ಈ ವಿರತ ಮಹಲಿಂಗನನ್ನು ಜಕ್ಕಣ್ಣನ (ಗುರುವಿನ) ಗುರುವಾದ ಮಹಲಿಂಗನೆಂದಾಗಲಿ 15ನೇ ಶತಮಾನದವನೆಂದಾಗಲಿ ಯಾರೂ ತಪ್ಪು ತಿಳಿಯಬಾರದು.

ಸರ್ವಜ್ಞನ ಶಿಷ್ಯನಾದ ವಿರತ ಮಹಲಿಂಗನು ಬಿಟ್ಟಮಂಡೆಯ ಪ್ರಭುದೇವನ ಕಾಲಕ್ಕಿಂತ ಈಚಿನ ವಿರಕ್ತ. ಈ ಮಹಲಿಂಗನು ತನ್ನ ಗುರು ಬೋಧಾಮೃತದಲ್ಲಿ ಆ ಬಿಟ್ಟಮಂಡೆಯ ಪ್ರಭುದೇವನನ್ನು4 ಆಗಿ ಹೋದ ಒಬ್ಬ ಪುರಾತನ ಶರಣನೆಂಬಂತೆ ಪ್ರಸ್ತಾಪಿಸಿರುವುದರಿಂದ ಮತ್ತು ಆ ಪ್ರಭುದೇವನು ಸರಿ ಸುಮಾರು ಎರಡನೇ ಗುಬ್ಬಿ ಮಲ್ಲಣ್ಣನ ಕಾಲ (ಕ್ರಿ. ಶ. 1530)ದವನಾದುದರಿಂದ5 ಅವನು (ಮಹಲಿಂಗ) ಅಲ್ಲಿಂದ ಒಂದು ತಲೆಮಾರಿನ ಕಾಲದಷ್ಟಾದರೂ ಈಚಿನವ (ಸು. 1560)ನಾಗಿರಬೇಕು. ಗುರುಬೋಧಾಮೃತದ ಒಂದು ಕಾಗದದ ಪ್ರತಿ ಕ್ರಿ. ಶ. 1634ರಲ್ಲಿ ಲಿಖಿತವಾಗಿರುವುದರಿಂದ (ನೋಡಿ ಕವಿಚರಿತೆ ಸಂ 2, ಪುಟ 147) ಮಹಲಿಂಗನಾಗಲಿ ಅವನ ಗುರುವಾದ ಸರ್ವಜ್ಞನಾಗಲಿ–ಇಬ್ಬರೂ ಕ್ರಿ.ಶ. 1560ರಿಂದ 1600ರೊಳಗೆ ಬದುಕಿ ಬಾಳಿದವರಿರಬೇಕೆಂದೆನ್ನಲು ಯಾವ ಆತಂಕವೂ ಇಲ್ಲ.

---

4 ಸ್ವಯವಾಯ್ತು ವಿರತಿ ತಾ। ಬಯಲಪ್ರಭುವಿಂಗೆ, ಕೇಳ್
ಸ್ವಯಭಕ್ತಿ–ವಿರತಿದ್ವಯ ಬಿಟ್ಟ ಮಂಡೆಯ–
ದ್ವಯ ಪ್ರಭುವಿಗಾಯ್ತು ವಿರತಿಯು(3–153)

5 ಗುಬ್ಬಿ ಮಲ್ಲಣ್ಣನು ವೀರಶೈವಾಮೃತ ಮಹಾಪುರಾಣ (8–8–27)ದಲ್ಲಿ ಬಿಟ್ಟ ಮಂಡೆಯ ಪ್ರಭುದೇವನನ್ನು ಲಕ್ಕಣ ದಂಡೇಶನಾದ ಮೇಲೆ ತನ್ನ ಕಾಲದವರೆಗಿನ ಅವಧಿಯಲ್ಲಿದ್ದವನೆಂಬ ಅರ್ಥದಲ್ಲಿ 'ನೂತನ ಶರಣ'ನೆಂದು ಕರೆದಿದ್ದಾನೆ.

ಮಹಲಿಂಗನು ಸರ್ವಜ್ಞನಂತೆ ಶರಣರ ವಚನಗಳನ್ನು ತನ್ನ ತ್ರಿಪದಿಯಲ್ಲಿ ಅಳವಡಿಸಿಕೊಂಡಿರುವುದರ ಜೊತೆಗೆ ಆ ಸರ್ವಜ್ಞನ ತ್ರಿಪದಿಗಳನ್ನೇ ಧಾಟಿಯಲ್ಲಿ ಹೋಲುವ ಹಲವಾರು ನುಡಿಗಟ್ಟುಗಳನ್ನು ತನ್ನ ಕಾವ್ಯದಲ್ಲಿ ಬಳಸಿದ್ದಾನೆ:

ಶರಣರ ವಚನಗಳ ಅಳವಡಿಕೆ:

1 ಮಡದಿಗಿರಿಸಲು ಮಡದಿ ಬಿಡದೆ ಮತ್ತೊಬ್ಬನಿಗೆ ಕಡುಮೋಹದಿಂದಡಕುವಳು (1-84)

2 ಮಾಡಿ ಮನವಿಲ್ಲದೆ ನೀಡಿ ನಿಜವಿಲ್ಲದೆ 1ಕೂಡಿಯೂ ಕೂಡಲರಿಯದಿಹ ಮೂಢನಂ।
ನೋಡಿ ಭವಿಯೆಂದು ಕಳೆವರು (2–171) ಇತ್ಯಾದಿ

ಸರ್ವಜ್ಞನ ತ್ರಿಪದಿಯ ಧಾಟಿ:

3 ಆವಾವ ಜನ್ಮದೊಳು ಹೇವವಿಲ್ಲದೆ ಬಂದ ಕಾಯವಿದು (1–22)

4 ಹರಿಹತ್ತು ಭವದಲ್ಲಿ ಮರಳಿಬ್ರಹ್ಮಾದಿಗಳು ಉರುಳುವುದಕೆ (1–52)

5 ಬಾಲ್ಯ ಯೌವನ ವೃದ್ಧ ಕಾಲಕರ್ಮಗಳಾಗಿ (1–76)

6 ಕಾಮದಟ್ಟುಳಿ (1–92)

7 ಬಿಂದು ಮೂತ್ರದ ಬಟ್ಟೆ

8 ಹಾಡಕಲಿತಾ ಹೆಣ್ಣು ಬೇಡಿತಿ ಸೂಳೆಯರು (1–132)

9 ಹಲಬರೆಂಜಲತಿಂಬ ಸಲೆದಾಸಿವೇಶಿಯರ (1–165)

10 ಆಡೆಂದರಾಡುವುದು 1–188

11 ಎಲ್ಲಿ ಭಾವಿಸಿದೊಡಲ್ಲಿಯೆ ಮೂರ್ತಿಗೊಂಡಿಹನು
ಬಳ್ಳದೊಳು ಮಳಲು ಮೊಲೆಯೊಳೋ ಎಂದುದನು
ಬಲ್ಲವರು ಮರೆದು ಕೆಡಲೇಕೆ 2–157

12 ಜ್ಞಾನ ಗುರುವಿನ ದೀಕ್ಷೆ ಭಾನು ಮೂಡಿದ ಹಾಗೆ. 2–127 ಇತ್ಯಾದಿ.

ಸರ್ವಜ್ಞನಿಗೊಬ್ಬ ಕವಿಶಿಷ್ಯನಿದ್ದನೆಂಬುದು ಪತ್ತೆಯಾಗಿದ್ದು ತನಗೆ ತಾನೇ ಮಹತ್ವ ಪೂರ್ಣವಾಗಿರುವುದರ ಜೊತೆಗೆ, ಆ ಕವಿಶಿಷ್ಯನ ಕೃತಿ ಸರ್ವಜ್ಞನ ಜೀವಿತಾವಧಿಯನ್ನು ಗುರುತಿಸಲು ಉತ್ತರಮುಖಿಯೂ ಆದುದು ಅತ್ಯಂತ ನೆಮ್ಮದಿಯ ಮಾತು. (ಆದರೂ) ಈ ಮಹಾಲಿಂಗನು ಸರ್ವಜ್ಞನಿಗೆ ಸರಿತೂಕದ ಶಿಷ್ಯನಲ್ಲವೆಂಬುದನ್ನು ನೆನಪಿಡುವುದೊಳ್ಳೆಯದು.

ದೊಡ್ಡರಂಗೇಗೌಡ

ವ್ಯತ್ಯಾಸ

ಅಪರಿಚಿತ ಕಣ್ಣುಗಳ ನಡುವೆ ನಡೆದಾಡಿದೆ
ಭಯಪಡದೆ
ಮಾನಮರ್ಯಾದೆ ಗೋಡೆ ತೋರಗೊಡದೆ–
ಯಾರ ಕ್ರೂರ ನೋಟವೂ ತಗಾದೆ ಎಬ್ಬಿಸಲಿಲ್ಲ
ಮೈ ಮನಸ್ಸುಗಳ ಬೆಂಕಿಗೆ ಅದ್ದಲಿಲ್ಲ
ಯಾವ ಮಾತೂ ನನ್ನ ಗುದ್ದಲಿಲ್ಲ;
ನನ್ನ ಪಾಡಿಗೆ ನಾನು
 ಅಪರಿಚಿತ ಮುಖಗಳ ಮುಂದೆ ಅಡ್ಡಾಡಿದೆ.

ಬೆಳಗು ಮಾತಾಡಲಿಲ್ಲ ನನ್ನೊಡನೆ
ರಾತ್ರಿ ತನ್ನ ಗೋಳು ಹೇಳಿಕೊಳ್ಳಲಿಲ್ಲ
ನನ್ನ ಹೃದಯದೊಳಗಿನ ಮಿಡಿತದೊಡನೆ–

ಗುಡ್ಡಗಳ ಮರಗಿಡಗಳ
ಹೊಳೆ ವಡ್ಡು ದಿನ್ನೆ ತಗ್ಗು
ಪ್ರಾಣಿ ಹಕ್ಕಿಗಳೊಡನೆ ಒಂದೊಂದೂ ಬಿಡದೆ
ಕುಶಲ ವಿಚಾರಿಸಿಕೊಳ್ಳಲು ಪ್ರಯತ್ನಪಟ್ಟೆ;
ಇಲ್ಲ...ಸಂಭಾಷಣೆ ಸಾಧ್ಯವಿಲ್ಲ

* * *

ನಾನು ಚಿಕ್ಕವನಿದ್ದಾಗ–
ಒಂದು ಕೋಲು ಹಿಡಿದು ಬೇಲಿಗಳ ಪಕ್ಕ ನಿಂತು
ರೊಪ್ಪದ ಸುತ್ತ ಮೇಸ್ಟರ ಕೆಲಸ ಮಾಡಿದ್ದೆ
ಕೊಂಬೆ ರೆಂಬೆಗಳ ಬಳ್ಳಿ ಬಳುಕಗಳ
ಹುಡುಗರೆಂದುಕೊಂಡು ಹೊಡೆದಿದ್ದೆ ಸಿಕ್ಕಾಪಟ್ಟೆ
ಬಡಿದಿದ್ದೆ ನನ್ನಷ್ಟಕ್ಕೆ ನಾನು ಮಾತಾಡುತ್ತ
ಪಾಠ ಮಾಡುತ್ತ ಆಟವಾಡಿದ್ದೆ;
ಈಗ ಹಾಗೆಲ್ಲ
ಆಗುವುದಿಲ್ಲ.

* * *

ಪರಿಚಿತ ಹೊಲ ಗದ್ದೆ ತೋಪು ಹಳ್ಳಗಳಲ್ಲಿ ನಿಂತಲ್ಲೇ
ನಿಲ್ಲದೆ ನಡೆದೆ ಮತ್ತೆ ಮತ್ತೆ–ಅವೆಲ್ಲಾ
ಕೋಪಿಸಿಕೊಂಡಿವೆಯೇಕೆ ನನ್ನ ಮೇಲೆ?

ಕಮ್ಮಟದ ಕಿಡಿಗಳು

‘ ಸತಿಯ ಪುತ್ರ ’ ಎಂದರೇನು ?

ಪ್ರಬುದ್ಧ ಕರ್ಣಾಟಕದಲ್ಲಿ* ‘ಸತಿಯ ಪುತ್ರ’ ಎಂದರೇನು ಎಂಬ ಲೇಖನವನ್ನು ನಾನು ಬರೆದ ಮೇಲೆ ಅದರ ಮುಂದಿನ ಸಂಚಿಕೆಯಲ್ಲಿ ಶ್ರೀ ಕೆ. ವೆಂಕಟರಾಯಾಚಾರ್ಯರು ತಮ್ಮ ಹಿಂದಿನ ವಾದವನ್ನೇ ಇನ್ನಷ್ಟು ಒತ್ತಿ ಹೇಳಿದ್ದಾರೆ. ‘ಸತಿಯಪುತ್ರ’ ಎಂದರೆ ಅವರು ಹೇಳುವ ತುಳುನಾಡು ಎಂಬ ಅರ್ಥ ಸರಿಯಲ್ಲ ಎಂಬುದೇ ಪ್ರಸ್ತುತ ಲೇಖನದ ಉದ್ದೇಶ. ನನ್ನ ಹಾಗೂ ಅವರ ಅಭಿಪ್ರಾಯಭೇದಕ್ಕೆ ಮೂಲಕಾರಣ ನನಗೆ ಕನಕದಾಸರ ಒಂದು ಕೀರ್ತನೆಯಲ್ಲಿ ‘ಸತಿಯ ಮಗನಾಗಿ’ ಎಂಬುದಕ್ಕೆ ‘ಪರಶುರಾಮ’ ಎಂಬ ಅರ್ಥ ವಿರುವುದು ದೊರಕಿರುವುದು. ಹಾಗೆ ‘ಸತಿಯಪುತ್ರ’ ಎಂದರೆ ಪರಶುರಾಮ ಕ್ಷೇತ್ರ ಎಂಬ ವಿಶಾಲಾರ್ಥ ವಿರಬಹುದು ಎಂದು ನನ್ನ ಲೇಖನದಲ್ಲಿ ಪ್ರತಿಪಾದಿಸಿದೆನು.

‘ಸತಿಯ ಪುತ್ರ’ ಎಂಬ ಶಬ್ದದಲ್ಲಿ ‘ಪುತ್ರ’ಎಂದರೆ ಮಗ ಎಂಬ ತಪ್ಪಾದ ಅರ್ಥವನ್ನು ಕನಕದಾಸರೇ ಮಾಡಿಕೊಂಡರು ಎಂದ ಮೇಲೆ ಇತರರು ಮಾಡಿಕೊಳ್ಳುವುದು ಆಶ್ಚರ್ಯವೇನಲ್ಲ. ಹೀಗೆ ‘ಕೇರಲಪುತ್ರ’ ಎಂಬ ಮಾತಿಗೆ ‘ಚೇರಮಾನ್’ ಎಂದು ಸಂವಾದಿಯಾಗಿ ಬಳಸಿರುವುದುಂಟು. ‘ಸತಿಯಪುತ್ರ’ ಎಂಬುದನ್ನು ತಮಿಳು ಸಾಹಿತ್ಯದಲ್ಲಿ ‘ಅತಿಯಮಾನ್’ ಎಂದು ಬಳಸಿರುವುದುಂಟು. ಶ್ರೀ ಕೆ.ವೆಂಕಟರಾಯಾಚಾರ್ಯ ಅವರು ಹೇಳುವ ‘ಸತಿಯಪುತ್ರ’ ‘ಸತೀನರಾಃ’ ಎಂಬೆರಡು ಮಾತುಗಳು ಹೇಗೆ ಸಂವಾದಿಯೋ ತಿಳಿಯುವುದಿಲ್ಲ. ‘ಪುತ್ರ’ಕ್ಕೂ ‘ನರ’ಕ್ಕೂ ವ್ಯತ್ಯಾಸವಿಲ್ಲವೇ?

ಪ್ರದೇಶವಾಚಕ ಶಬ್ದಗಳಲ್ಲಿ ‘ಪುತ್ರ’ ಎಂಬುದು ಉತ್ತರಪದವಾಗಿರುವ ಮೂರು ಶಬ್ದಗಳು ಸಿಗುತ್ತವೆ.

1. ಸಹ್ಯಪುತ್ರ
2. ಕೇರಲಪುತ್ರ
3. ಪಾಟಲೀಪುತ್ರ

ಸಹ್ಯಪುತ್ರ ಎಂಬ ಸಂಸ್ಕೃತರೂಪದ ಸಂಸ್ಕೃತಭವರೂಪವೇ ‘ಸತಿಯಪುತ್ರ’. ಇಲ್ಲೆಲ್ಲ ‘ಪುತ್ರ’ ಎಂದರೆ ಮೂಲತಃ ‘ಮಗ’ ಎಂಬ ಅರ್ಥವಿದ್ದಂತೆ ಕಾಣುವುದಿಲ್ಲ.

ಕ್ರಿ.ಪೂ.ದ ಸಹಸ್ರಮಾನದಲ್ಲಿಯೇ ಸಾವಿರಾರು ದ್ರಾವಿಡ ಶಬ್ದಗಳು ಸಂಸ್ಕೃತಕ್ಕೆ ಪ್ರಯಾಣ ಮಾಡಿದುವು. ಇದು ಆರ್ಯರಿಗೂ, ದ್ರಾವಿಡರಿಗೂ ನಡೆದ ರಕ್ತಸಂಬಂಧದಿಂದಲೂ, ಸಂಪರ್ಕದಿಂದಲೂ ಕೊಳ್ಕೊಡೆಯಿಂದಲೂ ಸಂಭವಿಸಿತು. ಹೀಗೆ ಸಾವಿರಾರು ದ್ರಾವಿಡ ಶಬ್ದಗಳು ಇಂದು ಸಂಸ್ಕೃತದಲ್ಲಿ ಮೆರೆಯುತ್ತಿರುವುದು ಅಂದು ನಡೆದ ಮಹಾಪ್ರಸ್ಥಾನದಿಂದ. ಹೀಗೆ **ಈ** ‘ಪುತ್ರ’ ಎಂಬ ಉತ್ತರಪದವೂ ಮೂಲತಃ ದ್ರಾವಿಡ ಶಬ್ದದ ಸಂಸ್ಕೃತೀಕರಣರೂಪವಾಗಿದೆ.

ತಮಿಳು: ಪುದರ್ = ಪೊದೆ
ಕನ್ನಡ: ಪೊದಱ್ = ಪೊದೆ
ತುಳು: ಪುದೆಲು = ಪೊದೆ

---

* ಸಂಪುಟ ೫೩, ಸಂಚಿಕೆ ೪.

ಈಗ 'ಪಾಟಲೀಪುತ್ರ' ಎಂದರೇನು ಎಂಬುದನ್ನು ಮೊದಲು ನೋಡೋಣ. ಪಾಟಲೀ, ಪಾಟಲಾ ಎಂದರೆ ಸಂಸ್ಕೃತದಲ್ಲಿ ಒಂದು ಜಾತಿಯ ಮರದ ಹೆಸರು. ಇದನ್ನು 'Bignonia Suaveolens' ಎನ್ನುತ್ತಾರೆ. ಇದರ ಹೂವು ಪಾಟಟಲವರ್ಣವಾಗಿದ್ದು ತುತ್ತೂರಿಯ ಆಕಾರದಲ್ಲಿರುತ್ತದೆ. 'the tree bearing the trumpet-flower' ಎಂಬ ಅರ್ಥವನ್ನು ವಿವರಿಸುತ್ತಾರೆ. ಇದನ್ನು ತಮಿಳು, ಮಲಯಾಳಂಗಳಲ್ಲಿ 'ಪಾದಿರಿ' ಎಂದೂ ಕನ್ನಡ, ತುಳುಗಳಲ್ಲಿ 'ಪಾದರಿ' ಎಂದೂ, ತೆಲುಗಿನಲ್ಲಿ 'ಪಾಡಿರಿ' ಎಂದೂ ಕರೆಯುತ್ತಾರೆ. ಆದ್ದರಿಂದ ಪಾದರಿಮರಗಳ ಪೊದೆಗಳಿಂದ ತುಂಬಿದ ಪ್ರದೇಶ ಪಾಟಲೀಪುತ್ರವೆನಿಸಿತು† ಹಾಗೆಯೇ 'ಕೇರಲಪುತ್ರ' ಎಂಬಲ್ಲಿ ಮೂಲತಃ ಎರಡೂ ಪದಗಳು ದ್ರಾವಿಡ. 'ಕೇರ್' ಎಂದರೆ ಗೋಡೆ. ಗೋಡೆಯ ಹಾಗೆ ಎತ್ತರದ ಪೊದೆಗಳಿಂದ ಕೂಡಿದ ಪ್ರದೇಶ ಕೇರಲಪುತ್ರ. ಕೇರ್→ಕೇರ→ಕೇರ + ಲ = ಕೇರಲ

ಮೃದು + ಲ = ಮೃದುಲ
ಶೀತ + ಲ = ಶೀತಲ

ಹೀಗೆ ಸಂಸ್ಕೃತಕ್ಕೆ ದ್ರಾವಿಡಶಬ್ದಗಳು ಹೋಗುವಾಗ ವ್ಯಂಜನಾಂತಗಳು ಸ್ವರಾಂತವಾಗುತ್ತವೆ ಎಂಬುದು ಸರ್ವವಿದಿತ.

ಕನ್ನಡ		ಸಂಸ್ಕೃತ
ನೀರ್	→	ನೀರ
ಕೂಂದಲ್	→	ಕುಂತಲ
ಮಲೈ	→	ಮಲಯ
ನೇಲ್	→	ಲೋಲ
ನೇಗಿಲ್	→	ಲಾಂಗಲ
ಬಲ್	→	ಬಲ
ಕಾನ್	→	ಕಾನನ, ಇತ್ಯಾದಿ

ಹಾಗೆಯೇ 'ಸಹ್ಯಪುತ್ರ' ಎಂದರೆ ಸಹ್ಯದ ಪೊದೆ ಇರುವ ಪ್ರದೇಶ ಎಂದರ್ಥ. 'ಸಹ್ಯ' ಎಂದರೆ ಸಹ್ಯಾದ್ರಿ; ಭಾರತದ ಸಪ್ತಪರ್ವತಶ್ರೇಣಿಗಳಲ್ಲಿ ಒಂದು. ಅದೇ ಪಶ್ಚಿಮ ಘಟ್ಟ. ಈ ಸಹ್ಯಾದ್ರಿಯ ಮೇಲೆ ನಿಂತು ಕಡಲಿಗೆ ಕೊಡಲಿ ಎಸೆದು ಹೊಸದಾಗಿ ಭೂಮಿಯನ್ನು ಸೃಷ್ಟಿಸಿರುವುದರಿಂದ ಕನಕ ದಾಸರ ಕಾಲಕ್ಕೆ ಪರಶುರಾಮನಿಗೆ ಆ ಹೆಸರಿದ್ದಿರಬಹುದು. 'ಸಹ್ಯಪುತ್ರ' ಎಂಬುದಕ್ಕೆ ಕನಕದಾಸರು 'ಸತಿಯ ಮಗ' ಎಂಬ ಪ್ರಸಿದ್ಧ ಅರ್ಥವನ್ನೇ ಮಾಡಿ ಬರೆದಿರಬೇಕು. ಹೀಗೆ 'ಸತಿಯ ಪುತ್ರ' ಎಂಬ ಮಾತು ಸಹ್ಯಾದ್ರಿಯ ಪ್ರದೇಶ ಎಂಬ ಅರ್ಥವನ್ನು ಮೂಲತಃ ಇಟ್ಟುಕೊಂಡು 'ಪರಶುರಾಮ ಕ್ಷೇತ್ರ' ಎಂಬ ವಿಶಾಲಾರ್ಥದಲ್ಲಿ ಬಳಕೆಯಾಗಿದೆ ಎಂದು ನಮ್ಮ ಅಭಿಪ್ರಾಯ.

ಪಾಟಲೀಪುತ್ರ, ಕೇರಲಪುತ್ರ, ಸಹ್ಯಪುತ್ರ–ಎಂಬ ಮೂರೂ ಮಾತುಗಳಲ್ಲಿರುವ 'ಪುತ್ರ' ಎಂಬುದು ಮೂಲತಃ ದ್ರಾವಿಡದ 'ಪುದರ್' ಎಂಬುದರ ಸಂಸ್ಕೃತೀಕರಣರೂಪ. ವಿದ್ವಾಂಸರು ಭ್ರಮಿಸಿದಂತೆ ಇಲ್ಲಿ 'ಪುತ್ರ' ಎಂಬುದಕ್ಕೆ 'ಮಗ' ಎಂಬ ಅರ್ಥವಲ್ಲ. ಆದ್ದರಿಂದ 'ಸತಿಯಪುತ್ರ' ಎಂದರೆ 'ತುಳುನಾಡು' ಎಂಬ ಸೀಮಿತ ಅರ್ಥವಾಗುವುದಿಲ್ಲ; ಸಹ್ಯಾದ್ರಿಗೂ, ಪರಶುರಾಮನಿಗೂ ಸಂಬಂಧವಿರುವುದರಿಂದ ಅದು 'ಪರಶುರಾಮಕ್ಷೇತ್ರ'. ಅಶೋಕನ ಶಾಸನದಲ್ಲಿ ಕನ್ನಡನಾಡನ್ನು ಹೇಳಿರದೆ ಇರುವುದರಿಂದ ಕನ್ನಡನಾಡಿನ

---

† T. Burrow : Collected Papers on Dravidian Linguistics : pp. 212–213; Annamalai University; First Edition: 1968.

ಪರಶುರಾಮಕ್ಷೇತ್ರವನ್ನು ದೃಷ್ಟಿಯಲ್ಲಿಟ್ಟುಕೊಂಡು ಹಾಗೆ ಕರೆದಿರಬೇಕು. ತುಳುನಾಡನ್ನು ಉಳಿದ ಇತರ ಭಾಗಗಳನ್ನು ಯಾಕೆ ನಿರ್ದೇಶಿಸಿರಬಾರದು ಎಂಬುದಕ್ಕೆ ಶ್ರೀ ಕೆ. ವೆಂ. ಆಚಾರ್ಯರ ವಾದದಲ್ಲಿ ಉತ್ತರ ಸಿಕ್ಕುವುದಿಲ್ಲ. ಆದ್ದರಿಂದ 'ಸತಿಯ ಪುತ್ರ' ಎಂಬುದಕ್ಕೆ 'ತುಳುನಾಡು' ಎಂಬ ಅರ್ಥ ಸರಿಯಲ್ಲ. 'ಪರಶುರಾಮಕ್ಷೇತ್ರ' 'ಸಹ್ಯಾದ್ರಿ ಪ್ರದೇಶ' ಎಂಬುದಕ್ಕೆ ಹೆಚ್ಚು ಆಧಾರಗಳಿವೆ.

—ಗುಂಡ್ಮಿ ಚಂದ್ರಶೇಖರ ಐತಾಳ

ಸತಿಯ ಪುತ್ರ-ಆಶಯಾಂತರಗಳು

ಪ್ರಬುದ್ಧ ಕರ್ಣಾಟಕದಲ್ಲಿ (54–1) ಶ್ರೀ ವೆಂಕಟರಾಯಾಚಾರ್ಯರು ಬರೆದ ಮಾತುಗಳಲ್ಲಿ, "ಇತ್ತೀಚೆಗೆ ಕಲ್ಯಾಣಪುರದ ಡಾ. ಪಿ. ಗುರುರಾಜಭಟ್ಟರೂ, ಡಾ. ಕೆ. ವಿ. ರಮೇಶರೂ ಈ ಶಬ್ದದ ಬಗೆಗೆ ಬೇರೆ ಆಶಯಗಳನ್ನು ಬರೆದಿದ್ದಾರೆಂದೂ ತಿಳಿಯುತ್ತದೆ"ಯೆಂದಿದ್ದಾರೆ. (ಪುಟ.88). ಅಂತಹ ಬೇರೆ ಲೇಖನಗಳ ಸಾರ ಹಾಗೂ ಅವಕ್ಕೆ ಆಕ್ಷೇಪಗಳ ಬಗೆ ವಾಚಕ ಮಹೋದಯರಿಗೆ ತಿಳಿಯಲೆಂದು ಇಲ್ಲಿ ಪ್ರವರ್ತಿಸ ಲಾಗಿದೆ.

1971ರ ನವಂಬರದಲ್ಲಿ ಕಾರ್ಕಳದಲ್ಲಿ ಜರಗಿದ ದ.ಕ. ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ, ಮಂಗಳೂರಿನ ಶ್ರೀ ತೆಕ್ಕುಂಜ ಗೋಪಾಲಕೃಷ್ಣ ಭಟ್ಟರು ಓದಿದ 'ಸಂಶೋಧನೆ ಮತ್ತು ವಿಮರ್ಶೆ'ಯೆಂಬ ಪ್ರಬಂಧವು ಇತ್ತೀಚೆಗೆ ಅಚ್ಚಾದ 'ಬಾಸಿಗ'ದಲ್ಲಿ ಸಂಕಲಿತವಾಗಿ ಅಚ್ಚಾಗಿದೆ (ಪುಟ 84–100). ಪ್ರಸ್ತುತ, 'ಸತಿಯಪುತ್ರ'ವೆಂಬ ಬಗೆಗೆ ಅಲ್ಲಿಂದ ಇಲ್ಲಿ ಎತ್ತಿಕೊಂಡಿದೆ. ಕನ್ನಡದಲ್ಲಿ ಇದುವರೆಗೆ ಬಂದಿರುವ 'ಸತಿಯ ಪುತ್ರ–ಶಬ್ದಾರ್ಥ ವಿಚಾರಗಳು' ಇಲ್ಲಿ ವಿವೇಚಿಸಲಾಗಿವೆ:

ತುಳುನಾಡಿನ ಕುರಿತಾಗಿ ರಾಷ್ಟ್ರಕವಿ ಗೋವಿಂದ ಪೈಗಳೂ ಕೆಲವು ಸಂಶೋಧನಾತ್ಮಕ ಲೇಖಗಳನ್ನು ಬರೆದರು. ಅವರು ತಮ್ಮ ಲೇಖನಗಳಲ್ಲಿ ತಮಗೆ ದೊರೆತ ಕೆಲವು ಆಧಾರಗಳನ್ನು ಸಾಧುವೆಂದು ಸಾಧಿ ಸುವಲ್ಲಿ, ಕೆಲವು ತರ್ಕಗಳನ್ನು ಮುಂದಿಟ್ಟುದು ಕಂಡು ಬರುತ್ತದೆ. ಈ ತರ್ಕಮಾರ್ಗವೆಂಬುದು ಸಾಮಾನ್ಯವಾಗಿ ಸಂಶೋಧಕರೆನ್ನಿಸಿದವರಿಗೆಲ್ಲ ಮೀಸಲಾಗಿರುವ ಒಂದು ವಿಷಯವೆಂದೇ ಹೇಳಬಹುದು. ದೃಷ್ಟಾಂತಕ್ಕಾಗಿ ಈ ಒಂದು ವಿಷಯವನ್ನು ಪರಿಶೀಲಿಸಬಹುದು.

ಗೋವಿಂದ ಪೈಗಳು "ಅಶೋಕನ ಶಾಸನಗಳ ಸತಿಯಪುತ್ರ ಅಥವಾ ಸತಿಯ ಪುತ್ರರ ಸಾತಿಯ ಅಥವಾ ಸತಿಯ ಎಂಬ ದೇಶವು ಶಾಂತಿಕ ಎಂಬ ದೇಶವೇ ಸರಿ, ಆ ಶಾಂತಿಕ ದೇಶವೆಂದರೆ ಆವಂದಿನ ತುಳುನಾಡೇ ಸರಿ" ಎಂದು ತಮ್ಮ 'ತುಳುನಾಡು–ಪೂರ್ವಸ್ಮೃತಿ(ಕಾಸರಗೋಡಿನಲ್ಲಿ 1947ರಲ್ಲಿ ನಡೆದ 31ನೆ ಕನ್ನಡ ಸಾಹಿತ್ಯ ಸಮ್ಮೇಳನದ ಕಾಲದಲ್ಲಿ ಪ್ರಕಟವಾದ ತೆಂಕನಾಡು ಎಂಬ ಸ್ಮರಣ ಗ್ರಂಥ) ಎಂಬು ದರಲ್ಲಿ ಹೇಳಿದ್ದಾರೆ. ಇದೇ ಲೇಖನದಲ್ಲಿ ಅವರು ಶಾಂತಿಕ ಎಂಬುದೇ ಸಾತಿಯ ಅಥವಾ ಸತಿಯ ಎಂಬ ರೂಪವನ್ನು ಪಡೆಯುವುದಕ್ಕೆ ಭಾಷಾಶಾಸ್ತ್ರ ಮತ್ತು ವ್ಯಾಕರಣ ಪ್ರಕ್ರಿಯೆಯ ಕ್ರಮದಿಂದ ಹೇಳಿದಂತಿಲ್ಲ; ಅದರ ಬದಲು ವಿವಿಧ ಶಬ್ದಗಳ ಒಂದೊಂದು ಅಕ್ಷರವನ್ನು ಮಾತ್ರ ರೂಪಾಂತರಿಸಿದ ಉದಾಹರಣೆ ಗಳನ್ನು ಕೊಟ್ಟುದು ಕಂಡು ಬರುತ್ತದೆ. ಒಂದು ಬಗೆಯಲ್ಲಿ ಇದು ದ್ರಾವಿಡ ಪ್ರಾಣಾಯಾಮದಂತಿದೆ.

ಡಾ. ಪಿ. ಗುರುರಾಜಭಟ್ಟರು 'ತುಳುನಾಡು' ಎಂಬೊಂದು ಲೇಖನದಲ್ಲಿ (8–7–1971ರ ನವಯುಗ ಸಂಚಿಕೆಯಲ್ಲಿ) "ಅಶೋಕನ ಶಿಲಾಲೇಖದಲ್ಲಿ ಉಲ್ಲೇಖಗೊಂಡಿರುವ ಸತಿಯಪುತ್ರವು ತುಳು ನಾಡೆಂಬುದಾಗಿ ತಿಳಿಯಲ್ಪಟ್ಟಿದೆ. ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದ್ದರೂ ಇದಕ್ಕೆ ಸಂಬಂಧಿಸಿದ ಪರಿಶೋಧನೆ ಯೋಗ್ಯರೀತಿಯಲ್ಲಿ ನಡೆಯಬೇಕೆಂಬುದು ನಿರ್ವಿವಾದವಾದರೂ ಈ ಸತಿಯಪುತ್ರವು ತುಳುನಾಡೆಂದು ಸ್ಥೂಲವಾಗಿ ಅಂಗೀಕರಿಸಬಹುದು. ಇಂದಿಗೂ ಮೊಗೇರ ಮತ್ತು ಬಿಲ್ಲವ ವರ್ಗಗಳಲ್ಲಿ 'ಸದಿಯ' ಎಂಬ ಕುಲನಾಮವಿದೆ. ಈ ಎರಡೂ ಜನ ಪ್ರಭೇದವು ಬಹಳ ಪ್ರಾಚೀನವೆನ್ನುವುದರಲ್ಲಿ ಸಂದೇಹವಿರಲಾರದು. ಸಂಖ್ಯೆಯಲ್ಲಿ ಇವರ ಆಧಿಕ್ಯ ತುಳುನಾಡಿನಲ್ಲಿ ಇದ್ದುದು ತಿಳಿದುಬರುತ್ತದೆ. 'ಸದಿಯ'ವು 'ಸತಿಯ'ದ ರೂಪಭೇದವೇ?" ಎಂದಿದ್ದಾರೆ. ಆದರೆ ಈ ಎರಡೇ ಜನಪ್ರಭೇದವೇ ತುಳು

ನಾಡಿನಲ್ಲಿದ್ದುದೇ? ಇವರ ಸಂಖ್ಯೆಯೇ ಹೆಚ್ಚಿದ್ದುದೇ? ಎಂಬ ವಿಷಯದಲ್ಲಿ ಆಧಾರಗಳನ್ನೂ ವಿವರಣೆಗಳನ್ನೂ ಆ ಲೇಖನದಲ್ಲಿ ಕೊಟ್ಟೇ ಇಲ್ಲ.

ಡಾ. ಕೆ. ವಿ. ರಮೇಶರು ತಮ್ಮ 'ತುಳುನಾಡಿನ ಇತಿಹಾಸ' ಎಂಬ ಪುಸ್ತಕದಲ್ಲಿ ಸಹ್ಯಪುತ್ರ ಎಂಬುದೇ ಸತಿಯಪುತ್ರ ಎಂದಾಗಿರಬಹುದೇಂದು ಪ್ರಸ್ತಾವಿಸಿದ್ದಾರೆ. ಮಾತ್ರವಲ್ಲದೆ ಇವರು ಆಂಗ್ಲಭಾಷೆಯಲ್ಲಿ ಬರೆದ 'ಎ ಹಿಸ್ಟರಿ ಆಫ್ ಸೌತ್ ಕೆನರಾ' (A History of South Kanara) ಎಂಬ ನಿಬಂಧದಲ್ಲಿ "......ಈ ಸಂದರ್ಭದಲ್ಲಿ ಸತಿಯ ಎಂಬ ಶಬ್ದವು ತುಳುವವನ್ನೊಳಗೊಂಡ ಕೊಂಕಣದ ಅಂಚಾಗಿರುವ ಪಶ್ಚಿಮಘಟ್ಟಗಳ ಒಂದು ಭಾಗದ ಹೆಸರಾದ ಸಹ್ಯ ಎಂಬುದಕ್ಕೆ ಹತ್ತಿರದ ಹೋಲಿಕೆಯುಳ್ಳದಾಗಿದೆಯೆಂದು ಸೂಚಿಸಬಹುದು. ಸಹಜವಾದ ನಿಷ್ಪತ್ತಿಯಂತೆ ಅಥವಾ ಸ್ಖಲನದಿಂದಾಗಿ ಶಿಲಾಲೇಖನಗಳಲ್ಲಿ ಸಹ್ಯ ಎಂಬುದು ಸತಿಯ ಎಂದು ಬರೆಯಲ್ಪಟ್ಟಿರುವವುದು ಸಂಭವನೀಯ" (It may be pointed out in this connection that the word satiya bears close resemblance to Satya, be name of a port of the western Ghats bordering on Konkan, including Tuluva. It is possible that either as a normal derivation or as a mistake Satya come to be written in the rock edict as Satiya") ಎಂದು ಹೇಳಿ ಮುಂದೆ, "ವ್ಯಾಕರಣ ಯಾವ ಸಿದ್ಧ ನಿಯಮಗಳ ತಳಹದಿಯಿಂದಲೂ ಸಹ್ಯ ಎಂಬುದು ಸಹಿಯ–ಸತಿಯ ಎಂದು ಬದಲಾಗುವುದನ್ನು ಪ್ರತಿಪಾದಿಸುವಂತಿಲ್ಲವೆಂಬುದು ಸತ್ಯ" (It is true that the change from Satya to Sahiya > Satiya cannot be justified on the basis of any known rules of grammar) ಎಂದೂ ಹೇಳಿದ್ದಾರೆ (ಪುಟ.11). ಅವರೇ ಹೇಳುವಂತೆ, ಭಾಷಾವಿಜ್ಞಾನದ ಅಥವಾ ವ್ಯಾಕರಣದ ಪ್ರಕಾರ ಈ ನಿಷ್ಪತ್ತಿ ಸಕಾರಣವಾಗದು ಎಂದು ಹೇಳಿದ ಮೇಲೆ ಕೈತಪ್ಪಿನಿಂದ ಬಂದಿರಬೇಕೆಂದು ಸಿದ್ಧವಾಗುತ್ತದೆ. ಹೀಗೆ ಕೈತಪ್ಪು ಬರುವುದಿದೆಯೆಂಬುದಕ್ಕೆ ಅವರ ನಿಬಂಧದಲ್ಲಿ ಸಾಕಷ್ಟು ಆಧಾರ ಪ್ರಮಾಣಗಳು ಇಲ್ಲವೆಂದ ಮೇಲೆ ಇದು ಸಂಶೋಧಕರಾಗಲೀ ಇತಿಹಾಸಕಾರರಾಗಲೀ ಒಪ್ಪುವ ಮಾತಾದೀತೆ?

ಶ್ರೀ ಕೆ. ವೆಂಕಟರಾಯಾಚಾರ್ಯರು ಸತಿಯಪುತ್ರ ಎಂದು ಅಶೋಕನ ಶಾಸನಗಳಲ್ಲಿರುವ ಪದವು ವ್ಯಾಸಭಾರತದಲ್ಲಿರುವ ಸತೀನರಾಃ, ಸತಿಯಾಃ ಎಂಬುದೇ ಆಗಿರಬೇಕೆಂದೂ, ಈ ಸತೀನರಾಃ ಸತಿಯಾಃ ಎಂದರೆ ಅಳಿಯಕಟ್ಟಿನ ಸಂಪ್ರದಾಯವುಳ್ಳ ಜನವರ್ಗದವರನ್ನು ಎಂದರೆ ತುಳುನಾಡಿನವರನ್ನು ಕುರಿತೇ ಹೇಳಿದುದೆಂದೂ ತಮ್ಮ 'ಸಾಹಿತ್ಯದ ಹಿನ್ನೆಲೆ' (ಪುಟ 64) ಎಂಬುದರಲ್ಲಿ ಪ್ರತಿಪಾದಿಸಿದ್ದಾರೆ. ಇಲ್ಲಿ ಬರುವ ಸತಿಯಾಃ ಎಂಬುದು ಮುಂದಣ ಪುತ್ರ ಎಂಬುದರ ಜತೆಗೆ ಸೇರಬಹುದೆಂದು ಹೇಳಬಹುದಾದರೂ ಸತೀನರಾಃ ಎಂಬುದರಿಂದ ಸತಿಯಪುತ್ರ ಎಂಬುದು ನಿಷ್ಪನ್ನವಾದುದೆನ್ನುವುದು ಪೂರ್ಣ ತೃಪ್ತಿಕರವೆನ್ನುವಂತಿಲ್ಲ.

ಶ್ರೀ ಗುಂಡ್ಮಿ ಚಂದ್ರಶೇಖರ ಐತಾಳರು, ಸತಿಯಪುತ್ರನೆಂದು ಪರಶುರಾಮನನ್ನು ಹೇಳಿದುದೆಂದು ಕನಕದಾಸರ ಕೀರ್ತನೆಗಳಿಂದ ತಿಳಿದು ಬರುವುದರಿಂದ ಸತಿಯಪುತ್ರ ಎಂಬುದು ಪರಶುರಾಮಸೃಷ್ಟಿಗೆ ಎಂದರೆ ತುಳುನಾಡಿಗೆ (ಮಾತ್ರವಲ್ಲ, ಕನ್ನಡದ ಕರಾವಳಿ ಪ್ರದೇಶಕ್ಕೆ) ಸಂಬಂಧಿಸಿರಬಹುದೆಂದು ಒಂದು ಲೇಖನದಲ್ಲಿ ತಮ್ಮ ಅಭಿಪ್ರಾಯವನ್ನು ಸೂಚಿಸಿದ್ದಾರೆ. (ಪ್ರ. ಕ. 53–4 ನೋಡಿ), ಆದರೆ ಪರಶುರಾಮಸೃಷ್ಟಿಯಲ್ಲಿ ಕೇರಳವೂ ಸೇರುವುದರಿಂದ ಬರಿಯ ತುಳುನಾಡಿಗಷ್ಟೆ (ಅಲ್ಲದೆ, ಕನ್ನಡದ ಕರಾವಳಿ ಪ್ರದೇಶಕ್ಕೆ) ಅದು ಸೀಮಿತವಾಗಿರುವುದು ಹೇಗೆ ಎನ್ನಿಸುತ್ತದೆ. (ಇಲ್ಲಿನ ಕಂಸದೊಳಗಿನ ಮಾತು ಆ ಪ್ರಬಂಧದಲ್ಲಿಲ್ಲದೆ, ಸಮುಚಿತವೆಂದು ಇಲ್ಲಿ ಬರೆಯಲಾಗಿದೆ).

ಇವುಗಳನ್ನೆಲ್ಲ ಅವಲೋಕಿಸುವಾಗ ಸಂಶೋಧನೆ ಎಂಬುದರಲ್ಲಿ ಎಷ್ಟೆಷ್ಟು ಭಿನ್ನಾಭಿಪ್ರಾಯಗಳು ತಲೆದೋರುತ್ತವೆ ಎಂಬುದು ವಾಚಕರನ್ನು ಆಶ್ಚರ್ಯ ಮೂಕರನ್ನಾಗಿ ಮಾಡುತ್ತದೆ (ಬಾಸಿಗ. ಪುಟ. 86–88)

ನಮ್ಮ ಆಶಯ :

ಅಶೋಕನ ಶಾಸನದ ನಾಲ್ಕು ಪ್ರತಿಗಳಲ್ಲಿಯೂ 'ಸತಿಯ ಪುತ್ರ' ಎಂದಿರುವುದೂ, ಒಂದೆಡೆಯಲ್ಲಿ 'ಸಾತಿಯಪುತ್ರ'ವೆಂದಿರುವುದೂ ಗಮನೀಯವು! ಹಾಗಾಗಿ, ಸಹ್ಯ < ಸಹಿಯದ ಬದಲು ಸತಿಯ (ಸಾತಿಯ)ವೆಂದು ಕೃತಪ್ಪಾಗಿದೆಯೆಂಬುದಕ್ಕೆಡೆಯಿಲ್ಲ.

ಅಶೋಕನ ಶಾಸನಗಳು ಇದೀಗ ಸಿಕ್ಕುವೆಡೆಯ ಹೊರಗಡೆ ಆತನ ಆಡಳಿತವಿಲ್ಲೆಂದು ತಿಳಿಯುತ್ತದೆ. ಪ್ರಸ್ತುತ, ಅಶೋಕನ ಬೇರೆ ಶಾಸನವಿರುವ ಉತ್ತರ ಕನ್ನಡ ಜಿಲ್ಲೆಯ ಹಾಗೂ ಮೈಸೂರಿನ ಕೆಲವೆಡೆಯನ್ನು ಬಿಟ್ಟು, ಉಳಿದೆಡೆಯ ಕೆಲವು ರಾಜ್ಯಗಳ ಹೆಸರುಗಳು ಈ ಶಾಸನದಲ್ಲಿವೆ. ಆಮೇರೆಗೆ, ತೆಂಕು ತುದಿಯ ಚೋಳ(ಡ), ಪಂಡಿಯ (ಪಾಂಡ್ಯ), ತಾಮ್ರಪರ್ಣಿಗಳು ಆಯಾ ಹೆಸರಲ್ಲೀಗಲೂ ಪ್ರಸಿದ್ಧಗಳಾಗಿವೆ; ಹಾಗೆ ಕೇರಳವೂ ಪ್ರಸಿದ್ಧವಾಗಿದೆ. ಅದರೊತ್ತಿನಲ್ಲಿ ಹೇಳಿದ ಸತಿಯಪುತ್ರವು ಅದರೊತ್ತಿನಲ್ಲಿರಬೇಕೆಂಬುದು ಅಷ್ಟೇ ಸ್ಪಷ್ಟವಾಗಿದೆ.

'ಸತಿಯ ಪುತ್ರ=ಪರಶುರಾಮ'ನೆಂಬುದು ಒಪ್ಪಿದರೂ ಆತನ ಸೃಷ್ಟಿಯಲ್ಲಿ ಸೇರುವ ಕೇರಳ ಮನ್ನುಳಿದುದೇ ಸತಿಯಪುತ್ರವೆಂದು ಇಲ್ಲಿ ಮನನಿಸಬಹುದು. ಅಂದರೆ, ಕೇರಳದಿಂದ ಬಡಗಲು ಇರುವ ತುಳುನಾಡನ್ನೆ (ತುಳುದೇಶವನ್ನೆ) ಸತಿಯ–ಸಾತಿಯ ಪುತ್ರವೆಂದಿರಬೇಕೆಂದು ಅದಾವನಿಗೂ ಸ್ಫುರಿಸುತ್ತದೆ. (ಶ್ರೀ ಗೋವಿಂದ ಪೈಗಳು 'ತುಳುನಾಡು–ಪೂರ್ವಸ್ಮೃತಿ'ಯಲ್ಲಿ ಇದನ್ನು ಹೇಳಿದ್ದಾರೆ: ಪ್ರ.ಕ. 54–1. ಪುಟ 86–7 ನೋಡಿರಿ) ಕೇರಳದ ಬಡಗಲು ಅಶೋಕನ ಬೇರೆ ಶಾಸನವಿರುವ ಉ..ಕ. ಜಿಲ್ಲೆಯ, ಕನ್ನಡದ ಕೆಲವೆಡೆಯನ್ನು ಉಳಿದರೆ, ಮಿಕ್ಕುದೆಲ್ಲ– ಕನ್ನಡದ ಕರಾವಳಿ ಪ್ರದೇಶವೆಂದೆನ್ನುವುದು ಮಾತ್ರ ಚೆನ್ನಾಗಲಾರದು. ಏಕೆಂದರೆ, ಅಶೋಕನ ಕಾಲದಿಂದ ಹಿಂದೆಯೆ ಚೋಳ, ಪಾಂಡ್ಯ, ತಾಮ್ರಪರ್ಣಿ, ಕೇರಳಗಳಂತೆ ತುಳುನಾಡೂ ಪ್ರಸಿದ್ಧವಾಗಿ ಇತ್ತೆಂಬುದು ಸುವಿದಿತವು. ಹೇಗೆಂದರೆ, ಈಗ ಕೇರಳದಲ್ಲಿಯೂ 'ಸತಿಯ ಪುತ್ರ' ರೀತಿ (ಸತೀನರ–ಮಾತೃಪದಪದ್ಧತಿ) ಇರುವುದು; ಆದರೆ, ಅಲ್ಲಿ ಅಶೋಕನ ಶಾಸನದ ಕಾಲದಲ್ಲೂ ಆ ಪದ್ಧತಿಯಿದ್ದಿಲ್ಲ–ಪ್ರಧಾನವಾಗಿಲ್ಲ–ವೆಂದು ಅದಕ್ಕೆ ಕೇರಳವೆಂದೇ ಅಶೋಕನ ಶಾಸನದಲ್ಲಿ ಹೇಳಿರುವುದರಿಂದ ಸುವಿದಿತವದೆ. ತಳುನಾಡಿನವರೆನ್ನುವ ಹಾಗೆ–ಬಾಯ್ದೆರೆಯ ಕತೆಯಂತೆ–ಕ್ರಿಸ್ತಶಕಾದಿಗೆ ಮಾತ್ರವಲ್ಲ, ಅಶೋಕನ ಕಾಲದಲ್ಲಿ ಹಾಗೂ ವ್ಯಾಸ ಮಹಾ ಭಾರತದ ಕಾಲದಲ್ಲಿ ತುಳುನಾಡಲ್ಲಿ (ತುಳುನಾಡವರಲ್ಲಿ, ತುಳುವರಲ್ಲಿ) ಹೆಚ್ಚಾಗಿ ಆ ಕ್ರಮವಿತ್ತೆಂದು ಇಲ್ಲಿ ಅರ್ಥವಿಸಲಾಗುತ್ತದೆ. (ಶ್ರೀ ವೆಂಕಟರಾಯಾಚಾರ್ಯರು, ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳ 'ಅಭಿವಂದನೆ' ಮತ್ತು 'ಸಾಹಿತ್ಯದ ಹಿನ್ನೆಲೆ' ಯಲ್ಲಿ ಈ ವಿಚಾರ ಸೂಚಿಸಿದ್ದಾರೆ. ಆದುದರಿಂದ, ಸತಿಯ–ಸತಿಯಪುತ್ರ–ಸತೀನರವೆಂದು ವ್ಯಾಸ ಭಾರತ–ಅಶೋಕಶಾಸನಗಳಲ್ಲಿ ಹೇಳಿದುದಕ್ಕೆ ಶ್ರೀ ವೆಂಕಟರಾಯಾಚಾರ್ಯರು ಹೇಳಿದ ಆಶಯ ಸಾಧುವಾದೀತು).

—ಬಸವರಾಜ ಕುಂಚೂರು

'ಎಪಿಗ್ರಾಫಿಯ ಕರ್ನಾಟಿಕ'-ಮೊದಲ ಸಂಪುಟದ ಬಿಡುಗಡೆ ಸಮಾರಂಭ

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯು ಪ್ರಕಟಿಸಿದ ಎಪಿಗ್ರಾಫಿಯ ಕರ್ನಾಟಿಕದ ಪರಿಷ್ಕೃತ ಮೊದಲ ಸಂಪುಟವನ್ನು 21ನೇ ಅಕ್ಟೋಬರ್ 1972ರ ಶನಿವಾರ ಸಂಜೆ 5-30ಕ್ಕೆ ಮಾನಸ ಗಂಗೋತ್ರಿಯ ಮಾನವಿಕ ವಿಭಾಗದ ಸಭಾಂಗಣದಲ್ಲಿ ಬಿಡುಗಡೆ ಮಾಡಲಾಯಿತು. ಭಾರತ ಸರ್ಕಾರದ ಮುಖ್ಯ ಶಾಸನ ತಜ್ಞ ಡಾ. ಜಿ. ಎಸ್. ಗಾಯಿ ಅವರು ಸಂಪುಟವನ್ನು ಬಿಡುಗಡೆ ಮಾಡಿದರು. ವಿಶ್ವ ವಿದ್ಯಾನಿಲಯದ ಕುಲಪತಿ ಪ್ರೊ. ದೇ. ಜವರೇಗೌಡ ಅವರು ಅಧ್ಯಕ್ಷತೆ ವಹಿಸಿದ್ದರು.

ಸಂಪುಟದ ಬಿಡುಗಡೆಯನ್ನು ಮೈಸೂರು ಸರ್ಕಾರದ ಮಾನ್ಯ ಅರ್ಥಮಂತ್ರಿ ಶ್ರೀ ಎಂ. ವೈ. ಘೋರ್ಪಡೆಯವರು ನೆರವೇರಿಸಬೇಕಾಗಿತ್ತು. ಆದರೆ ದೇಹಾಲಸ್ಯದ ನಿಮಿತ್ತ ಸಮಾರಂಭದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದೆ ಸಮಾರಂಭಕ್ಕೆ ಶುಭವನ್ನು ಹಾರೈಸಿ ಸಂದೇಶವನ್ನು ಕಳುಹಿಸಿದ್ದರು.

ಪ್ರಾರ್ಥನೆಯಾದ ನಂತರ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರೂ ಎಪಿಗ್ರಾಫಿಯ ಕರ್ನಾಟಿಕ ಪರಿಷ್ಕರಣ ಹಾಗೂ ಪುನರ್ಮುದ್ರಣ ಯೋಜನೆಯ ಸಲಹಾಸಮಿತಿಯ ಅಧ್ಯಕ್ಷರೂ ಆದ ಡಾ. ಹಾ. ಮಾ. ನಾಯಕರು ಮುಖ್ಯ ಅತಿಥಿಗಳನ್ನೂ ಸಭಿಕರನ್ನೂ ಸ್ವಾಗತಿಸುತ್ತ ಮೊದಲು ಮಾನ್ಯ ಅರ್ಥಮಂತ್ರಿಯವರಿಂದ ಬಂದ ಸಂದೇಶವನ್ನು ಓದಿ ಅಸ್ವಸ್ಥತೆಯಿಂದಾಗಿ ಅವರಿಗೆ ಈ ಸಮಾರಂಭಕ್ಕೆ ಬರಲಾಗದಿದ್ದರೂ ಈ ಯೋಜನೆಯ ವಿಷಯದಲ್ಲಿ ಅವರಿಗಿರುವ ತೀವ್ರವಾದ ಆಸಕ್ತಿಯನ್ನೂ ಇದು ವ್ಯಕ್ತಪಡಿಸುತ್ತದೆ ಎಂದರು. ಡಾ. ಗಾಯಿ ಅವರನ್ನು ಪರಿಚಯಮಾಡಿಕೊಡುತ್ತ ಭಾರತ ಸರ್ಕಾರದ ಮುಖ್ಯ ಶಾಸನಾಧಿಕಾರಿಗಳಾಗಿರುವ ಡಾ. ಗಾಯಿ ಅವರು ಈ ಯೋಜನೆ ಕಾರ್ಯಗತವಾಗುವಲ್ಲಿ ಹೆಜ್ಜೆ ಹೆಜ್ಜೆಗೂ ಸಲಹೆ ಸೂಚನೆಗಳನ್ನು ಕೊಟ್ಟು ನೆರವಾಗಿದ್ದಾರೆ. ಸಮಸ್ಯೆ ಬಂದಾಗಲೆಲ್ಲಾ ಅವರಲ್ಲಿ ಹೋಗಿ ಸಹಾಯ ಪಡೆದಿದ್ದೇನೆ. ಈಗಲೂ ಸಂಪುಟದ ಬಿಡುಗಡೆ ಮಾಡುವಂತೆ ಅವರನ್ನು ಕೇಳಿಕೊಂಡಾಗ ಸಂತೋಷದಿಂದ ಒಪ್ಪಿಕೊಂಡಿದ್ದಾರೆ ಎಂದು ಕೃತಜ್ಞತೆಯನ್ನು ಸೂಚಿಸಿದರು. ಅಧ್ಯಕ್ಷತೆ ವಹಿಸಿದ್ದ ಕುಲಪತಿ ಪ್ರೊ. ದೇ. ಜವರೇಗೌಡರನ್ನು ಸ್ವಾಗತಿಸುತ್ತ, 'ಅವರ ಧೈರ್ಯ ಭರವಸೆ ಇಲ್ಲದಿದ್ದರೆ ಬಹುಶಃ ಇಂಥದೊಂದು ದೊಡ್ಡ ಯೋಜನೆಯನ್ನು ನಿರ್ವಹಿಸುವ ಜವಾಬ್ದಾರಿಗೆ ನಾನು ಮುಂದಾಗುತ್ತಿರಲಿಲ್ಲ' ಎಂದರು.

ಎಪಿಗ್ರಾಫಿಯ ಕರ್ನಾಟಿಕದ ಪರಿಷ್ಕರಣ ಮತ್ತು ಪುನರ್ಮುದ್ರಣ ಯೋಜನೆಯನ್ನು ಕನ್ನಡ ಅಧ್ಯಯನ ಸಂಸ್ಥೆಯು ವಹಿಸಿಕೊಂಡ ಸಂದರ್ಭವನ್ನು ವಿವರಿಸುತ್ತ ಮೊದಲು 'ಎಪಿಗ್ರಾಫಿಯ ಕರ್ನಾಟಿಕ'ದ ಸಂಕ್ಷಿಪ್ತ ಇತಿಹಾಸವನ್ನು ಹೀಗೆ ತಿಳಿಸಿದರು:

"ಯಾವುದೇ ಪ್ರದೇಶದ ಭಾಷೆ, ಸಾಹಿತ್ಯ, ಸಂಸ್ಕೃತಿ, ಇತಿಹಾಸಗಳ ಅಧ್ಯಯನಕ್ಕೆ ಶಾಸನಗಳು ಅಮೂಲ್ಯ ಆಕರಗಳು. ಸುದೈವದಿಂದ ನಮ್ಮ ನಾಡಿನ ಶಾಸನ ಸಂಪತ್ತು ಹೇರಳವಾಗಿದೆ. ಈಗಾಗಲೇ ಇಂಥ ಶಾಸನಗಳನ್ನು ಹುಡುಕಿ ಸಂಗ್ರಹಿಸಿ 'ಎಪಿಗ್ರಾಫಿಯ ಕರ್ನಾಟಿಕ' ಸಂಪುಟಗಳಲ್ಲಿ ಪ್ರಕಟಿಸಿರುವುದು ಒಂದು ಅಪೂರ್ವ ಸಿದ್ಧಿ; ಬೃಹತ್ತು ಮಹತ್ತುಗಳೆರಡರಲ್ಲಿಯೂ ಹೆಮ್ಮೆ ಪಡಬಹುದಾದ ಸಾಧನೆ. 1884ರಲ್ಲಿ ಮೈಸೂರಿನಲ್ಲಿ ಪುರಾತತ್ವ ಇಲಾಖೆ ಸ್ಥಾಪನೆಯಾಗಿ ಅದರ ನಿರ್ದೇಶಕರಾಗಿ ನೇಮಕಗೊಂಡ ಬಿ. ಎಲ್. ರೈಸ್ ಅವರು 1906ರ ವರೆಗಿನ ಇಪ್ಪತ್ತೆರಡು ವರ್ಷಗಳ ಅವಧಿಯಲ್ಲಿ ಅಂದಿನ ಮೈಸೂರು ರಾಜ್ಯದ ಎಂಟು ಜಿಲ್ಲೆಗಳಲ್ಲಿ ಮತ್ತು ಆಗ ಪ್ರತ್ಯೇಕವಾಗಿದ್ದ ಕೊಡಗಿನಲ್ಲಿ 8869 ಶಾಸನಗಳನ್ನು ಸಂಗ್ರಹಿಸಿ ಈ ಮಾಲೆಯ ಹನ್ನೆರಡು ಸಂಪುಟಗಳಲ್ಲಿ ಪ್ರಕಟಿಸಿದರು. ರೈಸರ ನಂತರ ಅಧಿಕಾರಕ್ಕೆ ಬಂದ ಆರ್.

ನರಸಿಂಹಾಚಾರ್ಯರು ತಮ್ಮ 16 ವರ್ಷಗಳ ಅಧಿಕಾರಾವಧಿಯಲ್ಲಿ ಸುಮಾರು 5000 ಶಾಸನಗಳನ್ನು ಕಂಡು ಹಿಡಿದು ಮುಖ್ಯವಾದುವನ್ನು ತಮ್ಮ ವಾರ್ಷಿಕವರದಿಗಳಲ್ಲಿ ಪ್ರಕಟಿಸುತ್ತ ಬಂದರು. ಮುಂದೆಯೂ ಇಲಾಖೆಯು ಶಾಸನ ಪರಿವೀಕ್ಷಣೆಯ ಕೆಲಸವನ್ನು ಮುಂದುವರಿಸಿಕೊಂಡು ಬಂದಿದೆ. 'ಎಪಿಗ್ರಾಫಿಯ ಕರ್ನಾಟಿಕ' ಸಂಪುಟಗಳು ಕೆಲವು ದಶಕಗಳಿಂದ ತುಂಬ ದುರ್ಲಭವಾಗಿದ್ದು ಅವುಗಳು ಅಭ್ಯರ್ಥಿಗಳಿಗೂ, ವಿದ್ವಾಂಸರಿಗೂ ಅನಿವಾರ್ಯ ಆಕರ ಗ್ರಂಥಗಳಾಗಿದ್ದುದರಿಂದ ಅವನ್ನು ಪರಿಷ್ಕರಿಸಿ ಪುನರ್ಮುದ್ರಿಸುವ ಆವಶ್ಯಕತೆ ಬಹಳವಾಗಿತ್ತು. ಕರ್ಣಾಟಕ ಜನಜೀವನ ಸಂಸ್ಕೃತಿಗಳನ್ನು ಕುರಿತ ಸಂಶೋಧನೆಗಳಿಗಾಗಿರುವ ಸಮನ್ವಯ ಸಮಿತಿಯ ಸಭೆಯಲ್ಲಿ ಈ ಪರಿಷ್ಕರಣ ಹಾಗೂ ಪುನರ್‌ಮುದ್ರಣದ ಸಲಹೆ ಮಾಡಿ ಈ ಜವಾಬ್ದಾರಿಯನ್ನು ಹೊರಲು ಕನ್ನಡ ಅಧ್ಯಯನ ಸಂಸ್ಥೆ ಸಿದ್ಧವೆಂದು ಹೇಳಿದಾಗ ಸಮಿತಿಯ ಸದಸ್ಯರೆಲ್ಲರೂ ಬೆಂಬಲ ನೀಡಿ ಸ್ವಾಗತಿಸಿದರು. ಯೋಜನೆಯ ವಿವರಗಳನ್ನು ಕನ್ನಡ ಅಧ್ಯಯನ ಸಂಸ್ಥೆ ಸಿದ್ಧಪಡಿಸಬೇಕೆಂದೂ, ಯೋಜನೆಗೆ ಅಗತ್ಯವಾದ ಹಣವನ್ನು ಒದಗಿಸಲು ಸರ್ಕಾರಕ್ಕೆ ಶಿಫಾರಸ್ ಮಾಡಬೇಕೆಂದೂ ಯೋಜನೆಯನ್ನು ಕನ್ನಡ ಅಧ್ಯಯನ ಸಂಸ್ಥೆ ವಹಿಸಬೇಕೆಂದೂ ಸಮಿತಿ ನಿರ್ಣಯ ಮಾಡಿತು. ಅದರಂತೆ ತಜ್ಞರ ಸಲಹೆ ಪಡೆದು 'ಎಪಿಗ್ರಾಫಿಯ ಕರ್ನಾಟಿಕ' ಪರಿಷ್ಕರಣ ಹಾಗೂ ಪುನರ್ಮುದ್ರಣಕ್ಕೆ ಸಂಬಂಧಿಸಿದಂತೆ ಸುಮಾರು ಹನ್ನೆರಡೂವರೆ ಲಕ್ಷ ರೂಪಾಯಿಗಳ ಯೋಜಯನ್ನು ಕಳುಹಿಸಿದಾಗ ಮೈಸೂರು ಸರ್ಕಾರವು ಔದಾರ್ಯದಿಂದ ಈ ಯೋಜನೆಯನ್ನು ಒಪ್ಪಿ ಆಜ್ಞೆ ಹೊರಡಿಸಿತು! " ಎಂದು ಹೇಳಿ ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ವೀರೇಂದ್ರ ಪಾಟೀಲರು, ಶಿಕ್ಷಣ ಸಚಿವರಾಗಿದ್ದ ಶ್ರೀ ಕೆ. ವಿ. ಶಂಕರಗೌಡರು ಮತ್ತು ಹಣಕಾಸಿನ ಸಚಿವರಾಗಿದ್ದ ಶ್ರೀರಾಮಕೃಷ್ಣ ಹೆಗ್ಗಡೆ ಈ ಮೂವರು ಮಹನೀಯರು ತಮ್ಮ ಭಾಷೆ ಸಾಹಿತ್ಯಗಳ ಮೇಲಿನ ಪ್ರೀತಿ ದೂರದೃಷ್ಟಿಗಳಿಂದ ಕೈಗೊಂಡ ಯೋಜನೆಗಳಲ್ಲಿ ಇದೂ ಒಂದೆಂದೂ ಇದರ ಸಂಪೂರ್ಣ ವೆಚ್ಚವನ್ನು ಸರ್ಕಾರವೇ ವಹಿಸಿಕೊಂಡಿದೆಯೆಂದೂ ಹೇಳಿ ಅವರಿಗೂ ಇಂಥ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಆಸಕ್ತಿ ವಹಿಸಿರುವ ಇಂದಿನ ಸರ್ಕಾರದ ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಅವರು ಶ್ರೀ ಎಂ. ವೈ. ಘೋರ್ಪಡೆಯವರು ಮತ್ತು ಶಿಕ್ಷಣ ಸಚಿವರಾದ ಶ್ರೀ ಎ. ಆರ್. ಬದರಿನಾರಾಯಣ್ ಅವರುಗಳಿಗೂ ಕೃತಜ್ಞತೆಯ ವಂದನೆಗಳನ್ನು ಸಲ್ಲಿಸಿದರು.

ಈ ಯೋಜನೆಯನ್ನು ಕಾರ್ಯಗತಗೊಳಿಸುವುದರಲ್ಲಿ ಸಲಹೆ ನೀಡಲು ವಿಶ್ವವಿದ್ಯಾನಿಲಯ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಒಂದು ಸಲಹಾ ಸಮಿತಿಯನ್ನು ನೇಮಿಸಿತೆಂದೂ ಅದರಲ್ಲಿ ರಾಜ್ಯದ ಪುರಾತತ್ವ ಇಲಾಖೆಯ ನಿರ್ದೇಶಕರೂ, ಭಾರತ ಸರ್ಕಾರದ ಮುಖ್ಯ ಶಾಸನಾಧಿಕಾರಿಗಳೂ, ಮೈಸೂರು, ಬೆಂಗಳೂರು ಕರ್ನಾಟಕ ಹಾಗೂ ಮದರಾಸು ವಿಶ್ವವಿದ್ಯಾನಿಲಯಗಳ ಕೆಲವು ವಿದ್ವಾಂಸರೂ ಸದಸ್ಯರಾಗಿರುವರೆಂದೂ ಈ ಸಮಿತಿಯ ಸಲಹೆಗನುಗುಣವಾಗಿ ಪರಿಷ್ಕರಣ ಕಾರ್ಯ ನಡೆಯುತ್ತಿರುವುದಾಗಿಯೂ ತಿಳಿಸಿ ಬಿಡುಗಡೆಯಾಗುತ್ತಿರುವ ಮೊದಲನೆಯ ಸಂಪುಟದ ವಿಷಯವಾಗಿ ಹೀಗೆ ಹೇಳಿದರು: "ರೈಸ್ ಅವರೇ ತಾವು ಪ್ರಕಟಿಸಿದ್ದ 23 ಶಾಸನಗಳಿದ್ದ ಮೊದಲನೆಯ ಆವೃತ್ತಿಯನ್ನು ಪರಿಷ್ಕರಿಸಿ 1923ರಲ್ಲಿ 75 ಶಾಸನಗಳನ್ನೊಳಗೊಂಡಂತೆ ಎರಡನೆಯ ಆವೃತ್ತಿಯನ್ನು ಪ್ರಕಟಿಸಿದ್ದರು. ಈಗ ಈ ಸಂಪುಟವನ್ನು ಮತ್ತೆ ಪರಿಷ್ಕರಿಸಲಾಗಿದೆ. ಈ ಸಂದರ್ಭದಲ್ಲಿ ಪ್ರಕಟಿತ ಶಾಸನಗಳ ಪಾಠಗಳನ್ನು ಮೂಲದೊಂದಿಗೆ ತಾಳೆನೋಡುವ ಸಲುವಾಗಿ ಪರಿವೀಕ್ಷಣೆ ಕೈಗೊಂಡಾಗ ಇದುವರೆಗೆ ಗಮನಕ್ಕೆ ಬಾರದಿದ್ದ ಮೂವತ್ತೆರಡು ಹೊಸ ಶಾಸನಗಳು ದೊರೆತವು. ಹಿಂದಿನ ಆವೃತ್ತಿಯಲ್ಲಿದ್ದ ಓದಲಾಗದಿದ್ದ ಒಂದು ಶಾಸನವನ್ನು ಕೈಬಿಟ್ಟು ಈ ಹೊಸ ಶಾಸನವನ್ನು ಸೇರಿಸಿ ಒಟ್ಟು ನೂರ ಆರು ಶಾಸನಗಳನ್ನು ಇದು ಒಳಗೊಂಡಿದೆ. ಒಂದು ದೃಷ್ಟಿಯಿಂದ ಇದು ಮಾದರಿ ಸಂಪುಟ. ಇದರ ಪರಿಷ್ಕರಣ ವಿನ್ಯಾಸಗಳ ಬಗೆಗೆ ದೊರೆಯುವ ವಿಮರ್ಶೆಗಳ ಬೆಳಕಿನಲ್ಲಿ ಮುಂದಿನ ಸಂಪುಟಗಳ ಪರಿಷ್ಕರಣ ಕಾರ್ಯ ಉತ್ತಮಗೊಳ್ಳುವುದೆಂದು ನಾವು ನಿರೀಕ್ಷಿಸಿದ್ದೇವೆ". ಇದೇ ಸಂದರ್ಭದಲ್ಲಿ ಅವರು ಹೇಳಿದ ಇನ್ನೊಂದು ವಿಷಯ ಗಮನಾರ್ಹ. "ಹೊಸ ಶಾಸನಗಳಿಗಾಗಿ ಪರಿವೀಕ್ಷಣೆ ನಡೆಸುವುದು ನಮ್ಮ ಯೋಜನೆಯಲ್ಲಿ ಸೇರಿಲ್ಲ, ನಿಜ. ಆದರೆ ಅನಾಯಾಸವಾಗಿ ದೊರೆತ ಶಾಸನಗಳನ್ನು ಬಿಡಬಾರದೆಂದು ಅವನ್ನು ಇಲ್ಲಿ ಸೇರಿಸಿದ್ದೇವೆ.

ಈ ದಿಕ್ಕಿನಲ್ಲಿ ಆಗಬೇಕಾದ ಕೆಲಸ ಇನ್ನೂ ಎಷ್ಟಿದೆ ಎಂಬುದನ್ನು ಇದು ತೋರಿಸುತ್ತದೆ" ಎಂದು ಹೇಳಿ ಸಮಗ್ರವಾದ ಹೊಸ ಪರಿವೀಕ್ಷಣೆಯೊಂದರ ಅಗತ್ಯವನ್ನು ಒತ್ತಿ ಹೇಳಿದರು.

ಸಲಹಾಸಮಿತಿಯ ಸದಸ್ಯರಲ್ಲಿ ಹಿರಿಯರಾದ ಡಾ. ಟಿ.ವಿ. ಮಹಾಲಿಂಗಂ ಅವರು ಈ ಸಮಾರಂಭದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದೆ ಅವರು ಕಳುಹಿಸಿದ್ದ ಲೇಖನವನ್ನು ಡಾ. ಬಾ. ರಾ. ಗೋಪಾಲ್ ಅವರು ಓದಿದರು. ಅದರಲ್ಲಿ ಡಾ. ಮಹಾಲಿಂಗಂ ಅವರು ಸಂಕ್ಷೇಪವಾಗಿ ಭಾರತದ ಅದರಲ್ಲಿಯೂ ಕರ್ನಾಟಕದ ಶಾಸನಗಳು, ಅವುಗಳ ಸಂಗ್ರಹಣೆಗಳ ವಿಷಯವಾಗಿ ವಿವರಿಸಿ 'ಎಪಿಗ್ರಾಫಿಯ ಕರ್ನಾಟಿಕದ' ಅಮೂಲ್ಯವಾದ ಸಂಪುಟಗಳು ಬಹುಕಾಲದಿಂದ ವಿದ್ವಾಂಸರಿಗೆ ದೊರೆಯುತ್ತಿರಲಿಲ್ಲವೆಂದೂ, ಅವುಗಳನ್ನು ಪುನರ್ಮುದ್ರಿಸಬೇಕೆಂಬ ಭಾವನೆ ತೀವ್ರವಾಗಿತ್ತೆಂದೂ ಅಲ್ಲದೆ ಕಳೆದ ಅರ್ಧಶತಮಾನದಿಂದ ದಕ್ಷಿಣ ಭಾರತದ ಇತಿಹಾಸದ ಬಗ್ಗೆ ಬೆಳಕು ಬೀರುವ ಶಾಸನಾಧಾರಗಳ ಸಂಗ್ರಹಣ ಮತ್ತು ಸಂಶೋಧನೆಗಳ ಪ್ರಗತಿ ಇವುಗಳಿಂದಾಗಿ ಲೂಯಿ ರೈಸ್ ಅವರು ಸಂಗ್ರಹಿಸಿದ ಕೆಲವು ಶಾಸನಗಳ ಅನ್ವೇಷಣೆ ಹಾಗೂ ಅಧ್ಯಯನ ಮತ್ತು ಇನ್ನು ಕೆಲವು ಶಾಸನಗಳಿಗೆ ಅವರು ಸೂಚಿಸುವ ಸ್ಥೂಲ ಹಾಗೂ ಊಹಾತ್ಮಕ ಕಾಲ ವಿಚಾರಗಳನ್ನು ಪರಿಷ್ಕರಿಸಬೇಕಾದ ಅಗತ್ಯವಿತ್ತೆಂದೂ ತಿಳಿಸಿ, 'ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯು ಮೈಸೂರು ಸರ್ಕಾರದ ಉದಾರ ಧನ ಸಹಾಯದ ನೆರವಿನಿಂದ 'ಎಪಿಗ್ರಾಫಿಯ ಕರ್ನಾಟಕ ಸಂಪುಟಗಳನ್ನು ಪರಿಷ್ಕರಿಸಿ ಪುನರ್ಮುದ್ರಿಸುವ ಕಾರ್ಯವನ್ನು ವಹಿಸಿಕೊಂಡಿರುವುದು ಬಹಳ ಉಚಿತವಾಗಿದೆ; ಈ ಕಾರ್ಯ ಚೆನ್ನಾಗಿ ಆರಂಭಗೊಂಡಿದೆ; ವಿಶ್ವವಿದ್ಯಾನಿಲಯದ ಕುಲಪತಿಯವರು ಈ ಯೋಜನೆಯ ಬಗ್ಗೆ ಅತ್ಯಂತ ಆಸಕ್ತಿ ವಹಿಸಿದ್ದು ಅದಕ್ಕೆ ತಮ್ಮ ಪೂರ್ಣ ಬೆಂಬಲವನ್ನು ನೀಡುತ್ತಿದ್ದಾರೆ; ಈ ಯೋಜನೆ ಆರಂಭವಾದ ಕೆಲವು ತಿಂಗಳುಗಳಲ್ಲೆ ಮೊದಲ ಸಂಪುಟವು ಪರಿಷ್ಕೃತ ಮತ್ತು ಪುನರ್ಮುದ್ರಣವಾಗಿ ಬಿಡುಗಡೆಗೆ ಸಿದ್ಧವಾಗಿರುವುದು ಸಂತೋಷದ ಸಂಗತಿ" ಎಂದು ತಮ್ಮ ಹರ್ಷವನ್ನು ವ್ಯಕ್ತಪಡಿಸಿದ್ದರು.

ಸಂಪುಟದ ಬಿಡುಗಡೆಯನ್ನು ನೆರವೇರಿಸುತ್ತ ಡಾ. ಗಾಯಿ ಅವರು ಮಾತನಾಡಿ 'ಎಪಿಗ್ರಾಫಿಯ ಕರ್ನಾಟಿಕ'ದ ಕರ್ತೃ ರೈಸ್ ಸಾಹೇಬರು ಅದ್ಭುತ ಕಾರ್ಯವನ್ನು ಮಾಡಿದ್ದಾರೆ; ಅವರು ಹುಟ್ಟಿದುದು 1837ರಲ್ಲಿ; ಅದೇ ವರ್ಷದಲ್ಲಿಯೇ ಪ್ರಿನ್ಸೆಪ್ ಅವರು ಬ್ರಾಹ್ಮಿಲಿಪಿಯನ್ನು ಓದಿದುದು. ಇದು ಒಂದು ಯೋಗಾಯೋಗ' ಎಂದರು. ಮುಂದುವರಿದು ರೈಸ್ ಅವರು 1884ರಲ್ಲಿ ಆರಂಭಿಸಿದ 'ಎಪಿಗ್ರಾಫಿಯ' ಮಾಲಿಕೆಯು ಭಾರತದಲ್ಲಷ್ಟೆ ಅಲ್ಲ ಪ್ರಪಂಚದ ಇತರ ಯಾವ ಭಾಗದಲ್ಲೇ ನೋಡಿದರೂ ಮೊದಲನೆಯದಾಗಿ ಆರಂಭವಾದುದು. ಎಪಿಗ್ರಾಫಿಯ ಇಂಡಿಕ ಕೂಡ ಎರಡು ವರ್ಷಗಳ ನಂತರ ಎಂದರೆ 1886ರಲ್ಲಿ ಆರಂಭವಾಯಿತು. ಗ್ರೀಕ್ ದೇಶದಲ್ಲಿ ಇಂಥ ಮಾಲಿಕೆ ಆರಂಭವಾದುದು 1898ರಲ್ಲಿ. ಇವರು ಮಾಡಿದ ಕೆಲಸ ಪ್ರಪಂಚದಲ್ಲಿ ಅದ್ಭುತ ಕೆಲಸ ಎನ್ನಲಡ್ಡಿಯಿಲ್ಲ. 'ಎಪಿಗ್ರಾಫಿಯ ಕರ್ನಾಟಿಕ' ಬಿಟ್ಟರೆ ಮತ್ತೆ ಭಾರತದ ಬೇರೆಲ್ಲೂ ಇಷ್ಟು ವಿಶಾಲವಾಗಿ ಇಂತಹ ಕಾರ್ಯ ನಡೆದಿಲ್ಲ. ಆಂಧ್ರದಲ್ಲಿ ಕೆಲವು ವರ್ಷಗಳಿಂದೀಚೆಗಷ್ಟೇ ಇಂತಹ ಎರಡು ಸಂಪುಟಗಳು ಹೊರಬಂದುವು. ತಮಿಳುನಾಡಿನಲ್ಲಿ ಇತ್ತೀಚೆಗೆ ಒಂದು ಸಂಪುಟ ಪ್ರಕಟವಾಗಿದೆ. ಹೀಗಿರುವಲ್ಲಿ 1884ರಲ್ಲಿಯೇ ಇಂಥ ಕಾರ್ಯವನ್ನು ಆರಂಭಿಸಿ 9000 ಶಾಸನಗಳನ್ನು ಸಂಗ್ರಹಿಸಿ ಪ್ರಕಟಿಸುವ ದುಸ್ತರ ಮತ್ತು ಸಾಹಸಕಾರ್ಯವನ್ನು ರೈಸ್ ಸಾಹೇಬರು ಕೈಗೊಂಡದ್ದು ಪ್ರಶಂಸನೀಯ' ಎಂದರೆ. ಪರಿಷ್ಕೃತ ಸಂಪುಟದ ವಿಷಯವಾಗಿ ಮಾತನಾಡುತ್ತ 'ಎಪಿಗ್ರಾಫಿಯ ಕರ್ನಾಟಿಕ'ದ ಪ್ರತಿಗಳು ದೊರೆಯುವುದು ದುರ್ಲಭವಾಗಿದ್ದುವು. ಅವುಗಳ ಪರಿಷ್ಕರಣ ಹಾಗೂ ಪುನರ್ಮುದ್ರಣ ಕಾರ್ಯ ಅತ್ಯಗತ್ಯವಾಗಿತ್ತು. ಇಂಥ ಪರ್ವಕಾಲದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯು ಈ ಕಾರ್ಯವನ್ನು ವಹಿಸಿಕೊಳ್ಳಲು ಮುಂದೆ ಬಂದು ಕೆಲವು ತಿಂಗಳಲ್ಲೆ ಮೊದಲ ಸಂಪುಟವನ್ನು ಸಿದ್ಧಪಡಿಸಿದೆ; ಹಿಂದಿನ ಆವೃತ್ತಿಯಲ್ಲಿ ಪ್ರಕಟವಾಗಿದ್ದ 74 ಶಾಸನಗಳ ಜೊತೆಗೆ 32 ಹೊಸಶಾಸನಗಳನ್ನು ಸೇರಿಸಿ, ಪರಿಷ್ಕರಿಸಿ ಸುಂದರವಾದ ಮುದ್ರಣದೊಡನೆ ಹೊರ ತರುತ್ತಿರುವುದಕ್ಕೆ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರನ್ನೂ ಸಂಪಾದಕವರ್ಗದವರನ್ನೂ ಅಭಿನಂದಿಸುತ್ತೇವೆ" ಎಂದರು.

ಅಧ್ಯಕ್ಷರ ಭಾಷಣದಲ್ಲಿ ಕುಲಪತಿ ಪ್ರೊ. ದೇ. ಜವರೇಗೌಡರು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರ ಪ್ರಯತ್ನದಿಂದ ಸರ್ಕಾರದ ಪೂರ್ಣ ಧನಸಹಾಯದೊಡನೆ ಈ ಯೋಜನೆ ಕಾರ್ಯಗತ

ವಾಗುತ್ತಿದೆಯೆಂದೂ ವಿಶ್ವವಿದ್ಯಾನಿಲಯದಿಂದ ಇದಕ್ಕಾಗಿ ಧನಸಹಾಯವೊದಗಿಸಿಲ್ಲವೆಂದೂ ತಿಳಿಸಿ ಅಧ್ಯಯನ ಸಂಸ್ಥೆ ಈ ಯೋಜನೆಯನ್ನು ವಹಿಸಿಕೊಂಡ ಬಗ್ಗೆ ಬಂದ ಟೀಕೆಯನ್ನು ಅಲ್ಲಗಳೆದರು. ಮೊದಲ ಸಂಪುಟದ ವಿಷಯವಾಗಿ ಮಾತನಾಡುತ್ತ ಮೊದಲಿದ್ದ ಎಪ್ಪತ್ತೈದು ಶಾಸನಗಳ ಜೊತೆಗೆ ಮತ್ತೆ ಮೂವತ್ತೆರಡು ಹೊಸ ಶಾಸನಗಳನ್ನು ಹೊಸದಾಗಿ ಸೇರಿಸಿರುವುದನ್ನು ನೋಡಿದರೆ ಇನ್ನೂ ಬೆಳಕಿಗೆ ಬಾರದ ಶಾಸನಗಳು ಎಷ್ಟೊಂದು ಉಳಿದಿರಬಹುದೆಂಬುದನ್ನು ಸೂಚಿಸುತ್ತದೆ; ಕೆಲಸಮಾಡು ವವರಿಗೆ ಇಲ್ಲಿ ವಿಸ್ತಾರವಾದ ಅವಕಾಶವಿದೆ ಎಂದು ಹೇಳಿದರು. ರೈಸ್ ಅವರ ವಿಚಾರವಾಗಿ ಮಾತನಾಡುತ್ತ ಕನ್ನಡ–ಇಂಗ್ಲಿಷ್ ನಿಘಂಟನ್ನು ರಚಿಸಿದ ರೆವರೆಂಡ್ ಕಿಟೆಲ್ ಮತ್ತು ಎಪಿಗ್ರಾಫಿಯ ಕರ್ನಾಟಿಕ ಸಂಪುಟ ಗಳನ್ನು ಪ್ರಕಟಿಸಿದ ಬಿ. ಎಲ್. ರೈಸ್ ಕನ್ನಡಕ್ಕಾಗಿ ಅದ್ಭುತವಾದ ಕೆಲಸಮಾಡಿರುವರೆಂದೂ ಅವರಿಬ್ಬರೂ ಕನ್ನಡದ ಋಷಿಗಳೆಂದೂ ಹೇಳಿದರು. ಸಂಪಾದಕ ವರ್ಗವನ್ನು ಕುರಿತು ದಕ್ಷರೂ ಅನುಭವಿಗಳೂ ಆದವರು ಈ ಕೆಲಸವನ್ನು ನಿರ್ವಹಿಸುತ್ತಿದ್ದಾರೆ. ಈ ಯೋಜನೆ ಯಶಸ್ವಿಯಾಗಿ ಮುಂದುವರಿಯುವುದರಲ್ಲಿ ಸಂಶಯ ವಿಲ್ಲ ಎಂದು ಮೆಚ್ಚಿಕೆಯನ್ನು ಸೂಚಿಸಿದರು.

ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

—ಎಂ. ಹನುಮಂತರಾವ್

ಕಾವ್ಯಾವಲೋಕನ

ಧೇನುಕ ಪುರಾಣ

ಸ್ವಭಾವತಃ ಕಾವ್ಯಕುತೂಹಲಿಯಾಗಿರುವ ಕವಿವರ್ಯ ಪು.ತಿ.ನ. ಅವರು ಕೇವಲ ಕನಸುಗಾರರಲ್ಲ; ಬುದ್ಧಿಜೀವಿಯೂ ಹೌದು. ತಾವು ಬಾಳುತ್ತಿರುವ ಸಮಾಜದ ಗಟ್ಟಿನೆಲದಲ್ಲಿ ನಿಂತು ಪ್ರಕೃತಿಯ ವ್ಯಾಪಾರವನ್ನು ಹೇಗೋ ಹಾಗೆಯೇ ದೈನಂದಿನ ಜನಜೀವನವನ್ನೂ ಬಗೆಗಣ್ಣಿನಿಂದ ಕಾಣಬಲ್ಲವರು; ಜಿಜ್ಞಾಸೆ ನಡಸಿ, ಸ್ಪಂದಿಸಿ, ತಮ್ಮ ಒಲವು ನಿಲವಿನ ಅನಿಸಿಕೆಗಳನ್ನು ಧೈರ್ಯವಾಗಿ ತೋಡಿಕೊಳ್ಳುವಂಥ, ಹಿತವಚನ ನುಡಿವಂಥ ಪ್ರಾಜ್ಞ ಹಿರಿಯರೂ ಹೌದೆಂಬುದನ್ನು ಅವರ 'ಧೇನುಕ ಪುರಾಣ' ಸ್ಪಷ್ಟಪಡಿಸುತ್ತದೆ.

ಇದು 'ಮುಸಿನಗೆಯೇ ಪ್ರಧಾನವಾಗಿರುವ ವಿಚಾರಲಹರಿಯ ಹೊತ್ತಗೆ' ಎಂದು ಹೇಳಿಕೊಂಡಿರುವರಾದರೂ ವಿಚಾರಲಹರಿಗೊಂದು ನಿರ್ದಿಷ್ಟಗುರಿ ಇದ್ದು ವಿಶಿಷ್ಟ ಪ್ರಬಂಧಗಳಿಂದ ಕೂಡಿರುವುದನ್ನು ಓದುಗರು ತಕ್ಷಣ ಮನಗಾಣಬಹುದಾಗಿದೆ. ಉತ್ತಮ ಪ್ರಬಂಧದ ಅತ್ಯಾವಶ್ಯಕ ಅಂಶಗಳಾದ ವಿಚಾರಶೀಲತೆ, ಭಾವಪ್ರಖರತೆ, ಏಕಮುಖತೆ, ಕುತೂಹಲ ಕೆರಳಿಸುವಂಥ ಘಟನಾವಳಿ, ನಿರೂಪಣಾ ವೈಖರಿ, ಸ್ವಾನುಭವದ ಮುದ್ರೆಯೊತ್ತಿದ ವಿಶಿಷ್ಟ ಶೈಲಿ–ಮುಂತಾದವೆಲ್ಲ ಇಲ್ಲಿ ನಿಚ್ಚಳವಾಗಿವೆ. ಕನ್ನಡದಲ್ಲಿ ವಿರಳವಾಗಿರುವ ಉತ್ತಮ ಪ್ರಬಂಧಗಳ ಮಧ್ಯೆ ಎತ್ತರಕ್ಕೇರಿ ನಿಂತು ಮತ್ತೆ ಮತ್ತೆ ಓದಿಸಿಕೊಳ್ಳುವ ಭಾಗ್ಯ ಪಡೆಯುವ ಧೇನುಕಪುರಾಣ ಒಂದು ವಿಶಿಷ್ಟ ಕೃತಿಯೆಂಬುದರಲ್ಲಿ ಅನುಮಾನವಿಲ್ಲ.

ಗ್ರಂಥದ ಮೊದಲ ಹಾಳೆ ಮಗುಚುತ್ತಿದ್ದಂತೆಯೇ 'ಮಸಾಲೆದೋಸೆ' ಕಣ್ಸೆಳೆಯುತ್ತದೆ; ಮುಂಬರಿದಂತೆಲ್ಲ ದೋಸೆಯ ಕಂಪು ಮೂಗಿಗೆ ಬಡಿದು ಕಣ್ಣು ಮತ್ತಷ್ಟು ಕಾತರಗೊಂಡು ಮುಂದೋಡುತ್ತಿರುವಾಗ ನಾಲಗೆ ನೀರೂರುತ್ತದೆ. ಮಸಾಲೆದೋಸೆ ನಿದಾನವಾಗಿ ತನ್ನ ಸುರುಳಿಯನ್ನು ಬಿಚ್ಚಿಕೊಂಡು ಸ್ವರ್ಣೋದರ ಹೊಳೆಸುತ್ತ ಗರಿಗೆದರಿನಿಲ್ಲುತ್ತದೆ. ಕೆಲವು ಕ್ಷಣಗಳಲ್ಲೇ ಅದು ನೆಲೆಯೂರಿನ ಗಡಿದಾಟಿ ಹಾರಿ ನಮ್ಮ ದೇಶವನ್ನೂ ದಾಟಿ ನಾಲ್ಕೂ ದಿಕ್ಕಿನತ್ತ ಕಣ್ಣು ಹೊರಳಿಸುತ್ತ ವಿಶ್ವಸಂಚಾರಿಯಾಗುತ್ತದೆ. ಲೋಕಪ್ರಿಯ ತಿಂಡಿ ತಾನೆಂದು ಹೆಮ್ಮೆಪಟ್ಟುಕೊಳ್ಳುತ್ತದೆ.

ಇಂಥ ವಿಶ್ವವ್ಯಾಪಕತೆಯನ್ನುಳ್ಳ ತಿಂಡಿಯನ್ನು ಕಾಣಿಕೆಕೊಟ್ಟವರು ನಾವೆಂದು ನಾಗರಿಕ ಕನ್ನಡಿಗರು ಬೆನ್ನು ತಟ್ಟಿಕೊಳ್ಳುತ್ತಿರುವಾಗ, ಈ ವಿಷಯದಲ್ಲಿ ನಾನೇನೂ ಕಡಮೆಯಲ್ಲ ಈಗ; ನನ್ನ ಹಳ್ಳಿಗೂ ಮಸಾಲೆ ದೋಸೆಯ ರಸ ಇಳಿದಿದೆ, ಎಂದು ಹಳ್ಳಿಯ ಹೈದನೂ ಮೀಸೆತಿರುವುತ್ತ ದಿಂರಂಗನಾಗಿ ನಿಲ್ಲುತ್ತಾನೆ. ಈ ಮಸಾಲೆಯ ದೋಸೆಯ ವಿಶಿಷ್ಟ ರುಚಿ, ರೂಪ, ವಿಲಾಸ, ವಿಭ್ರಮಗಳಿಗೆ ಮಾರುಹೋದ ಪ್ರಬಂಧಕಾರರು ತುಂಬ ನಾಜೂಕಾಗಿ, ನಾಗರಿಕವಾಗಿ ತಯಾರಾಗುವ ಅದರ ಅತ್ಯಂತ ಕಲಾತ್ಮಕ, ವಿವರಣಾತ್ಮಕವಾದ ಜೀವಂತ ಚಿತ್ರವನ್ನು ನಮ್ಮ ಮುಂದಿಡುತ್ತಾರೆ. ಇಂಥದೊಂದು ಸಂಕೀರ್ಣ ಖಾದ್ಯ ವಿಶೇಷದ ರಸವದ್ವರ್ಣನೆ ಬೇರೆಲ್ಲೂ ಪಾಕಶಾಸ್ತ್ರದ ಪುಸ್ತಕದಲ್ಲೂ ಬಂದಿಲ್ಲವೆಂದು ಹೇಳಬಹುದು.

ಒಂದು ಜನಾಂಗವನ್ನು ಒಂದುಗೂಡಿಸುವುದು, ವಿಂಗಡಿಸುವುದು ಅಡಿಗೆಮನೆ; ಬಿರಿಯಾನಿ, ಫಲಾವುಗಳ ಮುಖಾಂತರ ಮಹಮ್ಮದೀಯರ ಬಾಂಧವ್ಯ ಕುದುರುವಷ್ಟು ತೀವ್ರವಾಗಿ ಕುರಾನ್ ಪಠನದಿಂದ, ಉರ್ದುಭಾಷೆಯಿಂದ ಆಗುವುದಿಲ್ಲ. ಆಹಾರ ವೈಷಮ್ಯವಿರುವವರೆಗೂ ಆಂಗ್ಲ ಆಂಗ್ಲ, ಭಾರತೀಯ ಭಾರತೀಯ; ಉತ್ತರ ದಕ್ಷಿಣ ಕರ್ನಾಟಕ ಒಂದಾಗಬೇಕೆಂಬುದರ ಜೀವಾಳ ಭಾಷಣದಲ್ಲಿಲ್ಲ, ಭಕರಿಯಲ್ಲಿದೆ; ಏಕಾನ್ನದಿಂದ ಏಕ ಜನಾಂಗ, ಬಹ್ವನ್ನದಿಂದ ಬಹುಜನಾಂಗ–ಇಂಥ ಮೊನಚಾದ ಹೇಳಿಕೆಗಳು ತುಂಬ ಪ್ರತಿಭಾಪೂರ್ಣವಾಗಿವೆ. ಹೀಗಿರುವಾಗ ಮಸಾಲೆ ದೋಸೆಯಂಥ ಕ್ರಾಂತಿಕಾರಕ ತಿಂಡಿ,

ತೀರ್ಥಗಳು ಜನಾಂಗದ ಒಕ್ಕಟ್ಟು ಬಿಕ್ಕಟ್ಟುಗಳನ್ನು ವಿವಿಧ ಸಂಸ್ಕೃತಿಯ ಸಾಂಕರ್ಯವನ್ನು ತರುತ್ತವೆಂಬುದನ್ನು ಅಲ್ಲಗಳೆವಂತಿಲ್ಲ. ಹೀಗಾದರೂ ವಿಶ್ವದ ಬಾಂಧವ್ಯ ಬಲಗೊಳ್ಳಲೆಂದು ಹಾರೈಸುವ ಪ್ರಬಂಧಕಾರರ ಸದಿಚ್ಛೆ 'ಮಸಾಲೆ ದೋಸೆ'ಯ ಮುಖಾಂತರ ಸಮರ್ಥವಾಗಿ ಪ್ರಕಟಗೊಂಡಿದೆ

ಓಟಿನಕಾಲ ಬಂತೆಂದರೆ ಸಾಕು, ಇಡೀ ದೇಶಕ್ಕೆ, ಪ್ರಪಂಚಕ್ಕೇ ಹೊಸ ಹುರುಪು ಬರುತ್ತದೆ, ವಸಂತ ಕಾಲದ ದಟ್ಟ ಕಾಡಾಗಿಬಿಡುತ್ತದೆ ಭಾರತದಂಥ ಬಹುಸಂಖ್ಯಾಕ ಜನತಾ ದೇಶ. ಇಪ್ಪತ್ತೊಂದು ತುಂಬಿದವರೆಲ್ಲರೂ ಮತಚಲಾಯಿಸುವ ಹಕ್ಕು ಪಡೆದ ಪ್ರಜೆಗಳಾಗಿ ತಮ್ಮನ್ನು ಆಳುವವರನ್ನು ಚುನಾಯಿಸುವ ಸುಸಂಧಿ. ಆದರೆ ಅದರ ಮುಂದಿನ ಪರಿಣಾಮದ ಅರಿವಿಲ್ಲದ ಉತ್ಸಾಹಿ ಓಟುಗನನ್ನು ಪ್ರಬಂಧಕಾರರು ರೇಷ್ಮೆ ಹುಳುವಿಗೆ ಹೋಲಿಸಿರುವುದು ಅತ್ಯಂತ ಸಾರ್ಥಕವೂ ಸುಂದರವೂ ಆಗಿದೆ. ಗೆದ್ದ ನಾಯಕನಾದರೋ ಮೊದಲು ಓಟಾರ್ಥಿಯಾಗಿ ವಾಮನನಂತಿದ್ದವನು ಗೆದ್ದ ಬೆಳಿಗ್ಗೆಯೇ ತ್ರಿವಿಕ್ರಮನೂ, ಆಳುವ ಮಹಾಪ್ರಭುವೂ, ಅನೇಕ ವೇಳೆ ಕೀಚಕನೂ ಆಗಿ ಮೆರೆಯುವುದನ್ನು ಸೊಗಸಾಗಿ ಹೇಳಿದ್ದಾರೆ. ಆದ್ದರಿಂದ ಓದುಗ ಎಚ್ಚರದಿಂದಿರಬೇಕು. ನಮ್ಮ ಸರ್ಕಾರವನ್ನು ನಮ್ಮ ಹಿತದೃಷ್ಟಿಯಿಂದ ಬಿಸಿನೀರಿನಲ್ಲದ್ದಿ ತಣ್ಣೀರಿನಲ್ಲಿ ಮುಳುಗಿಸಲೂ ಹಿಂಜರಿಯಬಾರದೆಂದು ಸೂಚನೆ ಕೊಡುತ್ತಾರೆ. ಉತ್ತಮ ಭಾಷಣದ ಧಾಟಿಯಲ್ಲಿ ಕೈಯ್ಯಲ್ಲಿ ಚಾವಟಿ ಹಿಡಿದು ಸಾಗುವ 'ಓಟಿನ ಓಟ' ಬೋಧಪ್ರದವಾಗಿದೆ.

'ಈ ಕಾಲದಲ್ಲಿ ಯಾರಿಗೆ ತಲೆನೋವಿಲ್ಲ?' ಎಂಬ ಗಂಡುಸವಾಲನ್ನೆಸೆದು, ಜನರಿಗೆ ತಮ್ಮ ತಲೆಯ ಅಸ್ತಿತ್ವ ತಲೆನೋವು ಬಂದಾಗ ಮಾತ್ರ ಗೊತ್ತಾಗುತ್ತದೆ. ಲೆಕ್ಕಕ್ಕೆ ತಲೆಗಳಿದ್ದರೂ ಅದರ ಪ್ರಯೋಜನ ಪಡೆವವರು ತೀರ ಸ್ವಲ್ಪವೆಂದು ತುಂಬ ಸ್ವಾರಸ್ಯವಾಗಿ ವಿವೇಚಿಸಿದ್ದಾರೆ 'ತಲೆಯೋ ಹೊಟ್ಟೆಯೋ' ಪ್ರಬಂಧದಲ್ಲಿ. ನಮ್ಮ ಪೂರ್ವಜರಾದರೆ ಹೊಟ್ಟೆಯ ಪಾಡಿಗಾಗಿ ತಲೆಯನ್ನು ಮಾರಿಕೊಳ್ಳದೆ, ಮರೆತುಬಿಡದೆ ಸಾರ್ಥಕ ಜೀವನ ನಡಸುತ್ತಿದ್ದುದನ್ನು ನೆನೆದು ಅಭಿಮಾನ ಪಡುತ್ತಾರೆ. ಹೊಟ್ಟೆಯ ಸೆಳೆವಿನಿಂದ ನಮ್ಮ ತಲೆಯನ್ನು ಬಿಡಿಸಿಕೊಳ್ಳುವ ವಿದ್ಯೆಯೇ 'ವಿದ್ಯೆ' ಎಂದು ಮುಂತಾಗಿ ಪ್ರತಿಪಾದಿಸುವ ಈ ಪ್ರಬಂಧ ಪ್ರೌಢವಾಗಿದೆ, ವಿಚಾರಪ್ರಚೋದಕವಾಗಿದೆ.

'ನೋಟುಗಳ ನೋಟ' ಕೂಡ ವಿಶಿಷ್ಟ ಬಗೆಯದು. 'ಕೆಲಸವಿಲ್ಲದಾಗ ಜೇಬಿಗೆ ಕೈಹಾಕಿ ಚಿಲ್ಲರೆಯನ್ನೂ ನೋಟುಗಳಿದ್ದರೆ ಅವನ್ನೂ ಎಣಿಸುತ್ತಾ ಕಾಲ ಕಳೆಯುವುದು ನನ್ನ ಪದ್ಧತಿ' ಎಂದು ತಮ್ಮ ಜಿಜ್ಞಾಸಾತ್ಮಕ ಸ್ವಭಾವಕ್ಕೆ ಮುನ್ನುಡಿದು ಮುಂಬರಿದ ಪ್ರಬಂಧಕಾರರು ನಮ್ಮ ನೋಟುಗಳಲ್ಲಿ ಬಳಸಲಾದ ಪ್ರತಿಯೊಂದು ಸಂಕೇತವನ್ನು ಲಕ್ಷಿಸಿ ವಿಶ್ಲೇಷಿಸಿ, ಬಹುಸೂಕ್ಷ್ಮವಾಗಿ ಪರಿಶೀಲಿಸಿ ವ್ಯಾಖ್ಯಾನ ಮಾಡಿರುವ ರೀತಿ ತುಂಬ ಸೊಗಸಾಗಿದೆ. 'ಎಷ್ಟು ನೋಟುಗಳೋಡಾಡಿದರೂ ನಾಡು ಮಾತ್ರ ನಿಂತಲ್ಲಿಯೇ ನಿಂತಿದೆ..." ಎಂದು ತೆಗೆವ ಸಖೇದಾಶ್ಚರ್ಯಪೂರಿತ ಉದ್ಗಾರಕ್ಕೆ ಎಲ್ಲ ವಿಚಾರವಂತರೂ ದನಿಗೂಡಿಸುವುದಲ್ಲದೆ ಮತ್ತೇನು ಮಾಡಲು ಸಾಧ್ಯ?

ಹತ್ತು ರೂಪಾಯಿ ನೋಟಿನ ಹಿಂಬದಿಯ ಚಿತ್ರದಲ್ಲಿರುವ ಹಾಯಿದೋಣಿಯಲ್ಲಿ ವಿಶೇಷಧ್ವನಿ ಅಡಗಿರುವುದನ್ನು ಓದುಗರಿಗೆ ವಿವರಿಸಿದ್ದಾರೆ. ಎಣ್ಣೆಬೀಜ, ಸೆಣಬು, ಹತ್ತಿ, ಕಾಫಿ ಇತ್ಯಾದಿಯಾದ ಬಡವರ ದುಡಿತದ ಕಚ್ಚಾಮಾಲುಗಳನ್ನು ನಾವು ಹೊರದೇಶಗಳಿಗೆ ಕಳಿಸಿ ಪ್ರತಿಯಾಗಿ ಬುದ್ಧಿವಂತರು ತಯಾರಿಸಿದ ಸಿದ್ಧಸರಕುಗಳನ್ನು ತರಿಸಿಕೊಳ್ಳುವ ನಮ್ಮವರ ಮೌಢ್ಯದ ಸ್ಥಿತಿ ಕಂಡು ವ್ಯಥೆಪಡುತ್ತಾರೆ, ನಾಚಿಕೊಳ್ಳುತ್ತಾರೆ. "ಅಂತೂ ಬೆಣ್ಣೆಯನ್ನು ಹಾಯಿದೋಣಿಯಲ್ಲಿ ಕಳಿಸಿ ಬಂದೂಕವನ್ನು ಜಹಜಿನಲ್ಲಿ ತರಿಸುವ ವ್ಯವಹಾರ ಹತ್ತು ರೂಪಾಯಿನ ಚಹರೆಯಲ್ಲಿ ಪೊಳವು ಹಾಕಿದೆ" ಎಂಬ ನುಡಿಯಲ್ಲಿ ನಮ್ಮ ರಾಷ್ಟ್ರದ ರೀತಿನೀತಿಯನ್ನು ಕುರಿತ ಸತ್ಯ ಚಿತ್ರವನ್ನು ಸೆರೆಹಿಡಿದುಕೊಟ್ಟಿದ್ದಾರೆ. ಕೊನೆಗೆ ನೂರು ರೂಪಾಯಿನ ನೋಟಿನ ನೋಟ ಕುರಿತು ವಿವೇಚಿಸಿ ನಾಡು ಕಾಡನ್ನೆಲ್ಲ ನುಂಗುತ್ತಿರುವುದರ ಬಗೆಗೆ ತಮಗಿರುವ ಕಳವಳವನ್ನು ವ್ಯಕ್ತಪಡಿಸುತ್ತಾರೆ. ಎಲ್ಲಕ್ಕಿಂತ ಹೆಚ್ಚಾಗಿ ಯಾವೊಂದು ನೋಟಿನಲ್ಲೂ ಬಡಜನರ ಸುಳಿವೇ ಇಲ್ಲದೆ 'ಮಿಂಚಿನ ಮನೆ, ಹೊಂಚುವ ಹುಲಿ'ಗಳೇ ಇರುತ್ತಿರುವ ಈ ನೋಟುಗಳಿಗೆ ಮಾನವೀಯತೆ ಬರುವುದೆಂದಿಗೆ? ಎಂದು ಸಂದೇಹ ಪಡುತ್ತಾರೆ. ತೆನೆಮೇಗಣ ಹಕ್ಕಿಗಳಂತಿರುವ ನಮಗೆ ಒಂದು ರೂಪಾಯಿನ ನೋಟು ಸದಾ ಸಿಕ್ಕುತ್ತಿದ್ದು, ನಾಡು ಸಮೃದ್ಧವಾಗಿ ಸುಖಜೀವನ ನಮ್ಮದಾಗಲೆಂದು ಹಾರೈಸುತ್ತಾರೆ.

ಹೊಸಬೆಳಕಿನ, ನವಚೇತನ ತುಂಬುವ ರಾಷ್ಟ್ರೀಯ ಹಬ್ಬವಾದ ದೀಪಾವಳಿಯ ದಿನವಾದರೂ ನಮ್ಮ ಯುವಕ ಯುವತಿಯರು ಆದಷ್ಟು ಮಟ್ಟಿಗೆ ತಮ್ಮ ಪ್ರಾಚೀನರ ಆಚಾರ, ವ್ಯವಹಾರ, ಉಡಿಗೆ, ನಡಿಗೆಗಳನ್ನು ಅಭಿನಯಿಸಿ ತೋರಿದರೂ ಸಂಪ್ರದಾಯಸ್ಥರಾದ ವಯಸ್ಕರಾದ ಹಿರಿಯರಿಗೆ ತಾವು ತೀರ ಹಳಬರು, ಬೆಲೆ ಕಳೆದುಕೊಂಡವರೆಂಬ ಭಾವನೆ ಕಡಮೆಯಾಗುತ್ತದೆ, ಬಾಳಿನಲ್ಲಿ ಹೊಸ ಬೆಳಕು ಚಿಮ್ಮು ತ್ತದೆಂಬುದು ಇವರ ಸದಾಶಯ. ಈ ನಟನೆಗಾಗಿ ಬೇಕಾದ ಸಿದ್ಧತೆ, ತಂತ್ರಗಳನ್ನು ತುಂಬ ಸ್ವಾರಸ್ಯವಾಗಿ ವಿವರಿಸಿದ್ದಾರೆ. ಈ ರೀತಿ ಅನುಕರಣಶೀಲ ಪೀಳಿಗೆಗೆ ಪಥ್ಯವಾಗಲೂಬಹುದು.

'ಧೇನುಕೋಪಾಖ್ಯಾನ' ಹಲವು ದೃಷ್ಟಿಯಿಂದ ವಿಶಿಷ್ಟವಾದ ಪ್ರಬಂಧ. ತಮ್ಮ ಗ್ರಂಥಕ್ಕೆ ನಾಮ ಕರಣ ಮಾಡುವಷ್ಟು' ಮಾನವರು ಸದಾನೋಡಿ ಕಲಿಯಬೇಕಾಗುವಷ್ಟು ಬುದ್ಧಿಶಕ್ತಿ, ಭಾವಶಕ್ತಿ, ದೈಹಿಕಶಕ್ತಿ ಹಾಗೂ ವಿಶ್ವವ್ಯಾಪಿಯಾದ 'ಚರಿತ್ರೆ'ಯನ್ನು ಪಡೆದು ಬಂದಿರುವ ಕತ್ತೆಯ ಮಹತ್ವನ್ನು ಬಿತ್ತರಿಸುವುದೇ ಮುಖ್ಯೋದ್ದೇಶ. ಪಾಶ್ಚಾತ್ಯ ಪೌರ್ವಾತ್ಯ ಪುರಾಣೇತಿಹಾಸಗಳ ಕಾಲದಿಂದ ಈ ದಿನದ ವರೆಗೆ ಕತ್ತೆ ಮಾನವನ ತೊತ್ತಾಗಿ ಬಾಳುತ್ತ ಬಂದಿರುವ ಪವಾಡ ಸದೃಶ ಘಟನೆಗಳನ್ನು ತುಂಬ ರಸ ವತ್ತಾಗಿ ಚಿತ್ರಿಸಿದ್ದಾರೆ. ಇಲ್ಲಿನ ಸಂಭಾಷಣಾ ರೀತಿ, ವ್ಯಕ್ತವಾಗಿರುವ ಆತ್ಮೀಯತೆ, ಜೀವಂತತೆ, ಕಲಾ ಪೂರ್ಣವಾಗಿವೆ.

ತಮಗೆ ಎಳಮೆಯಿಂದಲೂ ಬಂಧುವಾಗಿ, ಗೆಳೆಯನಾಗಿ ಗುರುವಾಗಿ ಉಳಿದು ಬಂದಿರುವ ಧೇನುಕ ಮಹಾಶಯನನ್ನು ಕುರಿತು ಪ್ರಬಂಧಕಾರರಿಗೆ ವಿಶೇಷ ಪ್ರೀತಿ, ಭಕ್ತಿ, ಅನನ್ಯ ವಿಶ್ವಾಸ. ತನ್ನ ಅಪೂರ್ವ ಸೌಂದರ್ಯವರ್ಧನೆಗೆ ಕತ್ತೆಯ ಹಾಲನ್ನು ಬಳಸಿಕೊಂಡ ವಿಶ್ವಸುಂದರಿ ಕ್ಲಿಯೋಪಾತ್ರ ಒಂದು ಕಡೆ ಸುಳಿದರೆ, ಮತ್ತೊಂದೆಡೆ ಕತ್ತೆಯ ದವಡೆ ಮೂಳೆಯಿಂದ ತನ್ನ ವೈರಿಗಳನ್ನೆಲ್ಲ ಸದೆಬಡಿದ ಬೈಬಲ್ಲಿನ ಸ್ಯಾಂಸನ್ನಿನ ರೋಮಾಂಚಕಕಥೆ ಕಣ್ಮುಂದೆ ನಿಲ್ಲುತ್ತದೆ. ಯೇಸುಸ್ವಾಮಿಯು ಕತ್ತೆಯ ಮೇಲೆ ಮೆರವಣಿಗೆ ಹೊರಟದ್ದು ಒಂದಂಶವಾದರೆ ಶ್ರೀಕೃಷ್ಣ ಪರಮಾತ್ಮ ಹುಟ್ಟಿದಾಗ ಮೊದಲು ಮಂಗಳಸ್ವನಗೈದು ಜಗತ್ತಿಗೆ ಸಾರಿದ್ದು ಕತ್ತೆ ಮಾತ್ರ ಎಂದು ಹೇಳಿರುವುದನ್ನು ಗಮನಿಸಬಹುದು. ಕತ್ತೆಯ ಜಾತಿಬುದ್ಧಿಯಾದ ಮೊಂಡುತನ ವನ್ನು ಕುರಿತ ಘಟನೆಗಳ ವರ್ಣನೆ ಎಂಥವರ ತುಟಿಯನ್ನೂ ಅರಳಿಸುತ್ತದೆ. ಮೆದುಳಿನಲ್ಲಿ ಮಿಂಚು ಸಂಚರಿಸುವಂತೆ, ತಲೆದೂಗುವಂತೆ ಮಾಡುತ್ತದೆ. 'ದುಡಿತಕ್ಕೂ ಬಡಿತಕ್ಕೂ ಅಂಜಬೇಡಿ, ನಿಮ್ಮ ಬುದ್ಧಿ ನಿಮ್ಮ ಕೈಲಿರಲಿ' ಎಂದು ಬೋಧಿಸಿದ ಮಹಾತ್ಮರ ಮಾತು ಕೃತಿಗಿಳಿದು ಬದುಕಿ ಬಂದಿರುವುದು ಗಾರ್ದಭ ಪ್ರಪಂಚದಲ್ಲಿ ಮಾತ್ರವೆಂಬುದು ಇವರ ಅಭಿಪ್ರಾಯ. ಹೀಗಾಗಿ ಮಹಾಪುರುಷರ ಶ್ರೇಣಿಗೇರಿದೆ ಕತ್ತೆ ಇಲ್ಲಿ.

ಹೀಗೆ ತಮ್ಮದೇ ಒಂದು ಪರಿಭಾಷೆ, ಒಂದು ಧರ್ಮ, ನೀತಿ, ಪ್ರಪಂಚವನ್ನು ರೂಪಿಸಿಕೊಂಡು ಇಡೀ ಪ್ರಾಣಿಪ್ರಪಂಚದಲ್ಲೇ ವಿಶಿಷ್ಟವಾಗಿ ಬಾಳುತ್ತಿರುವ ಕತ್ತೆಯ ಪುರಾಣ ನಿಜಕ್ಕೂ ರೋಚಕವಾಗಿದೆ. ಜ್ಞಾನಪ್ರಚೋದಕವಾಗಿದೆ. ಈ ಮುಖಾಂತರ ಉತ್ತಮೋತ್ತಮ ಪ್ರಬಂಧ ಕನ್ನಡಿಗರಿಗೆ ದೊರಕಿದೆ.

ಇದು ಶ್ರೀಸಾಮಾನ್ಯನ ಯುಗವೆಂದು ರಾಷ್ಟ್ರಕವಿ ಕುವೆಂಪು ಎದೆತುಂಬಿ ಘೋಷಿಸಿರುವಂತೆಯೇ ಪು.ತಿ.ನ. ಅವರೂ ತಮ್ಮನ್ನು ಶ್ರೀಸಾಮಾನ್ಯನೊಂದಿಗೆ ಸಮೀಕರಿಸಿಕೊಂಡಿದ್ದಾರೆ; ಗೌರವಸ್ಥ ಶ್ರೀ ಸಾಮಾನ್ಯನಾಗಿಯೇ ಬಾಳ ಬಯಸುತ್ತಾರೆ. ಶ್ರೀಸಾಮಾನ್ಯರ ಸಮಾಜದಲ್ಲಿ ಸ್ವಜಾತೀಯರೇ ಆದ ತಮಗೆ ಬೆಲೆ ಕೊಡದಿರುವುದಕ್ಕಾಗಿ ಇವರಿಗೆ ವ್ಯಥೆಯಿಲ್ಲ. ಶ್ರೀಸಾಮಾನ್ಯನಿಗೆ ಸಹಜವಾಗಿರುವ ಆತ್ಮ ವಿಶ್ವಾಸಹೀನತೆಯನ್ನು ವಿವರಿಸಿರುವಂತೆಯೇ ಅಸಾಮಾನ್ಯರ ರೀತಿ, ನೀತಿ, ಗತ್ತು, ಡ್ರೆಸ್ಸುಗಳನ್ನು ಕುರಿತು ತುಂಬ ಸ್ವಾರಸ್ಯವಾಗಿ ವಿವರಿಸಿದ್ದಾರೆ. ಪದವಿ, ಪ್ರತಿಷ್ಠೆಗಳು ಶ್ರೀಸಾಮಾನ್ಯನಿಗೆ ದೊರೆತಾಕ್ಷಣವೆ ಆತ ಏನೋ ಒಂದು ಬಿಂಕ, ಬಿಗುಮಾನದಿಂದ ನಡೆಯುವುದನ್ನೂ ದೊಡ್ಡಸ್ತಿಕೆಗೆ ಈಗಲೂ ನಮ್ಮ ಸಮಾಜದಲ್ಲಿ ಸಿಕ್ಕುವ ಅಗ್ರಮಾನ್ಯತೆಯನ್ನೂ ಕುರಿತ ಅನೇಕ ನಿದರ್ಶನಗಳನ್ನು ಕೊಟ್ಟು ಪುಷ್ಟೀಕರಿಸಿದ್ದಾರೆ.

ಭಾಷೆಯ ವಿಷಯವನ್ನೆತ್ತಿಕೊಂಡು ಕನ್ನಡಭಾಷೆಯ ಬೆಳವಣಿಗೆ ಕುಂಠಿತಗೊಳ್ಳಲು ವರ್ಗಾಕಾಂಕ್ಷೆಯ ಜನರೇ ಮುಖ್ಯಕಾರಣವೆಂದು ಸಾಧಿಸುತ್ತಾರೆ. ಗೆದ್ದೆತ್ತಿನ ಬಾಲ ಹಿಡಿದು ನಡೆವ ಸ್ವಭಾವದ ನಮ್ಮ ಜನ ಇಂಗ್ಲಿಷ್‌ಗೂಳಿಯ ಬಾಲಹಿಡಿದು ಹೊರಟಿದ್ದಾರೆಂಬಂಶವನ್ನು ಎತ್ತಿ ಹೇಳಿ, ತಮಗೆ ಕನ್ನಡ ಭಾಷೆಯನ್ನು ಕುರಿತಾಗಿರುವ ಕಳಕಳಿಯನ್ನು ಪ್ರಕಟಿಸಿದ್ದಾರೆ. 'ಈಗಿನ ಯುದ್ಧ ಜನಸಾಮಾನ್ಯರನ್ನೂ ವಿಶಿಷ್ಟರನ್ನೂ

ಕೂಡಿಸಿ ಬೆಸಗೆ ಹಾಕುವ ದಿವ್ಯಾಗ್ನಿ, ಭವಿಷ್ಯ ಭಾರತದ ಪಾವನ ಪಾವಕ' ಎಂದು ಸರ್ವೈಕ್ಯ ಸಾಧನೆಗೆ ಕರೆ ಕೊಟ್ಟು ನಮ್ಮ ನಾಡು ಏಕತೆಯಿಂದ ಬಾಳಲಿ ಎಂದು ಹಾರೈಸುತ್ತಾರೆ. ಒಬ್ಬ ಸೂಕ್ಷ್ಮ ಸಂವೇದನಾ ಶೀಲನಾದ ವಿಶಿಷ್ಟ ಶ್ರೀಸಾಮಾನ್ಯನ ನೈಜಾಭೀಪ್ಸೆ ಈ ಪ್ರಬಂಧದಲ್ಲಿ ಅತ್ಯುತ್ತಮವಾಗಿ ಅಭಿವ್ಯಕ್ತ ವಾಗಿರುವುದನ್ನು ಗುರುತಿಸಬಹುದು.

ತಮ್ಮ ಪ್ರವಾಸಾನುಭವವನ್ನು ಸುಂದರ ಪ್ರಬಂಧವಾಗಿ ಕಥನಿಸಿರುವ 'ಭದ್ರಾವತಿ–ಶೃಂಗೇರಿ' ಇವರ ಪ್ರಕೃತಿಪ್ರೇಮವನ್ನು ಪ್ರತಿಬಿಂಬಿಸುವಂಥದು. ಅಗ್ನಿದೇವತೆಯ ಸರ್ಕಸ್ ಭದ್ರಾವತಿಯಲ್ಲಿ ಬೀಡು ಬಿಟ್ಟಿರುವಂತೆ ಅನ್ನಿಸಿತಂತೆ! ಮಾನವನು ತನ್ನ ಸದುಪಯೋಗಕ್ಕಾಗಿ ಕಲ್ಲನ್ನೂ ಕರಗಿಸಿ ಮಾಡಿದ ಕಬ್ಬಿಣ ಕೊಡಲಿಯ ಕಾವಿನಂತೆ ಯುದ್ಧರಂಗದಲ್ಲಿ ಮಾರಕಾಸ್ತ್ರವಾಗಿ ಬಿಡುವುದನ್ನೂ ಗಮನಿಸುತ್ತಾರೆ. ಮುಂದೆ ತಣಿಗೆ ಬೈಲಿನ ದಟ್ಟಕಾಡಿನ ಪ್ರಶಾಂತ ಮೌನ ಕಳೆದ ಮೇಲೆ ಕೆಮ್ಮಣ್ಣುಗುಂಡಿಯಲ್ಲಿ ಗುಡ್ಡದೆದೆಯನ್ನು ತೋಡಿ ಅದಿರು ಸಾಗಿಸುವ ತಂತ್ರ ವಿವರಿಸಿದ್ದಾರೆ.

ಜೋಗ್ ಜಲಪಾತದ 'ಭೀಮಸೌಂದರ್ಯ' ಮೊದಲು ಅದ್ಭುತವಾಗಿ ಆಕರ್ಷಿಸಿದರೂ ಸ್ವಲ್ಪ ಸಮಯದನಂತರ ಮಾಮೂಲು ಹಿನ್ನೆಲೆ ಮಾತ್ರವಾಗಿಬಿಡುತ್ತದೆ. "ಪ್ರಕೃತಿಯೇ ಅಷ್ಟು, ಹಿನ್ನೆಲೆ ಮಾತ್ರ." ಎಂಬ ಅವರ ಮಾತು ಸಂಪೂರ್ಣ ದಿಟ. ಪ್ರಕೃತಿ ರಮಣೀಯತೆ, ಮೌನ, ಶಾಂತಿ, ಭಕ್ತಿ ಇವೆಲ್ಲವೂ ಒದಗುವ ಶೃಂಗೇರಿ ಇವರಿಗೆ ಅತ್ಯಂತ ಹಿತಕರವಾಗಿ ತೋರಿದ್ದು ಸ್ವಾಭಾವಿಕವಾಗಿದೆ. 'ಮಾನವನು ಅತಿಮಾನುಷಕ್ಕೆಳಸುವ ಈ ಮನಮೋಹಕ ಸಂಕ್ರಾಂತಿದರ್ಶನದ ಸಂಕೇತದಂತಿರುವ ಶೃಂಗೇರಿಯ ವಿಶೇಷ ಆಕರ್ಷಣೀಯ ಸ್ಥಳದ ವಿವರಣೆ ಕೊಟ್ಟಿದ್ದಾರೆ. ಉತ್ತಮ ಅಭಿರುಚಿಯ ಪ್ರವಾಸಿಗ ರಾಗಿ ಅಲೆದು ರಸಾನುಭವ ಪಡೆದರೂ ಅದಕ್ಕೇ ಅಂಟಿ ನಿಲ್ಲದೆ, ತನ್ನ ನೆಚ್ಚಿನ ಬಯಲು ನಾಡನ್ನು ತಲುಪು ತ್ತಲೇ, ಮೈಸೂರನ್ನು ಸಮೀಪಿಸುತ್ತಲೇ ಆ ಮಲೆನಾಡೆಲ್ಲ ಮರೆತುಹೋಯಿತೆಂದು ಹೇಳುವ ಇವರ ನಿಲುವು ಆದರ್ಶಪ್ರಾಯವಾಗಿದೆ. ಇದು ಪ್ರಬಂಧಕಾರರ ವ್ಯಕ್ತಿತ್ವವನ್ನೂ ಧ್ವನಿಸುತ್ತದೆ.

ಈ ಗ್ರಂಥದಲ್ಲಿರುವ ಎಲ್ಲ ಪ್ರಬಂಧಗಳನ್ನೂ ಕುರಿತು ಸಮೀಕ್ಷಿಸಲು ಸ್ಥಳಾವಕಾಶವಿಲ್ಲದಿರು ವುದರಿಂದ ಮಿಕ್ಕ ಕೆಲವು ಪ್ರಬಂಧಗಳನ್ನು ಸ್ಥೂಲವಾಗಿ ನೋಡಬಹುದು. 'ಯುಗಾದಿ'ಯಲ್ಲಿ ಬಾಳಿನಲ್ಲಿ ಕಹಿಯುಂಡು ಜೀರ್ಣಿಸಿಕೊಂಡು ಬಾಳಬಲ್ಲವರು ಮಾತ್ರ ಶತಾಯುಗಳೂ ಐಶ್ವರ್ಯವಂತರೂ ಆಗು ವುದರಿಂದ ಬೇವು ಪೌರುಷದ, ಪೌಷ್ಟಿಕದ ಪ್ರತೀಕವೆಂಬುದು ಇವರ ನಂಬುಗೆ. ಈಗಿನ ಕಾಲದಲ್ಲಿ 'ಬಡವರಿಗೆ ಎಂದೂ ದುರ್ದಿನವೇ–ಸಿರಿವಂತರಿಗೆ, ಅದರಲ್ಲೂ ವ್ಯಾಪಾರಿಗಳಿಗೆ ಎಂದೂ ಶುಭಗಳಿಗೆಯೇ' ಎನ್ನುವುದು ಇವರ ಸಾಮಾಜಿಕ ಪ್ರಜ್ಞೆಯ ಜಾಗೃತಿಯನ್ನು ತೋರಿಸುತ್ತದೆ. ಪ್ರಕೃತಿಯಾರಾಧಕರಾದ ಇವರು 'ಮೋಡ–ಮಿಂಚು'ಗಳನ್ನು ಕಂಡು ಭಾವಪರವಶರಾಗುತ್ತಾರೆ. 'ಅನುಕೂಲವಿದ್ದಿದ್ದರೆ ನಾನೀ ದಿನ ವಿಮಾನದಲ್ಲಿ ಗಗನಕ್ಕೆಹಾರಿ ಜಾಜಿಹೂವಿನ ಅರಳುಗಳನ್ನು ಮುಗಿಲೊಂದರ ಮೇಲೆ ಚೆಲ್ಲುತ್ತಿದ್ದೆ' ಎಂಬ ಮಾತು ಅವರ ಕವಿ ಹೃದಯವನ್ನು ಕನ್ನಡಿಸಿದೆ.

'ಕವಿ, ಪಂಡಿತರು' ಒಂದೇ ಕುಟುಂಬದವರಾದರೂ ದಾಯಾದಿಗಳಂತೆ ಒಳಮಚ್ಚರ ಉಳ್ಳ ಅವರ ಪ್ರವೃತ್ತಿಯನ್ನು ಕುರಿತು ವಿವೇಚಿಸಿದ್ದಾರೆ. ಕೊನೆಗೆ ಇವರಿಬ್ಬರ ಸಹಚರ್ಯೆ 'ಹುಲಿ–ಕುರಿಗಳ ಗೆಯ್ಮೆ ಯಾಗುವ ಬದಲು ಪಂಡಿತರು ಕವಿ–ಕುರುಬರಾದರೆ ಶ್ರೇಯಸ್ಕರ'ವೆಂದು ಸೂಚಿಸುತ್ತಾರೆ. 'ವಿಜ್ಞಾನ– ವಿಶ್ವಾಸ'ಗಳನ್ನು ಕುರಿತು ಹೇಳುತ್ತ ಈ ವಿಜ್ಞಾನಯುಗದಲ್ಲಿ ಬುದ್ಧಿಯ ವ್ಯವಸಾಯ ಮಾಡಿದರೂ ಭಾವದ ಅಮೃತಫಲ ಪಡೆವುದನ್ನೇ ಮುಖ್ಯಗುರಿಯಾಗಿರಿಸಿಕೊಂಡು ಸುಖ, ಶಾಂತಿಯಿಂದ ಬಾಳ ಬೇಕೆಂದು ವಿವೇಕ ನುಡಿದಿದ್ದಾರೆ.

'ಮೌನ' ಕವಿಗಳಿಗೆ ಸ್ಫೂರ್ತಿಯನ್ನೂ ಪ್ರವಾದಿಗಳಿಗೆ ದೈವಾದೇಶವನ್ನೂ ಭರಿಸುವ ದಿವ್ಯಶಕ್ತಿ ಯಾಗಿರುವುದನ್ನೂ ಮೌನ ಜ್ಞಾನದ ಲಕ್ಷಣವಾಗಿರುವುದನ್ನೂ ವಿವೇಚಿಸಿದ್ದಾರೆ. 'ಹೊಕ್ಕುಳು' ನಾವು ಯಾರು, ಹೇಗೆ, ಏಕೆಂಬ ಮೂಲ ಪ್ರಶ್ನೆಯನ್ನು ಮೊಳೆಸುವ, ಅಹಂಕಾರವನ್ನು ಅದುಮಿಟ್ಟು ಭಗವಂತನ ಮಹತ್ತನ್ನು ಮೆರೆವ ಕುಳಿ' ಎಂದು ಹೇಳಿ 'ಹೊಕ್ಕಳು ನಿಜವಾಗಿ ವಿನಯ ಶಿಕ್ಷಾಗುರು'ವೆಂದು ಸಾರುತ್ತಾರೆ. ಹೀಗೆಯೇ ಮರವನ್ನೂ ಕಪ್ಪೆಯ ವಟರನ್ನು ಕುರಿತು ವಿಚಾರಧಾರೆ ಹರಿಸಿದ್ದಾರೆ. ಎಲ್ಲೆಲ್ಲೋ ಚೂರು ಪಾರಾಗಿ ಉಳಿದ 'ಅರೆಮರೆ ಕವಿತೆಗಳ ಮೊರೆ'ಯನ್ನೂ ಓದುಗರಿಗೆ ತೆರೆದು ತೋರಿಸಿದ್ದಾರೆ.

'ನೆಗಡಿ' ಓದುಗರ ಲಕ್ಷ್ಯವನ್ನು ವಿಶೇಷವಾಗಿ ಸೆಳೆಯುವಂಥ ಉತ್ತಮ ಪ್ರಬಂಧ. ತೀ.ನಂ. ಶ್ರೀ, ಯವರ ನೆಗಡಿಯೆಂಬ ಪ್ರಬಂಧಕ್ಕಿಂತ ಸಂಪೂರ್ಣ ಬೇರೆ ದಿಕ್ಕಿನಲ್ಲಿ ಹರಿದಿರುವ ವಿಚಾರಧಾರೆ ಗಮನಾರ್ಹ ವಾಗಿದೆ. 'ನಾಲಿಗೆಗೆ ರುಚಿಯ ಪಾತಿವ್ರತ್ಯ ಬೇಕಾದರೆ ಮೂಗಿಗೆ ನೆಗಡಿ ಹಿಡಿಯಬೇಕು' ಎಂಬ ಹೇಳಿಕೆ ಯಾಗಲಿ, 'ನೆಗಡಿಯುದು ಚೀನಾ ಮನಸ್ಸು'; ಚಾತುರ್ಮಾಸ ವ್ರತಧಾರಿಗಳಿಗೆ ನೆಗಡಿ ಪರಮೋಪಕಾರಿ ಎಂಬ ಮಾತಾಗಲಿ ಕುತೂಹಲ ಕೆರಳಿಸುತ್ತವೆ. ದೇಹಕ್ಕೆ ನೆಗಡಿ ಹಿಡಿಯುವಂತೆ ಬುದ್ಧಿಗೂ ನೆಗಡಿ ಹಿಡಿಯುತ್ತದೆಂಬುದು ಇವರ ಹೊಸ ವಿಚಾರ. ಇಂಗ್ಲಿಷ್ ಭಾಷಾ ವ್ಯಾಮೋಹದ ನೆಗಡಿ ಹಿಡಿದ ವಿಜ್ಞಾನಿಗಳು, ತಾಂತ್ರಿಕಜ್ಞರು ಇಂಗ್ಲಿಷ್ ಸಾಹಿತ್ಯಭೋಸಂಳು ದೇಶೀಯ ಸಾಹಿತ್ಯ, ಜನತೆ, ಗಿಗಸ್ಕೃತಿಗಳ ಬಗೆಗೆ ವಿಪರೀತ ತಿರಸ್ಕಾರ ಭಾವನೆಯನ್ನು ಬೆಳೆಸಿಕೊಂಡಿರುವುದನ್ನು ಎತ್ತಿ ಹೇಳಿದ್ದಾರೆ. "ನಮಗೆ ಕನ್ನಡದ ನೆಗಡಿ ಕ್ಷೇಮಕರ; ಇಂಗ್ಲಿಷ್ ಜನಕ್ಕೆ ಇಂಗ್ಲಿಷ್ ಹೇಗೆ ಸ್ವಾಭಾವಿಕವೊ ಕನ್ನಡದ ಜನಕ್ಕೆ ಕನ್ನಡ ಹಾಗಾಗುವವರೆಗೂ ಕನ್ನಡದ ವ್ಯಾಮೋಹ ತುಸು ಹೆಚ್ಚಾಗಿಯೇ ಬೆಳೆಯಲೆಂದು ಹಾರೈಸುತ್ತಾರೆ.

ಕೊನೆಯಲ್ಲಿರುವ 'ದೇವರು ಮತ್ತು ಅಪ್ಪಾಜಿ ಆನೆ' ಪ್ರಬಂಧದಲ್ಲಿ 'ಆತ(ದೇವರು) ಭವಿಗಳ ವ್ಯವಹಾರದಲ್ಲಿ ಬೆರೆತರೂ ಉಳಿದುಕೊಳ್ಳುವುದು ಸಂತರ ಸ್ವತ್ತಾಗಿಯೇ' ಎಂಬುದು ಪ್ರಬಂಧಕಾರರ ನಂಬುಗೆ. ಹೀಗೆ ಸರ್ವಸಾಮಾನ್ಯ ವಸ್ತು, ವಿಷಯದಿಂದ ಹಿಡಿದು ಭಗವಂತನ ವರೆಗೆ ವಿಶ್ವವ್ಯಾಪಕವಾಗಿ ಹಬ್ಬಿ ಹರಿದಿರುವ ವಿಚಾರಧಾರೆ ಬಹುಪಾಲು ಪ್ರಬಂಧಗಳಲ್ಲಿ ಕಲಾತ್ಮಕವಾಗಿ, ತೂಕವಾಗಿ, ಸತ್ಯವಾಗಿ ಅಭಿವ್ಯಕ್ತಗೊಂಡಿದೆ. ಅನುಭವದ ಪರಿಪಾಕದಿಂದ ಇವರಲ್ಲೆಲ್ಲ ವಿಶಿಷ್ಟವಾದ ಬನಿ, ಕಂಪು ಕಾಣುವುದು ಸಹಜವಾಗಿದೆ. ಮುಂಬರುವ ಪ್ರಬಂಧಕಾರರಿಗೆ ಮಾರ್ಗದರ್ಶಕವಾಗಿದೆ.

—ನಂ. ತಪಸ್ವೀಕುಮಾರ್

ಶರಣ ಸಾಹಿತ್ಯ ಸಮೀಕ್ಷೆ

ಲೇ. ದೊಡ್ಡಸ್ವಾಮಿ. ಎಂ.ಎ., ಕನ್ನಡ ವಿಭಾಗ, ಸಹ್ಯಾದ್ರಿ ಕಾಲೇಜು, ಶಿವಮೊಗ್ಗ. ಪುಟ 10 + 163, ಅಕ್ಟೋಬರ್ 1972, ಬೆಲೆ: 3.50

ಅನನ್ಯ ಶ್ರದ್ಧೆ, ಆಳವಾದ ಅಭ್ಯಾಸ, ಸಾಧ್ಯವಿದ್ದಷ್ಟು ಸತ್ಯವನ್ನು ಉದ್ಘಾಟಿಸುವ ಅನ್ವೇಷಕ ಧರ್ಮ, ನಿರ್ಲಿಪ್ತ ವೃತ್ತಿ ಹಾಗೂ ಉದಾರ ಮನೋಭಾವಗಳ ಫಲಸ್ವರೂಪವಾಗಿ, ಕನ್ನಡ ಪ್ರಾಧ್ಯಾಪಕರಾ ರಾದ ಶ್ರೀ ದೊಡ್ಡಸ್ವಾಮಿಯವರ 'ಶರಣ ಸಾಹಿತ್ಯ ಸಮೀಕ್ಷೆ' ಹೊರ ಬಂದಿದೆಯೆನ್ನುವದು ಸಂತೋಷ ಕರ ವಿಷಯ. ಇದು ಈ ಗ್ರಂಥಕರ್ತರ ಎರಡನೆಯ ಗ್ರಂಥವಾದರೂ, ವಿವೇಚನಾಕ್ರಮವು ಸಾಕಷ್ಟು ಪ್ರಭಾವಕಾರಿಯಾಗಿದೆಯೆಂದೇ ಹೇಳಬೇಕು. ಸಮೃದ್ಧವಾದ ಶರಣ ಸಾಹಿತ್ಯ ರಾಶಿಯನ್ನು ಅಭ್ಯಸಿಸಿ ಅದರ ಹುಟ್ಟು–ಗುಟ್ಟುಗಳನ್ನೂ, ಮಹತ್ತು–ಬೃಹತ್ತುಗಳನ್ನೂ ಒಂಬತ್ತು ಅಧ್ಯಾಯಗಳಲ್ಲಿ ಬಿಂಬಿಸಲು ಪ್ರಯತ್ನಿಸಿದ್ದಾರೆ.

'ಶಿವಶರಣರ ಆತ್ಮ ಪರಿಶೋಧನೆ'ಯೆಂಬ ಮೊದಲ ಅಧ್ಯಾಯದಲ್ಲಿ ಅಲ್ಲಮನಿಂದ ಆದಯ್ಯನ ವರೆಗಿನ ಶರಣ–ಶರಣೆಯರ ವಚನಗಳ ಆಧಾರದಿಂದ ಅವರ ಸಾಧನ ಕ್ರಮದ ವಾಸ್ತವಿಕರೂಪವನ್ನು ಚಿತ್ರಿಸಿದ್ದಾರೆ. ಆತ್ಮ ಪರಿಶೋಧನೆಯೇ ಆತ್ಮವಿಕಾಸದ ನೆಲಗಟ್ಟು. ಯಾವ ದೇವಾಂಶ ಸಂಭೂತನೂ ಹುಟ್ಟುವಾಗಲೇ ದೇವಗುಣಗಳಿಂದ ಪೂರ್ಣನಾಗಿರದೆ ತನ್ನ ಸಾಧನೆಯ ತಪದಿಂದ, ಚರಿತ್ರೆಯಿಂದ ಕ್ರಮಕ್ರಮವಾಗಿ ವಿಕಾಸಗೊಂಡು ದೇವಮಾನವನಾಗುತ್ತಾನೆ. ಎಲ್ಲ ಶರಣರೂ ಸಾಮಾನ್ಯತ್ವದಿಂದ ಅಸಾಮಾನ್ಯತ್ವವನ್ನು ಸಾಧಿಸಿದ್ದಾರೆ, ಎಂಬುದನ್ನು ಸಾಧಾರಣವಾಗಿ ನಿರೂಪಿಸಿದ್ದಾರೆ. ಸುಮಾರು ಹದಿಮೂರು ಜನ ಶರಣ–ಶರಣೆಯರ ವಚನಗಳ ಆಧಾರದಿಂದ ಅವರು ಹೇಗೆ, 'ಅಂಗಗುಣಗಳನ್ನಳಿದು ಮಂಗಳ ಗುಣಗಳನ್ನು ಗಳಿಸಿ ಲೋಕದ ಹಿತಚಿಂತಕರಾದರು; ಮಹಾತ್ಮರಾದರು; ಮಾನವಕುಲದೀಪಕ ರಾದರು' ಎಂದು ತೋರಿಸಿಕೊಟ್ಟಿದ್ದಾರೆ,

ಎರಡನೆಯ ಅಧ್ಯಾಯದಲ್ಲಿ ಶಿವಶರಣರು ಜನಜೀವನದಲ್ಲಿ, ಆಧ್ಯಾತ್ಮಮಾರ್ಗದಲ್ಲಿ ಸಾಧಿಸಿದ ಕ್ರಾಂತಿಯನ್ನು ಬಿಡಿಬಿಡಿಯಾಗಿ ವಿವೇಚಿಸಿದ್ದಾರೆ. ಜಾತಿ–ಮತಗಳ ಕ್ಷುದ್ರಭೇದಗಳನ್ನು ತೊಡೆದು, ಜಾತಿ ನಿರಪೇಕ್ಷವಾದ ಸಮಾಜ ನಿರ್ಮಾಣವನ್ನು ಹೇಗೆ ಸಾಧಿಸಿದರು ಎನ್ನುವದನ್ನು ವಚನಗಳ ಆಧಾರ ದಿಂದ ವಿವರಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಅವರು ಸಾಧಿಸಿದ ಸ್ತ್ರೀಸ್ವಾಂತಂತ್ರ್ಯ, ಪಂಡಿತ–ಪಾಮರರ ಭೇದನಿವಾರಣೆ, ಸದಾಚಾರ–ಸಚ್ಚರಿತ್ರೆಯ ಪ್ರತಿಷ್ಠೆ ಹಾಗೂ ಕಾಯಕದ ಮಹತ್ವದ ಅರಿವುಗಳು ಶರಣರು ಪ್ರಯತ್ನಪೂರ್ವಕವಾಗಿ ನಡೆಸಿದ ಕ್ರಾಂತಿಯ ಫಲಗಳಾದರೆ, ಭಾಷೆಯ ಬದಲಾವಣೆಗಳು, ಸಾಹಿತ್ತಿಕ ಸಾಧನೆಗಳು ಅಪ್ರಯತ್ನಪೂರ್ವಕವಾದ ಕ್ರಾಂತಿಯ ಫಲಗಳಾಗಿವೆಯೆಂದು ಸೋದಾಹರಣವಾಗಿ ನಿವೇದಿಸಿದ್ದಾರೆ.

ಶರಣ ಸಾಹಿತ್ಯದಲ್ಲಿ ಭಕ್ತಿಯು ಸರ್ವಾಧಿಕ ಮಹತ್ವವನ್ನು ಹೊಂದಿದೆ. ಭಕ್ತಿಯಿಂದಲೇ ಮುಕ್ತಿ ಯೆನ್ನುವದನ್ನು ಅವರ ವಚನಗಳು ಸಾರುತ್ತಿವೆ. 'ಅವರ ಭಕ್ತಿ ದ್ವೈತಭಾವದಿಂದ ಮೊದಲ್ಗೊಂಡು, ಅದ್ವೈತಭಾವದಲ್ಲಿ ವಿರಮಿಸುತ್ತದೆ'ಎನ್ನುವುದನ್ನು ಮೂರನೇ ಅಧ್ಯಾಯದಲ್ಲಿ ಸುಂದರ ವಚನಗಳ ಆಧಾರದಿಂದ ಬಿತ್ತರಿಸಿದ್ದಾರೆ.

ನಾಲ್ಕನೆಯ ಅಧ್ಯಾಯವು ಶರಣರ ದೃಷ್ಟಿಯಿಂದ ಭಕ್ತನಾರು, ಭವಿಯಾರು ಎಂಬುದನ್ನು ಸೊಗಸಾಗಿ ವಿವೇಚಿಸಿದ್ದಾರೆ. ಗ್ರಂಥಕರ್ತರು ಈ ವಿಷಯವನ್ನು ಬಿಂಬಿಸುವಾಗ ನಿಷ್ಕಲ್ಮಷವಾದ ಮನೋಭಾವವನ್ನೂ, ಉದಾತ್ತವಾದ ವಿವೇಚನಾ ರೀತಿಯನ್ನೂ ತೋರಿದ್ದಾರೆ.

ಐದನೆಯ ಅಧ್ಯಾಯವು 'ಶರಣರ ಜೀವನ–ದರ್ಶನ'ವು ಭಾರತೀಯ ಸಂಸ್ಕೃತಿಯ ರಹಸ್ಯವೇ ಆಗಿದೆಯೆನ್ನುವುದನ್ನು ವಿವರಿಸುತ್ತಿದೆ.

ಮುಂದಿನ ಅಧ್ಯಾಯದಲ್ಲಿ 'ವಚನ ಸಾಹಿತ್ಯದ ಉಗಮ'ವನ್ನು ಕುರಿತು ವಿವೇಚಿಸುತ್ತ ತ್ರಿಪದಿ ಯಿಂದಲೇ ಅದು ರೂಪುಗೊಂಡಿರಲು ಸಾಧ್ಯವೆಂಬ ವಿದ್ವಾಂಸರ ಅಭಿಪ್ರಾಯವನ್ನು ಪುಷ್ಟೀಕರಿಸಿದ್ದಾರೆ.

'ಶಿವಶರಣರ ವಚನಗಳಲ್ಲಿ ಸಾಹಿತ್ಯಿಕಾಂಶಗಳು' ಎಂಬ ವಿಷಯವನ್ನು ಏಳನೆಯ ಅಧ್ಯಾಯದಲ್ಲಿ ವಚನಗಳ ನಿಲುವಿನಿಂದ ಬಿಂಬಿಸಲಾಗಿದೆ. ಗ್ರಂಥಕರ್ತರು, 'ವಚನ ಸಾಹಿತ್ಯವೆಂಬುದು ಲೌಕಿಕ ಸಾಹಿತ್ಯವಲ್ಲ. ಅದು ಆಧ್ಯಾತ್ಮಿಕ ಅನುಭಾವ ಸಾಹಿತ್ಯ' ಎಂದು ಅಭಿಪ್ರಾಯ ಪಟ್ಟಿರುವುದು ಸಮಂಜಸವಾಗಿದೆ.

ಅನಂತರದ ಅಧ್ಯಾಯದಲ್ಲಿ 'ಕನ್ನಡ ಸಾಹಿತ್ಯದಲ್ಲಿ ವಚನ ಸಾಹಿತ್ಯದ ಸ್ಥಾನ'ವು ಅಪೂರ್ವವಾಗಿದೆ ಯೆಂದು ತಿಳಿಯಪಡಿಸಿ, ಕೊನೆಯ ಅಧ್ಯಾಯದಲ್ಲಿ 'ಶಿವಶರಣರ ಜಾಣ್ನುಡಿ'ಗಳನ್ನು ಸಂಗ್ರಹಿಸಿದ್ದಾರೆ.

ಗ್ರಂಥಕರ್ತರ ಪ್ರಯತ್ನ ಅಧಿಕಾಂಶವಾಗಿ ಫಲಕಾರಿಯಾಗಿದೆ. ಭಾಷೆ ಇನ್ನೂ ಪಳಗಬೇಕು. ತುಲನಾತ್ಮಕವಾಗಿ ವಿವೇಚಿಸುವಾಗ ಇನ್ನೂ ಹೆಚ್ಚು ದಕ್ಷತೆ, ಸಂಯಮಗಳಿರುವದು ಒಳಿತು. ಒಟ್ಟು ಗ್ರಂಥ ಅಭ್ಯಾಸಪೂರ್ಣವಾಗಿ ಒಂದು ಸಂದರ್ಭಗ್ರಂಥದ ಗುಣವನ್ನು ಹೊಂದಿದೆ ಎಂದು ಹೇಳಬೇಕು.

—ಆರ್. ಜಿ. ಕುಲಕರ್ಣಿ

ಹಂಸಪಥ

(ಕವನ ಸಂಕಲನ) ರಾಘವ, ಪ್ರಕಾಶಕರು : ರಾಘವ ಪ್ರಕಾಶನ, ಬೆಂಗಳೂರು–19 ಪುಟಗಳು : ಕ್ರೌನ್ 163 ಬೆಲೆ ರೂ. 4.50

ಕತೆ, ಕಾದಂಬರಿ, ನಾಟಕ, ಪ್ರಬಂಧಗಳನ್ನು ಬರೆದು ಅನೇಕ ಪ್ರಾಚೀನ ಕಾವ್ಯಗಳನ್ನು ಸಂಪಾದಿಸಿರುವ ಎಂ. ವಿ. ಸೀತಾರಾಮಯ್ಯನವರು ಕನ್ನಡ ಸಾಹಿತ್ಯ ಲೋಕದಲ್ಲಿ ಚಿರಪರಿಚಿತರು.

ಹಂಸಪಥ ಎಂಬತ್ತುಮೂರು ಕವನಗಳ ಸಂಕಲನ. ಸ್ವಂತ ರಚನೆಗಳೊಂದಿಗೆ ತೆಲುಗು, ಸಂಸ್ಕೃತ, ಇಂಗ್ಲಿಷ್, ಅಸ್ಸಾಮಿ, ಕಾಶ್ಮೀರಿ ಭಾಷೆಯ ಕವನಗಳೂ ಸೇರಿವೆ.

ಸೀತಾರಾಮಯ್ಯನವರು ಧರ್ಮಪ್ರವರ್ತಕರನ್ನು, ರಾಷ್ಟ್ರೀಯ ಧುರೀಣರನ್ನು, ಕವಿಗಳನ್ನು ಕುರಿತ ಅನೇಕ ವ್ಯಕ್ತಿ ಚಿತ್ರಗಳನ್ನು ರಚಿಸಿದ್ದಾರೆ. "ಹಂಸಪಥದಲ್ಲಿ ಸಾಗಿ ಹಂಸತ್ವವನ್ನು ಪಡೆವ ಅವತಾರ

ಪುರುಷರನ್ನು ಹಾಡಿ ಹೊಗಳುವ ಕೈಂಕರ್ಯದ ಕವನಗಳೂ ಇವೆ. ಹೀಗೆ ಸಂದಿದೆ ಸಂಕಲನಕ್ಕೆ 'ಹಂಸಪಥ' ಎಂಬ ಹೆಸರು" ಎಂದು ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ಅಂಥ ಪುರುಷರ ಬಾಳು ಕವಿಗೆ ಮಾರ್ಗ ದರ್ಶಕವಾಗಿದೆ, ಹಾಗೆಯೆ ಸಮಾಜವೂ ಅಂಥವರಿಗೆ ಋಣಿಯಾಗಿದೆ. ಇದನ್ನು ಗಾಂಧೀಜಿಯವರನ್ನು ಕುರಿತ ಕವನಗಳು ಸ್ಪಷ್ಟಪಡಿಸುತ್ತವೆ. 'ಬಾಪೂಜಿ ಕಂಡ ಕನಸು', 'ಹರಿದ ಪಂಜು' 'ಗಾಂಧಿ ಜಯಂತಿ', 'ಸ್ಥಿತಪ್ರಜ್ಞ', 'ಸತ್ಯವ್ರತ', 'ಗಾಂಧೀತರ್ಪಣ', 'ಮಹಾತ್ಮರ ಕರುಣೆ'–ಇವು ಗಾಂಧೀಜಿಯವರನ್ನು ಕುರಿತ ಕವನಗಳು. 'ಸತ್ಯಾರ್ಥಕ್ಕೆ ನೀ ಬದುಕಿನ ಭಾಷ್ಯವ ಬರೆದ ಸ್ವಾನುಷ್ಠಾನದ ಹೊತ್ತಗೆ' ಎಂದು ಗಾಂಧೀಜಿ ಯವರ ಬದುಕನ್ನು ಕುರಿತು ಹೇಳುತ್ತಾರೆ.

ಗಾಂಧೀಜಿಯವರ ತತ್ವಗಳನ್ನು ಜಪಿಸಿ ಅನುಷ್ಠಾನಕ್ಕೆ ತಾರದೆ ಇರುವುದನ್ನು ಕಂಡು

ಕೋಪ ಬೇಡಪ್ಪ; ನಿನ್ನ ಜಯಂತಿಯ
ನೂರು ವರ್ಷಕ್ಕೇ ನಿಲ್ಲಿಸೆವು
ಪಾಪ ಪ್ರಾಯಶ್ಚಿತ್ತಕನುದಿನ
ನಿನ್ನ ನಾಮವ ಜಪಿಸುತ್ತಿಹೆವು

ಎಂದು ಹೇಳಿ ನಮ್ಮ ಇಂದಿನ ಆಚರಣೆಯನ್ನು ವ್ಯಂಗ್ಯವಾಗಿ ಮೂದಲಿಸಿದ್ದಾರೆ.

ಬುದ್ಧ, ಪರಮಹಂಸ, ವಿವೇಕಾನಂದ, ಬಸವೇಶ್ವರ, ಪುರಂದರದಾಸ ಇವರ ಹಿರಿಮೆಯನ್ನು ಸಾಧನೆಯನ್ನು ಕವಿ ಗುರುತಿಸಿದ್ದಾರೆ.

ಗೋವಿಂದ ಪೈ ಅವರನ್ನು ಕುರಿತ ಕವನ 'ನುಡಿಗುಡಿಯ ಗೊಮ್ಮಟ' ಪೈ ಅವರ ಸಾಹಿತ್ಯ ಸೇವೆಯ ಸ್ಥೂಲವಾದ ಪರಿಚಯವನ್ನು ಮಾಡಿಕೊಡುತ್ತದೆ.

'ಕಂಬನಿಯ ಕಾಣಿಕೆ' ಬಿ. ಎಂ. ಶ್ರೀ ಅವರಿಗೆ ಅರ್ಪಿಸಿರುವ ಶ್ರದ್ಧಾಂಜಲಿ.

ಪ್ರಕೃತಿಯನ್ನು ಕುರಿತ ಕವನಗಳು ಈ ಸಂಗ್ರಹದಲ್ಲಿ ಹೇರಳವಾಗಿವೆ. ತಮ್ಮ ಸುತ್ತಲ ಪ್ರಕೃತಿ ಯನ್ನು ಕಂಡಾಗ ಅದರ ಸೌಂದರ್ಯಕ್ಕೆ ಮಾರುಹೋಗಿ ತಮಗಾದ ಅನುಭವವನ್ನು 'ಸೊಗಸಿನ ಸಂಜೆ' 'ಚಣವೆ ಸಾಕು ಚೆಲುವಿನ ನೋಟ', 'ಬಿದಿಗೆ ಚಂದ್ರ–ಬದಿಗೆ ತಾರೆ', 'ಕಾರ್ತಿಕೋತ್ಸವ' 'ಚೆಲುವಿನ ಚಣದ ಹನಿ' 'ಹೇಮಂತನ ದೊರೆತನ' ಮುಂತಾದ ಕವನಗಳು ಚಿತ್ರಿಸುತ್ತವೆ. ಇವೆಲ್ಲ ಕವಿಯ ಅನುಭವದ ತೆಳು ವಾದ ವರದಿಗಳಾಗಿವೆಯೇ ಹೊರತು ಮನಸ್ಸನ್ನು ಸೆರೆಗೈಯುವ ವಿಶೇಷ ಗುಣಗಳನ್ನು ಪಡೆದಿಲ್ಲ.

ಕವಿಗೆ ನಮ್ಮ ಸಂಸ್ಕೃತಿಯ ಬಗೆಗೆ ಅಪಾರವಾದ ಒಲವಿದೆ, ನಂಬುಗೆಯಿದೆ. ನಾವು ಸ್ವೀಕರಿಸಿರುವ ಹೊಸ ಮೌಲ್ಯಗಳು ನಮ್ಮ ಸಂಸ್ಕೃತಿ ಸಾರುವ ಮೌಲ್ಯಗಳ ಮಟ್ಟಕ್ಕೇರಲಾರವು ಎಂಬ ಭಾವನೆಯೂ ಇದೆ. ಇದನ್ನು 'ತಾರೆಗಳ ಮರುಮಾತು', 'ಆ ದಾರಿ–ಈ ದಾರಿ' 'ಅಣುಶಕ್ತಿ' ಕವನಗಳು ಚಿತ್ರಿಸುತ್ತವೆ.

ಋಷಿಗಳು ಯೋಗಿಗಳ್ ಪರಮದಾರ್ಶನಿಕರ್
ಭಕ್ತರ್ ವಿರಕ್ತರ್ ಕವೀಂದ್ರರ್
ದಿವ್ಯ ಚಕ್ಷುವಿನಿಂ
ಅಣುವನೊಡೆದರ್
ಜಗದ
ಗುಟ್ಟನೊಡೆದರ್
ಒಡೆದು
ಕಂಡರದ್ಭುತಮಂ,
ಪೂರ್ಣ ದರ್ಶನಮಂ;
ವ್ಯೋಮ ಭೂಮಿಗಳೊಳ್
ಹಿರಿ ವಿಜ್ಞಾನಿಗಳ್ ಪರಮಶಕ್ತರ್
ಅಣುವಿನೊಳಶಕ್ತಿಯಂ
ಲೋಕಮಾರಕಮಂ

ಇದು ವಿಜ್ಞಾನಿಗಳ ಮತ್ತು ಋಷಿಗಳ ಸಾಧನೆಯ ಎರಡು ಮುಖವನ್ನು ಚಿತ್ರಿಸುತ್ತದೆ.ಋಷಿ

ಗಳದ್ದು 'ಶಾಂತಿ ದರ್ಶನ' ವಿಜ್ಞಾನಿಗಳದ್ದು 'ಕ್ರಾಂತಿ ದರ್ಶನ' ಇವೆರಡರ ಸಮನ್ವಯವಾಗಿ ಕ್ರಾಂತಿ 'ಸಂಕ್ರಾಂತಿ'ಯಾಗಿ ಶಾಂತಿ ನೆಲಸಲೆಂದು ಆಶಿಸುತ್ತಾರೆ.

'ನಾಡ ತಪವೇ ಮೂರ್ತಿವೆತ್ತಂತಿರುವ' ಹಿಮಾಲಯವನ್ನು ಕುರಿತ ಸ್ತುತಿ 'ಹಿಮವಂತ ಪ್ರಗಾಥ'.

'ಕುರಿಯ ಮೆರವಣಿಗೆ' ಒಂದು ಉತ್ತಮ ಕವನ. 'ಕುರಿಯಂತೆ' ಸಾಗುತ್ತಿರುವ ಬದುಕನ್ನು ಪ್ರತಿಮಿಸುವ ಪ್ರಯತ್ನದಲ್ಲಿ ತೊಡಗಿರುವ ಕವಿ ಕೊನೆಯಲ್ಲಿ ವಾಚ್ಯಗೊಳಿಸಿ, 'ನಾವೆಲ್ಲರೂ ಕುರಿ, ನಡೆ ಯುತಿದೆ ನಮ್ಮ ಮೆರವಣಿಗೆ' ಎಂಗು ಹೇಳಿರುವುದರಿಂದ ಒಟ್ಟು ಕವನದ ಪರಿಣಾಮದಲ್ಲಿ ಸೋಲುತ್ತದೆ.

ಸಾಂಪ್ರದಾಯಿಕವಾಗಿರುವ ಈ ಕವನ ಸಂಕಲನದಲ್ಲಿ ಒಂದು ಹದದ ಕವಿತೆಗಳಿವೆ. ಬಹುಕಾಲ ಮನಸ್ಸಲ್ಲಿ ನಿಲ್ಲಬಲ್ಲ ಕವನಗಳಿಲ್ಲ. ಸಾನೆಟ್, ಸಾಂಗತ್ಯ, ಪಿರಿಯಕ್ಕರ– ಹೀಗೆ ಹಲವಾರು ಛಂದಸ್ಸಿನ ಪ್ರಯೋಗಳನ್ನೂ ಇಲ್ಲಿ ಕಾಣಬಹುದು.

—ಸರಸ್ವತಿ ಬೋರಲಿಂಗಯ್ಯ

ವಾಲ್ಮೀಕಿ ಮುನಿಗಳ ಹಾಸ್ಯ ಪ್ರವೃತ್ತಿ

ವಿದ್ವಾನ್ ಎನ್. ರಂಗನಾಥಶರ್ಮಾ. ಪ್ರ: ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಬೆಂಗಳೂರು 560004, 1971. ಪುಟಗಳು 30 ಬೆಲೆ. 3 ರೂ.

ಗೋ॥ಸಾ॥ವಿ॥ ಸಂಸ್ಥೆಯ ಜನೋಪಯುಕ್ತ ಗ್ರಂಥಮಾಲೆಯಲ್ಲಿ ಈ ಕಿರುಹೊತ್ತಗೆ ಪ್ರಕಟಿತ ವಾಗಿದೆ. ಇಂತಹ ಕಿರುಹೊತ್ತಗೆಗಳ ಆವಶ್ಯಕತೆ ಇಂದು ಬಹಳವಿದೆ. ವಿದ್ವಾಂಸರೂ ಪ್ರಕಾಶಕರೂ ಮುಂದೆ ಬಂದು ಸುಲಭ ಬೆಲೆಗೆ ಹೊತ್ತಗೆಗಳು ಸಿಗುವಂತಾಗಬೇಕು. ಶ್ರೀಮದ್ ರಾಮಾಯಣವನ್ನು ಕನ್ನಡಕ್ಕೆ ಅನುವಾದಿಸಿರುವ ಶ್ರೀ ರಂಗನಾಥ ಶರ್ಮರು ವಾಲ್ಮೀಕಿ ಮುನಿಗಳ ಹಾಸ್ಯ ಪ್ರವೃತ್ತಿಯನ್ನು ಚೆನ್ನಾಗಿ ಪರಿಚಯ ಮಾಡಿಕೊಂಡಿದ್ದಾರೆ. ರಸಾಯನಕ್ಕೆ ಹಾಕಿದ ಏಲಕ್ಕಿ ಪುಡಿಯಂತೆ ರಾಮಾಯಣದಲ್ಲಿ ಹಾಸ್ಯವಿದೆ ಎಂದು ಆ ಭವ್ಯಕಾವ್ಯದಲ್ಲಿನ ಹಾಸ್ಯದ ಮಿತಿ, ಅದರ ಸ್ವಾರಸ್ಯ ಎಲ್ಲವನ್ನು ರಮ್ಯವಾಗಿ ಚುಟುಕಮಾತಿನಲ್ಲಿ ಹೇಳಿದ್ದಾರೆ: "ಹಾಸ್ಯಂ ಸ್ಯ ವೇಶಯದ್ ಅನರ್ಘ್ಯ ಮಿ ವೈಲ ಚೂರ್ಣಂ (ಶ್ಲೋಕ. ಪು. 30) ವಾಲ್ಮೀಕಿಗಳ ಹಾಸ್ಯ ಅತ್ಯಂತ ತಿಳಿಯಾದುದು, ಕೊಂಕಿಲ್ಲದುದು. ಅಲ್ಲಿನ ಹಾಸ್ಯ ಸನ್ನಿವೇಶ ಗಳನ್ನು ಉದಾಹರಿಸಿ ಜನ ಸಾಮಾನ್ಯರಿಗೂ ಅರ್ಥವಾಗುವಂತೆ ವಿದ್ವಾಂಸರು ವಿವರಿಸಿದ್ದಾರೆ.

* * * *

ಸಂಸ್ಕೃತ ಸುಭಾಷಿತ ಸಂಗ್ರಹ

ಪ್ರಾ. ಬಿ. ಎಚ್. ಶ್ರೀಧರ ಪ್ರ. ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ 1971. ಪುಟಗಳು 14+197. ಬೆಲೆ 4 ರೂ.

ಕನ್ನಡದಲ್ಲಿ ಸಂಸ್ಕೃತ ಗ್ರಂಥಗಳು ದೊರೆಯುವುದು ವಿರಳ. ಆದುದರಿಂದ ಪಠ್ಯಪುಸ್ತಕ ಹೊರತು ಇನ್ನಾವ ಪುಸ್ತಕವನ್ನೂ ವಿದ್ಯಾರ್ಥಿಗಳು ಸುಲಭವಾಗಿ ಪರಾಮರ್ಶಿಸಲು ಸಾಧ್ಯವಿಲ್ಲ. ಜತೆಗೆ, ಸಾಮಾನ್ಯ ಸಂಸ್ಕೃತ ಬಲ್ಲ ಕನ್ನಡಿಗರು ತಮ್ಮ ಸಂಸ್ಕೃತ ಜ್ಞಾನಾಭಿವೃದ್ಧಿ ಮಾಡಿಕೊಳ್ಳ ಬಯಸಿದರೆ, ಅದು ಬಯಕೆ ಯಾಗಿಯೇ ಉಳಿಯುತ್ತದೆ. ಇಂತಹ ಸನ್ನಿವೇಶದಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದ ಪಠ್ಯಪುಸ್ತಕ ನಿರ್ದೇಶನಾಲಯದವರು ಪೂರಕ ಪಠ್ಯಪುಸ್ತಕವಾಗಿ ಪ್ರಕಟಿಸಿರುವ ಈ ಗ್ರಂಥವನ್ನು ಸಂಸ್ಕೃತಾಭಿಮಾನಿ ಗಳೆಲ್ಲ ಸ್ವಾಗತಿಸುತ್ತಾರೆ.

ಸುಭಾಷಿತಗಳು ಮುತ್ತಿನಂತೆ ಬಿಡಿಯಾಗಿದ್ದರೂ ಬೆಲೆ, ಮಾಲೆಯಾದರೂ ಬೆಲೆ. ಬಹಳ ಹಿಂದಿ ನಿಂದಲೂ ಸಂಸ್ಕೃತದ ಮುಕ್ತಕಗಳನ್ನು ಸಂಗ್ರಹಿಸಿರುವುದು ನಡೆದು ಬಂದಿದೆ. ಒಬ್ಬನೇ ಕರ್ತೃವಿನ ರಚನೆಗಳಾದರೆ, ಸಾಮಾನ್ಯವಾಗಿ ಆ ಸಂಗ್ರಹವನ್ನು ಶತಕ ಎನ್ನುತ್ತಾರೆ; ಹಲವು ಕವಿಗಳದ್ದಾದರೆ, ಅದನ್ನು ಕೋಶ ಎನ್ನಲಾಗುತ್ತದೆ. ಈಗ ದೊರೆತಿರುವ ಕೋಶಗಳಲ್ಲಿ ಪ್ರಾಚೀನವಾದುದು–ಕವೀಂದ್ರ ವಚನ

ಸಮುಚ್ಚಯ ಕ್ರಿ.ಶ. ಸು. 1000. ಇಂತಹ ಕೋಶಗಳ ಸಾಲಿಗೆ ಸೇರಿದೆ ಪ್ರಸ್ತುತ ಗ್ರಂಥ. ಸುಮಾರು 130 ಗ್ರಂಥಗಳಿಂದ ಸ್ವತಃ ಆಯ್ದು ಪದ್ಯ ಅಥವಾ ಗದ್ಯ ಭಾಗ (ಒದೆರಡು ಮಾತ್ರ ಇದೆ) ಗಳನ್ನು ಆರು ವಿಭಾಗ ಗಳಲ್ಲಿ–ಪ್ರೇಮ ಮತ್ತು ಗೃಹಸ್ಥ ಜೀವನ, ಮಾನವ ತತ್ತ್ವಾನುಸಂಧಾನ, ಜೀವನ ಮತ್ತು ಲೋಕಾನುಭವ, ಮಹಾನಾಯಕರು, ಪ್ರಕೃತಿ ಸೌಂದರ್ಯ ವರ್ಣನೆ, ಹಾಸ್ಯ ಮತ್ತು ಚತುರೋಕ್ತಿಗಳು– ವಿಂಗಡಿಸಲಾಗಿದೆ. ಕರ್ನಾಟಕದಲ್ಲಿನ ಒಂದೆರಡು ಶಾಸನಗಳಿಂದಲೂ ಆರಿಸಿರುವುದು ಆಯ್ಕೆಯ ಆಕರಗಳ ವ್ಯಾಪ್ತಿಯನ್ನು ಶಾಸನಗಳ ಸಾಹಿತ್ಯಿಕ ಮೌಲ್ಯವನ್ನೂ ಬಯಲು ಮಾಡುತ್ತದೆ. ಪ್ರತಿ ವಿಭಾಗದಲ್ಲಿಯೂ ನೂರು ನೂರು ಪದ್ಯಗಳಿವೆ. ಎಡಪುಟದಲ್ಲಿ ಮೂಲ, ದೇವನಾಗರೀ ಲಿಪಿಯಲ್ಲಿ; ಬಲಪುಟದಲ್ಲಿ ಅದರ ಸರಳ ಕನ್ನಡ ಅನುವಾದ ಮುದ್ರಿತವಾಗಿವೆ. ಪದ್ಯಗಳ ಆಯ್ಕೆಯಲ್ಲಿ ಸಂಗ್ರಾಹಕರ ಜಾಣ್ಮೆ, ವಿದ್ವತ್ತು, ಪರಿಶ್ರಮ ವ್ಯಕ್ತವಾಗುತ್ತದೆ. ಅನುವಾದ ಜನಸಾಮಾನ್ಯರಿಗೂ ಅರ್ಥವಾಗುವಂತಿದೆ ಮತ್ತು ತಾವೇ ಹೇಳಿಕೊಂಡಿರು ವಂತೆ 'ಶತಮಾನಗಳಿಂದ ಸುಪ್ರಸಿದ್ಧವಾದ ಕನ್ನಡ ವಾಕ್ಯರಚನಾ ಪದ್ಧತಿಯ ಮೂಲಭೂತ ನಿಯಮಗಳನ್ನು' ಕಾಯ್ದುಕೊಂಡು ಬಂದಿದ್ದಾರೆ. ತಮ್ಮ ಸಂಗ್ರಹದ ಬಗ್ಗೆ ಮೊದಲ ನಾಲ್ಕು ಮಾತು ಬರೆಯುತ್ತಾ ಪ್ರತಿವಿಭಾಗದ ವಿಷಯದ ಸ್ಥೂಲ ವಿವೇಚನೆ ಮಾಡಿರುವುದು ಉಚಿತವಾಗಿದೆ. ಇದರಿಂದ ಆಯಾ ವಿಷಯಗಳನ್ನು ಅನುಸರಿಸಲು ಓದುಗರಿಗೆ ಅನುಕೂಲವಾಗುತ್ತದೆ. ಪದ್ಯ–ಛಂದೋಬದ್ಧ–ರೂಪವಾದ ಕವಿವಾಣಿಯ ಬಗ್ಗೆ ಅವರು ಆಡಿರುವ ಮಾತು ಶ್ಲಾಘ್ಯವಾಗಿದೆ. ಸಂಸ್ಕೃತದಲ್ಲಿ ವಿಶೇಷ ಜ್ಞಾನವಿಲ್ಲದವರಿಗೆ ಉಪಯೋಗವಾಗಬೇಕೆಂಬ ಉದ್ದೇಶ ಹೊಂದಿರುವ ಈ 170 ಪುಟಗಳ ಗ್ರಂಥದಲ್ಲಿ ಅಷ್ಟೊಂದು ಮುದ್ರಣಸ್ಖಾಲಿತ್ಯಗಳು ಬರಬಾರದಿತ್ತು. ಒಪ್ಪೋಲೆಗೂ ಕಾಣದ ಇನ್ನೂ ಕೆಲವು ಸ್ಖಾಲಿತ್ಯಗಳಿವೆ. (ಉದಾ. ಪು. 58, ಸಾ. 4; 166. 19) ಅನೇಕ ಕಡೆಗಳಲ್ಲಿ ಸಮಸ್ತ ಪದಗಳನ್ನು ಬಿಡಿಸಿರುವುದು ಕಾಣುತ್ತದೆ. ಪುಸ್ತಕದ ಕೊನೆಯಲ್ಲಿ ಕೊಟ್ಟಿರುವ ಆಕರಸೂಚಿಯೂ, ಅಕಾರಾದಿ ಶ್ಲೋಕಾನುಕ್ರಮಣಿಕೆಯೂ ಪುಸ್ತಕದ ಪರಾಮರ್ಶನ ಮೌಲ್ಯವನ್ನು ಹೆಚ್ಚಿಸಿದೆ. ಇಂತಹ ಕೃತಿಗಳು ಇನ್ನೂ ಹೆಚ್ಚಾಗಿ ಬಂದು ಸಂಸ್ಕೃತದ ಅನರ್ಘ್ಯರತ್ನಗಳ ಪರಿಚಯವಾಗಲೆಂದು ಆಶಿಸುತ್ತೇವೆ.

—ರಾ. ಸೂ. ಶಿವಗಣೇಶಮೂರ್ತಿ

ರಕ್ತತರ್ಪಣ

ಲೇ. ಕೋ. ಚನ್ನಬಸಪ್ಪ,

ಭಾರತ ಸ್ವಾತಂತ್ರ್ಯ ಹೋರಾಟದ ಕಥೆಯನ್ನೊಳಗೊಂಡ ಕಾದಂಬರಿಗಳ ಸಂಖ್ಯೆ ಕನ್ನಡದಲ್ಲಿ ಕಡಮೆ ಯೆಂದೇ ಹೇಳಬಹುದು. ಅಂಥ ವಿರಳ ಮಾಲಿಕೆಯಲ್ಲಿ ಅರಳಿ ಬಂದ ಈ ಕಾದಂಬರಿಗೆ ಸ್ವಾಗತ ಬಯಸು ವದು, ಸಹಜವಾದುದು ತಾನೆ !

ರೋಮಾಂಚಕಾರಿ ಕಥೆಯ ಕುತೂಹಲದಿಂದಾಗಿ ರಕ್ತತರ್ಪಣ ಕಾದಂಬರಿಯು ಸರಾಗವಾಗಿ ಓದಿಸಿ ಕೊಂಡು ಹೋಗುತ್ತದೆ. ಕಾದಂಬರಿಯ ಭೌಗೋಳಿಕ ಸ್ಥಾನ ಬಳ್ಳಾರಿ ಕ್ಷೇತ್ರ. ಆ ಭಾಗದ ಸ್ವಾತಂತ್ರ್ಯ ಹೋರಾಟಗಾರರ ಮೆರವಣಿಗೆಯೊಂದರಿಂದ ಕಾದಂಬರಿ ಆರಂಭವಾಗುತ್ತದೆ. ಹೋರಾಟದ ಬಗೆಗೆ ವಿದ್ಯಾರ್ಥಿಗಳ ಬಿಸಿ ಚರ್ಚೆ, ವೆಲ್ಲೂರು ಸೆಂಟ್ರಲ್ ಜೇಲಿನ ವಿಸ್ಮಯಾನಂದಕರ ಚಿತ್ರ, ಸುಭಾಸ್ ಚಂದ್ರ ಬೋಸರ ಉತ್ತೇಜನಾತ್ಮಕ ಭಾಷಣಗಳು, ಮೈಲಾರ ಮಹಾದೇವಪ್ಪನವರ ಸಾಹಸದ ಮನೋಜ್ಞ ಚಿತ್ರಣ, ಅಝಾದ ಹಿಂದ್ ಫೌಜಿನ ಸೋಲು– ಇವೆಲ್ಲವುಗಳ ನಡುವೆ ಅಲ್ಲಲ್ಲಿ ಬರುವ ಪೋಲಿಸ್ ಇನಸ್ಪೆಕ್ಟರ್ ಶಿವಪ್ಪನಾಯಕನ ಕೌಟುಂಬಿಕ ಚಿತ್ರ ಹಣೆಕಿಕ್ಕಿ ಭಾರತವು ಸ್ವತಂತ್ರ ಭಾರತವಾಗುವುದರೊಂದಿಗೆ ಕಾದಂಬರಿ ಮುಕ್ತಾಯಗೊಳ್ಳುತ್ತದೆ.

ಕಾದಂಬರಿಕಾರರೇ 'ಅರಿಕೆ'ಯಲ್ಲಿ ಹೇಳಿದಂತೆ ಈ ಕಥೆ ಒಬ್ಬ ವ್ಯಕ್ತಿಯ ಬದುಕಿನ ಕಥೆಯಲ್ಲ. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಒಂದು ಜನಾಂಗದ ಹೋರಾಟದ ಕಥೆ ಇದಾಗಿದೆ. ದೇಶದಾದ್ಯಂತ

ಹಬ್ಬಿದ ಮಹಾ ಸಂಗ್ರಾಮದವಿರಾಟ ಸ್ವರೂಪವನ್ನು ಬಳ್ಳಾರಿಯ ಕ್ಷೇತ್ರದಲ್ಲಿ ಪ್ರತಿಫಲಿಸಿ ತೋರಿಸಿದ್ದಾರೆ. ಜನಮನದಲ್ಲಿಯ ವೀರಶ್ರೀಯನ್ನು ಹೊಡೆದೆಬ್ಬಿಸುವಂಥ ವೀರಗೀತೆಗಳೊಂದಿಗೆ ಕಾದಂಬರಿಯ ಮೊದಲು ಹೆಜ್ಜೆಗಳನ್ನು ಉತ್ಸಾಹದಿಂದ ಮುನ್ನಡಿಸುತ್ತಾರೆ. ಆದರೆ ಈ ಉತ್ಸಾಹ ಮುಂದೆ ತನ್ನ ತೀವ್ರತೆಯನ್ನು ಕಳೆದುಕೊಳ್ಳುವಂತೆ ಭಾಸವಾಗುತ್ತದೆ. ದೇಶೀಯ ಪೋಲೀಸ್ ಇನಸ್ಪೆಕ್ಟರ್ ಶಿವಪ್ಪ ನಾಯಕನ ಹೆಸರು; ಶಿವನಾಯಕ, ಶಿವಾನಾಯಕ ಎಂದು ವ್ಯತ್ಯಾಸಗೊಳ್ಳುತ್ತಿರುವುದರ ಔಚಿತ್ಯ ಗೊತ್ತಾಗುವದಿಲ್ಲ. 'ಈ ಕಥೆ ಒಬ್ಬ ವ್ಯಕ್ತಿಯ ಕಥೆಯಲ್ಲ' ಎಂದು ಹೇಳಿದ ಲೇಖಕರು ಅನಾವಶ್ಯಕವಾಗಿ ಶಿವಪ್ಪ ನಾಯಕನ ವಿದ್ಯಾಭ್ಯಾಸ, ಸ್ಥಿತಿ-ಗತಿಗಳನ್ನು ಬಣ್ಣಿಸುತ್ತಿರುವಾಗ ಮರೆತಂತೆ ತೋರುತ್ತದೆ. ಆದರೆ ಕ್ರಾಂತಿಕಾರಿ ಜನನಾಯಕನಾದ ಮೈಲಾರ ಮಹದೇವಪ್ಪನ ಕೌಟುಂಬಿಕ ಚಿತ್ರಣ ಹಿತಮಿತವಾಗಿ ಮೂಡಿ ಕಾದಂಬರಿಯ ಉದ್ದೇಶಿತ ಗುಣವನ್ನು ಕಾಯ್ದುಕೊಳ್ಳುತ್ತದೆ. ಶಿವಪ್ಪನಾಯಕನ ಬಗೆಗೆ ತಪ್ಪಿದ ಕಾದಂಬರಿಕಾರರ ಸಂಯಮವು ಮೈಲಾರ ಮಹದೇವಪ್ಪನ ವಿಷಯದಲ್ಲಿ ತೂಕ ತಪ್ಪಿದಂತೆ ತೋರಿದುದು ಶ್ಲಾಘನೀಯವಾಗಿದೆ. ವೆಲ್ಲೂರ ಸೆಂಟ್ರಲ್ ಜೇಲಿನಲ್ಲಿ ಕಾಣುವ ಕ್ರಾಂತಿಕಾರಿ ಮನೋಭಾವದ ಅಭಿಮನ್ಯು, ಕೊಟ್ರೂರೇಶನಿಗೆ ಮುಡುಪೆಂದು ತೆಗೆದಿರಿಸಿದ ದುಡ್ಡನ್ನೆಲ್ಲ ರಾಷ್ಟ್ರನಿಧಿಗಾಗಿ ಕೊಡುವ ಬಳ್ಳಾರಿಯ ಒಬ್ಬ ಅಜ್ಜಿ, ಶಿವನಾಯಕನ ಅನುಪಸ್ಥಿತಿಯಲ್ಲಿ ಶಾರದೆಯನ್ನು ಸ್ಟೇಶನ್ನಿಗೆ ಕರೆದೊಯ್ಯಲು ಪೋಲೀಸ್ ಬಂದಾಗ ಉಂಟಾದ ಗಲಭೆಯಲ್ಲಿ ತೋರಿದ ಬಳ್ಳಾರಿಯ ಯುವಕನೊಬ್ಬನ ಸಾತ್ವಿಕಕ್ರೋಧ, ಯುವ ಜನಾಂಗದ ಬಿಸಿರಕ್ತವನ್ನು ಜಾಗ್ರತಗೊಳಿಸುವ ಸುಭಾಸ್‌ಚಂದ್ರಬೋಸರ ಭಾಷಣದ ಉಲ್ಲೇಖ–ಇವೆಲ್ಲವು ಕಾದಂಬರಿಯ ಚೈತನ್ಯಯುತ ಅಂಗಗಳಾಗಿ ಸಾರ್ಥಕತೆಯನ್ನು ಪಡೆದಿವೆ.

ಕಾದಂಬರಿಯ ಸೂಕ್ಷ್ಮ ನಿರೀಕ್ಷೆಯಿಂದಾಗಿ ಅಲ್ಲಲ್ಲಿ ನುಸುಳಿಕೊಂಡಿರುವ ಹಲವಾರು ಅಲ್ಪದೋಷಗಳೂ ಇಲ್ಲದಿಲ್ಲ. 30ನೆಯ ಪುಟದಲ್ಲಿ ಕಾಲೇಜ ಹಾಸ್ಟೆಲಿನಲ್ಲಿ ಚರ್ಚೆಗೆ ತೊಡಗಿದ ವಿದ್ಯಾರ್ಥಿ ಹೋರಾಟಗಾರರು ಮೂವರಾದರೆ 1661ಯ ಪುಟದಲ್ಲಿ ಅವರೇ ನಾಲ್ವರಾಗುತ್ತಾರೆ. ಈ ಸಂದರ್ಭವೇ ಬೇರೆಯೆಂದು ಭಾವಿಸಿಕೊಂಡರೆ, ಶಶಿಧರ, ಮುಕುಂದ ಮತ್ತು ಬಸವರಾಜ ಇವರು ಕಾಲೇಜು ವಿದ್ಯಾರ್ಥಿಗಳಾಗಿ ಹೋರಾಟ ಮಾಡುತ್ತಿರುವಾಗ ಪೋಲೀಸ್ ಇನಸ್ಪೆಕ್ಟರನಾಗಿದ್ದ ಶಿವನಾಯಕ ಅವರು ಸಹ ವಿದ್ಯಾರ್ಥಿಯಾಗಿದ್ದುದು ಯಾವಾಗ ಎಂಬುದಕ್ಕೆ ಸಮಾಧಾನಕರವಾದ ಉತ್ತರ ದೊರೆಯುವುದಿಲ್ಲ. ಇಂಥದೇ ಇನ್ನೊಂದು ಪ್ರಸಂಗವಿದೆ. ಹೊಸರೀತಿಯಲ್ಲಿ ತನ್ನ ಗಂಡನಿಗೆ ಅಪಾಯ ಕಾದಿದೆ ಎಂಬ ಸುದ್ದಿ ಶಿವಪ್ಪನಾಯಕನಿಂದ ತನಗೆ ತಿಳಿದಿದ್ದರೂ ಗಂಡ ಬಂದಾಗ ರುದ್ರಮ್ಮ ಇದನ್ನು ಏಕೆ ತಿಳಿಸಲಿಲ್ಲ?" "ನೀವು ನಾಲ್ಕು ದಿನ ಚಳವಳಿ ನಿಲ್ಲಿಸಿದ್ರೆ......" ಎಂದು ಮಾತ್ರ ಏಕೆ ಹೇಳಬೇಕು? ಮುಂದೂ ಸಹ ಶಿವಪ್ಪನಾಯಕನಿಂದಲೂ ಇದರ ಬಗ್ಗೆ ಏಕೆ ಉಲ್ಲೇಖ ತರುವದಿಲ್ಲ? ಇವುಗಳ ಬಗ್ಗೆ ಪ್ರಶ್ನಾರ್ಥಕ ಚಿಷ್ನೆಗಳೇ ಉಳಿಯುತ್ತವೆ.

ಒಟ್ಟಿನಲ್ಲಿ ಕಾದಂಬರಿಯು ಇಂದಿನ ತರುಣ ಜನಾಂಗಕ್ಕೆ ಹಿಂದಣ ಹಿರಿಯರ ಆತ್ಮಬಲಿದಾನ–ಸರ್ವಸ್ವಾರ್ಪಣಗಳ ನೈಜ ಚಿತ್ರಣ ನೀಡುವ ಮೂಲಕ ತನ್ನ ಸಾರ್ಥಕತೆಯನ್ನು ಸಾಧಿಸುತ್ತದೆ. ಸ್ವಾತಂತ್ರ್ಯ ಹೋರಾಟದ ಸನ್ನಿವೇಶವನ್ನು ಓದುಗರ ಕಣ್ಣಿಗೆ ಕಟ್ಟುತ್ತದೆ. ನ್ಯಾಯಾಧೀಶ ಸ್ಥಾನದಲ್ಲಿದ್ದೂ ಕನ್ನಡ ಸೇವೆ ಮಾಡುತ್ತಿರುವ ನ್ಯಾ.ಮೂ.ಕೋ. ಚೆನ್ನಬಸಪ್ಪನವರಿಂದ ಇಂಥ ಹಲವಾರು ಕೃತಿಗಳು ಹೊರ ಹೊರಬರಲೆಂದು ಹೃದಯಾರೆ ಹಾರೈಸುತ್ತೇನೆ.

—ಸಂಗಮನಾಥ ಜಿ. ಹಂಡಿ

ಕವಿಗಳು ಕಂಡ ಕುವೆಂಪು

ಸಂ. ಶ್ರೀ ಎಂ. ಸಿ. ವಸಂತಕುಮಾರ್, ಎಂ. ಎ, ಪ್ರ: ಶ್ರೀ ಹೆಚ್. ಆರ್. ರಮೇಶ್, ಉಷಾ ಸಾಹಿತ್ಯಮಾಲೆ, ಮೈಸೂರು–1, ಪ್ರಥಮ ಮುದ್ರಣ 1971, ಪುಟಗಳು 12+112 ಬೆಲೆ: ಕ್ಯಾಲಿಕೋ 8.00, ಸಾಧಾರಣ 3.00

ಆಧುನಿಕ ಕನ್ನಡ ಸಾಹಿತ್ಯದ ಹೆಸರಾದ ಕವಿಗಳಲ್ಲಿ ಕುವೆಂಪು ಅವರು ಅವಿಸ್ಮರಣೀಯರು. ಕನ್ನಡ ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದಲೂ ಅವರೊಂದು ಮೈಲಿಗಲ್ಲು. ಹಿಂದಿನ ಒಂದೆರಡು ದಶಕಗಳ ಸಾಹಿತ್ಯದ ಇತಿಹಾಸ 'ಕುವೆಂಪು ಯುಗ' ಎಂಬ ನಾಮಕರಣವನ್ನೆ ತಳೆಯಬೇಕಾಗುತ್ತದೆ. ಇಂತಹ ಹಿರಿಯ ಕವಿಗಳನ್ನು ಕುರಿತಂತೆ ಪ್ರಸ್ತುತ ಗ್ರಂಥದಲ್ಲಿ ಬೇರೆ ಬೇರೆ ಕವಿಗಳಿಂದ ರಚಿಸಲ್ಪಟ್ಟ ಅರುವತ್ತೇಳು ಕವನಗಳಿವೆ. ಮಹಾಕವಿಗಳ ಅರುವತ್ತೇಳನೆಯ ಹುಟ್ಟು ಹಬ್ಬದ ಸವಿನೆನಪಿಗೆ ಕವಿಕುಲದ ಕಾಣಿಕೆಯ ಈ ಕೃತಿ ತುಂಬ ಸ್ವಾಗತಾರ್ಹವಾದುದು. ಸಂಪಾದಕರಾದ ಶ್ರೀ ಎಂ. ಸಿ. ವಸಂತಕುಮಾರ್ ಅವರ ಕಾರ್ಯ ಮೆಚ್ಚುಗೆಗೆ ಪಾತ್ರವಾಗುವಂಥದು.

ಪ್ರಸ್ತುತ ಸಂಕಲನದಲ್ಲಿ ವಿವಿಧ ಮುಖಗಳಲ್ಲಿ ವೈವಿಧ್ಯವನ್ನು ಕಾಣಬಹುದು: ಕುವೆಂಪು ಅವರ ಸಮಕಾಲೀನರು. ಸ್ನೇಹಿತರು. ಶಿಷ್ಯರು. ಅವರ ಕಾವ್ಯಪ್ರೇಮಿಗಳು. ಅವರ ಕಾವ್ಯಗಳಿಂದ ಪ್ರಭಾವಿತರಾಗಿ ಸಾಹಿತ್ಯ ಕ್ಷೇತ್ರದಲ್ಲಿ ಸಿದ್ಧಿ ಪಡೆದ ಜನ–ಹೀಗೆ ಎಲ್ಲರೂ ಇಲ್ಲಿ ಕವಿತೆ ಬರೆದಿದ್ದಾರೆ. ಅವರಲ್ಲಿ ಕನ್ನಡಿಗರಧಿಕರಿದ್ದಾರೆ. ಬಂಗಾಳಿಗಳಿದ್ದಾರೆ. ತೆಲುಗರಿದ್ದಾರೆ. ಛಂದಸ್ಸಿನ ದೃಷ್ಟಿಯಿಂದ ಕಂದ–ವೃತ್ತಗಳಿವೆ. ತ್ರಿಪದಿಗಳಿವೆ. ವಿಶಿಷ್ಟವಾದ ಲಯವನ್ನುಳ್ಳ ಚತುಷ್ಪದಿಗಳಿವೆ. ಮುಕ್ತಛಂದದ ಕವಿತೆಗಳಂತೂ ಬಿದ್ದಷ್ಟು ಇವೆ. ಕೆಲವು ಕವಿತೆಗಳು ಈ ಹಿಂದೆ ವಿವಿಧ ಸಂಕಲನಗಳಲ್ಲಿ ಬೆಳಕು ಕಂಡಿದ್ದರೆ ಮತ್ತೆ ಕೆಲವು ಈ ಸಂಲಕನಕ್ಕಾಗಿಯೆ ರಚಿತವಾದುವಾಗಿವೆ. ವಿಷಯದ ದೃಷ್ಟಿಯಿಂದ ಎಲ್ಲ ಕವಿತೆಗಳ ಕೇಂದ್ರಬಿಂದು ಒಂದೇ ಆದುದರಿಂದ ಅಲ್ಲಲ್ಲಿ ಪುನರುಕ್ತಿ ಕಂಡು ಬಂದರೂ ಸಾಕಷ್ಟು ವೈವಿಧ್ಯವಿದೆ.

ಕುವೆಂಪು ಅವರನ್ನು ಕುರಿತು ಪರಿಚಯಾತ್ಮಕವಾಗಿ ಮಾತನಾಡುವುದು ಹಾಸ್ಯಾಸ್ಪದ. ಅವರ ಹಿರಿಯ ವ್ಯಕ್ತಿತ್ವ. ಕನ್ನಡಪ್ರೇಮ. ಪ್ರಕೃತಿ ಪ್ರೇಮ. ಕಾವ್ಯಸತ್ವ ಹಾಗೂ ಶ್ರೀರಾಮಾಯಣ ದರ್ಶನಂ ಮಹಾಕಾವ್ಯದ ವೈಶಿಷ್ಟ್ಯ–ಈ ಮೊದಲಾದ ವಿಚಾರಗಳನ್ನು ಇಲ್ಲಿ ಮೂಡಿ ಬಂದಿರುವ ಕವಿವಾಣಿಯಲ್ಲಿಯೇ ನಿರೂಪಿಸುತ್ತೇನೆ.

ಕುವೆಂಪು ಎನ್ನುವುದು ಪೆಂಪು–ಕಂಪುಗಳಿಗೆ ಇನ್ನೊಂದು ಹೆಸರು. ಅವರು ಸಹ್ಯಾದ್ರಿ ಶಿಶುವಾಗಿ ಹುಟ್ಟಿ. ಮಲೆಯ ಮಡಿಲಲ್ಲಿ ವನ್ಯಸ್ತನ್ಯಪಾನದಿಂದ ಬೆಳೆದು ಎತ್ತರೆತ್ತರಕೇರಿ ಜಗವಗಲ ಯುಗವಗಲ ವ್ಯಾಪಿಸಿದವರು. ಕನ್ನಡ ಸರಸತಿಯ ಸವಿಗಣ್ಣಾದ ಅವರು ಆಕೆಯ ಯುಗಯುಗದ ತಪದ ಫಲದಿಂದ ಜನ್ಮತಾಳಿದವರು. ಸವೆದ ದಾರಿಯಲ್ಲಿಯೆ ದಾರಿ ತಪ್ಪಿ ಜಾರುತ್ತ ಅಂಧರಾಗಿ ನಡೆಯುವವರಿಗೆ ಹೊಸ ದಾರಿ ತೆರೆದ ಮಹನೀಯರವರು. ಕೊಳಲನ್ನು ಹಿಡಿದು ರಾಗ–ರಾಗಗಳಿಂದ ಜನತೆಯ ಎದೆಯನ್ನು ಮಿಡಿದು ವಿಶಿಷ್ಟ ಕಾಣ್ಕೆಗೆ ಕಣ್ಣನಿತ್ತವರು. ಹೊಗಳಿಕೆಯ ಈ ಹಾರ ಆಹಾರಗಳಿಗಾಗಿ ಬಾಯಿಬಿಟ್ಟು ತಗ್ಗಿ–ಬಗ್ಗಿ–ಕುಗ್ಗಿ ಕುರುಚಲಾದವರಲ್ಲ. ಪಿಸುಣಿಗರ ಹುಸಿನುಡಿಗೆ ಜಗ್ಗದೆ ನಿಂತ ಗೊಮ್ಮಟರವರು.

ಕುವೆಂಪು ಅವರು ಅನೇಕ ಕೃತಿರತ್ನಗಳನ್ನು ಕಡೆದ ನುಡಿಯ ರೂವಾರಿ. ಅವರ ಕನ್ನಡ ಪ್ರೇಮ ಅಪಾರವಾದುದು. ಕನ್ನಡ ಮಂತ್ರದೀಕ್ಷೆಯ ಕೊಟ್ಟು ನಾಡ ಹೃದಯದ ಶಿವಶಕ್ತಿಯನ್ನು ಎಚ್ಚರಿಸಿದವರು. ಕನ್ನಡ ತಾಯಿಯ ಹೊನ್ನ ನಂದೀಕೋಲನ್ನು ಮೇಲಮೇಲಕ್ಕೆತ್ತಿ ಮೆರೆಸಿದವರು. ಕನ್ನಡವೆ ಅವರು. ಅವರೆ ಕನ್ನಡ: ಈ ವೃಕ್ಷರಾಜನ ಮುಂದೆ ನಿಂತವರೆ ಧನ್ಯರು. ಕುಳಿತವರೆ ಮಾನ್ಯರು.

ನಿಸರ್ಗಪ್ರಿಯರಾದ ಕುವೆಂಪು ಅವರ ಜೀವನವೆ ಒಂದು ಕಾವ್ಯ. ಅವರ ಕವಿತೆಗಳನ್ನು ಕೇಳಿದರೆ ಮನಸಿನಂಗಳದಲ್ಲಿ ತಂಪು ತಂಪು. ತ್ರಿವಿಕ್ರಮ ರೂಪಿ ಪರಮಾತ್ಮನನ್ನು ವಾಮನ ರೂಪಿನಲ್ಲಿ ಕಾಣಿಸಿಕೊಟ್ಟವರು ಅವರಾದುದರಿಂದ ಬಾನಿಗೆ ಬಾನೇ ಸಾಟಿಯಾಗುವಂತೆ ಕುವೆಂಪುಗೆ ಕುವೆಂಪುವೇ ಸಾಟಿ. ಅವರೊಂದು ಶ್ರುತಿಗೊಳಿಸಿಟ್ಟ ವೀಣೆ. ಯಾರು ಯಾವಾಗ ನುಡಿಸಿದರೂ ಅಪಸ್ವರವನ್ನಂತೂ ಕಾಣುವಂತಿಲ್ಲ. ಜಡದಲ್ಲೂ ಚೇತನವರಸಿ ಶ್ರೀಕಲೆ ಜೀವ ಮೂಡಿಸಿದ ರಸಋಷಿ ಅವರು.

ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ' ಕನ್ನಡಮ್ಮನ ಶಿರದ ಸೀಮಂತ ಮಾಣಿಕ. ವಾಲ್ಮೀಕಿಯ ಕಾವ್ಯಗಂಗೆಯನ್ನು ಕನ್ನಡದ ನೆಲದಲ್ಲಿ ಹರಿಸಿದ ಮಹಾಕಾವ್ಯರಸ ಜಾಹ್ನವಿ ಅವರು. ಅವರ ಈ ಮಹಾಕಾವ್ಯ ವಿಸ್ತಾರದಲ್ಲಿ ವ್ಯೋಮಾಯಣ. ಅಳತೆಗಳವಡದ ಈ ಕಾವ್ಯಬ್ರಹ್ಮರು ಅಧ್ಯಾತ್ಮ ಗಗನದ ಗರುಡರು. ಈ ಕೃತಿಯಿಂದ ಸಾಹಿತ್ಯಬರಗಾಲದ ಬವಣೆ ಕಳೆದಿದೆ.

ಯಶೋನ್ನತರೂ, ಕವಿ ಕುಲ ದೀಪಕರೂ. ಅನಾದಿ ಕವಿಗಳೂ. ಗಂಗೋತ್ರಿಯ ರಸಸರಸಿಯ

ರಾಜಹಂಸರೂ, ಮತಿದಾಸ್ಯ ತಿಮಿರಕ್ಕೆ ಉದಯರವಿಯೂ ಆದ ಕುವೆಂಪು ಅವರಿಗೆ ನಾವೆಲ್ಲರೂ ಮಣಿಯೋಣ, ಅವರು ನೂರುಕಾಲ ಬಾಳಲೆಂದು ಹಾರೈಸೋಣ.

ಇಲ್ಲಿ ಮೂಡಿ ಬಂದಿರುವ ಕವಿತೆಗಳಲ್ಲಿ ಎಲ್ಲವೂ ಮೇಲ್ತರಗತಿಯವು ಎನ್ನುವಂತಿಲ್ಲ. ಅವುಗಳಲ್ಲಿ ತರ–ತಮ ಭೇದವುಂಟು. ಸುಂದರವೆಂದು ಕಂಡು ಬಂದ ಕೆಲವು ಕವಿತೆಗಳ ನಾಲ್ಕಾರು ಸಾಲುಗಳನ್ನು ಇಲ್ಲಿ ಉದ್ಧರಿಸುತ್ತೇನೆ.

........................ಜಗದ್ಧಾತ್ರಿ
ಸಹ್ಯಾದ್ರಿ ಚಾಮುಂಡಿಯೆಂಬೆರಡು ಮೊಲೆಯೂಡಿ
ನಿನ್ನ ಹೊರೆದಳು, ಪರಮಹಂಸ ಚರಣ ಸರೋಜ
ಪೀಯೂಷ ಪಾನಸಂಪುಷ್ಟ ಷಟ್ಪದ ನೀನು;
ಹಲವು ಹಾಲುಗಳ ಕುಡಿದ ಜಗಜಟ್ಟಿ
(ತ್ರಿವಿಕ್ರಮ: ಸಿ.ಪಿ.ಕೆ.)

ಗುಣಕೆ ಮತ್ಸರಮುಂಟೆ? ದೇಗುಲದ ಗಂಟೆಯುಲಿ
ಕಂಬ ಕಂಬವ ತುಂಬಿ ಮೈದುಂಬಿ ನಿಂತ ಬಗೆ
ನಿಂತೆ; ನಿಂತೆನೆ? ನಾದ ತಂತುವಾದೆನು ಕೊನೆಗೆ
ರಸಋಷಿಯ ಪದ್ಮಕಾಂತಿಯ ಪರ್ಣಶಾಲೆಯಲಿ!
(ಶ್ರೀ ರಾಮಾಯಣ ದರ್ಶನವನೋದಿ: ಚೆನ್ನವೀರ ಕಣವಿ)

ಓಗೆಯೋ ಇಂತಹ ಸುಂದರವಾದ ಪಂಕ್ತಿಗಳನ್ನು ಸಂಕಲನದುದ್ದಕ್ಕೂ ಕಾಣಬಹುದು.

ಇಂತಹ ವಿಶಿಷ್ಟವಾದ ಸಂಭಾವನಾ ಸಂಕಲನವೊಂದನ್ನು ಕನ್ನಡ ಸಾಹಿತ್ಯಕ್ಕೆ ತಂದುಕೊಟ್ಟಿರುವ ಶ್ರೀ ಎಂ. ಸಿ. ವಸಂತಕುಮಾರ್ ಅವರು ಅಭಿನಂದನೀಯರು. 'ಜೀರ್ಣಮಂಗೇ ಸುಭಾಷಿತಂ' ಎಂಬಂತಾಗಿ ಹೋಗುತ್ತಿದ್ದ ಅನೇಕ ಕವಿಗಳ ಸಂವೇದನೆಗಳನ್ನು ಚಿರಂತನವಾಗಿ ನಿಲ್ಲುವಂತೆ ಮಾಡಿದ್ದಾರೆ, ಕನ್ನಡಿಗರೆಲ್ಲರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಕವಿತೆಗಳನ್ನು ವಿವಿಧ ಕವಿಗಳಿಂದ ಸಂಗ್ರಹಿಸುವುದು, ಅವುಗಳಲ್ಲಿ ಉತ್ತಮವಾದುವುಗಳನ್ನು ವಿಮರ್ಶನಮತಿಯಿಂದ ಆಯ್ಕೆ ಮಾಡುವುದು, ಅವುಗಳು ಮುದ್ರಣವಾಗುವ ವಿವಿಧ ಹಂತಗಳಲ್ಲಿ ತಪ್ಪುಗಳುಳಿಯದಂತೆ ಎಚ್ಚರಿಕೆ ವಹಿಸುವುದು–ಈ ಮುಂತಾದ ಕಾರ್ಯಗಳು ಸಂಪಾದಕರನ್ನು ತುಂಬ ಬಳಸಿಕೊಳ್ಳುತ್ತವೆ. ಇದೆಲ್ಲವನ್ನೂ ತಾಳ್ಮೆಯಿಂದ ನಿರ್ವಹಿಸಿ, ಮುದ್ರಣದೋಷಗಳನ್ನು ನಿವಾರಿಸಿ ಸಂಪಾದಕರು ಈ ಸಂಕಲನವನ್ನು ಅಂದವಾಗಿ ತಂದಿದ್ದಾರೆ. ಸಂಪಾದಕರ ಮಾತಿನಲ್ಲಿಯೇ ಹೇಳುವುದಾದರೆ "ಮುಂದೆ ಈ ಮಹಾಕವಿಯ ನೂರನೆಯ ಹುಟ್ಟುಹಬ್ಬಕ್ಕೆ ನೂರು ಕವಿತೆಗಳನ್ನೊಳಗೊಂಡು ಪುನರ್ ಮುದ್ರಿತವಾದ ಈ ಗ್ರಂಥವನ್ನು ಅರ್ಪಿಸುವ ಅವಕಾಶ ದೊರೆಯಲೆಂಬುದೇ ನನ್ನ ಹಂಬಲ".

*   *   *   *   *

ಪೆಮ್ಮಿಶೆಟ್ಟಿ ವಿರಚಿತ ಗುರುಭಕ್ತಾಂಡಾರಿ ಚರಿತೆ

ಸಂ. ಎನ್. ಬಸವಾರಾಧ್ಯ, ಎಂ.ಎ., ಪ್ರ: ಪ್ರಾಚ್ಯಕಾವ್ಯ ಪ್ರಕಾಶನ ಮಂದಿರ, 743, ಮೂರನೆಯ ಬ್ಲಾಕ್, ರಾಜಾಜಿ ನಗರ, ಬೆಂಗಳೂರು–10. ಪುಟಗಳು 22 + 111, ಬೆಲೆ 3.00.

ಕ್ರಿ.ಶ. ಸುಮಾರು 1650ರಲ್ಲಿ ಇದ್ದ ಪೆಮ್ಮಿಸೆಟ್ಟಿ ಎಂಬ ಕವಿಯ ಗ್ರಂಥ 'ಗುರುಭಕ್ತಾಂಡಾರಿ ಚರಿತೆ' ವಾರ್ಧಕ ಷಟ್ಪದಿಯಲ್ಲಿರುವ ಮೂರು ಸಂಧಿಗಳ ಶೃಂಗಾರ–ಭಕ್ತಿಪೂರಿತ ಪುಟ್ಟ ಕಾವ್ಯ. ತೆಲುಗು ಕವಿ ಪಾಲ್ಕುರಿಕೆ ಸೋಮನಾಥನ 'ಪಂಡಿತಾರಾಧ್ಯ ಚರಿತೆ'ಯಲ್ಲಿ ವಿಸ್ತಾರವಾಗಿ ಬರುವ ಗುರುಭಕ್ತಾಂಡಾರಿ ಕಥೆಯನ್ನು ಪೆಮ್ಮಿ ಸೆಟ್ಟಿಯು ಸಂಗ್ರಹಿಸಿ ಒಂದೆರಡು ಉಚಿತವಾದ ಬದಲಾವಣೆಗಳನ್ನು ಮಾಡಿಕೊಂಡು ಹೃದ್ಯವಾಗಿ ನಿರೂಪಿಸಿದ್ದಾನೆ.

ಬಸವಣ್ಣನವರು ನೆಲೆಸಿದ್ದ ಕಲ್ಯಾಣನಗರದ ಈಶಾನ್ಯ ಭಾಗದಲ್ಲಿ ಬೆಜ್ಜವಾಡಿ ಎಂಬ ಪಟ್ಟಣ. ಗುರುಭಕ್ತಿಯೇ ತನು-ಮನವಾಗಿದ್ದ ಗುರುಭಕ್ತಾಂಡಾರಿ ಅಲ್ಲಿಯ ದೊರೆ. ರಂಭೆ-ಊರ್ವಶಿಯರನ್ನೂ ಸೋಲಿಸುವ ಸೌಂದರ್ಯದಿಂದ ಕೂಡಿದ ಪ್ರೌಢಾವತಿ ಆ ಪಟ್ಟಣದ ಸೂಳೆ. ಒಂದು ದಿನ ಶಿವಪೂಜೆಗೆಂದು ಹೊರಟಿದ್ದ ರಾಜನು 'ನಗೆ ಮೊಗದ ಮಿಗೆಬಿಗಿದ ಕುಚಯುಗದ ಕಚಭರದ ಜಗಜಾಣೆ'ಯಾದ ಆ ಪ್ರೌಢಾವತಿಯನ್ನು ಕಂಡು 'ತನುಮನ ಪ್ರಾಣ ಕರಣಗಳು' ಕಟ್ಟಿ ಕೆಡಹಲ್ಪಟ್ಟು ಮುಂದಡಿಯಿಡಲಾರ ದವನಾಗುತ್ತಾನೆ. 'ಎಸೆವ ಪ್ರಾಯದ ವಿಟನು, ಚೆನ್ನಿಗನು, ಕುಲತಿಲಕಕೋವಿದನು, ರಸಿಕಸಂಪನ್ನನು' ಅವನನ್ನು ನಿನ್ನ ಬಳಿಗೆ ಬರಮಾಡಿಕೊ- ಎಂಬ ಮಾತನ್ನು ರಾಜನು ತನ್ನ ದೂತರ ಮೂಲಕ ಪ್ರೌಢಾವತಿಗೆ ಹೇಳಿಸುತ್ತಾನೆ. ಇದರಿಂದ ಪ್ರಯೋಜನವಾಗದೆ ರಾಜನೆ ಖುದ್ದಾಗಿ ಅವಳನ್ನು ಸಂಧಿಸಿ ಮಾತನಾಡುತ್ತಾನೆ. ಗುರುನಿಷ್ಠಾಪರನಾದ ನಿನಗೆ ನನ್ನ ಸಂಗ ಸರಿಯಲ್ಲ ಎನ್ನುತ್ತಾಳೆ. ರಾಜನು ಹಲವು ಬಗೆಗಳಲ್ಲಿ ಅವಳನ್ನು ಕೂಟಕ್ಕೆ ಒಪ್ಪಿಸುವ ಪ್ರಯತ್ನ ಮಾಡುತ್ತಾನೆ. ಪ್ರೌಢಾವತಿಯು ಸುಂದರಿಯರ ಮಾತನ್ನು ಮೀರದೆ ಶಿವಸಾಯುಜ್ಯವನ್ನು ಪಡೆದ ಶ್ವೇತ, ಮಲುಹಣ, ಕುಮಾರಪಾಲ ಗೂರ್ಜರ-ಇವರುಗಳ ಕಥೆಯನ್ನು ಹೇಳಿ ತನ್ನ ಮಾತನ್ನು ಮೀರದೆ ಶಿವಪೂಜೆಯಲ್ಲಿ ನಿರತನಾಗಬೇಕೆಂದು ಅಂಗಲಾಚುತ್ತಾಳೆ. ಆದರೆ 'ಕಂದರ್ಪ ತಾಪ ಬಳಿಕಿಮ್ಮಡಿಸೆ ಕಂಗೆಟ್ಟು ಕಳವಳಿಸಿ ಕಡುತವಕದಿ ಬಂದು' ರಾಜನು ಪ್ರೌಢಾವತಿಯನ್ನು ಹಿಡಿಯಲು ಒಡನೆಯೆ ಅವಳು ನಾನು ಈ ಹಿಂದೆ ನಿನ್ನ ಗುರುವಿನಿಂದ ಮುಟ್ಟಲ್ಪಟ್ಟವಳು ಎನ್ನುತ್ತಾಳೆ. ಇದನ್ನು ಕೇಳಿದೊಡನೆಯೆ ಗುರು ಭಕ್ತಾಂಡಾರಿಯು ಕೆಂಡವನ್ನು ಮುಟ್ಟಿದವನಂತೆ ಹಿಂದೆ ಜಿಗಿದು ಕಂಗೆಟ್ಟು ಕಾಡನ್ನು ಸೇರಿ ತಾನು ಮಾಡಿದ ತಪ್ಪಿಗಾಗಿ ತಾನೇ ಕಣ್ಣುಗಳನ್ನು ಕಿತ್ತುಕೊಂಡು, ನಾಲಗೆಯನ್ನು ಸಿಗಿದುಕೊಂಡು, ಕಾಲುಗಳನ್ನು ಕಡಿದುಕೊಂಡು, ಕಡೆಗೆ ಕೊರಳನ್ನು ಕತ್ತರಿಸಿಕೊಳ್ಳಲುಹೋದಾಗ ಶಿವನು ಪ್ರತ್ಯಕ್ಷನಾಗಿ ಕರುಣಿಸುತ್ತಾನೆ. ಇದು ಪ್ರಸ್ತುತ ಗ್ರಂಥದ ಕಥಾಸಾರ. ಸಂಪಾದಕರೆ ಹೇಳಿರುವಂತೆ ಈ ಕಾವ್ಯದಲ್ಲಿ "ಕಾಮ, ಕಾಮದಿಂದ ಪ್ರೇಮ, ಪ್ರೇಮದಿಂದ ಭಕ್ತಿ ಭಕ್ತಿಯಿಂದ ವಿರಕ್ತಿ, ವಿರಕ್ತಿಯಿಂದ ಶಿವ ಸಾಕ್ಷಾತ್ಕಾರ" ಈ ಕ್ರಮ ವ್ಯಕ್ತವಾಗುತ್ತದೆ.

ಸಂಪಾದಕರು ಪ್ರಸ್ತುತ ಗ್ರಂಥವನ್ನು ಎಂಟು ಹಸ್ತಪ್ರತಿಗಳ ಆಧಾರದಿಂದ ಸಂಪಾದಿಸಿದ್ದಾರೆ. ಆರು ಪ್ರತಿಗಳಿಗೆ ಕ್ರಮವಾಗಿ ಕ, ಗ, ಚ, ಟ, ಡ, ಣ ಎಂದು ಹೆಸರು ಕೊಟ್ಟು ಅವುಗಳ ಪಾಠಾಂತರಗಳನ್ನು ಅಡಿಟಿಪ್ಪಣಿಯಲ್ಲಿ ಸೂಚಿಸಿದ್ದಾರೆ. ಇವುಗಳ ಜೊತೆಗೆ ಮದರಾಸಿನ ಪ್ರಾಚ್ಯಕೋಶಾಗಾರದ ಒಂದು ಓಲೆ ಪ್ರತಿಯನ್ನೂ, ಮೈಸೂರು ಪ್ರಾಚ್ಯ ವಿದ್ಯಾ ಸಂಶೋಧನಾಲಯದ ಕೆ. 191ನೆಯ ನಂಬರಿನ ಮತ್ತೊಂದು ಓಲೆಯ ಪ್ರತಿಯನ್ನೂ ಅವಶ್ಯ ಕಂಡು ಬಂದೆಡೆಗಳಲ್ಲಿ ಬಳಸಿಕೊಂಡಿದ್ದಾರೆ. ಈ ಎಲ್ಲ ಹಸ್ತಪ್ರತಿಗಳೂ ವಿಭಿನ್ನ ಮೂಲಕ್ಕೆ ಸೇರಿದುವಾಗಿರುವುದರಿಂದ, ಯಾವುದೋ ಒಂದು ಪ್ರತಿಯನ್ನು ಮೂಲವಾಗಿರಿಸಿಕೊಳ್ಳದೆ ಸಂಪಾದಕರು ಯಾವ ಪ್ರತಿಯ ಪಾಠ ಉತ್ತಮವೋ ಅದನ್ನು ಆರಿಸಿಕೊಂಡು ಮಿಶ್ರಪಾಠವನ್ನು ಅಳವಡಿಸಿದ್ದಾರೆ.

ಸಂಪಾದಕರು ವಿಸ್ತಾರವೂ, ಉಪಯುಕ್ತವೂ ಆದ ಪೀಠಿಕೆಯನ್ನು ರಚಿಸಿದ್ದಾರೆ. ಪ್ರಸ್ತುತ ಕಾವ್ಯದ ಕಥಾಸಾರ, ಕಾವ್ಯ ವಿಮರ್ಶೆ, ತೆಲುಗಿನ ಸೋಮನಾಥನ ಪಂಡಿತಾರಾಧ್ಯ ಚರಿತೆಯ ಕಥೆಯನ್ನು ಅನುಸರಿ ಸುವಾಗ ಪೆಮ್ಮಿಸೆಟ್ಟಿಯು ಮಾಡಿಕೊಂಡಿರುವ ಬದಲಾವಣೆಗಳು ಹಾಗೂ ಅವುಗಳ ಔಚಿತ್ಯ, ಕನ್ನಡ ಕಾವ್ಯಗಳಲ್ಲಿ ಗುರುಭಕ್ತಾಂಡಾರಿಯ ಕಥೆಯ ಇತಿಹಾಸ-ಇವಿಷ್ಟು ವಿಷಯಗಳನ್ನು ಅಲ್ಲಿ ವಿವೇಚಿಸಿದ್ದಾರೆ. ಉದ್ದಕ್ಕೂ ನಡೆದಿರುವ-ಕವಿಗೆ ಹತ್ತಿರವಾಗಬಲ್ಲ-ಉತ್ತಮ ಪಾಠಗಳ ಆಯ್ಕೆ, ಸಮರ್ಪಕವಾದ ಅರ್ಥ ಕೋಶ-ಈ ಮುಂತಾದವುಗಳಲ್ಲಿ ನುರಿತ ಗ್ರಂಥಸಂಪಾದಕನ ಜಾಣ್ಮೆ ಎದ್ದು ಕಾಣುತ್ತದೆ.

ಪೆಮ್ಮಿ ಸೆಟ್ಟಿಯು ಗುರುಭಕ್ತಾಂಡಾರಿಯ ಕಥೆಯನ್ನು ಮೊತ್ತಮೊದಲ ಬಾರಿಗೆ ಸ್ವತಂತ್ರ ಕಾವ್ಯ ವಾಗಿ ರಚಿಸಿ ಕೀರ್ತಿಶಾಲಿಯಾದರೆ, ಅದನ್ನು ಮೊತ್ತಮೊದಲ ಬಾರಿಗೆ ಬೆಳಕಿಗೆ ತಂದ ಕೀರ್ತಿ ಶ್ರೀ ಎಸ್. ಬಸವರಾಧ್ಯ ಅವರಿಗೆ ಸಲ್ಲಬೇಕು. ಪ್ರಾಚ್ಯಕಾವ್ಯಮಾಲೆಗೊಂದು ಒಳ್ಳೆಯ ಕೃತಿ ಮುದ್ರಣವನ್ನು ಕಂಡು ಸೇರ್ಪಡೆಯಾಯಿತು ಎನ್ನುವುದರಲ್ಲಿ ಸಂದೇಹವಿಲ್ಲ.

—ಕೆ. ಅನಂತರಾಮು

ಸ್ನೇಹಸೇತು

ಏರ್ಯ ಲಕ್ಷ್ಮೀನಾರಾಯಣ ಆಳ್ವ, ಶುಭದಾ ಪ್ರಕಾಶನ, ಮೊಡಂಕಾಪು, ದ.ಕ.

'ಪತ್ರ ಸಾಹಿತ್ಯ' ಪ್ರಕಾರ ಕನ್ನಡದಲ್ಲಿ ಕಾಣಿಸಿಕೊಂಡದ್ದು, ಇತರ ಪ್ರಕಾರಗಳಂತೆ ಇಂಗ್ಲಿಷ್ ಸಾಹಿತ್ಯ ಪ್ರಭಾವದಿಂದ. ಇದರ ಗುಣ ಲೇಖಕರನ್ನು ಅವಲಂಬಿಸಿರುತ್ತದೆ. ಲೇಖಕನ ಓದು, ಪ್ರವಾಸ ಹೆಚ್ಚಿಗೆ ಇದ್ದಷ್ಟೂ ಪತ್ರಸಾಹಿತ್ಯ ಸ್ವಾರಸ್ಯಯುತವಾಗಿರುತ್ತದೆ. ಏಕೆಂದರೆ ಇದು ಕತೆಯಾಗಲಿ ಕಾದಂಬರಿಯಾಗಲೀ ಅಲ್ಲ. ಒಬ್ಬ ವ್ಯಕ್ತಿಯನ್ನು ನೆಪವನ್ನಾಗಿ ಮಾಡಿಕೊಂಡು ಸಹೃದಯರಿಗೇ ಬರೆದ ಬರಹವಿದು. ಇದರಲ್ಲಿ ಜೀವನದ ಎಲ್ಲಾ ಕ್ಷೇತ್ರಗಳ ಪರಿಚಯವಿರುವ ಲೇಖಕ ವಿಹರಿಸುವುದು ಸಾಧ್ಯ. ಭಾರತೀಯರು ರಚಿಸಿದ ಪತ್ರಸಾಹಿತ್ಯದಲ್ಲಿ ಗಮನಾರ್ಹ ಸ್ಥಾನವನ್ನು ಆಕ್ರಮಿಸಿರುವ ಕೃತಿಗಳುಂಟು. ಇದರಲ್ಲಿ ಎರಡು ಭಾಗ ಮಾಡಿ ನೋಡಲೂ ಸಾಧ್ಯ. ನಿಜವಾಗಿಯೂ ದೂರದೂರವಿದ್ದ ವ್ಯಕ್ತಿಗಳ ಮಧ್ಯೆ ನಡೆದ ಪತ್ರವ್ಯವಹಾರ. ಅಥವಾ ಕಾಲ್ಪನಿಕ ವ್ಯಕ್ತಿಗಳೊಡನೆ ಲೇಖಕ ನಡೆಸಿದ ಪತ್ರ ವ್ಯವಹಾರ ಕೋರಿಕೆ. ಪಂಡಿತ್ ನೆಹರೂ ಅವರ 'ಗ್ಲಿಂಪ್ಸಸ್ ಆಫ್ ವರ್ಲ್ಡ್ ಹಿಸ್ಟರಿ' ಯಾಗಲೀ, ಸ್ವಾಮಿ ವಿವೇಕಾನಂದರ 'ಪತ್ರಸಾಹಿತ್ಯವಾಗಲಿ' ಮೊದಲ ವಿಭಾಗಕ್ಕೆ ಉತ್ತಮ ನಿದರ್ಶನ. ಲೌಕಿಕ ವ್ಯವಹಾರದಲ್ಲಿಯೇ ಮುಳುಗಿದ ಜನಗಳ ಪತ್ರಗಳನ್ನು ಸಾಹಿತ್ಯವೆಂದು ಕರೆಯಲಾದೀತೆ? ಪತ್ಯಗಳಲ್ಲಿ ವ್ಯಕ್ತವಾಗುವ ವಿಷಯಗಳು ಹೆಚ್ಚು ವ್ಯಾಪ್ತಿ ಪಡೆದಿದ್ದು, ಜ್ಞಾನವನ್ನು ಹೆಚ್ಚಿಸುವಂತಿದ್ದರೆ ಅವುಗಳಿಗೆ ಹೆಚ್ಚು ಬೆಲೆ. ಇದಕ್ಕಾಗಿಯೇ ಮಹಾವ್ಯಕ್ತಿಗಳ ಪತ್ರಗಳನ್ನು ಸಂಗ್ರಹಿಸುವುದನ್ನು ಕಾಣುತ್ತೇವೆ.

'ಸ್ನೇಹಸೇತು' ಮೇಲೆ ಹೇಳಿದ ಎರಡನೆ ವಿಭಾಗಕ್ಕೆ ಸೇರಿದುದು. ಲೇಖಕರು ಕಾಲ್ಪನಿಕ ವ್ಯಕ್ತಿ 'ತಂಗಿ'ಯನ್ನು ಕುರಿತು ನಡೆಸಿದ ಪತ್ರವ್ಯವಹಾರ. ಆದ್ದರಿಂದಲೇ ಮೊದಲ ವಿಭಾಗದಲ್ಲಿ ಇರುವ ಸಹಜತೆ ಕಡಿಮೆಯಾಗಿ ಬಿಡುತ್ತದೆ. ಅಂದರೆ ಲೇಖಕನ ಹೊಣೆ ಇಲ್ಲಿ ಹೆಚ್ಚಾಗುತ್ತದೆ. ಇದು ಇತರ ಕಲ್ಪನಾ ಸಾಹಿತ್ಯದಂತೆಯೇ ಆಗುವುದೂ ಸಹಜ. ವಾಸ್ತವಿಕ ನೆಲೆಗಟ್ಟು ಬಲವಾಗಿರಬೇಕೆನ್ನುವುದು ದಿಟ. ಈ ಕೃತಿಯಲ್ಲಿ ಓರ್ವ ಅಣ್ಣ ರಕ್ತ ಸಂಬಂಧವಿಲ್ಲದ ತಂಗಿಗೆ ಕಾಗದ ಬರೆಯುತ್ತಾನೆ. ತಂಗಿಯೂ ಕಾಗದ ಬರೆ ಯುತ್ತಾಳೆ. ತಂಗಿ ಯಾವುದೋ ದುರ್ಘಟನೆಯಿಂದಾಗಿ ನೊಂದಿದ್ದಾಳೆ. ಅವಳದು ಅತ್ಯಂತ ನೋವಿನಿಂದ ಕೂಡಿದ ಬಾಳು ಬಹುಶಃ 'ನವೀನಣ್ಣ' ಎಂಬಾತನು ಈಕೆಯನ್ನು ಪ್ರೀತಿಸಿ ವಿಧಿಯ ತಂತ್ರದಿಂದಾಗಿ ದೂರವಾಗಿರಬೇಕು. ಇದೂ ಸ್ಪಷ್ಟವಾಗುವುದಿಲ್ಲ. "ದುರ್ವಿಧಿಯ ಕತ್ತಲು ಕವಿದ ಆ ರಾತ್ರಿ ನೀನು ಕರುಣೆಯಿಂದ ರಸಸೇಚನ ಮಾಡದೆ ಹೋಗಿದ್ದರೆ ನನ್ನ ಬಾಳು ಯಾವ ಹಾದಿ ಹಿಡಿಯುತ್ತಿತ್ತೋ" ಎನ್ನುತ್ತಾಳೆ ತನ್ನನ್ನೇ ಹತಭಾಗಿನಿಯೆಂದುಕೊಳ್ಳುವುದನ್ನು ಕಾಣಬಹುದು. ಅಂತಹ ಒಬ್ಬ ಹೆಣ್ಣಿಗೆ ತಾನು ಅಣ್ಣನೆಂದು ಸಾಂತ್ವನ ನುಡಿಗಳನ್ನಾಡಿ ಆಗಾಗ್ಗೆ ಕಾಗದ ಬರೆದು ಆಕೆಗೆ ಧೈರ್ಯ ಕೊಡುತ್ತಿರುತ್ತಾನೆ ಈ 'ಅಣ್ಣ'ನೂ ಜೀವನದಲ್ಲಿ ನೊಂದಿರುವುದು ತಿಳಿಯುತ್ತದೆ.ಆಗಾಗ್ಗೆ ನಿರಾಸೆಗೆ ಸಿಕ್ಕಿ, ಪ್ರವಾಸ ಹೊರಟು ಮರಳಿ ಬಂದು ಅಶಾಂತನೂ ಆಗುತ್ತಾನೆ. 'ಅಣ್ಣ'ನ ಮನಸ್ಸಿನಲ್ಲಿ 'ತಂಗಿ'ಯ ಬಗ್ಗೆ ಎಂತಹ, ಯಾವ ರೀತಿಯ ಭಾವನೆಯಿತ್ತೋ ತಿಳಿಯಲಾಗದು. ಸಹೋದರನ ಭಾವನೆಯೇ ಇತ್ತೆಂದು ಹೇಳಲು ಸಾಕಷ್ಟು ನಿದರ್ಶನವಿದೆ. ತನ್ನ ವಿವಾಹವಾಗುವಾಗಲೂ ಇಬ್ಬಂದಿಗೆ ಸಿಗದೆ ಇರುವುದರಿಂದ 'ತಂಗಿ' ತಂಗಿಯಂತೆಯೇ ಕಂಡಿದ್ದಾಳೆ ಎನ್ನಬಹುದು.

ಅಣ್ಣನ ಪತ್ರಗಳಲ್ಲಿ ಕಾವ್ಯಗುಣವನ್ನು ಕಾಣಬಹುದು. ಆದರ್ಶದ ಹಂಬಲವಿದೆ. ಸಮಾಜವನ್ನು ತಿದ್ದಬೇಕೆಂಬಾಸೆಯೂ ಇದೆ. ಅಲ್ಲಲ್ಲಿ ಬಸವೇಶ್ವರ, ತುಕಾರಾಮ, ವಿವೇಕಾನಂದ,ಬೇಂದ್ರೆ, ಕುವೆಂಪು, ಕಾರಂತ, ಗೋಪಾಲಕೃಷ್ಣ ಅಡಿಗ ಮೊದಲಾದವರ ಉಕ್ತಿಗಳನ್ನು ಉದ್ಧರಿಸಲಾಗಿದೆ. ಅನೇಕ ಪತ್ರಗಳು ಕವನಗಳೇ ಆಗಿರುವುದನ್ನು ಕಾಣಬಹುದು. ಲೇಖಕರ ಕವಿಹೃದಯವನ್ನು ಗುರುತಿಸಬಹುದು.

> "ಇಷ್ಟು ದಿನಗಳ ಬಳಿಕ ನನ್ನ ದೇವ ಅಶಾಂತಿಯ ಮರುಳುಗಾಡನ್ನು ದಾಟಿ ವೇಷ ಮರೆ ಯಿಸಿ ತಂಗಿಯ ರೂಪದಲ್ಲಿ ಬಂದಿರುವ. ಅವನು ಬರುವ ರಥದ ಗಾಲಿಯ ಕರ್ಣಾನಂದ ಕರ ಸದ್ದು ಉಲ್ಕಾಪಾತವಾದ, ಆಘಾತದಿಂದ ಭ್ರಮಿತವಾದ ನನ್ನ ಹೃದಯ ಸ್ಪಂದನದ ಮಧ್ಯೆಯೂ ಕೇಳಿಸುತ್ತಿತ್ತು......"

"ನನ್ನ ಹೃದಯ ಪರ್ವತವಾಸಿನಿ ಉಮೆಯಂತೆ ಏಕಾಂಗಿ... ಅದು ಮಾನಸ ಸರೋವರದ ಬಳಿ ಒಂದು ಅರವಟ್ಟಿಗೆಯಲ್ಲಿ ತಪಸ್ಸು ಮಾಡುತ್ತಿರುತ್ತದೆ. ಆ ಅರವಟ್ಟಿಗೆಯ ಬಾಗಿಲು ತಟ್ಟಿದವರು ಕೆಲವರೇ......"

"ಆ ರಾಜ ಬೀದಿಯಲ್ಲಿ ತಪೋವನ ಸೃಷ್ಟಿಯಾಯಿತು" ಆದರೂ ಅಲ್ಲಿ ಧಾಳಿಕೋರ ರಾಜ್ಯ ಭಟರ ಕುದುರೆಗಳ ತುಳಿತದ ಹೆಜ್ಜೆಗಳ ಗುರುತು ಪೂರ್ಣ ಮಾಸಿರಲಿಲ್ಲ......"

—ಇಂತಹ ಕಾವ್ಯಾತ್ಮಕ ಬರವಣಿಗೆಯನ್ನು ಹೇರಳವಾಗಿ ಕಾಣುತ್ತೇವೆ. ಪ್ರಕೃತಿಯ ಸೌಂದರ್ಯಾರಾಧನೆಯನ್ನೂ ಕಾಣುತ್ತೇವೆ. ನಿಜವಾಗಿ ಇವೇ 'ಸ್ನೇಹಸೇತು'ವಿನ ಬಂಡವಾಳ. ಏಕೆಂದರೆ 'ವಸ್ತು'ವೆನ್ನುವುದು ಇದರಲ್ಲಿ ಮುಷ್ಟಿಗ್ರಾಹ್ಯವಾದುದಲ್ಲ. ಕಥಾವಸ್ತು ವಿಸ್ತಾರವಾದ ಹರಹನ್ನು ಪಡೆದಿಲ್ಲ. ಓದಿದನಂತರ 'ಪಿಚ್' ಅನಿಸುವುದು ಇದರಿಂದಲೇ ಇರಬೇಕು. 'ತಂಗಿ'ಗೆ ಒದಗಿದ ಭಯಂಕರ ಆಘಾತವಾಗಲೀ, ನವೀನಣ್ಣನ ಜೀವನವಾಗಲೀ ಸ್ಪಷ್ಟವಾಗುವುದಿಲ್ಲ. ಜೀವನದ ಏಳು ಬೀಳುಗಳ, ಕಷ್ಟಸುಖಗಳ, ನೋವು ನಲವುಗಳ ಆವರ್ತಗರ್ತಗಳು ಘೂರ್ಣಾಯಮಾನವಾಗಿ ಬಡಿದೆಬ್ಬಿಸುವುದಿಲ್ಲ. 'ತಂಗಿ' ತನ್ನ ದುರ್ವಿಧಿಯ ಏಕನಾದವನ್ನು ಮಿಡಿದರೆ 'ಅಣ್ಣ' ಅಭಯ, ಧೈರ್ಯಗಳನ್ನು ನೀಡುತ್ತಲೇ ಬರುತ್ತಾನೆ. ಕಡೆವರೆಗೆ. ಮುಕ್ಕಾಲು ಭಾಗವೆಲ್ಲವೂ ಇಂತಹ ವಿಚಾರವೇ ಇದ್ದು ವೈವಿಧ್ಯ ಕಾಣಿಸುವುದಿಲ್ಲ. ಪ್ರವಾಸ ಹೋಗಿದ್ದೆ, ಹೋಗುತ್ತೇನೆ ಎನ್ನುವುದರ ಹೊರತು ಅದರ ಅನುಭವ ಕಥನ ಬರುವುದಿಲ್ಲ.

'ಸ್ನೇಹಸೇತು'ವಿನ ಬರವಣಿಗೆ ಸೊಗಸಾದುದು. ಕವಿಹೃದಯ. ಸುಂದರ ಕಲ್ಪನೆ. ಆದರ್ಶಮಯ ಚೇತನ. ಲೇಖಕರ ರಮ್ಯ ಪ್ರಜ್ಞೆ ದೈವಭಕ್ತಿಯಿಂದ ಕೂಡಿದೆ. ಅವರ ವಿಶಾಲ ಓದು ಪ್ರತಿಬಿಂಬಿತವಾಗಿದೆ. ಲೋಕಾನುಭವ ತುಂಬಾ ಇದೆ. ಆದರೆ ಇನ್ನೂ ಹೆಚ್ಚು ಸಾಧಿಸಬಹುದಾಗಿತ್ತೆನ್ನಿಸುತ್ತದೆ ಸಹೃದಯರ ಮನಸ್ಸಿಗೆ. 'ಪಾಪಲೇಪ' 'ಭಟ' 'ಅಭಿಲಾಶೆ'... ಮುಂತಾದ ಪ್ರಯೋಗಗಳನ್ನು ಬಿಡಬಹುದಾಗಿತ್ತು. ಅಚ್ಚಿನ ದೋಷವೆನ್ನಲು ತಪ್ಪೋಲೆಯೂ ಇದರಲ್ಲಿಲ್ಲ.

ಮೃದು ಸ್ವಭಾವದ ಶ್ರೀ ಲಕ್ಷ್ಮೀನಾರಾಯಣ ಆಳ್ವರು ಇನ್ನೂ ಉತ್ತಮ ಕೃತಿಗಳನ್ನು ರಚಿಸಲೆಂದು ಹಾರೈಸುತ್ತೇನೆ. ಸಾಮಾಜಿಕ ಚಟುವಟಿಕೆಗಳಲ್ಲಿ ಹೆಚ್ಚು ತೊಡಗಿರುವ ಆಳ್ವರು ಲೇಖನಿಯನ್ನು ಹಿಡಿಯುವುದು ಕಡಿಮೆಯಾಗಿರುವುದು ಸಹ ಸುಧಾರಿಸಿ ಅವರಿಂದ ಆ ಪ್ರಾಂತದ ವೈಶಿಷ್ಟ್ಯವನ್ನು ಒಳಗೊಂಡ ಕೃತಿಗಳು ಬರಲೆಂಬುದು ಎಲ್ಲರ ಆಶಯ.

—ಎಂ. ರಾಮಕೃಷ್ಣ

ಎರಡು ಕವನ ಸಂಕಲನಗಳು

ಪುಷ್ಪಹಾರ–ಲೇ. ಮತ್ತು ಪ್ರ: ವೆಂಕಟೇಶ ಹುಣಶೀಕಟ್ಟಿ, ಎಂ.ಎಸ್ಸಿ, ಆರ್ಟ್ಸ್ ಎಂಡ್ ಸೈನ್ಸ್ ಕಾಲೇಜು, ಹೊನ್ನಾವರ (ಉ.ಕ.); ಪುಟಗಳು 66; ಬೆಲೆ ರೂ. 2.50; (1972)

ಮೂರುತ್ತರ, ಲೇ: ಆರ್. ರಾಚಪ್ಪ, ಎಂ.ಎ. ಪ್ರ. ಶ್ರೀ ರೇಣುಕ ಪಬ್ಲಿಷರ್ಸ್, ಎಚ್.ಎ.ಎಲ್., ಬೆಂಗಳೂರು 37; ಪುಟಗಳು: 74; ಬೆಲೆ ರೂ. 2.50, (1972)

ಶ್ರೀ ವೆಂಕಟೇಶ್ವರ ಹುಣಶೀಕಟ್ಟಿಯವರ ಕವನಗಳು ಕುರಿತು ಬರೆಯುವುದಕ್ಕಿಂತ ಮುನ್ನುಡಿಯ ಬಗ್ಗೆ ಎರಡು ಮಾತು ಬರೆಯುವುದೇ ಸ್ವಾರಸ್ಯಕರ. ತಮ್ಮ ಕವಿತ್ವದ ಬಗ್ಗೆ ಭಯಂಕರ ಭರವಸೆ ಹಾಗೂ ದೃಢವಾದ ಆತ್ಮವಿಶ್ವಾಸವಿರುವ ಅವರು ಹೀಗೆ ಹೇಳಿಕೊಂಡಿದ್ದಾರೆ: "ಈಗಾಗಲೇ ಕೆಲವೊಂದು ಚುಟುಕು ಕವನ, ಕಥೆ, ಜಾನಪದ ಕಥೆ, ಹರಟೆ ಮುಂತಾದುವನ್ನು ಪತ್ರಿಕೆಗಳಲ್ಲಿ ಓದಿದ ಕನ್ನಡಾಭಿಮಾನಿಗಳಿಗೆ ನನ್ನ ಹೆಸರು ಗೊತ್ತಿರಲೂ ಸಾಕು... ಇಲ್ಲಿನ ಚುಟುಕುಗಳು ಓದುಗರ ಮನಸ್ಸನ್ನು ಸೆಳೆಯಬಲ್ಲವು, ಹೆಚ್ಚು ಹೆಚ್ಚು ಓದುವ ಆಸಕ್ತಿಯನ್ನು ಹುಟ್ಟಿಸಬಲ್ಲವು ಎಂಬ ದೃಢ ವಿಶ್ವಾಸ ನನಗಿದೆ.ಈ ಪದ್ಯಗಳು ಓದುಗರಿಗೆ ತಟ್ಟಿ ಅವರ ಮನಸ್ಸನ್ನು ನೆಮ್ಮದಿಗೊಳಿಸಬಹುದೆಂದು ನಾನು ದೃಢವಾಗಿ ನಂಬಿರುವೆ" ಇತ್ಯಾದಿ. ಪುಸ್ತಕದ ಕುರಿತ ವಿಮರ್ಶೆಯನ್ನೂ ಲೇಖಕರು ಮಾಡಿಕೊಂಡಿದ್ದಾರೆ: 'ಈ ಪುಷ್ಪಹಾರದಲ್ಲಿ ಹಲವು ಹೂಗಳಿವೆ. ಇವು ಭಿನ್ ಭಿನ್ ವಾಸನೆ ಬಣ್ಣಗಳಿಂದ ಕೂಡಿದೆ. ಹೀಗಾಗಿ ಸಾಧ್ಯವಾದಷ್ಟೂ

ಮಟ್ಟಿಗೆ ಎಲ್ಲರಿಗೂ ತರತರದ ಮಹದಾನಂದ ದೊರಕುವಂತೆ ಪ್ರಯತ್ನಿಸಿ ಈ ಹಾರವನ್ನು ತಯಾರಿಸಿದ್ದೇನೆ". ಇಲ್ಲಿ ಮಳೆಗಾಲದಲ್ಲಿ 'ಕೆಂಪುಕೆಂಪಾಗಿ' ಹರಿಯುವ ಶರಾವತಿಯ ಬಗ್ಗೆ, ಗಾಂಧೀಜಿ ಬಗ್ಗೆ, ಉ.ಕ. ಜಿಲ್ಲೆಯ ಸಾಹಿತ್ಯ ಸಮ್ಮೇಳನದ ಬಗ್ಗೆ, ಪ್ರಾಧ್ಯಾಪಕರ ವರ್ಕ್‌ಲೋಡ್ ಹೆಚ್ಚಿಸಿದ ಸರ್ಕಾರದ ಸುತ್ತೋಲೆ ಬಗ್ಗೆ ಮತ್ತು ನೋಡಿದ, ಕೇಳಿದ ವಸ್ತು; ವಿಷಯಗಳ ಬಗ್ಗೆ ಕಾವ್ಯಧಾರೆ ಹರಿದಿದೆ. ಕಾವ್ಯ ಕರ್ಮ, ಸಾಹಿತ್ಯ ನಿರ್ಮಾಣ ಮತ್ತು ಉದ್ದೇಶ, ಚುಟುಕಗಳನ್ನು ರಚಿಸುವಾಗ ಬರುವ ಸಮಸ್ಯೆಗಳು, ನವ್ಯಕವನ–ಇವುಗಳ ಬಗ್ಗೆ ಉದ್ಘಕ್ಕೆ ಮುನ್ನುಡಿಯಲ್ಲಿ ಚರ್ಚಿಸಿದ ಶ್ರೀ ಹುಣಶೀಕಟ್ಟಿ ಅವರು ತಮ್ಮ ಪ್ರಥಮ ಕವನ ಸಂಕಲನಕ್ಕೆ 'ಸ್ವಲ್ಪ ಹೆಚ್ಚಾಗಿಯೇ ಓದುಗರಿಂದ ಪ್ರೀತಿ ವಿಶ್ವಾಸಗಳನ್ನು ಅಪೇಕ್ಷಿಸಿದ್ದಾರೆ.' ಕವನಗಳ ಆದಿ ಅಂತ್ಯಗಳಲ್ಲಿ ಸಂದರ್ಭಸೂಚಿ, 'ಈ ಕವನ ವೈಯಕ್ತಿಕವಾಗಿ ಯಾರನ್ನೂ ಕುರಿತೂ ಬರೆದುದಲ್ಲ' 'ಈ ಕವನ ಈ ಪತ್ರಿಕೆಯಲ್ಲಿ ಪ್ರಕಟವಾಗಿದೆ' ಇತ್ಯಾದಿ ವಿವರಣೆಗಳು, ಗ್ರಂಥಋಣ, ಭಿನ್‌ಭಿನ್, ಅವಶ್ಯಕತೆ, ಬೆಟ್ಟದ್ವೈಭವ, ಕೃತಜ್ಞೆ, ಹರಿದೋಯ್ತು, ನಾಲ್ಕೆಜ್ಜೆ, ಆವ್ಹಾನ, ಎತ್ತರಾಸನ, ಪ್ರಕೃತೇತಿಹಾಸ ಮೊದಲಾದ ಅಪಶಬ್ದಗಳು ನುಸುಳಿ ಹೋದಂಥ ತಪ್ಪು–ಒಪ್ಪು ವಿಭಾಗ, ವಿಪರೀತ ಪ್ರಾಸ–ಇವು ಸಂಕಲನದ ವೈಶಿಷ್ಟ್ಯಗಳಾಗಿವೆ. ಒಟ್ಟಿನಲ್ಲಿ ಇದು ಓದುಗರ ಮನಸ್ಸಿನ ಮೇಲೆ ಯಾವ ಪರಿಣಾಮವನ್ನೂ ಉಂಟು ಮಾಡದ ಬಾಲಿಶಕವನ ಹಾಗೂ ಚುಟುಕಗಳ ಸಂಗ್ರಹವೆನ್ನಬಹುದು. ಆದರೆ ಕವಿಗೆ ಓದುಗರ ಬಗ್ಗೆ ಚಿಂತೆಯಿಲ್ಲ; ಏಕೆಂದರೆ ಅವರೇ ಹೇಳಿಕೊಂಡಂತೆ ಅವರು ಈ ಕೃತಿ ರಚನೆಗೆ ಕೈಹಾಕಿದ್ದು 'ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ' ಎಂಬ ವೇದೋಕ್ತಿಯಂತೆ.

* * * *

ಇನ್ನೊದು ಮಾದರಿಯ ಕವನ ಸಂಕಲನ ಶ್ರೀ ರಾಚಪ್ಪ ಅವರ ಮಾರುತ್ತರ. ಮುನ್ನುಡಿಯಲ್ಲಿ 'ಈ ಕವಿ ಶ್ರೀ ಗೋಪಾಲಕೃಷ್ಣ ಅಡಿಗರಿಂದ ಪ್ರಭಾವಿತರಾಗಿದ್ದಾರೆ' ಎಂದು ಹೇಳಲಾಗಿದ್ದರಿಂದ ಆ ಸಂಗ್ರಹದ ಕವನಗಳಲ್ಲಿ ಆ ಪ್ರಭಾವವನ್ನು ಗುರುತಿಸಲು ಪ್ರಯತ್ನಿಸಿ ವಿಫಲನಾಗಬೇಕಾಯಿತು. ಈ ಸಂಕಲನದ ಕವನಗಳನ್ನು ಐದು ಭಾಗಗಳಾಗಿ 'ಪಾಲು' ಮಾಡಿದ್ದುದೇಕೋ ತಿಳಿಯುವುದಿಲ್ಲ. ಕೃತಿರಚನೆಗೆ ಕೈ ಹಾಕಿದ ಕವಿಗಳ ಕಷ್ಟ, ಕೆಳಗಿನ ಸಾಲುಗಳಲ್ಲಿ ವ್ಯಕ್ತವಾಗಿದೆ:

"ಎದೆಯೊಳಗಿನ ಭಾವನೆ
ತವಕಿಸುತಿದೆ ಹೊರನುಗ್ಗಲು,
ಯಾವ ಸೂಲಗಿತ್ತಿಯಿಂದಲೂ ಸಾಧ್ಯವಿಲ್ಲ
ಈ ಹೆರಿಗೆ ಮಾಡಿಸಲು' (ಕವಿ–ಕಾವ್ಯ. ಪುಟ 3)

ಇದ್ದುದರಲ್ಲಿ ವರ್ಡ್ಸ್‌ವರ್ಥ್ ಕವಿಯ ಎರಡು ಕವನಗಳ ಅನುವಾದ, 'ಚೈತ್ರನೃತ್ಯ' ಲಯಬದ್ಧವಾಗಿ ಹಾಡಬಹುದಾದ 'ಅರುವತ್ತಾರು' ಚಿಕ್ಕಚೊಕ್ಕ ಕವನವಾದ 'ಮಾರುತ್ತರ' ಚೆನ್ನಾಗಿವೆ. ಕವನ ಕೃಷಿ ಕೆಲವರಿಗೆ ಎಷ್ಟು ಸುಲಭವಾಗಬಲ್ಲುದೆಂಬುದಕ್ಕೆ, ಯಾವುದೋ ಪತ್ರಿಕೆಗಳ ಸುದ್ದಿಚೂರುಗಳನ್ನೂ ಅಲ್ಲಲ್ಲಿ ಕೇಳಿದ ಸಂಭಾಷಣೆಗಳ ತುಣುಕುಗಳನ್ನೂ ಜೋಡಿಸಿ ಹೊಸೆದ ಕವನ 'ಕಾಯಕವೇ ಕೈಲಾಸ' ಸಾಕ್ಷಿ. ಸಂಕಲನದ ಕೊನೆಯ ಕವನದ ಕೊನೆಯ ಸಾಲುಗಳನ್ನು ಓದಿದಾಗ ಅನ್ನಿಸುವುದಿಷ್ಟು:

ಬರೆದುದನ್ನು ಬರೆದಂತೆ
ಗಕ್ಕನೆ ಓದಿ ನುಂಗುತ್ತೇವೆ. ಕವನಗಳು
ಅರಗಿದರೆ ಅದೃಷ್ಟ, ಇಲ್ಲವಾದರೆ ಶಾಪ.

ಹಡಿ ಎಡವಿ ಬಂದವಳು

(ಕಾದಂಬರಿ), ಲೇ: ವಿಶಾಲಾಕ್ಷಿ ದಕ್ಷಿಣಾಮೂರ್ತಿ, ಪ್ರ. ಉಷಾ ಸಾಹಿತ್ಯ ಮಾಲೆ ಮೈಸೂರು1, ಪುಟ. 270, ಬೆಲೆ. ರೂ. (5.00 ಆಗಸ್ಟ್ 1972)

ಶ್ರೀಮತಿ ವಿಶಾಲಾಕ್ಷಿ ದಕ್ಷಿಣಾಮೂರ್ತಿ ಅವರ 'ಪಡಿ ಎಡವಿ ಬಂದವಳು' ಸಾಂಸಾರಿಕ ಜೀವನದ ಹಲವು ಮುಖಗಳ ಚಿತ್ರಣವನ್ನು ನಿರೂಪಿಸುವ ಒಂದು ಕಾದಂಬರಿ. ಶ್ರೀಕಂಠ ಮತ್ತು ಪಟ್ಟಾಭಿ ರಾಮಯ್ಯ ಸೋದರರು. ಪಟ್ಟಾಭಿರಾಮಯ್ಯ ವಿದ್ಯಾಭ್ಯಾಸ ಪಡೆದು ನಗರದಲ್ಲಿ ಅಧಿಕಾರಿಯಾಗಿ ಆಡಂಬರದ ಜೀವನ ನಡೆಸುತ್ತಿದ್ದರೆ, ತಮ್ಮ ಶ್ರೀಕಂಠ ಓದು ಮುಂದುವರಿಸಲಾಗದೆ ಹಳ್ಳಿಯಲ್ಲಿ ವಂಶ ಪಾರಂಪರ್ಯವಾಗಿ ಬಂದ ಪೌರೋಹಿತ್ಯವನ್ನೇ ನಡೆಸುತ್ತಾನೆ. ಶ್ರೀಕಂಠನ ಮಡದಿ ಗೌರಮ್ಮನೂ ದೊಡ್ಡ ಮನಸ್ಸಿನ ಗೃಹಿಣಿ. ಈ ನವದಂಪತಿಗಳ ಸುಖಸಂಸಾರವನ್ನು ಚಿತ್ರಿಸುವುದರಲ್ಲಿಯೇ ಕಾದಂಬರಿಯ ಸುಮಾರು ನಾಲ್ವತ್ತು ಪುಟಗಳು ಓಡುತ್ತವೆ. ಆಗ ಪಟ್ಟಾಭಿರಾಮಯ್ಯ ಮಡದಿ ನಾಗರತ್ನಮ್ಮನೊಡನೆ ಬೇಸಗೆ ರಜಾ ಕಳೆಯಲು ಹಳ್ಳಿಗೆ ಬರುತ್ತಾನೆ. ಅವರ ಜೊತೆ ಅವರ ಮಕ್ಕಳೂ ಬರುತ್ತಾರೆ. ನಾಗರತ್ನಮ್ಮ ನದು ತೀರ ಸಂಕುಚಿತ ಸ್ವಭಾವ. ಇದ್ದ ತೋಟವನ್ನು ರೂಢಿಸಿಕೊಂಡು ಸರಳ ಜೀವನ ಸಾಗಿಸುತ್ತಿರುವ ಗೌರಮ್ಮನಲ್ಲಿ ಅವಳಿಗೆ ವಿನಾಕಾರಣ ದ್ವೇಷ. ತಂಗಿಯ ಸುಖವನ್ನು ಕಂಡು ಕರುಬುವ ಪ್ರವೃತ್ತಿಯ ಅವಳು ನಗರಕ್ಕೆ ಮರುಳುವಾಗ ಮನೆಯ ಹಲವು ಸಾಮಾನುಗಳನ್ನು ಕೊಂಡೊಯ್ಯುತ್ತಾಳೆ. ಗಂಡನ ಕಿವಿಯನ್ನೂ ಊದಿ ಶ್ರೀಕಂಠನಿಂದ ಅವನು ತನ್ನ ಪಾಲು ಕೇಳುವಂತೆ ಪ್ರೇರೇಪಿಸುತ್ತಾಳೆ. ಅಣ್ಣನಿಗೆ ಮನೆಕಟ್ಟಲು ತಮ್ಮ ಶ್ರೀಕಂಠ ತನ್ನ ಆಸ್ತಿಯನ್ನು ಮಾರಿ ಅವನಿಗೆ ಹಣ ಸಹಾಯ ಮಾಡುತ್ತಾನೆ.

ಈ ಎರಡು ಕುಟುಂಬಗಳ ಕಥೆ ಕಾದಂಬರಿಯ ಮುಖ್ಯ ವಸ್ತುವಾಗಿರುವಂತೆ, ಓಬಣ್ಣ–ಪಾಪಮ್ಮ, ಸದಾಶಿವಸೆಟ್ಟಿ-ರಾಮಲಕ್ಷ್ಮಮ್ಮ ಮತ್ತು ಸುಬ್ರಹ್ಮಣ್ಯ–ಜಯಲಕ್ಷ್ಮಿ ಅವರ ಕುಟುಂಬಗಳೂ ಕಾದಂ ಬರಿಯಲ್ಲಿ ಚಿತ್ರಿತವಾಗಿವೆ. ಓಬಣ್ಣ ಪಾಪಮ್ಮ ಧನಿ ಶ್ರೀಕಂಠನಿಗೆ ತಕ್ಕ ಒಕ್ಕಲುಗಳು. ಗೌರಮ್ಮ ಶ್ರೀಕಂಠ ಅವರ ಪಾಲಿಗೆ ದೇವರಂತೆ. ಗೌರಮ್ಮನಿಗೂ ಪಾಪಮ್ಮನ ಮೇಲೆ ತುಂಬ ಕರುಣೆ. ಸದಾಶಿವ ಸೆಟ್ಟಿಗೆ ಶ್ರೀಕಂಠನಲ್ಲಿ ತುಂಬ ಭಕ್ತಿ ಮತ್ತು ಗೌರವ. ಏಕೆಂದರೆ ಅವನ ಮಡದಿ ರಾಮಲಕ್ಷ್ಮಮ್ಮ ಬದುಕಿಸಿದ್ದೇ ಶ್ರೀಕಂಠ ಆಚರಿಸಿದ ನಾಲ್ವತ್ತೆಂಟು ದಿನಗಳ ಕಠಿಣ ಸೂರ್ಯೋಪಾಸನೆ. ಆದುದರಿಂದಲೇ ಶ್ರೀಕಂಠನ ಆಸ್ತಿಯನ್ನು ಮಾರಾಟಕ್ಕೆ ಪಡೆದರೂ ನಂತರ ಆತ ಆಸ್ತಿಯನ್ನು ಶ್ರೀಕಂಠನಿಗೇ ಬಿಟ್ಟು ಕೊಡುತ್ತಾನೆ. ಶ್ರೀಕಂಠ ಗೌರಮ್ಮ ಅವರ ಪ್ರಭಾವ ವಲಯ ತುಂಬ ವಿಸ್ತೃತವಾದುದು. ಪಕ್ಕದ ಮನೆಯ, ತಾಯಿಯನ್ನು ಕಳೆದುಕೊಂಡ ಹುಡುಗಿ ಜಯಲಕ್ಷ್ಮಿಯ ಮೇಲೆ ಗೌರಮ್ಮನಿಗೆ ಇರುವ ಪ್ರೀತಿ ಅಭಿಮಾನಗಳು, ತನ್ನ ತಲೆಗೆ ಪೆಟ್ಟುಕೊಟ್ಟ ಚಂದ್ರಣ್ಣನನ್ನು ಕ್ಷಮಿಸಿದ ಶ್ರೀಕಂಠನ ಔದಾರ್ಯ–ಇವು ಓದುಗರ ಹೃದಯಗಳಲ್ಲಿ ಆ ದಂಪತಿಗಳಿಗಾಗಿ ಕರುಣೆ, ಸಹಾನುಭೂತಿಗಳನ್ನು ಮೂಡಿಸುತ್ತವೆ.

ಪಟ್ಟಾಭಿರಾಮಯ್ಯನ ಮಗ ಸುಬ್ರಹ್ಮಣ್ಯನದು ತಂದೆತಾಯಂದಿರಿಗಿಂತ ಭಿನ್ನವಾದ ಸ್ವಭಾವ. ಅವನ ಸರಳತನವನ್ನು ಕಂಡರೆ ನಾಗರತ್ನಮ್ಮನಿಗೆ ವಿಷಾದ. ಎಂತಲೇ 'ಶನಿಹೊಟ್ಟೆಗೆ ಹುಣ್ಣಿನಂತೆ ಹುಟ್ಟಿದೆ' ಎಂದು ಸುಬ್ರಹ್ಮಣ್ಯನ ಬಗ್ಗೆ ಆಕೆ ಆಗಾಗ ಪರಿತಪಿಸುತ್ತಾಳೆ. ಆದರೆ ಹಳ್ಳಿಯ ನಾಟಕ ಶಶಿರೇಖಾ ಪರಿಣಯದಲ್ಲಿ ಅಭಿಮನ್ಯುವಿನ ಪಾತ್ರ ಮಾಡಿ ಜಯಲಕ್ಷ್ಮಿಯ ಮನಸ್ಸನ್ನು ಅಪಹರಿಸಿದ ಸುಬ್ರಹ್ಮಣ 'ಜಯಲಕ್ಷ್ಮಿಯೇನಾದರೂ ಸತ್ತರೆ ನನ್ನ ಪ್ರೀತಿಯೇ ಸತ್ತಂತೆ', 'ಜಗತ್ತೇ ಅಡ್ಡ ಬಂದರೂ ನಾನು ಹೆದರುವುದಿಲ್ಲ' ಎಂದು ನಾಟಕೀಯವಾಗಿಯೇ ತಂದೆತಾಯಿಯರೊಡನೆ ಮಾತಾಡಿ ಅವರ ಇಚ್ಛೆಗೆ ವಿರುದ್ಧವಾಗಿ ಜಯಲಕ್ಷ್ಮಿಯನ್ನು ಮದುವೆಯಾಗುತ್ತಾನೆ.

ಹೀಗೆ ಈ ಕಾದಂಬರಿಯಲ್ಲಿ ಕೆಲವು ಕುಟುಂಬಗಳ ಚಿತ್ರಣ ಸಹಜವಾಗಿ ಮೂಡಿ ಬಂದಿದೆ. ಆದರೆ ಈ ನಡುವೆಯೂ ಕೆಲವು ನಾಟಕೀಯ ಸನ್ನಿವೇಶಗಳು ತಲೆಹಾಕಿವೆ. (ಉದಾ: ಸುಬ್ರಹ್ಮಣ್ಯನಿಗೆ ಜಯ ಲಕ್ಷ್ಮಿಯ ನೆನಪಾಗುತ್ತಲೇ ಆಕೆ ಪೇರಲೆ ಮರದಿಂದ ಹಣ್ಣುಗಳನ್ನು ಕೆಳಗೆ ಬೀಳಿಸುವುದು, ಶ್ರೀಕಂಠನ ಸೂರ್ಯೋಪಾಸನೆ, ಒಂದೇ ದಿನದ ಅಶ್ವತ್ಥ ಪೂಜೆಯನ್ನು ಮುಗಿಸಿ ಆಯಾಸಗೊಂಡ ಮರುದಿನವೇ ಗೌರಮ್ಮನಿಗೆ ವಾಂತಿ ಬಂದು ತಾನು ಗರ್ಭಿಣಿಯೆಂದು ತಿಳಿದುದು ಇತ್ಯಾದಿ). ಏನಿದ್ದರೂ 'ಪಡಿ ಎಡವಿ ಬಂದವಳು' ಮುಖ್ಯವಾಗಿ ಹೆಣ್ಣುಮಕ್ಕಳು ಓದಿ ಸಂತೋಷ ಪಡಬಹುದಾದ ಕಾದಂಬರಿ. ಅಷ್ಟೇ ಅಲ್ಲ, ಇಂದಿನ ಕಾದಂಬರಿ ಕ್ಷೇತ್ರಕ್ಕೆ ಮತ್ತೊಂದು ಹೊಸ ಕೊಡುಗೆ.

ಪುಸ್ತಕದ ಮುದ್ರಣ ಚೆನ್ನಾಗಿದೆ. ಆದರೆ ಅಲ್ಲಲ್ಲಿ ಚಕಿತ, ಸಮಧಾನ, ಔದರ್ಯ, ಮಾರ್ಖ, ಸೆವಾಲು, ಜ್ವಾಜ್ವಲ್ಯ, ಪ್ರಶಂಸೆ, ಅಪುರೂಪ, ಅಸ್ತಾವ್ಯಸ್ತ, ಮನಷ್ಯ ಮೊದಲಾದ ಅಚ್ಚಿನ ತಪ್ಪುಗಳು

ಕಾಣಿಸಿಕೊಳ್ಳದಂತೆ ಜಾಗ್ರತೆವಹಿಸಬಹುದಿತ್ತು. 270 ಪುಟಗಳ ಈ ಸಾಮಾಜಿಕ ಕಾದಂಬರಿಗೆ ಇಟ್ಟ ಬೆಲೆ ಮಾತ್ರ ತೀರ ಹೆಚ್ಚು ಎನಿಸುತ್ತದೆ.

—ಶಂಸ ಐತಾಳ

ಗಂಡ–ಹೆಂಡಿರ ಜಗಳ ಗಂಧ ತೀಡಿದ್ಹಾಂಗ

(ಪ್ರೇಮ ಗೀತಗಳು) ಲೇ. ಸೋಮಶೇಖರ ಇಮ್ರಾಪೂರ, ಪ್ರ. ಸಿರಿಗನ್ನಡ ಪ್ರಕಾಶನ, ಕನ್ನಡ ಅಧ್ಯಯನ ಸಂಸ್ಥೆ ಆಶ್ರಿತ. ಕರ್ಣಾಟಕ ವಿಶ್ವವಿದ್ಯಾನಿಲಯ, ಧಾರವಾಡ. ಪು.70 + 20, ಬೆಲೆ. 4 ರೂ. 1971.

ಈ ಗ್ರಂಥವನ್ನು ತೆರೆದು ಓದುತ್ತಿದ್ದಂತೆಯೇ ಜಾನಪದರ ಆಡುನುಡಿ ಕೇಳಿಬರುತ್ತದೆ; ಜನಪದ ಗೀತೆಗಳ ವಿವಿಧ ಛಂದೋಮಯತೆ ಕಾಣಬರುತ್ತದೆ. ಈ ಸಂಗ್ರಹದಲ್ಲಿರುವ 36 ಕವಿತೆಗಳಲ್ಲೂ ಲಯದ, ನಾದದ ವಿನ್ಯಾಸ ಮನಸ್ಸನ್ನು ಆಕರ್ಷಿಸುವಂತಿದೆ. ಪುಸ್ತಕದ ಕಾಗದ, ಮುದ್ರಣಗಳೆಲ್ಲ ಅಂದವಾಗಿರುವುದರಿಂದ, ಒಂದು ಹೊಸತನ ಮೈತಳೆದು ನಿಂತಂತೆ ಭಾಸವಾಗುತ್ತದೆ. ಈ ದೃಷ್ಟಿಯಿಂದ ಈ ಕೃತಿ ಒಂದು ಒಳ್ಳೆಯ ಪ್ರಯೋಗಕ್ಕೆ ಸಾಕ್ಷಿಯಾಗಿ ನಿಲ್ಲುವಂತಿದೆ.

ಆದರೆ ಒಂದು ಗ್ರಂಥದ ತೋರಿಕೆಯೆ, ಅಂದಚೆಂದಗಳೆ ಮುಖ್ಯವಲ್ಲವಲ್ಲ! ಮಾನ್ಯ ಲೇಖಕರು ಉದ್ದೇಶಿಸಿದ ರಸವತ್ ಪರಿಣಾಮ ಈ ಕವಿತೆಗಳಲ್ಲಿ ಸಾರ್ಥಕವಾಗಿ ಮೂಡಿ ಬಂದಿದೆಯೆ? ಈ ಪ್ರಶ್ನೆಗೆ ಈ ಸಂಕಲನದ ಕಣ್ಣೆಲೆಯಂತಿರುವ 'ಗಂಡ–ಹೆಂಡರ ಜಗಳ'...ವನ್ನೇ ಎತ್ತಿಕೊಂಡು, ಉತ್ತರ ಕಂಡುಕೊಳ್ಳಬಹುದು. ಗಂಡ ಹೆಂಡತಿಯರ ನಡುವೆ ಕಾರಣಾಂತರಗಳಿಂದ ವಿರಸ ಮೂಡುತ್ತದೆ; ಆವೇಶದ ಭರದಲ್ಲಿ ಮಾತಿಗೆ ಮಾತು ಬೆಳೆದು, ತೀವ್ರ ಪರಿಣಾಮಗಳಿಗೆ ದಾರಿಯಾಗುವುದೂ ಉಂಟು; ಮಾತು ಮೌನ ದುಃಖದಲ್ಲಿ ಕರಗಿ ಹೋಗಿ, ಒಲಿದ ಹೃದಯಗಳು ಮತ್ತಷ್ಟು ಸಮೀಪಗತವಾಗಿ, ಸರಸಮಯ ಜೀವನ ನಡೆಸಲು ಸಹಕಾರಿಯಾಗುವುದೂ ಉಂಟು. ಇಲ್ಲಿನ ಪ್ರೇಮ ಕಲಹ ಎರಡನೆಯ ಮಾದರಿಯದಾಗಬೇಕೆಂಬುದೇ ಕವಿಯ ಉದ್ದೇಶ. ಆದರೆ ಹಾಗಾಗಲು ತಕ್ಕ ವಾತಾವರಣ, ವ್ಯಕ್ತಿ ಸ್ವಭಾವ ಚಿತ್ರಣವಾಗದಿರುವುದು ಕವಿತೆಯ ಸೋಲಿಗೆ ಕಾರಣ.

ಮಾತುಮಾತಿಗೆ ವಾಸ್ಯಾಡುವ ದಂಪತಿಗಳು ಜಗಳದ ಕೊನೆ ಕೊನೆಗೆ ತಲಪುವ ಘಟ್ಟ ಈ ಬಗೆಯದು

"ಹೊಟ್ಟ್ಯಾನ ಕಿಚ್ಚು ಎಷ್ಟಂತ ಹಿಡಿದು
ಕಟ್ಟೇನ ಕಳ್ಳಿನೊಳಗ
ಕಳ್ಳೀಯ ಹಾಲು ಕುಡಿದ್ಹಾಂಗ ಆತು
ಸೊಗಸಿಲ್ಲ ಮನಸಿನೊಳಗ"–ಹೆಣ್ಣು.

"ನಿನ ಕೈಯ ಹಿಡಿದು ಮುಳ್ಳಜಾಲಿ ಗಿಡವ
ಏರಿದ ಹಾಂಗ ಆಯ್ತು
ತೆಲಿ ಕೆಡಿಸಬ್ಯಾಡ ನಾ ಹೊಂಟೆ ಹೊರಗ
ಈ ಜೀವ ಬ್ಯಾಸರಾಯ್ತು"–ಗಂಡು.

ಮುಂದೇನು ಗತಿ? ಚಿಂತೆ ಹತ್ತಿದ ಹೆಣ್ಣಿನ ಬಾಯಿಂದ ತತ್‌ಕ್ಷಣವೆ ಮಂತ್ರ ಹಾಕಿದಂತೆ ಕೇಳುವುದೇನು? ಅಂತಿಮ ಸೋಲು, ಶರಣಾಗತಿ.

"ಮಾರಾಯ ನಿನ್ನ ಕಾಲ್ಮುಗಿಯುತೀನಿ
ಸಾಕೇಳ ಸೆಟಗೊಬ್ಯಾಡಾ
ಕಸಮುಸುರಿ ತೊಳೆದು ಬಿಸಿಬುತ್ತಿ ಕಟ್ಟಿ
ಕಳುಸ್ತೀನಿ ನಿನ್ನ ಕೂಡ".

ಇನ್ನೆಂಥ ಗಂಡಸ್ತನ? ಮಾಮೂಲಿನಂತೆ ಸಾಂತ್ವನದ ನುಡಿ; ರಸಿಕತೆಯ ನಡೆ.

"ಅಳಬ್ಯಾಡ ಮಳ್ಳಿ ಬಾಬಾರ ಇಲ್ಲಿ
ಅಳತಾರ ಏನ ಹೀಂಗ
ಗಂಡ ಹೆಂಡ್ರು ಜಗಳಂದ್ರ ನೋಡ ಏ
ಗಂಧ ತೀಡಿದ್ಹಾಂಗ"
ಮಂಗಳ

ಆದರೆ ಕವಿತೆಯ ಒಟ್ಟು ಪರಿಣಾಮ ಒಂದು ಸಿನಿಮೀಯ ಮಾಮೂಲಿನ ಪ್ರಹಸನ. ಇದರಲ್ಲಿ ಸಹಜ ಕಸುವಿಲ್ಲ, ರಸವಿಲ್ಲ. ಇದು ಪಟ್ಟಣಿಗ ದಂಪತಿಗಳಿಗೆ ಹೇಗಾದರೂ ಸರಿಕಂಡೀತೇನೊ. ಏಕೆಂದರೆ ಅವರ ವಿರಸ ವಿದ್ಯುತ್ ಒಲೆಯ ಬೆಂಕಿಯಂತೆ. ಸರಸ ಅಗ್ಗದ ಸೆಂಟಿನಂತೆ. ಅಲ್ಲೆಲ್ಲ ತಾಳಿಕೆಗಿಂತ ತೋರಿಕೆಯದೇ ಮೇಲುಗೈ. ಕೆಲವು ಕ್ಷಣದ ನಂತರ ಎಲ್ಲ ತಣ್ಣಗೆ; ಮಾಮೂಲಿನಂತೆ. ಆದರೆ ಇಲ್ಲಿ ಚಿತ್ರಿತವಾಗಿರುವವರು ಹಳ್ಳಿಯ ಗಂಡ ಹೆಂಡರಂಥವರು. ವಾಸ್ತವವಾಗಿ ಒಬ್ಬ ಮಾನನಿಷ್ಠೆಯಾದ ಜನಪದ ಗರತಿಗೆ, ಗರ್ವಿಷ್ಠ ಗೃಹಸ್ಥನಿಗೆ ಈ ಕವಿತೆಯಲ್ಲಿನಂಥ ಕೆಣಕು, ಅಣಕ, ಕಟು ತಿರಸ್ಕಾರದ ಮಾತುಕತೆಗಳಾದಾಗ ಮನಸ್ತಾಪ ತೀವ್ರವಾದಾಗ, ಆ ವಿರಸದ ಉರಿ ಭಗ್ಗನೆ ಆರಿ ಹೋಗುವುದಿಲ್ಲ; ಕಾವು ಕುಗ್ಗಿ, ಮನದೊಳಗಾದ ಗಾಯ ಒಮ್ಮೆಗೇ ಮಾಯ್ದು ಹೋಗುವುದಿಲ್ಲ. ಅದು ಜಾಲೀಸೌದೆಯ ತರಿಗೆಂಡದಂತೆ. ಮೇಲೆ ಆರಿದಂತೆ ತೋರಿದರೂ ಅದರ ಎದೆಯಾಳದಲ್ಲಿ ಕಿಚ್ಚಿರುತ್ತದೆ. ಸ್ವಲ್ಪ ಅವಕಾಶ ಸಿಕ್ಕಿದರೆ ಸಾಕು, ಮತ್ತೆ ಕರ್ತುಕೊಂಡು ಹೊಗೆಯಿಲ್ಲದೆ ಒಳಗೊಳಗೇ ಉರಿಯುತ್ತದೆ. ತಂಪಾಳ ನೀರೆರೆಯದ ಹೊರತು, ಆ ಕಿಚ್ಚು ಆರುವುದೇ ಇಲ್ಲ. ಇಲ್ಲಿಯ ದಂಪತಿಗಳು ಹಾಗಲ್ಲ.

ಮೇಲಿನ ವ್ಯಾಖ್ಯಾನದ ಮುಖಾಂತರ ಈ ಕವಿತೆಗಳ ಒಟ್ಟು ಉದ್ದೇಶ, ಸಾಫಲ್ಯಗಳನ್ನು ತೂಗಿ ನೋಡುವುದು ಸಾಧ್ಯ. ಜನಪದ ನುಡಿಗಟ್ಟು, ನಡಾವಳಿಗಳನ್ನು ಬಲ್ಲಂಥವರು ಬೇಕಾದವರು ಬಳಸಿಕೊಳ್ಳಲಡ್ಡಿಯಿಲ್ಲ. ಹಾಗೆಂದು ಮನಸ್ಸಿಗೆ ಬಂದಂತೆ ದುಡಿಸಿಕೊಳ್ಳಲು ಹೋದರೆ, ಜಾನಪದರ ಮೂಲಭೂತ ಗುಣ, ಸಂಸ್ಕಾರ, ಸಂಸ್ಕೃತಿಗೆ ಧಕ್ಕೆಯೊದಗೀತು. ಕೃತಿಯ ಪರಿಣಾಮ ಕೇವಲ ತೋರಿಕೆಯದಾದೀತು. ಈ ಭಯಕ್ಕೆ ತುತ್ತಾಗುವಂತಿವೆ ಗಂಡ ಹೆಂಡರ ಜಗಳ, ಬೇವುಬೆಲ್ಲ, ಖಾಸಗಿ ಸಂಸಾರ, ಮುದುಕ ಮುದುಕಿ– ಇಂಥ ಕವಿತೆಗಳು.

ಮೈಸೂರು ಮಲ್ಲಿಗೆಯ ನಂತರ, ನಮ್ಮ ಮೈಮನಗಳನ್ನಾಕರ್ಷಿಸಿ ತನ್ನದನ್ನಾಗಿಸಿಕೊಳ್ಳಬಲ್ಲಂಥ ಶಕ್ತಿಯುಳ್ಳ ಕೃತಿ ಇದು, ಎಂದಿರುವ ಮತ್ತೊಂದು ಹೆಗ್ಗಳಿಕೆಯ ಮಾತು ಕೇವಲ ಔಪಚಾರಿಕವಾದುದು ಎಂಬುದಂತೂ ಸ್ಪಷ್ಟವಾಗಿದೆ. ಮೈಸೂರು ಮಲ್ಲಿಗೆಯಲ್ಲಿ ಚಿತ್ರಿತವಾಗಿರುವ ಎಲ್ಲ ಪಾತ್ರಗಳೂ ತಮ್ಮ ಸುಸಂಸ್ಕಾರಗೊಂಡ ಸಹಜ ಆವರಣದಲ್ಲಿ, ತುಂಬ ವಾಸ್ತವವಾಗಿ, ಜೀವಂತವಾಗಿ ವ್ಯವಹರಿಸಿ, ಸುಕುಮಾರ ಪ್ರೇಮಾಲಾಪದ ಸವಿ ರಸಾಯನವನ್ನೊದಗಿಸುತ್ತವೆ. ಅಲ್ಲಿಯ ಭಾಷೆಯೂ ಅಷ್ಟೆ, ಭಾವವೂ ಅಷ್ಟೆ. ಶುದ್ಧ, ನಾಗರಿಕ, ನಯ ವಿನಯ ನಾಜೋಕು. ಆದರೆ ಈ ಕೃತಿಯಲ್ಲಿ ಬರುವ ಪರಿಸರಣವೆಲ್ಲ ವೇಷಭೂಷಣ, ಮಾತುಕತೆಯೆಲ್ಲ ಗ್ರಾಮೀಣ; ವ್ಯಕ್ತಿಗಳ ಅಂತಃಕರಣದ ಭಾವಗಳು, ಬುದ್ಧಿ ಚಮತ್ಕಾರವೆಲ್ಲ ನಾಗರಿಕ! ಇದರ ಪರಿಣಾಮ ಅಸಮಂಜಸತೆ, ಆಭಾಸ. ಇದಕ್ಕೆ ಕಾರಣ ಬಹುಶಃ ಗ್ರಾಮೀಣ ಪ್ರದೇಶ ಬಿಟ್ಟು ಬಂದು, ನಾಗರಿಕರಾಗಿ ಹೋಗಿರುವ ಕವಿಯ ಕಸೀ ಮನೋಭಾವ. ಇಮ್ರಾಪೂರರು ಗ್ರಾಮ್ಯ ಭಾಷೆಯನ್ನು ಧಾರಾಳವಾಗಿ ಬಳಸಬಲ್ಲವರು. ಅದಕ್ಕೆ ಹಳ್ಳಿಯ ಮಣ್ಣಿನ ಸೊಗಡು, ಸತ್ವವುಳ್ಳ ವ್ಯಕ್ತಿ ಹೃದಯವನ್ನೂ ಹಳ್ಳಿಯಿಂದಲೇ ಪಡೆದು ತಂದು, ಹೊಸ ಪ್ರಯೋಗಗಳನ್ನು ನಡೆಸಿದರೆ ಮೇಲು.

ಸುವ್ವೀ ಸುವ್ವೀ ಸುವ್ವಾಲೆ

(ಉತ್ತರ ಕನ್ನಡದ ಜನಪದ ಗೀತೆಗಳು), ಸಂ. ಡಾ. ಎಲ್. ಆರ್. ಹೆಗಡೆ, ಪ್ರ. ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ–1, ಪು. 143+25.ಬೆಲೆ. 2.75, 1971.

ತಮ್ಮ ಜಿಲ್ಲೆಯ ಜನಪದ ಸಾಹಿತ್ಯ ಸಂಗ್ರಹಣೆ, ವಿಶ್ಲೇಷಣೆ ಹಾಗೂ ಪ್ರಕಟಣೆಯ ಕಾರ್ಯದಲ್ಲಿ ಸಾಕಷ್ಟು ಪರಿಶ್ರಮವುಳ್ಳ ಡಾ. ಹೆಗಡೆ ಅವರು, ಈ ಸಂಕಲನದಲ್ಲಿ ಒಟ್ಟು 23 ಬಿಡಿ ಗೀತೆಗಳನ್ನೂ ಆರು ಕಥನ ಕವನಗಳನ್ನೂ ಸಂಪಾದಿಸಿಕೊಟ್ಟಿದ್ದಾರೆ. ಜೊತೆಗೆ ಈ ಸಂಕಲನದಲ್ಲಿ ಸೇರಿರುವ ಗೀತೆಗಳ ಹಿನ್ನೆಲೆಯಲ್ಲಡಗಿರುವ ಜಾನಪದ ಸತ್ವವೆಂಥದೆಂಬುದನ್ನು ಪೀಠಿಕೆಯಲ್ಲಿ ವಿಸ್ತಾರವಾಗಿ ವಿವರಿಸಿದ್ದಾರೆ. ಓದುಗರು ಗೀತೆಗಳನ್ನು ಹಾಡುವ ಧಾಟಿಯ ಹತ್ತಿರಕ್ಕೆ ತಲಪಲು ಸಹಾಯಕವಾಗಿ, ಅನೇಕ ಸನ್ನೆಗಳನ್ನು ಬಳಸಿದ್ದಾರೆ. ಗ್ರಂಥದ ಕೊನೆಯಲ್ಲಿ ಶಬ್ದಕೋಶ ಒಪ್ಪೋಲೆಗಳನ್ನು ಕೊಟ್ಟು ಉಪಕಾರ ಮಾಡಿದ್ದಾರೆ. ಇವೆಲ್ಲ ಸಂಪಾದಕರ ವೈಜ್ಞಾನಿಕ ದೃಷ್ಟಿ, ಶ್ರದ್ಧೆ ಹಾಗೂ ಪ್ರಾಮಾಣಿಕತೆಯನ್ನು ಎತ್ತಿ ತೋರುತ್ತವೆ.

ಗ್ರಂಥದ ಮೊದಲಿಗೆ ದೇವತಾಸ್ತುತಿ ಪರವಾದ ಮುಕ್ತಕಗಳನ್ನು ಕಾಣುತ್ತೇವೆ. ಶಿರಸಿಯ ಸಿವಮ್ಮ ಮತ್ತು ತಿರುಪತಿಯ ತಿಮ್ಮಪ್ಪನನ್ನು ಜಾನಪದರು ಭಕ್ತಿ, ಉತ್ಸಾಹದಿಂದ ಹಾಡಿರುವುದು ಗಮನಾರ್ಹ. ತಂದೆ–ತಾಯಿ–ಮಗಳು ಎಂಬ ಶೀರ್ಷಿಕೆಯಡಿಯಲ್ಲಿರುವ ಗೀತೆಗಳ ಪೈಕಿ,

ತಾಯಿ, ತಂದಿನೂsss ಯಾವಲ್ಲಿ ನೆನವss ರೇss
ಮೀವಲ್ಲೀ ಮಡಿಯsss ಉಡುವಲ್ಲಿ॥ ಸಣ್ಣೆತ್ತೀಲs
ಹೂಗss ಕಂಡಲ್ಲೀsss ನೆನುವsರೇss ॥

ಎಂಬಂಥ ಮುಕ್ತಕಗಳನ್ನು ಕಂಡಾಗ, ಜಾನಪದರ ಮೂಲಭೂತವಾದ ಭಾವಗಳು, ಮಾನವೀಯ ಮೌಲ್ಯಗಳು ಕನ್ನಡ ನಾಡಿನಾದ್ಯಂತ, ಭಾರತದಾದ್ಯಂತ ಬಹುಪಾಲು ಸಮಾನ ರೂಪದವು. ವ್ಯತ್ಯಾಸವಿರುವುದೆಲ್ಲ ಅವರ ಅಭಿವ್ಯಕ್ತಿಯಲ್ಲಿ ಹಾಗೂ ಭಾಷಾ ಪ್ರಭೇದದಲ್ಲಿ ಮಾತ್ರ ಎಂಬಂಶ ಸ್ಪಷ್ಟವಾಗುತ್ತದೆ. ಇಂಥ ಸಮಾನ ಸ್ವರೂಪದ ಕನ್ನಡ ಜನಪದ ಗೀತೆಗಳ ತೌಲನಿಕ ಅಧ್ಯಯನಕ್ಕೆ ಈ ಪುಟ್ಟ ಪುಸ್ತಕ ವಿಶ್ವಸನೀಯ ಆಧಾರ ಸಾಮಗ್ರಿ ಒದಗಿಸುತ್ತದೆ.

ಹೆಣ್ಣಿನ ಕೈಯ್ಯಳತೆಯಲ್ಲಿರುವ ಭೂ ಸ್ವರ್ಗವಾದ ತೌರುಮನೆಯನ್ನು ನೆನೆದು ಹಾಡದ ಜಾನಪದ ಗರತಿಯರೇ ಇಲ್ಲ.

ಮೂಗುತೀ ಮುಡಿ ಮಾಸೀss ಮುಂದಿನಾss ನೆರಿಮಾಸೀss
ನಾಗಲು ಮಂಡಲದಾssss ತಲಮಾಸೀss । ನನ್ನಮ್ಮss
ನೀರಕಾಸೀ ಮಗುಳಾsss ಕರವss ದುss ॥
ನೀರ ಕಾಸೀ ಮಗುಳಾsss ಯೇನಂದಿ ಕರವs ದುss
ಯಾಕವ್ವಾss ಮಗಳೇsss ಬಡವಾssದೇss ॥

ಎಂಬುದಾಗಿ ಎದೆ ತುಂಬಿ ಕೇಳಿ ಆರೈಕೆ ಮಾಡುವ ತಾಯಿಮನೆಯನ್ನು ಯಾರೂ ಮರೆಯಲಾರರು. ಇಲ್ಲಿನ ಭಾವ ಬಂಧುರತೆ ಮನಂಬುಗುತ್ತದೆ.

ತುಂಬಿದ ಬಸುರಿಯ ಒಂದು ಮನೋಜ್ಞ ಚಿತ್ರ ಹೇಗೆ ಕಂಗೊಳಿಸುತ್ತಿದೆ ನೋಡಿ:

ಬಸುರೀ ಬಯ್ಕನ ಹಾಕಿಯೇs ಹಸುರು ಸೀರಿಯನುಡಸೀಯೇ s
ಬಸುರೀ ಬಯ್ಲಲ್ಲೀ ಬರುವಾಗs । ಸುಗ್ಗೀಯs
ಹಸರಂದೇ ಗಿಳಿಯೂs ಅರಗಿದೋs ॥

ಇಂಥ ಅಪೂರ್ವ ಸ್ವರೂಪದ ಸಹಜ ರೂಪ ಚಿತ್ರಣಗಳು ಪ್ರೌಢಸಾಹಿತ್ಯದಲ್ಲಿ ಎಲ್ಲಿವೆ? ತಾವು ಬಾಳಾಡುವ ನೆಲದ ಉನ್ನತ ಸೌಂದರ್ಯವನ್ನು ಸಹಜವಾಗಿಯೆ ಒಡಮೂಡಿಸಿಕೊಂಡು ಬಾಳಾಡುವ ಜನಪದ ಕವಿಗಳಷ್ಟೇ ಇಂಥ ಸೌಂದರ್ಯವನ್ನು ಕಂಡು ಕೊಂಡಾಡಿ, ಹಾಡಿಯಾರು. ಮೈಸೂರರಮನೆಯ ಭವ್ಯತೆ ಹಾಗೂ ವೈಭವದ ಕೀರ್ತಿ ಸಮಗ್ರ ನಾಡಿನಾದ್ಯಂತ ಹಬ್ಬಿದೆ ಎಂಬುದಕ್ಕೆ ಸಾಕ್ಷಿಯಂತಿರುವ ಈ ಗೀತೆಯೂ ಗಮನಾರ್ಹ:

"ದನ ಬಂತೂs ಕರ ಬಂತೂs ಮಗುವೇs ಯೆಲ್ಲೀಗ್ಹೋದೇ ?
ಮಗವೇ, ಮ್ಹೈಸೂರದಾs ಬಂಗುಲಲ್ಲೀs ॥ ನಾನಿಗೇs
ಕೊಳಲೀs ಗೇ ಗೋವಾs ಕರವೆs ನು "

ಅಥವಾ ಇಂಥದೊಂದು ಬಂಗಲೆ ಕಾರವಾರ ಜಿಲ್ಲೆಯಲ್ಲಿ ಮತ್ತೆಲ್ಲೋ ಇದ್ದರೂ ಇರುಬಹುದೇನೋ. ಎಲ್ಲಿದ್ದರೂ ಮುದ್ದು ಬಾಲಕ ಬಂಗಲೆಯಲ್ಲಿ ನಿಂತು ಕೊಳಲೂದಿ ಗೋವುಗಳನ್ನು ಕರೆದು ಸುಖಿಸುತ್ತಾನೆಂಬುದು ಸೊಗಸಾದ ಕಲ್ಪನೆ. ಈ ಕಲ್ಪನೆಯಲ್ಲಿ ತಾಯಿಯ ಆತಂಕ, ಮಗನ ಶ್ರೇಯಃಕಾಂಕ್ಷೆ ಮಡುಗಟ್ಟಿರುವಂತೆಯೇ, ಮಗನ ಕುಶಲತೆ, ರಸಿಕತೆಗಳೂ ಕೆನೆಗಟ್ಟಿವೆ. ಇಂಥ ರಸವತ್ತಾದ ಮುಕ್ತಕಗಳನ್ನು ಈ ಗ್ರಂಥದ ತುಂಬ ಕಾಣಬಹುದು.

ಬತ್ತ ಕುಟ್ಟುವಾಗ, ಬತ್ತ ಕುಟ್ಟುವಿಕೆಯ ಶ್ರಮದ ಹಿನ್ನೆಲೆಯಲ್ಲಿ ಅರಳಿದ ಮುಕ್ತಕಗಳಲ್ಲಿ ದಣಿವನ್ನು ಮರೆಸುವ ನಲಿವು ಮನೆಮಾಡಿಕೊಂಡಿರುವುದು ಎದ್ದು ಕಾಣುತ್ತದೆ.

ಬತ್ತ ಮೆರುವಾಗೇ ಸತ್ಹಾಂಗೇ ಬೀಳೂದೇ

ಬತ್ತ ಮೆರದಕ್ಕೀ ವಳುದುಂಬೀ। ಬರವಾಗೇ
ಸತ್ತವ್ವು ಯೆದ್ದೀ ಕುಣವs ದೇ

ಹೀಗೆ ಉತ್ತಮ ನಿದರ್ಶನಗಳನ್ನು ಎತ್ತಿ ಬರೆಯುತ್ತ ಹೋಗಬಹುದು. ಮುದಿಪ್ರಾಯದ ಜನಪದ ಶ್ರಮಗಾರ್ತಿಯರು ಬತ್ತ ಕುಟ್ಟುತ್ತಿರುವ ಸಹಜ ಚಿತ್ರವನ್ನು ಮುಖಪುಟದಲ್ಲಿ ಪಡೆದು, ಅಂದವಾಗಿ ಹೊರ ಬಂದಿರುವ ಈ ಮುಕ್ತಕ ಸಂಕಲನ ಒಂದು ಗಮನಾರ್ಹ ಕೃತಿ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಈ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗುವವಲಿರಿಗೆ ಒಳ್ಳೆಯ ಕೈಪಿಡಿಯಾಗುವ ಸಮಸ್ತ ಗುಣಾಂಶಗಳನ್ನೂ ಇದು ಪಡೆದುಕೊಂಡಿದೆ.

ಜೇಂಗೊಡ

(ಕಾರವಾರ ಜಿಲ್ಲೆಯ ನಾಮಧಾರಿಗಳ ಜನಪದ ಗೀತ ಸಂಕಲನ) ಸಂ. ಮತ್ತು ಪ್ರ.ಎನ್. ಆರ್. ನಾಯಕ, ಕನ್ನಡ ವಿಭಾಗ, ಆರ್ಟ್ಸ್ ಮತ್ತು ಸಾಯನ್ಸ ಕಾಲೇಜು, ಹೊನ್ನಾವರ (ಉ.ಕ.) ಪುಟ 117+14. ಬೆಲೆ. 3.00. 1971.

ಶ್ರೀ ಎನ್. ಆರ್. ನಾಯಕರ ಈ ಸಂಗ್ರಹದಲ್ಲಿ ಅನೇಕ ಉತ್ತಮ ಮುಕ್ತಕಗಳಿವೆ. ನಿದರ್ಶನಕ್ಕೆ ಒಂದೆರಡನ್ನು ಎತ್ತಿ ಬರೆಯಬಹುದು:

ತೂಗು ತೊಟ್ಟಿಕೆ ತುಂಬೀ ಹೂಂಗಿನ ಗೆಜ್ಜೆ
ನಾವ್ ತೂಗಿ ಕಡ್ಯ ತೆರೆತೂಗಿ। ಬಾಲಯ್ಯ್ನ
ತಾಯ್ಹೂಗಿ ನೆದುರಿ ಬರುವುದು॥

ಕಾಳಗಕೆ ಕಲಿಯಾಗು ಈಳ್ಯಕೆ ಮೆನಾಗು
ಆಳಾ ಕಂಡಲ್ಲಿ ಅರಸಾಗು। ಬಾಲಯ್ಯ
ಸೂಳಿರ್ ಕಂಡಲ್ಲಿ ತಲುಬಾಗು॥
ದೊಡ್ಡ ದೊಡ್ಡ ಎಲಿಯಾಗು ವಜ್ರದ ಕುಡಿಯಾಗು
ದೇವರ ಅಂಗಳಕೆ ನೆರಳಾಗು। ಬಾಲಯ್ಯ
ಕುಲದಲ್ಲೇ ದೊಡ್ಡವ್ನ ಮಗನಾಗು॥

ಇಂಥ ಮೇಲ್ಮೆಯ ಅಭೀಪ್ಸೆ ಜನಪದ ಗರತಿಯ ಪರಮ ಹಾರೈಕೆ.

ತೌರುಮನೆಗೆ ಅಣ್ಣ ತಮ್ಮಂದಿರು ಕರೆಯ ಬಂದಾರೆಂದು ನಿರೀಕ್ಷಿಸಿ ಹಂಬಲಿಸುವ ಹೆಣ್ಣಿನ ಚಿತ್ರ ಇದು:

ಈ ಊರ ಬಯ್ಲಲ್ಲಿ ಮೂರ್ ಜನ ಬರ್ತಾರೆ
ನಾರಾಯ್ಣನೊಬ್ಬ ಶಿವನೊಬ್ಬ। ಬೆನ್ನೀಗೂ
ಈ ಊರ ಬಯ್ಲಲ್ಲಿ ಮೂರ್ ಜನ ಬರ್ತಾರೆ
ನಾರಾಯ್ಣನೊಬ್ಬ ಶಿವನೊಬ್ಬ। ಬೆನ್ನೀಗೂ
ನನ್ನ ತಾಯ್ ಹಡೆದ ಮಗನೊಬ್ಬ। ಬಂದಾರೆ
ಪನ್ನೀರಲು ಪಾದ ತೊಳುವೆನೆ॥

ನನ್ನಪ್ನ ಮಲ್ಲಿ ಸೆಣ್ಣಕ್ಕಿ ಸೆಮೂಗೆ
ನನ್ನಣ್ಣ ಬಂದ ಕರ್ವಕೆ।

ಗರತಿಯ ಹಾಡು ಮುಂತಾದ ಸುಪ್ರಸಿದ್ಧ ಜನಪದಗೀತ ಸಂಗ್ರಹದಲ್ಲಿ ಎದ್ದು ಕಾಣುವಂಥ ಹಲವಾರು ಗೀತಗಳು ಈ ಜೇಂಗೊಡದಲ್ಲೂ ತುಂಬಿವೆ. ನಿದರ್ಶನಕ್ಕೆ

ಯಾರು ಇದ್ದರು ತಾಯಿಗೆ ಹೋಲುವರಿಲ್ಲ
ಸಾವಿರ ಸವ್ದೀ ಒಲೆಯಲ್ಲಿ ಉರದರು
ಜೋತಿಯ ಹೋಲ್ವಂತ ಬೆಳಕಿಲ್ಲ।
ಕಣ್ಣು ಕಾಣುವ ತನಕ ಬೆನ್ನು ಬಾಗುವ ತನಕ
ಹುಟ್ಟಿದ ಹಲ್ಲೂ ಮುರುವನಕ। ದೇವಾರೆ
ಹಡೆದವ್ವ ಬೇಕೆ ತವರೀಗೆ॥

ಇಂಥ ಗೀತೆಗಳು ತೌಲನಿಕ ಅಧ್ಯಯನಕ್ಕೆ ಎಷ್ಟೋ ಸಹಕಾರಿಯಾಗುತ್ತವೆ. ಶ್ರೀ ನಾಯಕರು ಸಂಗ್ರಹಿಸಿರುವ ಉತ್ತಮ ಜನಪದ ಸಾಹಿತ್ಯವನ್ನು ಮತ್ತಷ್ಟು ಉತ್ತಮ ರೀತಿಯಲ್ಲಿ ಪ್ರಕಟಿಸುವ ವ್ಯವಸ್ಥೆಯನ್ನೂ ಮಾಡುವುದು ಮೇಲು. ಒಪ್ಪೋಲೆಯ ಪುಟಗಳು ಹೆಚ್ಚದಂತೆ, ಪುಸ್ತಕದ ಅಚ್ಚು ಹಾಗೂ ಒಟ್ಟಂದ ಮತ್ತಷ್ಟು ಉತ್ತಮಗೊಳ್ಳುವುದು ಆವಶ್ಯಕ. ಶ್ರೀಯುತರ ಯತ್ನ ಸ್ವಾಗತಾರ್ಹ.

ಸಂಪಾದಕೀಯ

ಡಾ. ಗುಬ್ಬಿ ವೀರಣ್ಣನವರ ನಿಧನ

18–10–1972ರಂದು ತಮ್ಮ 83ನೆಯ ವಯಸ್ಸಿನಲ್ಲಿ ಕಾಲಾಧೀನರಾದ ಡಾ. ಗುಬ್ಬಿ ವೀರಣ್ಣನವರದು ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ಬಹುದೊಡ್ಡ ಹೆಸರು. ಹೀನಾವಸ್ಥೆಯಲ್ಲಿದ್ದ ಕನ್ನಡ ರಂಗಭೂಮಿಗೆ ತಮ್ಮನ್ನು ತಾವು ಸಂಪೂರ್ಣವಾಗಿ ಸಮರ್ಪಿಸಿಕೊಂಡು, ಸುಮಾರು ಮುಕ್ಕಾಲು ಶತಮಾನದಷ್ಟು ಸುದೀರ್ಘಕಾಲ ಅದರ ಸರ್ವತೋಮುಖ ಅಭಿವೃದ್ಧಿಗೆ ಅವ್ಯಾಹತವಾಗಿ ದುಡಿದ, ಕೊನೆಯವರೆಗೂ ಅದನ್ನೇ ಹಾಸಿಕೊಂಡು ಹೊದ್ದುಕೊಂಡು ಮಡಿದ ಅವರು ಒಬ್ಬ ವ್ಯಕ್ತಿಯಲ್ಲ; ಒಂದು ಶಕ್ತಿ.

ಆರುವರ್ಷದ ಬಾಲಕನಾಗಿದ್ದಾಗ ಗುಬ್ಬಿಯಂತೆ ಪುರ್ರನೆ ಹಾರಿ ಬಂದು ರಂಗಭೂಮಿಯನ್ನು ಸೇರಿಕೊಂಡ ಗುಬ್ಬಿವೀರಣ್ಣನವರು ಕ್ರಮೇಣ ನಾಟಕವಿಯತ್ತಳದಲ್ಲಿ ವೈನತೇಯನಾಗಿ ಹಾರಾಡಿದ್ದು ಎಂದೂ ಯಾರೂ ಮರೆಯಲಾಗದಂಥ ಅದ್ಭುತ ಸಾಧನೆಗಳಲ್ಲೊಂದು. ಅದು ಅವರ ಅರ್ಪಣಾಮನೋಭಾವನೆಯ, ಕಾಯಕನಿಷ್ಠೆಯ. ಕಲಾರಾಧನೆಯೇ ಪರಮನಾರಾಧನೆ ಎಂಬ ಅನನ್ಯ ಭಕ್ತಿಭಾವನೆಯ ಪ್ರತೀಕ.

ಕೂಲಿ ಮಠದ ಕಲಿಕೆಯ ಒಬ್ಬ ಹಳ್ಳಿಯ ಹುಡುಗ ತನ್ನ ಕರ್ತೃತ್ವ ಶಕ್ತಿಯಿಂದ, ವ್ಯವಹಾರ ನೈಪುಣ್ಯದಿಂದ, ಅಭಿನಯ ಚಾತುರ್ಯದಿಂದ ಒಳಹೊರನಾಡುಗಳ ಸಮಾಜದ ನಿಮ್ನಾತಿನಿಮ್ನ ವರ್ಗದಿಂದ ಹಿಡಿದು ಉನ್ನತೋನ್ನತ ವರ್ಗದವರಿಂದ 'ಭಲೆ' ಎಂದು ಬೆನ್ನು ತಟ್ಟಿಸಿಕೊಳ್ಳುವುದಾಗಲೀ, ಬಿರುದುಗಳನ್ನು ಗಿಟ್ಟಿಸಿಕೊಳ್ಳುವುದಾಗಲೀ ಸಾಮಾನ್ಯ ವಿಷಯವಲ್ಲ; ಎಲ್ಲರಿಗೂ ಸಾಧ್ಯವಾಗುವಂಥದಲ್ಲ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಂದ 'ವರ್ಸಟೈಲ್ ಕಮೆಡಿಯನ್' ಎಂದೂ, ಬೆಂಗಳೂರು ಜನತೆಯಿಂದ 'ವಿನೋದ ರತ್ನಾಕರ' ಎಂದೂ, ದಕ್ಷಿಣ ಕನ್ನಡದವರಿಂದ 'ನಾಟ್ಯ ಕಲಾನಿಪುಣ, ರಸಿಕ ಶಿಖಾಮಣಿ' ಎಂದೂ ತಮಿಳು ನಾಡಿನವರಿಂದ 'ನಾಟಕಮಣಿ' ಎಂದೂ, ಆಂಧ್ರದವರಿಂದ 'ಕರ್ಣಾಟ ಕಾಂಧ್ರ ನಟಸಾರ್ವಭೌಮ' ಎಂದೂ ಬಿರುದುಗಳನ್ನು ಪಡೆದುಕೊಂಡ ಡಾ. ಗುಬ್ಬಿವೀರಣ್ಣನವರಿಗೆ, 8ನೇ ಶತಮಾನದ ಪಟ್ಟದಕಲ್ಲಿನ ಶಿಲಾಲೇಖದಲ್ಲಿ ಉಕ್ತವಾದ, ಅಂದಿನ ಕಾಲದ ನಟಶ್ರೇಷ್ಠನೊಬ್ಬನ ಗುಣಗಾನವಾದ 'ಇನ್ನಾತನೆ ನರ್ತಕಂ ನಟರೊಳಗ್ಗಳಂ ಈ ಭುವನಾಂತರದೊಳ್' ಎಂಬ ಪ್ರಶಂಸೆ ಅನಾಮತ್ತು ಅಕ್ಷರಶಃ ಅನ್ವಯಿಸುತ್ತದೆ.

ಗುಬ್ಬಿ ಚನ್ನಬಸವೇಶ್ವರ ಕೃಪಾಪೋಷಿತ ನಾಟಕ ಮಂಡಲಿಯ ನಟರಾಗಿ, ಮಾಲಿಕರಾಗಿ ಅನೇಕ ನಾಟಕಕಾರರನ್ನು ನಟನಟಿಯರನ್ನು ರೂಪಿಸಿ ಬೆಳೆಸಿದ ಕೀರ್ತಿ, ಕಲಾಬ್ರಹ್ಮ ಗುಬ್ಬಿವೀರಣ್ಣನವರಿಗೆ ಸಲ್ಲುತ್ತದೆ. ಇಂದು ನಾಟಕರಂಗದಲ್ಲಿ, ಚಲಚ್ಚಿತ್ರ ರಂಗದಲ್ಲಿ ಇರುವ ಬಹುಪಾಲು ನಟನಟಿಯರು, ದಿಗ್ದರ್ಶಕರು ಆ ರೂವಾರಿ ಕಡೆದ ವಿಗ್ರಹಗಳೇ ಎನ್ನುವುದಕ್ಕೆ ಅವರ ಪಾರ್ಥಿವ ಶರೀರದ ಮೆರವಣಿಗೆಯಲ್ಲಿ ಪಾಲ್ಗೊಂಡ ಅಪಾರಸಂಖ್ಯೆಯ ಹಿರಿಯಕಿರಿಯ ನಟನಟಿ ನಿರ್ದೇಶಕರೇ ಸಾಕ್ಷಿ; ತಮ್ಮ ಕಲಾಸೇವೆಯಿಂದ ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿದ್ದರು ಎಂಬುದಕ್ಕೆ ಮೆರವಣಿಗೆಯಲ್ಲಿ ಪಾಲ್ಗೊಂಡ ಅಪಾರ ಜನಸ್ತೋಮವೇ ಸಾಕ್ಷಿ.

ಸದಾರಮೆ ನಾಟಕದ ಆದಿಮೂರ್ತಿ ಮತ್ತು ಕಳ್ಳನ ಪಾತ್ರಗಳು ವೀರಣ್ಣನವರ ಅಭಿನಯ ಕಲೆಗೆ, ಕುರುಕ್ಷೇತ್ರ ಮತ್ತು ದಶಾವತಾರ ನಾಟಕಗಳು ಅವರ ಪ್ರಯೋಗಶೀಲತೆ, ರಂಗಸಜ್ಜಿಕೆಯ ವೈಭವ



ಪರಿಷ್ಕೃತ 'ಎಪಿಗ್ರಾಫಿಯ ಕರ್ನಾಟಿಕ'ದ ಮೊದಲ ಸಂಪುಟದ ಬಿಡುಗಡೆ ಸಮಾರಂಭ:
ಡಾ. ಹಾ. ಮಾ. ನಾಯಕರ ಸ್ವಾಗತ



ಡಾ. ಜಿ. ಎಸ್. ಗಾಯಿಯವರು ಸಂಪುಟದ ಬಿಡುಗಡೆ ಮಾಡುತ್ತಿರುವುದು

ಔಚಿತ್ಯಗಳಿಗೆ, ಅವನತಿಯ ಹಾದಿಯಲ್ಲಿದ್ದ ನಾಟಕರಂಗವನ್ನು ಮೇಲೆತ್ತಿದ ಅವರೇ ಕೃಶವಾಗಿದ್ದ ಚಲಚ್ಚಿತ್ರಕ್ಷೇತ್ರಕ್ಕೂ ಕಾಲಿರಿಸಿ ಕೃಷಿ ಮಾಡಿದ್ದು ಅವರ ಸಾಹಸ ಪ್ರವೃತ್ತಿಗೆ ಸಬಲ ಸಾಕ್ಷಿಗಳಾಗಿವೆ.

ನಿಶ್ಚೇಷ್ಟಿತ ಕನ್ನಡ ರಂಗಭೂಮಿಗೆ ಚೈತನ್ಯವನ್ನು ತುಂಬಿದ, ಕನ್ನಡ ರಂಗಭೂಮಿ ನೆರೆಹೊರೆಯ ಮರಾಠಿ ತೆಲುಗು ತಮಿಳು ರಂಗಭೂಮಿಗಳಿಗೆ ಯಾವ ವಿಧದಿಂದಲೂ ಕಡಿಮೆ ಇಲ್ಲವೆಂದು ಸಾಧಿಸಿ ತೋರಿಸಿ ಅಲ್ಲೆಲ್ಲ ವಿಜಯದುಂದುಭಿ ಮೊಳಗಿಸಿದ, ವ್ಯವಸಾಯವನ್ನು ಅವಲಂಬಿಸಿದ ಜನರನ್ನು ಕುರಿತ 'ಬಸವನ ಬಾಲ ಹಿಡಿದೋರು, ಎಂದೂ ಕೆಡಲ್ಲ' ಎಂಬ ಗಾದೆ ಮಾತಿನಂತೆ, ರಂಗಭೂಮಿಯನ್ನು ಅವಲಂಬಿಸಿದ ನಟನಟಿಯರಲ್ಲಿ 'ಬಣ್ಣ ಹಿಡಿದೋರು ಎಂದೂ ಬಣ್ಣಗೆಡಲ್ಲ' ಎಂಬ ಆತ್ಮವಿಶ್ವಾಸವನ್ನು ಮೂಡಿಸಿದ ಡಾ. ಗುಬ್ಬಿ ವೀರಣ್ಣನವರು ಅಪ್ರತಿಮ ಸಾಹಸಿ; ಅದಮ್ಯ ಲವಲವಿಕೆ ಚಟುವಟಿಕೆಯ ಚಿಲುಮೆ. ಇಂಥ ಅವಿರತ ಸ್ತುತ್ಯ ಕಲಾಸೇವೆಯೇ ಅವರನ್ನು ಕೇಂದ್ರ ಹಾಗೂ ರಾಜ್ಯ ಸಂಗೀತ ನಾಟಕ ಅಕೆಡಮಿಗಳ ಪ್ರಶಸ್ತಿ ವಿಜೇತರನ್ನಾಗಿ ಮಾಡಿದ್ದು; ಮೈಸೂರು ವಿಶ್ವವಿದ್ಯಾನಿಲಯ–ಕುಲಪತಿ ದೇಜಗೌ ಅವರ ಮುಂದಾಳ್ತನ ಹಾಗೂ ಮುಂಗಾಣ್ಕೆಯ ಫಲವಾಗಿ–ಮೊಟ್ಟಮೊದಲ ಬಾರಿಗೆ ಕೂಲಿಮಠದ ವಿದ್ಯಾರ್ಹತೆಯುಳ್ಳ ಶ್ರೀಸಾಮಾನ್ಯನೊಬ್ಬನಿಗೆ ಕರೆದು ಡಾಕ್ಟರೇಟ್ ಪದವಿ ನೀಡುವಂಥಾದದ್ದು; ಸರ್ಕಾರ ವಿಧಾನ ಪರಿಷತ್ತಿನ ನಾಮಕರಣ ಸದಸ್ಯರನ್ನಾಗಿ ಮಾಡಿ ಗೌರವ ತೋರಿಸಿದ್ದು.

ಹೀಗೆ ಕಲಾಸೇವೆಗೆ ತಮ್ಮನ್ನು ಮುಡಿಪಿರಿಸಿಕೊಂಡು, ಕೊನೆತನಕ ಅಹರ್ನಿಶಿ ಅದರ ಅಭ್ಯುದಯಕ್ಕೆ ದುಡಿಯುತ್ತಲೇ ಮಡಿದ ಡಾ. ಗುಬ್ಬಿವೀರಣ್ಣನವರ ಆತ್ಮಕ್ಕೆ ಇಡೀ ಕನ್ನಡಿಗರ ಪರವಾಗಿ ಪ್ರಬುದ್ಧ ಕರ್ಣಾಟಕ ಶಾಂತಿಯನ್ನು ಕೋರುತ್ತದೆ; ಅವರ ಕಲಾನಿಷ್ಠೆ ದುಡಿಮೆಗಳು ಉಳಿದವರಿಗೆ ಪ್ರೇರಕಶಕ್ತಿಯಾಗಲೆಂದು ಹಾರೈಸುತ್ತದೆ.

'ಎಪಿಗ್ರಾಫಿಯ ಕರ್ನಾಟಿಕ' ಪರಿಷ್ಕರಣ ಹಾಗೂ ಪುನರ್ಮುದ್ರಣ ಯೋಜನೆ

ಕನ್ನಡ ಭಾಷೆ ಸಾಹಿತ್ಯ ಸಂಸ್ಕೃತಿ ಮತ್ತು ಇತಿಹಾಸ ವಿಷಯಗಳಿಗೆ ಸಂಬಂಧಪಟ್ಟ ಅಧ್ಯಯನಗಳಿಗೆ ಅಮೂಲ್ಯವಾದ ಆಕರಗಳು ಎಂದರೆ ಕನ್ನಡನಾಡಿನ ಸಹಸ್ರ ಸಹಸ್ರ ಸಂಖ್ಯೆಯ ಶಾಸನಗಳು. ಈ ನಾಡಿನ ಪೂರ್ವೇತಿಹಾಸದ ಬಗೆಗೆ ತಿಳಿಯಲು ಕಣ್ಣ ಮುಂದಿರುವ ಸಾಧನ ಸಂಪತ್ತಿಯಲ್ಲಿ, ಶಾಸನಗಳೇ ಸರ್ವಶ್ರೇಷ್ಠವೂ ಪ್ರಮಾಣಭೂತವೂ ಆದವು. ಅವನ್ನು ಆಸ್ಥೆಯಿಂದಲೂ ವಿಚಕ್ಷಣೆಯಿಂದಲೂ ಆಗಿಂದಾಗ್ಗೆ ಸಂಗ್ರಹಿಸಿ, ಸಂಪಾದಿಸಿ ಪ್ರಕಟಿಸಿದಲ್ಲದೆ ನಮ್ಮ ನಾಡುನುಡಿಗಳ ತಿಳಿವಳಿಕೆಯ ಪರಿಧಿ ವಿಸ್ತಾರಗೊಳ್ಳಲಾರದು, ನಮ್ಮ ವಿದ್ವದ್‌ವಲಯದ ವ್ಯಾಸಂಗ ಶೋಧನೆಗಳು ಫಲಕಾರಿಯಾಗಲಾರವು. ಈ ಪ್ರಾಂತದ ಪುಣ್ಯವಶದಿಂದ, ಹತ್ತೊಂಬತ್ತನೆಯ ಶತಕದ ಕೊನೆಯೆರಡು ದಶಕಗಳಲ್ಲಿ ಈ ಬಗೆಯ ಶ್ಲಾಘ್ಯಕಾರ್ಯವನ್ನು ಅಂದಿನ ವಿದ್ಯಾಇಲಾಖೆ ಮುಖ್ಯಾಧಿಕಾರಿಗಳೂ ಪುರಾತತ್ತ್ವಶಾಖೆಯ ನಿರ್ದೇಶಕರೂ ಆಗಿದ್ದ ಬಿ. ಎಲ್. ರೈಸ್ ಅವರು ಕೈಕೊಂಡದ್ದು ನಾಡಿನ ಭಾಗ್ಯೋದಯದ ಬಾಗಿಲನ್ನು ತೆರೆದಂತಾಯಿತು. ಕಂಡವರ, ನೆನೆದವರ ಕಣ್ಮನಗಳು ಬೆರಗುಗೊಳ್ಳುವ ಪ್ರಮಾಣದಲ್ಲಿ ಅವರು ಈ ಮಹಾಕಾರ್ಯಕ್ಕಾಗಿ ದುಡಿದರು, ಆದರೆ ದಣಿಯಲಿಲ್ಲ. ಮೈಸೂರು ಪ್ರಾಂತದ ಮೂಲೆ ಮೂಲೆಗಳನ್ನು ಸುತ್ತಾಡಿ ವಿಪುಲ ಸಂಖ್ಯೆಯಲ್ಲಿ ಸಂಗ್ರಹಿಸಿದ ಶಾಸನಗಳನ್ನು, ಒಂದು ಕ್ರಮದಲ್ಲಿ, ಹನ್ನೆರಡು ಸಂಪುಟಗಳಾಗಿ ಪ್ರಕಟಿಸಿದರು. ಇದಕ್ಕಾಗಿ ಅವರಿಗೆ ಸುಮಾರು ಇಪ್ಪತ್ತು ವರ್ಷಗಳು ಹಿಡಿದುವು. ಕನ್ನಡ ನಾಡುನುಡಿಗಳ ಅಧ್ಯಯನಕ್ಕೆ ಅಧಿಷ್ಠಾನ ಪೀಠವಂತಿರುವ ಈ ಸಂಪುಟಗಳ ಪ್ರಕಟಣೆ ಭಾರತದಲ್ಲಿ ಮಾತ್ರವಲ್ಲದೆ ವಿಶ್ವದಲ್ಲಿಯೇ ಒಂದು ಅದ್ಭುತವಾದ ಸಾಧನೆಯೆಂದು ಹಿರಿಯ ಶಾಸನತಜ್ಞರು ಅಭಿಪ್ರಾಯ ಪಡುತ್ತಾರೆ. ಇದು ಕನ್ನಡ ರಾಜೇಶ್ವರಿಯ ಮಹಾಭಾಗ್ಯ.

ಈ ಎಪಿಗ್ರಾಫಿಯ ಕರ್ನಾಟಿಕ ಎನಿಸಿದ ಶಾಸನಸಂಪುಟಗಳು ಈಗ ಅನೇಕ ವರ್ಷಗಳಿಂದ ಅಭ್ಯಾಸಿಗಳಿಗೆ ಅಲಭ್ಯವಾಗಿದ್ದವು. ಗಣ್ಯ ಪುಸ್ತಕ ಭಂಡಾರಗಳಲ್ಲಿ ಅಲ್ಲೊಂದು ಇಲ್ಲೊಂದು ಜೀರ್ಣಶೀರ್ಣಸ್ಥಿತಿಯ ಸಂಪುಟ–ಕಟ್ಟು ಕಾಣಲು ದೊರೆಯುತ್ತಿವೆಯಲ್ಲದೆ ವ್ಯಕ್ತಿಗಳ ಸ್ವಂತ ಉಪಯೋಗಕ್ಕೆ ಅವನ್ನು ಪಡೆಯುವುದು ನೆನಕೆಗೂ ನಿಲುಕದ ಮಾತು. ಇಂಥ ಪರಿಸ್ಥಿತಿಯಲ್ಲಿ ಈ ಸಂಪುಟಗಳ ಪುನರ್ಮುದ್ರಣ ಅತ್ಯಂತ ಅಪೇಕ್ಷಣೀಯವಾಗಿತ್ತು. ಮೇಲಾಗಿ ಕಾಲಕ್ರಮದಲ್ಲಿ ಸರ್ಕಾರದ ಮತ್ತು ವಿವಿಧ ವಿದ್ಯಾಸಂಸ್ಥೆಗಳ

ಪ್ರಯತ್ನಗಳಿಂದ ಮೈಸೂರ್ ಆರ್ಕಿಯಲಾಜಿಕಲ್ ರಿಪೋರ್ಟ್ಸ್ ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್ ಮೊದಲಾದ ಕಡೆಗಳಲ್ಲಿಯೂ ಆಗಿಂದಾಗ್ಗೆ ಅನೇಕಾನೇಕ ಕನ್ನಡ ನಾಡಿನ ಶಾಸನಗಳ ಸೇರ್ಪಡೆಯಾಗಿದ್ದು, ಈಯೆಲ್ಲವನ್ನೂ ಒಟ್ಟಿಗೆ ನೋಡುವಂತಾಗುವ ವ್ಯವಸ್ಥೆಯೂ ನಡೆಯಬೇಕಾಗಿತ್ತು. ದೊರೆತ ಸಂಶೋಧನ ಸಾಮಗ್ರಿಗಳ ಬಲದಿಂದ ರೈಸ್ ಸಂಪಾದಿತ ಶಾಸನಸಂಪುಟಗಳ ಪಠ್ಯ ಮತ್ತು ಪೀಠಿಕೆಗಳ ಪರಿಷ್ಕರಣದ ಅಗತ್ಯವೂ ತಲೆದೋರಿತ್ತು. ಈ ಕೆಲವು ಆವಶ್ಯಕತೆಗಳನ್ನೆಲ್ಲ ಮನದಂದು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರು ತಜ್ಞರೊಡನೆ ಸಮಾಲೋಚಿಸಿ 'ಎಪಿಗ್ರಾಫಿಯ ಕರ್ನಾಟಿಕ' ಪರಿಷ್ಕರಣ ಮತ್ತು ಪುನರ್ಮುದ್ರಣವೆಂಬ ಮಹದ್ಯೋಜನೆಯನ್ನು ರೂಪಿಸಿ ಅದಕ್ಕೆ ಸರ್ಕಾರದ ಮಂಜೂರಾತಿಯನ್ನು ಪಡೆದುಕೊಂಡಿದ್ದಾರೆ. ಈ ಶುಭಕಾರ್ಯದ ಮಂಗಳಾಚರಣೆ ಕೊಡಗು ಜಿಲ್ಲೆಯ ಶಾಸನಗಳ ಪ್ರಕಟನೆಯಿಂದ ಮೊದಲಾಗಿದೆ. ಈ ಸಂದರ್ಭದಲ್ಲಿ ಪ್ರಬುದ್ಧ ಕರ್ಣಾಟಕ ಈ ಯೋಜನೆಯು ಯಶಸ್ವಿಯಾಗಿ ಕಾರ್ಯಗತವಾಗಿ ಕನ್ನಡದ ಸೇವೆಯಲ್ಲಿ ದೀಕ್ಷೆವಹಿಸಿರುವ ಸಕಲರ ಪ್ರಯತ್ನಗಳೂ ಸಾರ್ಥಕ್ಯ ಪಡೆಯಲಿ ಎಂದು ಹಾರೈಸುತ್ತದೆ; ಯೋಜನೆಗೆ ಆಶ್ರಯದಾತೃವಾಗಿರುವ ಮೈಸೂರು ವಿಶ್ವವಿದ್ಯಾನಿಲಯವನ್ನೂ ಕಾರ್ಯಕ್ಷೇತ್ರವಾಗಿರುವ ಕನ್ನಡ ಅಧ್ಯಯನ ಸಂಸ್ಥೆಯನ್ನೂ, ಆರ್ಥಿಕ ಮತ್ತು ನೈತಿಕ ಬೆಂಬಲವಾಗಿರುವ ಮೈಸೂರು ಸರ್ಕಾರವನ್ನೂ ದುಡಿಮೆಯ ಸಲಹಾ ಸಮಿತಿ ಮತ್ತು ಸಂಪಾದಕವರ್ಗವನ್ನೂ ತುಂಬು ಮನಸಿನಿಂದ ನೆನೆಯುತ್ತದೆ.

ಸಾದರ ಸ್ವೀಕಾರ

ಹರಿದಾಸ ಕೀರ್ತನ ಸುಧಾಸಾಗರ (ದ್ವಿತೀಯ ತರಂಗ) ಎನ್. ಚೆನ್ನಕೇಶವಯ್ಯ, ಸಂಗೀತವಿದ್ವಾನ್ ಎನ್. ಚೆನ್ನಕೇಶವಯ್ಯ, ಎಲ್ಲಪ್ಪ ಗಾರ್ಡನ್ಸ್, ಮಲ್ಲೇಶ್ವರಂ; ಬೆಂಗಳೂರು–3; ಬೆಲೆ 9.00 ಜುಲೈ 71.

ವಚನಾಮೃತ(ವಚನಗಳು) ದಾನಪ್ಪ ಜತ್ತಿ, ತಿಕೋಟಾ, ಶಾರದಾಂಬಾ ಸಾಹಿತ್ಯ ಮಂದಿರ, ತಿಕೋಟಾ; ಪು. 11 + 61; ಬೆಲೆ 7.00; ಆಗಸ್ 1972.

ಜೋನ್ ಆಫ್ ಆರ್ಕ್ ಹಾಗೂ ಇತರ ನಾಟಕಗಳು; ಸದಾಶಿವ ಒಡೆಯರ; ಸಾಹಿತ್ಯ ಭಂಡಾರ, ಹುಬ್ಬಳ್ಳಿ–20; ಪು. 118; ಬೆಲೆ 3–00; ಆಗಸ್ಟ್ 1972.

ಪಡಿ ಎಡವಿ ಬಂದವಳು(ಕಾದಂಬರಿ), ವಿಶಾಲಾಕ್ಷಿ ದಕ್ಷಿಣಾಮೂರ್ತಿ; ಉಷಾಸಾಹಿತ್ಯಮಾಲೆ, ಮೈಸೂರು-1; ಪು. 270; ಬೆಲೆ 5.00; ಆಗಸ್ 1972.

ಕಾಯಕವೀರ (ಜೀವನಚಿತ್ರ), ಲಕ್ಕಪ್ಪ ಅ. ಶಿರಹಟ್ಟಿ; ಅರುಣೋದಯ ಪ್ರಕಾಶನ. ವಿಜಾಪುರ; ಪು. 116; ಬೆಲೆ 7.00; ಆಗಸ್ 1972.

ಬೋಳಂತಕೋಡಿ ಶಂಕರ ಭಟ್ಟರು(ಜೀವನ ಚಿತ್ರ) ಎಂ. ಮಾಧವಪೈ; ಕನ್ನಡ ಸಂಘ, ಸ್ನಾತಕೋತ್ತರ ಶಿಕ್ಷಣಕೇಂದ್ರ, ಮಂಗಳಗಂಗೋತ್ರಿ, ಮಂಗಳೂರು, 1972; ಪು. 58; ಬೆಲೆ 0.75; ಆಗಸ್ಟ್ 1972.

ಮೋಷ್ಟ್ರಚೀಲ(ಕಾದಂಬರಿ), ರಘುಸುತ; ಪುಲಿಕೇಶಿ ಪ್ರಕಾಶನ, ಯಶವಂತಪುರ, ಬೆಂಗಳೂರು-22; ಪು. 160; ಬೆಲೆ: 3.50; ಆಗಸ್ಟ್ 1972.

ಯೋಗ: ಆನಂದ್, ಶ್ರೀ ಅಚ್ಯುತಾಶ್ರಮ. ಬಳ್ಳಾರಿ; ಪು. 44; ಬೆಲೆ 1.00; ಆಗಸ್ಟ್ 1972.

ಮಾರುತ್ತರ(ಕವನ ಸಂಕಲನ): ಆರ್. ರಾಚಪ್ಪ, ರೇಣುಕ ಪಬ್ಲಿಷರ್ಸ್, ಬೆಂಗಳೂರು–37; ಪು.74; ಬೆಲೆ 2.50 (4.00); ಸೆಪ್ಟೆಂಬರ್ 1972.

ದಿಙ್ನಾಗ: ವ್ಹಿ. ಎಸ್. ಕಂಬಿ; ಕುಮಾರೇಶ ಗ್ರಂಥ ಮಾಲೆ; ಧಾರವಾಡ–8; ಪುಟ. 37; ಸೆಪ್ಟಂಬರ್ 1972,

ಪುಣ್ಯಸ್ಮೃತಿ(ಕಥಾಸಂಕಲನ): ಸರಸ್ವತಿದೇವಿ ಗೌಡರ; ಪ್ರ. ಲೇಖಕರೇ: ಉ.ಬ. ಗುಡ್ಡ, ಧಾರವಾಡ; ಪು. 97; ಬೆಲೆ 3.00; ಅಕ್ಟೋಬರ್ 1972

ಶರಣ ಸಾಹಿತ್ಯ ಸಮೀಕ್ಷೆ: ದೊಡ್ಡಸ್ವಾಮಿ; ಪ್ರ. ಲೇಖಕರೇ, ದುಂಡನಹಳ್ಳಿ, ಮದ್ದೂರು ತಾಲೂಕು, ಮಂಡ್ಯಜಿಲ್ಲೆ; ಪು. 163; ಬೆಲೆ 3.50; ಅಕ್ಟೋಬರ್ 1972.

ಕ್ಷಕಿರಣ(ನಾಟಕ) ಅಂಶುಮಾಲಿ; ಭಾರದ್ವಾಜ ಪ್ರಕಾಶನ, ಕದಿರೆ, ಮಂಗಳೂರು–2; ಪು. 70; ಬೆಲೆ 1.50; ಅಕ್ಟೋಬರ್ 1972.

ಸಿದ್ಧರಾಮ ಸಾಹಿತ್ಯ ಸಮೀಕ್ಷೆ(ವಿಮರ್ಶೆ): ವಿವಿಧ ಲೇಖಕರು, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ; ಪು. 139; ಬೆಲೆ. 2.50; ಅಕೋಬರ್ 1972.

ಷೇಕ್ಸಪಿಯರನ ನಾಟಕಗಳಲ್ಲಿ ಸಾಮಾಜಿಕ ಪ್ರಜ್ಞೆ(ಸಮೀಕ್ಷೆ): ವಿ. ಕೆ. ನವಲಗುಂದ; ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ; ಪು. 86; ಬೆಲೆ 25 ಪೈಸೆ. ಅಕ್ಟೋಬರ್ 1972.

ಪರಮೇಶ್ವರಿಯ ಪದಗಳು(ಜನಪದಗೀತೆ) ಸಂ. ಡಾ. ಎಲ್. ಆರ್. ಹೆಗಡೆ; ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡ; ಪು. 80 + 212; ಬೆಲೆ 5.00; ಅಕ್ಟೋಬರ್ 1972

ಆರ್ಯಾ(ಸುಭಾಷಿತ ಅನುವಾದ): ಡಾ. ವಿನೋದಾ: ಉಷಾಸಾಹಿತ್ಯ ಮಾಲೆ. ಮೈಸೂರು–1; ಪು. 59; ಬೆಲೆ 2.00; ಅಕ್ಟೋಬರ್ 1972

ಸಾರ್ಥವಾಹ (ಪ್ರವಾಸಕಥನ): ಮೋತೀಚಂದ್ರ: ಅನು: ಎಚ್. ಎಸ್. ಪಾಟೀಲ: ಸಾಹಿತ್ಯ ಅಕಾಡೆಮಿ ಹೊಸದೆಹಲಿ; ಪು. 347; ಬೆಲೆ 15.00, 1972

ಪ್ರೇಮಚಂದ: ಲೇ. ಪ್ರಕಾಶ ಚಂದ್ರಗುಪ್ತ. (ಅನು: ಶಾಂತಿನಾಥ ದೇಸಾಯಿ): ಸಾಹಿತ್ಯ ಅಕಾದೆಮಿ. ನವದೆಹಲಿ; ಪು. 58; ಬೆಲೆ 7.50; 1972.

ಪ್ರತಿಬಿಂಬ(ಚುಟುಕಗಳು): ಮ. ಕ. ಬಿದಣ್ಣಿಗೋಳ: ಚಂದ್ರಗಂಗಾ ಜ್ಞಾನಪೀಠ. ಸೇಡಬಾಳ: ಪು. 37 ಬೆಲೆ 1.00; 1972

ಪೂಜೆ: ಡಾ. ಶ್ರೀ ನಾಗೇಶ್. ಪುಲಿಕೇಶಿ ಪ್ರಕಾಶನ. ಯಶವಂತಪುರ. ಬೆಂಗಳೂರು: ಪು. 100: ಬೆಲೆ 3.00 (500); 1972

ಶ್ರೀ ರಾಮಚಂದ್ರಜಿಯವರ ನುಡಿಮುತ್ತುಗಳು: ಆ. ಸರ್ನಾಡ. ಶ್ರೀರಾಮಚಂದ್ರ ಮಿಷನ್ ಪ್ರಕಾಶನ ವಿಭಾಗ. ಷಾಹಜಹಾನ್‌ಪೂರ್ (ಉ.ಪ್ರ.): ಪು. 74: ಬೆಲೆ. 1.25: 1972.

ಆಲೋಚನೆ(ವಿಮರ್ಶೆ) :ಸಿ.ಪಿ.ಕೆ.: ಉಷಾ ಸಾಹಿತ್ಯಮಾಲೆ. ಮೈಸೂರು–1: ಪು. 157: ಬೆಲೆ 4.00 (8.00); 1972.

WO 11530—MUPM—1025 copies—26-6-73

‘ಪ್ರಬುದ್ಧ ಕರ್ಣಾಟಕ’ಕ್ಕೆ ವಿನಿಮಯವಾಗಿ ಬರುವ ಪತ್ರಿಕೆಗಳು

Annals of Oriental Research, University of Madras *Brahmavidya*, Adyar, Madras; *Bulletin of the School of Oriental and African Studies*, London; *Journal of the Andhra Historical Research Society*, Rajahmundry; *Journal of the Karnataka Historical Research Society*, Dharwar; *Quarterly Journal of the Mythic Society*, Bangalore; *The Indian P.E.N.* Bombay; *Annals of the Venkateswara Oriental Institute*, Tirupati; *The Jain Siddhanta Bhaskar and the Jaina Gazette*, Arrah; *Bulletin of the Deccan College Research Institute*, Poona; *Publication of the Kannada Research Office*, Dharwar; *Annals of the Bhandarkar Oriental Research Institute*, Poona; *Journal of the Karnatak University*, Dharwar; *Public Affairs*, Bangalore.

‘ಪ್ರಪಂಚ’, ಹುಬ್ಬಳ್ಳಿ; ‘ಕರ್ಮವೀರ’, ಹುಬ್ಬಳ್ಳಿ; ‘ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ. (ತೆಲುಗು), ಕಾಕಿನಾಡ; ‘ಜಯಕರ್ನಾಟಕ’, ಧಾರವಾಡ; ‘ಜಯಂತಿ’, ಧಾರವಾಡ, ‘ವಿದ್ಯಾವಾಯಿನಿ’, ಮೈಸೂರು; ‘ಶರಣ ಸಾಹಿತ್ಯ’, ಬೆಂಗಳೂರು; ‘ಶಿವಾನುಭವ’ ಬಿಜಾಪುರ; ‘ಸುಬೋಧ’, ಬೆಂಗಳೂರು; ‘ಜೀವನ’, ಬೆಂಗಳೂರು; ‘ಪುಸ್ತಕ ಪ್ರಪಂಚ’, ಮೈಸೂರು: ‘ಕನ್ನಡ ನುಡಿ’, ಬೆಂಗಳೂರು; ‘ಸೋವಿಯೆತ್ ದೇಶ’, ಮದ್ರಾಸು; ‘ಪ್ರಕಾಶ’ ಉಡುಪಿ; ‘ಭಾರತವಾಣಿ’ (ಹಿಂದಿ), ಧಾರವಾಡ; ‘ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ’, ಬೆಂಗಳೂರು; ‘ಕರ್ನಾಟಕ ಭಾರತಿ’, ಧಾರವಾಡ.

Reg. No. R. N. 17184/57